# ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳ ಸುಧಾರಣೆ ಕುರಿತ ಸಮಿತಿಯ ವರದಿ

**ಶ್ರೀ ಐ.ಪಿ.ಡಿ. ಸಾಲಪ್ಪ**
**ಅಧ್ಯಕ್ಷರು**

**ಏಪ್ರಿಲ್, 1976**

# ಮುನ್ನುಡಿ

ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳ ಸುಧಾರಣೆ ಕುರಿತ ಸಮಿತಿಯ ಈ ವರದಿಯನ್ನು ಸಲ್ಲಿಸಲು ನನಗೆ ತುಂಬಾನೆ ಸಂತೋಷವಾಗುತ್ತಿದೆ. ರಾಜ್ಯದಲ್ಲಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವ ಸಲುವಾಗಿ ಸರಿಯಾದ ರೀತಿಯಲ್ಲಿ ಚಿಂತನ ಮಂಥನ ಮಾಡಿದ, ಬಹು ಪರಿಣಾಮಕಾರಿ ಶಿಫಾರಸುಗಳು ಈ ವರದಿಯಲ್ಲಿವೆ. ಈ ಕಾಯಕ ಮಾಡುವ ಜನರು ದುಡಿಮೆ ವರ್ಗದಲ್ಲಿ ಅದರಲ್ಲೂ ಮುಖ್ಯವಾಗಿ ಸಮಾಜದಲ್ಲಿ ಬಹುಮಟ್ಟಿಗೆ ಅತ್ಯಂತ ನಿರ್ಲಕ್ಷಿತರು, ದಮನಿತರು ಎನ್ನುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಶತಶತಮಾನಗಳಿಂದಲೂ ಈ ಜನರು ಹೇಳತೀರದ ಅಪಮಾನ, ಅವಮಾನ, ಸಂಕಷ್ಟಗಳಿಗೆ ಒಳಗಾಗಿದ್ದಾರೆ. ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ನಮ್ಮ ಜನಪ್ರಿಯ ಸರ್ಕಾರಗಳು ಸಮಾಜವು ಹಾಗೂ ಅಧಿಕಾರಸ್ಥರು ಬಹುತೇಕ ಮರೆತೇ ಹೋಗಿರುವ ಈ ಜನರ ಸ್ಥಿತಿಗತಿಗಳಲ್ಲಿ ಸುಧಾರಣೆ ತರಬೇಕಾದ ತುರ್ತು ಅಗತ್ಯವನ್ನು ಮನವರಿಕೆ ಮಾಡಿಕೊಂಡಿರುವುದು ಸಮಾಧಾನದ ಸಂಗತಿ. ಮಹಾತ್ಮಾ ಗಾಂಧಿಯವರ ಸ್ಫೂರ್ತಿದಾಯದ ಮುಂದಾಳತ್ವದಲ್ಲಿ ಸ್ವಾತಂತ್ರ್ಯಗಳಿಸಿದ ನಂತರ, ಆರ್ಥಿಕ ಉನ್ನತಿಯಾಗದಿದ್ದರೆ ರಾಜಕೀಯ ಸ್ವಾತಂತ್ರ್ಯ ಅರ್ಥಹೀನವೆಂಬುದನ್ನು ಮತ್ತು ಸಮಾಜದ ಎಲ್ಲ ವರ್ಗಗಳ ಜನರ ಸರ್ವಾಂಗೀಣ ಅಭಿವೃದ್ಧಿಗೆ ತುರ್ತಾಗಿ ಹಂತ 'ಂತದ ಕಾರ್ಯಕ್ರಮದ ಅಗತ್ಯವಿದೆಯೆಂಬುದನ್ನು ಕಂಡುಕೊಳ್ಳಲಾಗಿತ್ತು.

ಮಲ್ಕಾನಿ ಸಮಿತಿ, ಪಾಂಡ್ಯ ಸಮಿತಿ ಮುಂತಾದ ಹಲವಾರು ಸಮಿತಿಗಳು ಈ ನಿಟ್ಟಿನಲ್ಲಿ ಬಹಳಷ್ಟು ಅಮೂಲ್ಯವಾದ ಆರಂಭಿಕ ಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ಹೇಳಲು ನನಗೆ ಸಂತೋಷವಾಗುತ್ತಿದೆ. ದೇಶದಲ್ಲಿರುವ ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಸ್ಥಿತಿಗಳಲ್ಲಿ ಸುಧಾರಣೆ ತರುವ ಸಲುವಾಗಿ ಈ ಸಮಿತಿಗಳು ಅಮೂಲ್ಯವಾದ ಸಲಹೆಗಳನ್ನು ಇತ್ತಿವೆ. ಈ ಶಿಫಾರಸುಗಳನ್ನು ಈವರೆಗೂ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರದಿರುವುದು ನಿಜಕ್ಕೂ ತೀರಾ ವಿಷಾದನೀಯ. ಒಕ್ಕೂಟ ಸರ್ಕಾರವು ಹಾಗೂ ಹಲವಾರು ರಾಜ್ಯ ಸರ್ಕಾರಗಳು ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ ಆ ಸಮಿತಿಗಳ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರುತ್ತವೆಂಬ ಬಲವಾದ ನಂಬಿಕೆ ನನಗಿದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಮ್ಮ ಜನಪ್ರಿಯ, ಕ್ರಿಯಾಶೀಲ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸರು ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಸ್ಥಿತಿಗಳಲ್ಲಿ ಸುಧಾರಣೆಗಳನ್ನು ತರಲು ಎಲ್ಲ ಅವಶ್ಯಕ ಕ್ರಮಗಳನ್ನು ಪ್ರಾರಂಭಿಸಲು ಸದಾ ಬೆಂಬಲ ಕೊಡುವುದರಲ್ಲಷ್ಟೇ ಅಲ್ಲ ಆ ನಿಟ್ಟಿನಲ್ಲಿ ತೀರಾ ಉತ್ಸುಕರಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ. ಶ್ರೀ ಬಸವಲಿಂಗಪ್ಪನವರದು ಸದಾ ಯುವ ಹಾಗೂ ಉತ್ಸಾಹ ಪೂರ್ಣ ವ್ಯಕ್ತಿತ್ವ. ಎಲ್ಲೆಲ್ಲಿ ಅನ್ಯಾಯ ಕಂಡುಬರುವುದೋ ಅಲ್ಲೆಲ್ಲಾ ಅದಾಗದಂತೆ ಸರಿಪಡಿಸುವುದರಲ್ಲಿ ತೀವ್ರಾಸಕ್ತಿಯುಳ್ಳ ವ್ಯಕ್ತಿ. ಈ ನತದೃಷ್ಟ ಜನರ ಬದುಕಿನ ಮತ್ತು ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಪರಿಶೀಲಿಸಲು ಈ ಸಮಿತಿಯನ್ನು ರಚಿಸಲು ಶ್ರೀ ಬಸವಲಿಂಗಪ್ಪನವರೇ ಪ್ರಮುಖ ಕಾರಣಕರ್ತರು. ಸ್ವೀಪರುಗಳು ಮತ್ತು ಸ್ಕ್ಯಾವೆಂಜರುಗಳು ಎನ್ನುವ ಹೆಸರನ್ನು "ಪೌರಕಾರ್ಮಿಕರೆಂದು ಬದಲಾಯಿಸಿ ಈ ಜನರಿಗೆ ಹಿರಿಮೆಯ ಮಾನ್ಯತೆಯನ್ನು ದೊರಕಿಸಿಕೊಟ್ಟವರೇ ಅವರು. ಪೌರಾಡಳಿತ ಖಾತೆಯ ಈಗಿನ ಮಂತ್ರಿಗಳಾದ ಶ್ರೀ ಡಿ.ಕೆ.ನಾಯ್ಕರ್‌ರವರು ಈ ಕೆಲಸಗಾರರ ವಿಷಯದಲ್ಲಿ ನಮಗೆ ಬಹಳಷ್ಟು ಬೆಂಬಲ ನೀಡಿದ್ದಾರೆ. ಕಳಕಳಿ ಉಳ್ಳವರಾಗಿದ್ದಾರೆ. ಹಲವಾರು ರೀತಿಯಲ್ಲಿ ಸಮಿತಿಗೆ ನೆರವಾಗಿದ್ದಾರೆ. ಈ ಎಲ್ಲ ನಾಯಕರುಗಳಿಗೆ ನಾವು ಆಭಾರಿಯಾಗಿದ್ದೇವೆ. ಈ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಮುನ್ಸಿಪಲ್ ಕೌನ್ಸಿಲ್‌ಗಳು, ಮುನ್ಸಿಪಲ್ ಕಾರ್ಪೊರೇಷನ್‌ಗಳು, ಗ್ರಾಮ ಪಂಚಾಯತ್‌ಗಳು, ಟೌನ್ ಪಂಚಾಯತ್‌ಗಳು ಹಾಗೂ ಇತರ ಸಾಮಾಜಿಕ ಮತ್ತು ಸಮಾಜ ಸೇವಾ ಸಂಘ ಸಂಸ್ಥೆಗಳಿರುವ ಸ್ಥಳಗಳಿಗೆ ನಾವು ಪ್ರವಾಸ ಹೋದಾಗಲೆಲ್ಲ ಮತ್ತು ಆ ಸ್ಥಳಗಳಿಗೆ ಭೇಟಿ ನೀಡಿದಾಗಲೆಲ್ಲ ನನಗೆ ಮತ್ತು ಸಮಿತಿಯ ಇತರ ಸದಸ್ಯರುಗಳಿಗೆ ಅವು

ತುಂಬು ಹೃದಯದಿಂದ ನಮಗೆ ಸಹಕಾರ ಕೊಟ್ಟಿವೆ. ಪ್ರೀತಿ ಅಭಿಮಾನದಿಂದ, ಆದರದಿಂದ ಸತ್ಕರಿಸಿವೆ. ಸಾರ್ವಜನಿಕ ಹಿತದೃಷ್ಟಿಯುಳ್ಳ ಆ ಎಲ್ಲ ಸಂಘ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಸೇವಾ ಮನೋಧರ್ಮವುಳ್ಳ ಮುಂದಾಳುಗಳಿಗೆ ನಾನು ಅಭಿನಂದನೆಗಳನ್ನು ಸಲ್ಲಿಸದಿದ್ದರೆ ನಾನು ನನ್ನ ಕರ್ತವ್ಯದಿಂದ ವಿಮುಖನಾದಂತೆಯೇ. ಆ ಎಲ್ಲ ಸಂಘ ಸಂಸ್ಥೆಗಳಿಗೆ ನನ್ನ ಹೃತ್ಪೂರ್ವಕ ನಮನಗಳು. ಆ ಹಲವಾರು ಸಂಘ ಸಂಸ್ಥೆಗಳೊಂದಿಗೆ ನಡೆದ ಚರ್ಚೆಯ ಕಾಲದಲ್ಲಿ ಈ ವಿಷಯದ ಬಗ್ಗೆ ಇನ್ನೆಷ್ಟು ವಿಳಂಬಕ್ಕೆ ಆಸ್ಪದ ಕೊಡುವುದು ಸರಿಯಲ್ಲವೆನ್ನುವುದನ್ನು ಸಮಿತಿಯು ಮನಗಂಡಿತು.

ಸಮಿತಿಯಲ್ಲಿ ತುಂಬಾನೆ ಅನುಭವಸ್ಥ, ಪ್ರಾಮಾಣಿಕ ಹಾಗೂ ಶ್ರದ್ಧಾವಂತ ಕಾರ್ಯಕರ್ತರು ಹಾಗೂ ಕಾರ್ಮಿಕ ನಾಯಕರು ನನ್ನ ಸಹೋದ್ಯೋಗಿಗಳಾಗಿರುವುದು ನನ್ನ ಸುದೈವ. ಸಮಿತಿಯಲ್ಲಿರುವ ನಾಲ್ವರು ಸಾರ್ವಜನಿಕ ಮಹತ್ವದ ಹಾಗೂ ಘನತೆಯ ಸ್ಥಾನಗಳಲ್ಲಿದ್ದಾರೆ. ಅವರಲ್ಲಿ ಒಬ್ಬರು ರಾಜ್ಯ ಸರ್ಕಾರದಲ್ಲಿ ಕಾರ್ಮಿಕ ಖಾತೆ ರಾಜ್ಯ ಮಂತ್ರಿಯಾಗಿದ್ದಾರೆ. ಪ್ರಾಮಾಣಿಕ ಹಾಗೂ ಶ್ರದ್ಧಾವಂತ ಕಾರ್ಯಕರ್ತ ಶ್ರೀ ಮುಲ್ಲಾರವರು ಈ ಕಾರ್ಯದ ನಡುವೆ ನಿಧನರಾದುದು ದುಃಖದ ಸಂಗತಿ. ಈ ಸಮಿತಿಗೆ ಶ್ರೀ ಮುಲ್ಲಾರವರು ಅತ್ಯಮೂಲ್ಯ ಸೇವೆ ಸಲ್ಲಿಸಿದ್ದಾರೆ.

ಸಮಿತಿಯ ಮೊದಲನೆ ಕಾರ್ಯದರ್ಶಿಯಾಗಿದ್ದ ಶ್ರೀ ಡಿ.ಎ. ಸುಬ್ಬರಾವ್, ತದನಂತರ ರೆವಿನ್ಯೂ ಇಲಾಖೆಯಲ್ಲಿ ಸಮರ್ಥ ಅಧಿಕಾರಿಯಾಗಿದ್ದ, ಸಮಿತಿಯಲ್ಲಿ ವಿಶೇಷ ಸಹಾಯಕರಾಗಿದ್ದ ಶ್ರೀ ಕೆ.ಆರ್. ಲಕ್ಷ್ಮಣರಾವ್ ಮತ್ತು ಈಗಿನ ಪ್ರಭಾರ ಕಾರ್ಯದರ್ಶಿ ಶ್ರೀ ಸಿ.ಆರ್.ಮೂರ್ತಿ ಇವರೆಲ್ಲರೂ ಸಮಿತಿಗೆ ನೆರವಾಗಿದ್ದಕ್ಕಾಗಿ ಹಾಗೂ ಅತ್ಯಮೂಲ್ಯ ಸೇವೆ ಸಲ್ಲಿಸಿದ್ದಕ್ಕಾಗಿ ಸಮಿತಿಯು ಮನಃಪೂರ್ವಕವಾಗಿ ಶ್ಲಾಘಿಸುತ್ತದೆ. ತನ್ನ ಮೆಚ್ಚುಗೆಯನ್ನು ದಾಖಲಿಸುತ್ತದೆ. ಇವರೆಲ್ಲರೂ ತಮಗಿದ್ದ ವೈಯಕ್ತಿಕ ಅನಾನುಕೂಲಗಳು, ತೊಂದರೆಗಳೇನೇ ಇದ್ದರೂ ಉತ್ಸಾಹದಿಂದ ಮನಪೂರ್ವಕವಾಗಿ ಸಹಕರಿಸಿದ್ದಾರೆ. ಇತರ ಸಿಬ್ಬಂದಿಯವರಿಗೂ ಕೂಡ ಸಮಿತಿಯು ಕೃತಜ್ಞತೆ ವ್ಯಕ್ತಪಡಿಸುತ್ತದೆ.

ಕೊನೆಯಲ್ಲಿ ಇನ್ನೊಂದು ಮುಖ್ಯವಾದ ಸಂಗತಿಯನ್ನು ಹೇಳಲೇಬೇಕು ಅದೇನೆಂದರೆ, ಮುನಿಸಿಪಲ್ ಕಾರ್ಪೊರೇಷನ್‌ಗಳ ಪ್ರಾಧಿಕಾರಿಗಳು ಮತ್ತು ಬಾಂಬೆ, ದೆಹಲಿ, ಕಲ್ಕತ್ತ, ಭುವನೇಶ್ವರ, ಹೈದರಾಬಾದ್ ಹಾಗೂ ಮದ್ರಾಸ್ ಪೌರ ಪ್ರಾಧಿಕಾರಿಗಳು ಸಮಿತಿಗೆ ಸ್ನೇಹ ಸೌಹಾರ್ದದ ಸಹಕಾರ ನೀಡಿದ್ದಕ್ಕಾಗಿ ಹಾಗೂ ನೀಡಿದ ಆದರಾತಿಥ್ಯಕ್ಕಾಗಿ ಸಮಿತಿಯು ಕೃತಜ್ಞತೆಯನ್ನು ಮತ್ತು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ದೇಶದಲ್ಲಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆಗಳನ್ನು ತರುವ ವಿಷಯದಲ್ಲಿ ಅವುಗಳು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಮತ್ತು ಅಮೂಲ್ಯ ಸಲಹೆಗಳಿಂದ ನಾವು ತುಂಬಾನೆ ತಿಳಿದುಕೊಂಡಂತಾಗಿದೆ.

ಕರ್ನಾಟಕದಲ್ಲಿರುವ ಜನಪ್ರಿಯ ಸರ್ಕಾರವು ಸಮಿತಿಯು ಮಾಡಿರುವ ಹಲವಾರು ಶಿಫಾರಸುಗಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ಕಾರ್ಯರೂಪಕ್ಕೆ ತರುವುದರಲ್ಲಿ ಎಲ್ಲ ಪ್ರಯತ್ನಗಳನ್ನು ಮಾಡುತ್ತದೆಂದು ಸಮಿತಿಯು ಬಲವಾಗಿ ನಂಬಿದೆ.

**ಐ.ಪಿ.ಡಿ. ಸಾಲಪ್ಪ**
ಅಧ್ಯಕ್ಷರು
ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ
ಮತ್ತು ಕಾಯಕದ ಸ್ಥಿತಿಗತಿಗಳ ಸುಧಾರಣೆ ಕುರಿತ ಸಮಿತಿ

# ಪರಿವಿಡಿ

## ಭಾಗ ಒಂದು

## ಅಧ್ಯಾಯ


| | | |
|---|---|---|
| I | ಪೀಠಿಕೆ | |
| II | ಸಮಿತಿಯ ಕಾರ್ಯವ್ಯಾಪ್ತಿ ಹಾಗೂ ಸಮಿತಿಗೆ ವಹಿಸಿರುವ ಕಾರ್ಯಗಳು | |
| III | ಕಾರ್ಯಾರಂಭ | |
| IV | ಸಾಮಾನ್ಯ ಅವಲೋಕನ | |
| V | ಮಲ ಸಾಗಣೆ – ವಿಧಾನ | |
| VI | ಸೇವಾ ನಿಬಂಧನೆಗಳು | |
| VII | ಕೆಲಸದ ಸ್ಥಿತಿಗತಿಗಳು | |
| VIII | ಬದುಕಿನ ಸ್ಥಿತಿಗತಿಗಳು | |
| IX | ಆರ್ಥಿಕ ಸ್ಥಿತಿಗತಿಗಳು | |
| X | ಸಾಮಾಜಿಕ ಸ್ಥಿತಿಗತಿಗಳು | |
| XI | ಆರೋಗ್ಯ | |
| XII | ಶಿಕ್ಷಣ | |
| XIII | ಸಾಮಾಜಿಕ ಏಕೀಕರಣ | |
| XIV | ರಾಜಕೀಯ ಪ್ರಾತಿನಿಧ್ಯ | |
| XV | ಸಂಕೀರ್ಣ ವಿಷಯಗಳು | |
| XVI | ಸಾಮಾಜಿಕ ಭದ್ರತೆ | |
| XVII | ಕಾರ್ಮಿಕ ಸಂಘಗಳು | |
| XVIII | ನಾಗರಿಕರಿಗೆ ಒಂದು ಮನವಿ | |
| XIX | ಉಪದ್ರವ ಎಸಗುವುದರ ವಿರುದ್ಧ ಕಟ್ಟುನಿಟ್ಟಿನ ನಿಯಮಗಳನ್ನು ರಚಿಸಬೇಕು | |
| XX | ಪೌರಕಾರ್ಮಿಕರಿಗೆ ಹಾಗೂ ಸ್ಥಳೀಯ ಮಂಡಳಿಗಳ ಮೇಲ್ವಿಚಾರಣಾ ಸಿಬ್ಬಂದಿಗಳಿಗೆ ಒಂದು ಮನವಿ | |
| XXI | ಪೌರಕಾರ್ಮಿಕ ದಿನಾಚರಣೆ | |
| XXII | ಪುನರ್ ವ್ಯವಸ್ಥೆ | |
| XXIII | ಹಣಕಾಸು ಸಂಪನ್ಮೂಲ | |
| XXIV | ಖಾಯಂ ಮಂಡಳಿ ಏಕೆ ಬೇಕು | |
| XXV | ಸಮಾಪನ | |


## ಭಾಗ ಎರಡು

| | | |
|---|---|---|
| I | ಪ್ರವಾಸ – ಅವಲೋಕನ | |
| II | ಕರ್ನಾಟಕದ ರಾಜ್ಯದ ಹೊರಗಿನ ರಾಜ್ಯಗಳ ನಗರಗಳಲ್ಲಿರುವ ಹಾಗೂ ಪಟ್ಟಣಗಳಲ್ಲಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳು | |

## ಭಾಗ ಎರಡು

| **ಸರ್ಕಾರದ ಕಲ್ಯಾಣ ಯೋಜನೆಗಳ ಆದೇಶಗಳು** | | |
|---|---|---|
| 1 | ಸಮಿತಿಯ ರಚನೆ | |
| 2 | ಸ್ಥಳೀಯ ಮಂಡಳಿಗಳಲ್ಲಿ ಕೆಲಸ ಮಡುತ್ತಿರುವ IV ನೇ ದರ್ಜೆ ನೌಕರರ ಸೇವಾ ನಿಬಂಧನೆಗಳು–ಸೂಚನೆಗಳು–ಕುರಿತು | |
| 3 | 25ನೆಯ ಸ್ವಾತಂತ್ರ್ಯ ದಿನಾಚರಣೆ ಸಮಾರಂಭ–ಕಸಗುಡಿಸುವವರಿಗೆ ಮತ್ತು ಇತರರಿಗೆ ಬಟ್ಟೆಗಳ ವಿತರಣೆ | |
| 4 | "ಸ್ವೀಪರ್ಸ್ ಹಾಗೂ ಸ್ಕ್ಯಾವೆಂಜರ್ಸ್" ಬದಲಾಗಿ ಪೌರಕಾರ್ಮಿಕರು ಎಂದು ಬದಲಾಯಿಸುವ ಬಗ್ಗೆ | |
| 5 | ಸಿಟಿ ಮುನಿಸಿಪಲ್ ಕೌನ್ಸಿಲ್ ಬಳ್ಳಾರಿ–ಕನ್‌ಸರ್‌ವೆನ್ಸಿ ನೌಕರರಿಗೆ ಟವೆಲ್‌ಗಳು, ಬಾರ್ ಸೋಪ್‌ಗಳು ಮುಂತಾದವುಗಳ ಸರಬರಾಜು– ಮಂಜೂರಾತಿ ಕುರಿತು | |
| 6 | ಮಾನವ ಘನತೆ ವರ್ಷ – 1973 | |
| 7 | ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಿ ಮುನಿಸಿಪಾಲಿಟಿಗಳ ಬಜೆಟ್ಟಿನಲ್ಲಿ ಶೇ 18 ರಷ್ಟನ್ನು ಮೀಸಲಿಡುವುದು | |
| 8 | ಹೊಟೇಲುಗಳಲ್ಲಿ ಹರಿಜನರಿಗೆ ಆಹಾರ ಮತ್ತು ಪಾನೀಯಗಳನ್ನು ಬಡಿಸುವುದು | |
| 9 | ಮದ್ಯದ ಅಂಗಡಿಗಳಿರಬೇಕಾದ ಜಾಗ | |
| 10 | ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನರಿಗೆ ಸ್ಮಶಾನ ಭೂಮಿಯನ್ನು ಒದಗಿಸುವುದು | |
| 11 | ಜನ ಸಮೂಹ ಬಂದು ಹೋಗುವ ಕಡೆಗಳಲ್ಲಿ ಕೋಮು ಹೆಸರಿನ ಫಲಕಗಳನ್ನು ತೆಗೆದು ಹಾಕುವುದು | |
| 12 | ಗಟಾರ ಸ್ವಚ್ಛತೆ ಭತ್ಯೆ | |
| 13 | ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ–ನಿಧಿಗಳ ಬಳಕೆ – ಸೂಚನೆಗಳು | |

## ಭಾಗ ನಾಲ್ಕು

| | | |
|---|---|---|
| 1 | 1933ರ ಸೆಪ್ಟೆಂಬರ್ 23ರ, 'ಹರಿಜನ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಮಹಾತ್ಮ ಗಾಂಧೀಜಿಯವರ ಲೇಖನ | |
| 2 | 1964ರ ಜನವರಿ 2 ರಂದು ದೆಹಲಿಯಲ್ಲಿ ನಡೆದ ಕಸುಗುಡಿಸುವವರ ಸಾರ್ವಜನಿಕ ಸಭೆಯಲ್ಲಿ ಜವಹರ ಲಾಲ್ ನೆಹರೂರ ಭಾಷಣದ ಉದ್ಧೃತ ಭಾಗಗಳು | |
| 3 | ರಾಷ್ಟ್ರದಲ್ಲಿ ಕಸಗುಡಿಸುವವರ ಮತ್ತು ಜಾಡಮಾಲಿಗಳ ಸ್ಥಿತಿಗತಿಗಳ ಕುರಿತ ಇಳೆಯ ಪೆರುಮಾಳ್ ಸಮಿತಿಯ ಅವಲೋಕನಗಳು ಮತ್ತು ಆ ಸಮಿತಿಯ ಶಿಫಾರಸುಗಳು | |
| 4 | ದಿ: ಶ್ರೀ ಪಿ.ಕೋದಂಡರಾವ್ ಅವರ ಪತ್ರ | |

## ಭಾಗ ಐದು

| | | |
|---|---|---|
| 1 | ಪ್ರಶ್ನಾವಳಿ | |
| 2 | ಪೌರಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು – ಸಮೀಕ್ಷೆ | |

## ಭಾಗ ಆರು

| | | |
|---|---|---|
| 1 | ಸಮಿತಿಯ ಮಧ್ಯಂತರ ಶಿಫಾರಸುಗಳು | |

## ಭಾಗ ಏಳು

| | | |
|---|---|---|
| 1 | ಶಿಫಾರಸ್ಸುಗಳ ಸಾರಾಂಶ | |

## ಭಾಗ ಎಂಟು

| | | |
|---|---|---|
| 1 | ಹಲವಾರು ಸಮಿತಿಗಳ ವರದಿಗಳ ಉದ್ಧೃತ ಭಾಗಗಳು | |
| I | ಬಾರ್ವೆ ಸಮಿತಿ 1948–51 | |
| II | ಮಲ್ಕಾನಿ ಸಮಿತಿ 1957–1960 | |
| III | ಪಾಂಡ್ಯ ಸಮಿತಿ 1967–69 | |
| IV | ಮುನಿಸಿಪಲ್ ನೌಕರರ ಮಜೂರಿ ಮಂಡಳಿ – ಕೇರಳ ಸರ್ಕಾರ 1971–73 | |
| V | ಹರಿಯಾಣ ಸರ್ಕಾರಿ ಸಮಿತಿ 1960–72 | |

## ಭಾಗ ಒಂಭತ್ತು

| | | |
|---|---|---|
| 1 | ರಾಜ್ಯದ ಪೌರಸಭೆಗಳಲ್ಲಿ ನೇಮಕಗೊಂಡ ಪೌರಕಾರ್ಮಿಕರ ಸಂಖ್ಯೆಯನ್ನು ತೋರಿಸುವ ತಃಖ್ತೆ | |
| 2 | ಮುನಿಸಿಪಾಲಿಟಿಗಳಲ್ಲಿ ನೇಮಕ ಮಾಡಿರುವ ಜಾಡಮಾಲಿಗಳ ಸಂಖ್ಯೆಯನ್ನು ತೋರಿಸುವ ತಃಖ್ತೆ ಹಾಗೂ ಇತರ ಸಂಬಂಧಿತ ಮಾಹಿತಿ | |
| 3 | ವೇತನ ಶ್ರೇಣಿ, ಕೆಲಸದ ವೇಳೆ, ರಜೆ ಮತ್ತು ರಜಾ ದಿನಗಳು ಇತ್ಯಾದಿ ತೋರಿಸುವ ತಃಖ್ತೆ | |
| 4 | ರಾಜ್ಯದಲ್ಲಿರುವ ಪೌರಕಾರ್ಮಿಕರಿಗಾಗಿ ಚಾಲ್ತಿಯಲ್ಲಿ ರುವ ನಿವೃತ್ತಿ ಮತ್ತು ಇತರ ಪ್ರಯೋಜನಗಳನ್ನು ತೋರಿಸುವ ತಃಖ್ತೆ | |
| 5 | ಮುನಿಸಿಪಾಲಿಟಿಗಳಲ್ಲಿರುವ ಪೌರಕಾರ್ಮಿಕರಿಗೆ ಒದಗಿಸಿರುವ ವಸತಿ ಸೌಕರ್ಯಗಳನ್ನು ತೋರಿಸುವ ತಃಖ್ತೆ | |
| 6 | ಪೌರಕಾರ್ಮಿಕರ ಮಕ್ಕಳ ವಿವರ ತೋರಿಸುವ ತಃಖ್ತೆ | |

# ಅಧ್ಯಾಯ 1

## ಪೀಠಿಕೆ

ಇತ್ತೀಚಿನ ಕಾಲದಲ್ಲಿ ಭಾರತವು ಅನೇಕ ಕ್ಷೇತ್ರಗಳಲ್ಲಿ ಶ್ಲಾಘನೀಯ ಪ್ರಗತಿಯನ್ನು ಸಾಧಿಸಿದೆ. ಸ್ವತಂತ್ರ ದೇಶವಾದ ತರುವಾಯ ಭಾರತವು ತಂತ್ರಜ್ಞಾನ ಹಾಗೂ ಕೈಗಾರಿಕಾ ರಂಗದಲ್ಲಿ ಉತ್ಕೃಷ್ಟ ಪ್ರಗತಿಯನ್ನು ಸಾಧಿಸಿದೆ. ನಾವು ಅಣುಬಾಂಬನ್ನು ಸ್ಫೋಟಿಸಿದ್ದೇವೆ. ಬಾಹ್ಯಾಕಾಶಕ್ಕೆ ಉಪಗ್ರಹವನ್ನು ಕಳುಹಿಸಿದ್ದೇವೆ.

ರಾಜನೀತಿ ಕ್ಷೇತ್ರದಲ್ಲಿ ನಾವು ಇಡೀ ವಿಶ್ವದಲ್ಲೇ ಬಹು ದೊಡ್ಡ ಪ್ರಜಾಪ್ರಭುತ್ವ ಪದ್ಧತಿಯನ್ನು ಯಶಸ್ವಿಯಾಗಿ ಸಫಲಗೊಳಿಸಿದ್ದೇವೆ ಹಾಗೆಯೇ ಕಲೆ, ಸಂಗೀತ, ನೃತ್ಯ ಮತ್ತು ನಾಟಕ ಕ್ಷೇತ್ರಗಳಲ್ಲಿ ಸಹ ಇತರರಿಗೆ ಅನುಕರಣೀಯ ಮಾದರಿಯಾಗಿದ್ದೇವೆ.

ನಾವು ಇಷ್ಟೆಲ್ಲಾ ಸಾಧನೆ ಮಾಡಿದ್ದರೂ, ಸಮಾಜಕ್ಕೆ ಅತ್ಯಮೂಲ್ಯ ಸೇವೆಗಳನ್ನು ಕೊಡುತ್ತಿರುವ ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವಲ್ಲಿ ನಾವು ಕಣ್ಣಿಗೆ ಕಾಣುವಂತಹ ಯಾವ ಕ್ರಮವನ್ನು ಕೈಗೊಂಡಿರದಿರುವುದು ನಾಚಿಕೆಯ ಹಾಗೂ ವಿಷಾದನೀಯ ಸಂಗತಿ. ಹೀಗಾಗಿ ಅವರು ಮೊದಲು ಯಾವ ಸ್ಥಿತಿಯಲ್ಲಿದ್ದರೋ ಈಗಲೂ ಅದೇ ಸ್ಥಿತಿಯಲ್ಲಿದ್ದಾರೆ. ದೇಶವು ವೈಜ್ಞಾನಿಕ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಏನೆಲ್ಲಾ ಪ್ರಗತಿ ಸಾಧಿಸಿದ್ದರೂ ಸ್ಕ್ಯಾವೆಂಜರುಗಳು ಈಗಲೂ ತಮ್ಮ ತಲೆಯ ಮೇಲೆ ಮಲವನ್ನು ಹೊತ್ತು ಒಯ್ಯುತ್ತಿದ್ದಾರೆ. ಈ ಜನರ ಈ ಬಗೆಯ ದುಸ್ಥಿತಿಗೆ ಒಂದು ಕಡೆ ನಿರ್ದಯ ಸ್ವಭಾವದ ಅಧಿಕಾರ ಶಾಹಿಯ ಕಲ್ಪನೆಗೂ ನಿಲುಕದ ಹಾಗೂ ಅಮಾನವೀಯ ಧೋರಣೆ ಕಾರಣವಾದರೆ, ಇನ್ನೊಂದು ಕಡೆ ಈ ಜನರ ಬಗ್ಗೆ ಸಾರ್ವಜನಿಕರಲ್ಲಿರುವ ತೀವ್ರ ಉದಾಸೀನತೆ ಮತ್ತು ನಿರಾಸಕ್ತಿಯೇ ಕಾರಣ. ಈ ನತದೃಷ್ಟ ಜನರ ಬಗ್ಗೆ ಒಳ್ಳೆಯ ಮನೋಭಾವನೆ ಜಾಗೃತಗೊಳ್ಳಲು ಮಹಾತ್ಮಾಗಾಂಧಿಯವರು ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರು ಸತತ ಪ್ರಯತ್ನಗಳನ್ನು ಮಾಡಿದ್ದರಿಂದ ಈ ದಿನಗಳಲ್ಲಿ ಈ ಜನರಿಗೆ ಅಲ್ಪ-ಸ್ವಲ್ಪ ಪ್ರಯೋಜನಗಳು ಸಿಗುತ್ತಿವೆ.

ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಅವಿರತ ಪ್ರಯತ್ನಗಳಿಂದಾಗಿ ಸಮಾಜಕ್ಕೆ ಹಾಗೆಯೇ ಬಾಂಬೆ ಸರ್ಕಾರಕ್ಕೆ ಈ ಶೋಷಿತ ಹಾಗೂ ದಲಿತ ವರ್ಗದ ಜನರ ಬಗ್ಗೆ ತಮಗಿರಬೇಕಾದ ಕರ್ತವ್ಯ ಅರಿವಿಗೆ ಬಂತು. 1949ರಲ್ಲಿ ಅಧಿಕಾರದಲ್ಲಿದ್ದ ಬಾಂಬೆ ಸರ್ಕಾರವು ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ಸಲುವಾಗಿ ರಚನಾತ್ಮಕ ಕ್ರಮಗಳನ್ನು ಕೈಗೊಂಡಿದ್ದಕ್ಕೆ ಶ್ರೇಯಸ್ಸು ಬಾಂಬೆ ಸರ್ಕಾರಕ್ಕೆ ಸಲ್ಲಬೇಕು. ಈ ಜನರ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಪರಿಶೀಲಿಸಲು ಬಾಂಬೆ ಸರ್ಕಾರವು ದೇಶದಲ್ಲೇ ಮೊಟ್ಟಮೊದಲನೆಯದೆನ್ನಲಾದ ಸಮಿತಿಯನ್ನು ರಚಿಸಿತು. ಶ್ರೀ ವೈ.ಎನ್.ಬರ್ವೆಯವರ ನೇತೃತ್ವದ ಸಮಿತಿಯು ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಸಮಸ್ಯೆಗಳನ್ನು ಸವಿವರವಾಗಿ ಅಧ್ಯಯನ ಮಾಡಿ 1952ರಲ್ಲಿ ತನ್ನ ವರದಿಯನ್ನು ಮತ್ತು ಶಿಫಾರಸುಗಳನ್ನು ಸಲ್ಲಿಸಿತು. ಆ ವರದಿಯಲ್ಲಿ ಆಗ ಬಾಂಬೆ ರಾಜ್ಯದ ಅಧೀನದಲ್ಲಿದ್ದ ಬಿಜಾಪುರ, ಬೆಳಗಾಂ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ ನಿಯೋಜಿತರಾಗಿದ್ದ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಸ್ಥಿತಿಗತಿಗಳ ಬಗೆಗಿನ ಉಲ್ಲೇಖಗಳಿವೆ.

ತಲೆಯ ಮೇಲೆ ಮಲ ಹೊತ್ತು ಒಯ್ಯುತ್ತಿರುವ ಸ್ಕ್ಯಾವೆಂಜರುಗಳ ಅಗೌರವಕಾರಕ ಪದ್ಧತಿಯನ್ನು ತೊಲಗಿಸಲು ಒಂದು ಯೋಜನೆಯನ್ನು ಸಿದ್ಧಪಡಿಸುವ ಸಲುವಾಗಿ ಭಾರತ ಸರ್ಕಾರದ ಗೃಹಮಂತ್ರಿ ದಿ.ಜಿ.ಬಿ.ಪಂತರ ಸೂಚನೆಯಂತೆ, ಪ್ರೊ.ಮಲ್ಕಾನಿಯವರ ಅಧ್ಯಕ್ಷತೆಯಲ್ಲಿ 1957ರಲ್ಲಿ ಒಂದು ರಾಷ್ಟ್ರೀಯ ಸಮಿತಿಯನ್ನು ರಚಿಸಲಾಗಿತ್ತು. ಮಲ್ಕಾನಿ ಸಮಿತಿಯು ತನ್ನ ವರದಿಯನ್ನು 1966ರಲ್ಲಿ ಭಾರತ ಸರ್ಕಾರಕ್ಕೆ ಸಲ್ಲಿಸಿತು. ಅಂದಾಜುಗಳ ಸಮಿತಿಯು ತನ್ನ 48ನೆಯ ವರದಿಯಲ್ಲಿ ಈ ಕೆಳಕಂಡಂತೆ ವರದಿ ಮಾಡಿತ್ತು.

(ಎ) ಗೃಹ ಮಂತ್ರಾಲಯವು ಈ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವಹಿಸಬೇಕು ಮತ್ತು ತಲೆಯ ಮೇಲೆ ಮಲ ಹೊತ್ತು ಒಯ್ಯುವ ಪದ್ಧತಿಯನ್ನು ಎಷ್ಟು ಕಡಿಮೆ ಅವಧಿಯಲ್ಲಿ ಸಾಧ್ಯವೋ ಅಷ್ಟು ಕಡಿಮೆ ಅವಧಿಯಲ್ಲಿ ನಿರ್ಮೂಲನ ಮಾಡುವ ಅತ್ಯಂತ ತುರ್ತು

ಅಗತ್ಯವನ್ನು ರಾಜ್ಯ ಮುನಿಸಿಪಾಲಿಟಿಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಮನವರಿಕೆ ಮಾಡಿಕೊಡಬೇಕು.

(ಬಿ) ಯಾವ ಮುನಿಸಿಪಾಲಿಟಿಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ಕೊರತೆಯಿಂದಾಗಿ ಮತ್ತು ಇತರ ಹಲವಾರು ಕಾರಣಗಳಿಂದಾಗಿ ತಲೆ ಮೇಲೆ ಮಲ ಹೊತ್ತೊಯ್ಯುವ ಪದ್ಧತಿಯನ್ನು ಕೈಗಾಡಿಗಳಲ್ಲಿ ಅಥವಾ ತಳ್ಳುಗಾಡಿಗಳಲ್ಲಿ ಸಾಗಿಸುವ ರೀತಿಗೆ ಸಂಪೂರ್ಣವಾಗಿ ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲವೋ ಆದರೆ ಕಾಲ ಕ್ರಮೇಣ ಆ ರೀತಿಯ ಬದಲಾವಣೆಯನ್ನು ಚಾಲ್ತಿಗೆ ತರಲು ಸಿದ್ಧವಾಗಿರುವವೋ ಅಂಥವುಗಳಿಗೆ ಉತ್ತೇಜನ ನೀಡಬೇಕು ಮತ್ತು ಹಣಕಾಸು ನೆರವನ್ನು ನೀಡಬೇಕು.

ತಲೆಯ ಮೇಲೆ ಮಲವನ್ನು ಹೊತ್ತು ಅಥವಾ ಯಾವುದೇ ಇನ್ನಿತರ ರೀತಿಯಲ್ಲಿ ಮಲವನ್ನು ಒಯ್ಯುವ ಪದ್ಧತಿಯನ್ನು ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶವನ್ನು ಹೊರಡಿಸಿ ನಿಷೇಧಿಸಿತು, ಈ ವಿಷಯದಲ್ಲಿ ಈ ಕ್ರಮವನ್ನು ಕೈಗೊಂಡ ಮೊಟ್ಟಮೊದಲ ರಾಜ್ಯ ಕರ್ನಾಟಕವೆಂಬುದನ್ನು ಇಲ್ಲಿ ಹೇಳಲೇಬೇಕು. ಮಹಾತ್ಮ ಗಾಂಧಿಯವರ ಜನ್ಮ ಶತಾಬ್ಧಿಯನ್ನು ಹಾಗೂ 'Human Dignity Year, 1973' ಆಚರಣೆಯನ್ನು ಸ್ಮರಣೀಯವನ್ನಾಗಿ ಮಾಡುವ ಸಲುವಾಗಿ ಆಗಿನ ಪೌರಾಡಳಿತ ಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರು ರಾಜ್ಯದಲ್ಲಿ ಯಾವುದೇ ರೀತಿಯಲ್ಲಿ ಮಲವನ್ನು ಒಯ್ಯುವುದನ್ನು ನಿಲ್ಲಿಸಲು ದಿಟ್ಟ ಮತ್ತು ರಚನಾತ್ಮಕ ಕ್ರಮಗಳನ್ನು ಕೈಗೊಂಡರು. ಅಷ್ಟೇ ಅಲ್ಲ, **"ಕಸಗುಡಿಸುವವರು ಮತ್ತು ಜಾಡಮಾಲಿಗಳು"** ಎಂಬ ಈ ಅಗೌರವಕಾರಕ ಹೆಸರಿನ ಬದಲಿಗೆ 1972 ಸೆಪ್ಟೆಂಬರ್ ತಿಂಗಳಲ್ಲಿ ನವದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ತೀರ್ಮಾನವಾದಂತೆ **'ಪೌರಕಾರ್ಮಿಕರು'** ಎಂದು ಹೆಸರನ್ನು ಬದಲಾವಣೆ ಮಾಡಿದರು.

ಈ ತನಕ, ಈ ಕೆಳಗೆ ಹೇಳಿರುವ ಸಮಿತಿಗಳನ್ನು ಕೇಂದ್ರ ಸರ್ಕಾರವು ಹಾಗೂ ರಾಜ್ಯ ಸರ್ಕಾರಗಳು, ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಪರಿಶೀಲನೆ ಮಾಡುವ ಸಲುವಾಗಿ ನೇಮಕ ಮಾಡಿವೆ.

1. ಸ್ಕ್ಯಾವೆಂಜರುಗಳ ಬದುಕಿನ ಸ್ಥಿತಿಗತಿಗಳ ವಿಚಾರಣಾ ಸಮಿತಿ, ಬಾಂಬೆ ರಾಜ್ಯ 1949–52. ಶ್ರೀವಿ.ಎನ್.ಬರ್ವೆರವರು ಸಮಿತಿಯ ಅಧ್ಯಕ್ಷರಾಗಿದ್ದರು.
2. ಜಾಡಮಾಲಿ ಕಸುಬಿನ ಸ್ಥಿತಿಗತಿಗಳ ವಿಚಾರಣಾ ಸಮಿತಿ, ಗೃಹ ಮಂತ್ರಾಲಯ, ಭಾರತ ಸರ್ಕಾರ, 1957–60 ಪ್ರೊ. ಮಲ್ಕಾನಿ ಸಮಿತಿಯ ಅಧ್ಯಕ್ಷರಾಗಿದ್ದರು.
3. ರಾಷ್ಟ್ರೀಯ ಕಾರ್ಮಿಕ ಆಯೋಗವು 1967ರಲ್ಲಿ ಶ್ರೀ ಭಾನುಪ್ರಸಾದ ಪಾಂಡ್ಯರವರ ಅಧ್ಯಕ್ಷತೆಯಲ್ಲಿ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಸೇವಾ ಸ್ಥಿತಿಗಳನ್ನು ಅಧ್ಯಯನ ಮಾಡಲು ರಚಿಸಿದ್ದ ಸಮಿತಿ.
4. ಭಾರತ ಸರ್ಕಾರದ ಗೃಹ ಮಂತ್ರಾಲಯವು 1961 ಸ್ಥಾಪಿಸಿದ ಹಿಂದುಳಿದ ವರ್ಗಗಳ ಸಹಕಾರ ವಿಶೇಷ ಕಾರ್ಯ ತಂಡ.
5. ಕಸಗುಡಿಸುವವರ ಮತ್ತು ಜಾಡಮಾಲಿಗಳ ಕೆಲಸದ ಮತ್ತು ಸೇವಾ ನಿಬಂಧನೆಗಳನ್ನು ಅಧ್ಯಯನ ಮಾಡಲು ರಾಷ್ಟ್ರೀಯ ಕಾರ್ಮಿಕರ ಆಯೋಗವು 1961ರಲ್ಲಿ ಶ್ರೀ ಭಾನುಪ್ರಸಾದ್ ಪಾಂಡ್ಯರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದ ಸಮಿತಿ.

ಈ ಹಲವಾರು ಸಮಿತಿಗಳು ಈ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿವೆ ಹಾಗೂ ಸ್ವೀಪರುಗಳು ಮತ್ತು ಸ್ಕ್ಯಾವೆಂಜರುಗಳು ಸಾಮಾಜಿಕ ಹಾಗೂ ಹಣಕಾಸು ಸ್ಥಿತಿಗಳಲ್ಲಿ, ಅವರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ಸಲುವಾಗಿ ಅನೇಕ ಅತ್ಯಮೂಲ್ಯ ಶಿಫಾರಸುಗಳನ್ನು ಮಾಡಿವೆ. ಈ ಎಲ್ಲ ಶಿಫಾರಸುಗಳಿದ್ದರೂ ಈ ನತದೃಷ್ಟ ಜನರ ದುಸ್ಥಿತಿಯನ್ನು ಹೋಗಲಾಡಿಸಲು ಕಣ್ಣಿಗೆ ಕಾಣುವಂತಹ ಏನೇನೂ ವಿದ್ಯಮಾನಗಳಾಗಿಲ್ಲ. ಅಗೌರವಕಾರಕ ವೃತ್ತಿಯ ಹಳ್ಳಕ್ಕೆ ಬಿದ್ದಿರುವ ಈ ಜನರನ್ನು ಮೇಲೆತ್ತುವ ಸಂಕಲ್ಪದ

ಕೊರತೆಯನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. "ಸ್ವೀಪರುಗಳು ಅನುಸರಿಸುತ್ತಿರುವ ಅನೈರ್ಮಲ್ಯಕಾರಕ ವಿಧಾನಗಳಲ್ಲಿ ಸುಧಾರಣೆ ತರುವ ಅಗತ್ಯ ಇಲ್ಲವೇ" ಎಂದು 1942 ರಷ್ಟು ಹಿಂದೆಯೇ ಯಾರೋ ಮಹಾತ್ಮಗಾಂಧಿಯವರನ್ನು ಕೇಳಿದಾಗ ಈ ಸಮಸ್ಯೆ ಅವರ ಮಾತುಗಳಲ್ಲೂ ಅನಾವರಣಗೊಂಡಿತ್ತು. ಮಹಾತ್ಮ ಗಾಂಧಿಯವರ ಮಾತುಗಳನ್ನೇ ಇಲ್ಲಿ ಉದ್ಧರಿಸುವುದು ಉಚಿತ;

"ಗಾಂಧೀಜಿ: "ಇದು ತೀರಾ ಅತ್ಯಾವಶ್ಯಕ. ಅಷ್ಟೇ ಅಲ್ಲ ಇದಾಗದಿದ್ದರೆ ಸ್ಕ್ಯಾವೆಂಜರುಗಳ ಸ್ಥಿತಿಗತಿ ಶೋಚನೀಯವಾಗಿಯೇ ಉಳಿದು ಬಿಡುತ್ತದೆ. ಈ ಅನಿಷ್ಟ ಪದ್ಧತಿಯನ್ನು ತೊಲಗಿಸಲು ಹರಿಜನ ಕಾರ್ಮಿಕರು ಮತ್ತು ಸವರ್ಣೀಯ ಹಿಂದೂಗಳು ಮಲ ಸಾಗಿಸುವ ಕೆಲಸವನ್ನು ತಾವೇ ಸ್ವತಃ ಮಾಡಬೇಕಾದುದು ಕರ್ತವ್ಯ. ಆದರೆ, ಸ್ಕ್ಯಾವೆಂಜರುಗಳು ಅನುಸರಿಸುತ್ತಿರುವ ವಿಧಾನವನ್ನು ಸವರ್ಣೀಯ ಹಿಂದೂಗಳು ಯಾರೂ ಅನುಸರಿಸಲಾರರು, ಸವರ್ಣೀಯ ಹಿಂದೂ ಆ ಕೆಲಸವನ್ನು ಮಾಡುವುದಾದರೆ ಶುಚಿಗೆ ಗಮನಕೊಟ್ಟು ವ್ಯವಸ್ಥಿತ ರೀತಿಯಲ್ಲಿ ಮಾಡಬಲ್ಲ. ಉದಾಹರಣೆ ಕೊಟ್ಟು ಹೇಳುವುದಾದರೆ, ಅವನು ಮಲಕ್ಕೆ ಒಣ ಮಣ್ಣು ಹಾಕಿ, ಮುಚ್ಚಿ, ಲೋಹದ ತಪ್ಪಲೆಯಲ್ಲಿ ಹಾಕಿ ಸಾಗಿಸುತ್ತಾನೆ. ಅವನು ಆ ಹೊಲಸನ್ನು ಕೈಯಲ್ಲಿ ಮುಟ್ಟುವುದಿಲ್ಲ. ಆ ಕೆಲಸ ಮಾಡುವಾಗ ಅವನು ವಿಶೇಷ ರೀತಿಯ ಬಟ್ಟೆಗಳನ್ನು ಧರಿಸಿರುತ್ತಾನೆ. ಈ ಬಗೆಯ ಸುಧಾರಣೆಗಳಿಗೆ ಹೆಚ್ಚು ಖರ್ಚುವೆಚ್ಚ ಆಗುವುದಿಲ್ಲ. ಸ್ಕ್ಯಾವೆಂಜರ್ ಕೆಲಸವನ್ನು ಒಂದು ನಿರ್ದಿಷ್ಟ ಜಾತಿಗೇ ಸೀಮಿತಗೊಳಿಸಬಾರದು. ಆದ್ದರಿಂದ, ಅಡುಗೆ ಮಾಡುವ ವಿಧಾನವನ್ನು ಕಲಿಯುವಂತೆಯೇ ಈ ಕೆಲಸ ಮಾಡುವುದನ್ನೂ ಎಲ್ಲರೂ ಕಲಿಯಬೇಕು. ಪ್ರತಿಯೊಬ್ಬನೂ ತಾನೇ ಸ್ಕ್ಯಾವೆಂಜರಾಗಬೇಕು. ಈ ವಿಚಾರವನ್ನು ಸಮಾಜದಲ್ಲಿ ಕಾರ್ಯ ರೂಪಕ್ಕೆ ತಂದರೆ ಸ್ಕ್ಯಾವೆಂಜರುಗಳ ಶೋಚನೀಯ ಸ್ಥಿತಿಗೆ ತಕ್ಷಣವೇ ಮುಕ್ತಿ ಸಿಕ್ಕುತ್ತದೆ."

ಮಲ ಸಾಗಿಸುವ ಕೆಲಸವನ್ನು ಅಧಿಕೃತವಾಗಿ ನಿಷೇಧಿಸಿದ್ದರೂ ರಾಜ್ಯದ ಹಲವಾರು ಭಾಗಗಳಲ್ಲಿ ಅದು ಈಗಲೂ ಚಾಲ್ತಿಯಲ್ಲಿದೆ. ಮಂಕರಿಯಲ್ಲಿ ಮಲವನ್ನು ತಲೆ ಮೇಲೆ ಹೊತ್ತು ಒಯ್ಯುತ್ತಿರುವಾಗ ಮಲ ಸೋರುತ್ತಿದ್ದರೂ ಆ ಕೆಲಸವನ್ನು ಅವನು ನೂರಾರು ವರ್ಷಗಳಿಂದಲೂ ಮಾಡುತ್ತಿದ್ದಾನೆ. ಪ್ರೊ.ಮಲ್ಕಾನಿಯವರು 1960ರಲ್ಲಿ ತಮ್ಮ ವರದಿಯಲ್ಲಿ ಈ ಅನಿಷ್ಟದ ನಿವಾರಣೆ ಬಗ್ಗೆ ಶಿಫಾರಸುಗಳನ್ನು ಮಾಡಿದ್ದರೂ ಜಾಡಮಾಲಿ ಈಗಲೂ ಅದೇ ಕೆಲಸ ಮಾಡುತ್ತಿದ್ದಾನೆ. ಒಂದು ಕಡೆ ಸರ್ಕಾರದ ಉದಾಸೀನ ಭಾವನೆಯಿಂದಾಗಿ, ಇನ್ನೊಂದು ಕಡೆ ಸಾರ್ವಜನಿಕರ ನಿರಾಸಕ್ತಿಯಿಂದಾಗಿ ಈ ಸಮಸ್ಯೆ ಅನೇಕ ಜಟಿಲತೆಗಳಿಗೆ ಸಿಲುಕಿ ಕಗ್ಗಂಟಾಗಿದೆ. ಪ್ರೊ.ಮಲ್ಕಾನಿಯವರು ತಮ್ಮ 'clean people and unclean country' ಕೃತಿಯಲ್ಲಿ ಈ ಸಮಸ್ಯೆ ಕುರಿತು ಸರಿಯಾಗಿಯೇ ಹೇಳಿದ್ದಾರೆ:

"ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಹಲವಾರು ಅಂಶಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿಲ್ಲ. ಹೀಗಾಗಿ ಎಲ್ಲ ಹಂತಗಳಲ್ಲಿ ನೈರ್ಮಲ್ಯ ಪ್ರಜ್ಞೆಯಲ್ಲಿ ಹೇಳತೀರದಷ್ಟು ಕೊರತೆ ಎದ್ದು ಕಾಣುತ್ತಿದೆ. ಇದರಿಂದ ನೈರ್ಮಲ್ಯ ಕುರಿತ ಪ್ರಯತ್ನಗಳು ನಗೆಪಾಟಲಿಗೀಡಾಗುವಂತಹ, ಕೇವಲ ತೋರಿಕೆಯ ಸೋಗಿನ ಪ್ರದರ್ಶನಗಳಾಗಿ ಬಿಟ್ಟಿವೆ. ನಿಜ ಹೇಳಬೇಕೆಂದರೆ ಪರಿಸರ ನೈರ್ಮಲ್ಯ ಪದ, ನೈರ್ಮಲ್ಯ ತಜ್ಞರೆನ್ನಲಾದ ಕೆಲವೇ ಕೆಲವು ಮಂದಿಯಲ್ಲಿ ಬಳಕೆಯಲ್ಲಿದೆ. ಆದ್ದರಿಂದ, ಸವಿವರ ಹಾಗೂ ತೀವ್ರತರ ರೀತಿಯಲ್ಲಿ ನೈರ್ಮಲ್ಯ ಶಿಕ್ಷಣವನ್ನು ಕೊಡುವ ಮೂಲಕ ದೇಶವನ್ನು ನೈರ್ಮಲ್ಯ ಜಾಗೃತ ದೇಶವನ್ನಾಗಿ ಮಾಡುವ ಅವಶ್ಯಕತೆಯಿದೆ. ನೈರ್ಮಲ್ಯದ ಈಗಿನ ಶೋಚನೀಯ ಸ್ಥಿತಿಗೆ ಸಾರ್ವಜನಿಕರಲ್ಲಿರುವ ತೀವ್ರ ನಿರಾಸಕ್ತಿ, ಅಜ್ಞಾನ, ಸಾಂಪ್ರದಾಯಿಕ ರೂಢಿಗಳು ಮತ್ತು ಓಬಿರಾಯನ ಕಾಲದ ಅನಿಷ್ಟ ಮನೋಭಾವನೆಗಳು ಬಹುಮಟ್ಟಿಗೆ ಕಾರಣ. ಈ ಅನಿಷ್ಟಗಳಿಗೆ ರೂಢಿಗಳಿಗೆ ಹಾಗೂ ಹಳೆಯ ಕಂದಾಚಾರದ ಮನೋಭಾವನೆಗಳಿಗೆ ಬಹಳಷ್ಟು ತುತ್ತಾಗಿರುವ ಜಾತಿಯೆಂದರೆ ಮಲ ಸಾಗಣೆ ಜಾತಿ. ಅಧಿಕೃತ ಸೇವೆಗಳನ್ನು ಒದಗಿಸಬೇಕಾದ ಸ್ವೀಪರುಗಳು ಮತ್ತು ಸ್ಕ್ಯಾವೆಂಜರುಗಳು ಸಮುದಾಯದ ಕೆಳ ಹಾಗೂ ದುರ್ಬಲ ವರ್ಗದವರಾದ್ದರಿಂದ ಈ ಸಂಗತಿಯನ್ನು ಆರೋಗ್ಯ ವಿಭಾಗಗಳು ಹಗುರವಾಗಿ ಭಾವಿಸಿವೆ. ಸಾರ್ವಜನಿಕರು ತೀರಾ ತಾತ್ಸಾರ ಅಸಡ್ಡೆ ತೋರುತ್ತಿದ್ದಾರೆ. ಇಂತಹ ಪ್ರತಿಯೊಬ್ಬರಿಗೂ, ಸಾರ್ವಜನಿಕ ನೈರ್ಮಲ್ಯ ಕುರಿತ ಶಿಕ್ಷಣದ ಸಾಕಷ್ಟು ಬಲವಾದ ಮದ್ದನ್ನು ಕೊಡುವ ಅಗತ್ಯವಿದೆ".

ಸ್ವೀಪರುಗಳನ್ನು ಮತ್ತು ಸ್ಕ್ಯಾವೆಂಜರುಗಳನ್ನು ಈ ಸಾಮಾಜಿಕ–ಆರ್ಥಿಕ ಅನಿಷ್ಟ ಕಟ್ಟುಕಟ್ಟಳೆಗಳಿಂದ ಬಿಡುಗಡೆ ಮಾಡಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಇಡೀ ದೇಶವು ಭಾರಿ ಅನಾಹುತವನ್ನು ಎದುರಿಸಬೇಕಾಗುತ್ತದೆ. ಇದು ನಾವಂದುಕೊಳ್ಳುವಷ್ಟು ಸುಲಭದ ಸಮಸ್ಯೆಯಲ್ಲ. ಸಮಾಜ ಮೊದಲಾದವುಗಳ ಸ್ವರೂಪಕ್ಕೆ ಧಕ್ಕೆಯಾಗದಂತೆ, ಈ ಜನರನ್ನು ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಂಕಷ್ಟಗಳಿಂದ ವಿಮೋಚನೆಗೊಳಿಸುವ ಕೆಲಸ ಆಗಬೇಕಿದೆ.

ನಮ್ಮ ದೇಶದ ಪ್ರಗತಿಗೆ ಜಾತಿ ಪದ್ಧತಿ ಬಹುದೊಡ್ಡ ತೊಡಕು. ರಾಮ ಮನೋಹರಾಯ್‌ರಿಂದ ಮಹಾತ್ಮಗಾಂಧಿವರೆಗೆ, ಮಹರ್ಷಿ ಶ್ರೀ ಅರಬಿಂದೋ ರಿಂದ ಬಾಬಾಸಾಹೇಬ್ ಅಂಬೇಡ್ಕರ್‌ರವರೆಗೆ ಪ್ರತಿಯೊಬ್ಬರೂ ಜಾತಿ ಪದ್ಧತಿಯ ಪಿಡುಗುಗಳನ್ನು ಕಟುಮಾತುಗಳಲ್ಲಿ ಖಂಡಿಸಿದ್ದಾರೆ. ಜಾತಿಪದ್ಧತಿಗೆ ಕಟ್ಟುಬಿದ್ದಿರುವ ದೇಶವು ಯಾವುದೇ ಪ್ರಗತಿ ಸಾಧಿಸಲು ಆಗದು ಎಂದು ಒಬ್ಬರು ಜರ್ಮನ್ ತತ್ವಜ್ಞಾನಿ ಹೇಳಿದ್ದಾರೆ. ಕೆಲವರು ಅಗ್ರಗಣ್ಯ ರಾಜಕೀಯ ನೇತಾರರು, ಈ ದೈತ್ಯಾಕಾರದ ಸಮಸ್ಯೆಯ ರಾಜಕೀಯ, ಸಾಂಸ್ಕೃತಿಕ ಇತರ ಆಯಾಮಗಳ ತಿಳಿವಳಿಕೆ ಇಲ್ಲದೆಯೇ ಈ ಸಮಸ್ಯೆಯ ಪರಿಹಾರಕ್ಕೆ ಆರ್ಥಿಕ ಕ್ರಾಂತಿಯಾಗಬೇಕೆಂದು ಪ್ರತಿಪಾದಿಸುತ್ತಿರುವುದು ನಿಜಕ್ಕೂ ಆಶ್ಚರ್ಯಕರ. ಸಾಮಾಜಿಕ ಸಂಯೋಜನೆ ಮತ್ತು ಹಲವಾರು ವಿಭಿನ್ನ ಪ್ರಕೃತಿಗಳು ಒಂದೇ ಸಶಕ್ತ ಘಟಕವಾಗಿ ಬೆಸೆದುಕೊಳ್ಳುವುದು ಸಾಮಾನ್ಯವಾದುದಲ್ಲ. ಇನ್ನೂ ಅನೇಕ ಜಟಿಲತೆಗಳಿವೆ. ಜಟಿಲತೆಗಳೇನೇ ಇರಲಿ, ಅನಾದಿಕಾಲದಿಂದಲೂ ಶೋಚನೀಯ ಸ್ಥಿತಿಯಲ್ಲಿರುವ ಪೌರಕಾರ್ಮಿಕರ ಸಮಸ್ಯೆಗಳನ್ನು ಸರಿಯಾಗಿ ನಿಭಾಯಿಸುವ ಕಾರ್ಯವನ್ನು ಮಾಡಲೇಬೇಕಾಗಿದೆ.

ಈ ಜನರಿಗೆ ಸರಿಯಾದ ಸಂಸ್ಕಾರ ಹೇಳಿ ಕೊಡುವುದೇ ಈ ದಿಶೆಯಲ್ಲಿ ಇಡಬೇಕಾದ ಮೊದಲ ಹೆಜ್ಜೆ. ಈ ಜನರ ಏಳಿಗೆಗೆ ಮತ್ತು ಪ್ರಗತಿಗೆ ಸಂಸ್ಕಾರ ಅನಿವಾರ್ಯ. ಸುಸಂಸ್ಕೃತ ಸಮಾಜದಲ್ಲಿ ಈ ಜನರಿಗೆ ಇರಬೇಕಾದ ಸ್ಥಾನಮಾನದ ಬಗ್ಗೆ ಮತ್ತು ಸುಸಂಸ್ಕೃತ ಸಮಾಜದಲ್ಲಿ ಈ ಜನರ ಪಾತ್ರ ಏನು ಎಂಬ ಬಗ್ಗೆ ಅವರಿಗೆ ತಿಳಿವಳಿಕೆ ಕೊಡದಯೇ ಅವರಿಗೆ ಯಾವುದೇ ಬಗೆಯ ಪ್ರಯೋಜನಗಳನ್ನು ಕೊಡುವ ಮಾತಾಡುವುದು ಅರ್ಥಹೀನ. ಸರಿಯಾದ ವಿಧಾನದಲ್ಲಿ ಸಂಸ್ಕಾರ ಹೇಳಿಕೊಡುವುದರಿಂದ ಈ ಕಾರ್ಯವನ್ನು ಸಾಧಿಸಬೇಕಾಗಿದೆ.

ಪುರುಷರಲ್ಲಿ ಹಾಗೂ ಮಹಿಳೆಯರಲ್ಲಿ ನಿಷ್ಕ್ರಿಯವಾಗಿ ಮತ್ತು ಸುಪ್ತವಾಗಿ ಹುದುಗಿರುವ ಸಾಮರ್ಥ್ಯವನ್ನು ಅನಾವರಣಗೊಳಿಸುವುದೇ ಸಂಸ್ಕಾರದ ಪ್ರಕ್ರಿಯೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಜನರಿಗೂ ಕೂಡ ಯೋಗ್ಯ ಹಾಗೂ ಗಮನಾರ್ಹ ಪಾತ್ರವಿದೆಯೆಂಬುದನ್ನು ಈ ಜನರೂ ತಿಳಿದುಕೊಳ್ಳುವಂತೆ ಮಾಡುವುದು ಸಹ ಅವಶ್ಯಕ.

ಸಮಾಜದ ಇನ್ನಿತರರ ಸರಿಸಮಾನ ಮಟ್ಟಕ್ಕೆ ಈ ಜನರು ಬರುವ ಸಲುವಾಗಿ ಅನೇಕ ಶೈಕ್ಷಣಿಕ ರಿಯಾಯಿತಿಗಳನ್ನು ಅವರಿಗೆ ಕೊಟ್ಟಿರುವುದರಲ್ಲಿ ಯಾವ ಸಂಶಯವೂ ಇಲ್ಲ ನಿಜ. ಆದರೆ, ದುರಾದೃಷ್ಟವಶಾತ್, ಈ ರಿಯಾಯಿತಿಗಳಿಂದ ಪೌರಕಾರ್ಮಿಕರಿಗೆ ಹಾಗೂ ಪರಿಶಿಷ್ಟ ಜಾತಿಗಳ ಜನರಿಗೆ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ನಿರ್ಧರಿಸಲು ಕೇಂದ್ರ ಮಟ್ಟದಲ್ಲಾಗಲೀ ಅಥವಾ ರಾಜ್ಯ ಮಟ್ಟದಲ್ಲಾಗಲೀ ಯಾವ ವ್ಯವಸ್ಥೆಯೂ ಇಲ್ಲ. ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅವರಿಗೆ ಯಾವುದೇ ಹೊಸ ಬಗೆಯ ಮಾರ್ಗಗಳ ಅಗತ್ಯ ಇದೆಯೇ ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಅದೇನೆ ಇರಲಿ, ಪೌರ ಬದುಕಿನಲ್ಲಿ ನಿರ್ವಹಿಸಬೇಕಾದ ಪಾತ್ರ ಏನು ಹಾಗೂ ಹೊತ್ತು ಕೊಳ್ಳಬೇಕಾದ ಹೊಣೆಗಾರಿಕೆಗಳು ಯಾವುವು ಎಂಬುದನ್ನು ಸರಿಯಾದ ಸಂಸ್ಕಾರದಿಂದ ಅವರು ತಿಳಿದುಕೊಳ್ಳಲು ಸಾಧ್ಯ ಎಂಬುದನ್ನು ಒಪ್ಪಿಕೊಳ್ಳಲೇಬೇಕು.

ಈ ಗುರಿಗಳನ್ನು ಸಾಧಿಸಲು ಎರಡು ರೀತಿ ನೀತಿಗಳು ಅವಶ್ಯಕ. ಮೊದಲನೆಯದು, ಸವರ್ಣೀಯ ಹಿಂದೂಗಳಿಗೆ ಈ ವಿಷಯದಲ್ಲಿ ಏನೆಲ್ಲಾ ಸುಧಾರಣೆ ತರುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಸವರ್ಣೀಯ ಹಿಂದೂಗಳು ಮಾಡಬೇಕು ಹಾಗೂ ಸರಿಯಾದ ರೀತಿಯಲ್ಲಿ ಈ ಜನರಿಗೆ ಸಂಸ್ಕಾರ ನೀಡಲು ತಮ್ಮ ಮಡಿವಂತಿಕೆಯನ್ನು ಬದಿಗಿಟ್ಟು ಕಾರ್ಯಪ್ರವೃತ್ತರಾಗಬೇಕು. ಈ ವಿಷಯದಲ್ಲಿ ಸವರ್ಣೀಯ ಹಿಂದೂಗಳ ಮನಸ್ಸಿನಲ್ಲಿ ಯಾವ ಇತಿಮಿತಿಗಳು ಇರಕೂಡದು. ಎರಡನೆಯದು, ಪರಿಶಿಷ್ಟ ಜಾತಿಗಳಲ್ಲಿ ಅದೃಷ್ಟವಶಾತ್ ಸುಶಿಕ್ಷಿತರಾಗಿರುವ ಹಾಗೂ ಪ್ರಭಾವ ಬೀರುವ ಸ್ಥಾನಗಳಲ್ಲಿರಬಹುದಾದ ಕೆಲವು ಭಾಗ್ಯವಂತರು ತಮ್ಮವರೇ

ಅಗಿರುವ ಈ ನತದೃಷ್ಟ ಬಾಂಧವರು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಸಂಸ್ಕಾರ ಉಳ್ಳವರಾಗಬೇಕೆಂಬುದನ್ನು ಮನಗಾಣಬೇಕು. ಪರಿಶಿಷ್ಟ ಜಾತಿಗಳ ಇತರ ವರ್ಗಗಳವರಿಗಿಂತಲೂ ತಾವೇ ಮೇಲಿನವರೆಂದು ಪರಿಶಿಷ್ಟ ಜಾತಿಗಳ ಯಾವುದೇ ಇತರ ವರ್ಗದವರು ಇನ್ನು ಮುಂದೆಯೂ ಭಾವಿಸುವುದು ಸದಾಚಾರವೂ ಅಲ್ಲ, ಸಭ್ಯ ನಡವಳಿಕೆಯೂ ಅಲ್ಲ. ಹಲವಾರು ಸ್ಥಳಗಳಲ್ಲಿ ಪರಿಶಿಷ್ಟ ಜಾತಿಗಳ ಜನರೇ ಪೌರಕಾರ್ಮಿಕರನ್ನು ಕಂಡರೇ ಅಸಹ್ಯ ಪಟ್ಟುಕೊಳ್ಳುವುದು ಕಂಡುಬಂದಿದೆ. ಹೀಗಾಗಿ, ಈ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳುವಲ್ಲಿ ಇನ್ನಷ್ಟು ವಿಳಂಬಕ್ಕೆ ಆಸ್ಪದ ಆಗದ ಹಾಗೆ ಈ ಸಮಸ್ಯೆಯನ್ನು ಅವಿರತವಾಗಿ ನಿಭಾಯಿಸಬೇಕಿದೆ.

ಸರ್ಕಾರದಲ್ಲಿರುವ ಹಾಗೂ ಅರೆ–ಸರ್ಕಾರಿ ಸಂಸ್ಥೆಗಳಲ್ಲಿರುವ ಅಧಿಕಾರಸ್ಥರು, ಈ ಪ್ರಕ್ರಿಯೆಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು ತೊಂದರೆಗೊಳಗಾಗದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳಬೇಕು. ಭಾರತ ಸಂವಿಧಾನವು ಪರಿಶಿಷ್ಟ ಜಾತಿಗಳವರಿಗೆ ಹಾಗೂ ಪರಿಶಿಷ್ಟ ಪಂಗಡಗಳವರಿಗೆ ಸರ್ಕಾರಿ ನೌಕರಿಗಳ ಶೇ 18 ರಷ್ಟನ್ನು ಮೀಸಲಿಡಬೇಕೆಂದು ಖಾತ್ರಿಪಡಿಸಿದೆ. ಸವರ್ಣೀಯ ಹಿಂದೂಗಳು ಕೂಡ ಈ ವೃತ್ತಿಗೆ ಬರುವುದಕ್ಕೆ ಸಾಧ್ಯತೆ ಮಾಡಿಕೊಡುವ ಹಾಗೂ ತಕ್ಕಮಟ್ಟಿಗೆ ಸಮಾನತೆ ಕಲ್ಪಿಸುವ ಸಲುವಾಗಿ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಹಾಗೂ ಇತರ ಸ್ಥಳೀಯ ಸಂಸ್ಥೆಗಳಿಗೆ ಸಂವಿಧಾನದ ಈ ಆಜ್ಞಾಪನೆಯು ಅನ್ವಯವಾಗುವಂತೆ ಮಾಡುವುದು ಒಳ್ಳೆಯದು. ಪರಿಶಿಷ್ಟ ಜಾತಿಗಳವರು ಮಾತ್ರವೇ ಈ ವೃತ್ತಿಗೆ ಬರುವಂತೆ ಮಾಡುವುದರ ಬದಲು ಇತರ ಸವರ್ಣೀಯ ಹಿಂದೂಗಳು ಕೂಡ ಈ ವೃತ್ತಿಗೆ ಬರಲು ಹಾಗೂ ಇತರ ಪರಿಶಿಷ್ಟ ಜಾತಿಗಳವರ ಜೊತೆ ಜೊತೆಯಲ್ಲೇ ಕೆಲಸ ಮಾಡುವಂತೆ ಮಾಡುವುದು ಒಳ್ಳೆಯದು. ಕಸಗುಡಿಸುವ ಹಾಗೂ ಜಾಡಮಾಲಿ ವೃತ್ತಿ ಪಿತ್ರಾರ್ಜಿತ ವೃತ್ತಿಯೇನಲ್ಲವೆಂದು ಪೌರಕಾರ್ಮಿಕರು ತಿಳಿದುಕೊಳ್ಳುವುದು ಆವಶ್ಯಕ. ಈ ಜನರೂ ನಮ್ಮವರೇ ಎಂದು ಇನ್ನಿತರರೂ ಭಾವಿಸಬೇಕು. ಯಾವಯಾವ ಉದ್ಯೋಗಗಳು ತಮಗೆ ಬಹುಮಟ್ಟಿಗೆ ಒಗ್ಗುತ್ತವೆಯೋ ಪ್ರತಿಫಲ ಕೊಡುತ್ತವೆಯೋ ಅವುಗಳನ್ನು ಕೈಗೊಳ್ಳಲು ಇನ್ನಿತರರಂತೆ ಈ ಜನರೂ ಕೂಡ ಅಷ್ಟೇ ಸಮರ್ಥರಾಗಿರುವರೋ ಹಾಗೂ ಅಷ್ಟೇ ದಕ್ಷರಾಗಿರುವರೋ ಅಂತಹ ಉದ್ಯೋಗಗಳು ಇವೆಯೆಂಬುದನ್ನು ಈ ಜನರು ತಿಳಿದುಕೊಳ್ಳುವಂತೆ ಮಾಡುವುದೂ ಈ ಪ್ರಕ್ರಿಯೆಯಲ್ಲಿ ಸಾಧ್ಯವಿದೆ.

ಪೌರಕಾರ್ಮಿಕರಲ್ಲಿ ರಾಜ್ಯಾಡಳಿತದ ಬಗ್ಗೆ ಜಾಗೃತಿಯನ್ನು ಮೂಡಿಸುವುದು ಸುಧಾರಣಾ ಕಾರ್ಯಕ್ರಮದಲ್ಲಿ ಇನ್ನೊಂದು ಪ್ರಮುಖ ವಿಚಾರ. ಏಕೆಂದರೆ, ರಾಜಕೀಯ ಅಧಿಕಾರ ಇಲ್ಲದಿದ್ದರೆ ಯಾವ ಸಾಮಾಜಿಕ ಶಾಸನವನ್ನು ತರಲಾಗುವುದಿಲ್ಲ. ರಾಜಕೀಯ ಅಧಿಕಾರದ ಬೀಗದ ಗೊಂಚಲುಗಳು ಯಾವಾಗಲೂ ರಾಜಕಾರಣಿಗಳ ಬಳಿಯೇ ಇರುತ್ತವೆ.

ಪ್ರಜಾಪ್ರಭುತ್ವದಲ್ಲಿ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸರ್ವಾಂಗೀಣ ಸುಧಾರಣೆಗಳನ್ನು ತರಲು ರಾಜಕೀಯ ಅಧಿಕಾರ ಆವಶ್ಯಕ. ಆದ್ದರಿಂದ, ಪೌರಕಾರ್ಮಿಕರ ಹಿತಾಸಕ್ತಿಗಳು ಎಲ್ಲ ಸ್ತರಗಳಲ್ಲಿ ಎಂದರೆ, ರಾಜ್ಯ ಶಾಸನ ಸಭೆಯಲ್ಲಿ, ಸಂಸತ್ತಿನಲ್ಲಿ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ವ್ಯಕ್ತವಾಗುವುದು ಆವಶ್ಯಕ. ಶಾಸಕಾಂಗಗಳ ಬಗ್ಗೆ ಹೇಳುವುದಾದರೆ ಪೌರಕಾರ್ಮಿಕರಿಗಾಗಿ ಕೆಲವೊಂದು ಕೋಟಾ ಮೀಸಲಿಡಬೇಕು. ಅವಶ್ಯಕತೆ ಕಂಡುಬಂದರೆ ಪೌರಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳಿಗೆ ಹಾಗೂ ರಾಜ್ಯ ವಿಧಾನಮಂಡಲಗಳ ಮೇಲ್ಮನೆಗೆ ಮತ್ತು ಸಂಸತ್ತಿನ ಮೇಲ್ಮನೆಗೆ ನಾಮಕರಣ ಮಾಡಬೇಕು.

ಪೌರಕಾರ್ಮಿಕರು ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಸ್ತರದಲ್ಲಿರುವುದರಿಂದ ಅವರ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ಸಲುವಾಗಿ ವ್ಯಾಪಕ ಮತ್ತು ಪರಿಣಾಮಕಾರಿ ಕ್ರಮಗಳನ್ನು ತರುವ ಸಲುವಾಗಿ ಪ್ರತಿಯೊಂದು ಪ್ರಯತ್ನಗಳನ್ನು ಮಾಡುವುದು ಆವಶ್ಯಕ. ಪಟ್ಟಭದ್ರ ಹಿತಾಸಕ್ತಿಗಳನ್ನುಳ್ಳವರಿಂದ ಈ ಪೌರಕಾರ್ಮಿಕರ ಶೋಷಣೆಯನ್ನು ಕೂಡಲೇ ನಿಲ್ಲಿಸಬೇಕು.

ಕ್ರಿಶ್ಚಿಯನ್ನರು, ಮುಸ್ಲಿಮರು ಹಾಗೂ ಇತರ ಪರಿಶಿಷ್ಟೇತರ ಪ್ರವರ್ಗಗಳವರೂ ಸಹ ಈ ವೃತ್ತಿಗೆ ಬಂದಿದ್ದಾರೆ ನಿಜ ಅನುಮಾನವೇ ಇಲ್ಲ. ಆದರೆ, ಅವರ ಶೇಕಡಾ ಪ್ರಮಾಣ ನೂರಕ್ಕೆ ಮೂರು ಅಥವಾ ನಾಲ್ಕಕ್ಕಷ್ಟೇ ಸೀಮಿತವಾಗಿದೆ. ಹೀಗಾಗಿ ಇನ್ನುಳಿದ ಶೇ.97ರಷ್ಟು ಜನರ ಸ್ಥಿತಿಗತಿಗಳಲ್ಲಿ ಸುಧಾರಣೆ

ತರಬೇಕೆನ್ನುವುದೇ ಹಾಗೂ ಅವರ ಬದುಕಿನ ಮಟ್ಟವನ್ನು ಹೇಳಿಕೊಳ್ಳುವಷ್ಟು ತಕ್ಕಮಟ್ಟಕ್ಕೆ ಹೆಚ್ಚಿಸುವುದೇ ಸಮಿತಿಯ ಕಳಕಳಿಯಾಗಿದೆ.

ಕರ್ನಾಟಕ ಸರ್ಕಾರವು, ಸರ್ಕಾರಿ ಆದೇಶ ಸಂ: ಹೆಚ್ಎಂಎ 152 ಜಿಜಿಎಲ್ 72 ತಾರೀಖು 23–09–1972 ರಲ್ಲಿ ರಾಜ್ಯದಲ್ಲಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಅಧ್ಯಯನ ಮಾಡುವ ಸಲುವಾಗಿ ಹೆಸರಾಂತ ಶ್ರದ್ಧಾವಂತ ಕಾರ್ಮಿಕ ನಾಯಕರಾದ ಶ್ರೀ. ಐ.ಪಿ.ಡಿ ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಿತು. ಸಮಿತಿಯಲ್ಲಿ ಈ ಮುಂದೆ ಹೇಳಿರುವ ಮಹನೀಯರುಗಳಿದ್ದರು:

**ಅಧ್ಯಕ್ಷರು:**

| | |
|---|---|
| 1. ಶ್ರೀ ಐ.ಪಿ.ಡಿ. ಸಾಲಪ್ಪ | ಬೆಂಗಳೂರು |

**ಸದಸ್ಯರು:**

| | |
|---|---|
| 2. ಶ್ರೀಮತಿ ಲಕ್ಷ್ಮಿ ಸುಬ್ಬರಾವ್ | ಬೆಂಗಳೂರು |
| 3. ಶ್ರೀ. ಪಿ.ಎನ್. ರಾಮಚಂದ್ರ | ಬೆಂಗಳೂರು |
| 4. ಶ್ರೀ. ಎಸ್.ಸಿ. ವೆಂಕಟೇಶ್ | ಬೆಂಗಳೂರು |
| 5. ಶ್ರೀ ಎಂ. ರಘುಪತಿ | ಬೆಂಗಳೂರು |
| 6. ಶ್ರೀ ಎ.ಕೆ.ಅನಂತಕೃಷ್ಣ | ಬೆಂಗಳೂರು |
| 7. ಶ್ರೀ ಟಿ.ಆರ್. ಶಾಮಣ್ಣ ಎಂ.ಎಲ್.ಎ | ಬೆಂಗಳೂರು |
| 8. ಶ್ರೀ ಕೆ. ಶ್ರೀರಾಮು ಎಂ.ಎಲ್.ಎ | ಬೆಂಗಳೂರು |
| 9. ಶ್ರೀ ಪಿ.ಡಿ. ಬಂಗೇರ | ಬೆಂಗಳೂರು |
| 10. ಶ್ರೀ ಸತ್ಯನಾರಾಯಣ ಸಿಂಗ್ ಎಂ.ಎಲ್.ಎ | ಬೆಂಗಳೂರು |
| 11. ಶ್ರೀ ಕೋಣಂದೂರು ಲಿಂಗಪ್ಪ ಎಂ.ಎಲ್.ಎ | ಬೆಂಗಳೂರು |
| 12. ಶ್ರೀ ಎಸ್.ಎ. ಮುಲ್ಲಾ | ಧಾರವಾಡ |
| 13. ಶ್ರೀ ಜಿ.ಪಿ. ಗಂಜಿಗಟ್ಟಿ | ಬೆಂಗಳೂರು |

ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ಶ್ರೀ ಎಸ್.ಎ. ಮುಲ್ಲಾರವರು ನಿಧನರಾದುದು ಸಮಿತಿಗೆ ತುಂಬಲಾರದ ನಷ್ಟ ಹಾಗೂ ದುಃಖದ ಸಂಗತಿ. ಅವರ ನಿಧನಕ್ಕೆ ಸಮಿತಿಯು ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ. ಅವರೊಬ್ಬ ಪ್ರಾಮಾಣಿಕ ಹಾಗೂ ಶ್ರದ್ಧಾವಂತ ಕಾರ್ಯಕರ್ತರು. ಅವರ ಸಲಹೆ ಸೂಚನೆಗಳು ಬಹು ಅಮೂಲ್ಯವಾದವುಗಳು ಹಾಗೂ ಬೆಲೆ ಕಟ್ಟಲಾಗದಂಥವುಗಳು.

ಸಮಿತಿಯ ಸದಸ್ಯರುಗಳಾದ ಶ್ರೀ ಎ.ಕೆ. ಅನಂತಕೃಷ್ಣ ಮತ್ತು ಶ್ರೀ ಕೆ.ಶ್ರೀರಾಮುಲು ಈ ಇಬ್ಬರೂ ಈ ಸಮಿತಿಗೆ ಅವರ ನಾಮಕರಣವಾದ ನಂತರದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿದರು. ಶ್ರೀ ಎ.ಕೆಅನಂತ ಕೃಷ್ಣರವರು ಬೆಂಗಳೂರು ನಗರ ಕಾರ್ಪೋರೇಷನ್ನಿನ ಮೇಯರ್ ರಾಗಿ ಆಯ್ಕೆಯಾದರು. ಮೇಯರ್ ಸ್ಥಾನದಲ್ಲಿ ಅವರು ಬೆಂಗಳೂರಿನ ಪ್ರಥಮ ಪ್ರಜೆಯಾಗಿ ಪ್ರಾಮಾಣಿಕವಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ. ಸಮಿತಿಯ ಸದಸ್ಯರಾಗಿದ್ದಾಗಲೂ ಶ್ರೀಯುತರು ಸ್ಮರಣೀಯ ಸೇವೆ ಸಲ್ಲಿಸಿದ್ದಾರೆ.

ಎಂ.ಎಲ್.ಎ ಶ್ರೀ ಕೆ.ಶ್ರೀರಾಮುಲುರವರು ಕಾರ್ಮಿಕ ಖಾತೆ ರಾಜ್ಯ ಮಂತ್ರಿ ಸ್ಥಾನಕ್ಕೇರಿದ್ದಕ್ಕೆ ಸಮಿತಿಗೆ ತುಂಬಾನೆ ಸಂತೋಷವಾಗಿದೆ. ಶ್ರೀಯುತರು ಹೆಸರಾಂತ ನಿಷ್ಠಾವಂತ ಟ್ರೇಡ್ ಯೂನಿಯನಿಸ್ಟ್, ರಾಜ್ಯದಲ್ಲಿರುವ ದುಡಿಮೆ ವರ್ಗದವರ ಸ್ಥಿತಿಗಳಲ್ಲಿ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಸಮಿತಿಯ ಸದಸ್ಯರಾಗಿದ್ದಾಗಲೂ ರಾಜ್ಯದಲ್ಲಿರುವ ಸ್ವೀಪರುಗಳು ಹಾಗೂ ಸ್ಕ್ಯಾವೆಂಜರುಗಳ

ಕ್ಷೇಮಾಭಿವೃದ್ಧಿಗೆ ಸಂಬಂಧ ಪಡುವ ಹಲವಾರು ವಿಷಯಗಳ ಮೇಲೆ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಸನ್ಮಾನ್ಯ ಕಾನೂನು ಮತ್ತು ಪೌರಾಡಳಿತ ಮಂತ್ರಿ ಶ್ರೀ ಡಿ.ಕೆ.ನಾಯ್ಕರ್‌ರವರು ಸಮಿತಿಗೆ ಉದಾರ ಮನಸ್ಸಿನಿಂದ ನೆರವಾಗಿದ್ದನ್ನು ಹಾಗೂ ಉತ್ತೇಜನ ನೀಡಿದ್ದನ್ನು ಸಮಿತಿಯು ಸ್ಮರಿಸಿ ಕೃತಜ್ಞತೆ ಸಲ್ಲಿಸದಿದ್ದರೆ ಸಮಿತಿಯು ತನ್ನ ಕರ್ತವ್ಯದಲ್ಲಿ ಲೋಪ ಮಾಡಿದಂತೆಯೇ. ಸನ್ಮಾನ್ಯ ಮಂತ್ರಿಯವರಿಗೆ ಸಮಿತಿಯು ಸದಾ ಆಭಾರಿಯಾಗಿರುತ್ತದೆ.

# ಅಧ್ಯಾಯ II

## ಸಮಿತಿಯ ಕಾರ್ಯವ್ಯಾಪ್ತಿ ಹಾಗೂ ಸಮಿತಿಗೆ ವಹಿಸಿರುವ ಕಾರ್ಯಗಳು

ಸಮಿತಿಗೆ ವಹಿಸಿರುವ ಪರಿಶೀಲನಾಂಶಗಳನ್ನು ಸರ್ಕಾರದ ಆದೇಶದಲ್ಲಿ ವಿವರಿಸಲಾಗಿದೆ. (ಲಗತ್ತಿಸಿದೆ: ಭಾಗ ಮೂರನ್ನು ನೋಡಿ). ಅದರಲ್ಲಿ ಸಮಿತಿಯು, ಮುನಿಸಿಪಾಲಿಟಿಗಳಲ್ಲಿ, ಟೌನ್ ಪಂಚಾಯತ್‌ಗಳಲ್ಲಿ ಹಾಗೂ ಇತರ ಸ್ಥಳಗಳಲ್ಲಿ ನಿಯೋಜಿತರಾಗಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳನ್ನು ತನಿಖೆ ಮಾಡಬೇಕು ಎಂದು ಹಾಗೂ ಆ ಜನರ ಉನ್ನತಿಗೆ ಸರ್ಕಾರವು ಏನೆಲ್ಲ ವಿಶೇಷ ನಿಬಂಧನೆಗಳನ್ನು ಕಲ್ಪಿಸಬಹುದೋ ಆ ನಿಬಂಧನೆಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಬೇಕು ಎಂದು ನಿರ್ದಿಷ್ಟವಾಗಿ ಹೇಳಲಾಗಿದೆ. ಅಲ್ಲದೆ, ಸಮಿತಿಯು ಆ ಜನರ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಿತಿಗಳನ್ನು ತನಿಖೆ ಮಾಡಬೇಕೆಂದು ಆ ಕ್ಷೇತ್ರಗಳಲ್ಲಿ ಈ ಜನರು ಹೆಚ್ಚು ಹೆಚ್ಚು ಬೆಳವಣಿಗೆಯಾಗುವ ಬಗ್ಗೆಯೂ ಶಿಫಾರಸುಗಳನ್ನು ಮಾಡಬೇಕೆಂದು ಸಹ ಸರ್ಕಾರದ ಆದೇಶದಲ್ಲಿ ನಿರ್ದಿಷ್ಟಪಡಿಸಲಾಗಿದೆ. ಅಷ್ಟೇ ಅಲ್ಲ, ಸಂಸತ್ತಿನ ಅಂದಾಜುಗಳ ಸಮಿತಿಯು ಮಾಡಿರುವ ಶಿಫಾರಸುಗಳನ್ನು ಈ ಸಮಿತಿಯು ಪರಿಶೀಲಿಸಬೇಕೆಂದು ಮತ್ತು ತಲೆ ಮೇಲೆ ಮಲವನ್ನು ಹೊತ್ತು ಒಯ್ಯುವ ಅಥವಾ ದೈಹಿಕ ಶ್ರಮದಿಂದ ಸಾಗಿಸುವ ಅನಾರೋಗ್ಯಕರ ಹಾಗೂ ಅಮಾನವೀಯ ಪದ್ಧತಿಯನ್ನು ಕ್ರಮೇಣ ತೊಲಗಿಸುವ ಬಗ್ಗೆ ಶಿಫಾರಸುಗಳನ್ನು ಮಾಡಬೇಕೆಂದು ಸಹ ಸರ್ಕಾರಿ ಆದೇಶದಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಸಂಸತ್ತಿನ ಅಂದಾಜು ಸಮಿತಿಯು ತನ್ನ 48ನೆಯ ವರದಿಯಲ್ಲಿ ಮಾಡಿರುವ ಶಿಫಾರಸುಗಳನ್ನು ಸಮಿತಿಯು ಪರಿಶೀಲಿಸಬೇಕೆಂದು ಹಾಗೂ ತಲೆ ಮೇಲೆ ಮಲ ಹೊತ್ತು ಸಾಗಿಸುವ ಅಥವಾ ಕೈಯಿಂದ ಬಳಿದು ಸಾಗಿಸುವ ಅಮಾನವೀಯ ಹಾಗೂ ಅನಾರೋಗ್ಯಕಾರಕ ಪದ್ಧತಿಯನ್ನು ಕ್ರಮೇಣ ತೊಲಗಿಸುವ ಸಲುವಾಗಿ ಶಿಫಾರಸುಗಳನ್ನು ಮಾಡಲು ಸಹ ಸರ್ಕಾರಿ ಆದೇಶದಲ್ಲಿ ನಿರ್ದಿಷ್ಟಪಿಸಲಾಗಿದೆ.

1973ರ ಮಾರ್ಚ್ 3 ರಂದು ಬೆಂಗಳೂರಿನಲ್ಲಿ ನಡೆದ ಸಮತಿಯ ಸಭೆಯಲ್ಲಿ, ಸಮಿತಿಯು, ಸರ್ಕಾರದ ಆದೇಶದಲ್ಲಿ ಗೊತ್ತುಪಡಿಸಿರುವ ಪರಿಶೀಲನಾಂಶಗಳ ಹಿನ್ನೆಲೆಯಲ್ಲಿ ಸಮರ್ಪಕ ಗುರಿಗಳನ್ನು ರೂಪಿಸುವ ವಿಷಯವನ್ನು ಪರಿಶೀಲಿಸುವುದಷ್ಟೇ ಅಲ್ಲ, ಸಮಿತಿಯು ರಾಜ್ಯದಲ್ಲಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳ ಸವಿವರ ಹಾಗೂ ವ್ಯಾಪಕ ಸಮೀಕ್ಷೆ ಮಾಡಬೇಕೆಂದು ಸಹ ನಿರ್ಧರಿಸಿತು. ಸಮಿತಿಯು, ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ಹಾಗೂ ಈ ಜನರ ಆರೋಗ್ಯಕ್ಕಾಗಿ ಹಾಗೂ ಶಿಕ್ಷಣಕ್ಕಾಗಿ ಒಳ್ಳೆಯ ಗುಣಮಟ್ಟಗಳನ್ನು ಗೊತ್ತುಪಡಿಸುವ ವಿಷಯವನ್ನು ಸಹ ಪರಿಶೀಲಿಸಿತು.

ಸಮಿತಿಯು ತನ್ನ ಕಾರ್ಯದಲ್ಲಿ ತೊಡಗಿದ್ದಾಗ, ಮಲವನ್ನು ತಲೆ ಮೇಲೆ ಹೊತ್ತು ಒಯ್ಯುವ ಅಥವಾ ದೈಹಿಕ ಶ್ರಮದಿಂದ ಸಾಗಿಸುವ ಪದ್ಧತಿಯನ್ನು ರದ್ದು ಮಾಡಲು ಸರ್ಕಾರವು ಕ್ರಮಗಳನ್ನು ಕೈಗೊಂಡಿತು. (ಸರ್ಕಾರದ ಆದೇಶವನ್ನು ಲಗತ್ತಿಸಿದೆ: ಭಾಗ ಮೂರನ್ನು ನೋಡಿ). ಹೀಗಾಗಿ ಸಮಿತಿಯು, ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಕಾಯಕದ ಮತ್ತು ಸೇವೆಯ ಸ್ಥಿತಿಗಳನ್ನು ಹಾಗೂ ಈ ಜನರ ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ತನಿಖೆ ಮಾಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿತು.

ಸಮಿತಿಯು, ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗಳಿಗೆ ಸಂಬಂಧಿಸಿದ ಎಲ್ಲ ವಾಸ್ತವಾಂಶಗಳನ್ನು ಮತ್ತು ಸುಸಂಗತ ವಿವರಗಳನ್ನು ಒಳಗೊಂಡಿರುವ ಸವಿವರ ಪ್ರಶ್ನಾವಳಿಯೊಂದನ್ನು ರೂಪಿಸಿತು. (ಲಗತ್ತಿಸಿದೆ–ಭಾಗ ಐದನ್ನು ನೋಡಿ). ಸ್ಥಳೀಯ ಸಂಸ್ಥೆಗಳು ಏನೆಲ್ಲ ಮಾಹಿತಿಯನ್ನು ಒದಗಿಸಿವೆಯೋ ಅವೆಲ್ಲವನ್ನೂ ಸಮಿತಿಯ ಸದಸ್ಯರು ಅವುಗಳಿರುವ ಸ್ಥಳಕ್ಕೆ ಹೋಗಿ ಅಲ್ಲೇ ವಸ್ತು ನಿಷ್ಠೆ ಪರಿಶೀಲನೆ ಮಾಡಬೇಕೆಂದು ಸಮಿತಿಯು ತೀರ್ಮಾನಿಸಿತು. ಅದರಂತೆ, ರಾಜ್ಯದಲ್ಲಿರುವ ಸ್ಥಳೀಯ

ಸಂಸ್ಥೆಗಳಿಗೆ ಸಮಿತಿಯು ಭೇಟಿ ನೀಡಬೇಕೆಂದು ಮತ್ತು ಅವುಗಳ ಕಾರ್ಯಾಲಯದಲ್ಲೇ ತನಿಖೆ ಮಾಡಬೇಕೆಂದು ಸಮಿತಿಯು ನಿರ್ಧರಿಸಿತು. ಸ್ವೀಪರುಗಳಿಗೆ ಮತ್ತು ಸ್ಕ್ಯಾವೆಂಜರುಗಳಿಗೆ ಅವರ ಬದುಕಿನ ಮತ್ತು ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರಲು ಚೆನ್ನಾಗಿ ಆಲೋಚಿಸಿ ಈ ಜನರಿಗೆ ಒದಗಿಸಬೇಕೆಂದು ಕೊಂಡ ಹೊಸ ಪರಿಸರದ ಬಗ್ಗೆ ಹಾಗೂ ತಿಳಿಸಬೇಕೆಂದುಕೊಂಡ ಹೊಸ ವಿದ್ಯಮಾನಗಳ ಬಗ್ಗೆ ತಿಳಿವಳಿಕೆ ಕೊಡಬೇಕೆಂದು ಸಹ ಸಮಿತಿ ನಿರ್ಧರಿಸಿತು. ಅಷ್ಟೇ ಅಲ್ಲ, ಸ್ವೀಪರುಗಳಿಗೆ ಮತ್ತು ಸ್ಕ್ಯಾವೆಂಜರುಗಳಿಗೆ ಸಂಬಂಧಪಡುವ ಹಲವಾರು ಆಡಳಿತಾತ್ಮಕ ವಿಷಯಗಳ ಬಗ್ಗೆ ಸ್ಥಳೀಯ ಅಧಿಕಾರಿಗಳೊಂದಿಗೆ ಅವರಿರುವ ಸ್ಥಳದಲ್ಲೇ ಚರ್ಚಿಸಲು ಸಮಿತಿಯು ನಿರ್ಣಯಿಸಿತು. ಅಲ್ಲದೆ, ಸಾರ್ವಜನಿಕ ಸಂಘ ಸಂಸ್ಥೆಗಳಿಂದ, ಸೇವಾ ಸಂಘ ಸಂಸ್ಥೆಗಳಿಂದ, ಸಾರ್ವಜನಿಕರಿಂದ ಹಾಗೂ ಶಾಸಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲೂ ಸಹ ಸಮಿತಿಯು ನಿರ್ಧರಿಸಿತು. ಈ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಸಮಿತಿಯು ಕಾಲಕಾಲಕ್ಕೆ ಕಾರ್ಯ ವೇಳಾಪಟ್ಟಿಯನ್ನು ರೂಪಿಸಿಕೊಂಡಿತ್ತು ಹಾಗೂ ತನ್ನ ಕಾರ್ಯದಲ್ಲಿ ಯಶಸ್ವಿಯಾಗಿ ತೊಡಗಿತು.

# ಅಧ್ಯಾಯ III

## ಕಾರ್ಯಾರಂಭ

ಈ ಸಮಿತಿಯನ್ನು 1972ರ ಸೆಪ್ಟೆಂಬರ್ 23 ರಂದು ನೇಮಕ ಮಾಡಿದ್ದರೂ, ಸನ್ಮಾನ್ಯ ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಈ ಸಮಿತಿಯನ್ನು 1973ರ ಫೆಬ್ರವರಿ 22 ರಂದು ಅಧಿಕೃತವಾಗಿ ಉದ್ಘಾಟಿಸಿದ್ದರೂ, ಬೆಂಗಳೂರಿನಲ್ಲಿ 1973ರ ಮಾರ್ಚ್ 3 ರಂದು ಸಮಿತಿಯ ಮೊದಲನೆಯ ಸಭೆಯು ನಡೆದಿತ್ತಾದರೂ ಈ ಮುಂದೆ ಹೇಳಿರುವ ಹಲವಾರು ಕಾರಣಗಳಿಂದಾಗಿ ಸಮಿತಿಯು ವಾಸ್ತವಿಕವಾಗಿ 1974ರ ಜನವರಿ ತನಕ ಕಾರ್ಯ ಪ್ರವೃತ್ತವಾಗಿರಲಿಲ್ಲ.

ಕಾರ್ಯದರ್ಶಿಯವರ ನೇಮಕ ಆಗಿರಲಿಲ್ಲ. ಈ ಸ್ಥಾನಕ್ಕೆ ನೇಮಕ ಮಾಡಲು ಯಾರ್ಯಾರನ್ನು ಶಿಫಾರಸು ಮಾಡಲಾಗಿತ್ತೋ ಅವರು ಯಾರೂ ನೇಮಕದ ಪ್ರಸ್ತಾಪವನ್ನು ಒಪ್ಪಿಕೊಳ್ಳಲಿಲ್ಲ. ಕಾರ್ಯದರ್ಶಿಯವರ ನೇಮಕ ಆಗಿಲ್ಲದಿರುವುದರಿಂದ ಸಮಿತಿಯ ಕಾರ್ಯ ನಿಂತುಹೋಗಿದೆಯೆಂದು ಅಧ್ಯಕ್ಷರು ಸರ್ಕಾರಕ್ಕೆ ಪದೇಪದೇ ಮನವಿ ಮಾಡಿಕೊಂಡಿದ್ದರು. ಆ ನಂತರ ಕಾರ್ಯದರ್ಶಿ ಸ್ಥಾನಕ್ಕೆ ನಿವೃತ್ತ ಅಧಿಕಾರಿಯೊಬ್ಬರ ಸೇವೆಯನ್ನು ಸರ್ಕಾರವು ಸಮಿತಿಗೆ ಒದಗಿಸಿತು. ಅವರು 1973ರ ಮೇ ತಿಂಗಳಲ್ಲಿ ಅಧಿಕಾರ ವಹಿಸಿಕೊಂಡರು. ಆದರೆ, ಅವರು 1973ರ ಅಕ್ಟೋಬರ್ ತಿಂಗಳಲ್ಲಿ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಇತ್ತರು. ತದನಂತರ ಸರ್ಕಾರವು ಒಬ್ಬರು ಅಧಿಕಾರಿಯನ್ನು 1973ರ ನೆಂಬರ್‌ನಲ್ಲಿ ಸಮಿತಿಯ ಕಾರ್ಯದರ್ಶಿಯನ್ನಾಗಿ ನಿಯುಕ್ತಿ ಮಾಡಿತು. ಆದರೆ, ಅವರೂ ಕೂಡ 1974ರ ಡಿಸೆಂಬರ್‌ನಲ್ಲಿ ವರ್ಗಾವಣೆಯಾಗಿ ಹೋದರು.

ಕಾರ್ಯದರ್ಶಿಯವರು ನೇಮಕ ಆದ ನಂತರವೇ ಸಿಬ್ಬಂದಿ ನೇಮಕ, ಸ್ಥಳಾವಕಾಶ, ಬಜೆಟ್ ಮುಂತಾದ ವಿಧಿವಿಧಾನಗಳು ಆಗಬೇಕಾಗುತ್ತದೆ. ಆದರೆ, ಇತರ ಇಲಾಖೆಗಳಿಂದ ಸಿಬ್ಬಂದಿಯನ್ನು ನಿಯೋಜಿಸದಿದ್ದುದರಿಂದ ಸ್ಥಳೀಯವಾಗಿ ಲಭ್ಯವಿರುವ ಅಭ್ಯರ್ಥಿಗಳನ್ನು ತನ್ನ ಸಿಬ್ಬಂದಿಯಾಗಿ ನೇಮಕ ಮಾಡಿಕೊಳ್ಳುವಂತೆ ಸಮಿತಿಗೆ ಅನುಮತಿ ಕೊಡಲಾಯಿತು. ಒಬ್ಬರು ಕಾರ್ಯದರ್ಶಿ, ಅಧ್ಯಕ್ಷರ ಆಪ್ತ ಸಹಾಯಕ ಒಬ್ಬರು, ದ್ವಿತೀಯ ದರ್ಜೆ ಸಹಾಯಕ ಒಬ್ಬರು, ದ್ವಿತೀಯ ದರ್ಜೆ ಬೆರಳಚ್ಚುಗಾರ ಒಬ್ಬರು, ಇಬ್ಬರು ಜವಾನರು ಹಾಗೂ ಒಬ್ಬರು ವಾಹನ ಚಾಲಕ–ಇದು ಸಮಿತಿಗೆ ನಿಗದಿ ಮಾಡಿದ್ದ ಸಿಬ್ಬಂದಿ ವರ್ಗ. ಸಮಿತಿಯು ನಿರ್ವಹಣೆ ಮಾಡಬೇಕಿದ್ದ ಅಗಾಧ ಕಾರ್ಯಬಾಹುಳ್ಯಕ್ಕೆ ಈ ಸಿಬ್ಬಂದಿ ಏನೇನೂ ಸಾಲದು ಎಂಬುದನ್ನು ಗಮನಿಸಬಹುದು. ಆದರೂ, ಈ ಸೀಮಿತ ಸಿಬ್ಬಂದಿಯೇ, ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ತಮ್ಮ ಶಕ್ತಿ ಮೀರಿ ಕಾರ್ಯನಿರ್ವಹಿಸಿರುವುದು ಹಾಗೂ ತಮ್ಮ ಕಾರ್ಯನಿರ್ವಹಣೆಯಲ್ಲಿ ಅನೇಕ ಅಡೆತಡೆಗಳು ಎದುರಾಗಿದ್ದರೂ ಎಲ್ಲ ಸಿಬ್ಬಂದಿ ಶ್ರದ್ಧೆಯಿಂದ ಕೆಲಸ ಮಾಡಿರುವುದು ಶ್ಲಾಘನೀಯ ಸಂಗತಿ. ಬಜೆಟ್ ಅನುದಾನ ಬಂದಿರದಿದ್ದ ಪ್ರಯುಕ್ತ ಸಂಬಳ ಇಲ್ಲದಿದ್ದರೂ ಈ ಸಿಬ್ಬಂದಿ ಸುಮಾರು ಐದು ತಿಂಗಳು ಕೆಲಸ ಮಾಡಿದ್ದಾರೆ.

ಸಮಿತಿಯ ಕಾರ್ಯಾಲಯಕ್ಕೆ ಜಾಗವೇ ಇರಲಿಲ್ಲ. ಸಿಬ್ಬಂದಿಗೆ ಸ್ಥಳದಿಂದ ಸ್ಥಳಕ್ಕೆ ಸುತ್ತುವ ಪರಿಸ್ಥಿತಿ ಇತ್ತು. ಪದೇಪದೇ ಮನವಿ ಮಾಡಿಕೊಂಡ ಪರಿಣಾಮವಾಗಿ 1973ರ ಜೂನ್‌ನಲ್ಲಿ ಇಡೀ ಸಿಬ್ಬಂದಿಗೆ ಸಾಲದಂತಹ ಒಂದು ಸಣ್ಣ ಜಾಗವನ್ನು ಒದಗಿಸಲಾಯಿತು. ಸಮಿತಿಗೆ ಸಾಧನ ಸಲಕರಣೆಗಳನ್ನು, ಪೀಠೋಪಕರಣಗಳನ್ನು ಒದಗಿಸಿರಲಿಲ್ಲ. ಕಾರ್ಯಾಲಯಕ್ಕೆ ತುರ್ತಾಗಿ ಬೇಕಾಗಿದ್ದ ಪೀಠೋಪಕರಣಗಳನ್ನು ಖಾಸಗಿ ಏಜೆನ್ಸಿಗಳಿಂದ ಬಾಡಿಗೆಗೆ ಪಡೆದುಕೊಳ್ಳಲಾಗಿತ್ತು.

1973 ರ ಜೂನ್ ತನಕವೂ, ಸರ್ಕಾರವು ಸಮಿತಿಯ ದೈನಂದಿನ ಕಾರ್ಯನಿರ್ವಹಣೆಗಾಗಿ ಸಮಿತಿಗೆ ಹಣಕಾಸು ಅನುದಾನ ಒದಗಿಸಿರಲಿಲ್ಲ. ಬಹಳಷ್ಟು ಪತ್ರ ವ್ಯವಹಾರಗಳಾದ ಮೇಲೆ ಹಾಗೂ ಖುದ್ದು ಮನವಿ ಮೇಲೆ ಸಾಂಕೇತಿಕ ಬಜೆಟ್ ಮಂಜೂರಾಯಿತು. ಈ ಎಲ್ಲ ಸಂಗತಿಗಳಿಂದಾಗಿ ಸಮಿತಿಯ ಕೆಲಸ ಸುಮಾರು ಆರು ತಿಂಗಳವರೆಗೆ ನಿಂತು ಹೋಗಿತ್ತು.

ಬಜೆಟ್ ಮಂಜೂರಾದ ನಂತರ ಸಮಿತಿಯು ತನ್ನ ಕಾರ್ಯವನ್ನು ಪ್ರಾರಂಭಿಸಿತು. ಸಮಿತಿಯ ಎರಡನೆಯ ಸಭೆ ಬೆಂಗಳೂರಿನಲ್ಲಿ 1973 ರ ಜುಲೈ 10 ರಂದು ನಡೆಯಿತು. ತಲೆ ಮೇಲೆ ಮಲ ಹೊತ್ತು ಒಯ್ಯುವ ಅಮಾನವೀಯ ಹಾಗೂ ಅನಾರೋಗ್ಯಕರ ಪದ್ಧತಿಯನ್ನು ಕ್ರಮೇಣ ತೊಲಗಿಸುವ ವಿಷಯವನ್ನು ಚರ್ಚಿಸಿತು. ಈ ವಿಷಯವನ್ನು ಪರಿಶೀಲಿಸಲು ಹಾಗೂ ಶಿಫಾರಸುಗಳನ್ನು ಮಾಡಲು ಶ್ರೀ ಐ.ಪಿ.ಡಿ.ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಜಿ.ಪಿ.ಗಂಜಿಗಟ್ಟಿ ಮತ್ತು ಶ್ರೀ ಎ.ಕೆ.ಅನಂತಕೃಷ್ಣ ಇವರುಗಳನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಕ ಮಾಡಲಾಯಿತು.

ಈ ಉಪಸಮಿತಿಯು 1973ರ ಜುಲೈ 16 ರಂದು ತನ್ನ ಮೊದಲ ಸಭೆಯನ್ನು ನಡೆಸಿತು. ಆ ಸಭೆಯಲ್ಲಿ ಉಪ ಸಮಿತಿಯು ಆನೇಕಲ್, ಹೊಸಕೋಟೆ ಮಾಗಡಿ ಮತ್ತು ರಾಮನಗರಕ್ಕೆ ಆ ಸ್ಥಳಗಲ್ಲಿ ಚಾಲ್ತಿಯಲ್ಲಿರುವ ಜಾಡಮಾಲಿ ವಿಧಾನವನ್ನು ಅಧ್ಯಯನ ಮಾಡಲು ಭೇಟಿ ನೀಡಬೇಕೆಂದು ನಿರ್ಧರಿಸಿತು. ಹಾಗೆಯೇ ಹೊಸ ಬಗೆಯ ಶೌಚಾಲಯಗಳನ್ನು ರೂಪಿಸಿರುವ, ಗಾಂಧಿಯನ್ ಸಂಘಟನೆಯಾದ ವಿಶ್ವನೀಡಂಗೆ ಭೇಟಿ ನೀಡಲೂ ನಿರ್ಧರಿಸಿತು. ಅದರಂತೆ ಉಪಸಮಿತಿಯು ಈ ಸ್ಥಳಗಳಿಗೆ ಭೇಟಿ ನೀಡಿ ಮಲವನ್ನು ತೆಗೆದು ಸಾಗಿಸಲು ಬಳಸಿದ ಸಲಕರಣೆಯನ್ನು ಸ್ಥಳದಲ್ಲೇ ಪರಿಶೀಲಿಸಿತು. ಈ ವಿಷಯದಲ್ಲಿ ಸೂಕ್ತ ಶಿಫಾರಸುಗಳನ್ನು ಮಾಡಲು ಉಪಸಮಿತಿಯು ಸಾಕಷ್ಟು ವಿವರಗಳನ್ನು ಸಂಗ್ರಹಿಸಿತು. ಈ ನಡುವೆ ಮಲ ಒಯ್ಯುವ ಯಾವುದೇ ಬಗೆಯ ವಿಧಾನವನ್ನು ಸರ್ಕಾರವು ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿತು. ಸರ್ಕಾರವು ಈ ಆದೇಶ ಹೊರಡಿಸಿದ್ದರಿಂದಾಗಿ ಉಪಸಮಿತಿಯನ್ನು ವಿಸರ್ಜಿಸಲಾಯಿತು. ರಾಜ್ಯದಲ್ಲಿರುವ ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗಳನ್ನು ತನಿಖೆ ಮಾಡುವ ಕಾರ್ಯಕ್ಕೆ ತನ್ನೆಲ್ಲಾ ಗಮನವನ್ನು ಕೊಡಬೇಕೆಂದು ಸಮಿತಿಯು ತೀರ್ಮಾನಿಸಿತು.

ಟಿ.ಎ ಮತ್ತು ಡಿ.ಎ ಯನ್ನು ಡ್ರಾ ಮಾಡುವ ಉಪಶೀರ್ಷಿಕೆ ಬಾಬಿಗೆ ಸಮಿತಿಯನ್ನು ವರ್ಗೀಕರಿಸದ ಪ್ರಯುಕ್ತ ಸಮಿತಿಯು 1974ರ ಜನವರಿ ತನಕ ರಾಜ್ಯದಲ್ಲಿ ವಾಸ್ತವಾಂಶ ಶೋಧನಾ ಪ್ರವಾಸ ಮಾಡಲಾಗಲಿಲ್ಲ. ಈ ದಿನಾಂಕದ ನಂತರ ಇಡೀ ಸಮಿತಿಯು ಅಧ್ಯಯನ ಪ್ರವಾಸ ಮಾಡಲು ಸಾಧ್ಯವಾಯಿತು. ಅಧ್ಯಯನ ಪ್ರವಾಸದ ಮೊದಲ ಹಂತದಲ್ಲಿ ಸಮಿತಿಯು ಗುಲ್ಬರ್ಗಾ ವಿಭಾಗಕ್ಕೆ ಭೇಟಿ ನೀಡಿತು.

ಇದಾದ ನಂತರ ಅದೇ ಐವರು ಸದಸ್ಯರನ್ನೊಳಗೊಂಡ ಸಮಿತಿಯು ಮೈಸೂರು ವಿಭಾಗದ ಮೈಸೂರು ಹಾಗೂ ಕೊಡಗು ಜಿಲ್ಲೆಗಳಿಗೆ ಭೇಟಿ ನೀಡಿತು. ಈ ಪ್ರವಾಸದ ಕಾಲದಲ್ಲಿ ಸಮಿತಿಯ ಎಲ್ಲ ಸದಸ್ಯರೂ ಒಟ್ಟಿಗೇ ಪ್ರವಾಸ ಮಾಡುವುದು ಸಾಧ್ಯವಾಗದೆಂಬುದು ಕಂಡುಬಂದಿತು. ಹೀಗಾಗಿ ಸಂಗ್ರಹಿಸಬೇಕಾದ ವಿವರವನ್ನು ಸಂಗ್ರಹಿಸಲು ಪ್ರತಿಯೊಬ್ಬ ಸದಸ್ಯರೂ ತಾನೇ ಸ್ವತಃ ಪ್ರವಾಸ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಇದನ್ನು ಎಲ್ಲ ಸದಸ್ಯರೂ ಒಪ್ಪಿಕೊಂಡರು. ಪ್ರವಾಸ ಕೈಗೊಂಡರು. ಈ ಅಮೂಲ್ಯ ಕಾರ್ಯನಿರ್ವಹಿಸಿದ ಸದಸ್ಯರುಗಳಿಗೆ ಸಮಿತಿಯು ಕೃತಜ್ಞತೆ ಸಲ್ಲಿಸುತ್ತದೆ ಹಾಗೂ ಆಭಾರಿಯಾಗಿರುತ್ತದೆ.

ನಮ್ಮ ರಾಜ್ಯದ ಹೊರಗಡೆ ಇರುವ ಪೌರಕಾರ್ಮಿಕರ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳನ್ನು ಇಲ್ಲಿನ ಸ್ಥಿತಿಗತಿಗಳಿಗೆ ಹೋಲಿಸಿ ವಸ್ತು ಸ್ಥಿತಿಯನ್ನು ಕಂಡುಕೊಳ್ಳುವ ಸಲುವಾಗಿ ಸರ್ಕಾರವು ಬಾಂಬೆ, ದೆಹಲಿ, ಕಲ್ಕತ್ತ ಮತ್ತು ಭುವನೇಶ್ವರ ನಗರಗಳಿಗೆ ಸಮಿತಿಯು ಭೇಟಿ ನೀಡುವುದಕ್ಕೆ ಅನುಮತಿ ನೀಡಿತು. ಅದರಂತೆ ಸಮಿತಿಯು ಈ ನಗರಗಳಿಗೆ ಭೇಟಿ ನೀಡಿತು. ಅವಲೋಕನವನ್ನು ಪ್ರತ್ಯೇಕವಾಗಿ ಈ ವರದಿಗೆ ಸೇರಿಸಲಾಗಿದೆ.

ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳ ಬಗ್ಗೆ ಎಲ್ಲ ಸುಸಂಗತ ವಿವರಗಳನ್ನು ಕಂಡುಕೊಳ್ಳಲು ಸಮಿತಿಯು ಈ ಮೊದಲೇ ಸಿದ್ಧಪಡಿಸಿದ್ದ ಸವಿಸ್ತಾರವಾದ, “ಪ್ರಶ್ನಾವಳಿ” ಯನ್ನು 1973 ರ ಜುಲೈ 25 ರಂದು ತನ್ನ ಮೂರನೆಯ ಸಭೆಯಲ್ಲಿ ಅನುಮೋದಿಸಿತು. ಪ್ರಶ್ನಾವಳಿಯನ್ನು ಮುದ್ರಣಕ್ಕಾಗಿ ಸರ್ಕಾರಿ ಮುದ್ರಣಾಲಯಕ್ಕೆ 1973ರ ಅಕ್ಟೋಬರ್‌ನಲ್ಲಿ ಕಳುಹಿಸಲಾಯಿತು. ಐದು ತಿಂಗಳಾದ ಮೇಲೆ 1974ರ ಏಪ್ರಿಲ್‌ನಲ್ಲಿ ಮುದ್ರಣಾಲಯದಿಂದ ಮುದ್ರಿತ ಪ್ರಶ್ನಾವಳಿ ತಲುಪಿತು. ಈ ಐದು ತಿಂಗಳಲ್ಲಿ ಸಮಿತಿಯ ಕಾರ್ಯ ಸ್ಥಗಿತಗೊಂಡಿತ್ತು.

ಪ್ರಶ್ನಾವಳಿಯ ಪ್ರತಿಗಳನ್ನು ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಸಾರ್ವಜನಿಕ ಸಂಸ್ಥೆಗಳಿಗೆ, ಸಾಮಾಜಿಕ ಆರ್ಥಿಕ ಸಂಘಸಂಸ್ಥೆಗಳಿಗೆ ಗಣ್ಯ ವ್ಯಕ್ತಿಗಳಿಗೆ, ಎಲ್ಲ ಶಾಸಕರುಗಳಿಗೆ 1974 ರ ಮೇ ತಿಂಗಳಲ್ಲಿ ಹಾಗೂ ಜೂನ್ ತಿಂಗಳಲ್ಲಿ ಕಳುಹಿಸಿಕೊಡಲಾಗಿತ್ತು. ಬಹಳಷ್ಟು ಒತ್ತಾಯ ಮಾಡಿದ ಮೇಲೆ ಮತ್ತು ಸರ್ಕಾರದ ಮಟ್ಟದಲ್ಲಿ ಪ್ರೇರಣೆ ನಿಮಿತ್ತ ಸ್ಥಳೀಯ ಸಂಸ್ಥೆಗಳು 1974ರ ಡಿಸೆಂಬರ್ ತಿಂಗಳಲ್ಲಿ ಉತ್ತರಗಳನ್ನು ಒದಗಿಸಿದವು. ರಾಜ್ಯದಲ್ಲಿರುವ ಕೆಲವೊಂದು ಸ್ಥಳೀಯ ಸಂಸ್ಥೆಗಳು ಈವರೆಗೂ ಉತ್ತರಗಳನ್ನು ಕಳುಹಿಸಿಲ್ಲವೆಂದು, ಇತರ ಮುನ್ಸಿಪಾಲಿಟಿಗಳು ಒದಗಿಸಿರುವ ಉತ್ತರಗಳು ವಾಸ್ತವಿಕವಾದವುಗಳೂ ಅಲ್ಲ, ಸಮಗ್ರವಾದವುಗಳೂ ಅಲ್ಲವೆಂದು ಸಮಿತಿಯು ವಿಷಾದದಿಂದಲೇ ಹೇಳಬೇಕಾಗಿದೆ. ಉತ್ತರಗಳಲ್ಲಿನ ಹಲವಾರು ಲೋಪದೋಷಗಳು ಸದಸ್ಯರು ಪ್ರವಾಸ ಮಾಡಿದಾಗಲೂ ಸದಸ್ಯರ ಗಮನಕ್ಕೆ ಬಂದಿವೆ. ಸೇವಾ ಸಂಘಸಂಸ್ಥೆಗಳು, ವ್ಯಕ್ತಿಗಳು, ಶಾಸಕರುಗಳು ಉತ್ತರಗಳನ್ನೇ ಒದಗಿಸಿಲ್ಲದಿರುವುದು ವಿಷಾದನೀಯ. ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಬದುಕಿನ ಮತ್ತು ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವ ಪ್ರಮುಖ ವಿಷಯಕ್ಕೆ ಶಾಸಕರುಗಳಿಂದ ಹಾಗೂ ಸಾರ್ವಜನಿಕರಿಂದ ಇಂತಹ ಆಸಕ್ತಿಯೇ ಇಲ್ಲದ ಹಾಗೂ ಉದಾಸೀನ ಪ್ರವೃತ್ತಿ ವ್ಯಕ್ತವಾಗಿರುವುದು ನಿಜಕ್ಕೂ ವಿಷಾದನೀಯ. ಪ್ರಚಲಿತ ವಿದ್ಯಮಾನಗಳ ಬಗೆಗಿನ ಹೆಸರಾಂತ ಪತ್ರಕರ್ತ ಹಾಗೂ ಗಣ್ಯ ಸಮಾಜ ಸುಧಾರಕ ಶ್ರೀ ದಿ॥ ಪಿ. ಕೋದಂಡರಾಯರು ನಮ್ಮ ಮನವಿಗೆ ಓಗೊಟ್ಟು ತಡಮಾಡದೆ ತಮ್ಮ ಅಮೂಲ್ಯ ಸಲಹೆಗಳನ್ನು ಕಳುಹಿಸಿದ್ದಾರೆಂದು ಸಂತೋಷದಿಂದ ಸಮಿತಿಯು ಹೇಳುತ್ತದೆ.

ಚಿಕ್ಕಮಗಳೂರಿನಲ್ಲಿ 1974 ರ ಜೂನ್ 21 ರಂದು ನಡೆದ ಸಮಿತಿಯ ಸಭೆಯಲ್ಲಿ, ಸಮಿತಿಯ ವರದಿಯ ಕರಡನ್ನು ಸಿದ್ಧಪಡಿಸಲು ಶ್ರೀ ಐ.ಪಿ.ಡಿ.ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಪಿ.ಎನ್.ರಾಮಚಂದ್ರ, ಶ್ರೀ ಜಿ.ಪಿ.ಗಂಜಿಗಟ್ಟಿ, ಶ್ರೀ ಎಸ್.ಎ.ಮುಲ್ಲಾ ಮತ್ತು ಎಂಎಲ್ಎ ಶ್ರೀ ಪಿ.ಡಿ.ಬಂಗೇರ ರವರನ್ನೊಳಗೊಂಡ ಉಪ ಸಮಿತಿಯನ್ನು ನೇಮಕ ಮಾಡಲು ಸಮಿತಿಯು ತೀರ್ಮಾನಿಸಿತು. ಈ ಉಪ–ಸಮಿತಿಯ ಮೊದಲ ಸಭೆ ಮೈಸೂರಿನಲ್ಲಿ 1974ರ ಜೂನ್ 27 ರಂದು ಮತ್ತು 28 ರಂದು ನಡೆಯಿತು. ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ಶ್ರೀ ಎಸ್.ಎ.ಮುಲ್ಲಾರು ಧಾರವಾಡದಲ್ಲಿ ನಿಧನರಾಗಿದ್ದರಿಂದ ಸಮಿತಿಯಲ್ಲಿ ಅವರ ಅನುಪಸ್ಥಿತಿ ಉಂಟಾಗಿತ್ತು. ಹುಬ್ಬಳ್ಳಿಯಲ್ಲಿ 1975ರ ಜನವರಿ 5 ರಂದು ನಡೆದ ಸಮಿತಿಯ ಒಂಭತ್ತನೇ ಸಭೆಯಲ್ಲಿ ವರದಿಯ ಕರಡನ್ನು ಸಿದ್ಧಪಡಿಸುವ ಕರ್ತವ್ಯ ಉಳ್ಳ ಈ ಉಪಸಮಿತಿಗೆ ಎಂಎಲ್ಎ ಶ್ರೀ ಟಿ.ಆರ್.ರಾಮಣ್ಣ, ಶ್ರೀ ಎಸ್.ಸಿ.ವೆಂಕಟೇಶ್, ಶ್ರೀಮತಿ ಲಕ್ಷ್ಮಿ ಸುಬ್ಬರಾವ್, ಶ್ರೀ ರಘುಪತಿ ಮತ್ತು ಶ್ರೀ ಎ.ಕೆ.ಅನಂತಕೃಷ್ಣ ರವರುಗಳನ್ನು ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. 1975ರ ಜನವರಿ 25ರ ಹೊತ್ತಿಗೆ ಸರ್ಕಾರಕ್ಕೆ ಮಧ್ಯಂತರ ವರದಿಯ ಸಲ್ಲಿಕೆ ಆಗಬೇಕೆಂದು ಸಮಿತಿಯು ನಿರ್ಣಯಿಸಿತು. ಅದರಂತೆ 1975ರ ಜನವರಿ 25 ರಂದು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸನ್ಮಾನ್ಯ ಪೌರಾಡಳಿತ ಮಂತ್ರಿ ಶ್ರೀ ಡಿ.ಕೆ.ನಾಯ್ಕರ್‌ರಿಗೆ ಖುದ್ದಾಗಿ ಸಮಿತಿಯ 'ಮಧ್ಯಂತರ ಶಿಫಾರಸು' ಗಳನ್ನು ಸಲ್ಲಿಸಿದರು.

ಪೌರಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಸ್ತು ನಿಷ್ಠ ಮಾಹಿತಿಯು ಯಾವುದೇ ಮೂಲದಿಂದಲೂ ದೊರಕದಿದ್ದುದರಿಂದ ಅದನ್ನು ಸಂಗ್ರಹಿಸುವುದು ಆವಶ್ಯಕವೆಂದು ಸಮಿತಿಯು ಭಾವಿಸಿತು. ಆ ಬಗ್ಗೆ ಸಮಿತಿಯು ಸಾಮಾಜಿಕ–ಆರ್ಥಿಕ ಮಾಹಿತಿಯ ಸಂಗ್ರಹಣೆಗಾಗಿ ಸಮಗ್ರ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿತು. ಮುನ್ಸಿಪಲ್ ಕೌನ್ಸಿಲ್‌ಗಳು ಮತ್ತು ಸರ್ಕಾರಿ ಏಜೆನ್ಸಿಗಳು ಪೌರಕಾರ್ಮಿಕರ ಸಾಮಾಜಿಕ–ಆರ್ಥಿಕ ಸ್ಥಿತಿಗಳಿಗೆ ಸಂಬಂಧಿಸಿದ ಹಲವಾರು ವಿವರಗಳನ್ನು ಸಮಗ್ರವಾಗಿ ಸಂಗ್ರಹಿಸಲು ತೊಡಗದಿರುವುದು ಸಮಿತಿಯು ಅನುಭವಕ್ಕೆ ಬಂದಿದ್ದರಿಂದಾಗಿ ಈ ಕೆಲಸವನ್ನು ಯಾವುದೇ ಏಜೆನ್ಸಿಗೆ ವಹಿಸದೆ ಈ ಕೆಲಸವನ್ನು ಸಮಿತಿಯು ಸದಸ್ಯರಿಗೇ ವಹಿಸುವುದು ಅವಶ್ಯಕವೆಂದು ಕಂಡುಬಂತು. ಹೀಗಾಗಿ, ಇಡೀ ರಾಜ್ಯದಲ್ಲಿರುವ ಪೌರಕಾರ್ಮಿಕರ ಪ್ರತಿಯೊಂದು ಕುಟುಂಬದ ಜನಗಣತಿಯನ್ನು ಸಂಗ್ರಹಿಸುವ ಗುರುತರ ಕಾರ್ಯವನ್ನು ಸಮಿತಿಯೇ ಕೈಗೊಳ್ಳುವುದು ಅವಶ್ಯಕವೆಂದು ಭಾವಿಸಲಾಯಿತು. ಪೌರಕಾರ್ಮಿಕರಿಗೆ ಸಂಬಂಧಿಸಿದ ಈ ಬಹುಮುಖ್ಯ ಮಾಹಿತಿಯನ್ನು ಈವರೆಗೂ ಯಾವ ಏಜೆನ್ಸಿಯೂ ಸಂಗ್ರಹಿಸಿಲ್ಲವೆಂದು ನಾನಿಲ್ಲಿ ಒತ್ತಿ ಹೇಳಬಯಸುತ್ತೇನೆ. ಸಮಿತಿಯ ಪ್ರತಿಯೊಬ್ಬ ಸದಸ್ಯರೂ ಹಾಗೂ ಸಿಬ್ಬಂದಿಯು ಈ ಬಹುಮುಖ್ಯ ಮಾಹಿತಿಯನ್ನು ಸಂಗ್ರಹಿಸಲು ಮನೆ ಮನೆಗೂ ಹೋಗಿ ಮಾಹಿತಿಯನ್ನು ಹಾಗೂ ಪೌರಕಾರ್ಮಿಕರ ವೈಯಕ್ತಿಕ, ಸಾಮಾಜಿಕ, ಆರ್ಥಿಕ ಮತ್ತು

ಸಾಂಸ್ಕೃತಿಕ ಜೀವನದ ಬಗ್ಗೆ ಆತಂಕವನ್ನುಂಟು ಮಾಡುವಂತಹ ಎಲ್ಲ ವಿವರಗಳನ್ನು ಸಂಗ್ರಹಿಸಿರುವುದಕ್ಕೆ ಸಮಿತಿಯು ಪ್ರತಿಯೊಬ್ಬರಿಗೂ ಕೃತಜ್ಞತೆ ವ್ಯಕ್ತಪಡಿಸುತ್ತದೆ. ರಾಜ್ಯದಲ್ಲಿರುವ ಪೌರಕಾರ್ಮಿಕರ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳ ಬಗ್ಗೆ ವರದಿಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ಇದೊಂದು ಅಪೂರ್ವ ಸಾಧನೆ. ಹೀಗೆ ಈ ಸಮಿತಿಯು ಸೂಕ್ಷ್ಮಾತಿಸೂಕ್ಷ್ಮವಾಗಿ ವಿವರಗಳನ್ನು ಸಂಗ್ರಹಿಸಿರುವ ಹಾಗೆ ಬೇರಾವ ಸಮಿತಿಯು ಅಥವಾ ಆಯೋಗವು ಸಂಗ್ರಹಿಸಿರಲಾರದೆಂದು, ಈ ಮಾತಿಗೆ ಸಮಿತಿಯು ಕ್ಷಮೆ ಕೋರುತ್ತಾ, ಸಮಿತಿಯು ಹೆಮ್ಮೆಯಿಂದ ಹೇಳುತ್ತದೆ.

ಈ ಕಾರ್ಯವನ್ನು ಮುಗಿಸಲು ಮತ್ತು ವರದಿಯನ್ನು ಸಲ್ಲಿಸಲು ಸರ್ಕಾರವು ಯಾವುದೇ ಕಾಲಮಿತಿಯನ್ನು ಗೊತ್ತುಪಡಿಸಿರಲಿಲ್ಲ. ಸಮಿತಿಯ ಕಾಲಾವಧಿಯನ್ನು ಒಂದು ತಿಂಗಳು, ಎರಡು ತಿಂಗಳು ಹೀಗೆ ಚಿಕ್ಕಪುಟ್ಟ ಅವಧಿಗಳಿಗೆ ವಿಸ್ತರಿಸಲಾಗುತ್ತಿತ್ತು. ಹೀಗಾಗಿ, ಅನುಮಾನ ಹಾಗೂ ಅನಿಶ್ಚಿತತೆಯ ಸನ್ನಿವೇಶದಲ್ಲಿ ಸಮಿತಿಯು ನಿರಂತರವಾಗಿ ಕೆಲಸ ಮಾಡಲಾಗಲಿಲ್ಲ.

ಸತ್ಯಶೋಧನಾ ಸಮಿತಿಗಳನ್ನು ಅಥವಾ ಆಯೋಗಗಳನ್ನು ನೇಮಕ ಮಾಡಿದಾಗ ಸರ್ಕಾರವು, ಸಮರ್ಪಕವಾದ ಹಾಗೂ ವ್ಯಾಪಕ ವರದಿಗಳನ್ನು ಸಿದ್ಧಪಡಿಸಲು ಸಾಧ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸುತ್ತದೆ ಹಾಗೂ ವರದಿ ಸಲ್ಲಿಕೆಗೆ ಸಾಕಷ್ಟು ಕಾಲಾಂತರವನ್ನು ನಿಗದಿಪಡಿಸುತ್ತದೆ. ಸಮರ್ಪಕ ಹಾಗೂ ಸಮಂಜಸ ಕಾಲಾವಧಿಯನ್ನು ಕೊಡದಿದ್ದರೆ, ಜಟಿಲ ವಿಷಯಗಳ ಎಲ್ಲ ಅಂಶಗಳನ್ನು ಕಂಡುಕೊಂಡು ಪರಿಶೀಲಿಸಲು ಹಾಗೂ ಕಾರ್ಯ ಸಾಧ್ಯ ಮತ್ತು ಉಪಯುಕ್ತ ವರದಿಯನ್ನು ಸರ್ಕಾರಕ್ಕೆ ಸಕಾಲದಲ್ಲಿ ಸಲ್ಲಿಸಲಾಗುವುದಿಲ್ಲವೆಂಬುದು ಸಮಿತಿಯ ಅನಿಸಿಕೆ.

ಸಮಿತಿಯು ರಾಜ್ಯದ ಹಲವಾರು ಸ್ಥಳಗಳಲ್ಲಿ ಒಟ್ಟು 32 ಸಭೆಗಳನ್ನು ನಡೆಸಿದೆ. ಸಮಿತಿಯು ಕೆಲಸ ಕಾರ್ಯಗಳಲ್ಲಿ ಎಲ್ಲ ಸದಸ್ಯರುಗಳು ಉತ್ಸಾಹಪೂರ್ಣ ಹಾಗೂ ಖುದ್ದು ಆಸಕ್ತಿಯಿಂದ ಕೆಲಸ ಮಾಡಿದ್ದಾರೆಂದು ಹೇಳಲು ತುಂಬಾನೆ ಸಂತೋಷವಾಗುತ್ತಿದೆ. ವೈಯಕ್ತಿಕ ಅನಾನುಕೂಲಗಳನ್ನು ಗಮನಕ್ಕೆ ತೆಗೆದುಕೊಳ್ಳದೆಯೇ ಹಾಗೂ ಅನೇಕ ತೊಂದರೆಗಳಿದ್ದರೂ ಕೂಡ ಸದಸ್ಯರುಗಳು ಸಮರ್ಪಣಾ ಭಾವದಿಂದ ತಮ್ಮತಮ್ಮ ಕೆಲಸವನ್ನು ನಿರ್ವಹಿಸಿದ್ದಾರೆ.

# ಅಧ್ಯಾಯ IV

## ಸಾಮಾನ್ಯ ಅವಲೋಕನ

ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಈ ವೃತ್ತಿ ಖಚಿತವಾಗಿ ಯಾವಾಗ ಉಗಮವಾಯಿತೆಂಬುದನ್ನು ಹೇಳುವುದು ಕಷ್ಟ. ಪ್ರಾಚೀನ ಭಾರತದಲ್ಲಿ ಜನ ಸಂಖ್ಯೆ ತುಂಬಾನೆ ಕಡಿಮೆ ಇದ್ದುದರಿಂದ ಹಾಗೂ ಆಗ ಹೇಳಿಕೊಳ್ಳುವಂತಹ ನಗರಗಳು ಕೆಲವೇ ಇದ್ದುದರಿಂದ ಈ ವೃತ್ತಿಗೆ ಹೇಳಿಕೊಳ್ಳುವಂತಹ ಯಾವುದೇ ಪ್ರಾಮುಖ್ಯತೆ ಇರಲಿಲ್ಲ. ಜನಸಂಖ್ಯೆ ಬಹು ವೇಗದಿಂದ ಹೆಚ್ಚಾದಂತೆಲ್ಲ ಹಾಗೂ ದೊಡ್ಡ ನಗರಗಳು ಬೆಳೆದಂತೆಲ್ಲ ಪಟ್ಟಣಗಳ ಹಾಗೂ ನಗರಗಳ ನೈರ್ಮಲ್ಯ ನಿರ್ವಹಣೆ ಸಮಸ್ಯೆ ಉದ್ಭವವಾಯಿತು ಹೀಗಾಗಿ ಪಟ್ಟಣಗಳನ್ನು ಹಾಗೂ ನಗರಗಳನ್ನು ಸ್ವಚ್ಛಗೊಳಿಸುವುದು ಅವಶ್ಯಕವಾಯಿತು. ಕಸ ಮತ್ತು ಕೊಳೆಯನ್ನು, ಹಾಗೆಯೇ ಮಾನವ ಮಲವನ್ನು ತೆಗೆದು ಸಾಗಿಸುವುದು ತೀರಾ ಹೇಸಿಗೆಯ ಕೆಲಸ. ಹಿಂದೂ ಸವರ್ಣೀಯರು ಈ ಕೆಲಸ ತಮ್ಮ ಗೌರವ ಘನತೆಯನ್ನು ಕೀಳು ಮಟ್ಟಕ್ಕೆ ಕುಗ್ಗಿಸುವ ಕೆಲಸವೆಂದಷ್ಟೇ ಅಲ್ಲ. ಮೇಲ್ವರ್ಗದವರೂ ಮಾಡುವಂತಹ ಕೆಲಸ ಇದಲ್ಲವೆಂದು ಭಾವಿಸುತ್ತಾರೆ.

ಹಿಂದೂ ಸಮಾಜದ ಮೇಲ್ವರ್ಗದ್ದೆನ್ನಲಾದ ಜಾತಿಗಳ ಜನರು ಕಸಗುಡಿಸುವ ಮತ್ತು ಜಾಡಮಾಲಿ ಕೆಲಸವನ್ನು ತಾವು ಮಾಡುವಂತಿಲ್ಲವೆಂದು ಭಾವಿಸಿರುವುದರಿಂದ ಸಹಜವಾಗಿಯೇ ಅವರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ತುಳಿತಕ್ಕೊಳಗಾದ ಈ ಅಸ್ಪೃಶ್ಯರಿಗೆ ಈ ಮಲಿನಕರ ಕೆಲಸವನ್ನು ವಹಿಸಿದರು. ಈ ಅಸ್ಪೃಶ್ಯರೋ ಮೇಲ್ವರ್ಗದವರು ಮಾಡುವ ಆಜ್ಞೆಗಳನ್ನು ಪಾಲಿಸುವುದೇ ನಮ್ಮ ಕರ್ತವ್ಯವೆಂದು ಭಾವಿಸಿ ಮನಃಪೂರ್ವಕವಾಗಿ ಈ ವೃತ್ತಿಯಲ್ಲಿ ತೊಡಗಿದರು. ಹಾಗಾಗಿ ಈ ದಿನಗಳಲ್ಲಿ ಕಸಗುಡಿಸುವವರಲ್ಲಿ ಮತ್ತು ಜಾಡಮಾಲಿಗಳಲ್ಲಿ ಬಹಳಷ್ಟು ಪರಿಶಿಷ್ಟ ಜಾತಿಗಳ ಜನರೇ ಇದ್ದಾರೆ.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳಲ್ಲೇ ಹಲವಾರು ಒಳಜಾತಿಗಳಿವೆ. ಒಳಪಂಗಡಗಳಿವೆ. ಈ ಪೈಕಿ ಪ್ರಮುಖ ಒಳಜಾತಿಗಳೆಂದರೆ ಬಲಗೈವರು (ಹೊಲೆಯರು), ಎಡಗೈಯವರು (ಮಾದಿಗರು). ಈ ಎರಡು ಪ್ರಮುಖ ಒಳಜಾತಿಗಳಲ್ಲಿ ಹಲವಾರು ಪಂಗಡಗಳಿವೆ. ಈ ಸಮುದಾಯದ ಎಲ್ಲ ಒಳ ಜಾತಿಗಳ ಜನರೆಲ್ಲರೂ ಕಸಗುಡಿಸುವ ಮತ್ತು ಜಾಡಮಾಲಿ ವೃತ್ತಿಯನ್ನು ಕೈಗೊಂಡಿಲ್ಲ. ಅನಾದಿಕಾಲದಿಂದಲೂ ಈ ಜನರು ಕೃಷಿ, ಕೂಲಿ, ಚರ್ಮ ಹದ ಮಾಡುವುದು ಮತ್ತು ಇತರ ಕೆಲಸದಾಳಿನ ಕೆಲಸ ಮಾಡುತ್ತಿದ್ದಾರೆ. ಈ ದಿನಗಳಲ್ಲಿ ಈ ಜನರಲ್ಲಿ ಬಹುತೇಕ ಜನರು ಹಳೆಯ ಕಾಲದ ತಮ್ಮತಮ್ಮ ವೃತ್ತಿಯಲ್ಲಿ ತೊಡಗಿದ್ದಾರೆ. ತಮ್ಮ ಬದುಕಿಗಾಗಿ ಕಸಗುಡಿಸುವ ಮತ್ತು ಜಾಡಮಾಲಿ ಕೆಲಸದಲ್ಲಿ ತೊಡಗಿರುವವರನ್ನು ಹಳೆಯ ಕಾಲದ ವೃತ್ತಿಯಲ್ಲಿ ತೊಡಗಿರುವ ಜನರು ಕೀಳಾಗಿ ಕಾಣುತ್ತಾರೆ.

ಕಸಗುಡಿಸುವ ಮತ್ತು ಜಾಡಮಾಲಿ ವೃತ್ತಿಯಲ್ಲಿ ತೊಡಗಿರುವ ಈ ಜನರಿಗೆ ಬೇರೆ ಪರ್ಯಾಯವೇ ಇಲ್ಲ. ಏಕೆಂದರೆ ಇತರೆಲ್ಲ ವೃತ್ತಿಗಳು ಈ ಜನರಿಗೆ ಮುಚ್ಚಿ ಹೋಗಿವೆ. ಇವರು ಬದುಕಿಗೆ ಏನಾದರೊಂದು ವೃತ್ತಿಯನ್ನು ಅಳವಡಿಸಿಕೊಳ್ಳಬೇಕಿತ್ತು. ಸಮಾಜದ ಇತರ ವರ್ಗಗಳಿಂದ ಪೈಪೋಟಿ ಇಲ್ಲದ, ಸುಲಭವಾಗಿ ಕೈಗೊಳ್ಳಬಹುದಾದ ಒಂದೇ ಒಂದು ವೃತ್ತಿ ಯಾವುದಿತ್ತೆಂದರೆ ಕಸಗುಡಿಸುವ ಮತ್ತು ಜಾಡಮಾಲಿ ವೃತ್ತಿ. ಈ ಮಲಿನ ಕೆಲಸವನ್ನು ಈ ಬೇಡವಾದ ಜನರೇ ಮಾಡಬೇಕೆಂಬುದು ಒಟ್ಟಾರೆ ಸಮಾಜದ ಅಪೇಕ್ಷೆಯಾಗಿತ್ತು. ಕರ್ನಾಟಕದಲ್ಲಿರುವ ಕಸಗುಡಿಸುವವರ ಮತ್ತು ಜಾಡಮಾಲಿಗಳ ಬಹುತೇಕ ಜನರು ಪಕ್ಕದ ಆಂಧ್ರಪ್ರದೇಶದಿಂದ ವಲಸೆ ಬಂದವರು. ಹಿಂದಿನ ಮದ್ರಾಸ್ ಸಂಸ್ಥಾನದ ಬಳ್ಳಾರಿ ಜಿಲ್ಲೆಗಳು, ಆಂಧ್ರಪ್ರದೇಶದ ಚಿತ್ತೂರು, ಕರ್ನೂಲು, ಅನಂತಪುರ ಹಾಗೂ ನೆಲ್ಲೂರುಗಳು ಆಗಾಗ ಕ್ಷಾಮಕ್ಕೆ ಹಾಗೂ ಬರಗಾಲಕ್ಕೆ ಒಳಗಾಗುತ್ತಿದ್ದವು. ಅಂತಹ ಕಾಲಗಳಲ್ಲಿ ಕೃಷಿ ಕಾರ್ಮಿಕರಾದ ಈ ಜನರು ಭಾರೀ ಕಷ್ಟಕೋಟಲೆಗಳಿಗೆ ಗುರಿಯಾಗುತ್ತಿದ್ದರು. ಜೀವನ ಮಾಡಲು ಎಲ್ಲಿ ಅನುಕೂಲಗಳಿರುತ್ತವೋ ಆ ಪ್ರದೇಶಗಳಿಗೆ ಅವರು ವಲಸೆ ಹೋಗುತ್ತಿದ್ದುದು ಸಹಜ. ಕರ್ನಾಟಕವು ತೀರಾ ಸಮೀಪವಿದ್ದುದರಿಂದ, ಸುಭಿಕ್ಷವಾಗಿದ್ದುದರಿಂದ ತಮ್ಮ ಜೀವನೋಪಾಯಕ್ಕಾಗಿ ಈ ಜನರು ಇಲ್ಲಿಗೆ ಬಂದರು.

ಎರಡು ಕಾರಣಗಳಿಂದಾಗಿ ಈ ಜನರು ಕರ್ನಾಟಕದಲ್ಲಿ ನೆಲೆ ನಿಲ್ಲಲು ಸಾಧ್ಯವಾಯಿತು. ಮೊದಲನೆಯದು, ಗೌರವ ಕುಂದಿಸುವ ಈ ಹೇಸಿಗೆ ಕೆಲಸವನ್ನು ಮಾಡಲು ಸ್ಥಳೀಯ ಪರಿಶಿಷ್ಟ ಜಾತಿಗಳ ಜನರು ಮನಸ್ಸುಳ್ಳವರಾಗಿರಲಿಲ್ಲ. ಎರಡನೆಯದು, ಈ ವಲಸಿಗರಿಗೆ ಬೇರೆ ಕೆಲಸವು ಸಿಕ್ಕದಿದ್ದುದರಿಂದ ತಕ್ಷಣವೇ ಈ ಕೆಲಸಕ್ಕೆ ಒಗ್ಗಿಕೊಂಡರು. ಸ್ಥಳೀಯರಿಂದ ಪೈಪೋಟಿ ಇಲ್ಲದಿದ್ದುದರಿಂದ ಹಾಗೂ ಆಂಧ್ರ ಪ್ರದೇಶದ ಸ್ವಂತ ಊರುಗಳಲ್ಲಿ ಕನಿಷ್ಠ ಕೂಲಿಯ ಕೆಲಸ ಇಲ್ಲದಿದ್ದುದರಿಂದ ಈ ಜನರು ಕರ್ನಾಟಕದಲ್ಲಿ ಖಾಯಂ ಆಗಿ ನೆಲಸಿದರು.

ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾದ ನಂತರ ಈ ವೃತ್ತಿಯಲ್ಲಿ ಬಗೆಬಗೆಯ ಬೆಳವಣಿಗೆಯಾಯಿತು. ನಗರಗಳ ಮತ್ತು ಪಟ್ಟಣಗಳ ಬೆಳವಣಿಗೆಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ನಿಭಾಯಿಸುವ ಸಲುವಾಗಿ ಸ್ವಯಮಾಡಳಿತ ಸಂಸ್ಥೆಗಳ ಬೆಳವಣಿಗೆಗೆ ಭಾರತದಲ್ಲಿನ ಬ್ರಿಟಿಷ್ ಸರ್ಕಾರವು ಉತ್ತೇಜನ ನೀಡಿತು. ನೈರ್ಮಲ್ಯವನ್ನು ಮತ್ತು ಸಾರ್ವಜನಿಕ ಆರೋಗ್ಯವನ್ನು ತೃಪ್ತಿಕರ ರೀತಿಯಲ್ಲಿ ನಿರ್ವಹಣೆ ಮಾಡುವುದು ಈ ಸ್ಥಳೀಯ ಸಂಸ್ಥೆಗಳ ಪ್ರಮುಖ ಕರ್ತವ್ಯಗಳಲ್ಲಿ ಒಂದು. ನೈರ್ಮಲ್ಯ ಮತ್ತು ನಿರ್ವಹಣೆ ಕೆಲಸಕ್ಕಾಗಿ ಸೂಕ್ತ ಸಿಬ್ಬಂದಿಯನ್ನು ನೇಮಕ ಮಾಡಿ ಇಟ್ಟುಕೊಳ್ಳುವಂತೆ ಈ ಹೊಸ ಸ್ಥಳೀಯ ಮಂಡಳಿಗಳಿಗೆ ಬ್ರಿಟಿಷ್ ಆಡಳಿತವು ಸೂಚಿಸಿತು. ಈ ಕೆಲಸವನ್ನು ಮಾಡಲು ಇಚ್ಛಿಸುವಂತಹ ಪರಿಶಿಷ್ಟ ಜಾತಿಗಳ ಜನರು ಮಾತ್ರವೇ ಈ ಕೆಲಸಕ್ಕೆ ದೊರಕುತ್ತಿದ್ದರು. ಈ ವೃತ್ತಿಯು ಸೇವಾ ಭದ್ರತೆ ಒದಗಿಸುತ್ತದೆಂದಷ್ಟೇ ಅಲ್ಲ ನಿಯತವಾಗಿ ಮತ್ತು ತಿಂಗಳು ತಿಂಗಳು ಸಂಬಳ ಸಿಗುತ್ತದೆನ್ನುವುದು ಈ ವೃತ್ತಿಯನ್ನು ಮಾಡಲು ಒಪ್ಪಿಕೊಳ್ಳುವುದಕ್ಕೆ ಕಾರಣಗಳು. ಈ ಜನರಿಗೆ ಅಂತಹ ಅನುಕೂಲಗಳ ಅಗತ್ಯ ತುಂಬಾನೆ ಇತ್ತು. ಕಾಲಕ್ರಮೇಣ ಈ ಜನರ ಕುಟುಂಬದಲ್ಲಿನ ಇತರರೂ ಈ ವೃತ್ತಿಗೆ ಬಂದರು. ಈ ಜನರಿಂದ ಈ ವೃತ್ತಿಯ ಆಯ್ಕೆ ಒಂದೆರಡು ತಲೆಮಾರಿನವರೆಗೂ ಮುಂದುವರಿದು ಈ ವೃತ್ತಿಯು ಪರಂಪರಾಗತ ವೃತ್ತಿಯಾಗಿ ಬಿಟ್ಟಿತ್ತು.

ಬದುಕಿಗೆ ಭದ್ರತೆ ದೊರಕುತ್ತದೆ ಎಂಬುದು ಕಂಡುಬಂದಾಗ ತಮ್ಮ ಈ ಹೊಸವೃತ್ತಿಯಲ್ಲಿ ತೊಡಗಿಕೊಂಡರು. ತರುವಾಯದಲ್ಲಿ ಇತರ ಪರಿಶಿಷ್ಟ ಜಾತಿಗಳವರು ಈ ಜನರನ್ನು ಬೇರೆಯಾಗಿಯೇ ಭಾವಿಸಿದರು. ಈ ಜನರೊಂದಿಗೆ ಬೇರೆ ಜನರು ಸಾಮಾಜಿಕ ಸಂಪರ್ಕವನ್ನು ಇಚ್ಛಿಸಿದಿದ್ದುದರಿಂದ ಈ ಜನರು ಅಂತಹವರೊಂದಿಗೆ ಯಾವುದೇ ಬಗೆಯ ಸಂಪರ್ಕವನ್ನಿಟ್ಟುಕೊಳ್ಳುವ ಅಗತ್ಯ ಇಲ್ಲವೆಂದು ಈ ಜನರು ಭಾವಿಸಿದರು. ಹೀಗೆ ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸಕ್ಕೆ ತೊಡಗಿದ ಈ ಜನರು ಪ್ರತ್ಯೇಕ ಅಸ್ತಿತ್ವ ಉಳ್ಳವರಾದರು.

ಈ ದಿನಗಳಲ್ಲಿ ಕಸಗುಡಿಸುವವರ ಮತ್ತು ಜಾಡಮಾಲಿಗಳ ಹಾಗೂ ಹಿಂದೂ ಸಮಾಜದ ನಡುವಣ ಪರಸ್ಪರ ಭಾವನೆ ಹೇಳಿಕೊಳ್ಳುವಂಥದ್ದಾಗಿರಲಿಲ್ಲ. ಈ ವೃತ್ತಿಯನ್ನು ಒಂದು ನಿರ್ದಿಷ್ಟ ಸಮುದಾಯದವರದ್ದೆಂದೇ ಕಲ್ಪಿಸಿಕೊಂಡಿದ್ದ ಹಿಂದೂ ಸವರ್ಣೀಯರು ಈ ವೃತ್ತಿ ಅಸ್ಪೃಶ್ಯರಿಗೆ ಮಾತ್ರವೇ ಸೀಮಿತವೆಂಬ ಭಾವನೆಯನ್ನು ತಳೆದಿದ್ದರು. ಎಲ್ಲ ವ್ಯಕ್ತಿಗಳಿಗೆ ಇರುವ ಘನತೆ ಗೌರವ ಪೌರಕಾರ್ಮಿಕರ ವೃತ್ತಿಗೂ ಇರುತ್ತದೆ. ಯಾವಾಗಲೂ ಈ ಕೆಲಸವನ್ನು ಅಸ್ಪೃಶ್ಯರೇ ಮಾಡಬೇಕೆಂದು ಹೇಳುವುದು ಎಳ್ಳಷ್ಟೂ ಸರಿ ಅಲ್ಲವೇ ಅಲ್ಲ. ಸವರ್ಣೀಯ ಹಿಂದೂಗಳಿಗೂ ಕೂಡ ಪೌರಕಾರ್ಮಿಕ ವೃತ್ತಿಯನ್ನು ಕೈಗೊಳ್ಳಲು ಉತ್ತೇಜನ ನೀಡುವುದೇ ಇಂಥದೊಂದು ತಪ್ಪು ಕಲ್ಪನೆಯನ್ನು ತೊಡೆದು ಹಾಕಲು ಮತ್ತು ಈ ವೃತ್ತಿಗೆ ಅಂಟಿಕೊಂಡಿರುವ ಕಳಂಕವನ್ನು ಅಳಿಸಿ ಹಾಕಲು ಇರುವ ಏಕೈಕ ಮಾರ್ಗ. ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ತರುತ್ತದೆಂಬ ಭಾವನೆಯಿಂದ ಸವರ್ಣೀಯ ಹಿಂದೂಗಳು, ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾಮುಖ್ಯತೆಯ ಸ್ಥಾನದಲ್ಲಿರುವವರು ಈ ವೃತ್ತಿಗೆ ಬರಲು ಇಚ್ಛಿಸುತ್ತಿಲ್ಲ. ಪೌರಕಾರ್ಮಿಕರ ತೀವ್ರ ಅಭಾವದ ಸಮಸ್ಯೆಯ ಕಾರಣ ಅನೇಕ ಮುನ್ಸಿಪಾಲಿಟಿಗಳಲ್ಲಿ ಸವರ್ಣೀಯರನ್ನು ಪೌರಕಾರ್ಮಿಕರನ್ನಾಗಿ ನೇಮಕ ಮಾಡಿಕೊಂಡಿದ್ದರೂ, ಅವರಿಗೆ ಪೌರಕಾರ್ಮಿಕ ಕೆಲಸದ ಬದಲಿಗೆ ಅವರ ನೇಮಕಕ್ಕೆ ಸಂಬಂಧಪಡದ ಬೇರೊಂದು ಕೆಲಸವನ್ನು ಹಂಚಿಕೆ ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಇಂಥ ಪ್ರವೃತ್ತಿಗೆ ಸಮಿತಿಯು ವಿಷಾದಿಸುತ್ತದೆ ಹಾಗೂ ಎಲ್ಲೆಲ್ಲಿ ಯಾವ್ಯಾವಾಗ ಪರಿಶಿಷ್ಟೇತರ ಜನರು ಈ ಕೆಲಸಕ್ಕೆ ನೇಮಕಗೊಳ್ಳುತ್ತಾರೋ ಅವರೆಲ್ಲರೂ ಇತರ ಕಸಗುಡಿಸುವವರು ಹಾಗೂ ಜಾಡಮಾಲಿಗಳಂತೆಯೇ ಪೌರಕಾರ್ಮಿಕ ಕೆಲಸ ಮಾಡಬೇಕೆಂದು

ಸಮಿತಿಯು ಆಗ್ರಹಪೂರ್ವಕವಾಗಿ ಹೇಳುತ್ತದೆ. ಎಲ್ಲ ಪೌರಕಾರ್ಮಿಕರನ್ನು ಅವರವರ ಜಾತಿಗಳೇನೇ ಇರಲಿ ಇತರರಂತೆಯೇ ಸಮಾನವಾಗಿ ಕಾಣಬೇಕು.

ಕೆಲವೊಂದು ಪ್ರದೇಶಗಳಲ್ಲಿ ಮುಸ್ಲಿಮರು ಹಾಗೂ ಮತಾಂತರಗೊಂಡ ಕ್ರಿಶ್ಚಿಯನ್ನರು ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸ ಮಾಡುತ್ತಿದ್ದಾರೆ. ಮುಸ್ಲಿಂ ಪೌರಕಾರ್ಮಿಕರನ್ನು ಅವರ ಸಹಧರ್ಮೀಯರು ನಮ್ಮವರೇ ಎಂದು ಭಾವಿಸಿದ್ದರೂ, ಮತಾಂತರಗೊಂಡ ಕ್ರಿಶ್ಚಿಯನ್ನರು ಸಮಾಜದೊಂದಿಗೆ ಬೆರೆಯದಂತೆ ಹೊರಗಿಡಲಾಯಿತು. ಸವರ್ಣೀಯ ಹಿಂದೂಗಳು ಮಾಡಲೊಪ್ಪದಂತಹ ಈ ವೃತ್ತಿಯನ್ನು ಮುಸ್ಲಿಮರು ಕೈಗೊಂಡರು ಹಾಗೂ ಈ ಜನರೊಂದಿಗೆ ಸ್ನೇಹಮಯ ಸಹನೆಯ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಮುಸ್ಲಿಮರು ಇತರ ಸಮುದಾಯದವರಿಗೆ ಮೇಲ್ಪಂಕ್ತಿ ಹಾಸಿಕೊಟ್ಟರು. ಮುಸ್ಲಿಮರು ಈ ವೃತ್ತಿಯನ್ನು ಸರಿ ಹೊಂದುವಂತಹ ಗೌರವಾರ್ಹ ಮತ್ತು ಸರಿಯಾದ ಹೆಸರಿನಿಂದ ಕರೆದರು. ಕಸಗುಡಿಸುವವರನ್ನು ಹಾಗೂ ಜಾಡಮಾಲಿಗಳನ್ನು "ಹಲಾಲ್ ಖೋರ್" ಎಂದು ಕರೆದರು. ಅದರರ್ಥ "ನ್ಯಾಯ ರೀತಿಯಲ್ಲಿ ತನ್ನ ಜೀವನೋಪಾಯವನ್ನು ಗಳಿಸುವ ವ್ಯಕ್ತಿ". ಪೌರಕಾರ್ಮಿಕ ವ್ಯಕ್ತಿಯು ಸೇರಿದಂತೆ ಎಲ್ಲ ವ್ಯಕ್ತಿಗಳೂ ಪ್ರಮುಖ ಹಾಗೂ ಪವಿತ್ರವಾದವುಗಳಾದ್ದರಿಂದ ಯಾವುದೇ ವೃತ್ತಿಗೆ ಯಾವುದೇ ಕಳಂಕ ಹಚ್ಚುವುದು ಸರ್ವಥಾ ಸರಿಯಲ್ಲ. ಪೌರಕಾರ್ಮಿಕರು ಮನಸಿಟ್ಟು ಸಹಕರಿಸದಿದ್ದರೆ ಆರೋಗ್ಯಕರ ಹಾಗೂ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವೇ ಇಲ್ಲವಾದ್ದರಿಂದ ಪೌರಕಾರ್ಮಿಕರನ್ನು ಗೌರವಿಸಬೇಕಾದ ಕಾಲ ಬಂದಿದೆ.

ಹಳೆಯ ಮೈಸೂರು ರಾಜ್ಯದಲ್ಲಿ ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸವನ್ನು ಮುನಿಸಿಪಲ್ ನೌಕರರೇ ಮಾಡುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಮಾತ್ರ ಜಾಡಮಾಲಿ ಕೆಲಸವನ್ನು ಈಗಲೂ ಖಾಸಗೀ ನೌಕರರೇ ಮಾಡುತ್ತಿದ್ದಾರೆ. ಇವರುಗಳನ್ನು ಸ್ಥಳೀಯ ಸಂಸ್ಥೆಗಳು ನಿಯೋಜಿಸಿಕೊಂಡಿರಲಿಲ್ಲ. ನಾಗರಿಕರು ನಿಯೋಜಿಸಿಕೊಂಡಿದ್ದರು. ಈ ನೌಕರರು ಬಹುತೇಕ ಹರಿಯಾಣದಿಂದ ಮತ್ತು ಉತ್ತರ ಪ್ರದೇಶದಿಂದ ಬಂದವರು. ಇವರನ್ನು 'ಬಾಲ್ಮಿಕಿ' ಗಳೆಂದು ಕರೆಯುತ್ತಿದ್ದರು. ಇವರನ್ನು ಮಲವನ್ನು ಹೊತ್ತು ಒಯ್ಯುವ ಜಾಡಮಾಲಿ ಕೆಲಸಕ್ಕೆ ನಿಯೋಜಿಸಿಕೊಳ್ಳಲಾಗುತ್ತಿತ್ತು. ಈ ಕೆಲಸಕ್ಕಾಗಿ ಪ್ರತಿಯೊಂದು ಕುಟುಂಬದವರೂ ಪ್ರತಿತಿಂಗಳು ಸಂಭಾವನೆ ಕೊಡುತ್ತಿದ್ದರು.

ತಲೆ ಮೇಲೆ ಮಲ ಹೊತ್ತು ಸಾಗಿಸುವ ಅಥವಾ ಗಾಡಿಯಲ್ಲಿಟ್ಟು ಸಾಗಿಸುವುದನ್ನು 1973ರಲ್ಲಿ ಕರ್ನಾಟಕ ಸರ್ಕಾರವು ನಿಷೇಧಿಸಿರುವ ಆದೇಶವನ್ನು ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಹೊರಡಿಸಿತು. ಅನೇಕ ಮುನ್ಸಿಪಾಲಿಟಿಗಳು ಈ ಆದೇಶವನ್ನು ಜಾರಿಗೆ ತಂದವು. ಆದರೆ, ಉತ್ತರ ಕರ್ನಾಟಕ ಪ್ರದೇಶದಲ್ಲಿರುವ ಅನೇಕ ಇತರ ಮುನಿಸಿಪಾಲಿಟಿಗಳಲ್ಲಿ ಖಾಸಗೀ ಕೆಲಸಗಾರರು ಈಗಲೂ ಜಾಡಮಾಲಿ ಕೆಲಸ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ನಿಷೇಧ ವಿಫಲವಾದುದಕ್ಕೆ ಸರ್ಕಾರದ ಆದೇಶದಲ್ಲಿದ್ದ ದೋಷವೇ ಕಾರಣ. ಮೊದಲನೆಯದು, ಅಂತಹ ಮುನಿಸಿಪಾಲಿಟಿಗಳ ಪ್ರದೇಶದಲ್ಲಿ ಒಳ ಚರಂಡಿ ವ್ಯವಸ್ಥೆ ಇಲ್ಲದಿದ್ದದರಿಂದ ಸರ್ಕಾರದ ಆದೇಶವನ್ನು ಜಾರಿಗೆ ತರಲಾಗಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಎರಡನೆಯದು, ಸರ್ಕಾರೀ ಆದೇಶವು ಖಾಸಗಿ ಜನರು ಜಾಡಮಾಲಿ ಕೆಲಸ ಮಾಡುವುದನ್ನು ನಿಷೇಧಿಸಿರಲಿಲ್ಲ. ಮೂರನೆಯದು, ಈ ಆದೇಶದ ಪರಿಣಾಮವಾಗಿ ಕೆಲಸವನ್ನು ಕಳೆದುಕೊಂಡು ಜೀವನೋಪಾಯ ಇಲ್ಲದಂತಾಗುವ ಸಂದರ್ಭದಲ್ಲಿ ಖಾಸಗೀ ಜಾಡಮಾಲಿಗಳಿಗೆ ಬದಲಿ ಉದ್ಯೋಗಕ್ಕೆ ಅವಕಾಶ ಕಲ್ಪಿಸಿರಲಿಲ್ಲ. ಹಳೆಯ ಮೈಸೂರು ರಾಜ್ಯವೇ ಒಳ ಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದರಲ್ಲಿ ಮೊದಲನೆಯದು. ಹೀಗಾಗಿ, ಜಾಡಮಾಲಿ ಕೆಲಸವನ್ನು ಮುನಿಸಿಪಲ್ ನೌಕರರೇ ನಿರ್ವಹಿಸುತ್ತಿದ್ದರು. ಈ ಭಾಗದಲ್ಲಿ ಸರ್ಕಾರಿ ಆದೇಶವನ್ನು ಸುಗಮವಾಗಿ ಮತ್ತು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲಾಗಿತ್ತು.

ಕಸಗುಡಿಸುವ ಹಾಗೂ ಜಾಡಮಾಲಿ ವೃತ್ತಿಯನ್ನು ಯಾವ ಯಾವ ಸಮುದಾಯದವರು ಕೈಗೊಂಡಿದ್ದಾರೆಂದರೆ ಪರಿಶಿಷ್ಟಗಳ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (1) ಮಾದಿಗ, (2) ಗೊಲ್ಲಮಾದಿಗ, (3) ಮದುರೆ ಮಾದಿಗ; (4) ಮಾಹರ್, (5) ಮಾದರ್, (6) ಮಿಂದು ಮಾದರ್, (7) ವಡ್ಡ, (8) ಬೋವಿ, (9) ಹೊಲೆಯ, (10) ದೊಂಬರಿ, (11) ಕೊಲಿ, (12) ಚನ್ನ ಹೊಲೆಯ, (13) ಛಲುವಾದಿ, (14) ಮೋಚಿ, (15)

ಲುಂಬಡ್, ಕೊರಗ ಹಾಗೂ ಮುಸ್ಲಿಮರು ಮತ್ತು ಮತಾಂತರಗೊಂಡ ಕ್ರಿಶ್ಚಿಯನ್ನರು. ಕಸುಗುಡಿಸುವವರು ಮತ್ತು ಜಾಡಮಾಲಿಗಳ ಕೆಲಸ ಮಾಡುತ್ತಿರುವ ಬಹುತೇಕ ಜನರು ತೆಲುಗು ಭಾಷಿಕರಾದರೂ ತಮಿಳು, ತುಳು, ಕನ್ನಡ, ಉರ್ದು, ಮರಾಠಿ, ಹಿಂದಿ ಮುಂತಾದ ಪ್ರಾಂತ ಭಾಷೆಗಳ ಭಾಷಿಕರು.

ಈಗ ರಾಜ್ಯದಲ್ಲಿರುವ ಹಲವಾರು ಮುನಿಸಿಪಾಲಿಟಿಗಳಲ್ಲಿ ಹಾಗೂ ಮುನಿಸಿಪಲ್ ಕಾರ್ಪೊರೇಷನ್‌ಗಳಲ್ಲಿ 12,351 ಪೌರಕಾರ್ಮಿಕರರು ಉದ್ಯೋಗದಲ್ಲಿದ್ದಾರೆ. ಈ ಪೈಕಿ 7088 ಪುರುಷರಿದ್ದಾರೆ, 5263 ಮಹಿಳೆಯರಿದ್ದಾರೆ. ಆದರೆ, ಸಮಿತಿಯು ಕಾರ್ಖಾನೆಗಳಲ್ಲಿ, ರೈಲ್ವೆ ಇಲಾಖೆಯಲ್ಲಿ, ಪೊಲೀಸ್ ಇಲಾಖೆಯಲ್ಲಿ, ಪಟ್ಟಣ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ತಾಲ್ಲೂಕು ಬೋರ್ಡ್‌ಗಳಲ್ಲಿ ಹಾಗೂ ಉತ್ತರ ಕರ್ನಾಟಕದಲ್ಲಿ ಖಾಸಗಿ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವವರ ಅಂಕಿ ಅಂಶಗಳನ್ನು ಪರಿಗಣಿಸಿಲ್ಲ.

ಸಮಿತಿಯು ಹಲವಾರು ಸ್ಥಳೀಯ ಸಂಸ್ಥೆಗಳಿಗೆ ಭೇಟಿ ಕೊಟ್ಟಿದ್ದಾಗ ಅಲ್ಲಿನ ಮೇಲ್ವಿಚಾರಣಾ ಸಿಬ್ಬಂದಿಯು ಸಾಮಾನ್ಯವಾಗಿ ಪೌರಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಪೌರಕಾರ್ಮಿಕರಿಗೆ ತೀರಾ ಹೊಲಸು ಹಾಗೂ ಕೀಳುಮಾತುಗಳಲ್ಲಿ ಬೈಯುತ್ತಿದ್ದುದನ್ನು ಸಮಿತಿಯು ಗಮನಿಸಿದೆ. ಅವರು ಬಳಸಿದ ನಿಂದನೆಯ ಮತ್ತು ಕೆಟ್ಟಮಾತುಗಳನ್ನು ಹೇಗೆ ನೋಡಿದರೂ ಅವು ಮಾನವರಿಗೆ ಆಡಕೂಡದ ಸಲ್ಲದ ಮಟ್ಟದ ಮಾತುಗಳು. ನಾಗರಿಕ ಸಮಾಜದಲ್ಲಿ ಅಂಥದೊಂದು ಪ್ರವೃತ್ತಿಯನ್ನು ಸಹಿಸಲಾಗದು. ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಯು ಪೌರಕಾರ್ಮಿಕರೊಂದಿಗೆ ಮಾತನಾಡುವಾಗ ತಮ್ಮ ಹಾಗೆಯೇ ಇರುವ ಮನುಷ್ಯರೊಂದಿಗೆ ನಾವು ಮಾತಾಡುತ್ತಿದ್ದೇವೆಯೇ ಹೊರತು ನಾವಂದು ಕೊಂಡಂತೆ ಪ್ರಾಣಿಗಳ ಜೊತೆಯಲ್ಲಲ್ಲ ಎಂಬುದನ್ನು ಮರೆತೇ ಬಿಟ್ಟಿರುತ್ತಾರೆ. ಪೌರಕಾರ್ಮಿಕರಿಗೆ ಹೇಸಿಗೆಯ, ನಿಂದನೆಯ ಮತ್ತು ಕೆಟ್ಟ ಮಾತುಗಳನ್ನಾಡುವ ಸಿಬ್ಬಂದಿಯ ಹಾಗೂ ಸಾರ್ವಜನಿಕರ ವಿರುದ್ಧ ಕಠಿಣ ಕ್ರಮತೆಗೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಕಮಿಷನರುಗಳು ಮತ್ತು ಚೀಫ್ ಆಫೀಸರುಗಳು ತಮ್ಮ ಅಧೀನ ಸಿಬ್ಬಂದಿಗೆ ಅವರ ಈ ಬಗೆಯ ಕೆಟ್ಟ ಗುಣಗಳನ್ನು ಬಿಟ್ಟುಬಿಡಬೇಕೆಂದು ಹಾಗೂ ತಮ್ಮ ಬಳಿ ಕೆಲಸ ಮಾಡುತ್ತಿರುವ ಎಲ್ಲ ಪೌರಕಾರ್ಮಿಕರನ್ನು ಸೌಜನ್ಯದಿಂದ ಕಾಣಬೇಕೆಂದು, ಅವರೊಂದಿಗೆ ಗೌರವದಿಂದ ವರ್ತಿಸಬೇಕೆಂದು ಹೇಳಬೇಕು. ಈ ನೀತಿ ಸಂಹಿತೆಯನ್ನು ಪಾಲಿಸಲು ತಪ್ಪುವ ಸಿಬ್ಬಂದಿಯನ್ನು ಈಗಿರುವ ಅಸ್ಪೃಶ್ಯತೆ ನಿವಾರಣೆ ಕಾನೂನಿನ ಪ್ರಕಾರ ಶಿಕ್ಷಿಸಬೇಕು. ಹಾಗೆಯೇ ಪೌರಕಾರ್ಮಿಕರನ್ನು ಸೌಜನ್ಯದಿಂದ ಕಾಣದ, ಪೌರಕಾರ್ಮಿಕರೊಂದಿಗೆ ಗೌರವದಿಂದ ನಡೆದುಕೊಳ್ಳದ ಸಾರ್ವಜನಿಕರಿಗೂ ಇದೇ ಕಾನೂನನ್ನು ಅನ್ವಯಿಸಬೇಕು.

ಮೇಲೆ ಹೇಳಿರುವ ವಿಧಾನಗಳಷ್ಟೇ ಅಲ್ಲ, ಪರಿಶಿಷ್ಟ ಜಾತಿಗಳ ಜನರಲ್ಲಿ ಯಾರು ಪೌರಕಾರ್ಮಿಕರನ್ನು ಅವರ ವೃತ್ತಿಯ ಕಾರಣದಿಂದ ಅಗೌರವದಿಂದ ಕಾಣುತ್ತಾರೋ ಅಂಥವರನ್ನು ಅದೇ 'ಅಸ್ಪೃಶ್ಯತೆ ನಿವಾರಣೆ' ಕಾನೂನಿನ ಪ್ರಕಾರ ಶಿಕ್ಷಿಸಬೇಕೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಸಮಿತಿಯ ಈ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಎರಡು ದೃಷ್ಟಾಂತಗಳನ್ನು ಇಲ್ಲಿ ಹೇಳಬಹುದಾಗಿದೆ. ಶಿರಾ ಪಟ್ಟಣದಲ್ಲಿ ಇತರೆ ಪರಿಶಿಷ್ಟ ಜಾತಿಗಳವರು ಪೌರಕಾರ್ಮಿಕರನ್ನು ಭೇದ ಭಾವದಿಂದ ಕಾಣುತ್ತಿದ್ದಾರೆ. ಮುನ್ಸಿಪಾಲಿಟಿಯು ಪೌರಕಾರ್ಮಿಕರಿಗಾಗಿಯೇ ಕಟ್ಟಿಕೊಟ್ಟಿರುವ ಮನೆಗಳಲ್ಲಿ ಈ ಜನರು ವಾಸ ಮಾಡಲು ಬಿಡುತ್ತಿಲ್ಲ. ಮಂಡ್ಯ ಜಿಲ್ಲೆಯ ಬೆಳ್ಳೂರಿನಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಗಳ ಮಕ್ಕಳಿಗೆ ನರ್ಸರಿ ಮತ್ತು ಪ್ರಾಥಮಿಕ ಶಾಲೆಗಳನ್ನು ಕಟ್ಟಿಸಿದೆ. ಈ ಶಾಲೆಗಳು ಪರಿಶಿಷ್ಟ ಜಾತಿಗಳ ಕಾಲೋನಿಗಳಲ್ಲೇ ಇವೆ. ಈ ಶಾಲೆಗಳಿಗೆ ಪೌರಕಾರ್ಮಿಕರ ಮಕ್ಕಳನ್ನು ಸೇರಿಸಿಕೊಳ್ಳುತ್ತಿಲ್ಲ.

ಶಿರಾದಲ್ಲಿನ ಈ ದೃಷ್ಟಾಂತದ ಬಗ್ಗೆ ಹೇಳುವುದಾದರೆ ಪರಿಶಿಷ್ಟ ಜಾತಿಗಳ ಜನರು ಅಲ್ಲಿನ ಪೌರಕಾರ್ಮಿಕರಿಗೆ ದೌರ್ಜನ್ಯದ ಮತ್ತು ಅಸಮಂಜಸ ಪ್ರವೃತ್ತಿಯನ್ನು ತೋರುತ್ತಿದ್ದಾರೆ. ರಾಜ್ಯದ ಎಲ್ಲ ಕಡೆಯೂ ಇದೇ ಪರಿಸ್ಥಿತಿ ಇರುವುದನ್ನು ಸಮಿತಿಯು ಗಮನಿಸಿದೆ. ತಮ್ಮ ಬಾಂಧವರೇ ಆದ ಪೌರಕಾರ್ಮಿಕರ ಬಗ್ಗೆ ಪ್ರತಿಕೂಲ ಹಾಗೂ ಸ್ನೇಹಭಾವವಿಲ್ಲದ ಪ್ರವೃತ್ತಿಯನ್ನು ತಾಳಿರುವ ಹಾಗೂ ತಪ್ಪು ಮಾಡುತ್ತಿರುವ ಪರಿಶಿಷ್ಟ ಜಾತಿಗಳ ಜನರಿಗೆ ಬುದ್ಧಿ ಹೇಳಲು ಮತ್ತು ತಿಳಿವಳಿಕೆ ಕೊಡಲು ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು

ಸಮಿತಿಯು ಸಲಹೆ ಮಾಡುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳಾಗದಂತೆ ನಿಗಾ ಇಡಲು ಮತ್ತು ನಿಯಂತ್ರಿಸಲು ಹೊಸದೊಂದು ವ್ಯವಸ್ಥೆಯನ್ನು ಅಥವಾ ಏಜೆನ್ಸಿಯನ್ನು ಸ್ಥಾಪಿಸಿದರೆ ಈ ಬಗೆಯ ಲೋಪದೋಷಗಳಾಗದಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆಂದು ಈ ಮೊದಲೇ ಹೇಳಿದ್ದೇವೆ.

ಪೌರಕಾರ್ಮಿಕರು ನಿಧನರಾದರೆ ಇತರೆ ಪರಿಶಿಷ್ಟ ಜಾತಿಗಳವರು ತಮ್ಮ ಸ್ಮಶಾನದಲ್ಲಿ ಪೌರಕಾರ್ಮಿಕರ ಶವವನ್ನು ಹೂಳಲು ಬಿಡುತ್ತಿಲ್ಲ ಎಂದು ಹೇಳಲು ವ್ಯಥೆಯಾಗುತ್ತದೆ. ಪೌರಕಾರ್ಮಿಕರಿಗಾಗಿಯೇ ಸ್ಮಶಾನಕ್ಕೆ ಜಾಗವನ್ನು ನಿಗದಿಪಡಿಸಬೇಕೆಂದು ಸರ್ಕಾರವು ಆದೇಶಗಳನ್ನು ಹೊರಡಿಸಿದ್ದರೂ ಈವರೆಗೂ ಯಾವ ಸ್ಥಳೀಯ ಸಂಸ್ಥೆಯೂ ಅಥವಾ ಕಾರ್ಪೊರೇಷನ್ನೂ ಹಾಗೆ ಮಾಡಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗಿದೆ.

ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಪೌರಕಾರ್ಮಿಕರಿಗೆ ಆಪದ್ವಾಹನ (ಆಂಬುಲೆನ್ಸ್) ಮತ್ತು ಶವವಾಹಕ ವ್ಯಾನ್‌ಗಳು ತಕ್ಷಣಕ್ಕೆ ದೊರಕುವುದಿಲ್ಲ. ಈ ವಾಹನಗಳನ್ನು ಪಡೆದುಕೊಳ್ಳುವುದಕ್ಕೆ ಹಣಕ್ಕೆ ತಗಾದೆ ಮಾಡುವುದರಿಂದ ಅಷ್ಟೊಂದು ಹಣವನ್ನು ಕೊಡಲು ಬೆಂಗಳೂರಿನ ಪೌರಕಾರ್ಮಿಕರಿಗೆ ಕಷ್ಟವಾಗುತ್ತಿದೆ. ಆದ್ದರಿಂದ, ಆಪದ್ವಾಹನ ಅಥವಾ ಶವ ವಾಹಕ ವ್ಯಾನ್‌ಗಳನ್ನು ಪೌರಕಾರ್ಮಿಕರಿಗೆ ಉಚಿತವಾಗಿ ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ಈ ಬಗೆಯ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ರಾಜ್ಯದಲ್ಲಿರುವ ಪೌರಕಾರ್ಮಿಕರ ಸ್ಥಿತಿಯಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಅವರ ಬದುಕಿನಲ್ಲಿ ಯಾವುದೇ ಗಮನಾರ್ಹ ಸುಧಾರಣೆಗಳಾಗುವ ಸಾಧ್ಯತೆ ಇಲ್ಲವೆಂದು ಕಾಣುತ್ತದೆ.

## ಅಧ್ಯಾಯ V

### ಮಲ ಸಾಗಣೆ – ವಿಧಾನ

ಹಳೆಯ ಮೈಸೂರಿನಲ್ಲಿ ಮಲವನ್ನು ಸಾಗಿಸುವ ಮತ್ತು ವಿಲೆ ಮಾಡುವ ವಿಧಾನವು ತದನತರ ಬಂದ ಇತರ ವಿಧಾನಗಳಿಗೆ ಹೋಲಿಸಿದಾಗ ಒಂದು ಉತ್ತಮ ವಿಧಾನವಾಗಿತ್ತು. ಪ್ರತಿಯೊಂದು ಮನೆಗೂ ದೊಡ್ಡದೊಂದು ಕಾಂಪೌಂಡ್ ಇರುತ್ತಿತ್ತು. ಅದರ ಹಿಂದಿನ ಮೂಲೆಯಲ್ಲಿ ಆಳಗುಂಡಿಯನ್ನುಳ್ಳ ಶೌಚದ ಕೋಣೆ ಇರುತ್ತಿತ್ತು. ಈ ಗುಂಡಿಯು ಮನೆಯಿಂದ ದೂರ ಇರುತ್ತಿದ್ದ ಕಾರಣ ಅದರಿಂದ ಬರುವ ದುರ್ವಾಸನೆ ಮನೆಯಲ್ಲಿದ್ದವರಿಗೆ ಅಷ್ಟೊಂದು ಗೊತ್ತಾಗುತ್ತಿರಲಿಲ್ಲ. ಆ ಗುಂಡಿಯಲ್ಲಿ ಮಲ ಸಂಗ್ರಹವಾಗುತ್ತಿತ್ತು. ಈ ಮಲ ತುಂಬಾ ಸಾರಜನಕ ಯುಕ್ತ ಗೊಬ್ಬರವಾಗಿ ಪರಿವರ್ತಿತವಾಗುತ್ತದೆಯಾದ್ದರಿಂದ ಅಕ್ಕಪಕ್ಕದ ಸ್ಥಳಗಳಲ್ಲಿರುವ ರೈತರು ಮೂರು ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಗಾಡಿಗಳಲ್ಲಿ ಬಂದು ಈ ಗೊಬ್ಬರವನ್ನು ತೆಗೆದುಕೊಂಡು ಹೋಗುತ್ತಿದ್ದರು. ಈ ವಿಧಾನ ಹಳೆಯ ಮೈಸೂರು ರಾಜ್ಯದ ಎಲ್ಲ ಕಡೆಗಳಲ್ಲೂ ಇದ್ದುದರಿಂದ ಸ್ಥಳೀಯ ಸಂಸ್ಥೆಗಳಿಗೆ, ಜಾಡಮಾಲಿಗಳ ಪ್ರತ್ಯೇಕ ಕೇಡರನ್ನು ನೇಮಿಸಿಕೊಳ್ಳುವ ಅಗತ್ಯ ಬಂದಿರಲಿಲ್ಲ. ನಿಜ ಹೇಳಬೇಕೆಂದರೆ, ಆಗ ಮಲ ಸಾಗಣೆ ವಿಧಾನ ಹೀಗಿತ್ತಾದ್ದರಿಂದ ಮಲವನ್ನು ತಲೆ ಮೇಲೆ ಹೊತ್ತು ಸಾಗಿಸುವ ಅಥವಾ ಇನ್ನಾವುದೇ ವಿಧಾನ ಇರಲೇಇಲ್ಲ. ಆದರೆ, ಮೈಸೂರು, ಬೆಂಗಳೂರು, ಕೆಜಿಎಫ್ ಮುಂತಾದ ಕೆಲವೊಂದು ದೊಡ್ಡ ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆಲ್ಲ ಮತ್ತು ಇಂಗಿಕೆ ಗುಂಡಿಗಳನ್ನು (ಸೋಕ್ ಪಿಟ್) ನಿರ್ಮಿಸಲು ಜಾಗ ಲಭ್ಯವಿರದಿದ್ದುದರಿಂದ ಜಾಡಮಾಲಿ ಸಮಸ್ಯೆ ಶುರು ಆಯಿತು. ಹೀಗಾಗಿ ಮಲವನ್ನು ಸಾಗಿಸಲು ಸ್ಥಳೀಯ ಸಂಸ್ಥೆಗಳು ಜಾಡಮಾಲಿಗಳನ್ನು ನಿಯೋಜಿಸಿಕೊಳ್ಳಲೇಬೇಕಾಯಿತು. ಜಾಡಮಾಲಿ ಕೆಲಸದಲ್ಲಿ ಎರಡು ವಿಧಗಳಿವೆ, ಎಂದರೆ ಹಸಿ ಮಲ ಸಾಗಣೆ ಮತ್ತು ಒಣ ಮಲ ಸಾಗಣೆ ವಿಧಾನಗಳಿವೆಂಬುದನ್ನು ಇಲ್ಲಿ ಹೇಳಲೇಬೇಕಾಗಿದೆ.

ಸಾಮಾನ್ಯವಾಗಿ ಹೇಳುವುದಾದರೆ, ಕಸಗುಡಿಸುವವರು ಜಾಡಮಾಲಿ ಕೆಲಸವನ್ನು ಮಾಡುತ್ತಿದ್ದಾರೆ. ಹೇಗೆಂದರೆ, ದಾರಿಗಳ ಕಸವನ್ನು ಗುಡಿಸುವಾಗ, ಗಟಾರಗಳನ್ನು ಸ್ವಚ್ಛ ಮಾಡುವಾಗ, ಪಾದಚಾರಿ ದಾರಿಗಳಲ್ಲಿ, ಗಲ್ಲಿ, ಓಣಿಗಳಲ್ಲಿ, ಮುಕ್ತ ದಾರಿಗಳಲ್ಲಿ ಮತ್ತು ಗಟಾರಗಳಲ್ಲಿ ಇರುವ ಒಣ ಮಲವನ್ನು ತೆಗೆದು ಸಾಗಿಸುತ್ತಾರೆ. ಆದರೆ, ನಿಯತ ಜಾಡಮಾಲಿಗಳು ಆಳಗುಂಡಿಗಳಿಂದ ಮಲವನ್ನು ಸಹಜ ಹಾಗೂ ಅನಾರೋಗ್ಯಕರ ವಿಧಾನಗಳಿಂದ ಹೊರ ತೆಗೆದು ಸಾಗಿಸುತ್ತಾರೆ. ಈ ವಿಧಾನವನ್ನು ಬಿಡಿಸಿ ಹೇಳುವುದಾದರೆ ಸುತ್ತಲೂ ಎಲೆಗಳನ್ನು ಹಾಕಿ ಆವರಿಸಿರುವ ಮಂಕರಿಗಳನ್ನು ಪುರುಷ ಅಥವಾ ಮಹಿಳೆ ಜಾಡಮಾಲಿಯು ಆಳಗುಂಡಿಗಳ ಬಳಿಗೆ ತೆಗೆದುಕೊಂಡು ಹೋಗುತ್ತಾರೆ. ತವರದ ತಗಡಿನ ಸಣ್ಣ ಚೂರಿನಿಂದ ಮಲವನ್ನು ತೆಗೆಯುತ್ತಾರೆ. ಈ ರೀತಿಯಲ್ಲಿ ಮಲವನ್ನು ಸಂಗ್ರಹಿಸಿದ ನಂತರ ಅದನ್ನು ಈ ಜನರು ತಲೆ ಮೇಲೆ ಹೊತ್ತು ಒಯ್ಯುತ್ತಾರೆ, ಒಯ್ಯುತ್ತಿರುವಾಗ ಮಲದ ಜಿನುಗು ತೀರಾ ಹೇವರಿಕೆಯಾಗುವಂತೆ ಈ ಜಾಡಮಾಲಿಗಳ ಮುಖದ ಹಾಗೂ ಕುತ್ತಿಗೆ ಮೇಲೆಲ್ಲ ಸೋರುತ್ತಿರುತ್ತದೆ.

ಹೊಸ ಕರ್ನಾಟಕದ ರಾಯಚೂರು, ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾವಿ ಮತ್ತು ಧಾರವಾಡಗಳಲ್ಲಿ ಮಲ ಸಾಗಿಸುವ ವಿಧಾನ ಸರಿಸುಮಾರು ಇದೇ ರೀತಿಯದು. ಆದರೆ, ಒಂದು ವ್ಯತ್ಯಾಸವಿದೆ, ಅದೇನೆಂದರೆ ಹಳೆಯ ಮೈಸೂರಿನಲ್ಲಿ ಜಾಡಮಾಲಿಗಳು ಸ್ಥಳೀಯ ಸಂಸ್ಥೆಗಳಿಂದ ನೇಮಕಗೊಂಡವರು. ಹೊಸ ಕರ್ನಾಟಕದಲ್ಲಿ ಬಹಳಷ್ಟು ಜಾಡಮಾಲಿಗಳು ಅಲ್ಲಿನ ಜನರಿಂದ ಖಾಸಗಿಯಾಗಿ ನಿಯೋಜಿತರಾದವರು.

1973ರಲ್ಲಿ ಎಲ್ಲ ಕಡೆಯೂ 'ಮಾನವ ಘನತೆ ವರ್ಷ' ವನ್ನಾಗಿ ಆಚರಿಸಲಾಯಿತು. ಮಲವನ್ನು ಸಾಗಿಸುವ ಓಬಿರಾಯನ ಕಾಲದ ಮಲಿನ ಹಾಗೂ ವಿಕೃತ ವಿಧಾನವನ್ನು ತೊಲಗಿಸಲು ಕರ್ನಾಟಕ ಸರ್ಕಾರವು ತೀರಾ ಉತ್ಸುಕವಾಗಿದ್ದುದರಿಂದ ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲ ಕಡೆ ಮಲ ಸಾಗಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿತು. (ಭಾಗ 3 ನೋಡಿ). ಇಡೀ ಹಳೆಯ ಮೈಸೂರಿನಲ್ಲಿ ಈ ಆದೇಶವು ಕಟ್ಟುನಿಟ್ಟಾಗಿ ಜಾರಿಗೆ ಬಂದಿತು. ಆದರೆ ಉತ್ತರ ಕರ್ನಾಟಕದಲ್ಲಿ ಹಾಗಾಗಲಿಲ್ಲ. ಒಂದುಗೂಡಿದ ಭಾಗಗಳಲ್ಲಿ ಸರ್ಕಾರದ ಆದೇಶ ವಿಫಲವಾಗಲು ವಿಶೇಷ ಕಾರಣವಿದೆ. ಅದರಲ್ಲೂ, ವಿಫಲತೆಗೆ ನಾಲ್ಕು ಕಾರಣಗಳಿವೆ.

ಮೊದಲನೆಯದು ಜಾಡಮಾಲಿಗಳು ಮುನಿಸಿಪಾಲಿಟಿಗಳ ನೌಕರರಾಗಿರಲಿಲ್ಲ. ಎರಡನೆಯದು, ಈ ಜನರು ಯಾವ ಸ್ಥಳಗಳಲ್ಲಿನ ಸ್ಥಳೀಯ ಮಂಡಳಿಗಳಲ್ಲಿ ವಾಸ್ತವವಾಗಿ ಉದ್ಯೋಗಿಗಳಾಗಿದ್ದರೋ ಆ ಕೆಲವೊಂದು ಸ್ಥಳಗಳಲ್ಲಿನ ನಾಗರಿಕರೇ ಜಾಡಮಾಲಿ ಸೇವೆಯನ್ನು ನಿಷೇಧಿಸಿದ್ದರ ವಿರುದ್ಧ ಪ್ರತಿಭಟಿಸಿದರು ಹಾಗೂ ಸದರಿ ಸರ್ಕಾರದ ಆದೇಶವನ್ನು ಮುನ್ಸಿಪಾಲಿಟಿಗಳು ಜಾರಿಗೆ ತರದಂತೆ ನ್ಯಾಯಾಲಯದಿಂದ ನಿರ್ಬಂಧಕ ಆದೇಶವನ್ನು ತಂದರು. ಮೂರನೆಯದು, ಈ ವೃತ್ತಿಯನ್ನು ತೊರೆಯಲು ಖಾಸಗಿ ಜಾಡಮಾಲಿಗಳೇ ಇಚ್ಛಿಸಲಿಲ್ಲ. ಜಾಡಮಾಲಿ ಪದ್ಧತಿಯನ್ನು ರದ್ದು ಮಾಡುವ ಸರ್ಕಾರದ ಆದೇಶವನ್ನು ಅನೂರ್ಜಿತಗೊಳಿಸಲು ತಡೆಯಾಜ್ಞೆ ಮಾಡುವಂತೆ ಈ ಜನರು ನ್ಯಾಯಾಲಯದ ಮೊರೆ ಹೋದರು. ನಾಲ್ಕನೆಯದು ಸರ್ಕಾರದ ಆದೇಶದಲ್ಲೇ ಲೋಪದೋಷವಿತ್ತು. ಅದೇನೆಂದರೆ ಮಲವನ್ನು ಸಾಗಿಸಲು ಜಾಡಮಾಲಿಗಳನ್ನು ನಿಯೋಜಿಸಿಕೊಳ್ಳುವವರನ್ನು ಶಿಕ್ಷಿಸಲು ಆ ಸರ್ಕಾರಿ ಆದೇಶದಲ್ಲಿ ಯಾವುದೇ ನಿಬಂಧನೆ ಇರಲಿಲ್ಲ.

ಮನೆ ಮಾಲೀಕನು ತನ್ನ ಶೌಚಾಲಯವನ್ನು ಫ್ಲಷ್‌ಔಟ್ ಬಗೆಯದನ್ನಾಗಿ ಪರಿವರ್ತನೆ ಮಾಡಿಕೊಳ್ಳಲು ಆಗದಿದ್ದರೆ, ಮುನಿಸಿಪಾಲಿಟಿಯು ಈ ಕೆಲಸವನ್ನು ಮಾಡಿಸಬೇಕು ಮತ್ತು ಅದಕ್ಕೆ ತಗುಲಿದ ಖರ್ಚುವೆಚ್ಚವನ್ನು ಕಂತುಗಳಲ್ಲಿ ಮನೆ–ಧಾರಕನಿಂದ ವಸೂಲಿ ಮಾಡಿಕೊಳ್ಳಬೇಕೆಂದು ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಇಡೀ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಒಂದೇ ಒಂದು ಮುನಿಸಿಪಾಲಿಟಿಯು ಈ ಸರ್ಕಾರಿ ಆದೇಶವನ್ನು ಕಾರ್ಯರೂಪಕ್ಕೆ ತರಲಿಲ್ಲ ಎಂಬುದನ್ನು ಸಮಿತಿಯು ವಿಷಾದದಿಂದ ಹೇಳಬೇಕಾಗಿದೆ. ಈ ಕೆಲಸಕ್ಕಾಗಿ ಸರ್ಕಾರವು ಅನುದಾನಗಳ ರೂಪದಲ್ಲಿ ನಿರ್ದಿಷ್ಟ ಹಣವನ್ನು ಮಂಜೂರು ಮಾಡಿದ್ದರೂ, ಈ ಹಣವನ್ನು ಬೇರೆ ಇತರೆ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ ಅಥವಾ ಖರ್ಚು ಮಾಡಿಯೇ ಇಲ್ಲ. ಹೀಗಾಗಿ ಸರ್ಕಾರದ ಉದ್ದೇಶವೇ ವಿಫಲವಾಗಿದೆ. ಈ ಪ್ರಮುಖ ಕಾರ್ಯವನ್ನು ಯಾವ ಕಾರಣಕ್ಕೂ ಮುಂದೂಡಬಾರದೆಂದು ಹಳೆಯ ಶೌಚಾಲಯಗಳನ್ನು ನಿರ್ದಿಷ್ಟ ಕಾಲಾವಧಿಯೊಳಗಾಗಿ ಫ್ಲಷ್‌ಔಟ್ ಬಗೆಯವುಗಳನ್ನಾಗಿ ಪರಿವರ್ತಿಸಬೇಕೆಂದು, ತಪ್ಪಿದರೆ ಶಿಸ್ತು ಕ್ರಮಗಳಿಗೆ ಗುರಿಯಾಗಬೇಕಾಗುತ್ತದೆಂದು, ಲೋಪದೋಷಗಳನ್ನೆಸಗಿದ್ದ ಸ್ಥಳೀಯ ಸಂಸ್ಥೆಗಳಿಗೆ ನಿರ್ದಿಷ್ಟ ನಿರ್ದೇಶನಗಳನ್ನು ಕೊಡಬೇಕೆಂದು ಸಮಿತಿಯು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತದೆ.

ಒಂದುವೇಳೆ, ಈ ಸರ್ಕಾರಿ ಆದೇಶವನ್ನು ಜಾರಿಗೆ ತಂದರೆ ಖಾಸಗಿ ಜಾಡಮಾಲಿಗಳು ಅವರ ಜೀವನೋಪಾಯವನ್ನು ಖಂಡಿತವಾಗಿಯೂ ಕಳೆದುಕೊಳ್ಳುತ್ತಾರೆ. ಈ ಕಾರಣಕ್ಕಾಗಿಯೇ ಈ ಜನರು ಈ ಕೆಲಸ ಆಗದಂತೆ ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಅವರಿಗೆ ಬದಲಿ ಜೀವನೋಪಾಯವನ್ನು ಒದಗಿಸಿದರೆ, ಈ ಸರ್ಕಾರಿ ಆದೇಶವನ್ನು ಕಾರ್ಯರೂಪಕ್ಕೆ ತರಲು ಸರ್ಕಾರದೊಂದಿಗೆ ಮನಃಪೂರ್ವಕವಾಗಿ ಸಹಕಾರ ನೀಡುತ್ತಾರೆಂಬುದರಲ್ಲಿ ಯಾವ ಅನುಮಾನಕ್ಕೂ ಆಸ್ಪದ ಇರುವುದಿಲ್ಲ. ಸರ್ಕಾರದ ಇಲಾಖೆಗಳಲ್ಲೊ, ಖಾಸಗಿ ಸಂಸ್ಥೆಗಳಲ್ಲೋ, ಕಾರ್ಖಾನೆಗಳಲ್ಲೋ, ಅರೆ ಸರ್ಕಾರಿ ಏಜೆನ್ಸಿಗಳಲ್ಲೊ ಈ ಜನರಿಗೆ ಉದ್ಯೋಗ ಒದಗಿಸುವುದು ಆವಶ್ಯಕ. ಏಕೆಂದರೆ, ಅವರು ಬದುಕನ್ನು ಸಾಗಿಸಲು ಬದಲಿ ಉದ್ಯೋಗಗಳನ್ನು ಒದಗಿಸಲೇಬೇಕಾಗುತ್ತದೆ. ಇನ್ನು ಮುಂದೆ, ಆಯಾಯ ಇಲಾಖೆಗಳಲ್ಲಿ, ಸಂಸ್ಥೆಗಳಲ್ಲಿ, ಏಜೆನ್ಸಿಗಳಲ್ಲಿ ಹಲವಾರು ಕೇಡರುಗಳಿಗೆ ನೇಮಕ ಮಾಡಿಕೊಳ್ಳುವಾಗ ಈ ಖಾಸಗಿ ಜಾಡಮಾಲಿಗಳಿಗೆ ಮೊದಲ ಆದ್ಯತೆ ಕೊಡುವುದು ಸಾಧ್ಯವಾಗುವಂತೆ ನೇಮಕಾತಿ ನೀತಿಯಲ್ಲಿ ಮಾಡಿಕೊಳ್ಳಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಹೀಗೆ, ಈ ಖಾಸಗಿ ಜಾಡಮಾಲಿಗಳಿಗೆ ಸೂಕ್ತ ಉದ್ಯೋಗ ದೊರಕಿರುವುದನ್ನು ಸಮಾಜ ಕಲ್ಯಾಣ ಇಲಾಖೆಯು ಸುನಿಶ್ಚಿತಪಡಿಸಿಕೊಳ್ಳುವುದು ಕಡ್ಡಾಯವಾಗಬೇಕು ಎಂದು ಸಮಿತಿಯು ಬಲವಾಗಿ ಶಿಫಾರಸು ಮಾಡುತ್ತದೆ.

ಸಾರ್ವಜನಿಕ ಆರೋಗ್ಯದ ನಿರ್ವಹಣೆ ನಾಗರಿಕರ ಜವಾಬ್ದಾರಿ ಕೂಡ. ಸಾರ್ವಜನಿಕರಿಂದ ಮನಃಪೂರ್ವಕ ಸಹಕಾರ ಇಲ್ಲದೆಯೇ ಸ್ಥಳೀಯ ಸಂಸ್ಥೆಗಳು ಮಾತ್ರವೇ ಯಾವುದೇ ಕಾರ್ಯಕ್ರಮವನ್ನು ಕೈಗೊಳ್ಳಲಾರವು. ಜನರು ಸಂಚರಿಸುವ ದಾರಿಯಲ್ಲೇ ಮಕ್ಕಳನ್ನು ಕಕ್ಕ ಮಾಡಿಸುವ ಗಲೀಜು ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕು. ಸಾರ್ವಜನಿಕ ಸ್ಥಳಗಳನ್ನು ದೇಹ ಬಾಧೆ ಕಳೆದುಕೊಳ್ಳಲು ಬಳಸಿಕೊಂಡರೆ ಪ್ರತಿಯೊಂದು ಬಗೆಯ ಸ್ಥಳಿಕ ರೋಗ ಹಾಗೂ ಸಾಂಕ್ರಾಮಿಕ ರೋಗ ಹರಡುತ್ತವೆ ಎಂಬುದನ್ನು ಜನರು ತಿಳಿಯಬೇಕು. ಹಾಗೆ ಮಾಡದಂತೆ ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕು ಹಾಗೆ ಮಾಡಿಸುವುದನ್ನು 50/– ರೂಪಾಯಿವರೆಗೆ ದಂಡ

ವಿಧಿಸಬಹುದಾದ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಬೇಕು ಅಥವಾ ಅಂತಹ ತಪ್ಪಿಗೆ ಒಂದು ವಾರದವರೆಗೆ ಸಾದಾ ಜೈಲು ಶಿಕ್ಷೆಯನ್ನು ವಿಧಿಸಬೇಕು. ತಮ್ಮತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳ ಒಳಗೆ ಈ ಕಾನೂನನ್ನು ಜಾರಿಗೆ ತರಲು ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೊಡಬೇಕು. ಇಂಥದೊಂದು ನಿರ್ಬಂಧಕ ಶಿಕ್ಷೆಯನ್ನು ವಿಧಿಸದಿದ್ದರೆ ನಾಗರಿಕ ಪ್ರಜ್ಞೆಯ ಯಾವುದೇ ಭಾವನೆ ಎಳ್ಳಷ್ಟು ಇಲ್ಲದ ನಮ್ಮ ಜನರು ಈ ಬಗ್ಗೆ ಆಸಕ್ತಿ ತೋರುವುದಿಲ್ಲ. ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದಿಲ್ಲ.

ಈ ಶತಮಾನದ ನಲವತ್ತರ ದಶಕದಲ್ಲಿ ಬೆಂಗಳೂರು ಕಾರ್ಪೊರೇಷನ್ ಪ್ರದೇಶದ ಎಲ್ಲೆಗಳಲ್ಲಿ, ಒಂದು ಕಡೆ ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯತೆ ಅಥವಾ ಉದಾಸೀನತೆಯಿಂದ, ಇನ್ನೊಂದು ಕಡೆ ಸಾರ್ವಜನಿಕರ ತೀರಾ ಅಸಡ್ಡೆಯಿಂದ ಏನಾಯಿತೆಂಬುದನ್ನು ಸಮಿತಿಯು ಪುನಃ ಹೇಳಬಯಸುತ್ತದೆ. ಬೆಂಗಳೂರು ನಗರ ಕಾರ್ಪೊರೇಷನ್ ಪ್ರದೇಶದಲ್ಲಿ ಯಾರಾದರೂ ತಮ್ಮ ಮಕ್ಕಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಕ್ಕ ಮಾಡಲು ಬಿಟ್ಟರೆ, ಪ್ರತಿಯೊಂದು ಸಲಕ್ಕೂ 5 ರೂಪಾಯಿ ದಂಡ ವಿಧಿಸುತ್ತದೆಂಬಕಟ್ಟುನಿಟ್ಟಿನ ಆದೇಶ ಇತ್ತು. ಕೆಲವು ಕಾಲದವರೆಗೆ ಈ ಆದೇಶದ ಪಾಲನೆ ಚೆನ್ನಾಗಿಯೇ ಆಯಿತು. ಆದರೆ, ಕೆಲ ಕಾಲಾನಂತರ, ಇದು ನಿಂತುಹೋಯಿತು. ಕಾರಣಗಳೇನೆಂಬುದನ್ನು ಸುಲಭವಾಗಿ ಕಂಡುಕೊಳ್ಳಲಾಗಲಿಲ್ಲ. ಜನರು, ಮೊದಲಿನಂತೆಯೇ ಸಾರ್ವಜನಿಕ ಸ್ಥಳಗಳಲ್ಲಿ ಕಕ್ಕ ಮಾಡಿಸುವ ಅಭ್ಯಾಸಕ್ಕೆ ಮರಳಿದರು. ಸಮಿತಿಯು ಹೊಸ ವಿಧಾನಗಳಿಗೆ ಈಗ ಶಿಫಾರಸು ಮಾಡಿರುವುದರಿಂದ ಆ ಕೆಟ್ಟ ಅಭ್ಯಾಸ ಮರುಕಳಿಸಕೂಡದೆಂದು ಸಮಿತಿಯು ಎಚ್ಚರಿಕೆ ನೀಡುತ್ತದೆ.

ಗಟಾರಗಳನ್ನು, ಸಾರ್ವಜನಿಕ ಶೌಚಾಲಯಗಳನ್ನು, ಆಳುಗುಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ನಿಯೋಜಿತರಾದ ಸ್ವೀಪರುಗಳು ತೀವ್ರತರ ಆರೋಗ್ಯದ ಅಪಾಯಗಳಿಗೆ ಸಿಲುಕುತ್ತಾರೆ. ಅವರು ಕೆಲಸ ಮಾಡುವಾಗ ಮಾನವ ಮಲ ಮತ್ತು ಇತರ ಹೊಲಸು ಕಸ ಕೈಗೆ, ಮೈಗೆ ತಾಕುವುದೋ, ಅಂಟಿಕೊಳ್ಳುವುದೋ, ಮೆತ್ತಿ ಕೊಳ್ಳುವುದೋ ಆದಾಗ ಅಪಾಯಕಾರಿ ರೋಗಕಾರಕ ಜೀವಿಗಳು ಮತ್ತು ರೋಗವಾಹಕ ರೋಗಾಣುಗಳು ಬೆಳೆಯುತ್ತವೆ. ಬಯಲು ಜಾಡಮಾಲಿ ಕೆಲಸ ಮಾಡುವಾಗ ತಲೆ ಮೇಲೆ ಮಲ ಹೊತ್ತು ಸಾಗಿಸುವಾಗಲೂ ಸ್ವೀಪರುಗಳು ಅಷ್ಟೇ ಅಪಾಯಕ್ಕೆ ಸಿಲುಕುತ್ತಾರೆ. ಮೇಲೆ ಹೇಳಿರುವ ಬಗೆಯ ಕೆಲಸಗಳನ್ನು ಮಾಡುವಾಗ ಈ ಜನರು ಮಾರಣಾಂತಿಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಈ ಜನರಿಗೆ ಸೂಕ್ತವಾದ ರಕ್ಷಕ ಬಟ್ಟೆ ಬರೆಗಳನ್ನು, ಪಾದರಕ್ಷೆಗಳ್ನು ಒದಗಿಸಬೇಕೆಂದು ಈ ಸಮಿತಿಯು ಈ ವರದಿಯಲ್ಲಿ ಒಂದು ಕಡೆ ಶಿಫಾರಸು ಮಾಡಿದೆ. ಆಯಾಯ ಸ್ಥಳೀಯ ಸಂಸ್ಥೆಗಳು ಉಚಿತ ವೈದ್ಯಕೀಯ ನೆರವು ನೀಡುವುದಷ್ಟೇ ಅಲ್ಲ, ಪ್ರತಿ ಮೂರು ತಿಂಗಳಿಗೆ ಒಂದು ಸಲ ಈ ಕಾರ್ಮಿಕರನ್ನು ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸುವುದು ಅವಶ್ಯಕ. ಈ ಬಗೆಯ ಕೆಲಸದಲ್ಲಿ ತೊಡಗಿರುವ ಪೌರಕಾರ್ಮಿಕರಿಗೆ ಅವರ ಮೂಲ ವೇತನದ ಶೇ.25 ರಷ್ಟಕ್ಕೆ ಸಮನಾದ ಹೆಚ್ಚುವರಿ ವಿಶೇಷ ಭತ್ಯೆಯನ್ನು ಕೊಡಬೇಕೆಂದು ಮತ್ತು ಅವರುಗಳ ಆರೋಗ್ಯದಲ್ಲಿ ಚೇತರಿಕೆ ಉಂಟಾಗಲು ಅವರುಗಳ ಕೆಲಸವನ್ನು ಮೂರು ತಿಂಗಳಿಗೆ ಒಮ್ಮೆ ಬದಲಾಯಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

# ಅಧ್ಯಾಯ VI

## ಸೇವಾ ನಿಬಂಧನೆಗಳು

1956ರ ನವೆಂಬರ್ 1 ರಂದು ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳನ್ನು ಒಂದುಗೂಡಿಸಿ ಹೊಸ ಕರ್ನಾಟಕ ರಾಜ್ಯವನ್ನು ರಚಿಸಲಾಯಿತು. ಐದು ವಿವಿಧ ಪ್ರಾಂತ್ಯಗಳು ವಿಲೀನಗೊಂಡವು. ಹೀಗಾಗಿ ಸಹಜವಾಗಿಯೇ ಈ ಪ್ರಾಂತ್ಯಗಳಲ್ಲಿ ಬೇರೆ ಬೇರೆ ರೀತಿಯ ಸಿವಿಲ್ ಸೇವಾ ನಿಯಮಗಳಿದ್ದವು. ಏಕೀಕರಣವಾದ ಮೇಲೂ ಈ ವಿವಿಧ ಪ್ರದೇಶಗಳು ಏಕೀಕರಣದ ಕಾಲದಲ್ಲಿದ್ದ ಚಾಲ್ತಿಯಲ್ಲಿದ್ದ ನಿಯಮಗಳನ್ನು ಅನುಸರಿಸುತ್ತಿದ್ದವು. ಉದಾಹರಣೆಗೆ ಹೇಳುವುದಾದರೆ ಬಾಂಬೆ ಕರ್ನಾಟಕ ಪ್ರದೇಶದಲ್ಲಿ

ಚಿತ್ರ

**ಜಾಡಮಾಲಿಗಳು ಶೌಚಾಲಯಗಳಿಂದ ಮಾನವ ಮಲವನ್ನು ಸಣ್ಣ ಟಿನ್ ಹಾಳೆಯಿಂದ ಕೆರೆದು ಸಂಗ್ರಹಿಸಿ ಬಕೆಟ್‌ಗಳಿಗೆ ಅಥವಾ ಬ್ಯಾಸ್ಕೆಟ್‌ಗಳಿಗೆ ಹಾಕುತ್ತಿರುವುದು.**

ಬಾಂಬೆ ಮುನಿಸಿಪಾಲಿಟಿ ಕಾಯಿದೆಯನ್ನು ಅನುಸರಿಸಲಾಗುತ್ತಿತ್ತು. ಹಾಗೆಯೇ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೈದರಾಬಾದ್ ಸಿವಿಲ್ ಸೇವಾ ನಿಯಮಗಳನ್ನು ಅನುಸರಿಸಲಾಗುತ್ತಿತ್ತು. ದಕ್ಷಿಣ ಕನ್ನಡ ಪ್ರಾಂತ್ಯದಲ್ಲಿ ಮದ್ರಾಸ್ ಸಿವಿಲ್ ಸೇವಾ ನಿಯಮಗಳನ್ನು ಅನುಸರಿಸಲಾಗುತ್ತಿತ್ತು. ಉತ್ತರ ಕನ್ನಡ ಪ್ರಾಂತ್ಯದಲ್ಲಿ, ಅದು ಬಾಂಬೆ ಪ್ರಾಂತ್ಯಕ್ಕೆ ಸಮೀಪವಿದ್ದುದರಿಂದ ಬಾಂಬೆ ರಾಜ್ಯ ಸಿವಿಲ್ ಸೇವಾನಿಯಮಗಳನ್ನು ಅನುಸರಿಸಲಾಗುತ್ತಿತ್ತು. ಇದರಿಂದ, ಹೊಸ ಕರ್ನಾಟಕ ರಾಜ್ಯದಲ್ಲಿ ಕಸಗುಡಿಸುವವರ ಮತ್ತು ಜಾಡಮಾಲಿಗಳ ಕೆಲಸಕ್ಕೆ ಮತ್ತು ಸೇವಾ ನಿಬಂಧನೆಗಳಿಗೆ ಏಕರೂಪದ ನಿಯಮಗಳನ್ನು ಅನುಸರಿಸುವುದು ಸಾಧ್ಯವಾಗಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆದರೂ, ಕರ್ನಾಟಕ ರಾಜ್ಯದಲ್ಲಿ ಈಗಿರುವ ಜನಪ್ರಿಯ ಸರ್ಕಾರವು ಮುನ್ಸಿಪಲ್ ಸೇವಾ ನಿಯಮಗಳಿಗೆ ಸಂಬಂಧಿಸಿದ ಸಾಮಾನ್ಯ ಮತ್ತು ಏಕರೂಪದ ಕಾಯಿದೆಯನ್ನು ರೂಪಿಸಿದೆ. ಅದು, ರಾಜ್ಯದಲ್ಲಿರುವ ಎಲ್ಲ ಮುನಿಸಿಪಲ್ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಈ ಕಾಯಿದೆಯು ಪರಾಮರ್ಶೆಯ ಹಂತದಲ್ಲಿದೆ. ಇಷ್ಟರಲ್ಲೇ ಶಾಸನವಾಗಲಿದೆ. ಈ ಹೊಸ ಕಾಯಿದೆಯು ಜಾರಿಗೆ ಬಂದರೆ ಈ ವಿಷಯವನ್ನು ಸಮಾಧಾನದ ರೀತಿಯಲ್ಲಿ ನಿಭಾಯಿಸಲು ಯಾವ ಕಷ್ಟವೂ ಇರಲಾರದು. ಅದಾದ ಮೇಲೂ ರಾಜ್ಯದಲ್ಲಿರುವ

ಹಲವಾರು ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲಾಗುತ್ತಿದೆ ಎಂಬುದನ್ನು ನಿಕಟವಾಗಿ ಗಮನಿಸುತ್ತಿರಬೇಕಾಗುತ್ತದೆ.

ಶ್ರೀ ದೇವರಾಜ ಅರಸರ ನೇತೃತ್ವದ ಜನಪ್ರಿಯ ಸರ್ಕಾರವು, ಈ ಸರ್ಕಾರದಲ್ಲಿ ಶ್ರೀ ಬಿ.ಬಸವಲಿಂಗಪ್ಪನವರು ಪೌರಾಡಳಿತ ಖಾತೆಯ ಮಂತ್ರಿಯಾಗಿದ್ದಾರೆ, ಮುನಿಸಿಪಲ್ ನೌಕರರ ಪ್ರಯೋಜನಕ್ಕಾಗಿ ಕರ್ನಾಟಕ ಮುನಿಸಿಪಾಲಿಟಿಗಳ (ಅಧಿಕಾರಿಗಳ ಹಾಗೂ ನೌಕರರ) ಸೇವಾ ನಿಬಂಧನೆಗಳು, 1972ನ್ನು ರೂಪಿಸಿತೆಂಬುದನ್ನು ಹೇಳಲು ಸಂತೋಷವಾಗುತ್ತಿದೆ. ಯಾವ ಆಶಯದಿಂದ ಈ ನಿಯಮಗಳನ್ನು ರೂಪಿಸಲಾಗಿದೆಯೋ ಆ ಆಶಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸೇವಾ ನಿಯಮಗಳನ್ನು ಕಾರ್ಯರೂಪಕ್ಕೆ ತರಲು ಮುನಿಸಿಪಲ್ ಅಧಿಕಾರಿಗಳು ತಮ್ಮ ವಿವೇಚನೆಯನ್ನು ಬಳಸಿಲ್ಲವೆಂದು ಹೇಳಲು ವಿಷಾದವಾಗುತ್ತಿದೆ. ಪೌರಕಾರ್ಮಿಕರು ಈ ದಿನಗಳಲ್ಲೂ ಸಂಕಟದಲ್ಲಿರುವುದಕ್ಕೆ ಅಧಿಕಾರ ಶಾಹಿಯ ಸಂವೇದನಾ ಶೂನ್ಯತೆಯೇ ಸಂಪೂರ್ಣವಾಗಿ ಕಾರಣ. ಪೌರಕಾರ್ಮಿಕರ ಕಲ್ಯಾಣದ ಉದ್ದೇಶವನ್ನುಳ್ಳ ಆದೇಶಗಳನ್ನು ಕಾರ್ಯರೂಪಕ್ಕೆ ತರುವುದು ಖಾಯಂ ಅಧಿಕಾರಿಗಳ ಕರ್ತವ್ಯ. ಬಹಳಷ್ಟು ಮುನ್ಸಿಪಲ್ ಅಧಿಕಾರಿಗಳು, ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾದ ಬಡ ಪೌರಕಾರ್ಮಿಕರಿಗೆ ನೆರವಾಗುವ, ತಮಗಿರಬೇಕಾದ ನೈತಿಕ ಜವಾಬ್ದಾರಿಯನ್ನು ಇನ್ನು ತಿಳಿದುಕೊಂಡೇ ಇಲ್ಲ.

ಪ್ರತಿಯೊಂದು ಮುನ್ಸಿಪಲ್ ಚುನಾವಣೆಯ ನಂತರ ಉದ್ಭವವಾಗುವ ರಾಜಕೀಯ ದೊಂಬರಾಟ ಈ ಸೇವಾ ನಿಯಮಗಳನ್ನು ಕಾರ್ಯ ರೂಪಕ್ಕೆ ತರದಿರುವುದಕ್ಕೆ ಇನ್ನೊಂದು ಕಾರಣ. ಮುನ್ಸಿಪಲ್ ಚುನಾವಣೆಗೆ ವಿವಿಧ ಜಾತಿ, ಮತಗಳ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ವಿವಿಧ ಪಕ್ಷಗಳು ನಿಂತಿರುತ್ತವೆ. ಚುನಾವಣೆಯ ನಂತರ ಬೇರೆ ಬೇರೆ ರಾಜಕೀಯ ಸಿದ್ಧಾಂತಗಳಿಗೆ ಅಂಟಿಕೊಂಡಿರುವ ಹಾಗೂ ನಿಷ್ಠೆಯನ್ನುಳ್ಳ ರಾಜಕೀಯ ಪಕ್ಷಗಳು ಮುನ್ಸಿಪಲ್ ಆಡಳಿತವನ್ನು ನಡೆಸುತ್ತವೆ.

ಅಧಿಕಾರಕ್ಕೆ ಬಂದು ಆಡಳಿತ ನಡೆಸುವಾಗ ಪಕ್ಷಗಳು ಮುನ್ಸಿಪಾಲಿಟಿಯು ತಮ್ಮ ಸ್ವಂತ ಸ್ವತ್ತೆಂದೇ ಭಾವಿಸುತ್ತವೆ. ಅಧಿಕಾರ ರೂಢ ಪಕ್ಷಗಳ ಮನೋ ಭೂಮಿಕೆಯೇ ಹೀಗಿದ್ದಾಗ ಅವು ಪೌರಕಾರ್ಮಿಕರ ಹಿತದೃಷ್ಟಿಯನ್ನು ಸಂರಕ್ಷಣೆ ಮಾಡಲಾರವು. ಎಲ್ಲ ಕಡೆಯೂ ಪೌರಕಾರ್ಮಿಕರು ಸಂಕಟದಲ್ಲಿರುವುದಕ್ಕೆ ಇದೇ ಕಾರಣ.

ರಾಜ್ಯದಲ್ಲಿರುವ ಪೌರಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಸ್ಥಳೀಯ ಸಂಸ್ಥೆಗಳ ಮೇಲೆ ಮೇಲ್ವಿಚಾರಣಾ ಅಧಿಕಾರಗಳನ್ನು ಚಲಾಯಿಸಲು ಒಂದು ಸಂಪೂರ್ಣ ಸ್ವಾಯತ್ತ ಮಂಡಳಿಯನ್ನು ಸ್ಥಾಪಿಸಲು ಸಮಿತಿಯು ಶಿಫಾರಸು ಮಾಡುತ್ತದೆ.

ತ

**ಜಾಡಮಾಲಿಗಳು ಮಲವನ್ನು ತಲೆ ಮೇಲೆ ಹೊತ್ತು ಒಯ್ಯುತ್ತಿರುವುದು. ಮಾನವ ಮಲವು ಮಂಕರಿಯಿಂದ ಸೋರಿ ಜಿನುಗಿ ತಲೆ ಮೇಲೆ ಹಾಗೂ ಕುತ್ತಿಗೆವರೆಗೆ ಸೋರುತ್ತಿರುವುದು.**

**ವರ್ಗೀಕರಣ**

ಕಸಗುಡಿಸುವವರು ಹಾಗೂ ಜಾಡಮಾಲಿಗಳು ಮಾಡುತ್ತಿರುವ ಅತ್ಯಂತ ಶ್ರಮದ ಮತ್ತು ಅಪಾಯಕಾರಿ ಕೆಲಸದ ಸ್ವರೂಪವನ್ನು ಪರಿಗಣಿಸಿದ ರಾಷ್ಟ್ರೀಯ ಕಾರ್ಮಿಕ ಆಯೋಗವು ಈ ಜನರನ್ನು **'ಕೆಲಸಗಾರ'** ಎಂದು ಅರ್ಥ ವಿವರಣೆ ಮಾಡಿದೆ ಹಾಗೂ ಸ್ವೀಪರುಗಳು ಹಾಗೂ ಜಾಡಮಾಲಿಗಳು ಈ ಅರ್ಥವಿವರಣೆಯ ವ್ಯಾಪ್ತಿಗೆ ಒಳಪಡಲು 1947ರ ಕೈಗಾರಿಕಾ ವಿವಾದಗಳ ಕಾಯಿದೆಯಲ್ಲಿ ಈ ಅರ್ಥವಿವರಣೆಯನ್ನು ಸೇರಿಸಲು ಶಿಫಾರಸು ಮಾಡಿದೆ. ನಗರ ಪ್ರದೇಶಗಳಲ್ಲಿರುವ ಪೌರಕಾರ್ಮಿಕರು ಮಾತ್ರವೇ ಕಾರ್ಮಿಕ ಸಂಘವನ್ನು ಕಟ್ಟಿಕೊಂಡು ಸಂಘಟಿತ ಬಲದಿಂದ ಕಾಯಿದೆ ಪ್ರಕಾರ ದೊರಕುವ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಮುನ್ಸಿಪಲ್ ನೌಕರರಿಗಾಗಿ ಸೇವಾ ನಿಯಮಗಳನ್ನು ರೂಪಿಸುವಾಗ ಸರ್ಕಾರವು ಈ ವಾಸ್ತವಾಂಶವನ್ನು ಗಮನಕ್ಕೆ ತೆಗೆದುಕೊಂಡಿರಲಿಲ್ಲ. ಹೀಗಾಗಿ ಪೌರಕಾರ್ಮಿಕರು ಕಾಯಿದೆಯ ಪ್ರಕಾರ ಒದಗಿಸಿದ ವ್ಯವಸ್ಥೆಯ ಬಳಕೆ ಮಾಡಿಕೊಳ್ಳಲಾಗದಂತೆ ವಂಚಿತರಾದರು. ಆದ್ದರಿಂದ, ಪ್ರತ್ಯೇಕ ಕೇಡರ್ ನಿಯಮಗಳಲ್ಲಿ ಪೌರಕಾರ್ಮಿಕರನ್ನು **'ಕುಶಲ ಕೆಲಸಗಾರ'**ರೆಂದು ವರ್ಗೀಕರಿಸಬೇಕೆಂದು ಮತ್ತು ಅವರಿಗೆ 1947 ರ ಕೈಗಾರಿಕಾ ವಿವಾದಗಳ ಕಾಯಿದೆ ಪ್ರಕಾರ ಸವಲತ್ತುಗಳನ್ನು ಕೊಡಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಸಹ 1947 ರ ಕೈಗಾರಿಕಾ ವಿವಾದಗಳ ಕಾಯಿದೆಯ ವ್ಯಾಪ್ತಿಗೆ ತಂದು ರಕ್ಷಣೆ ಒದಗಿಸಬೇಕು.

**ನೇಮಕಾತಿ ನೀತಿ**

ಈಗ ಪೌರಕಾರ್ಮಿಕರನ್ನು/ಹುದ್ದೆಗಳನ್ನು ಹಿಂದೂ ಸಮಾಜದ ಒಂದು ನಿರ್ದಿಷ್ಟ ವರ್ಗದಿಂದ ತುಂಬಿಕೊಳ್ಳಲಾಗುತ್ತದೆ. ಅವರಲ್ಲಿ ಬಹಳಷ್ಟು ಜನರು ಪರಿಶಿಷ್ಟ ಜಾತಿಗಳವರು. ಈ ವ್ಯವಸ್ಥೆಯ ಫಲಶೃತಿಗಳಲ್ಲಿ ಒಂದು ಏನೆಂದರೆ, ಈ ವೃತ್ತಿಯು ತಮ್ಮ ಆನುವಂಶಿಕ ವೃತ್ತಿಯೆಂದು ಹಾಗೂ ಈ ವೃತ್ತಿಯನ್ನು ಕೈಗೊಳ್ಳಲು ಬೇರೆ ಯಾರಿಗೂ ಹಕ್ಕಿಲ್ಲವೆಂದು ಪೌರಕಾರ್ಮಿಕರು ಭಾವಿಸತೊಡಗಿದರು. ಈ ಕೆಲಸವನ್ನು ಈ ನಿರ್ದಿಷ್ಟ ಸಮುದಾಯದವರೇ ಮಾಡಬೇಕೆಂದು ಸವರ್ಣೀಯ ಹಿಂದೂಗಳು ಭಾವಿಸಿದ್ದರು. ಈ ರೀತಿ ಒಂದು ತಪ್ಪು ಕಲ್ಪನೆ ಬೆಳೆದು ಬಂತು. ಬೇರೆ ಯಾವುದೇ ವೃತ್ತಿಯಂತೆಯೇ ಈ ಕೆಲಸವನ್ನು ಮಾಡಲು ಸವರ್ಣೀಯ ಹಿಂದೂಗಳಿಗೆ ಉತ್ತೇಜನ ಕೊಡದಿದ್ದರೆ ಪೌರಕಾರ್ಮಿಕರ ಬದುಕಿನ ಮತ್ತು ಕಾಯಕದ ಸ್ಥಿತಿಗತಿಗಳಲ್ಲಿ ಕಣ್ಣಿಗೆ ಕಾಣುವಂತಹ ಯಾವ ಸುಧಾರಣೆಯೂ ಆಗುವುದಿಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದ್ದರು.

ಮೇಲ್ಕಂಡ ಸಂಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪೌರಕಾರ್ಮಿಕರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ.18 ರಷ್ಟು ಹುದ್ದೆಗಳನ್ನು ಮೀಸಲಿಟ್ಟ ನಂತರ ಉಳಿದ ಹುದ್ದೆಗಳನ್ನು ಇತರ ಸಮುದಾಯಗಳ ಜನರನ್ನು ನೇಮಕ ಮಾಡಿಕೊಳ್ಳುವ ಮೂಲಕ ತುಂಬಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಇದು ಸಾಧ್ಯವಾಗುವಂತೆ ಪ್ರಸ್ತುತ ನೇಮಕಾತಿ ನೀತಿಯನ್ನು ಸೂಕ್ತವಾಗಿ ಬದಲಾಯಿಸಿಕೊಳ್ಳಬೇಕು. ಈ ನೀತಿಯನ್ನು ಅಳವಡಿಸಿಕೊಂಡರೆ ಪೌರಕಾರ್ಮಿಕ ವೃತ್ತಿಗೆ ಅಂಟಿಕೊಂಡಿರುವ ಅಗೌರವವನ್ನು ಹಾಗೂ ಕಳಂಕವನ್ನು ತೊಲಗಿಸಿದಂತಾಗುತ್ತದೆ.

ಪೌರಕಾರ್ಮಿಕರು ಕೆಲಸ ಮಾಡುತ್ತಿರುವಾಗ ಅಥವಾ ವೃದ್ಧಾಪ್ಯದಲ್ಲಿ ನಿಧನರಾದಾಗ ಅಂತಹ ಪೌರಕಾರ್ಮಿಕರ ಮೇಲೆ ಅವಲಂಬಿತರಾಗಿರುವವರಿಗೆ ಸಕಾಲದಲ್ಲಿ ಪರಿಹಾರ ನೀಡುವ ವಿಷಯವನ್ನು ಸಮಿತಿಯು ಪರಾಮರ್ಶಿಸಿತು. ಎರಡೂ ಸಂದರ್ಭಗಳಲ್ಲಿ, ಪೌರಕಾರ್ಮಿಕರ ಮೇಲೆ ನಿಜವಾಗಿಯೂ ಅವಲಂಬಿತರಾಗಿದ್ದವರಿಗೆ ಪರಿಹಾರ ಒದಗಿಸಲೇಬೇಕಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಬಡ ಹಾಗೂ ಅನಕ್ಷರಸ್ಥ ಅವಲಂಬಿತರಿಗೆ ಯಾವ ಜೀವನೋಪಾಯವೂ ಇರುವುದಿಲ್ಲ. ಎಲ್ಲ ರೀತಿಯಲ್ಲೂ ಸರಿ ಎನಿಸುವುದಾದರೆ ಮೃತ ಹಾಗೂ ನಿವೃತ್ತ ಪೌರಕಾರ್ಮಿಕರ ಅವಲಂಬಿತರಿಗೆ

ಪೌರಕಾರ್ಮಿಕರ ಖಾಲಿ ಹುದ್ದೆಗಳನ್ನು ತುಂಬುವಾಗ ಪ್ರಾಶಸ್ತ್ಯ ಕೊಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**ಸೇವಾ ವಹಿಗಳು**

ಮುನಿಸಿಪಾಲಿಟಿಗಳು ಸೇವಾ ರಿಜಿಸ್ಟ್ರಾರುಗಳನ್ನು ಸರಿಯಾಗಿ ಇಟ್ಟಿಲ್ಲವೆಂದು ಸಮಿತಿಯು ವಿಷಾದದಿಂದ ಹೇಳುತ್ತದೆ. ಸರಿಯಾಗಿ ನಮೂದುಗಳನ್ನು ಮಾಡುತ್ತಿಲ್ಲ. ಪುರುಷ ಮತ್ತು ಮಹಿಳಾ ಪೌರಕಾರ್ಮಿಕರ ಹೆಸರುಗಳನ್ನು ಸರಿಯಾಗಿ ಬರೆದಿಲ್ಲ. ಬಹಳಷ್ಟು ಕಡೆ ಜನರ ಪೂರ್ಣಹೆಸರುಗಳನ್ನು ಸರಿಯಾಗಿ ಬರೆದಿಲ್ಲ. ಬಹಳಷ್ಟು ಕಡೆ ಈ ಜನರ ಪೂರ್ಣ ಹೆಸರನ್ನು ಬರೆದಿಲ್ಲ. ಇಲ್ಲೂ ಕೂಡ ತುಚ್ಛವಾಗಿ ಹಾಗೂ ಅನಾದರದಿಂದ ಕಾಣುವ ಸುಳಿವು ಕೊಡುವಂತಹ ಮೋಟು ರೂಪಕ್ಕೆ ಅವರುಗಳ ಹೆಸರನ್ನು ಮೊಟಕುಗೊಳಿಸಿ ಅಗೌರವ ತೋರಲಾಗಿದೆ. ಈ ಚಾಳಿ ಕೂಡಲೇ ತೊಲಗಬೇಕು ಹಾಗೂ ಸೇವಾ ರಿಜಿಸ್ಟರಿನಲ್ಲಿ ಬರೆದಿರುವ ಅವರ ಹೆಸರುಗಳಿಂದಲೇ ಪೌರಕಾರ್ಮಿಕರಿಗೆ ಸೂಕ್ತ ಗೌರವ ಮತ್ತು ಆದರಾಭಿಮಾನ ತೋರಿರುವುದು ವ್ಯಕ್ತವಾಗುವಂತಿರಬೇಕು.

ರಜೆ, ಗ್ರಾಚುಯಿಟಿ ಹಾಗೂ ಪಿಂಚಣಿ ಕ್ಲೇಮುಗಳನ್ನು ನಿರ್ಧರಿಸಲು ಸೇವಾ ರಿಜಿಸ್ಟರುಗಳೇ ಆಧಾರವಾದ್ದರಿಂದ ದಾಖಲೆಗಳು ನಿಖರವಾದವುಗಳು ಹಾಗೂ ಅಪ್ ಟು ಡೇಟ್ ಆಗಿರಬೇಕು. ಹೀಗಿರದಿದ್ದರೆ ಪೌರಕಾರ್ಮಿಕರು ನಿವೃತ್ತಿ ಕಾಲದಲ್ಲಿ ತುಂಬಾ ಸಮಸ್ಯೆಗಳಿಗೆ ಮತ್ತು ಕಿರಿಕಿರಿಗೆ ಗುರಿಯಾಗುತ್ತಾರೆ. ಆದ್ದರಿಂದ, ಸೇವಾ ರಿಜಿಸ್ಟರುಗಳಲ್ಲಿ ಏನಾದರೂ ಲೋಪದೋಷಗಳು ಹಾಗೂ ವ್ಯತ್ಯಾಸಗಳು ಆಗಿದ್ದರೆ ಎಲ್ಲ ಸ್ಥಳೀಯ ಸಂಸ್ಥೆಗಳು ಅವುಗಳನ್ನು ಮೊದಲ ಆದ್ಯತೆ ಆಧಾರದ ಮೇಲೆ ಸರಿಪಡಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

**ರಜೆ ಬದಲಿ ನೌಕರರು**

ರಜೆ ಬದಲಿ ನೌಕರರನ್ನು ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಮುನ್ಸಿಪಲ್ ಕೌನ್ಸಿಲ್ ಗಳು ಏಕರೂಪದ ವಿಧಾನವನ್ನು ಅನುಸರಿಸದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಅನಾರೋಗ್ಯದ ಕಾರಣದ ಮೇಲಾಗಲಿ ಅಥವಾ ಗೃಹ ಕೃತ್ಯಗಳ ಕಾರಣಗಳಿಂದಾಗಲಿ ಪೌರಕಾರ್ಮಿಕರು ದೀರ್ಘಕಾಲದ ರಜೆ ಮೇಲೆ ಹೋದಾಗ ಈ ವಿಷಯ ಉದ್ಭವವಾಗುತ್ತದೆ. ರಜೆಯಿಂದಾಗಿ ಖಾಲಿ ಬೀಳುವ ಸ್ಥಾನಗಳನ್ನು ಮನಸೋ ಇಚ್ಛೆಯಿಂದ ತುಂಬಲಾಗಿದೆ. ಹೀಗಾಗಿ, ನಿಜವಾದ ಅರ್ಜಿದಾರರಿಗೆ ಅನ್ಯಾಯವಾಗಿದೆ. ಈ ಸ್ಥಿತಿಯನ್ನು ನಿವಾರಣೆ ಮಾಡುವ ಸಲುವಾಗಿ ಪ್ರತಿಯೊಂದು ಮುನಿಸಿಪಾಲಿಟಿಯು ರಜೆ ಬದಲಿ ನೌಕರರ ಸ್ಥಾನಗಳಿಗೆ ಪೌರಕಾರ್ಮಿಕರಾಗಿ ನೇಮಕಗೊಳ್ಳಲು ಅರ್ಹ ಅರ್ಜಿದಾರರ ನಿಯತ ರಿಜಿಸ್ಟರನ್ನು ಇಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ರಿಜಿಸ್ಟರಿನಲ್ಲಿ ಅರ್ಜಿದಾರರ ಫೋಟೊ ಅಂಟಿಸುವುದು ಆವಶ್ಯಕ. ಅಂತಹ ನೋಂದಾಯಿತ ವ್ಯಕ್ತಿಗಳಿಗೆ ಸಕ್ಷಮ ಅಧಿಕಾರಿಯು ಸೂಕ್ತವಾಗಿ ದೃಢೀಕರಿಸಿರುವ ಗುರುತು ಕಾರ್ಡುಗಳನ್ನು ಕೊಡಬಹುದು. ಬದಲಿ ರಜೆ ಸ್ಥಾನಗಳಿಗೆ ಅಂತಹ ನೋಂದಾಯಿತ ವ್ಯಕ್ತಿಗಳನ್ನು ನೇಮಕ ಮಾಡಬೇಕು. ನಿಯಮ ನೇಮಕಗಳಲ್ಲಿ ಕೂಡ ಮತ್ತು ಹೊಸ ನೇಮಕಾತಿಗಳಲ್ಲೂ ಕೂಡ ಇತರರಿಗಿಂತಲೂ ನೋಂದಾಯಿತ ವ್ಯಕ್ತಿಗಳಿಗೆ ಆದ್ಯತೆ ಕೊಡಬೇಕು. ಉದ್ಯೋಗ ವಿನಿಮಯ ಕೇಂದ್ರಗಳಿಗೆ ಇಂಥವರ ಹೆಸರನ್ನು ಕಳುಹಿಸುವ ಅಗತ್ಯ ಇಲ್ಲ. ಅರ್ಹ ಪ್ರಕರಣಗಳಲ್ಲಿ ವಯೋಮಿತಿ ನಿರ್ಬಂಧಗಳನ್ನು ಸಡಿಲಗೊಳಿಸಬೇಕು.

**ಅರೆಕಾಲಿಕ ಉದ್ಯೋಗ**

ತತ್ವಶಃ, ಯಾವುದೇ ಮುನಿಸಿಪಾಲಿಟಿಯಲ್ಲಿ ಯಾರನ್ನೂ ಅರೆಕಾಲಿಕ ಪೌರಕಾರ್ಮಿಕನನ್ನಾಗಿ ನಿಯೋಜಿಸಿಕೊಳ್ಳಲೇಬಾರದು. ಅಂಥದೊಂದು ವಿಧಾನದಿಂದ ಪೌರಕಾರ್ಮಿಕರ ಇಡೀ ಸೇವೆಯ ಮೇಲೆ ತೀರಾ ಅಹಿತಕರ ಪರಿಣಾಮ ಉಂಟಾಗುತ್ತದೆ. ಯಾವುದಾದರೂ ಮುನಿಸಿಪಾಲಿಟಿಯಲ್ಲಿ ಅಂಥದೊಂದು ನೇಮಕದ ವಿಧಾನವೇನಾದರೂ ಇದ್ದರೆ ಅದನ್ನು ತಕ್ಷಣವೇ ನಿಲ್ಲಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಎಲ್ಲ ತಾತ್ಕಾಲಿಕ ಹಾಗೂ ಅರೆ ಕಾಲಿಕ ಪೌರಕಾರ್ಮಿಕರನ್ನು ಖಾಯಂ ಸೇವೆಗೆ ವಿಲೀನಗೊಳಿಸಬೇಕೆಂದು ಸರ್ಕಾರವು ಈಗಾಗಲೇ ಆದೇಶ ಹೊರಡಿಸಿದೆ. (ಲಗತ್ತಿಸಿದ ಭಾಗ ಮೂರನ್ನು ನೋಡಿ). ಅನೇಕ ಮುನಿಸಿಪಾಲಿಟಿಗಳು ಈ ಆದೇಶವನ್ನು ಪಾಲಿಸದಿರುವುದು ವಿಷಾದನೀಯ. ಆದ್ದರಿಂದ, ತಾತ್ಕಾಲಿಕವಾಗಿ ನೇಮಕಗೊಂಡಿರುವ ಮತ್ತು ಒಂದು ವರ್ಷಕ್ಕಿಂತ ಕಡಿಮೆ ಅಲ್ಲದ ಸೇವೆ ಸಲ್ಲಿಸಿರುವ ಎಲ್ಲ ಅಂತಹ ಪೌರಕಾರ್ಮಿಕರನ್ನು ಸೇವೆಯಲ್ಲಿ ಸ್ಥಿರೀಕರಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

**ಹೊಸ ವೇತನ ವಿಧಾನ**

ಪೌರಕಾರ್ಮಿಕರ ಸಂಬಳದ ಮಾದರಿ ಬಗ್ಗೆ ಹೇಗಿರಬೇಕೆಂಬ ಬಗ್ಗೆ ಹೇಳುವುದಾದರೆ, ಪೌರಕಾರ್ಮಿಕರು ಕಸಗುಡಿಸುವ, ಸ್ವಚ್ಛಗೊಳಿಸುವ ಹಾಗೂ ಮಲ, ಕಸ ಸಾಗಣೆ ಮುಂತಾದ ಕೆಲಸ ಮಾಡುತ್ತಾರಾದ್ದರಿಂದ ಅವರ ಕೆಲಸವು ಅಸಹ್ಯಕರ ಹಾಗೂ ಆರೋಗ್ಯಕ್ಕೆ ಹಾನಿಕಾರಕವಾದಂತಹ ಅಂಶವನ್ನು ಒಳಗೊಂಡಿರುವುದರಿಂದ ಅವರನ್ನು ಕುಶಲ ಕೆಲಸಗಾರರೆಂದು ಮತ್ತು ಆಧುನಿಕ ಚಿಂತನೆಯ ದೃಷ್ಟಿಯಿಂದ ಹೇಳುವುದಾದರೆ (ಉದಾಹರಣೆ, ಮೂರನೇ ಕೇಂದ್ರ ವೇತನ ಆಯೋಗವು ಸ್ಥೂಲವಾಗಿ ಒಪ್ಪಿಕೊಂಡಿರುವಂತೆ) ಕೊನೆಯ ದರ್ಜೆಯವರಾದ 'ಕುಶಲ ಕೆಲಸಗಾರ' ರನ್ನು ವೇತನ ನಿಗದಿ ಉದ್ದೇಶಕ್ಕಾಗಿ II ದರ್ಜೆ ಗುಮಾಸ್ತರ ವೇತನಕ್ಕೆ ಸರಿ ಸಮನಾದವರೆಂದು ಪರಿಗಣಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಆಯೋಗವು ಶಿಫಾರಸು ಮಾಡಿರುವ ಇತರ ವಿಶೇಷ ಭತ್ಯೆಗಳ ಸಹಿತ II ದರ್ಜೆ ಗುಮಾಸ್ತರುಗಳು ಯಾವ ಯಾವ ವಾಡಿಕೆಯ ಭತ್ಯೆಗಳಿಗೆ ಅರ್ಹರಾಗುವರೋ ಅವೆಲ್ಲವುಗಳ ಸಹಿತ II ದರ್ಜೆ ಗುಮಾಸ್ತರ ಕನಿಷ್ಠ ವೇತನವನ್ನು ಪೌರಕಾರ್ಮಿಕರಿಗೂ ಕೊಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ವೇತನ ಶ್ರೇಣಿಗಳನ್ನು ಜೀವನ ವೆಚ್ಚ ಸೂಚ್ಯಂಕಗಳ ಆಧಾರದ ಮೇಲೆ ಕಾಲಕಾಲಕ್ಕೆ ಸೂಕ್ತವಾಗಿ ಪರಿಷ್ಕರಿಸಬಹುದು.

**ವಿಶೇಷ ಭತ್ಯೆ**

ಪೌರಕಾರ್ಮಿಕರಿಗೆ ಮಲವನ್ನು ತೆಗೆಯುವ, ಸಾಗಿಸುವ ಮತ್ತು ವಿಲೇ ಮಾಡುವ, ರೊಚ್ಚು ವಿಲೇ ಮಾಡುವ ಗಟಾರವನ್ನು ಸ್ವಚ್ಛಗೊಳಿಸುವ, ಕಸ ಸುರಿದ ಅಂಗಣಗಳನ್ನು ಸ್ವಚ್ಛಗೊಳಿಸುವ ಮತ್ತು ಯಾವುದೇ ಬಗೆಯ ತೆರೆದ ಚರಂಡಿ ಸ್ವಚ್ಛ ಮಾಡುವ ಕೆಲಸವನ್ನು ವಹಿಸುವುದರಿಂದ ಈ ಕೆಲಸಗಳು ತೀವ್ರ ಅನಾರೋಗ್ಯಕಾರಕವಾದವುಗಳಾದ್ದರಿಂದ ಇವರಿಗೆ ಇವರ ಒಟ್ಟು ಸಂಬಳದ ಶೇ 25 ರಷ್ಟನ್ನು ವಿಶೇಷ ಹೆಚ್ಚುವರಿ ಭತ್ಯೆಯಾಗಿ ಕೊಡಬೇಕು.

**ಮುಂಬಡ್ತಿ ಅವಕಾಶಗಳು**

ದಫೇದಾರರು, ಆಕ್ರಾಯಿ ಮುತ್ಸದಿ, ಅಟೆಂಡರುಗಳು, ಡ್ರೈವರುಗಳು, II ನೇ ದರ್ಜೆ ಗುಮಾಸ್ತರು, ಸೂಪರ್‌ವೈಸರುಗಳು, ವರ್ಕ್ ಇನ್ಸ್‌ಪೆಕ್ಟರುಗಳು, ಜ್ಯೂನಿಯರ್ ಹೆಲ್ತ್ ಇನ್‌ಸ್ಪೆಕ್ಟರುಗಳು, ಆಯಾಗಳು, ಮಿಡ್‌ವೈವ್ಸ್ ಮುಂತಾದ ಮೇಲಿನ ಹುದ್ದೆಗಳಿಗೆ ಪೌರಕಾರ್ಮಿಕರು ಅನುಭವಸ್ಥರಾಗಿದ್ದರೆ ಮತ್ತು ಸೂಕ್ತ

ಅರ್ಹತೆಯನ್ನು ಹೊಂದಿದ್ದರೆ ಅರ್ಹರಾಗಬೇಕು. ಈ ಉದ್ದೇಶಕ್ಕಾಗಿ ಪುರುಷರಿಗೆ ಹಾಗೂ ಮಹಿಳೆಯರಿಗೆ ಅವರವರಿಗೆ ದೊರಕಬಹುದಾದ ಮೇಲಿನ ಹುದ್ದೆಗಳಿಗಾಗಿ 'ಇನ್ ಸರ್ವೀಸಸ್' ತರಬೇತಿಯಂತಹ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅನೇಕಾನೇಕ ವರ್ಷಗಳವರೆಗೆ ಅದೇ ಬಗೆಯ ಕೆಲಸ ಮಾಡುತ್ತಿದ್ದರೆ ಅದು ಅಪಾಯಕಾರಕ ಹಾಗೂ ಏಕತಾನತೆಯ ಕೆಲಸವಾಗುವುದರಿಂದ ಕಸಗುಡಿಸುವ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಗಟಾರವನ್ನು ಸ್ವಚ್ಛಗೊಳಿಸುವ ಕೆಲಸಕ್ಕೆ ಅಥವಾ ನಗರದ ಕಸವನ್ನು ಸಾಗಿಸುವ ಲಾರಿಗಳಲ್ಲಿ ಹೆಲ್ಪರ್ ಕೆಲಸಕ್ಕೆ ವರ್ಗಾಯಿಸಬಹುದು. ಅದೇ ರೀತಿ ಆ ಕೆಲಸ ಮಾಡುತ್ತಿರುವವರನ್ನು ಈ ಕೆಲಸಕ್ಕೆ ವರ್ಗಾಯಿಸಬಹುದು. ಈ ರೀತಿ ಬದಲಾವಣೆ ಮಾಡುವಾಗ ಈ ಜನರನ್ನು ಅವರು ಕೆಲಸ ಮಾಡುತ್ತಿರುವ ವಿಭಾಗಗಳ ಹೊರಗಡೆಗೆ ನಿಯುಕ್ತಿ ಮಾಡಬಾರದು. ಪೌರಕಾರ್ಮಿಕರಿಗೆ ಮುಂಬಡ್ತಿ ಅವಕಾಶಗಳು ತೀರಾ ಕಡಿಮೆ ಇರುತ್ತವಾದ್ದರಿಂದ ಮತ್ತು ಬಹಳ ಅಂತರದಲ್ಲಿ ಲಭ್ಯವಾಗುತ್ತವಾದ್ದರಿಂದ ಒಂದು ನಿರ್ದಿಷ್ಟ ವೇತನ ಶ್ರೇಣಿಯಲ್ಲಿ 7 ವರ್ಷಗಳ ಸೇವೆಯ ನಂತರ ಮುಂದಿನ ಮೇಲಿನ ವೇತನ ಶ್ರೇಣಿಗೆ ಮುಂಬಡ್ತಿ ಸಲುವಾಗಿ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಗೊತ್ತು ಪಡಿಸಬೇಕು.

ಸಮಿತಿಯು ಪೌರಕಾರ್ಮಿಕರ ಹಿತಾಸಕ್ತಿಗಳನ್ನು ಇನ್ನಷ್ಟು ಕಾಪಾಡುವ ವಿಷಯವನ್ನು ಕೂಲಂಕಷವಾಗಿ ಪರಾಮರ್ಶಿಸಿತು. ಪೌರಕಾರ್ಮಿಕರಿಗೆ ಮುಂಬಡ್ತಿ ಅವಕಾಶಗಳನ್ನು ಕಲ್ಪಿಸುವ ಸಲುವಾಗಿ ಪ್ರತಿಯೊಂದು ಮುನಿಸಿಪಾಲಿಟಿಯು ಪ್ರತ್ಯೇಕ ನೌಕರ ವೃಂದ ಹಾಗೂ ನೇಮಕಾತಿ ನಿಯಮಗಳನ್ನು ರೂಪಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಪೌರಕಾರ್ಮಿಕನು ಮೊದಲು ಯಾವ ಕೆಲಸಕ್ಕೆ ನೇಮಕಗೊಂಡಿದ್ದನೋ ಅದೇ ಕೆಲಸದಲ್ಲಿ ಅವನು ನಿವೃತ್ತಿಯಾಗಬೇಕೆನ್ನುವುದು ಸರ್ವಥಾ ಸರಿಯಲ್ಲ. ಪೌರಕಾರ್ಮಿಕರು ಮುನಿಸಿಪಾಲಿಟಿಗಳಿಗೆ ಸೇರಿಯಾದ ಮೇಲೆ ಮುಂದಿನ ಹುದ್ದೆಗಳಿಗೆ ಅರ್ಹರಾಗಿರುವುದನ್ನು ಸಮಿತಿಯು ಅಧ್ಯಯನ ಪ್ರವಾಸ ಕಾಲದಲ್ಲಿ ಗಮನಿಸಿದೆ. ಅಂತಹ ಪ್ರಕರಣಗಳಲ್ಲಿ ಅವರಿಗೆ ಉನ್ನತ ಹುದ್ದೆಗಳಿಗೆ ಮುಂಬಡ್ತಿ ನೀಡಲು ಅವಕಾಶಗಳಿರಲೇಬೇಕು.

**ನಿವೃತ್ತಿ**

ಎಲ್ಲ ಪೌರಕಾರ್ಮಿಕರ ನಿವೃತ್ತಿ ವಯಸ್ಸನ್ನು 58ಕ್ಕೆ ನಿಗದಿ ಮಾಡಬೇಕು. ನಿವೃತ್ತಿ ದಿನಾಂಕಕ್ಕೆ ಆರು ತಿಂಗಳು ಮುಂಚಿತವಾಗಿಯೇ ನಿವೃತ್ತಿ ನೋಟೀಸನ್ನು ನೀಡಬೇಕು.

ಪೌರಕಾರ್ಮಿಕರ ಸೇವಾ ರಿಜಿಸ್ಟರುಗಳನ್ನು ವೈದ್ಯರುಗಳ, ಕೆಲಸಗಾರರ ಪ್ರತಿನಿಧಿಗಳ ಹಾಗೂ ಸ್ಥಳೀಯ ಸಂಸ್ಥೆಯ ತಂಡವನ್ನೊಳಗೊಂಡ ಸಕ್ಷಮ ಪ್ರಾಧಿಕಾರವು ವಯಸ್ಸು ಕುರಿತಂತೆ ಸೂಕ್ತವಾಗಿ ಪರಿಶೀಲಿಸಿ ಸರಿಪಡಿಸಬೇಕು. ಪೌರಕಾರ್ಮಿಕರು ಆರೋಗ್ಯದಿಂದ ದೈಹಿಕವಾಗಿ ಗಟ್ಟಿಮುಟ್ಟಾಗಿದ್ದರೆ, ಹಾಗೆಂದು ತಂಡವು ಶಿಫಾರಸು ಮಾಡಿದರೆ ಪೌರಕಾರ್ಮಿಕರ ಸೇವೆಯನ್ನು ಆ ಮಟ್ಟಿಗೆ ವಿಸ್ತರಿಸಬಹುದು.

**ಪಿಂಚಣಿ ಮತ್ತು ಗ್ರಾಚುಯಿಟಿ**

ವಯೋ ನಿವೃತ್ತಿ ಆಧಾರದ ಮೇಲೆ ನಿವೃತ್ತಿಯಾಗುವ ಪ್ರತಿಯೊಬ್ಬ ಉದ್ಯೋಗಿಯೂ, ಅವನು ತೆಗೆದುಕೊಳ್ಳುತ್ತಿರುವ 20 ತಿಂಗಳ ಸಂಬಳಕ್ಕೆ ಸಮನಾದ ಗ್ರಾಚುಯಿಟಿಗೆ ಅರ್ಹನಾಗಿರಬೇಕು. ಗ್ರಾಚುಯಿಟಿಯನ್ನು ಅವನ ನಿವೃತ್ತಿಯ ದಿನವೇ ಕೊಡಬೇಕು. ಅವನು ಸೇವೆಯಲ್ಲಿರುವಾಗಲೇ ಮೃತನಾದರೆ, ಅವನ ಕಾನೂನು ಸಮ್ಮತ ವಾರಸುದಾರರು, ನಾಮನಿರ್ದೇಶಿತರು ಅಥವಾ ಕಾನೂನು ಸಮ್ಮತ ಪ್ರತಿನಿಧಿಗಳು ಗ್ರಾಚುಯಿಟಿಯನ್ನು ತೆಗೆದುಕೊಳ್ಳಲು ಅರ್ಹರಾಗಿರಬೇಕು.

ಪಿಂಚಣಿಯ ಹಾಗೂ ಗ್ರಾಚುಯಿಟಿಯ ದಾಖಲೆಗಳ ವಿಲೇವಾರಿ ವಿಧಾನವನ್ನು ಉದ್ಯೋಗಿಯ ನಿವೃತ್ತಿ ದಿನಾಂಕಕ್ಕೆ ಮುಂಚಿತವಾಗಿಯೇ ಎಂದರೆ ಕನಿಷ್ಠ 6 ತಿಂಗಳು ಮುಂಚೆಯೇ ಪೂರ್ಣಗೊಳಿಸಿರಬೇಕು. ಸಂಬಂಧಪಟ್ಟ ಅಧಿಕಾರಿಯು ಈ ನಿಬಂಧನೆಯನ್ನು ಪಾಲಿಸಲು ತಪ್ಪಿದರೆ ಆತನ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕು.

ನಿವೃತ್ತನಾಗಲಿರುವ ಪ್ರತಿಯೊಬ್ಬ ಉದ್ಯೋಗಿಯ ನಿವೃತ್ತಿ ದಾಖಲೆಗಳನ್ನು, ಅವನ ನಿವೃತ್ತಿಯಾಗುವ ತಿಂಗಳ ನಂತರ ಬರುವ ತಿಂಗಳ ಕೊನೆಯ ಕೆಲಸದ ದಿನಾಂಕಕ್ಕೂ ಮೊದಲೇ ಅವನ ಪಿಂಚಣಿ ಹಣ ಅವನಿಗೆ ಸಿಗುವಂತೆ ಸಾಕಷ್ಟು ಮುಂಚಿತವಾಗಿಯೇ ಆಖೈರುಗೊಳಿಸಿರಬೇಕು. ಹಾಗೆಯೇ, ಉದ್ಯೋಗಿಯು ಸೇವೆಯಲ್ಲಿರುವಾಗಲೇ ಮೃತನಾದರೆ, ಕುಟುಂಬ ಪಿಂಚಣಿಯು, ಆತ ಮೃತನಾದ ತಿಂಗಳ ನಂತರ ಬರುವ ತಿಂಗಳ ಕೊನೆಯ ಕೆಲಸದ ದಿನಕ್ಕೂ ಮುಂಚೆಯೇ ಸಂದಾಯವಾಗಬೇಕು.

**ರಜೆ ಸೌಲಭ್ಯಗಳು**

ಈಗ ಪೌರಕಾರ್ಮಿಕರು ಇತರ ಸರ್ಕಾರಿ ನೌಕರರಂತೆಯೇ ಈ ಮುಂದೆ ಹೇಳಿರುವ ಬಗೆಯ ರಜೆಗಳಿಗೆ ಅರ್ಹರಾಗಿದ್ದಾರೆ:

1. **ಗಳಿಕೆ ರಜೆ**– ಗೈರು ಹಾಜರಾಗದಯೇ ಕೆಲಸ ಮಾಡಿದ ಪ್ರತಿ ಹನ್ನೊಂದು ದಿನಗಳಿಗೆ ಒಂದು ದಿನದಂತೆ ಗಳಿಕೆ ರಜೆ
2. **ಅರ್ಧ ವೇತನ ರಜೆ**– ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿದರೆ ಅಥವಾ ಖಾಸಗಿ ಕಾರಣಗಳಿಗಾಗಿ ಪ್ರತಿ ವರ್ಷ 20 ದಿನಗಳ ಅರ್ಧ ವೇತನ ರಜೆ
3. **ಅಸಾಧಾರಣ ರಜೆ**– ಯಾವುದೇ ಬಗೆಯ ರಜೆ. ರಜೆ ಲೆಕ್ಕದಲ್ಲಿ ಇರದಿದ್ದರೆ ಒಂದು ಸಲಕ್ಕೆ 03 ತಿಂಗಳಿಗೆ ಹೆಚ್ಚಲ್ಲದ ರಜೆ
4. **ಪರೀಕ್ಷೆ ರಜೆ**– ಕಡ್ಡಾಯ ಪರೀಕ್ಷೆಗಳಿಗೆ ಈ ರಜೆ ಕೊಡಲಾಗುತ್ತದೆ
5. **ಸಾಂದರ್ಭಿಕ ರಜೆ**– ಒಂದು ಕ್ಯಾಲೆಂಡರ್ ವರ್ಷದಲ್ಲಿ 15 ದಿನಗಳು
6. **ವಿಶೇಷ ಸಾಂದರ್ಭಿಕ ರಜೆ**– ವಿಶೇಷ ಉದ್ದೇಶಗಳಿಗಾಗಿ ಕೊಡಲಾಗುತ್ತದೆ.
7. **ಹೆರಿಗೆ ರಜೆ**– ಎರಡು ತಿಂಗಳು. ಮಂಜೂರಾತಿ ಅಧಿಕಾರಿಯ ವಿವೇಚನೆ ಮೇರೆಗೆ ಇನ್ನೊಂದು ತಿಂಗಳು
8. **ವಿಶೇಷ ಅಶಕ್ತತೆ ರಜೆ –** ನೌಕರನು ತೀವ್ರ ರೂಪದ ಅಶಕ್ತತೆಗೆ ಒಳಗಾದರೆ 24 ತಿಂಗಳಅವಧಿಯ ರಜೆ

ಸರ್ಕಾರಿ ನೌಕರರು ಅರ್ಹರಾಗುವ ಸಾಮಾನ್ಯ ಬಗೆಯ ರಜೆಗಳೇ ಅಲ್ಲದೆ ಈ ಮುಂದೆ ಹೇಳಿರುವ ಬಗೆಯ ರಜೆಗಳೂ ಅವರಿಗೆ ಲಭ್ಯವಾಗುವಂತೆ ಮಾಡಬೇಕು:

(i) ವೈದ್ಯಕೀಯ ಪ್ರಮಾಣಪತ್ರವನ್ನು ಕೇಳದಯೇ ಒಂದು ಸಲಕ್ಕೆ ಮೂರು ದಿನಗಳ ಅನಾರೋಗ್ಯ ರಜೆ

(ii) ಎಲ್ಲ ಪೌರಕಾರ್ಮಿಕರಿಗೂ 2 ವರ್ಷಗಳ ಒಂದು ಬ್ಲಾಕ್ ಅವಧಿಯಲ್ಲಿ ಒಂದು ತಿಂಗಳು ರಜೆ ಅಥವಾ ಒಂದು ವರ್ಷದಲ್ಲಿ ವಿಶ್ರಾಂತಿಗಾಗಿ ಮತ್ತು ವಿರಾಮಕ್ಕಾಗಿ 15 ದಿನಗಳ ರಜೆ

(iii) ಮಹಿಳಾ ಕೆಲಸಗಾರರಿಗೆ, ಅವರ ಅನುಕೂಲಕ್ಕೆ ಸರಿ ಹೊಂದುವ ಹಾಗೆ ವಿಸ್ತಾರವಾಗುವಂತೆ 2 ತಿಂಗಳ ಹೆರಿಗೆ ರಜೆಯನ್ನು ಮಂಜೂರು

ಮಾಡಬೇಕು. ಪ್ರಸವದ ದಿನಾಂಕದಿಂದ ಹೆರಿಗೆ ರಜೆಯನ್ನು 6 ವಾರಗಳಿಗೂ ಮೀರಿ ವಿಸ್ತರಿಸಲಾಗುವುದಿಲ್ಲವೆಂದು ಹೇಳಕೂಡದು.

**ಕಲ್ಯಾಣಾಧಿಕಾರಿ**

ಪೌರಕಾರ್ಮಿಕರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಸಲುವಾಗಿ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ, ಅಲ್ಲಿ ಪೌರಕಾರ್ಮಿಕರ ಸಂಖ್ಯೆ 150 ಕ್ಕೂ ಕಡಿಮೆ ಇರದಿದ್ದರೆ, ಕಾರ್ಮಿಕ ಕಲ್ಯಾಣಾಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಇದು ಕಡ್ಡಾಯವಾಗಬೇಕು. ಎಲ್ಲ ಮುನಿಸಿಪಾಲಿಟಿಗಳು ಈ ಶಿಫಾರಸನ್ನು ಕಾರ್ಯರೂಪಕ್ಕೆ ತರಬೇಕು.

ರಾಜ್ಯ ಸರ್ಕಾರವು ತನ್ನ ನೌಕರರಿಗೆ ಮಂಜೂರು ಮಾಡಿದ ವೇತನ ಪರಿಷ್ಕರಣೆ ಇತ್ಯಾದಿಯು ಕಾರ್ಪೊರೇಷನ್‌ಗಳ, ಮುನಿಸಿಪಾಲಿಟಿಗಳ ಪಂಚಾಯತ್‌ಗಳ ನೌಕರರಿಗೂ ಅನ್ವಯವಾಗಬೇಕು. ಸುಸಂಗತ ಸರ್ಕಾರಿ ಆದೇಶಗಳನ್ನು ಕಾರ್ಪೊರೇಷನ್‌ಗಳು ಮತ್ತು ಕೌನ್ಸಿಲ್‌ಗಳು ತಂತಾವೇ ಏಕಕಾಲದಲ್ಲಿ ಜಾರಿಗೆ ತರುವುದು ಕಡ್ಡಾಯವಾಗಬೇಕು. ಅಂತಹ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು.

# ಅಧ್ಯಾಯ VII
## ಕೆಲಸದ ಸ್ಥಿತಿಗತಿಗಳು

ರಾಜ್ಯದಲ್ಲಿ ಹಲವಾರು ಸ್ಥಳಗಳಲ್ಲಿರುವ ಪೌರಕಾರ್ಮಿಕರಿಂದ ಮಾಡಿಸುತ್ತಿರುವ ಕೆಲಸದ ವಿಧಾನದ ಬಗ್ಗೆ ಹೇಳುವುದಾದರೆ ಯಾವುದೇ ಏಕ ರೂಪದ ವಿಧಾನ ಇಲ್ಲ. ಇವರಲ್ಲಿ ಬಹಳಷ್ಟು ಜನರು ಪರಿಶಿಷ್ಟ ಜಾತಿಯವರಾದ್ದರಿಂದ ಇವರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿರುವ ರೀತಿ ನಿಂದನೀಯವಾದುದು. ಈ ಜನರಿಗೆ ಏನೇ ಕೆಲಸ ಹೇಳಿದರೂ ಗೊಣಗದೆ ಅದನ್ನು ಮಾಡುತ್ತಾರಾದ್ದರಿಂದ ಈ ಜನರನ್ನು ಹೆಚ್ಚು ಕಡಿಮೆ ಗುಲಾಮರಂತೆಯೇ ಕಾಣಲಾಗುತ್ತದೆ.

ಕೆಲಸದ ವೇಳೆಗಳ ಬಗ್ಗೆ ಹೇಳುವುದಾದರೆ ಯಾವ ಏಕರೂಪದ ವಿಧಾನವೂ ಇಲ್ಲವೆಂದು ಇಲ್ಲಿ ಹೇಳಬೇಕಾಗಿದೆ. ಕೆಲಸದ ಹೊರೆಯನ್ನು ಬೇಕಾಬಿಟ್ಟಿ ಹೇರಲಾಗಿದೆ. ಇದು ಮೇಲ್ವಿಚಾರಣಾ ಸಿಬ್ಬಂದಿಯ ಮನಸೋ ಇಚ್ಛೆಯಂತೆ ಆಗುತ್ತದೆ. ಯಾವುದೇ ವಿಶೇಷ ಕಾರ್ಯಕ್ಕೆ ಸಂಬಂಧಪಟ್ಟಂತೆ ಅತಿ ಗಣ್ಯ ವ್ಯಕ್ತಿಯು ಭೇಟಿ ಕೊಟ್ಟಾಗ, ಸ್ಥಳೀಯ ಸಂಸ್ಥೆಗಳಿಗೆ ತುರ್ತು ಸ್ವರೂಪದ ಮತ್ತು ಬಗೆಯ ಕೆಲಸ ಎದುರಾದಾಗ ಈ ಜನರನ್ನು ಕರೆಸಿ ರಾತ್ರಿಯಲ್ಲೂ ಹೆಚ್ಚುವರಿ ಕೆಲಸ ಮಾಡಬೇಕೆಂದು ಹೇಳಲಾಗುತ್ತದೆ. ತಮ್ಮ ವಾಡಿಕೆಯದಲ್ಲದ ಪ್ರಯಾಸಕರ ಕೆಲಸ ಮಾಡಿದರೆ ಯಾವುದೇ ಹೆಚ್ಚುವರಿ ಭತ್ಯೆಯನ್ನಾಗಲಿ ಅಥವಾ ಪರಿಹಾರ ರಜೆಯನ್ನಾಗಲಿ ಕೊಡುವುದಿಲ್ಲ. ವಾರದ ಪಾನಗೋಷ್ಠಿಗಳು ಮತ್ತು ಧಾರ್ಮಿಕ ಸಮಾರಂಭಗಳು ನಡೆದಾಗ ಈ ಜನರನ್ನು ಹೆಚ್ಚುವರಿ ಕೆಲಸ ಮಾಡಲು ಕರೆಯಲಾಗುತ್ತದೆ. ಆಗಲೂ ಇವರಿಗೆ ಯಾವ ಸಂಭಾವನೆಯನ್ನು ಕೊಡುವುದಿಲ್ಲ. ಅವರ ದಿನನಿತ್ಯದ ಕೆಲಸವನ್ನು ಅಸಂಬದ್ಧ ಹಾಗೂ ಅವೈಜ್ಞಾನಿಕ ರೀತಿಯಲ್ಲಿ ನಿಗದಿಪಡಿಸಲಾಗಿದೆ. ಕೆಲವೊಮ್ಮೆ ಕೊನೆ ಪಕ್ಷ ಮೂವರು ಪೌರಕಾರ್ಮಿಕರ ಕೆಲಸವನ್ನು ಒಬ್ಬ ಪೌರಕಾರ್ಮಿಕ ಮಾಡಬೇಕಾಗುತ್ತದೆ. ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣಾ ಸಿಬ್ಬಂದಿಯು ತಮಗಿಷ್ಟ ಬಂದಂತೆ ಕೆಲಸವನ್ನು ಹಂಚುತ್ತಾರೆ. ಅನೇಕ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಕೌನ್ಸಿಲರುಗಳೇ ಅಗತ್ಯ ಸಂಖ್ಯೆಯಷ್ಟು ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವಲ್ಲಿ ಅಡ್ಡಿ ಅಡಚಣೆಗಳನ್ನು ಒಡ್ಡುತ್ತಾರೆ.

ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ನಮ್ಮ ದೇಶವು ಭಾರಿ ಪ್ರಗತಿ ಸಾಧಿಸಿದ್ದರೂ, ಪೌರಕಾರ್ಮಿಕರ ಕೆಲಸದ ಹೊರೆಯನ್ನು ತಗ್ಗಿಸಲು ಆಧುನಿಕ ಸಾಧನ ಸಲಕರಣೆಗಳನ್ನು ಈ ಜನರಿಗೆ ಒದಗಿಸುವತ್ತ ಗಮನವನ್ನೇ ಕೊಟ್ಟಿಲ್ಲ. ಪೌರಕಾರ್ಮಿಕರನ್ನು ನಾವು ಮನುಷ್ಯರಂತೆ ಕಾಣುತ್ತಿಲ್ಲ. ಈ ಜನರೂ ಕೂಡ ಪರಿಗಣನೆಗೆ ಮತ್ತು ಆದರಣೆಗೆ ಅರ್ಹರು. ಮುಂದುವರಿದ ದೇಶಗಳು ಅಳವಡಿಸಿಕೊಂಡಿರುವ ವಿಧಾನವನ್ನು ಹಾಗೂ ಬಳಕೆಗೆ ತಂದಿರುವ ವೈಜ್ಞಾನಿಕ ಸಲಕರಣೆಗಳನ್ನು ನಮ್ಮ ದೇಶದಲ್ಲೂ ಬಳಕೆಗೆ ತರಲು ಪ್ರಯತ್ನಿಸುವುದಕ್ಕೆ ಇದು ಸಕಾಲ.

### ಕೆಲಸದ ವೇಳೆಗಳು

ರಾಜ್ಯದ ವಿವಿಧ ಭಾಗಗಳಿಗೆ ಸಮಿತಿಯು ವ್ಯಾಪಕ ಪ್ರವಾಸ ಕೈಗೊಂಡಿದೆ. ಯಾವುದೇ ಎರಡು ಸ್ಥಳೀಯ ಸಂಸ್ಥೆಗಳಲ್ಲೇ ಕೆಲಸದ ವೇಳೆಗಳಲ್ಲಿ ಏಕರೂಪತೆ ಇಲ್ಲವೆಂಬುದನ್ನು ಸಮಿತಿಯು ಗಮನಿಸಿದೆ. ಪ್ರಾಸಂಗಿಕ ಮತ್ತು ಗೊತ್ತುಗುರಿಯಿಲ್ಲದೆ ಕೆಲಸದ ವೇಳೆಯನ್ನು ಗೊತ್ತುಪಡಿಸಲಾಗಿದೆ. ಕಸಗುಡಿಸುವವರ ಮತ್ತು ಜಾಡಮಾಲಿಗಳ ಕೆಲಸ ವೇಳೆಯು ಸ್ಥಳದಿಂದ ಸ್ಥಳಕ್ಕೆ ಬೇರೆಯದೇ ಇದೆ. ಇದು ಕೆಲವೊಮ್ಮೆ ಪ್ರತಿಯೊಂದು ಮುನಿಸಿಪಾಲಿಟಿಯಲ್ಲಿ ನೇಮಕಗೊಂಡಿರುವ ಸಿಬ್ಬಂದಿಯ ಮನೋಭಾವನೆಯಂತೆ ನಿಗದಿಯಾಗುತ್ತದೆ.

ಬಹುತೇಕ ಮೇಲ್ವಿಚಾರಣಾ ಸಿಬ್ಬಂದಿಗೆ ಪೌರಕಾರ್ಮಿಕರ ಕಲ್ಯಾಣದಲ್ಲಿ ನಿಜವಾಗಿಯೂ ಯಾವುದೇ ಆಸಕ್ತಿ ಇಲ್ಲವೆಂಬುದು ಮುಚ್ಚುಮರೆಯ ಸಂಗತಿ ಏನಲ್ಲ. ಕೆಲಸದ ವೇಳೆಗಳು ಹೇಗಿವೆಯೆಂದರೆ ಪೌರಕಾರ್ಮಿಕರಿಗೆ ತಮ್ಮ ಬಟ್ಟೆಬರೆಗಳನ್ನು ತೊಳೆದುಕೊಳ್ಳಲು ಅಥವಾ ಸ್ನಾನ ಮಾಡಲು ಸಮಯವೇ ಇಲ್ಲದಷ್ಟು ಅಸಂಬದ್ಧವಾಗಿವೆ.

ಇದರಿಂದ ಆರೋಗ್ಯಕ್ಕೆ ಧಕ್ಕೆಯಾಗುತ್ತದೆ. ಬಹುತೇಕ ಕೆಲಸಗಾರರು ವಾರಗಟ್ಟಳೆ ಸ್ನಾನವನ್ನೇ ಮಾಡಿರುವುದಿಲ್ಲ. ಎರಡನೆಯದಾಗಿ, ಮಹಿಳಾ ಕೆಲಸಗಾರರಿಗೂ ಇದೇ ರೀತಿಯ ಪರಿಸ್ಥಿತಿ ಇದೆ. ಮಹಿಳಾ ಕೆಲಸಗಾರರಿಗೆ ಅಡುಗೆ ಮಾಡಲು, ತಮ್ಮ ಮಕ್ಕಳು ಚೊಕ್ಕಟವಾಗಿರುವಂತೆ ಮಾಡಲು ಹಾಗೂ ಮಕ್ಕಳಿಗೆ ಸಕಾಲದಲ್ಲಿ ಉಣಬಡಿಸಲು ಸಮಯವೇ ಇಲ್ಲದಂತಾಗಿದೆ. ಹೀಗಾಗಿ, ಈ ಜನರು ಒಂದು ದಿನದಷ್ಟು ಅಥವಾ ಎರಡು ದಿನದಷ್ಟು ತಂಗಳು ಆಹಾರವನ್ನು ತಿನ್ನುತ್ತಿದ್ದಾರೆ. ಅದೇ ಊಟವನ್ನು ಮಕ್ಕಳಿಗೆ ಕೊಡುತ್ತಾರೆ. ಇದರಿಂದ ಈ ಜನರ ಮಕ್ಕಳು ಬಾಲ್ಯದಲ್ಲೇ ರೋಗರುಜಿನಗಳಿಗೆ ತುತ್ತಾಗುತ್ತಾರೆ. ಕೆಲವೊಮ್ಮೆ ಅಂತಹ ರೋಗಗಳು ತೀರಾ ಅಪಾಯಕಾರಿಯಾಗಿಯೂ ಪರಿಣಮಿಸುತ್ತವೆ.

ಹೀಗೆ, ಕೆಲಸದ ಒತ್ತಡದಿಂದಾಗಿ ಮತ್ತು ಅಸಂಬದ್ಧ ಕೆಲಸದ ವೇಳೆಗಳಿಂದಾಗಿ ಕಸಗುಡಿಸುವವರು ಮತ್ತು ಜಾಡಮಾಲಿಗಳು ಹಲವು ಸಂದರ್ಭಗಳಲ್ಲಿ ಹಳಸಲು ಆಹಾರವನ್ನು ತಿನ್ನಬೇಕಾಗುತ್ತದೆ. ಇದು ಸಮಾಜದಲ್ಲಿ ಅವರ ಸ್ವಾಭಿಮಾನ ತಗ್ಗುವುದಕ್ಕೂ ಕಾರಣವಾಗುತ್ತದೆ.

ಈ ಪರಿಸ್ಥಿತಿಯನ್ನು ಮತ್ತು ಗೌರವಕ್ಕೆ ಕುಂದುಂಟು ಮಾಡುವ ರೂಢಿಯನ್ನು ತಪ್ಪಿಸುವ ಸಲುವಾಗಿ ಪೌರಕಾರ್ಮಿಕರಿಗೆ ಸ್ನಾನ ಮಾಡಲು ಮತ್ತು ಅಡುಗೆ ಮಾಡಲು ಸಾಕಷ್ಟು ಸಮಯಾವಕಾಶ ಒದಗಿಸುವಂತೆ ಕೆಲಸದ ವೇಳೆಗಳನ್ನು ರೂಪಿಸುವುದು ಆವಶ್ಯಕ. ಈ ಎಲ್ಲ ಅಂಶಗಳನ್ನು ಪರಾಮರ್ಶಿಸಿದ ತರುವಾಯ, ಪೌರಕಾರ್ಮಿಕರು ದಿನದಲ್ಲಿ ಬೇರೆಬೇರೆ ವೇಳೆಗಳಲ್ಲಿ ಕೆಲಸ ಮಾಡಲು ಹೇಳಕೂಡದೆಂಬ ತೀರ್ಮಾನಕ್ಕೆ ಸಮಿತಿಯು ಬಂದಿದೆ. ಅತ್ಯುತ್ತಮ ವಿಧಾನ ಯಾವುದೆಂದರೆ ಪೌರಕಾರ್ಮಿಕರು ಒಂದುದಿನದಲ್ಲಿ ನಿರಂತರವಾಗಿ 6 ಗಂಟೆ ಕೆಲಸ ಮಾಡಬೇಕು. ಆ ನಂತರ ಬಿಡುವಿನಿಂದಿರಬೇಕು.

**ಸ್ಥಳೀಯ ಸಂಸ್ಥೆಗಳು**

ಪ್ರತಿ 1000 ಜನಸಂಖ್ಯೆಗೆ ಇಬ್ಬರು ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕೆಂಬ ತೀರ್ಮಾನಕ್ಕೆ ಸಮಿತಿಯು ಬಂದಿದೆ. ಏಕೆಂದರೆ ಈ 1:1000 ಬಲವನ್ನು ಮುಂದೆ ಎದುರಾಗಬಹುದಾದ ಹೊಸ ಸನ್ನಿವೇಶ ಸಂದರ್ಭವನ್ನು ನಿಭಾಯಿಸಲು ದುಪ್ಪಟ್ಟು ಮಾಡಬೇಕಾಗುತ್ತದೆ. ಈ ವಿಧಾನವನ್ನು ಅನುಸರಿಸಿದರೆ ಪ್ರತಿಯೊಂದು ಮುನಿಸಿಪಾಲಿಟಿಯು ತನ್ನ ಸಿಬ್ಬಂದಿಯನ್ನು ದುಪ್ಪಟ್ಟು ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಎರಡು ಪಾಳಿಗಳಲ್ಲಿ ಕೆಲಸವನ್ನು ಹಂಚಲು ಸಾಧ್ಯವಾಗುತ್ತದೆ. ಅವರ ಸಾಮಾಜಿಕ ಸ್ಥಾನಮಾನಕ್ಕೆ ಹೊಸದೊಂದು ಆಯಾಮವನ್ನು ಕೊಡಲು ಇದೊಂದೇ ಮಾರ್ಗ.

ಮೊದಲನೇ ಪಾಳಿಯು ಬೆಳಗ್ಗೆ 6.00ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.00ಕ್ಕೆ ಮುಗಿಯಬೇಕು. ನಡುವೆ ಅರ್ಧ ಗಂಟೆ ವಿರಾಮಕ್ಕೆ ಅವಕಾಶ ಇರಬೇಕು. ಎರಡನೆಯ ಪಾಳಿಯು ಮಧ್ಯಾಹ್ನ 12.00 ಕ್ಕೆ ಪ್ರಾರಂಭವಾಗಿ ಸಂಜೆ 6.00ಕ್ಕೆ ಮುಗಿಯಬೇಕು. ನಡುವೆ ಅರ್ಧ ಗಂಟೆ ವಿರಾಮಕ್ಕೆ ಅವಕಾಶ ಇರಬೇಕು. ಮೊದಲನೆಯ ಪಾಳಿಯಲ್ಲಿ ಕೆಲಸ ಮಾಡುತ್ತಿರುವವರು ಒಂದು ತಿಂಗಳಾದ ಮೇಲೆ ಎರಡನೆಯ ಪಾಳಿಯಲ್ಲಿ ಕೆಲಸ ಮಾಡಬೇಕು. ಹಾಗೆಯೇ, ಎರಡನೆಯ ಪಾಳಿಯಲ್ಲಿ ಕೆಲಸ ಮಾಡುತ್ತಿರುವವರು ಒಂದು ತಿಂಗಳಾದ ಮೇಲೆ ಮೊದಲನೆಯ ಪಾಳಿಯಲ್ಲಿ ಕೆಲಸ ಮಾಡಬೇಕು.

ಕೆಲಸದ ವೇಳೆಯಲ್ಲಿ ಈ ಹೊಸ ಬದಲಾವಣೆಯನ್ನು ತಂದರೆ ಪೌರಕಾರ್ಮಿಕರು ಮಧ್ಯಾಹ್ನ 1 ಗಂಟೆಯ ಹೊತ್ತಿಗೆ ಮನೆಯನ್ನು ತಲುಪಲು ಸಾಧ್ಯವಾಗುತ್ತದೆ. ಆ ನಂತರದ ಉಳಿದ ದಿನವೆಲ್ಲ ಆತನಿಗೆ ಲಭ್ಯವಾಗುತ್ತದೆ. ಸ್ನಾನ, ಊಟ ಆದ ಮೇಲೆ, ತನ್ನ ಕುಟುಂಬದ ಯೋಗಕ್ಷೇಮ ಒಳಿತಿನ ಮೇಲೆ ಗಮನ ಕೊಡಲು ಎಂದರೆ ಮಕ್ಕಳನ್ನು ಬೆಳೆಸುವುದು, ಸಂಸಾರದ ಬೇಕು ಬೇಡಗಳನ್ನು ನಿಭಾಯಿಸುವುದಕ್ಕೆ ಸಾಕಷ್ಟು ಸಮಯವನ್ನು ಆತ ವಿನಿಯೋಗಿಸುವುದು ಸಾಧ್ಯವಾಗುತ್ತದೆ.

ಎರಡನೆಯದಾಗಿ, ತನ್ನ ಹಣಕಾಸಿನ ಪರಿಸ್ಥಿತಿಯನ್ನು ಎಷ್ಟರಮಟ್ಟಿಗೆ ಚೆನ್ನಾಗಿ ಸುಧಾರಿಸಿ ಕೊಳ್ಳಬಹುದೆಂಬುದನ್ನು ಚಿಂತಿಸಲು ಹಾಗೂ ಅರಿವಿಗೆ ತಂದುಕೊಳ್ಳಲು ಆತನಿಗೆ ಸಾಧ್ಯವಾಗುತ್ತದೆ. ಇಡೀ ಮಧ್ಯಾಹ್ನದಷ್ಟು ಕಾಲ ಆತನಿಗೆ ಸಿಗುತ್ತದೆಯಾದ್ದರಿಂದ ತನ್ನ ಹಣಕಾಸಿನ ಆದಾಯವನ್ನು ಹೆಚ್ಚಿಸಿಕೊಳ್ಳಲು ಯಾವುದಾದರೂ ಇನ್ನೊಂದು ಉಪವೃತ್ತಿಯನ್ನು ಕೈಗೊಳ್ಳಲು ಅವಕಾಶ ದೊರೆಯುತ್ತದೆ.

ಮೂರನೆಯದಾಗಿ, ಇನ್ನಿತರ ಸಹೋದ್ಯೋಗಿಗಳಿಗೆ ಮನರಂಜನೆಗೆ ಸಮಯ ಸಿಕ್ಕಿದಂತೆಯೇ ತನಗೂ ಮನರಂಜನೆಗೆ ಸಮಯ ಸಿಗುತ್ರದೆ. ಇದರಿಂದ ತನ್ನ ಬದುಕನ್ನು ಹೊಸ ಪರಿಸ್ಥಿತಿಗೆ ಒಗ್ಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗಾಗಿ ಆತನ ಆರೋಗ್ಯದಲ್ಲಿ ಗಣನೀಯ ಸುಧಾರಣೆಯಾಗುತ್ತದೆ ಹಾಗಾದಾಗ ಆತ ಸಂಪೂರ್ಣ ಹಾಗೂ ಆರೋಗ್ಯಕರ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

ಕೊನೆಯದಾಗಿ, ವಿರಾಮಕ್ಕೆ ಹೆಚ್ಚು ಸಮಯ ಸಿಗುವುದರಿಂದ, ಇತರರನ್ನು ಗಮನಿಸಲು ಹಾಗೂ ಅವರುಗಳು ಹೇಗೆ ಸಾರ್ಥಕ ಜೀವನ ನಡೆಸುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಲು ಆತನಿಗೆ ಅವಕಾಶ ಒದಗುತ್ತದೆ.

ನಾವು ಮಾಡಿರುವ ಅವಲೋಕನವನ್ನು ಈ ಜನರು ತಿಳಿದುಕೊಂಡರೆ ಈ ಜನರು ಒಳ್ಳೆಯ ಮತ್ತು ಹೆಚ್ಚು ಅರ್ಥಪೂರ್ಣ ಜೀವನವನ್ನು ನಡೆಸುವ ತಿಳುವಳಿಕೆ ಮೂಡುತ್ತದೆ. ಈ ಜನರು ಸಮಾಜದೊಂದಿಗೆ ಬೆರೆಯುತ್ತಾರೆ. ಕಾಲಕ್ರಮೇಣ ಈ ಜನರೂ ಕೂಡ ಉಪಯುಕ್ತ ಪ್ರಜೆಗಳೆಂಬುದನ್ನು ಬಹುತೇಕ ಸಮುದಾಯದವರು ಒಪ್ಪಿಕೊಳ್ಳುತ್ತಾರೆ.

**ಓವರ್ ಟೈಂ ಕೆಲಸ**

ಜರೂರಿನ ಸಂದರ್ಭ ಸನ್ನಿವೇಶಗಳಲ್ಲಿ ಪೌರಕಾರ್ಮಿಕರನ್ನು ಕರೆಸಿ ಹೆಚ್ಚಿಗೆ ಸಮಯ ಕೆಲಸ ಮಾಡಬೇಕೆಂದು ಹೇಳಿದಾಗ, ಅಂತಹವರಿಗೆ ಅವರ ವಾಡಿಕೆಯ ವೇತನ ಮತ್ತು ಭತ್ಯೆಯ ದುಪ್ಪಟ್ಟಿಗೆ ಸಮನಾದ ಹೆಚ್ಚುವರಿ ಭತ್ಯವನ್ನು ಅವರಿಗೆ ಕೊಡುವುದು ಅವಶ್ಯಕ. ಆದರೆ, ಯಾರೇ ಮಹಿಳಾ ಕೆಲಸಗಾರರನ್ನು ಸಂಜೆ 6.00ರ ನಂತರ ಹೆಚ್ಚುವರಿ ಕೆಲಸ ಮಾಡಬೇಕೆಂದು ಹೇಳಬಾರದು.

**ವಾರದ ರಜಾ ದಿನಗಳು**

ಬೆಂಗಳೂರು ಕಾರ್ಪೊರೇಷನ್ ಸೇರಿದಂತೆ ರಾಜ್ಯದಲ್ಲಿರುವ ಅನೇಕ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ಆಯಾಯ ಸ್ಥಳೀಯ ಸಂಸ್ಥೆಗಳ ಮರ್ಜಿಗೆ ತಕ್ಕಂತೆ ಎರಡೂವರೆ ದಿನಗಳು ಮಾತ್ರ ವಾರದ ರಜಾ ದಿನಗಳನ್ನು ಕೊಡುತ್ತವೆ. ಕೆಲವು ಮುನಿಸಿಪಾಲಿಟಿಗಳಲ್ಲಂತೂ, ಕೇವಲ ಒಂದೂವರೆ ದಿನವನ್ನು, ಅದೂ ಈ ಜನರು ತುಂಬಾ ಆಯಾಸದ ಹಾಗೂ ಅಪಾಯಕಾರಿ ಕೆಲಸ ಮಾಡಿದ್ದರೂ ವಾರದ ರಜಾದಿನವನ್ನಾಗಿ ಕೊಡುತ್ತಿವೆ. ಪೌರಕಾರ್ಮಿಕರನ್ನು ಸರ್ಕಾರಿ ಇಲಾಖೆಗಳ ನಿಯತ IV ನೇ ದರ್ಜೆ ನೌಕರರಂತೆಯೇ ಸಮಾನವಾಗಿ ಕಾಣಬೇಕೆಂದು ಸರ್ಕಾರವು ಈಗಾಗಲೇ ಆದೇಶಗಳನ್ನು ಹೊರಡಿಸಿರುವುದರಿಂದ IV ನೇ ದರ್ಜೆ ನೌಕರರು ಯಾವೆಲ್ಲ ಸವಲತ್ತುಗಳಿಗೆ ಅರ್ಹರೋ ಅವೆಲ್ಲವುಗಳಿಗೆ ಪೌರಕಾರ್ಮಿಕರೂ ಅರ್ಹರು. ಮಲ್ಕಾನಿ ಹಾಗೂ ಪಾಂಡ್ಯ ಸಮಿತಿಗಳೂ ಸಹ ಕಸ ಗುಡಿಸುವವರು ಹಾಗೂ ಜಾಡಮಾಲಿಗಳಿಗೆ ಪೂರ್ಣ ವಾರದ ರಜದಿನವನ್ನು ಕೊಡಬೇಕೆಂದು ಈಗಾಗಲೇ ಶಿಫಾರಸು ಮಾಡಿವೆ. ರಾಜ್ಯದಲ್ಲಿರುವ ಯಾವುದೇ ಮುನಿಸಿಪಾಲಿಟಿಯು ಯಾವ ಕಾರಣಕ್ಕೂ ಈ ಸವಲತ್ತನ್ನು ಮೊಟಕು ಮಾಡಕೂಡದು.

ಆದ್ದರಿಂದ, ಪೌರಕಾರ್ಮಿಕರಿಗೆ ಒಂದು ಪೂರ್ಣ ವಾರದ ರಜಾದಿನವನ್ನು ಮಂಜೂರು ಮಾಡಬೇಕೆಂದು ಅದನ್ನು ಎರಡೂವರೆಯಷ್ಟಕ್ಕೆ ಭಾಗ ಮಾಡಬಾರದೆಂದು ಹಾಗೆ ಮಾಡಿದ್ದಾದರೆ ಯಾವ ಉದ್ದೇಶವು ಈಡೇರುವುದಿಲ್ಲವೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಪೌರಕಾರ್ಮಿಕರು ವಿಲಕ್ಷಣದ ಬಗೆಯ ಕೆಲಸ ಮಾಡಲು ಹೇಳಲಾಗುತ್ತದೆಯಾದ್ದರಿಂದ ಆಯಾಯ ಸ್ಥಳೀಯ ಸಂಸ್ಥೆಯು ಈ ರಜಾದಿನಗಳನ್ನು ಕಸಗುಡಿಸುವ

ಹಾಗೂ ಜಾಡಮಾಲಿ ಕೆಲಸಕ್ಕೆ ಅಡ್ಡಿಯಾಗದಂತೆ ವ್ಯವಸ್ಥೆ ಮಾಡಬೇಕು. ಹಾಗಾದಾಗ ಎಲ್ಲ ಪೌರಕಾರ್ಮಿಕರು ಏಕ ಕಾಲದಲ್ಲಿ ವಾರದ ರಜಾ ದಿನದ ಮೇಲೆ ಹೋಗುವುದಿಲ್ಲ. ಸ್ಥಳೀಯ ಸಂಸ್ಥೆಗಳು ತಮ್ಮತಮ್ಮ ಅಧೀನದಲ್ಲಿರುವ ಪೌರಕಾರ್ಮಿಕರಿಗೆ ಒಂದು ಪೂರ್ಣ ವಾರದ ರಜಾದಿನವನ್ನು ಮಂಜೂರು ಮಾಡುವುದು ಶಾಸನಾತ್ಮಕವಾಗಿ ಕಡ್ಡಾಯವಾದುದನ್ನಾಗಿ ಮಾಡಬೇಕೆಂದು ಸಮಿತಿಯು ಭಾವಿಸುತ್ತದೆ.

**ಕೆಲಸದ ಹೊರೆ**

ಆಧುನಿಕ ನಾಗರಿಕತೆಯು ಜನಸಂಖ್ಯೆಗೆ ಹೆಚ್ಚು ಮಾರಕವಾದಂತಹ ಜೀವಿ ಪರಿಸರ ಹಾಗೂ ಪರಿಸರ ಮಾಲಿನ್ಯವನ್ನು ತಂದೊಡ್ಡಿದೆ. ಜನರೂ ಸಹ ಪರಿಸರ ನೈರ್ಮಲ್ಯ ಹಾಗೂ ಸ್ವಚ್ಛತೆ ಬಗ್ಗೆ ತೀರಾ ಅಸಡ್ಡೆಯಿಂದಿದ್ದಾರೆ. ಈ ದಿನದ ನಾಗರಿಕತೆಯು ಪುರುಷರನ್ನು, ಮಹಿಳೆಯರನ್ನು ಹೆಚ್ಚುಹೆಚ್ಚು ಉದಾಸೀನರನ್ನಾಗಿ ಮತ್ತು ತಳಮಳಿಸುತ್ತಲೇ ಇರುವ ಮನಸ್ಥಿತಿಯವರನ್ನಾಗಿ ಮಾಡಿದೆ. ಏನೇ ಸಂಭವಿಸಿದರೂ ನಮಗದು ಸಂಬಂಧಪಟ್ಟಿಲ್ಲವೇನೋ ಎಂಬಂತೆ ಇರುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈಗಿನ ಪೀಳಿಗೆಯವರೂ ಸಹ ಇತರ ಜನರ ನಾಗರಿಕ ಹಕ್ಕುಗಳ ಬಗ್ಗೆ ಕೊಂಚಮಟ್ಟಿಗೆ ಸಂವೇದನಾ ಶೂನ್ಯರಾಗಿದ್ದಾರೆ. ಈ ಪರಿಣಾಮವಾಗಿ ನಗರ ಜನಸಂಖ್ಯೆಯ ಪ್ರಮಾಣ ಹೆಚ್ಚುತ್ತಿದೆ.

ಬಹುತೇಕ ಎಲ್ಲ ನಗರ ಪ್ರದೇಶಗಳಲ್ಲಿ ಅಂಗಡಿ ಮಾಲೀಕರು ತಮ್ಮ ಅಂಗಡಿಗಳನ್ನು ಬೆಳಗ್ಗೆ ತಡವಾಗಿ ತೆರೆಯುತ್ತಾರೆ. ತಮ್ಮ ಅಂಗಡಿಗಳನ್ನು ತೆರೆದಾದ ಮೇಲೆ ಒಳಗಿನ ಕಸಕಡ್ಡಿಗಳನ್ನೆಲ್ಲಾ ಬೀದಿಗೆ ಎಸೆಯುತ್ತಾರೆ. ಅಷ್ಟು ಹೊತ್ತಿಗಾಗಲೇ ಎಂದರೆ ಬೆಳಬೆಳಗ್ಗೆಯೇ ಪೌರಕಾರ್ಮಿಕರು ಅಂತಹ ಬೀದಿಗಳನ್ನು ಸ್ವಚ್ಛ ಮಾಡಿ ಮನೆಗೆ ಹೋಗಿರುತ್ತಾರೆ. ಎರಡನೆಯದಾಗಿ, ನಮ್ಮ ಜನರೂ, ತಮ್ಮ ಮಕ್ಕಳು ಬೀದಿಗಳ ಬದುಗಳ ಮೇಲೆ ಕಕ್ಕ, ಉಚ್ಚೆ ಮಾಡಿಸುವುದನ್ನು ಈಗಲೂ ರೂಢಿ ಮಾಡಿಕೊಂಡಿದ್ದಾರೆ. ಆ ಗಲೀಜು ದಿನವಿಡೀ ಅಲ್ಲೇ ಉಳಿದು ಸಾರ್ವಜನಿಕರಿಗೆ ಹೇಸಿಗೆ ಹಾಗೂ ಅನಾನುಕೂಲ ಆಗುತ್ತಿರುತ್ತದೆ.

ಸಾರ್ವಜನಿಕರು ಈ ಬಗೆಯ ಅನೈರ್ಮಲ್ಯದ ಕೃತ್ಯಗಳನ್ನು ಮಾಡದಂತೆ ತಡೆಯುವ ಸೂಕ್ತ ಶಾಸನವೊಂದನ್ನು ತರಬೇಕು. ಅಂಗಡಿ ಮಾಲೀಕರು ಯಾವುದೇ ಬಗೆಯ ಕಸಕಡ್ಡಿಗಳನ್ನು ಬೀದಿಗೆ ಎಸೆಯಕೂಡದು.

ಬಹುತೇಕ ವಿದೇಶಿ ನಗರಗಳಲ್ಲಿ ಪ್ರತಿಯೊಂದು ಮನೆಯಲ್ಲೂ ಹಾಗೂ ಅಂಗಡಿ ಮುಂಗಟ್ಟುಗಳಲ್ಲೂ ಮುಚ್ಚಳ ಇರುವ ಲೋಹದ ಕಸದ ತೊಟ್ಟಿಗಳಿರುತ್ತವೆ. ಈ ಕಸದ ತೊಟ್ಟಿಗೆ ಕಸವನ್ನು ಹಾಕಲಾಗುತ್ತದೆ. ತುಂಬಿರುವ ಕಸದತೊಟ್ಟಿಯನ್ನು ಕಸವನ್ನು ಸ್ವಚ್ಛ ಮಾಡುವವರು ವಾಹನದಲ್ಲಿ ಬೆಳಬೆಳಗ್ಗೆಯೇ ಬಂದು ಕಸವನ್ನು ವಿಲೇ ಮಾಡಲು ಹಿಂದಿನ ದಿನ ತೆಗೆದುಕೊಂಡು ಹೋಗಿದ್ದ ಕಸದ ತೊಟ್ಟಿಯ ಬದಲಿಗೆ ಬದಲಿ ಕಸದ ತೊಟ್ಟಿಯನ್ನು ಇಡುತ್ತಾರೆ. ಹೀಗೆ ಎಲ್ಲ ಕಸವನ್ನು ಯಾರಿಗೂ ಅನಾನುಕೂಲವಾಗದಂತೆ ಕಸವನ್ನು ತೆಗೆದುಕೊಂಡು ಹೋಗುತ್ತಾರೆ. ಇದರಿಂದ ಒಳ್ಳೆಯ ಗುಣಮಟ್ಟದ ನೈರ್ಮಲ್ಯ ಏರ್ಪಡುತ್ತದೆ. ಇಂತಹ ಕಸದ ತೊಟ್ಟಿಗಳನ್ನು ಟಿನ್‌ನಿಂದ ಮಾಡಿದ್ದು ಅಗ್ಗದ ಸಲಕರಣೆಯಾಗಿರುತ್ತದೆ. ಈ ವಿಧಿವಿಧಾನವನ್ನೇ ನಮ್ಮ ಸ್ಥಳೀಯ ಸಂಸ್ಥೆಗಳೂ ಅನುಸರಿಸಬೇಕೆಂದು ಸಮಿತಿಯು ತೀವ್ರ ಶಿಫಾರಸು ಮಾಡುತ್ತದೆ. ಪ್ರತಿಯೊಂದು ಮನೆಗೂ ಅಂಥವೆರಡು ಕಸದ ತೊಟ್ಟಿಗಳನ್ನು ಅವುಗಳ ಬೆಲೆ ತೀರಾ ಕಡಿಮೆ ಇರುತ್ತದೆಯಾದ್ದರಿಂದ ಮನೆ ಮಾಲೀಕರೇ ಆ ಬೆಲೆ ಕೊಟ್ಟು ತಂದು ಮನೆಯಲ್ಲಿಟ್ಟುಕೊಳ್ಳಬಹುದು. ಈ ವಿಧಾನವನ್ನು ಅನುಸರಿಸಿದರೆ ಪಟ್ಟಣಗಳನ್ನು ಮತ್ತು ನಗರಗಳನ್ನು ತುಂಬಾ ಚೆನ್ನಾಗಿ ಇಟ್ಟುಕೊಳ್ಳುವುದು ಸಾಧ್ಯವಾಗುತ್ತದೆ.

ಆದ್ದರಿಂದ, ಆರಂಭದಲ್ಲಿ, ಕಾರ್ಪೊರೇಷನ್‌ಗಳು ಹಾಗೂ ನಗರ ಮುನಿಸಿಪಾಲಿಟಿಗಳು ಈ ವಿಧಾನವನ್ನು ಹಂತಹಂತವಾಗಿ ಪ್ರಾಯೋಗಿಕವಾಗಿ ಅನುಸರಿಸಲು ಸಮಿತಿಯು ಶಿಫಾರಸು ಮಾಡುತ್ತದೆ.

ಪ್ರಾಥಮಿಕ ತರಗತಿಯಿಂದ ಮಾಧ್ಯಮಿಕ ಹಂತದವರೆಗಿನ ಎಲ್ಲ ವಿದ್ಯಾರ್ಥಿಗಳಿಗೆ ವಾರದಲ್ಲಿ ಕನಿಷ್ಠ ಒಂದು ಪೀರಿಯಡ್‌ನಲ್ಲಿ, ನಾಗರಿಕ ಪ್ರಜ್ಞೆ ಮೂಡಿಸಲು ಮತ್ತು ಸಾರ್ವಜನಿಕ ನೈರ್ಮಲ್ಯದ ಬಗ್ಗೆ ಬೋಧಿಸಲು ಶಿಕ್ಷಣ ಇಲಾಖೆಯು ಸಾರ್ವಜನಿಕ ನೈರ್ಮಲ್ಯ ವಿಷಯವನ್ನು ಅಧ್ಯಯನಗಳ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಸಮಿತಿಯು ಸಲಹೆ ಮಾಡುತ್ತದೆ.

ಚಿತ್ರ

**ಅತ್ಯುತ್ತಮ ವಿಧಾನವೆಂದರೆ ಕೈ ಹಿಡಿಕೆಯಿಂದ ಉದ್ದದ ಪೊರಕೆಯನ್ನು ಬಳಸಿ ದಾರಿಗಳನ್ನು ಗುಡಿಸುವುದು.**

ಮೇಲೆ ಹೇಳಿರುವ ಕಾರಣಗಳಿಂದಾಗಿ ಪೌರಕಾರ್ಮಿಕರ ಕೆಲಸ ದಿನೇದಿನೇ ಹೆಚ್ಚಳವಾಗುತ್ತಿದೆ. ಈ ಸಮಸ್ಯೆಯನ್ನು ನಿಭಾಯಿಸುವ ಸಲುವಾಗಿ ಈಗಿರುವ 1000 ಜನಸಂಖ್ಯೆಗೆ ಒಬ್ಬ ಕಸಗುಡಿಸುವವನನ್ನು ನೇಮಕ ಮಾಡುವ ವಿಧಾನವನ್ನು ಬದಲಾಯಿಸುವುದು ಅವಶ್ಯಕ. ಬದಲಿಗೆ ಪ್ರತಿ 500 ಜನಸಂಖ್ಯೆಗೆ ಒಬ್ಬ ಕಸಗುಡಿಸುವವನು ಇರುವುದು ಅವಶ್ಯಕ.

ಅನೇಕ ಪಟ್ಟಣಗಳಲ್ಲಿ ಹಾಗೂ ನಗರಗಳಲ್ಲಿ ಮುನಿಸಿಪಲ್ ಏರಿಯಾಗಳು ಒತ್ತಟ್ಟಿಗಿರುವುದಿಲ್ಲ. ಮುನಿಸಿಪಲ್ ಏರಿಯಾಗಳು ಅನೇಕ ದಿಕ್ಕುಗಳಲ್ಲಿ ವಿಸ್ತಾರವಾಗಿ ಹರಡಿಕೊಂಡಿರುತ್ತವೆ ಮತ್ತು ಅವ್ಯವಸ್ಥಿತವಾಗಿರುತ್ತವೆ. ಅಷ್ಟೊಂದು ವಿಶಾಲವಾದ ಪ್ರದೇಶವನ್ನು ಒಬ್ಬನೇ ಒಬ್ಬ ಸ್ವಚ್ಛ ಮಾಡುವುದು ಹಾಗೂ ಒಪ್ಪ ಓರಣವಾಗಿಟ್ಟುಕೊಳ್ಳುವುದು ಸಾಧ್ಯವಿಲ್ಲ. ದೃಷ್ಟಾಂತವಾಗಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಮುನಿಸಿಪಾಲಿಟಿ ಬಗ್ಗೆ ಹೇಳಬೇಕಾಗಿದೆ. 16,000 ಜನಸಂಖ್ಯೆಗೆ ಅಂಕೋಲಾದಲ್ಲಿ ಒಬ್ಬಳೇ ಮಹಿಳಾ ಪೌರಕಾರ್ಮಿಕಳಿದ್ದಾಳೆ. ಇಡೀ ನಗರವನ್ನು ಒಬ್ಬಾಕೆಯೇ ಒಪ್ಪ ಓರಣವಾಗಿಟ್ಟುಕೊಳ್ಳಲು ಸಾಧ್ಯವೇ?

**ದಾರಿ ಕಸಗುಡಿಸುವುದು**

ಈಗ ಪುರುಷ ಮತ್ತು ಮಹಿಳೆ ಇಬ್ಬರೂ ಕಸಗುಡಿಸುವವರಿಗೆ ದಾರಿಗಳನ್ನು ಗುಡಿಸುವ ಶ್ರಮದ ಕೆಲಸ ನಿಗದಿ ಮಾಡಲಾಗಿದೆ. ಅವರುಗಳು ಚಿಕ್ಕ ಪೊರಕೆಗಳಲ್ಲಿ ಸೊಂಟ ಬಗ್ಗಿಸಿ ದಾರಿ ನೆಲವನ್ನು ಗುಡಿಸುತ್ತಿದ್ದು

ಉಸಿರಾಡುವಾಗ ಧೂಳು ಒಳಕ್ಕೆ ಹೋಗುತ್ತದೆ. ಈ ಜನರು ಬೆನ್ನು ನೋವಿಗೂ ತುತ್ತಾಗುತ್ತಿದ್ದು, ಅದರಿಂದಾಗಿ ಬೆನ್ನು ಮೂಳೆ ಸಾಲುಗಳಿಗೂ ಹಾನಿಯಾಗುತ್ತದೆ.

ಆದ್ದರಿಂದ, ಮೈಬಗ್ಗಿಸದೆಯೇ ನಿಂತು ಕಸಗುಡಿಸುವುದು ಸಾಧ್ಯವಾಗುವಂತೆ ಈ ಜನರಿಗೆ ಕೈ ಹಿಡಿಕೆಯುಳ್ಳ ದೊಡ್ಡ ಪೊರಕೆಗಳನ್ನು ಒದಗಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಈಗಿನ ವಿಧಾನದಿಂದ ಹಲವು ವರ್ಷಗಳವರೆಗೆ ಕಸಗುಡಿಸಿದ್ದರಿಂದ ಬೆನ್ನು ಮೂಳೆ ಸಾಲುಗಳಿಗೆ ಹಾನಿಯಾಗಿ ಜೀವಮಾನವಿಡೀ ಹಾಗೆಯೇ ಇರುತ್ತವೆ. ಆದ್ದರಿಂದ, ಕೈ ಹಿಡಿಕೆಯುಳ್ಳ ಉದ್ದ ಪೊರಕೆಗಳನ್ನು ಬಳಕೆ ಮಾಡಲು ಸಮಿತಿಯು ಶಿಫಾರಸು ಮಾಡುತ್ತದೆ.

ಯಾರೇ ಕಸಗುಡಿಸುವ ವ್ಯಕ್ತಿಯು ಜನ ನಿಬಿಡ ಪ್ರದೇಶದ ರಸ್ತೆಯಲ್ಲಿ 15,000 ಚದರಡಿಗಿಂತಲೂ ಹೆಚ್ಚಿಗೆ ಉದ್ದಕ್ಕೆ ರಸ್ತೆಯ ಹಾಗೂ ಅಲ್ಲಲ್ಲಿ ಹರಡಿರುವ ಜನ ಪ್ರದೇಶದ ರಸ್ತೆಯಲ್ಲಿ 30,000 ಚದರಡಿಗಿಂತಲೂ ಹೆಚ್ಚಿಗೆ ಉದ್ದಕ್ಕೆ ರಸ್ತೆಯ ಕಸಗುಡಿಸಕೂಡದು. ಹಾಗೆಯೇ, ಗಟಾರಗಳನ್ನು ಸ್ವಚ್ಛ ಮಾಡುವವರು ವಾಡಿಕೆಯ ಉದ್ದಗಲಗಳ ಪೈಕಿ 1000 ಅಡಿಗಿಂತಲೂ ಹೆಚ್ಚಿಗೆ ಉದ್ದಕ್ಕೆ ಗಟಾರಗಳನ್ನು ಸ್ವಚ್ಛಗೊಳಿಸಬಾರದು.

ಗುಡಿಸಿದ ನಂತರ ಸಂಗ್ರಹಿತವಾದ ಕಸ ಕಡ್ಡಿಯನ್ನು ತೆಗೆದು ವಿಲೇ ಮಾಡುವುದು ಅವಶ್ಯಕ. ಈ ಕೆಲಸಕ್ಕಾಗಿ ಪ್ರತಿಯೊಬ್ಬ ಕಸಗುಡಿಸುವವನಿಗೂ ಒಬ್ಬ ವ್ಯಕ್ತಿಯ ನೆರವನ್ನು ಒದಗಿಸಬೇಕು. ನಿಯತ ಮಧ್ಯಂತರಗಳಲ್ಲಿ ಕಸಕಡ್ಡಿಯನ್ನು ತೆಗೆದು ಕಸದ ತೊಟ್ಟಿಗಳಲ್ಲಿ ಹಾಕುವುದು ಆ ಸಹಾಯಕನ ಕರ್ತವ್ಯವಾಗಿರಬೇಕು.

ಈಗಿನ ಕಸದ ತೊಟ್ಟಿಗಳಿಗೆ ಮುಚ್ಚಳ ಇರುವುದಿಲ್ಲ. ಹಾಗಾಗಿ ಕಸಕಡ್ಡಿ ಹಾಗೂ ಗಲೀಜು ಎಲ್ಲ ಬಗೆಯ ಸೋಂಕುಗಳು ಹರಡುತ್ತವೆ. ಈ ಆಪತ್ತನ್ನು ತಡೆಗಟ್ಟುವ ಸಲುವಾಗಿ, ಕಸಕಡ್ಡಿ, ಗಲೀಜು ಹೊರ ಹರಿಯದಂತೆ ಕಸದ ತೊಟ್ಟಿಗಳಿಗೆ ಮುಚ್ಚಳ ಇರಬೇಕು ಅದು ಆವಶ್ಯಕ.

ಹಳೆಯ ಮೈಸೂರು ಪ್ರದೇಶದಲ್ಲಿ, ಕಸಗುಡಿಸುವವನು ಗಟಾರಗಳನ್ನು ಸ್ವಚ್ಛಗೊಳಿಸುವುದು, ರಸ್ತೆ ಮೇಲಿರುವ ಮಲವನ್ನು ತೆಗೆದು ಸಾಗಿಸುವುದು ಮತ್ತು ಸಾರ್ವಜನಿಕ ಶೌಚಾಲಯಗಳನ್ನು ಹಾಗೂ ಮೂತ್ರಾಲಯಗಳನ್ನು ಸ್ವಚ್ಛಗೊಳಿಸುವುದು ಮುಂತಾದಂಥ ಜಾಡಮಾಲಿ ಕೆಲಸವನ್ನು ಸಹ ಮಾಡಬೇಕಿತ್ತು. ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಕಸಗುಡಿಸುವವರಿಗೆ ಮತ್ತು ಜಾಡಮಾಲಿಗಳಿಗೆ ಅವರವರ ನಿರ್ದಿಷ್ಟ ಕೆಲಸಗಳನ್ನು ಮಾತ್ರವೇ ಗೊತ್ತುಪಡಿಸಲಾಗಿತ್ತು. ಕಸಗುಡಿಸುವ ಕೆಲಸವನ್ನು ಮತ್ತು ಜಾಡಮಾಲಿ ಕೆಲಸವನ್ನು ಬೇರೆ ಬೇರೆ ವ್ಯಕ್ತಿಗಳು ಮಾಡುತ್ತಾರೆ. ಕಸಗುಡಿಸುವವನಿಗೆ ಕಸಗುಡಿಸುವ ಕೆಲಸದ ಹೊರತು ಯಾವುದೇ ಬಗೆಯ ಜಾಡಮಾಲಿ ಕೆಲಸ ಮಾಡುವಂತೆ ಹೇಳಕೂಡದೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಗಟಾರಗಳನ್ನು ಹಾಗೂ ಆಳುಗುಂಡಿಗಳನ್ನು ಸ್ವಚ್ಛಗೊಳಿಸುವ ಮತ್ತು ಕಸದ ತೊಟ್ಟಿಯಲ್ಲಿರುವ ಕಸ, ಗಲೀಜನ್ನು, ಕಸ ಒಟ್ಟುವ ಜಾಗಕ್ಕೆ ಸಾಗಣೆ ಮಾಡುವ ಕೆಲಸವನ್ನು ನಿರ್ವಹಿಸಲು ಪ್ರತ್ಯೇಕ ಮತ್ತು ಸ್ವತಂತ್ರ ಸಿಬ್ಬಂದಿಯನ್ನು ನೇಮಕ ಮಾಡಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಅಂತಹ ಕೆಲಸಗಾರರನ್ನು ಪೌರಕಾರ್ಮಿಕರಿಗೆ ಸಂಬಂಧಿಸಿದಂತೆ ಶಿಫಾರಸು ಮಾಡಿದ 2:1000 ಅನುಪಾತದಲ್ಲಿ ಸೇರಿಸಬಾರದು.

ದಾರಿಗಳಲ್ಲಿ ಇಟ್ಟಿರುವ ಕಸದ ತೊಟ್ಟಿಗಳಲ್ಲಿ ಸಂಗ್ರಹಿತವಾಗಿರುವ ಕಸವನ್ನು ಸ್ವಚ್ಛಗೊಳಿಸುವ ಸಲುವಾಗಿ ಲಾರಿಗಳನ್ನು ನಿಯೋಜಿಸಿಕೊಳ್ಳಲಾಗುತ್ತದೆ. ಕಸವನ್ನು ಸಾಗಿಸುವ ಪ್ರತಿಯೊಂದು ವಾಹನದಲ್ಲಿ ಆ ಕೆಲಸಕ್ಕಾಗಿ ಆರು ಜನ ಕೆಲಸಗಾರರಿರಬೇಕು. ಇಬ್ಬರು ಬ್ಯಾಸ್ಕೆಟ್‌ಗೆ ತುಂಬಬೇಕು, ಇನ್ನಿಬ್ಬರು ಬ್ಯಾಸ್ಕೆಟ್‌ನ್ನು ಲಾರಿಗೆ ಒಯ್ಯಬೇಕು, ಮತ್ತಿಬ್ಬರು ವಾಹನದ ಮೇಲೆ ಇರುವ ಬ್ಯಾಸ್ಕೆಟ್‌ನಲ್ಲಿರುವುದನ್ನು ಲಾರಿಗೆ ಹಾಕಬೇಕು. ಲಾರಿಗೆ ಹಾಕಿರುವ ಕಸದ

ಮೇಲೆ ಕುಳಿತುಕೊಳ್ಳುವುದಕ್ಕೆ ಯಾರೇ ಕೆಲಸಗಾರನಿಗೆ ಅವಕಾಶ ಕೊಡಬಾರದು. ಕುಳಿತುಕೊಳ್ಳಲು ಕೆಲಸಗಾರರಿಗೆ ಪ್ರತ್ಯೇಕ ಕ್ಯಾಬಿನ್ ಒದಗಿಸಬೇಕು.

ಈ ಬಗೆಯ ಅಪಾಯಕಾರಿ ಕೆಲಸಕ್ಕೆ ನಿಯೋಜಿಸಿಕೊಂಡಿರುವ ಈ ಜನರಿಗೆ, ಬೇರೆ ಎಲ್ಲ ಇತರ ವರ್ಗಗಳ ಜನರಿಗೆ ಒದಗಿಸಿರುವ ಮಡಿಕೆಯ ಸಮವಸ್ತ್ರಗಳ ಜೊತೆಗೆ, ಒಂದು ಜೊತೆ ರಬ್ಬರ್ ಕೈಗವಸುಗಳನ್ನು, ಮುಖ ರಕ್ಷಕ ಗವಸುಗಳನ್ನು ಹಾಗೂ ಗಂ–ಬೂಟುಗಳನ್ನು ಒದಗಿಸಬೇಕು.

**ಮ್ಯಾನ್ ಹೋಲ್ ಚೇಂಬರ್ ಕೆಲಸಗಾರರು**

ಆಳುಗುಂಡಿಯನ್ನು ಏರಿದ ಮ್ಯಾನ್ ಹೋಲ್‌ಗಳನ್ನು ಸ್ವಚ್ಛ ಮಾಡುವ ಕೆಲಸ ಕಷ್ಟಕರವಾದುದಷ್ಟೇ ಅಲ್ಲ. ಎಲ್ಲ ರೀತಿಯ ಅಪಾಯಕಾರಕವೂ ಹೌದು. ಆಳುಗುಂಡಿಯು ಸರಿ ಸುಮಾರು 6–12' ಅಡಿ ಆಳದ್ದು ಮತ್ತು ಮೂರು ಅಡಿ ವ್ಯಾಸದಷ್ಟಿರುತ್ತದೆ. ಅದರ ಮೂಲಕ ಪಟ್ಟಣದ ಎಲ್ಲ ಮಲ ಹಾಗೂ ಕಸಕಡ್ಡಿ ಸಾಗಿ ಹೋಗುತ್ತಿರುತ್ತದೆ. ಸಾಗಿ ಹರಿದು ಹೋಗುತ್ತಿರುವುದು ನಿಂತಾಗಲೆಲ್ಲ ಏನಾದರೊಂದು ಸಮಸ್ಯೆ ಉಂಟಾಗುತ್ತದೆ. ಹಾಗಾದಾಗ, ಪೌರಕಾರ್ಮಿಕರು ಆಳುಗುಂಡಿಗೆ ಇಳಿದು ದೋಷವನ್ನು ಸರಿಪಡಿಸಬೇಕಾಗುತ್ತದೆ. ಪೌರಕಾರ್ಮಿಕರು ತನ್ನ ನಿಕ್ಕರ್‌ನಲ್ಲೇ ಆಳುಗುಂಡಿಯ ಒಳಕ್ಕೆ ಇಳಿಯುತ್ತಾನೆ. ಅವನು ನೆಟ್ಟಗೆ ನಿಂತುಕೊಳ್ಳಲು ಆಗುವುದಿಲ್ಲ. ಏಕೆಂದರೆ ಆಳುಗುಂಡಿಯ ರಚನೆಯೇ ನೆಟ್ಟಗೆ ನಿಂತುಕೊಳ್ಳಲಾಗದಂತಿರುತ್ತದೆ.

ಅವನು ದೋಷವೇನಿದೆ ಎಂಬುದನ್ನು ಕಂಡುಕೊಳ್ಳಲು ಬಾಗಬೇಕಾಗುತ್ತದೆ. ಹಸಿ ಹಸಿ ಮಲ ಅವನ ಸುತ್ತಲೂ ಇರುತ್ತದೆ. ಕೆಲವೊಮ್ಮೆ ಅವನ ಮುಖಕ್ಕೆಲ್ಲಾ ಮಲ ಅಂಟಿಕೊಳ್ಳುತ್ತದೆ. ಆಳುಗುಂಡಿಯನ್ನು ಸ್ವಚ್ಛ ಮಾಡುವಾಗ ಆಗುವ ನೈಜ ಪರಿಸ್ಥಿತಿ ಇದು.

ಈ ಕೆಲಸವು ತುಂಬಾ ಅಪಾಯಕಾರಿಯಾದುದರಿಂದ, ಈ ಒಂದು ಹೇಸಿಗೆಯ ಕೆಲಸ ಮಾಡುವ ಕೆಲಸಗಾರರಿಗೆ ಸೂಕ್ತ ಪರಿಹಾರ ನೀಡುವುದು ಆವಶ್ಯಕ. ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಸಮಿತಿಯು ಆಳುಗುಂಡಿಗಳಲ್ಲಿ ಇಳಿದು ಸ್ವಚ್ಛ ಮಾಡುವ ಈ ಪೌರಕಾರ್ಮಿಕರಿಗೆ ಈ ಮುಂದೆ ವಿವರಿಸಿರುವ ಸಮವಸ್ತ್ರಗಳನ್ನು ಒದಗಿಸಬೇಕು ಮತ್ತು ಅವರ ಸಂಬಳದ ಶೇ.30 ರಷ್ಟು ವಿಶೇಷ ಭತ್ಯೆಯನ್ನು ಕೊಡಬೇಕು.

ಗ್ಯಾಸ್ ಮಾಸ್ಕನ್ನು ಜೋಡಿಸಿದ, ಇಡೀ ದೇಹವನ್ನು ಮುಚ್ಚಿಕೊಳ್ಳುವ ಚರ್ಮದ ಅಂಗಿಯನ್ನು ಒದಗಿಸಬೇಕು. ಈ ಅಂಗಿಯು ಪೌರಕಾರ್ಮಿಕನಿಗೆ ಸಂಪೂರ್ಣ ರಕ್ಷಣೆ ನೀಡುತ್ತದೆ. ಹಾಗಾಗಿ, ಆತ ಉಸಿರಾಡುವಾಗ ಆಳು ಗುಂಡಿಯ ಒಳಗಿರುವ ಯಾವುವೇ ವಿಷಕಾರಿ ಅನಿಲಗಳು ಒಳಹೋಗುವುದಿಲ್ಲ. ಎರಡನೆಯದಾಗಿ, ಅವನು ಮಲವನ್ನು ಕೈಯಿಂದ ಮುಟ್ಟುವುದಿಲ್ಲ ಹಾಗೂ ಅದು ಅವನ ಮೈಗೆ ಅಂಟಿಕೊಳ್ಳುವುದೂ ಇಲ್ಲ. ಗ್ಯಾಸ್ ಮಾಸ್ಕ್ ಕೂಡ ಉಸಿರುಗಟ್ಟುವುದನ್ನು ಹಾಗೂ ಆಳುಗುಂಡಿಗಳ ಒಳಗಡೆ ಇರುವ ಅನೇಕ ವಿಷಕಾರಿ ಅನಿಲಗಳು ಉಸಿರಾಡುವಾಗ ಒಳಹೋಗದಂತೆ ತಡೆಯುತ್ತದೆ.

ಅವನು ತನ್ನ ಕೆಲಸ ಮುಗಿಸಿದ ನಂತರ ಚರ್ಮದ ಆ ಅಂಗಿಯನ್ನು ಸ್ವಚ್ಛ ಮಾಡಿಕೊಳ್ಳಬಹುದು. ಹಾಗೆ ಸ್ವಚ್ಛ ಮಾಡಿಕೊಂಡು ದಿನಂಪ್ರತಿ ಅದನ್ನು ಬಳಕೆ ಮಾಡಿಕೊಳ್ಳಬಹುದು.

ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳು ಈ ರಕ್ಷಕ ಉಡುಪನ್ನು ಏನೊಂದು ನೆಪ ಹೇಳದಯೇ ಒದಗಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಹಣಕಾಸು ಮುಗ್ಗಟ್ಟಿನ ಕಾರಣಗಳಿಂದಾಗಿ ಯಾವುದೇ ಮುನಿಸಿಪಾಲಿಟಿಗೆ ಈ ಉಡುಪಿಗೆ ತಗಲುವ ವೆಚ್ಚವನ್ನು ಭರಿಸಲಾಗದಿದ್ದರೆ ಅಂತಹ ಪ್ರಕರಣಗಳಲ್ಲಿ ಸರ್ಕಾರವೇ ಈ ಉಡುಪಿನ ವೆಚ್ಚವನ್ನು ಭರಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಗಟಾರಗಳನ್ನು ಸ್ವಚ್ಛ ಮಾಡಲು ಹಾಗೂ ಇತರ ಬಗೆಯ ಸಾರ್ವಜನಿಕ ಜಾಡಮಾಲಿ ಕೆಲಸ ಮಾಡಲು ನಿಯೋಜಿಸಿಕೊಂಡಿರುವವರು ಈ ಹಿಂದೆಯೇ ಶಿಫಾರಸು ಮಾಡಿರುವಂತೆ ಅವರ ಒಟ್ಟು ಸಂಬಳದ ಶೇ.25 ರಷ್ಟು ವಿಶೇಷ ಹೆಚ್ಚುವರಿ ಭತ್ಯೆಗೆ ಅರ್ಹರಾಗಬೇಕು.

**ಸಮವಸ್ತ್ರಗಳು ಮತ್ತು ರಕ್ಷಕ ಬಟ್ಟೆಬರೆ**

(i) ಈಗ ಅರ್ಧ ತೋಳಿನ ಅಂಗಿಗಳನ್ನು ಮತ್ತು ನಿಕ್ಕರುಗಳನ್ನು ಪುರುಷ ಕಾರ್ಮಿಕರಿಗೆ ಒದಗಿಸಲಾಗುತ್ತಿದೆ. ಈ ಸಮವಸ್ತ್ರವು ಅವರನ್ನು ಗೌರವದಿಂದ ಕಾಣುವಂತಹ ಲಕ್ಷಣಉಳ್ಳದ್ದಾಗಿಲ್ಲ. ಅವರಿಗೆ ಈ ಮುಂದೆ ಹೇಳಿರುವವುಗಳನ್ನು ಒದಗಿಸಬೇಕು. ಪ್ರತಿ ವರ್ಷವೂ ಮೂರು ಜೊತೆ ಬುಷ್ ಶರ್ಟ್‌ಗಳು, ಪೂರ್ಣ ಉದ್ದದ ಟ್ರೌಷರ್‌ಗಳು, ಅತಿಯಾದ ಬಳಕೆಯನ್ನು ತಡೆದುಕೊಳ್ಳುವಂತಹ ಎರಡು ಜೊತೆ ಚಪ್ಪಲಿಗಳು ಅಥವಾ ಕ್ಯಾನ್‌ವಾಸ್ ಶೂಗಳು (ಕೆಲಸಗಾರರ ಆಯ್ಕೆಯಂತೆ) ಮತ್ತು ಕಣ್ಣುಗಳಿಂದ ಮಾತ್ರ ನೋಡುವಷ್ಟೆ ಜಾಗವುಳ್ಳ ಸಾಧನದಂತಹ ಶಿರಸ್ತ್ರಾಣ.

(ii) ಮಹಿಳಾ ಕೆಲಸಗಾರರಿಗೆ ಈ ಮುಂದೆ ಹೇಳಿರುವವುಗಳನ್ನು ಕೊಡಬೇಕು. ವರ್ಷಕ್ಕೆ 8 ಗಜದ ಮೂರು ಹತ್ತಿಸೀರೆಗಳು, ಮೂರು ರವಿಕೆಗಳು ಎರಡು ಜೊತೆ ಚಪ್ಪಲಿಗಳು.

(iii) ಎಲ್ಲ ಕೆಲಸಗಾರರಿಗೆ ಪ್ರತಿವರ್ಷ ಒಂದು ಜೊತೆ ಬೆಚ್ಚಗಿನ ಸಮವಸ್ತ್ರಗಳನ್ನು ಕೊಡಬೇಕು. ಚಳಿಗಾಲದಲ್ಲಿ ಹಾಗೂ ಬೆಟ್ಟಗುಡ್ಡದ ಮತ್ತು ಮಲೆನಾಡು ಪ್ರದೇಶದಲ್ಲಿ ಅವರು ಕೆಲಸ ಮಾಡುತ್ತಾರಾದ್ದರಿಂದ ಇದು ಅವಶ್ಯಕ. ಬೆಟ್ಟ ಗುಡ್ಡದ ಹಾಗೂ ಮಲೆನಾಡು ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ಒಂದು ಜೊತೆ ಕಂಬಳಿಗಳನ್ನು ಕೊಡಬೇಕು.

ಚಿತ್ರ – 1 – 2

**ಚಿತ್ರ i ಪೌರಕಾರ್ಮಿಕರಿಗಾಗಿ ಮುನಿಸಿಪಾಲಿಟಿಗಳು ಕಟ್ಟಿಸಿಕೊಟ್ಟಿರುವ ಮತ್ತು ನಿರ್ವಹಿಸುತ್ತಿರುವ ಮನೆಗಳು ಹೀಗಿವೆ. ನೋಡಿ**
**ಚಿತ್ರ ii ಪೌರಕಾರ್ಮಿಕರು ಹರುಕು ಜೋಪಡಿಗಳಲ್ಲಿ/ಮತ್ತು ಶೆಡ್‌ಗಳಲ್ಲಿ ಬಲವಂತದಿಂದ ಬದುಕು ಸಾಗಿಸುತ್ತಿದ್ದಾರೆ.**

(iv) ಮಲವನ್ನು ಸಾಗಿಸುವ, ಸ್ವಚ್ಛ ಮಾಡುವ ಮತ್ತು ವಿಲೆ ಮಾಡುವ, ಆಳುಗುಂಡಿಗಳಲ್ಲಿ, ತೆರೆದ ಚರಂಡಿಗಳಲ್ಲಿ, ಗಟಾರಗಳಲ್ಲಿ ತ್ಯಾಜ್ಯ ಸುರಿತ–ಅಂಗಳಗಳಲ್ಲಿ ಕೆಲಸ ಮಾಡುವವರಿಗೆ ಕೈ–ಗವಸುಗಳು, ಮುಖ ಗವಸುಗಳು ಮತ್ತು ಗಂ–ಬೂಟುಗಳನ್ನು ಸಹ ಕೊಡಬೇಕು. ಅಲ್ಲದೆ, ಕಸ ಕಡ್ಡಿ, ಮಾನವ ತ್ಯಾಜ್ಯವನ್ನು ಸಾಗಣೆ ಮಾಡುವ ಲಾರಿಗಳಲ್ಲಿ ಮತ್ತು ಇತರ ವಾಹನಗಳಲ್ಲಿ ಕೆಲಸ ಮಾಡುವವರಿಗೂ ಈ ಸೌಲಭ್ಯಗಳನ್ನು ಕೊಡಬೇಕು.

(v) ಎಲ್ಲ ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಈ ಮುಂದಿನವುಗಳನ್ನು ಕೊಡಬೇಕು:

(ಎ) ಪ್ರತಿ ವರ್ಷ ಒಂದು ಜೊತೆ ದೊಡ್ಡ ಟವೆಲ್‌ಗಳು
(ಬಿ) ಪ್ರತಿ ತಿಂಗಳೂ 501 ಸೋಪಿನ ಅಥವಾ ಮೈಸೂರು ವಾಷಿಂಗ್ ಸೋಪಿನ ಒಂದು ಪುಲ್ ಬಾರ್
(ಸಿ) ಪ್ರತಿ ತಿಂಗಳೂ ಎರಡು ಲೈಫ್ ಬಾಯ್ ಸೋಪುಗಳು

# ಅಧ್ಯಾಯ –VIII
## ಬದುಕಿನ ಸ್ಥಿತಿಗತಿಗಳು

ಭಾರತದಲ್ಲಿ ಪ್ರಚಲಿತವಿರುವ ಜಾತಿ ಪದ್ಧತಿಯು ಅನೇಕ ಸಾಮಾಜಿಕ ಅನಿಷ್ಠಗಳಿಗೆ ಮೂಲ ಕಾರಣವಾಗಿದೆ. ಜಾತಿ ಪದ್ಧತಿಯು ರಾಷ್ಟ್ರದ ಅಂತಃಸತ್ವವನ್ನೇ ಹಾಳು ಮಾಡಿದೆ. ಅಸ್ಪೃಶ್ಯತೆ ಆಚರಣೆ ಯಾವಾಗ ಹುಟ್ಟಿಕೊಂಡಿತು ಎನ್ನುವುದು ಹೇಳುವುದು ತುಂಬಾನೆ ಕಷ್ಟ. ಅಸ್ಪೃಶ್ಯರನ್ನು ಸಮಾಜ ಜೀವನದ ಮುಖ್ಯವಾಹಿನಿಯಿಂದ ಹೊರಗಿಡಲಾಗಿತ್ತು. ಗ್ರಾಮಗಳ ಮತ್ತು ಪಟ್ಟಣ ಸರಹದ್ದುಗಳ ಹೊರಗಡೆ ಹಾಗೂ ಇತರೆ ಜಾತಿಗಳಿಂದ ದೂರ ಇದ್ದು ಬದುಕು ಸಾಗಿಸಬೇಕಿತ್ತು.

ವಿದೇಶಿ ಆಳ್ವಿಕೆಯಿಂದ ದೇಶವು ಬಿಡುಗಡೆಯಾದ ಮೇಲೆ ಭಾರತದ ಸಾಮಾಜಿಕ ಸಂರಚನೆಗೆ ಕಳ್ಳಿ ಮುಳ್ಳುಗಳಂತೆ ಸುತ್ತಿಕೊಂಡಿದ್ದ ಅನೇಕ ಅನಿಷ್ಟ ಆಚರಣೆಗಳು ತೊಲಗಿ ಹೋಗುತ್ತವೆ, ಸಮಾಜದ ದಮನಿತ ಸಮುದಾಯದ ಹಾಗೂ ವರ್ಗಗಳ ಜನರಿಗೆ ಒಳ್ಳೆಯ ಮತ್ತು ಹೆಚ್ಚು ವಿಹಿತವಾದ ಅವಕಾಶಗಳು ಸಿಗುತ್ತವೆಯೆಂದು ಆಶಿಸಲಾಗಿತ್ತು. ಆದರೆ, ಅದು ಕನಸಾಗಿಯೇ ಉಳಿದಿದೆ.

ಕಸಗುಡಿಸುವ ಮತ್ತು ಜಾಡಮಾಲಿ ಕೆಲಸ ಮಾಡುತ್ತಿರುವ ಈ ಜನರಲ್ಲಿ ಬಹುತೇಕರು ಪರಿಶಿಷ್ಟ ಜಾತಿಯವರು. ಹಿಂದೂಗಳ ದೃಷ್ಟಿಯಲ್ಲಿ ಈ ಜನರು ಅಸ್ಪೃಶ್ಯರು. ಪರಿಶಿಷ್ಟ ಜಾತಿಯ ಇತರೆ ವರ್ಗದವರೂ ಕಸಗುಡಿಸುವವರನ್ನು ಹಾಗೂ ಜಾಡಮಾಲಿಗಳನ್ನು 'ಅಸ್ಪೃಶ್ಯ'ರೆಂದು ಪರಿಗಣಿಸಿದ್ದಾರೆ. ರಾಜ್ಯದ ಹಲವಾರು ಭಾಗಗಳಲ್ಲಿ ಕಸಗುಡಿಸುವವರು ಹಾಗೂ ಜಾಡಮಾಲಿಗಳು, ಅವರು ಮಾಡುತ್ತಿರುವ ಹೇಸಿಗೆಯ ಕೆಲಸದಿಂದಾಗಿ ಪರಿಶಿಷ್ಟ ಜಾತಿಯ ಇತರೆ ವರ್ಗಗಳ ಜನರಿಂದ ದೂರ ಇರುವಂತೆ ಮಾಡಲಾಗಿದೆ. ಈ ಜನರದೇ ಸಮುದಾಯದವರಿಗೆ ಬೇಡವಾದ ಅನಪೇಕ್ಷಿತರಾದ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಎಲ್ಲ ನಂಬಿಕೆಗಳನ್ನು ಕಳೆದುಕೊಂಡು ಪ್ರಾಚೀನ ಕಟ್ಟುಪಾಡುಗಳಂತೆ ಈಗಿನ ದುಸ್ಥಿತಿಗೆ ಒಗ್ಗಿ ಹೋಗಿದ್ದಾರೆ. ತಮ್ಮ ಬಾಂಧವರಿಂದಲೇ ಸಾಮಾಜಿಕವಾಗಿ ಬೇರ್ಪಟ್ಟಿರುವುದು ಬದುಕಿನ ಬಗ್ಗೆ ಅವರು ವಿಭಿನ್ನ ದೃಷ್ಟಿಕೋನವನ್ನು ಬೆಳಸಿಕೊಳ್ಳುವಂತಾಯಿತು.

1947ರ ನಂತರ, ಭಾರತ ಸರ್ಕಾರವು, ದೇಶದಲ್ಲಿರುವ ಸ್ವೀಪರುಗಳ ಮತ್ತು ಜಾಡಮಾಲಿಗಳ ಬದುಕಿನ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಅಧ್ಯಯನ ಮಾಡುವ ಸಲುವಾಗಿ ಹಲವಾರು ಸಮಿತಿಗಳನ್ನು ನೇಮಿಸಿತು. 1958ರಲ್ಲಿ ರಚಿಸಿದ ಬರ್ವೆ ಸಮಿತಿ, 1957ರಲ್ಲಿ ರಚಿಸಿದ ರಾಯ್ ಸಮಿತಿ, 1967ರಲ್ಲಿ ರಚಿಸಿದ ಪಾಂಡ್ಯ ಸಮಿತಿ ಇವೆಲ್ಲವೂ ಕಸಗುಡಿಸುವವರ ಮತ್ತು ಜಾಡಮಾಲಿಗಳ ಬದುಕಿನ ಸ್ಥಿತಿಗತಿಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸಿವೆ ಹಾಗೂ ಸುಧಾರಣೆಗೆ ಅನೇಕ ಶಿಫಾರಸುಗಳನ್ನು ಮಾಡಿವೆ. ವಿಷಾದದ ಸಂಗತಿಯೆಂದರೆ ಈ ಸಮಿತಿಗಳು ಮಾಡಿದ ಶಿಫಾರಸುಗಳೆಲ್ಲವೂ ಕಾಗದದಲ್ಲಿಯೇ ಉಳಿದುಬಿಟ್ಟಿವೆ. ಈ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಈ ಶಿಫಾರಸುಗಳನ್ನು ಪ್ರಾಮಾಣಿಕವಾಗಿ ಹಾಗೂ ಸದ್ಭಾವನೆಯಿಂದ ಕಾರ್ಯರೂಪಕ್ಕೆ ತಂದಿದ್ದಿದ್ದರೆ ಕೊನೇ ಪಕ್ಷ ಶೇ 5 ರಷ್ಟಾದರೂ ಕಸಗುಡಿಸುವವರ ಮತ್ತು ಜಾಡಮಾಲಿಗಳ ಬದುಕಿನ ಸ್ಥಿತಿಗತಿಗಳಲ್ಲಿ ಗಣನೀಯ ಸುಧಾರಣೆಯಾಗುತ್ತಿತ್ತು. ಹಾಗಾಗಲಿಲ್ಲ, ಈ ಜನರು ಶತಮಾನಗಳಿಗೆ ಮುಂಚೆ ಯಾವ ಸ್ಥಿತಿಯಲ್ಲಿದ್ದರೋ ಈಗಲೂ ಅದೇ ಸ್ಥಿತಿಯಲ್ಲಿದ್ದಾರೆ.

ಕಸಗುಡಿಸುವವರು ಹಾಗೂ ಜಾಡಮಾಲಿಗಳು ಎಲ್ಲಿ ವಾಸ ಮಾಡಬೇಕೆಂದು ಹೇಳಲಾಗಿದೆಯೋ ಆ ಜಾಗವು ಪ್ರಾಣಿಗಳೂ ಕೂಡ ವಾಸಿಸಲು ಯೋಗ್ಯವಾದ ಸ್ಥಳ ಅಲ್ಲ. ಸಣ್ಣ ಗುಡ್ಡ ಬೆಟ್ಟಗಳ ಇಳಿಜಾರುಗಳಲ್ಲಿ ಅಥವಾ ಜವುಗು ಜಾಗಗಳಲ್ಲಿ ಅಥವಾ ನಮ್ಮ ಸಮಾಜದ ಇತರ ಸವರ್ಣೀಯ ಹಿಂದೂಗಳಿಗೆ ಬೇಡವಾದ ಬಹಳ ಅಸಹ್ಯದ ಜಾಗಗಳಲ್ಲಿ ಅವರು ಗುಡಿಸಲುಗಳನ್ನು ಹಾಗೂ ಶೆಡ್‌ಗಳನ್ನು ಕಟ್ಟಿಕೊಳ್ಳುವಂತಾಗಿದೆ.

ಕಸಗುಡಿಸುವವರು ಹಾಗೂ ಜಾಡಮಾಲಿಗಳು ವಾಸಿಸುತ್ತಿರುವ ಇಂಥ ಜಾಗಗಳಲ್ಲಿ ಮಳೆ ಬಂದಾಗ ನೀರು ತುಂಬಿ ನಿಂತು ಅವು ಎಲ್ಲ ಸಾಂಕ್ರಾಮಿಕ ರೋಗಗಳನ್ನು ಹರಡುವ ತಾಣಗಳಾಗುತ್ತವೆ. ಯಾವ ಜನರು ಪಟ್ಟಣವನ್ನು ಸ್ವಚ್ಛ ಮಾಡುವರೋ ಹಾಗೂ ಜನರು ಸ್ವಚ್ಛ ಹಾಗೂ ಆರೋಗ್ಯಕರ ಜೀವನ ಸಾಗಿಸಲು ಕೆಲಸ ಮಾಡುವರೋ ಅದೇ ಜನರು ದೀನ ಸ್ಥಿತಿಗಳಲ್ಲಿ ವಾಸಿಸುವಂತಾಗಿದೆ.

ಕಸಗುಡಿಸುವವರ ಮತ್ತು ಜಾಡಮಾಲಿಗಳ ಹೀನ ದುಸ್ಥಿತಿಗಳನ್ನು ಕಂಡುಕೊಳ್ಳಲು ಸರ್ಕಾರದ ಯಾವುದೇ ಏಜೆನ್ಸಿಯಾಗಲಿ ಅಥವಾ ಸಾಮಾಜಿಕ ಸಂಘ ಸಂಸ್ಥೆಗಳಾಗಲಿ ಅಥವಾ ಯಾವುದೇ ಖಾಸಗಿ ಕಲ್ಯಾಣ ಸಂಸ್ಥೆಗಳಾಗಲೀ ಈ ಜನರ ಕಾಲೋನಿಗಳಿಗೆ ಹೋಗಿ ನೋಡಿಯೇ ಇಲ್ಲ. ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣಾ ಸಿಬ್ಬಂದಿಯವರೂ ಕೂಡ ಈ ಜನರಿರುವ ಆವರಣಗಳಿಗೆ ಹೋಗಿ ನೋಡಿಯೇ ಇಲ್ಲದಿರುವುದು ದುರಾದೃಷ್ಟದ ಸಂಗತಿ.

ರಾಜ್ಯದಲ್ಲಿರುವ 225 ಸ್ಥಳೀಯ ಸಂಸ್ಥೆಗಳ ಪೈಕಿ ಕೇವಲ 87 ಸ್ಥಳೀಯ ಸಂಸ್ಥೆಗಳು ಅವುಗಳ ಈ ಕೆಲಸಗಾರರಿಗೆ ವಸತಿ ಗೃಹಗಳನ್ನು ಒದಗಿಸಿವೆ. ಸುಮಾರು 5000 ದಷ್ಟು ಪೌರಕಾರ್ಮಿಕರಿರುವ ಬೆಂಗಳೂರಿನಲ್ಲೂ ಕೇವಲ 800 ಜನರಿಗೆ ವಸತಿ ಗೃಹಗಳನ್ನು ಒದಗಿಸಲಾಗಿದೆ. ಅವರೆಲ್ಲರೂ ನಿವೃತ್ತಿಯಾದ ಮೇಲೆ ವಸತಿ ಗೃಹಗಳನ್ನು ತೆರವು ಮಾಡಬೇಕಾಗುತ್ತದೆ. ಈ ಒಂದು ಕಾರಣಕ್ಕಾಗಿಯೇ ಪ್ರತಿಯೊಬ್ಬ ಪೌರಕಾರ್ಮಿಕನು, ತಾನು ವಾಸಿಸುತ್ತಿರುವ ಮನೆಯನ್ನು ತನ್ನಲ್ಲಿಯೇ ಉಳಿಸಿಕೊಳ್ಳುವ ಸಲುವಾಗಿ ತನ್ನ ವೃತ್ತಿಗೆ ತನ್ನ ಕುಟುಂಬದಲ್ಲಿನ ಒಬ್ಬ ವ್ಯಕ್ತಿಯನ್ನು ಹಾಕಬಯಸುತ್ತಾನೆ.

ಸಮಿತಿಯು ಈ ವಿಷಯದ ಎಲ್ಲ ಮಗ್ಗುಲುಗಳನ್ನು ಅಧ್ಯಯನ ಮಾಡಿದೆ. ಸೇವೆಯಲ್ಲಿರುವಾಗಲೇ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಸರಿಯಾಗಿ ವಿನ್ಯಾಸಗೊಳಿಸಿ ಎಲ್ಲ ಸಮುದಾಯದವರೂ ಇರುವಂತಹ ಉಚಿತ ನಿವೇಶನಗಳನ್ನು ಕೊಡಬೇಕೆಂದು ಮತ್ತು ಮನೆಯನ್ನು ಕಟ್ಟಿಕೊಳ್ಳಲು ಸಾಲ ನೀಡಬೇಕೆಂದು, ಮನೆ ಕಟ್ಟುವಾಗ ಮೇಲ್ವಿಚಾರಣೆಗೂ ಸೌಲಭ್ಯ ಒದಗಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಸರ್ಕಾರವು ತನ್ನ ಆದೇಶ ಸಂ: ಡಿಪಿಸಿ 11 ಬಿಎಸಿ 74 ದಿನಾಂಕ 26–03–1974 ರಲ್ಲಿ (ಲಗತ್ತಿಸಿದೆ, ಭಾಗ 3 ನೋಡಿ) ಪರಿಶಿಷ್ಟ ಜಾತಿಗಳ ಜನರಿಗೆ 1000 ರೂಪಾಯಿ ಬೆಲೆಯ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಮಂಜೂರು ಮಾಡಿದೆ. ಎಲ್ಲ ಸ್ಥಳೀಯ ಸಂಸ್ಥೆಗಳು ತಮ್ಮ ಕೆಲಸಗಾರರಿಗಾಗಿ ಈ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು.

ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳು ಕಸಗುಡಿಸುವವರ ಹಾಗೂ ಜಾಡಮಾಲಿಗಳ ಈಗಿರುವ ಕಾಲೋನಿಗಳನ್ನು ಸುಧಾರಿಸುವ ಗೊಡವೆಗೇ ಹೋಗದಿರುವುದು ತೀರಾ ವಿಷಾದನೀಯ ಸಂಗತಿ. ಎಷ್ಟೋ ಕಾಲೋನಿಗಳಲ್ಲಿ ಕುಡಿಯುವ ನೀರಿನ ಸೌಕರ್ಯವನ್ನೇ ಒದಗಿಸಿಲ್ಲ. ಬಹಳಷ್ಟು ಕಾಲೋನಿಗಳಲ್ಲಿ ದಾರಿದೀಪಗಳೇ ಇಲ್ಲ. ಶೌಚಾಲಯ ಸೌಕರ್ಯವೇ ಇಲ್ಲ. ಕಸುಗುಡಿಸುವವರ ಹಾಗೂ ಜಾಡಮಾಲಿಗಳ ಕಾಲೋನಿಗಳು ಭೂಮಿಯ ಮೇಲಿನ ನರಕದ ಕೂಪಗಳಂತಿವೆ. 1940ರಲ್ಲಿ ಅಂಥದೊಂದು ಕಾಲೊನಿಯನ್ನು ನೋಡಿದ ಮಹಾತ್ಮ ಗಾಂಧಿಯವರು "ಬಾಂಬೆ ಮುನಿಸಿಪಾಲಿಟಿಯ ಹರಿಜನ ಕೆಲಸಗಾರರ ಮನೆ ಸ್ಥಿತಿಗತಿಗಳನ್ನು ನಾನು ನೋಡಿದಾಗ ಕಣ್ಣೀರು ಸುರಿದವು. ಬಾಂಬೆ ಸುಂದರ ನಗರ ನಿಜ, ಆದರೆ ಅದರ ಸೌಂದರ್ಯ ಎಲ್ಲಿದೆ? ಮಲಬಾರ್ ಹಿಲ್‌ನಲ್ಲಿ ಅಥವಾ ಮಹಾಲಕ್ಷ್ಮಿಯ ಕಚರಪಟ್ಟಿಯಲ್ಲಿ ನೋಡಿ, ನಾವು ಅಲ್ಲೆಲ್ಲಾ ಹೇಗೋ ಇರುತ್ತೇವೆ" ಆದರೆ ಈ ಹರಿಜನರ ಗತಿಯೇನು? ಸಭ್ಯ ವಸತಿಯನ್ನು ಒದಗಿಸಬೇಡವೇ? ಬಾಂಬೆಯಲ್ಲಿ ಈ ಜನರು ಪ್ಲೇಗ್ ಕೂಪದಲ್ಲಿದ್ದಾರೆ ಬನ್ನಿ ನೋಡಿ.

ಮುನಿಸಿಪಾಲಿಟಿಯವರು ಕೂಡಲೇ ಈ ಜನರಿರುವ ಪರಿಸರದಲ್ಲಿ ಸುಧಾರಣೆ ತರಬೇಕು. ರೊಚ್ಚು ನೀರು ಹರಿಯುವ ಚರಂಡಿಯ ಹತ್ತಿರ ನೀವು ಒಂದು ದಿನವಾದರೂ ಇರಬಲ್ಲಿರಾ"?

1940ರಲ್ಲಿ ಮಹಾತ್ಮಾ ಗಾಂಧಿಯವರು ಏನು ಹೇಳಿದ್ದರೋ ಅದೇ ಸ್ಥಿತಿ ಈಗಲೂ ಇದೆ. ಭಾರತದಲ್ಲಿ ಎಲ್ಲೂ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಸ್ಥಿತಿಗತಿಗಳಲ್ಲೂ ಸುಧಾರಣೆ ತರಲು ಅಥವಾ ಬದಲಾವಣೆ ತರುವ ಗೊಡವೆಗೇ ಯಾರೂ ಹೋಗಿಲ್ಲ.

ಉದ್ಯೋಗದಾತರಾದ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ವಸತಿಗೃಹಗಳನ್ನು ಈ ಜನರು ಈಗ ಅವರ ಸ್ವಂತ ಮನೆಗಳಲ್ಲಿದ್ದರೂ ಒದಗಿಸುವುದು ಅವುಗಳ ಜವಾಬ್ದಾರಿ.

ಈ ಮೇಲಿನ ಶಿಫಾರಸ್ಸುಗಳನ್ನು ಕಟ್ಟುನಿಟ್ಟಾಗಿ ಹಾಗೂ ವಸ್ತುತಃ ಕಾರ್ಯರೂಪಕ್ಕೆ ತರುವವರೆಗೂ ಈ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಬಲವಂತದಿಂದ ವಾಸಿಸುತ್ತಿರುವ ಈಗಿನ ಕಾಲೊನಿಗಳಲ್ಲಿ ಸುಧಾರಣೆ ತರುವುದು ಆವಶ್ಯಕ.

ಮೊದಲು ಮಾಡಬೇಕಾದ ಕೆಲಸವೇನೆಂದರೆ ಬಡಾವಣೆಯನ್ನು ಸ್ವಚ್ಛಗೊಳಿಸಬೇಕು ಅದಕ್ಕೋಸ್ಕರ ಪ್ರತಿದಿನವೂ ಬಡಾವಣೆಯನ್ನು ಸ್ವಚ್ಛ ಮಾಡುವ ಕೆಲಸವನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚು ಕೆಲಸಗಾರರಿಗೆ ವಹಿಸಬೇಕು. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕಾಲೋನಿಗಳಲ್ಲಿ ಸಮರ್ಪಕ ನೈರ್ಮಲ್ಯ ನಿರ್ವಹಣೆ ಕೆಲಸದ ಪರೀಕ್ಷೆ ಮಾಡಲು ಕಮಿಷನರ್‌ರಿಂದ ಅಥವಾ ಚೀಫ್ ಆಫೀಸರ್ ರಿಂದ ಮೇಲ್ವಿಚಾರಣಾ ನಿಯಂತ್ರಣ ಆವಶ್ಯಕ.

ಈ ಬಡಾವಣೆಗಳಿಗೆ ದಾರಿ ದೀಪಗಳನ್ನು, ಶೌಚಾಲಯಗಳನ್ನು ಮತ್ತು ಸಮುದಾಯ ಸ್ನಾನದ ಕೊಠಡಿಗಳನ್ನು ಹಾಗೂ ಸಾಕಷ್ಟು ಸಂಖ್ಯೆಯಲ್ಲಿ ನಲ್ಲಿಗಳನ್ನು ಒದಗಿಸಬೇಕು. ಪೌರಕಾರ್ಮಿಕರ ಮನೆಗಳನ್ನು, ಅವು ಅವರ ಸ್ವಂತ ಮನೆಗಳಾಗಿದ್ದರೂ, ಸ್ಥಳೀಯ ಸಂಸ್ಥೆಗಳೇ ತಮ್ಮ ಖರ್ಚಿನಲ್ಲಿ ಒಂದು ವರ್ಷಕ್ಕೆ ಒಂದು ಬಾರಿ ಹಾಗೂ ಸುಣ್ಣ ಬಣ್ಣ ಬಳಿಸಬೇಕು.

ಪೌರಕಾರ್ಮಿಕರಿಗೆ ಈ ಸೌಲಭ್ಯಗಳನ್ನು ಸಮರೋಪಾದಿಯಲ್ಲಿ ಒದಗಿಸಬೇಕೆಂಬುದನ್ನು ಮತ್ತು ಸಮಾಧಾನಕರ ರೀತಿಯಲ್ಲಿ ದೈನಂದಿನ ನಿರ್ವಹಣೆಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸ್ಥಳೀಯ ಸಂಸ್ಥೆಗಳು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಪೌರಕಾರ್ಮಿಕರಲ್ಲಿ ಸಾಮಾಜಿಕ ಜಾಗೃತಿ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಮತ್ತು ಅವರ ಮನರಂಜನೆಗಾಗಿ, ಒಂದು ರೇಡಿಯೋ ಸೆಟ್, ಮಹಿಳೆಯರಿಗಾಗಿ ಹಾಗೂ ಹುಡುಗಿಯರಿಗಾಗಿ ಒಂದು ಕರಕುಶಲ ವಿಭಾಗ ಮತ್ತು ವ್ಯಾಯಾಮ ಕೊಠಡಿ ಇರುವಂತಹ ಸಮುದಾಯ ಕೇಂದ್ರಗಳನ್ನು ಪೌರಕಾರ್ಮಿಕರ ಈಗಿರುವ ಬಡಾವಣೆಗಳಲ್ಲಿ ಅಥವಾ ಅವುಗಳ ಹತ್ತಿರ ನಿರ್ಮಾಣ ಮಾಡಬೇಕೆಂದು ಸಮಿತಿಯು ಶಿಪಾರಸ್ಸು ಮಾಡುತ್ತದೆ.

**ಚಿತ್ರ**

**ಪೌರಕಾರ್ಮಿಕರ ಕಾಲೋನಿಗಳನ್ನು ಕಡೆಗಣಿಸಲಾಗಿದೆ. ಅವು ರೋಗಾಣುಗಳನ್ನು ಉತ್ಪತ್ತಿ ಮಾಡುವ ಹಾಗೂ ಎಲ್ಲ ಸಾಂಕ್ರಾಮಿಕ ಹಾಗೂ ಸ್ಥಳೀಯ ರೋಗಗಳನ್ನು ಹರಡುವ ತಾಣಗಳಾಗಿವೆ.**

ಪೌರಕಾರ್ಮಿಕರ ಬಡಾವಣೆಗಳ ಹತ್ತಿರ ಯಾವುದೇ ಮದ್ಯಪಾನ ಅಂಗಡಿಯು ಇರಕೂಡದಂತೆ ಸರ್ಕಾರವು ಸಮರ್ಪಕವಾದ ಹಾಗೂ ಖಚಿತ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸ್ಸು ಮಾಡುತ್ತದೆ. ಪೌರಕಾರ್ಮಿಕರಿರುವ ಬಡಾವಣೆಗಳಲ್ಲಿ ಎರಡು ಮೈಲಿಗಳ ಆಸುಪಾಸಿನ ಒಳಗಡೆ ಯಾವುದೇ ಮದ್ಯಪಾನ ಅಂಗಡಿ ಇರಕೂಡದು. ಈಗೇನಾದರೂ ಯಾವುದೇ ಮದ್ಯಪಾನ ಅಂಗಡಿಯು ಪೌರಕಾರ್ಮಿಕರ ಬಡಾವಣೆ ಇದ್ದರೆ ಅದನ್ನು ಕೂಡಲೇ ಅಲ್ಲಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಬೇಕು. ಸರ್ಕಾರವು ತನ್ನ ಆದೇಶ ಸಂ. ಇಎಕ್ಸ್ ಇ.ಇಎಸ್ಎಸ್1293/73–72 ದಿನಾಂಕ: 14–03–1974 ರಲ್ಲಿ ಪರಿಶಿಷ್ಟ ಜಾತಿ ಕಾಲನಿಗಳ ಆಸುಪಾಸಿನಲ್ಲಿ ಹತ್ತಿರ ಇರುವ ಮದ್ಯಪಾನದ ಅಂಗಡಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ನಿರ್ದೇಶನ ಇತ್ತಿದ್ದರೂ ರಾಜ್ಯದಲ್ಲೆಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಯಾವ ಕ್ರಮಗಳನ್ನು ತೆಗೆದುಕೊಂಡಿಲ್ಲ. (ಸರ್ಕಾರದ ಆದೇಶ ಲಗತ್ತಿಸಿದೆ – ಭಾಗ 3 ನೋಡಿ).

ಪೌರಕಾರ್ಮಿಕರ ಬಡಾವಣೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವ್ಯವಸ್ಥೆ ಮಾಡುವುದಷ್ಟೇ ಅಲ್ಲ, ಪೌರಕಾರ್ಮಿಕರು ತಾವು ಈಗ ಮಾಡುತ್ತಿರುವ ಜೀವನ ವಿಧಾನವನ್ನು ಕಾಲಕ್ರಮೇಣ ಬಿಟ್ಟುಬಿಡಲು ಅವರಿಗೆ ಸಂಜೆ ಹೊತ್ತು ತಿಳಿವಳಿಕೆ ನೀಡಬೇಕು. ಇದನ್ನು ಸಮಾಜ ಕಲ್ಯಾಣ, ಜನಾರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವಾರ್ತಾ ಇಲಾಖೆಗಳ ಸಹಯೋಗದೊಂದಿಗೆ ಮಾಡಬಹುದು.

**ವಸತಿ ಗೃಹಗಳು**

ಈ ಮೊದಲೇ ಶಿಫಾರಸು ಮಾಡಿದಂತೆ ಪೌರಕಾರ್ಮಿಕರಿಗೆ ಹಾಗೂ ಇತರೆ ವರ್ಗದ ನೌಕರರಿಗೆ ಎಲ್ಲ ಆಧುನಿಕ ಸೌಲಭ್ಯಗಳುಳ್ಳ ಒಳ್ಳೆಯ ವಸತಿ ಗೃಹಗಳನ್ನು ಒದಗಿಸಬೇಕು.

ಈಗ ಕಟ್ಟಿರುವ ವಸತಿ ಗೃಹಗಳು ಅತ್ಯಂತ ಸಮರ್ಪಕವಾದವುಗಳಲ್ಲ ಹಾಗೂ ಮಾನವ ವಾಸಕ್ಕೆ ಯೋಗ್ಯವಾದವುಗಳೂ ಅಲ್ಲ. ಅನೇಕ ಮನೆಗಳಲ್ಲಿ ಮೇಲ್ಛಾವಣಿಯಿಂದ ನೀರು ಸೋರುತ್ತಿರುತ್ತದೆ. ಗೋಡೆಗಳು ಬಿರುಕುಬಿಟ್ಟಿವೆ. ಸಮರ್ಪಕ ಗಾಳಿ ಬೆಳಕಿನ ವ್ಯವಸ್ಥೆಯೇ ಇಲ್ಲ. ಮನೆಗಳು ಎಷ್ಟೊಂದು ಕಿರಿದಾಗಿವೆಯೆಂದರೆ ಅಲ್ಲಿನ ನಿವಾಸಿಗಳು ಪ್ರಾಣಿಗಳಂತೆ ಕೈಕಾಲು ಮಡಿಸಿಕೊಂಡು ಮುದುರಿಕೊಂಡಿರಬೇಕಾಗುತ್ತದೆ. ಅನೇಕ ಸ್ಥಳಗಳಲ್ಲಿ ಹಿಂದೆ ಹಂದಿಗಳಿದ್ದ ತಾಣಗಳನ್ನು ಹಾಗೂ ಸಾಕಣೆ ಲಾಯಗಳನ್ನು ಪೌರಕಾರ್ಮಿಕರ ವಸತಿ ಗೃಹಗಳಾಗಿ ಪರಿವರ್ತಿಸಲಾಗಿದೆ. ಈಗ ಕಟ್ಟಿರುವ ಮನೆಗಳೂ ಬಿದ್ದು ಹೋಗುತ್ತಿವೆ. ಏಕೆಂದರೆ ಅವುಗಳ ನಿರ್ಮಾಣದಲ್ಲಿ ಸುಟ್ಟಿರದ ಹಸಿ ಇಟ್ಟಿಗೆಗಳನ್ನು ಬಳಕೆ ಮಾಡಲಾಗಿದೆ. ಅವುಗಳ ಸರಿಯಾದ ನಿರ್ವಹಣೆಗೆ ಎಚ್ಚರಿಕೆಯನ್ನು ವಹಿಸಿಲ್ಲ. ಅನೇಕ ಮನೆಗಳನ್ನು ಅವುಗಳನ್ನು ಕಟ್ಟಿದಾಗಿನಿಂದ ಸುಣ್ಣ ಬಣ್ಣ ಬಳಿದೇ ಇಲ್ಲ. ಅನೇಕ ಸ್ಥಳಗಳಲ್ಲಿ ಈ ಮನೆಗಳಲ್ಲಿ ಶೌಚಾಲಯಗಳೇ ಇಲ್ಲ. ಇದು ಯಾವುದೇ ಮುನಿಸಿಪಾಲಿಟಿಗೆ ಶೋಭೆ ತರುವ ಸಂಗತಿಯೇ ಅಲ್ಲ. ಬಡಾವಣೆಯ ನೈರ್ಮಲ್ಯದ ನಿರ್ವಹಣೆ ಮಾಡುವುದರಲ್ಲಿ ಎಲ್ಲಿಯೂ ಗಮನವನ್ನೇ ಹರಿಸಿಲ್ಲ.

ರಾಜ್ಯದ ಅನೇಕ ಸ್ಥಳಗಳಲ್ಲಿ, ಕೇಂದ್ರ ಪುರಸ್ಕೃತ ಯೋಜನೆ ಅಡಿಯಲ್ಲಿ ಸ್ಥಳೀಯ ಸಂಸ್ಥೆಗಳು, ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನಗಳನ್ನು ಸ್ವೀಕರಿಸಿದ್ದರೂ ಪೌರಕಾರ್ಮಿಕರ ಬಳಕೆಗಾಗಿ ಈವರೆಗೂ ಯಾವ ಮನೆಗಳನ್ನೂ ಕಟ್ಟಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ವಿಷಯದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಸರಿಯಾದ ಮೇಲ್ವಿಚಾರಣೆ ಹಾಗೂ ನಿಯಂತ್ರಣವನ್ನು ಚಲಾಯಿಸಿಲ್ಲ. ಹಿಂದಿನ ವರ್ಷದ ಸಾಧನೆಯನ್ನು ಗಮನಿಸಿ ಹಾಗೂ ಹಿಂದಿನ ವರ್ಷಗಳಲ್ಲಿ ವಾಸ್ತವಿಕವಾಗಿ ಖರ್ಚು ಮಾಡಿದ ಹಣ ಎಷ್ಟು ಎಂಬುದನ್ನು ನಿರ್ಧರಿಸಿ ಹೊಸದಾಗಿ ಅನುದಾನವನ್ನು ಕೊಡಲಾಗುತ್ತದೆಯಾದ್ದರಿಂದ ವಸತಿ ಯೋಜನೆಗಾಗಿ ಎಷ್ಟೇ ಹಣವನ್ನು ಹಂಚಿಕೆ ಮಾಡಿದರೂ ಅದನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಪೌರಕಾರ್ಮಿಕರಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬರುವ ಮೂಲಗಳ ಬಗ್ಗೆ ಸಮೀಕ್ಷೆ ನಡೆಸುವುದು ಸಹ ಆವಶ್ಯಕ.

ಬಹು ಮಹಡಿ ಫ್ಲಾಟ್‌ಗಳನ್ನು ಅಥವಾ ಏಕವಸತಿಗಳನ್ನು ನಿರ್ಮಾಣ ಮಾಡಬೇಕು. ಪ್ರತಿಯೊಂದು ಫ್ಲಾಟ್ ನಲ್ಲಿ ಅಥವಾ ವಸತಿ ಮನೆಯಲ್ಲಿ ವಿಶಾಲವಾದ ಅಂಗಳ, ಒಂದು ಕೊಠಡಿ, ಅಡಿಗೆ ಮನೆ, ಬಾತ್ – ಕಂ – ಲಾವೆಟರಿ ಇರಬೇಕು. ಪ್ರತಿಯೊಂದು ಮನೆಯಲ್ಲಿಯು ನಲ್ಲಿ ಇರಬೇಕು.

ಈ ವಸತಿಗಳಲ್ಲಿ ಅಥವಾ ಬಹು ಮಹಡಿ ಫ್ಲಾಟ್‌ಗಳು ಇರುವ ಸುತ್ತಲೂ ಶುದ್ಧ ಗಾಳಿಯ ಉಸಿರಾಟಕ್ಕಾಗಿ ಬಯಲು ವಾಯು ವಿಹಾರ ಪ್ರದೇಶ (ಲಂಗ್–ಸ್ಪೇಸ್) ಇರಬೇಕು. ಎಲ್ಲೆಲ್ಲಿ ಏಕ ವಸತಿಗಳನ್ನು ಕಟ್ಟಲಾಗಿದೆಯೋ ಅಲ್ಲಿ ಕೈತೋಟಗಳನ್ನು ಬಹು ಮಹಡಿ ಫ್ಲಾಟ್‌ಗಳಿರುವ ಕಡೆ ಹಿಂದುಗಡೆ ಹಸುಗಳನ್ನು ಅಥವಾ ಎಮ್ಮೆಗಳನ್ನು ನಿವಾಸಿಗಳು ಸಾಕಲು ಸಾಧ್ಯವಾಗುವಂತೆ ಜಾನುವಾರು ಕೊಟ್ಟಿಗೆಗಳನ್ನು ಒದಗಿಸಬೇಕು.

ವಸತಿ ಗೃಹಗಳು ಪೌರಕಾರ್ಮಿಕರಿಗಾಗಿ ಮಾತ್ರವೇ ಇರಕೂಡದು. ಈ ವಸತಿ ಸಮುಚ್ಚಯಗಳಲ್ಲಿ ವಾಸಿಸಲು ಬೇರೆ ಬೇರೆ ಕೇಡರುಗಳ ಮುನಿಸಿಪಲ್ ನೌಕರರಿಗೆ ಸಹ ಉತ್ತೇಜನ ಕೊಡಬೇಕು. ಪೌರಕಾರ್ಮಿಕರು ಮಾತ್ರವೇ ಅಕ್ಕಪಕ್ಕದಲ್ಲಿ ವಾಸಿಸುವಂತಿರಬಾರದು. ಸಾಧ್ಯವಾದಷ್ಟುಮಟ್ಟಿಗೆ ಪ್ರತಿಯೊಬ್ಬ ಪೌರಕಾರ್ಮಿಕನ ಮನೆಗಳು ಉತ್ತಮ ಜಾತಿಯ ಅಥವಾ ಇತರ ಕೇಡರಿನ ಮುನಿಸಿಪಲ್ ನೌಕರನು ವಾಸಿಸುವ ಮನೆ ಪಕ್ಕದಲ್ಲೇ ಇರಬೇಕು. ಇದು ಬಹು ಅಪೇಕ್ಷಿತ ಸಾಮಾಜಿಕ ಸಮನ್ವಯತೆಯನ್ನು ಸಾಧಿಸಲಷ್ಟೇ ಅಲ್ಲ, ನಮ್ಮ ಜನಪ್ರಿಯ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಕಲ್ಪನೆಯ ನೈಜ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ಕೂಡ ಖಚಿತ ಉಪಾಯವಾಗಿದೆ.

ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಎಲ್ಲ ಟೌನ್ ಗಳಲ್ಲಿ ಎಲ್ಲ ನಗರಗಳಲ್ಲಿ ಎಲ್ಲ ಸರ್ಕಾರಿ ನೌಕರರಿಗಾಗಿ ಸರ್ಕಾರವೇ ಸ್ವತಃ ಅಂತಹ ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಬೇಕು ಮತ್ತು

ಪೌರಕಾರ್ಮಿಕರು ಇತರ ಸರ್ಕಾರಿ ನೌಕರರೊಂದಿಗೆ ಬೆರೆಯಲು ಅವಕಾಶ ಕಲ್ಪಿಸಿಕೊಡಬೇಕು, ಈಗಿನ ವ್ಯವಸ್ಥೆಯನ್ನು ಬದಲಿಸಲು ಇದೇ ಖಚಿತ ಉಪಾಯವಾಗಿದೆ.

ಪೌರಕಾರ್ಮಿಕರೆಂದು ಕರೆಯುತ್ತಿದ್ದರೂ ಈ ದಿನಗಳಲ್ಲಿ ತೀರಾ ದುಸ್ಥಿತಿಯಲ್ಲಿರುವ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಹೊಸ ಬದುಕನ್ನು ಒದಗಿಸುವ ಸಲುವಾಗಿ ಕೂಡಲೇ ಈ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವಂತೆ ಸಮಿತಿಯು ಸರ್ಕಾರಕ್ಕೆ ಒತ್ತಿ ಹೇಳುತ್ತದೆ.

# ಅಧ್ಯಾಯ IX

## ಹಣಕಾಸು
## ಆರ್ಥಿಕ ಸ್ಥಿತಿಗತಿಗಳು

ಕಸಗುಡಿಸುವವರ ಹಾಗೂ ಜಾಡಮಾಲಿಗಳ ಹಣಕಾಸು ಸ್ಥಿತಿಗತಿಗಳು ಯಾವಾಗಲೂ ಅಪಾರ ದುಃಖ ಉಂಟು ಮಾಡುವಂಥವುಗಳು. ಪೌರಕಾರ್ಮಿಕರ ವೇತನ ಶ್ರೇಣಿಗಳು ಇತರ ಸರ್ಕಾರಿ ಇಲಾಖೆಗಳಲ್ಲಿ ರೂ 65–2–95 ರ ಗ್ರೇಡ್‌ನಲ್ಲಿರುವ IVನೇ ದರ್ಜೆ ನೌಕರರ ವೇತನ ಶ್ರೇಣಿಗೆ ಸಮಾನವಾಗಿರಬೇಕೆಂದು ಸರ್ಕಾರವು ಆದೇಶಗಳನ್ನು ಹೊರಡಿಸಿದ್ದರೂ ಈ ಸರ್ಕಾರಿ ಆದೇಶವನ್ನು ಉತ್ತರ ಕರ್ನಾಟಕದಲ್ಲಿರುವ ಅನೇಕ ಮುನಿಸಿಪಾಲಿಟಿಗಳು ಕಾರ್ಯರೂಪಕ್ಕೆ ತಂದೇ ಇಲ್ಲ. ಈಗಲೂ ಕೆಲವು ಸ್ಥಳಗಳಲ್ಲಿ ಪೌರಕಾರ್ಮಿಕರಿಗೆ ರೂ. 25 ರಿಂದ ರೂ 45 ರಷ್ಟು ಸಣ್ಣ ಸಂಬಳವನ್ನು ಕೊಡಲಾಗುತ್ತಿದೆ.

ಬೆಲೆಗಳು ಹಠಾತ್ತನೆ ಏರಿ ಇಳಿಯುತ್ತಿರುವ ಹಾಗೂ ಎಣೆ ಇಲ್ಲದ ಹಣದುಬ್ಬರದ ಈ ದಿನಗಳಲ್ಲಿ ಅಂಥದೊಂದು ಸಣ್ಣ ತುಣುಕಿನ ಸಂಬಳದಿಂದ ಈ ಪೌರಕಾರ್ಮಿಕರು ಹೇಗೆ ಜೀವನ ಮಾಡಿಕೊಂಡಿದ್ದಾರೆಂಬುದನ್ನು ಬಹು ಸುಲಭವಾಗಿ ಊಹಿಸಿಕೊಳ್ಳಬಹುದು. ಮಧ್ಯಮ ವರ್ಗದ ಜನರೇ ಎರಡು ಹೊತ್ತಿನ ಊಟಕ್ಕೆ ಕಷ್ಟಪಡುತ್ತಿದ್ದಾರೆ. ಅಂಥದ್ದರಲ್ಲಿ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಯಾವಾಗಲೂ ಹಸಿದ ಹೊಟ್ಟೆಯ ಸ್ಥಿತಿಯಲ್ಲಿರುತ್ತಾರೆಂದು ಭಾವಿಸಬಹುದಾಗಿದೆ.

ಪೌರಕಾರ್ಮಿಕರನ್ನು ದಿನಗೂಲಿ ಅಥವಾ ಅರೆ ಕಾಲಿಕ ಆಧಾರದ ಮೇಲಾಗಲಿ ನೇಮಿಸಿಕೊಳ್ಳಬಾರದೆಂದು ನಿರ್ದಿಷ್ಟ ಸರ್ಕಾರಿ ಆದೇಶವಿದ್ದರೂ ಅನೇಕ ಮುನಿಸಿಪಾಲಿಟಿಗಳು ಸರ್ಕಾರದ ನಿರ್ದೇಶನಗಳನ್ನು ಮೀರಿ ಅವರುಗಳನ್ನು ದಿನಗೂಲಿ ಹಾಗೂ ಅರೆ ಕಾಲಿಕ ಆಧಾರದ ಮೇಲೆ ಈಗಲೂ ನೇಮಕ ಮಾಡಿಕೊಳ್ಳುತ್ತಿವೆ ಎಂದು ವಿಷಾದದಿಂದ ಹೇಳಬೇಕಾಗಿದೆ.

ಅನೇಕ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ಈಗಲೂ ಕಂತುಗಳಲ್ಲಿ ಸಂಬಳವನ್ನು ಕೊಡುತ್ತಿವೆಯೆಂಬುದು ಕಂಡುಬಂದಿದೆ. ಇದು ಅಹಿತಕರ ಮತ್ತು ಅನರ್ಥಕಾರಿ ಪದ್ಧತಿ. ಏಕೆಂದರೆ ಇದು ಹಣಕಾಸು ಸ್ಥಿರತೆಯ ಬುಡವನ್ನೇ ಕತ್ತರಿಸಿದಂತಾಗುತ್ತದೆ. ಅನೇಕ ಮುನಿಸಿಪಾಲಿಟಿಗಳು ನಿಧಿಗಳನ್ನು ಸಮರ್ಪಕವಾಗಿ ಬಳಕೆ ಮಾಡುತ್ತಿಲ್ಲ ಹಾಗೂ ನೀತಿ ಸಮ್ಮತ ಸಮತೋಲನ ಇಟ್ಟುಕೊಂಡಿಲ್ಲವೆಂಬುದನ್ನು ಸಮಿತಿಯು ಗಮನಿಸಿದೆ. ವಿಶೇಷವಾಗಿ, ಎಷ್ಟೋ ಸಲ, ಸಾಮಾನ್ಯವಾಗಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಅದರಲ್ಲೂ ಮುಖ್ಯವಾಗಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಒದಗಿಸಿದ ಹಣ ದುರುಪಯೋಗವಾಗಿದೆ. ಯಾವಯಾವ ಸ್ಥಳೀಯ ಸಂಸ್ಥೆಗಳು ನಿಯತವಾಗಿ ಸಂಬಳವನ್ನು ಕೊಡುತ್ತಿಲ್ಲವೋ ಅವುಗಳನ್ನು ರದ್ದು ಮಾಡಬೇಕು.

ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಇನ್ನೊಂದು ಕೆಟ್ಟ ಚಾಳಿ ಏನಿದೆಯೆಂದರೆ ಪೌರಕಾರ್ಮಿಕರ ಸಂಬಳವನ್ನು ಬಟವಾಡೆ ಮಾಡುವಾಗ ಮುನಿಸಿಪಲ್ ಸಿಬ್ಬಂದಿಯು 'ಮಾಮೂಲು' ಕೊಡಬೇಕೆಂದು ಒತ್ತಾಯಿಸಿ ಪೌರಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದು. ಈ ಬಗೆಯ ಶೋಷಣೆಯಿಂದ ಪೌರಕಾರ್ಮಿಕರನ್ನು ಪಾರು ಮಾಡಬೇಕಾದರೆ ಈ ಬಗೆಯ ಅನಿಷ್ಟ ಪದ್ಧತಿಯನ್ನು ಬುಡಸಹಿತ ಕಿತ್ತು ಹಾಕಬೇಕು. ಶೋಷಣೆಯ ಪಿಡುಗನ್ನು ನಿರ್ನಾಮ ಮಾಡಲು ಆರೋಗ್ಯ ಪರಿವೀಕ್ಷಕರ ಬದಲಿಗೆ ಲೆಕ್ಕಾ ಪತ್ರ ಶಾಖೆಯ ಸಿಬ್ಬಂದಿಯಿಂದ ಸಂಬಳವನ್ನು ಬಟವಾಡೆ ಮಾಡಿಸಬೇಕು. ಸಂಬಳವನ್ನು ಬಟವಾಡೆ ಮಾಡಿಸುವ ದಿನದ ಹಿಂದಿನ ದಿನ ಪೌರಕಾರ್ಮಿಕರಿಗೆ 'ಸಂಬಳ ಚೀಟಿ'ಯನ್ನು ಕೊಡಬೇಕು. ಅದರಲ್ಲಿ ಅವರ ಒಟ್ಟು ಸಂಬಳ, ಕಡಿತ ಮತ್ತು ಕಡಿತ ಮಾಡಿದ ನಂತರ ಉಳಿಯುವ ಅವರಿಗೆ ಕೊಡಬೇಕಾದ ಹಣ ಎಲ್ಲವನ್ನೂ ನಮೂದು ಮಾಡಿರಬೇಕು. ಪೌರಕಾರ್ಮಿಕರ ಸಂಬಳದ ಹಣವನ್ನು ಸೀಲ್ ಮಾಡಿದ ಕವರಿನಲ್ಲಿಟ್ಟಿರಬೇಕು. ಎಲ್ಲ ಕಾರ್ಖಾನೆಗಳಲ್ಲಿ ಮಾಡುವಂತೆ ಅದರ ಮೇಲೆ ಅವರ ಸಂಬಳದ ಮತ್ತು ಕಡಿತಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ತದನಂತರವಷ್ಟೇ ಸಂಬಳ

ಚೀಟಿಯನ್ನು ಕೊಡಬೇಕು. ಈ ವಿಧಾನದಿಂದ ಪೌರಕಾರ್ಮಿಕರಿಗೆ ತಾವೆಷ್ಟು ಗಳಿಸುತ್ತಿದ್ದೇವೆ ಹಾಗೂ ಸಂಬಳ ಮತ್ತು ಭತ್ಯೆಯಾಗಿ ಎಷ್ಟು ಸಿಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಪೌರಕಾರ್ಮಿಕರ ಸಂಬಳವನ್ನು ಕಾಪಿಡುವ ಮತ್ತು ಅವರಲ್ಲಿ ಉಳಿತಾಯದ ರೂಡಿಯನ್ನು ಬೆಳೆಸುವ ಇನ್ನೊಂದು ವಿಧಾನವೆಂದರೆ ಅವರ ಸಂಬಳವನ್ನು ಷೆಡ್ಯೂಲ್ಡ್ ಬ್ಯಾಂಕ್‌ಗಳ ಮೂಲಕ ವಿತರಿಸುವುದು. ಆಯಾಯ ಬ್ಯಾಂಕ್‌ಗಳು ಪೌರಕಾರ್ಮಿಕರಿಗೆ ಅವರವರ ಮುನಿಸಿಪಾಲಿಟಿಗಳಿಂದ ಸಂಬಳದಲ್ಲಿ ಮುರಿತದ ಖಾತರಿಯನ್ನು ಪಡೆದುಕೊಂಡ ನಂತರ ಅವರಿಗೆ ಅಗತ್ಯವಾದ ಸಾಲ ಸೌಲಭ್ಯವನ್ನು ನೀಡಬೇಕು. ಹಾಗೆ ಮಾಡಿದರೆ ತುಂಬಾನೆ ದುಬಾರಿ ಬಡ್ಡಿ ದರವನ್ನು ವಿಧಿಸುತ್ತಿರುವ ಖಾಸಗಿ ಲೇವಾದೇವಿದಾರ ಕಪಿ ಮುಷ್ಠಿಯಿಂದ ಪೌರಕಾರ್ಮಿಕರನ್ನು ರಕ್ಷಿಸಿದಂತಾಗುತ್ತದೆ.

ಕಸಗುಡಿಸುವವರು ಹಾಗೂ ಜಾಡಮಾಲಿಗಳು ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಕಾರಣವಾಗಿರುವ ಶೋಚನೀಯ ಸ್ಥಿತಿಗತಿಗಳಲ್ಲಿ ಒಂದು ಯಾವುದೆಂದರೆ ಈ ಜನರು ವಿಪರೀತ ಸಾಲಗಾರರಾಗಿರುವುದು. ಇದು ಕುತ್ತಿಗೆಗೆ ಬಿಗಿದ ಕುಣಿಕೆಯಂತೆ ಅವರನ್ನು ಹೀನಾಯ ಸ್ಥಿತಿಗೆ ತಳ್ಳಿದೆ. ಇದೇ ಪೌರಕಾರ್ಮಿಕನ ಆರ್ಥಿಕ ಹಾಗೂ ಸಾಮಾಜಿಕ ಅಗೌರವಕ್ಕೆ ಮುಖ್ಯ ಕಾರಣವಾಗಿದೆ. ಕಾಲ ಕಳೆದಂತೆ ಅವನ ಸಾಲದ ಹೊರೆ ಎಷ್ಟರಮಟ್ಟಿಗೆ ಗುರುತರ ಪ್ರಮಾಣಕ್ಕೆ ಮುಟ್ಟುತ್ತದೆಯೆಂದರೆ ತನ್ನ ಸ್ವಲ್ಪವೇ ಹಣಕಾಸನ್ನು ಹೇಗೆ ನಿಭಾಯಿಸಬೇಕೆನ್ನುವುದು ತಿಳಿಯದ ಮಟ್ಟಕ್ಕೆ ಪ್ರಮಾಣಕ್ಕೆ ಹೋಗಿಬಿಡುತ್ತದೆ.

ಪೌರಕಾರ್ಮಿಕರ ಭಾರಿ ಸಾಲದ ಹೊರೆಗೆ ಅನೇಕ ಕಾರಣಗಳಿವೆ. ಮಗುವಿನ ಜನನ, ಮಗಳ ಅಥವಾ ಮಗನ ಮದುವೆ ಅಥವಾ ಸಾವು ಮುಂತಾದ ಅನೇಕ ಪ್ರಾಪಂಚಿಕ ಕಾರ್ಯ, ಕ್ರಿಯೆಗಳಲ್ಲಿ ಆತ ಇಡೀ ಸಮುದಾಯದ ಆದರಾತಿಥ್ಯಕ್ಕಾಗಿ ಹಾಗೂ ಇಡೀ ಸಮುದಾಯವನ್ನು ಸಂತುಷ್ಟಗೊಳಿಸುವುದಕ್ಕಾಗಿ ದೊಡ್ಡ ಮೊತ್ತದ ಹಣ ಖರ್ಚು ಮಾಡುತ್ತಾನೆ. ಇದು ಅರ್ಥಹೀನ ಸಂಪ್ರದಾಯವಾಗಿ ಬೆಳೆದುಬಿಟ್ಟಿದೆ. ಅವನು ಹಳೆಯ ಕಂದಾಚಾರದ ರೂಢಿಯನ್ನು ಬಿಟ್ಟುಬಿಟ್ಟರೆ ಅವನದೇ ಸಮುದಾಯದವರು ಅವನಿಗೆ ಬಹಿಷ್ಕಾರ ಹಾಕಿ ಬಿಡುತ್ತಾರೆ. ಈ ಅರ್ಥಹೀನ ಹಾಗೂ ಅನಗತ್ಯ ಸಂಪ್ರದಾಯದಿಂದಾಗಿ ವಿಧಿಯಿಲ್ಲದೆ ಅವರು ಖರ್ಚು ಮಾಡಲೇಬೇಕಾಗುತ್ತದೆ. ಅದಕ್ಕಾಗಿ ಅವನು ಸಾಲ ಮಾಡುತ್ತಲೇ ಇರುತ್ತಾನೆ. ಸಾಲವನ್ನು ತೀರಿಸಲು ಅವನಿಂದಾಗುವುದೇ ಇಲ್ಲ.

ಈ ಜನರು ಒಂದು ಮದುವೆಗೆ, ವಧು ವರದಕ್ಷಿಣೆ ಪದ್ಧತಿ ಇಲ್ಲದಿದ್ದರೂ ಬಹು ಬೆಲೆಯ ಸಾಮಗ್ರಿಗಳನ್ನು ಕೊಡಲೇಬೇಕಾಗುತ್ತದೆಯಾದ್ದರಿಂದ ಸರಿಸುಮಾರು ರೂ 2000 3000 ಖರ್ಚು ಮಾಡುತ್ತಾರೆ. ವಸ್ತು ರೂಪದಲ್ಲೋ, ಹಣದ ರೂಪದಲ್ಲೋ ಕೊಡುವುದಿದ್ದರೆ ಅವರವರ ಶಕ್ತಿ ಸಾಮರ್ಥ್ಯಕ್ಕೆ ತಕ್ಕಂತೆ ದೊಡ್ಡ ಮೊತ್ತವನ್ನೇ ಕೊಡಬೇಕಾಗುತ್ತದೆ. ಒಣ ಪ್ರತಿಷ್ಠೆ ತೋರಿಸಿಕೊಳ್ಳಲು ಈ ಜನರು ಮದುವೆ ಸಮಾರಂಭಕ್ಕೋಸ್ಕರ ತಿಂಗಳಿಗೆ ಶೇ 5 ರಿಂದ 2 ರಷ್ಟು ಬಡ್ಡಿ ಮೇಲೆ ಸಾಲ ತೆಗೆದುಕೊಳ್ಳುತ್ತಾರೆ. ಭಾರೀ ಸಾಲಗಾರರಾಗಲೂ ಇದು ಮತ್ತೊಂದು ಕಾರಣ.

ಕಸಗುಡಿಸುವವರ ಹಾಗೂ ಜಾಡಮಾಲಿಗಳ ಆಹಾರದ ಬಗ್ಗೆ ಹೇಳುವುದಾದರೆ ಬಹುತೇಕ ಜನರು ಮಾಂಸಾಹಾರಿಗಳು. ಅವರ ಆದಾಯ ತೀರಾ ಕಡಿಮೆ ಇದ್ದರೂ, ಸಸ್ಯಾಹಾರಿ ಜನರು ಖರ್ಚು ಮಾಡುವುದಕ್ಕಿಂತಲೂ ಎರಡು ಪಟ್ಟು ಅಥವಾ ಮೂರು ಪಟ್ಟು ಹಣ ಖರ್ಚು ಮಾಡುತ್ತಾರೆ. ಮಾಂಸದ ಬೆಲೆ ತುಂಬಾನೆ ಹೆಚ್ಚಾಗುತ್ತಿದೆ. ಅವನು ಬರೀ ಮಾಂಸದ ಅಡುಗೆಯನ್ನೇ ಮಾಡುವುದಿಲ್ಲ. ತರಕಾರಿಗಳನ್ನು ಆಹಾರದಲ್ಲಿ ಬಳಸಬೇಕಾಗುತ್ತದೆ. ತರಕಾರಿಗಳು ಅಷ್ಟೇ ದುಬಾರಿಯಾಗಿವೆ. ಹೀಗಾಗಿ ಆಹಾರಕ್ಕಾಗಿ ಹೆಚ್ಚು ಖರ್ಚಾಗುತ್ತಿದೆ. ತನಗಿರುವ ಸೀಮಿತ ಆದಾಯದಲ್ಲಿ ಅವನಿಗೆ ಹೆಚ್ಚು ಖರ್ಚಿಗೆ ಹಣ ಸಾಲುತ್ತಿಲ್ಲ. ಹಾಗಾಗಿ ತನ್ನ ದಿನನಿತ್ಯದ ಊಟಕ್ಕಾಗಿಯೇ ಅವನು ಸಾಲ ಮಾಡುತ್ತಿರುತ್ತಾನೆ.

ಅವನ ಆದಾಯದಲ್ಲಿ ಬಹುಪಾಲು ಸೋರಿ ಹೋಗಲು ಇರುವ ಇನ್ನೊಂದು ವಾಸ್ತವ ಸಂಗತಿ ಏನೆಂದರೆ ಕುಡಿತದ ಚಟ. ಅವನು ಈ ಚಟಕ್ಕೆ ಬಿದ್ದುಬಿಟ್ಟಿದ್ದಾನೆ. ತಾನು ಜೀವಿಸುತ್ತಿರುವ ಸುತ್ತಮುತ್ತಲಿನ

ಅಸಹ್ಯಕರ ಪರಿಸರ ಹಾಗೂ ಅಸಮರ್ಪಕ ವಸತಿಯಿಂದಾಗಿ ಅವನು ನನ್ನದಿಷ್ಟೇ ಬದುಕು ಭಾವಿಸಿಕೊಂಡು ಎಂದು ಅದಕ್ಕೆ ಒಗ್ಗಿಕೊಂಡಿರುತ್ತಾನೆ. ತನ್ನ ದುಃಖ ಸಂಕಟಗಳನ್ನು ಮರೆಯಲು ಹಾಗೂ ತನಗಿರುವ ಕೌಟುಂಬಿಕ ಹಾಗೂ ಸಾಮಾಜಿಕ ಅಭಾವಗಳನ್ನು ಮರೆಯಲು ಹೆಂಡ ಸಾರಾಯಿಗೆ ಮೊರೆ ಹೋಗುತ್ತಾನೆ. ಅವನ ಆದಾಯದಲ್ಲಿ ಬಹುತೇಕ ಪಾಲು ಹೆಂಡ ಸಾರಾಯಿಗೇ ಹೋಗುತ್ತದೆ. ಅವನಷ್ಟೇ ಅಲ್ಲ, ಅವನ ಕುಟುಂಬದವರು ಹೆಂಡ ಸಾರಾಯಿಯ ಚಟಕ್ಕೆ ಬಿದ್ದಿರುತ್ತಾರೆ. ಈ ಅನಿಷ್ಟಕಾರಕ ಕುಡಿತದ ಚಟದಿಂದ ಪೌರಕಾರ್ಮಿಕರನ್ನು ಪಾರು ಮಾಡಬೇಕಾದರೆ ಸಂಜೆ ಸಮಯದಲ್ಲಿ ಅವರು ಬೇರೆ ಚಟುವಟಿಕೆಗಳಲ್ಲಿ ಎಂದರೆ ಭಜನೆಗಳು, ನಾಟಕ, ಫಿಲಂಗಳ ಪ್ರದರ್ಶನ, ಉಪನ್ಯಾಸಗಳು ಮುಂತಾದವುಗಳನ್ನು ಅವರ ಬಡಾವಣೆಗಳಲ್ಲಿ ಏರ್ಪಡಿಸಿ ಅವುಗಳಲ್ಲಿ ಮಗ್ನರಾಗಿರುವಂತೆ ಮಾಡುವುದು ಆವಶ್ಯಕ. ಹಾಗೆ ಮಾಡಿದರೆ ಅವರು ಕೆಟ್ಟ ಚಟದಿಂದ ದೂರ ಇರುವಂತಾಗುತ್ತದೆ. ಇಂತಹ ಕಾರ್ಯಕ್ರಮಗಳಿಂದ, ಕಾಲ ಕ್ರಮೇಣ ಈ ಜನರು ಹೊಸಹೊಸ ಚಿಂತನ ಮಂಥನ ಮಾಡಲು ಸಾಧ್ಯವಾಗುತ್ತದೆ ಹಾಗೂ ಈ ಸಾಂಸ್ಕೃತಿಕ ಪರಿಣಾಮಗಳಿಂದಾಗಿ ಪೌರಕಾರ್ಮಿಕರು ಒಳ್ಳೆಯ ಪುರುಷರಾಗಿ ಹಾಗೂ ಮಹಿಳೆಯರಾಗಿ ಪರಿವರ್ತನೆ ಹೊಂದುತ್ತಾರೆ. ಈ ಎಲ್ಲ ಒಳ್ಳೆಯ ಉದ್ದೇಶಕ್ಕಾಗಿ ಹಣವನ್ನು ಖರ್ಚು ಮಾಡಲಾಗುತ್ತದೆಯಾದ್ದರಿಂದ ಅದರಲ್ಲೂ ಪೌರಕಾರ್ಮಿಕರ ನೈತಿಕ ಹಾಗೂ ಸಾಂಸ್ಕೃತಿಕ ಹಿತದ ಗುರಿಯಿರುವ ಈ ಕಾರ್ಯಕ್ರಮಗಳಿಗೆ ಯಾವುದೇ ಮೊತ್ತದ ಹಣವನ್ನು ಖರ್ಚು ಮಾಡಲು ಸರ್ಕಾರವು ಹಿಂದೇಟು ಹಾಕಬಾರದು.

ಸಮಾಜದಲ್ಲಿ ಅಗೌರವ ಹಾಗೂ ಸಮಾಜದಲ್ಲಿ ಪ್ರತ್ಯೇಕವಾಗಿರುವುದನ್ನು ಮರೆಯಲು ಅಪೇಕ್ಷಿಸುವುದೇ ಈ ಜನರು ಮತ್ತು ಬರಿಸುವ ಮದ್ಯಗಳ ಗೀಳು ಹತ್ತಿಸಿಕೊಳ್ಳಲು ಮೂಲ ಕಾರಣ. ಸಮಾಜವು ಪೌರಕಾರ್ಮಿಕನನ್ನು ತುಚ್ಛವಾಗಿ ಕಾಣುವುದರಿಂದ ಹಾಗೂ ದೂರ ಇಟ್ಟಿರುವುದರಿಂದ ಸಮಾಜಕ್ಕೆ ತಾನು ಬೇಕಿಲ್ಲವೇನೋ ಎಂದು ಪೌರಕಾರ್ಮಿಕ ಭಾವಿಸುತ್ತಾನೆ. ಒಳ್ಳೆಯ ಜೀವನಕ್ಕಾಗಿ ಅವನ ಆಸೆ ಆಕಾಂಕ್ಷೆಗಳು, ಅಪೇಕ್ಷೆಗಳು, ಮಹತ್ವಾಕಾಂಕ್ಷೆಗಳು ಎಲ್ಲವೂ ಈ ಬಗೆಯ ಸಾಮಾಜಿಕ ಪ್ರತ್ಯೇಕತೆಯಿಂದಾಗಿ ಸಂಪೂರ್ಣವಾಗಿ ನಿರರ್ಥಕವಾಗಿ ಬಿಡುತ್ತವೆ. ಆದರೂ, ತಾನು ಬದುಕಲೇ ಬೇಕಲ್ಲ, ಅದಕ್ಕೋಸ್ಕರ ತನಗೆ ತಾನೇ ಮನರಂಜನೆ ಕಂಡುಕೊಳ್ಳಬೇಕಾಗುತ್ತದೆ. ತನಗೆ ತಾನೇ ಸಮಾಧಾನ ಪಟ್ಟುಕೊಳ್ಳಲು ಹಾಗೂ ತನ್ನ ಬಾಂಧವರಿಂದ ತೀರಾ ಅವಗಣನೆಗೆ ಒಳಗಾಗುವುದನ್ನು ತಪ್ಪಿಸಿಕೊಳ್ಳಲು ತನ್ನನ್ನೇ ಹಾಗೂ ತನ್ನ ದುರವಸ್ಥೆಯನ್ನು ಮರೆಯಬಯಸುತ್ತಾನೆ. ಮರೆಯುವುದಕ್ಕೋಸ್ಕರ ಅವನು ಕಂಡುಕೊಂಡಿರುವ ದಿವ್ಯ ಔಷಧವೆಂದರೆ ಹೆಂಡ, ಸಾರಾಯಿ ಹಾಗಾಗಿ, ಅವನಿಗೆ ಕುಡಿಯುವ ಬಯಕೆ ಹೆಚ್ಚಾದಂತೆಲ್ಲ ಕುಡಿತದ ಚಟಕ್ಕೆ ಬಿದ್ದುಬಿಡುತ್ತಾನೆ. ಕುಡಿತದ ಖರ್ಚು ದುಬಾರಿಯಾದ್ದರಿಂದ ಹಾಗೂ ಅವನಿಗಿರುವ ವರಮಾನ ತುಂಬಾನೆ ಸೀಮಿತವಾದುದರಿಂದ ವಿಧಿಯಿಲ್ಲದೆ ಸಾಲ ತೆಗೆದುಕೊಳ್ಳುತ್ತಾನೆ, ಆ ಪರಿಣಾಮವಾಗಿ ಯಾವಾಗಲೂ ಋಣಗ್ರಸ್ತನಾಗಿರುತ್ತಾನೆ.

ಪೌರಕಾರ್ಮಿಕರ ಹಣಕಾಸು ಸ್ಥಿತಿಯನ್ನು ಉತ್ತಮಪಡಿಸಲು ಸಮಿತಿಯು ಈ ಮುಂದೆ ಹೇಳಿರುವಂತೆ ಶಿಫಾರಸ್ಸುಗಳನ್ನು ಮಾಡುತ್ತದೆ;

ಸರ್ಕಾರವು, ಪೌರಕಾರ್ಮಿಕರ ಚಾಲ್ತಿಸಾಲಗಳ ಹಾಗೂ ಪಾವತಿಯನ್ನು ಮುಂದೂಡಲು ಪೌರಕಾರ್ಮಿಕರಿಗೆ ಅಧಿಕಾರವನ್ನು ಕೊಡುವಂತಹ ಸೂಕ್ತ ಶಾಸನವನ್ನು ತರಬೇಕು. ಪೌರಕಾರ್ಮಿಕರಿಗೆ ಸಾಲ ಕೊಟ್ಟಿರುವವರು ಅವರಿಗೆ ಯಾವುದೇ ಕಿರುಕುಳ ಕೊಡದಂತೆ ತಡೆಯುವ ಕ್ರಮಗಳನ್ನು ಸಹ ತೆಗೆದುಕೊಳ್ಳಬೇಕು.

ಮುನಿಸಿಪಲ್ ಸಿಬ್ಬಂದಿಯವರು ಅನಕ್ಷರಸ್ಥ ಪೌರಕಾರ್ಮಿಕರ ಶೋಷಣೆ ಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಪೌರಕಾರ್ಮಿಕರ ಶೋಷಣೆಯಲ್ಲಿ ಸರ್ಕಾರಿ ನೌಕರರು ತೊಡಗಿರುವುದನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡಬೇಕು.

ಪೌರಕಾರ್ಮಿಕರಿಗೆ ಸುಲಭ ಷರತ್ತುಗಳ ಮೇಲೆ ಸಾಲ ಕೊಡಲು ಒಂದು ವಿಧಾನವನ್ನು ಕಂಡು ಕೊಳ್ಳಬೇಕಾದುದು ಪರಿಶೀಲನೆಗೆ ಅರ್ಹವಾದ ಅತ್ಯಂತ ಪ್ರಮುಖ ಅಂಶ. ಸ್ಥಳೀಯ ಸಂಸ್ಥೆಗಳು ಸಂಬಳದಲ್ಲಿ ಕಡಿತ ಮಾಡುವ ಖಾತರಿ ಕೊಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಹಾಗೆ ಖಾತರಿ ಕೊಟ್ಟರೆ

ರಾಷ್ಟ್ರೀಕೃತ ಬ್ಯಾಂಕುಗಳು ಪೌರಕಾರ್ಮಿಕರಿಗೆ ಸುಲಭ ಕಂತುಗಳ ಮೇಲೆ ಸಾಲ ಕೊಡಲು ಮುಂದೆ ಬರುತ್ತವೆ. ಸಾಲವು ದೀರ್ಘಾವಧಿಯಲ್ಲಿ ತೀರಿಸುವಂಥದ್ದಾಗಿರಬೇಕು ಮತ್ತು ಸುಲಭ ಕಂತುಗಳಲ್ಲಿ ಹಣವನ್ನು ವಸೂಲಿ ಮಾಡಬೇಕು.

ಕಡ್ಡಾಯ ವಿಮೆ ಹಾಗೂ ಇತರ ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸುವಂತೆ ಪೌರಕಾರ್ಮಿಕರ ಮನ ಒಲಿಸಬೇಕು. ದುರದೃಷ್ಟಕರವಾದುದು ತನಗೇನಾದರೂ ಆದಾಗ ತನ್ನ ಕುಟುಂಬದ ಜನರು ಪರರ ಹಂಗಿಗೆ ಒಳಗಾಗುವುದಿಲ್ಲವೆಂಬ ನಿಶ್ಚಿತ ಭಾವನೆ ಆತನಿಗೆ ಬರುವಂತಾಗಲು ಹಣಕಾಸು ಭದ್ರತೆಯ ಪ್ರಜ್ಞೆಯನ್ನು ಆತನಿಗೆ ಮೂಡಿಸಬೇಕು..

ಪೌರಕಾರ್ಮಿಕರೂ ಸೇರಿದಂತೆ ಎಲ್ಲ ಮುನಿಸಿಪಲ್ ನೌಕರರ ಪ್ರಯೋಜನಕ್ಕಾಗಿ ಸ್ಥಳೀಯ ಸಂಸ್ಥೆಗಳೇ ಸ್ವತಃ **"ಕ್ರೆಡಿಟ್ ಕಂ ಕನ್ಸ್ಯೂಮರ್ ಸೊಸೈಟಿ"** ಗಳನ್ನು ಸ್ಥಾಪಿಸಲು ಮುಂದಾಗಬೇಕು. ದಿನನಿತ್ಯದ ಆವಶ್ಯಕತೆಗೆ ಬೇಕಾದ ಸಾಮಾನುಗಳನ್ನು ಪಡೆದುಕೊಳ್ಳಲು ಪೌರಕಾರ್ಮಿಕನಿಗಿರುವ ಕಳವಳವನ್ನು ಕಡಿಮೆ ಮಾಡಲು ಇದರಿಂದ ಸಾಧ್ಯವಾಗುತ್ತದೆ. ಈ ಸಾಮಾನುಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವುದರಿಂದ ಅವನ ಹಣಕಾಸಿನ ಸ್ಥಿತಿಯೂ ಸುಧಾರಿಸುತ್ತದೆ.

ಪೌರಕಾರ್ಮಿಕರ ಆರ್ಥಿಕ ಜೀವನದ ಹಲವಾರು ಆಯಾಮಗಳನ್ನು ಪರಿಶೀಲಿಸಿದ ನಂತರ ಸಮಿತಿಯು, ಈ ಜನರ ಈಗಿನ ಆದಾಯದಲ್ಲಿ ಹೆಚ್ಚಳವಾಗಲು ಅವರಿಗೆ ಪೂರಕ ಮಾರ್ಗಗಳನ್ನು ಕಲ್ಪಿಸಲು ಏನಾದರೊಂದು ಸಲಹೆ, ಸೂಚನೆಗಳನ್ನು ಕೊಡಬೇಕಾಗುತ್ತದೆಂಬ ತೀರ್ಮಾನಕ್ಕೆ ಬಂದಿದೆ. ಚಾಪೆ ಹೆಣೆಯುವುದು, ನಾರು ಹೆಣೆಯುವುದು, ಬ್ಯಾಸ್ಕೆಟ್ ಹೆಣೆಯುವುದು, ಹಗ್ಗ ತಯಾರಿಸುವುದು, ಊದುಬತ್ತಿ ತಯಾರಿಸುವುದು ಮುಂತಾದ ಗುಡಿ ಹಾಗೂ ಗ್ರಾಮ ಕೈಗಾರಿಕೆಗಳಲ್ಲಿ ಪೌರಕಾರ್ಮಿಕರನ್ನು ತೊಡಗಿಸುವುದರಿಂದ ಈ ಉದ್ದೇಶವನ್ನು ಸಾಧಿಸಬಹುದಾಗಿದೆ. ಹಂದಿ ಸಾಕಣೆ, ಕೋಳಿ ಸಾಕಣೆ, ಹಸು ಸಾಕಣೆ ಇವುಗಳಿಗೆ ಪೌರಕಾರ್ಮಿಕರಿಗೆ ಉತ್ತೇಜನ ಕೊಡಬೇಕು.

ಜೀವನದಲ್ಲಿ ಉತ್ತಮ ಸಾಮಾಜಿಕ ಆದರ್ಶಗಳನ್ನು ರೂಢಿಸಿಕೊಳ್ಳಲು ಪೌರಕಾರ್ಮಿಕರಿಗೆ ಸಮರ್ಪಕವಾದ ರೀತಿಯಲ್ಲಿ ಶಿಕ್ಷಣ ಕೊಡಲು ಬಹು ವ್ಯಾಪಕ ಪ್ರಚಾರ ಕಾರ್ಯವನ್ನು ನಿರ್ವಹಿಸಲು ಒಂದು ಬಹು ಪರಿಣಾಮಕಾರಿ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ನೆಮ್ಮದಿಯ ಮತ್ತು ಹಿತಕರ ಜೀವನ ನಡೆಸುವ ಸಲುವಾಗಿ ರೇಡಿಯೋ, ಒಳ್ಳೆಯ ಪೀಠೋಪಕರಣ ಮತ್ತು ಇತರ ಗ್ಯಾಡ್ಜೆಟ್‌ಗಳು ಮುಂತಾದ ಎಲ್ಲ ನಾಗರಿಕ ಸೌಕರ್ಯಗಳನ್ನು ಅನುಭವಿಸಲು ಪೌರಕಾರ್ಮಿಕನಿಗೆ ಹಕ್ಕಿದೆ ಎಂಬ ಬಗ್ಗೆ ಅವರಿಗೆ ತಿಳಿವಳಿಕೆ ಸಹ ನೀಡಬೇಕು.

# ಅಧ್ಯಾಯ X

## ಸಾಮಾಜಿಕ ಸ್ಥಿತಿಗತಿಗಳು

ಪೌರಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳು ಸಮಾಧಾನಕರವಾಗೇನೂ ಇಲ್ಲ. ಅವರು ಬದುಕುತ್ತಿರುವ ಸಮಾಜವೇ ವಾಸ್ತವಿಕವಾಗಿ ಅವರನ್ನು ಹೊರಗಿಟ್ಟಿದೆ. ಪಟ್ಟಣಗಳಿಂದ ಹಾಗೂ ನಗರಗಳಿಂದ ಅವರುಗಳು ದೂರು ಇರುವಂತೆ ಮಾಡಲಾಗಿದೆ. ಹಾಗಾಗಿ, ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳಬೇಕಾದ್ದರಿಂದ, ಅವರು ತಮ್ಮದೇ ಆದ ಸಾಮಾಜಿಕ ರೂಢಿ ಸಂಪ್ರದಾಯಗಳನ್ನು ಹಾಗೂ ರೀತಿರಿವಾಜುಗಳನ್ನು ಬೆಳೆಸಿಕೊಂಡರು. ಕಾಲಕ್ರಮೇಣ ಅವರುಗಳು ಪ್ರತ್ಯೇಕ ಅಸ್ತಿತ್ವ ಉಳ್ಳವರಾಗಿಬಿಟ್ಟರು.

ಪರಿಶಿಷ್ಟ ಜಾತಿಗಳು ಮಾತ್ರವೇ ಈ ವೃತ್ತಿಯನ್ನು ಕೈಗೊಂಡರೆಂದು ಭಾವಿಸುವುದು ತಪ್ಪಾಗುತ್ತದೆ. ಪೌರಕಾರ್ಮಿಕರಲ್ಲಿ ಬಹುತೇಕ ಜನರು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳು ಎಂಬುದೇನೋ ನಿಜ. ನಿಜ ಹೇಳಬೇಕೆಂದರೆ, ಈ ಒಂದು ನಿರ್ದಿಷ್ಟ ವಿಷಯದಲ್ಲಿ ಸಮುದಾಯ ಹಾಗೂ ವೃತ್ತಿ ಅಭಿನ್ನವೆಂದಂತಾಗಿ ಬಿಟ್ಟಿದೆ. ಇತರ ಪರಿಶಿಷ್ಟ ಜಾತಿಗಳವರೂ ಸಹ, ಈ ಪ್ರಮುಖ ವೃತ್ತಿಯಲ್ಲಿ ತೊಡಗಿರುವ ತಮ್ಮವರೇ ಬಾಂಧವರನ್ನು ಕೀಳಾಗಿ ಕಾಣುವುದನ್ನಷ್ಟೇ ಅಲ್ಲ. ಅಸಹ್ಯಪಟ್ಟುಕೊಳ್ಳುವಂಥ ಸ್ವಭಾವವನ್ನು ಬೆಳೆಸಿಕೊಂಡಿದ್ದಾರೆ. ಇತರ ಪರಿಶಿಷ್ಟ ಜಾತಿಗಳವರೂ ಸಹ ಪೌರಕಾರ್ಮಿಕರನ್ನು ಕಡೆಗಣಿಸುತ್ತಿದ್ದಾರೆ. ಇದು ಅವಿವೇಕದ ಹಾಗೂ ಸಮರ್ಥನೀಯವಲ್ಲದ ನಡವಳಿಕೆ.

ಇಂಥದ್ದೊಂದು ಪ್ರವೃತ್ತಿಗೆ ಅಜ್ಞಾನ, ಮೂಢನಂಬಿಕೆ ಹಾಗೂ ಅನಕ್ಷರತೆ ಕಾರಣಗಳು ಬಹಳ ಹಿಂದಿನಿಂದಲೂ ಹಾಗೂ ಮಹಾತ್ಮ ಗಾಂಧಿಯವರು ಮುಂಚೂಣಿಗೆ ಬಂದ ಮೇಲೂ ಅನೇಕ ಪರಿಶಿಷ್ಟ ಜಾತಿಗಳು ಸಮಾಜದಲ್ಲಿ ಸಮ್ಮಿಳಿತವಾಗ ಬಯಸಲಿಲ್ಲ. ಸವರ್ಣೀಯರು ತಮ್ಮ ಬಡಾವಣೆಗಳಿಗೆ ಬರಬಾರದೆಂದು ಬಯಸುತ್ತಿದ್ದರು. ಏಕೆಂದರೆ, ಸವರ್ಣೀಯರೇನಾದರೂ ತಮ್ಮ ಬಡಾವಣೆಗಳಿಗೆ ಪ್ರವೇಶಿಸಿದರೆ ತಮಗೆ ಏನಾದರೊಂದು ಕೆಡುಕು ಉಂಟಾಗುತ್ತದೆಂಬ ಮೂಢ ನಂಬಿಕೆ ಅವರಲ್ಲಿತ್ತು.

ಇಂಥದೊಂದು ಪ್ರವೃತ್ತಿಗೆ ತೀರಾ ವಿರೋಧವೆಂದರೆ, ಇತರೆ ಜಾತಿಯ ಪೌರಕಾರ್ಮಿಕರು ಯಾವುದೇ ಅಂಥ ಮೂಢನಂಬಿಕೆಯನ್ನು ನಂಬುತ್ತಿರಲಿಲ್ಲ. ಒಂದು ವೃತ್ತಾಂತ ಹೇಳುವುದಾದರೆ, ಬಳ್ಳಾರಿ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಹಲವಾರು ಜಾಡಮಾಲಿಗಳಿದ್ದರು. ಅವರಲ್ಲಿ ಒಂದು ಕಾಲದಲ್ಲಿ ಮುಸ್ಲಿಮರು ಕೂಡ ಇದ್ದರು. ಮುಸ್ಲಿಮರು ಇತರ ಜಾತಿಯ ಜನರ ಜೊತೆ ಮುಕ್ತವಾಗಿ ಬೆರೆಯುತ್ತಿದ್ದರು. ಸವರ್ಣೀಯ ಹಿಂದೂಗಳು ಕೂಡ ಮುಸ್ಲಿಮರನ್ನು ಸಮಾನರೆಂದೇ ಭಾವಿಸಿದ್ದರು. ಪರಿಶಿಷ್ಟ ಜಾತಿಯ ಜಾಡಮಾಲಿಗಳನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಅದೇ ಮುಸ್ಲಿಮರಿಗೆ ಎಲ್ಲಾ ಕಡೆ ಪ್ರವೇಶ ಇತ್ತು. ಜಾಡಮಾಲಿ ವೃತ್ತಿಯನ್ನು ಕೈಗೊಂಡಿದ್ದ ಪರಿಶಿಷ್ಟ ಜಾತಿಯವರನ್ನು ಮಾತ್ರವೇ ಸಮಾಜಕ್ಕೆ ಸಲ್ಲದವರೆಂದು ಭಾವಿಸಿದ್ದಂತೆ ಕಾಣುತ್ತದೆ. ಹಾಗಾಗಿ ಜಾಡಮಾಲಿ ವೃತ್ತಿ ಹಾಗೂ ಅದನ್ನು ಕೈಗೊಂಡಿದ್ದ ಪರಿಶಿಷ್ಟ ಜಾತಿಯ ಜನರು ಎರಡೂ ವಸ್ತುಸ್ಥಿತಿಯನ್ನು ಏಕಾಂಶವೆಂದು ಭಾವಿಸಬೇಕೇ ಎಂಬ ಗೊಂದಲ ಸಮಿತಿಯನ್ನು ಕಾಡಿತ್ತು. ಆದರೆ ಇದು ಮೌಢ್ಯದ ಪ್ರವೃತ್ತಿಯೆಂದು ಸಮಿತಿಯು ಒತ್ತಿ ಹೇಳುತ್ತದೆ. ಆದ್ದರಿಂದ, ಈ ಎರಡೂ ಬೇರೆ ಬೇರೆ ಎಂದು ಭಾವಿಸಬೇಕಾದುದು ಅವಶ್ಯಕ.

ರಾಜ್ಯದಲ್ಲಿರುವ ಮುನಿಸಿಪಾಲಿಟಿಗಳು ಭಾರತ ಸಂವಿಧಾನದಲ್ಲಿ ಗೊತ್ತುಪಡಿಸಿರುವಂತೆ, ಪೌರಕಾರ್ಮಿಕರ ಹುದ್ದೆಗಳಿಗೆ ಪರಿಶಿಷ್ಟ ಜಾತಿಯ ಜನರನ್ನು ನೇಮಕ ಮಾಡುವಾಗ ಶೇ.18 ರಷ್ಟಕ್ಕೆ ಮಾತ್ರವೇ ಸೀಮಿತಗೊಳಿಸುವುದನ್ನು ಕಡ್ಡಾಯ ಮಾಡಿದರೆ ಈ ಉದ್ದೇಶವನ್ನು ಸಾಧಿಸಬಹುದಾಗಿದೆ. ಬೇರೆ ಸರ್ಕಾರಿ ಹುದ್ದೆಗಳಿಗೆ ಮಾಡುವಂತೆಯೇ, ಪೌರಕಾರ್ಮಿಕರ ಉಳಿದ ಹುದ್ದೆಗಳನ್ನು ಇತರ ಎಲ್ಲ ಸಮುದಾಯಗಳ ಅಭ್ಯರ್ಥಿಗಳಿಂದ ತುಂಬಿಕೊಳ್ಳಬೇಕು.

ಈಗಿರುವ ಪೌರಕಾರ್ಮಿಕರ ಬಗ್ಗೆ ಹೇಳುವುದಾದರೆ ಅವರ ಸಾಮಾಜಿಕ ಸ್ಥಿತಿಗಳಲ್ಲಿ ಕೂಡ ಸುಧಾರಣೆಗಳನ್ನು ತರುವುದು ಅವಶ್ಯಕ. ಅನೇಕ ಸ್ಥಳಗಳಲ್ಲಿ ಅವರನ್ನು ಹೋಟೆಲ್‌ಗಳ ಹಾಗೂ ಕ್ಷೌರದ

ಅಂಗಡಿಗಳಿಗೂ ಒಳಗೆ ಸೇರಿಸುತ್ತಿಲ್ಲ. ಇನ್ನು ಅನೇಕ ಸ್ಥಳಗಳಲ್ಲಿ ಹೋಟೆಲಿನವರು ಪೌರಕಾರ್ಮಿಕರಿಗೆ ಹೊರಗಡೆ ಬೇರೆ ಲೋಟಗಳನ್ನಿಟ್ಟಿರುತ್ತಾರೆ. ಅವುಗಳನ್ನು ಬಳಕೆ ಮಾಡಿದ ನಂತರ ಪೌರಕಾರ್ಮಿಕರೇ ಅವುಗಳನ್ನು ತೊಳೆದು ಕೊಡಬೇಕಾಗಿದೆ. ಕೆಲವೊಂದು ಸಾರಾಯಿ ಅಂಗಡಿಗಳಲ್ಲಿ ಹಾಗೂ ಹೆಂಡದ ಅಂಗಡಿಗಳಲ್ಲಿ ಪೌರಕಾರ್ಮಿಕರಿಗಾಗಿಯೇ ಹೊರಗಡೆ ಬೇರೆ ಬಾಟಲಿಗಳನ್ನಿಟ್ಟಿರುತ್ತಾರೆ.

ಸಮಿತಿಯು ಅಧ್ಯಯನ ಪ್ರವಾಸ ಕೈಗೊಂಡಾಗ, ಪೌರಕಾರ್ಮಿಕರು ಸ್ಥಳೀಯ ಹೋಟೆಲುಗಳಲ್ಲಿ ಹಾಗೂ ಮುಸ್ಲಿಂ ಹೊಟೇಲುಗಳಲ್ಲಿ ಕೂಡ ಕಾಫಿ ಅಥವಾ ಟೀ ಕುಡಿಯಲು ತಮ್ಮದೇ ಕಪ್‌ಗಳನ್ನು ಒಯ್ಯುತ್ತಿರುವುದನ್ನು ಸಮಿತಿಯೇ ಸ್ವತಃ ನೋಡಿದೆ. ಕ್ಷೌರ ಮಾಡಿಸಿಕೊಳ್ಳುವ ವಿಷಯದಲ್ಲಿ ಇದೇ ಪರಿಸ್ಥಿತಿ ಇದೆ. ತೀರಾ ಒಳನಾಡು ಪ್ರದೇಶಗಳಲ್ಲೂ ಇದೇ ಪರಿಸ್ಥಿತಿ ಇದೆ. ಈ ಪೌರಕಾರ್ಮಿಕರ ಮಕ್ಕಳನ್ನು ಪರಿಶಿಷ್ಟ ಜಾತಿಯ ಕಾಲನಿಗಳಲ್ಲಿರುವ ಶಾಲೆಗಳಿಗೆ ಸೇರಿಸಿಕೊಳ್ಳುತ್ತಿಲ್ಲ.

ಇದಕ್ಕೆ, ಪೌರಕಾರ್ಮಿಕರು ಸ್ವಚ್ಛವಾಗಿರುವುದಿಲ್ಲ, ಒಪ್ಪ ಓರಣ ಪಾಲಿಸುವುದಿಲ್ಲ ಹಾಗೂ ಸಮಾಜ ಅವರನ್ನು ಸ್ವೀಕರಿಸುವುದಿಲ್ಲವೆಂದು ಇತರ ಜನರು ಕಾರಣ ಹೇಳುತ್ತಾರೆ. ಸ್ವಚ್ಛವಾಗಿರದಿರಲು, ಬಟ್ಟೆ ಬರೆ ಒಗೆದುಕೊಳ್ಳದಿರಲು ಈ ಜನರಿಗೆ ಸಮಯ ಇಲ್ಲದಿರಬಹುದು. ಅವರ ಕೆಲಸದ ವೇಳೆಗಳು ಎಷ್ಟೊಂದು ಅಸಮಂಜಸ ಎಂದರೆ ಇಡೀ ದಿನ ಅವರು ಹೊಲಸು ಅಂಟಿಕೊಂಡಿರುವ ಕೊಳಕು ಸಮವಸ್ತ್ರದಲ್ಲೇ ಇರಬೇಕಾಗಿದೆ. ಅಷ್ಟೇ ಅಲ್ಲ, ಕೆಲಸದ ವೇಳೆಯ ನಂತರವೂ ಕೊಳಕು ಸಲಕರಣೆಗಳು, ಪೊರಕೆಗಳು, ಬ್ಯಾಸ್ಕೆಟ್‌ಗಳು ಮುಂತಾದವುಗಳನ್ನು ಒಯ್ಯಬೇಕಾಗಿದೆ. ಏಕೆಂದರೆ ಅವುಗಳನ್ನು ಒಂದು ಕಡೆ ಇಡಲು ಎಲ್ಲಿಯೂ ಅವರಿಗೆ ಜಾಗವೇ ಇರುವುದಿಲ್ಲ. ಅವರ ಈ ಚಹರೆ ಹಾಗೂ ಕೊಳಕು ಉಪಕರಣಗಳು ಅವರನ್ನು ಪ್ರತ್ಯೇಕವಾಗಿರುವಂತೆ ಮಾಡಿವೆ.

ಮೇಲಿನ ಸಂಗತಿಗಳಿಗೆ ಸಮರ್ಥನೆಯಾಗಿ ನಂಜನಗೂಡಿನ ಮುನಿಸಿಪಾಲಿಟಿಗೆ ಸಂಬಂಧಿಸಿದ ಒಂದು ದೃಷ್ಟಾಂತವನ್ನು ಇಲ್ಲಿ ಹೇಳುವುದು ಆವಶ್ಯಕ. ಅಲ್ಲಿನ ಒಬ್ಬ ಪೌರಕಾರ್ಮಿಕ ತನ್ನ ಸ್ವಂತ ಪ್ರಯತ್ನದಿಂದ ಕಷ್ಟಪಟ್ಟು ಓದಿ ಎಸ್.ಎಸ್.ಎಲ್.ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದ. ಮುಂದೇನಾಯಿತೆಂಬುದು ತುಂಬಾನೆ ಕುತೂಹಲಕಾರಿ ಆಸಕ್ತಿಯ ಸಂಗತಿ.

ಅವನಿಗೆ ಜಾಡಮಾಲಿ ಕೆಲಸ ಮುಂದುವರಿಸಲು ಹೇಳಲಿಲ್ಲ. ಬದಲಿಗೆ ಇತರ ಪೌರಕಾರ್ಮಿಕರ ಕೆಲಸದ ಮೇಲುಸ್ತುವಾರಿ ಮಾಡುವಂತೆ ಹೇಳಲಾಯಿತು. ಹಾಗೆ ಕೆಲಸದಲ್ಲಿ ಬದಲಾವಣೆಯಾದಾಗ ಪೌರಕಾರ್ಮಿಕ ವಾಡಿಕೆಯ ಸಮವಸ್ತ್ರ ಹಾಗೂ ಸಲಕರಣೆ ಇಲ್ಲದಾದಾಗ ಆತ ನೀಟಾಗಿರಲು ಪ್ರಾರಂಭಿಸಿದ. ಹಾಗಾಗಿ ಆತ ಪಟ್ಟಣದಲ್ಲಿ ಎಲ್ಲ ಪ್ರಮುಖ ಸ್ಥಳಗಳಿಗೆ ಹೋಗಿ ಬರುವಂತಾಯಿತು. ಸಾರ್ವಜನಿಕರಲ್ಲಿ ಈ ಬದಲಾವಣೆ ಏಕಾಯಿತೆಂಬುದು ಸ್ವಯಂ ವೇದ್ಯ. ಈ ಪೌರ ಜನಜಂಗಳಿಯಲ್ಲಿ ಇರಬಹುದಾಗಿದ್ದ, ಎಲ್ಲಿಗಾದರೂ ಹೋಗಿ ಬರಬಹುದಾಗಿದ್ದ. ಆದ್ದರಿಂದ ಈ ಪೌರಕಾರ್ಮಿಕರು ಎಲ್ಲಿಯವರೆಗೆ ಯಾವಾಗಲೂ ಕೊಳಕು ಬಟ್ಟೆಗಳಲ್ಲೇ ಇರುತ್ತಾರೋ, ಕೆಲಸದ ಮೇಲಿರುತ್ತಾರೋ ಆವರೆಗೂ ಅವರನ್ನು ಕೀಳಾಗಿಯೇ ಕಾಣಲಾಗುತ್ತದೆ. ಸಮಾಜವು ಅವರನ್ನು ಕಡೆಗಣಿಸುತ್ತದೆ. ಏಕೆಂದರೆ ಜನರ ಮನಸ್ಸಿನಲ್ಲಿ ಪೌರಕಾರ್ಮಿಕರ ಅಸಹ್ಯ ಚಹರೆ ಖಾಯಮಾಗಿ ಬೇರುಬಿಟ್ಟಿರುತ್ತದೆ.

ಈ ಒಂದು ತಪ್ಪು ಭಾವನೆಯನ್ನು ಹೋಗಲಾಡಿಸಲು ಅವರ ಕೆಲಸದ ಸ್ಥಳಗಳನ್ನು ಈ ಜನರಿಗೆ ಸ್ನಾನ ಮಾಡಲು, ಬಟ್ಟೆ ಬದಲಾಯಿಸಿಕೊಳ್ಳಲು ಸಾಕಷ್ಟು ಸಮಯಾವಕಾಶ ಸಿಗುವಂತೆ ಹೊಂದಾಣಿಕೆ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಕೆಲಸದ ವೇಳೆಗಳಾದ ಮೇಲೆ ಅವರು ತಮ್ಮ ಸಮವಸ್ತ್ರವನ್ನು ಧರಿಸಿರಬಾರದೆನ್ನುವುದನ್ನು ಕಡ್ಡಾಯ ಮಾಡಬೇಕು. ಪೌರಕಾರ್ಮಿಕರು ಕರ್ತವ್ಯ ಮುಗಿಸಿ ಹೋಗುವಾಗ ಅವರ ಸಲಕರಣೆಗಳನ್ನು ಹಾಗೂ ಸಮವಸ್ತ್ರಗಳನ್ನು ಅವರೇ ಮುನಿಸಿಪಾಲಿಟಿ ಕಚೇರಿಯಲ್ಲಿ ಇಟ್ಟು ಹೋಗಲು ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳು ಅವಕಾಶ ಕಲ್ಪಿಸಬೇಕು. ಹಾಗೆ ಇಟ್ಟಾದ ಮೇಲೆ ಅವರು ತಮ್ಮದೇ ನೀಟಾದ ಬಟ್ಟೆಗಳನ್ನು ಹಾಕಿಕೊಳ್ಳುತ್ತಾರೆ. ನೀಟಾಗಿ ಕಾಣುತ್ತಾರೆ.

ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ, ಪೌರಕಾರ್ಮಿಕರು ತಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಸಾಂಸಾರಿಕ ಜೀವನ ಕಲ್ಪಿಸದೆ 'ಬಸವಿ' ಬಿಡುವ ಕೆಟ್ಟ ಪದ್ಧತಿ ಪೌರಕಾರ್ಮಿಕರಲ್ಲಿ ಆಚರಣೆಯಲ್ಲಿದೆ. ಈ 'ಬಸವಿ' ಪದ್ಧತಿಗೆ ಮೂಢ ನಂಬಿಕೆಯೇ ಕಾರಣ ಹಾಗೂ ಧರ್ಮದಲ್ಲಿರುವ ಅಸಂಗತ ಧೋರಣೆಯೇ ಕಾರಣ. ಈ ಬಸವಿಯರು ಹೆಚ್ಚು ಕಡಿಮೆ ವೇಶ್ಯೆಯರು. ಬಸವಿ ವೃತ್ತಿಯನ್ನು ದೇವರ ಹೆಸರಿನಲ್ಲಿ ಆಚರಣೆ ಮಾಡುತ್ತಾರೆ. ದೇವರ ಹೆಸರಿನಲ್ಲಿ ಎನ್ನುವ ಈ ಮೌಢ್ಯಕ್ಕೆ ಸವರ್ಣೀಯರೂ ಜವಾಬ್ದಾರರು. ಲೈಂಗಿಕ ಬಯಕೆಯ ಈಡೇರಿಕೆಗಾಗಿ ಸವರ್ಣೀಯರು ಉತ್ಸುಕರಾಗಿರುತ್ತಾರಾದ್ದರಿಂದ ಸವರ್ಣೀಯರು ಈ ಅನಿಷ್ಟ ಪದ್ಧತಿಗೆ ಜವಾಬ್ದಾರರು. ಇದೊಂದು ವಿಷ ವರ್ತುಲ. ಇದನ್ನು ತೊಡೆದು ಹಾಕಲೇಬೇಕು.

ಪೌರಕಾರ್ಮಿಕರ ಯುವ ಹೆಣ್ಣುಮಕ್ಕಳು ಬಸವಿ ಪದ್ಧತಿಗೆ ಒಲ್ಲೆನೆಂದು ಹೇಳಿದರೂ ಅವರ ತಂದೆ ತಾಯಿಯು ಅದರಲ್ಲೂ ಮುಖ್ಯವಾಗಿ ಸಮಾಜವು ಒಲ್ಲೆ ಎಂದು ಹೇಳುವುದನ್ನು ಒಪ್ಪುತ್ತಿಲ್ಲವೆಂಬುದನ್ನು ಸಮಿತಿಯು ಗಮನಿಸಿದೆ. ಕೆಲವರು ನೇರ ನಡೆ ನುಡಿಯ ಬಸವಿಯರು, ತಮ್ಮ ಸ್ವಂತ ಪ್ರಯತ್ನದಿಂದ ವಿದ್ಯಾವಂತರಾಗಿದ್ದಾರೆ. ಈ ಅನಿಷ್ಟ ಪದ್ಧತಿಯನ್ನು ಬಿಡಲು ಬಯಸಿದ್ದಾರೆ. ಆದರೂ ಅವರಿಗೆ ಅವಕಾಶ ಕೊಡುತ್ತಿಲ್ಲ. ಅವರು ಅಸಹಾಯಕರಾಗಿದ್ದಾರೆ. ಈ ಹೆಣ್ಣುಮಕ್ಕಳು ಸಮಾಜ ಕಲ್ಯಾಣ ಇಲಾಖೆಗೆ, ಪರಿಹಾರ ಕೋರಿ ಹೋದಾಗ ಆ ಇಲಾಖೆಯವರು ಅವರ ರಕ್ಷಣೆಗೆ ಬರದಿರುವುದು ವಿಷಾದನೀಯ.

ಸರ್ಕಾರವು ಅವಶ್ಯಕವಾದರೆ, ಅನೈತಿಕ ದಮನ ಕಾಯಿದೆಯ ನಿಬಂಧನೆಗಳನ್ನು ಕಾರ್ಯರೂಪಕ್ಕೆ ತಂದು ದೇವರ ಹಾಗೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಈ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ಕಟ್ಟು ನಿಟ್ಟಿನ ಕ್ರಮಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತದೆ. ಹಾಗೆ ಮಾಡಲು ಅಡ್ಡಿ ಅಡಚಣೆಗಳು ಎದುರಾದರೆ, ಸರ್ಕಾರವು ಈ ಬಸವಿ ಪದ್ಧತಿಯು ಮುಂದುವರಿಯಲು ಉತ್ತೇಜನ ಕೊಡುತ್ತಿರುವ ತಾಯಿ ತಂದೆಯನ್ನು ಹಾಗೂ ಸಾರ್ವಜನಿಕರನ್ನು ಶಿಕ್ಷಿಸಲು ಸೂಕ್ತ ಸುಗ್ರೀವಾಜ್ಞೆಯನ್ನು ತುರ್ತಾಗಿ ತರುವ ಸಲುವಾಗಿ ರೂಪಿಸಬಹುದು.

ಸಮಿತಿಯು ರಾಜ್ಯದಲ್ಲಿ ವ್ಯಾಪಕ ಪ್ರವಾಸಗಳನ್ನು ಮಾಡಿದಾಗ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪೌರಕಾರ್ಮಿಕರ ಬಳಿಗೆ ಹೋಗುತ್ತಿಲ್ಲವೆಂಬುದನ್ನು ಸಮಿತಿಗೆ ತಿಳಿಸಲಾಯಿತು. ಸಮಾಜದ ದುರ್ಬಲ ವರ್ಗಗಳ ಕಲ್ಯಾಣವನ್ನು ನಿರಂತರವಾಗಿ ಗಮನಿಸುತ್ತಿರಬೇಕಾದುದು ಆ ಇಲಾಖೆಯ ಕರ್ತವ್ಯ. ಹಾಗೆಯೇ, ಈ ಪೌರಕಾರ್ಮಿಕರ ಕಲ್ಯಾಣವನ್ನು ಗಮನಿಸುತ್ತಿರಬೇಕಾದುದೂ ಕೂಡ ಆ ಇಲಾಖೆಯ ಕರ್ತವ್ಯ. ಆದ್ದರಿಂದ ಪೌರಕಾರ್ಮಿಕರು ದಿನವೂ ಸ್ನಾನ ಮಾಡುವುದು ನಿಯತಕಾಲಿಕವಾಗಿ ಮುಖ ಕ್ಷೌರ ಮಾಡಿಕೊಳ್ಳುವುದು, ಆಗಾಗ ಬಟ್ಟೆಬರೆ ಒಗೆದುಕೊಳ್ಳುವುದು ಇವೆಲ್ಲವನ್ನು ಮಾಡಿಕೊಂಡು ಕಟ್ಟುನಿಟ್ಟಾಗಿ ದೈಹಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಂಡಿರುವರೇ ಎಂಬುದನ್ನು ಸಮಾಜ ಕಲ್ಯಾಣ ಇಲಾಖೆಯು ಗಮನಿಸಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. ಸಮಾಜ ಕಲ್ಯಾಣ ಇಲಾಖೆಯಾಗಲಿ ಅಥವಾ ಯಾವುದೇ ಇತರ ಏಜೆನ್ಸಿಯಾಗಲಿ ಪ್ರಾಮಾಣಿಕವಾಗಿ ಹಾಗೂ ಶ್ರದ್ಧೆಯಿಂದ ಈ ಕೆಲಸ ಮಾಡುತ್ತಿಲ್ಲ. ಈ ಉದ್ದೇಶ ಈಡೇರಬೇಕಾದರೆ, ಪೌರಕಾರ್ಮಿಕರ ಸಮಸ್ಯೆಗಳನ್ನು ಮತ್ತು ಸಂಕಷ್ಟಗಳನ್ನು ಆಳವಾಗಿ ತಿಳಿದುಕೊಂಡಿರುವ ಈ ಪ್ರಸ್ತುತ ಸಮಿತಿಯನ್ನು ಸೂಕ್ತ ಶಾಸನಾತ್ಮಕ ಮತ್ತು ಆರ್ಥಿಕ ಅಧಿಕಾರಗಳು ಇರುವ "ಪೌರಕಾರ್ಮಿಕರ ಕಲ್ಯಾಣ ಮಂಡಳಿ' ಎಂದು ಪುನರ್ ಪದನಾಮೀಕರಿಸಬೇಕು.

ಚಿತ್ರ

**ಇದು ಮಳೆ ಬಂದು ನಿಂತ ನೀರಿನ ಹೊಂಡ. ಇದು ಬೀದರ್ ಪೌರಕಾರ್ಮಿಕರು ಬಳಸುತ್ತಿರುವ, ಕುಡಿಯುತ್ತಿರುವ ನೀರು ಈ ಕಾಲೋನಿಯಲ್ಲಿದ್ದ ಒಂದೇ ಒಂದು ನೀರು ನಲ್ಲಿ ಈ ಹೊಂಡದಲ್ಲಿ ಮುಳುಗಿ ಹೋಗಿದೆ. ರೋಗ ಹರಡುವ ತಾಣವಾಗಿರುವ ಇಲ್ಲಿನ ನೀರನ್ನೇ ಪೌರಕಾರ್ಮಿಕರು ಎಲ್ಲ ಉದ್ದೇಶಗಳಿಗಾಗಿ ಬಳಕೆ ಮಾಡುತ್ತಿದ್ದಾರೆ**

ಇದು, ಮಳೆ ನೀರು ನಿಂತಿರುವ ಹೊಂಡ ಅಲ್ಲ. ಇದೇ ಪೌರಕಾರ್ಮಿಕರು ಕುಡಿಯುವ ನೀರು ಕಾಲನಿಯಲ್ಲಿರುವ ಒಂದೇ ಒಂದು ನಲ್ಲಿ ತುಂಬಿ ಹರಿಯುತ್ತಿರುವ ಈ ಹೊಂಡದಲ್ಲಿ ಮುಳುಗಿ ಹೋಗಿದೆ. ಅಲ್ಲಿನ, ಪೌರಕಾರ್ಮಿಕರು, ತಮ್ಮೆಲ್ಲ ದಿನನಿತ್ಯದ ಬಳಕೆಗಾಗಿ ಈ ರೋಗಾಣು ವರ್ಧಕ ನೀರನ್ನೇ ಬಳಸುತ್ತಿದ್ದಾರೆ.

# ಅಧ್ಯಾಯ XI

## ಆರೋಗ್ಯ

ಪೌರಕಾರ್ಮಿಕರ ಆರೋಗ್ಯ, ಅವರ ಅಪಾಯಕಾರಕ ವೃತ್ತಿಯ ಕಾರಣದಿಂದಾಗಿ ಯಾವಾಗಲೂ ಸಮಾಧಾನಕರವಾಗಿರುವುದಿಲ್ಲ. ಇತರರು ಆರೋಗ್ಯವಾಗಿರಲು ಪೌರಕಾರ್ಮಿಕ ಮಾಡುತ್ತಿರುವ ಕೆಲಸವೇ ಅವನಲ್ಲಿ ಅನಾರೋಗ್ಯವನ್ನುಂಟು ಮಾಡುತ್ತದೆ. ಕಸಗುಡಿಸುವವರು ಮತ್ತು ಜಾಡಮಾಲಿಗಳು ಯಾವಾಗಲೂ ಎಲ್ಲ ಬಗೆಯ ಸಾಂಕ್ರಾಮಿಕ ಹಾಗೂ ಸ್ಥಳೀಯ ರೋಗಗಳಿಗೆ ತುತ್ತಾಗುತ್ತಾರೆ. ಏಕೆಂದರೆ ಅವರು ದಿನವೂ ರೋಗವಾಹಕ ಏಕಾಣು ಜೀವಿಗಳ ಸಂಪರ್ಕಕ್ಕೆ ಬರುವುದೇ ಕಾರಣ.

ಕಸಗುಡಿಸುವವನಿಗೆ ಸ್ವಚ್ಛಗೊಳಿಸಲು ಪಟ್ಟಣದಲ್ಲಿ ನಿರ್ದಿಷ್ಟಪಡಿಸಿದ ರಸ್ತೆಗಳನ್ನು ಅವನು ಸ್ವಚ್ಛ ಮಾಡುವಾಗ ಹಲವಾರು ಬಗೆಯ ರೋಗಗಳ ವಾಹಕವಾದ ಧೂಳು ಅವನಿಗೆ ತಲೆಯಿಂದ ಕಾಲಿನವರೆಗೆ ಆವೃತಗೊಂಡಿರುತ್ತದೆ. ಗಾಳಿಯಲ್ಲಿ ತೇಲುತ್ತಿರುವ ಎಲ್ಲ ರೋಗಾಣು ಅವನ ಮೂಗಿನೊಳಗಡೆಗೆ ಹಾಗೂ ಶ್ವಾಸಕೋಶಗಳ ಒಳಗಡೆ ಹೋಗಿ ಅವನ ಶ್ವಾಸೋಚ್ಛಾಸಕ್ಕೆ ಸರಿಪಡಿಲಾಗದ ಹಾನಿಯನ್ನುಂಟುಮಾಡುತ್ತವೆ. ಅವನು ಪಟ್ಟಣದ ಎಲ್ಲ ಕಸಕಡ್ಡಿಗಳ ಸಂಪರ್ಕಕ್ಕೆ ಬರುವುದರಿಂದ ಅವನು ಆ ಪಟ್ಟಣದ ಎಲ್ಲ ರೋಗಗಳ ಬುಟ್ಟಿಯಾಗುತ್ತಾನೆ.

ಈಗ ಕಸಗುಡಿಸುವವನು ದೀರ್ಘ ವೇಳೆಗಳ ಕಾಲ ಬಗ್ಗಿ ಕಸಗುಡಿಸಬೇಕಾಗುತ್ತದೆ. ಹಾಗಾಗಿ, ಎಲ್ಲ ಕಸ ಹಾಗೂ ಅಪಾಯಕಾರಿ ಬ್ಯಾಕ್ಟೀರಿಯಾ ಮೂಗಿನೊಳಗಿಂದ, ಬಾಯಿಯೊಳಗಿಂದ ಒಳಗೆ ಹೋಗುತ್ತವೆ. ನಿಂತು ಕೊಂಡೇ ಕಸಗುಡಿಸುವಂತಾಗಲು ಅವರಿಗೆ ಉದ್ದ ಹಿಡಿಕೆ ಇರುವ ಪೊರಕೆಗಳನ್ನು ಒದಗಿಸಬೇಕೆಂದು ಈಗಾಗಲೇ ಸಲಹೆ ಮಾಡಲಾಗಿದೆ. ವೈದ್ಯರು, ಔಷಧ ವ್ಯಾಪಾರಿಗಳು ಹಾಗೂ ನರ್ಸ್‌ಗಳು ಬಳಸುತ್ತಿರುವಂತೆ, ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳುವ ಕ್ರಿಮಿನಾಶಕ ಬಟ್ಟೆಯನ್ನು ಎಲ್ಲ ಕಸಗುಡಿಸುವವರಿಗೆ ಒದಗಿಸುವುದು ಅವಶ್ಯಕ.

ಜಾಡಮಾಲಿಗಳು ಪಟ್ಟಣದ ಎಲ್ಲ ಹೊಲಸಿನ ಸಂಪರ್ಕಕ್ಕೆ ಬರುವುದರಿಂದ ಜಾಡಮಾಲಿ ಕೆಲಸವೂ ಅಷ್ಟೇ ಅಪಾಯಕಾರಿ. ಪಟ್ಟಣದ ಜನರ ಮಲವು ಸಹಜವಾಗಿಯೇ ಎಲ್ಲ ಬಗೆಯ ಊಹಿಸಲಾಗದ ಮಾಲಿನ್ಯಗಳನ್ನು ಒಳಗೊಂಡಿರುತ್ತದೆ. ಗಟಾರಗಳನ್ನು, ಆಳುಗುಂಡಿಗಳ ಒಳಭಾಗಗಳನ್ನು ಸ್ವಚ್ಛಗೊಳಿಸುವುದು ಅವರ ವೃತ್ತಿಯಾದುದರಿಂದ, ಅವನು ಬರಿಗೈಯಲ್ಲಿ ಮಲವನ್ನು ಎತ್ತಿ ಸಾಗಿಸಬೇಕಾಗುತ್ತದೆ. ಕೆಲವೊಮ್ಮೆ ಎಲ್ಲ ಅಪಾಯಕಾರಿ ಅನಿಲ ಉತ್ಪತ್ತಿಯಾಗುವ ಆಳುಗುಂಡಿಗಳ ಒಳಗಡೆಗೆ ಅವರು ಇಳಿದು ಕೆಲಸ ಮಾಡಬೇಕಾಗುತ್ತದೆ. ಎರಡನೆಯದಾಗಿ ಆಳುಗುಂಡಿಗಳಲ್ಲಿ ದ್ರವ ರೂಪದ ಮಲವು ತುಂಬಿ ಹರಿಯುತ್ತಿರುವಾಗ ಜಾಡಮಾಲಿಗಳು ಆಳುಗುಂಡಿಗಳ ಒಳಗಡೆಗೆ ಮುಳುಗಿ ಸ್ವಚ್ಛ ಮಾಡಬೇಕಾಗುತ್ತದೆ. ಹೀಗೆಲ್ಲಾ ಮಾಡುವಾಗ ಅವರು ಮಾರಕ ಪರಿಣಾಮಗಳಿಗೆ ನೇರವಾಗಿ ಪಕ್ಕಾಗಬೇಕಾಗಿ ಬರುತ್ತದೆ. ಅವರು ವಿಷಾನಿಲವನ್ನು ಒಳಗೆಳೆದುಕೊಳ್ಳುವುದಷ್ಟೇ ಅಲ್ಲ, ಮಾರಣಾಂತಿಕ ರೋಗಗಳು ಅವರಿಗೆ ಅಂಟಿಕೊಳ್ಳುತ್ತವೆ.

ಈ ಕಸಗುಡಿಸುವವರು ಹಾಗೂ ಜಾಡಮಾಲಿಗಳು, ಅವರಿಗೆ ತಗಲಿದ ರೋಗಗಳು ಎಷ್ಟೋ ಸಲ ವಾಸಿಯಾಗದವುಗಳಾದ್ದರಿಂದ, ಯಾವಾಗಲೂ ನಿತ್ರಾಣರಾಗಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ ಗಟಾರಗಳನ್ನು ಹಾಗೂ ಆಳುಗುಂಡಿಗಳನ್ನು ಸ್ವಚ್ಛಗೊಳಿಸುವ ಕೆಲಸ ಮಾಡುವವರಿಗೆ ಅನೇಕ ಬಗೆಯ ಚರ್ಮ ರೋಗಗಳು ಅಂಟಿಕೊಳ್ಳುತ್ತವೆ. ಕೆಲವೊಮ್ಮೆ ಅವರು ಕುಷ್ಠರೋಗ, ಕ್ಯಾನ್ಸರ್, ಕ್ಷಯರೋಗ, ಅಸ್ತಮಾ ಮುಂತಾದ ಅಪಾಯಕಾರಿ ರೋಗಗಳಿಗೂ ತುತ್ತಾಗುತ್ತಾರೆ. ಬಹುಬೇಗನೆ ಅವರು ದೃಷ್ಟಿ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ.

ಪೌರಕಾರ್ಮಿಕರು ಜೀವಮಾನವಿಡೀ ಬದುಕುವುದಿಲ್ಲವೆಂಬುದು ಸಮಿತಿಯ ಗಮನಕ್ಕೆ ಬಂದಿದೆ. ರೋಗಗಳು ಉಂಟಾದಾಗ ಪ್ರಾರಂಭಿಕ ಹಂತದಲ್ಲೇ ಅವರಿಗೆ ವೈದ್ಯಕೀಯ ತಪಾಸಣೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಸಿಗದೆ ಅಕಾಲಿಕ ಮರಣ ಹೊಂದುತ್ತಾರೆ. ತಾವು ಕೆಲಸ ಕಳೆದುಕೊಳ್ಳುತ್ತೇವೆ ಅಥವಾ ದೀರ್ಘಕಾಲ ಹಾಸಿಗೆಯಲ್ಲಿರಬೇಕಾಗುತ್ತದೆ ಎನ್ನುವ ಅಂತರ್ಗತ ಹೆದರಿಕೆಯೇ ಅವರು ತತ್‌ಕ್ಷಣ ವೈದ್ಯಕೀಯ ನೆರವಿಗೆ ಬಯಸದಿರುವುದಕ್ಕೆ ಕಾರಣ. ತಮ್ಮ ಹಾಗೂ ತಮ್ಮ ಕುಟುಂಬದ ಜೀವನ ನಿಂತುಹೋಗುತ್ತದೆಂದು ಭಾವಿಸುತ್ತಾರೆ.

ಈ ಕಾರಣದಿಂದಾಗಿಯೇ ಅವರು ತಮಗಿರುವ ರೋಗವನ್ನು ಹೇಳಿಕೊಳ್ಳುವುದಿಲ್ಲ. ಹಾಗಾಗಿ ಅವರು ಇತರರಿಗೂ ತಮಗಿರುವ ರೋಗವನ್ನು ಹರಡಿದಂತಾಗುತ್ತದೆ.

ಪೌರಕಾರ್ಮಿಕರನ್ನು ರೋಗ ಮತ್ತು ಸಾವಿನ ದವಡೆಯಿಂದ ಪಾರು ಮಾಡಲು, ಪೌರಕಾರ್ಮಿಕರನ್ನು ಮೂರು ತಿಂಗಳಿಗೆ ಒಂದು ಸಲ ಕಡ್ಡಾಯವಾಗಿ ತೀವ್ರ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು ಹಾಗೂ ಚಿಕಿತ್ಸೆ ನೀಡುವುದು ಆವಶ್ಯಕ. ಎಲ್ಲ ಸ್ಥಳೀಯ ಸಂಸ್ಥೆಗಳು ತಮ್ಮ ಪೌರಕಾರ್ಮಿಕರನ್ನು ಅಸಿಸ್ಟೆಂಟ್ ಸರ್ಜನ್ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ವೈದ್ಯಾಧಿಕಾರಿಗಳ ವೈದ್ಯಕೀಯ ತಪಾಸಣೆಗೆ ಒಳಪಡಿಸುವುದು ಎಲ್ಲ ಸ್ಥಳೀಯ ಸಂಸ್ಥೆಗಳ ಕರ್ತವ್ಯವೆಂದು ಶಾಸನ ತಂದು ಆಜ್ಞಾಪಿಸುವುದು ಅತ್ಯಂತ ಅವಶ್ಯಕ. ಆಯಾಯ ಸ್ಥಳೀಯ ಸಂಸ್ಥೆಗಳು, ಎಲ್ಲ ವೈದ್ಯಕೀಯ ವೆಚ್ಚಗಳನ್ನು ತಾವೇ ವಹಿಸಬೇಕು ಹಾಗೂ ಅವುಗಳ ವಾರ್ಷಿಕ ಬಜೆಟ್‌ನಲ್ಲಿ ಸಮರ್ಪಕ ಏರ್ಪಾಡು ಮಾಡಿಕೊಳ್ಳಬೇಕು.

ಕಸಗುಡಿಸುವವರು ಹಾಗೂ ಜಾಡಮಾಲಿಗಳು ತಕ್ಕಮಟ್ಟಿಗೆ ಆರೋಗ್ಯಕರ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದಕ್ಕಾಗಿ ಈಗಿರುವ ಕೆಲಸದ ವೇಳೆಗಳಲ್ಲಿ (ಈಗಾಗಲೇ ಸಲಹೆ ಮಾಡಿರುವಂತೆ) ಬದಲಾವಣೆ ಮಾಡಬೇಕು. ತಮ್ಮ ಕೆಲಸ ಮುಗಿದ ಮೇಲೆ ಅವರು ನೌಕರರ ಕೊಠಡಿಗೆ ಹೋಗಿ, ಅಲ್ಲಿ ತಮ್ಮ ಸಮವಸ್ತ್ರಗಳನ್ನು ಹಾಗೂ ಸಲಕರಣೆಗಳನ್ನು ಇಡಬೇಕು. ಬಟ್ಟೆ ಬದಲಾಯಿಸಿಕೊಳ್ಳಬೇಕು. ಮನೆಗೆ ಹೋಗಬೇಕು. ಇದು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ಮಾಡಿದರೆ ಹಾಗೂ ಸರಿಯಾಗಿ ಮೇಲ್ವಿಚಾರಣೆ ಮಾಡಿದರೆ ಅವರಿಗೆ ರೋಗ ತಗಲುವ ಸಾಧ್ಯತೆ ತುಂಬಾನೇ ಕಡಿಮೆಯಾಗುತ್ತದೆ.

ಪೌರಕಾರ್ಮಿಕರ ಕುಟುಂಬದವರನ್ನು ಕೂಡ, ಅವರಿರುವ ಪರಿಸರವನ್ನು ಗಮನಕ್ಕೆ ತೆಗೆದುಕೊಂಡು, ನಿಯತಕಾಲಿಕವಾಗಿ ತಪಾಸಣೆಗೆ ಒಳಪಡಿಸಬೇಕು ಹಾಗೂ ಉಚಿತ ಚಿಕಿತ್ಸೆ ಕೊಡಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಸಹ ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಹಾಗೂ ತೀರಾ ಕಡೆಗಣಿಸಲಾಗುತ್ತಿದೆ ಎಂಬುದು ಸಮಿತಿಯ ಗಮನಕ್ಕೆ ಬಂದಿದೆ.

ಪೌರಕಾರ್ಮಿಕರು ಕಾಯಿಲೆ ಬಿದ್ದಾಗ ಆಯಾ ಸ್ಥಳೀಯ ಸಂಸ್ಥೆಗಳು ಅವರ ಕಾಯಿಲೆ ಪೂರ್ತಿಯಾಗಿ ವಾಸಿಯಾಗುವವರೆಗೆ ಉಚಿತ ವೈದ್ಯಕೀಯ ನೆರವು ಒದಗಿಸಬೇಕು. ಪೌರಕಾರ್ಮಿಕರಿಗೆ ಅವರು ಕಾಯಿಲೆ ಬಿದ್ದ ಕಾಲದಿಂದ ಹಿಡಿದು ಅವರು ಕೆಲಸ ಮಾಡಲು ಶಕ್ತರಾಗಿದ್ದಾರೆಂದು ಕೊಡುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಕೆಲಸಕ್ಕೆ ಹಾಜರಾಗುವ ಕಾಲದವರೆಗೆ ಸ್ಥಳೀಯ ಸಂಸ್ಥೆಗಳು ಪೂರ್ತಿ ಸಂಬಳ ಮತ್ತು ಭತ್ಯೆಗಳನ್ನು ಕೊಡಬೇಕು.

ಜನಾರೋಗ್ಯ ಇಲಾಖೆಯ ಅಧಿಕಾರಿಗಳು ಪೌರಕಾರ್ಮಿಕರ ಕಾಲನಿಗಳಿಗೆ ನಿಯತಕಾಲಿಕವಾಗಿ ಹೋಗಬೇಕು. ನೈತಿಕ, ದೈಹಿಕ ಹಾಗೂ ಸಮುದಾಯ ನೈರ್ಮಲ್ಯದ ಬಗ್ಗೆ ತಿಳಿವಳಿಕೆ ಕೊಡಬೇಕು. ರೋಗಗಳು ಹಾಗೂ ಆರೋಗ್ಯ ರಕ್ಷಣೆ ಬಗ್ಗೆ ಉಪನ್ಯಾಸಗಳನ್ನು, ಫಿಲಂ ಪ್ರದರ್ಶನ ಏರ್ಪಡಿಸಬೇಕು.

ಪೌರಕಾರ್ಮಿಕರ ವೃತ್ತಿ ಸಂಬಂಧಿ ಅಪಾಯಗಳು ಹಾಗೂ ರೋಗಗಳು ಉಂಟಾಗುವ ವಿಷಯವನ್ನು ಆಳವಾಗಿ ಅಧ್ಯಯನ ಮಾಡಲು ಹಾಗೂ ಅಂತಹ ಪರಿಸ್ಥಿತಿಯ ಪರಿಹಾರಕ್ಕೆ ಸೂಕ್ತವಾಗಿ ಶಿಫಾರಸು ಮಾಡಲು ವೈದ್ಯಕೀಯ ತಜ್ಞರು ಇರುವ ತಪಾಸಣಾ ಸಮಿತಿಯೊಂದನ್ನು ಜನಾರೋಗ್ಯ ಇಲಾಖೆಯು ನೇಮಕ ಮಾಡಲು ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ನಮ್ಮ ದೇಶದಲ್ಲಿರುವ ಯಾವ ರಾಜ್ಯ ಸರ್ಕಾರವೂ ಈ ವಿಷಯದ ಅಧ್ಯಯನ ಮಾಡಿಲ್ಲವೆಂಬುದನ್ನು ಇಲ್ಲಿ ಹೇಳಲೇಬೇಕಾಗಿದೆ. ಹಾಗಾಗಿ, ಪೌರಕಾರ್ಮಿಕರ ಆರೋಗ್ಯದ ಈಗಿನ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಅಂಥದೊಂದು ತಪಾಸಣೆ ಹಾಗೂ ಸಮೀಕ್ಷೆ ಅತ್ಯಂತ ಆವಶ್ಯವೆಂದು ಸಮಿತಿಯು ಭಾವಿಸಿದೆ. ಆಳುಗುಂಡಿಯು ಒಳಗಡೆಗೆ ಇಳಿಯುವ ಪೌರಕಾರ್ಮಿಕರು ತೀವ್ರ ದೈಹಿಕ ಅಪಾಯಗಳಿಗೆ ಹಾಗೂ ಮಾನಸಿಕ ತೊಳಲಾಟಗಳಿಗೆ ಒಳಗಾಗುತ್ತಾರೆ. ಆಯಾಯ ಸ್ಥಳೀಯ ಸಂಸ್ಥೆಗಳು ಸ್ವತಃ ಅವರ ಜೀವ ವಿಮೆ ಮಾಡಿಸಬೇಕು ಹಾಗೂ ಆಯಾಯ ಸ್ಥಳೀಯ ಸಂಸ್ಥೆಗಳೇ ವಿಮಾ ಕಂತುಗಳನ್ನು ಕಟ್ಟಬೇಕು. ಹಾಗೆ ಮಾಡಿದರೆ, ಪೌರಕಾರ್ಮಿಕರು ಆಳುಗುಂಡಿಯಲ್ಲಿ ಇಳಿದು ಕೆಲಸ ಮಾಡುವಾಗ ಏನಾದರೂ ಅನಾಹುತ ಹಾಗೂ ದುರಂತ ಸಂಭವಿಸಿದರೆ ಅವರ ಕುಟುಂಬಗಳಿಗೆ ಪರಿಹಾರ ದೊರೆಯುತ್ತದೆ.

# ಅಧ್ಯಾಯ XII

## ಶಿಕ್ಷಣ

ಸ್ವಲ್ಪವಾದರೂ ವಿದ್ಯೆ ಇಲ್ಲದಿರುವುದೇ ಕಸಗುಡಿಸುವವರು ಹಾಗೂ ಜಾಡಮಾಲಿಗಳು ತೀರಾ ಹಿಂದುಳಿದಿರುವುದಕ್ಕೆ ಕಾರಣ. ಪೌರಕಾರ್ಮಿಕದಲ್ಲಿ ಯಾವುದೇ ಶಿಕ್ಷಣ ಇರಲ್ಲ. ಅಷ್ಟೇ ಅಲ್ಲ, ತಾವು ವಿದ್ಯಾವಂತರಾಗಬೇಕೆಂಬ ಅಪೇಕ್ಷೆ ಅವರಲ್ಲಿ ಇರಲ್ಲ. ಏಕೆಂದರೆ ಮೊದಲನೆಯದಾಗಿ, ತಾವು ಯಾವ ಬಗೆಯ ಕೆಲಸ ಮಾಡುತ್ತಿದ್ದೇವೆಯೋ ಅದಕ್ಕೆ ಯಾವ ವಿದ್ಯಾರ್ಹತೆಯೂ ಬೇಕಿಲ್ಲ ಎಂಬುದು ಅವರಿಗೆ ಗೊತ್ತೇ ಇರುತ್ತದೆ. ಎರಡನೆಯದಾಗಿ, ತಮ್ಮ ಮಕ್ಕಳಿಗೂ ತಮ್ಮ ಕೆಲಸವನ್ನೇ ಕೊಡಲಾಗುತ್ತದೆಂಬುದೂ ಅವರಿಗೆ ಗೊತ್ತಿರುತ್ತದೆ. ಹಾಗಾಗಿ ತಮ್ಮ ಮಕ್ಕಳು ವಿದ್ಯಾವಂತರಾಗುವ ಅಗತ್ಯ ಇಲ್ಲ ಎಂಬುದು ಅವರಿಗೆ ಖಚಿತವಾಗಿ ಗೊತ್ತಿರುತ್ತದೆ. ಈ ಒಂದು ಕೆಟ್ಟ ಪ್ರವೃತ್ತಿಯನ್ನು ಹಾಗೂ ಮೂರ್ಖ ಆಲೋಚನಾ ಮನೋಭಾವವನ್ನು ತೊಲಗಿಸಬೇಕು. ಪೌರಕಾರ್ಮಿಕರ ಮಕ್ಕಳಲ್ಲೂ ಅಂಥದೊಂದು ಭಾವನೆ ಬಂದುಬಿಟ್ಟರೆ, ಮಕ್ಕಳು ವಿದ್ಯಾವಂತರಾಗುವುದೇ ಇಲ್ಲವಾದ್ದರಿಂದ ಪೌರಕಾರ್ಮಿಕರ ಮಕ್ಕಳು ಈ ವೃತ್ತಿಯನ್ನು ಪಿತ್ರಾರ್ಜಿತ ಆಸ್ತಿ ಎಂಬಂತೆ ಕೈಗೊಳ್ಳುವುದಕ್ಕೆ ಆಸ್ಪದ ಕೊಡಬಾರದೆಂದು ನಮ್ಮ ದೇಶದ ಸರ್ಕಾರವು ನೇಮಿಸಿದ್ದ ಪಾಂಡ್ಯ ಸಮಿತಿಯು ಸಲಹೆ ಮಾಡಿದೆ.

ಇಂಥ ವಿಷಾದನೀಯ ಪರಿಸ್ಥಿತಿ, ಸನ್ನಿವೇಶಗಳಿಗೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ವೇದಕಾಲೀನ ಸಮಾಜದಲ್ಲಿ ಈ ಜನರಿಗೆ ಗುರುಕುಲಗಳಿಗೆ ಪ್ರವೇಶಕ್ಕೆ ಎಂದಿಗೂ ಅವಕಾಶವೇ ಇರಲಿಲ್ಲ. ಏಕೆಂದರೆ ಆಗ ಅನಿಷ್ಟ ಜಾತಿ ಪದ್ಧತಿ ಆಳವಾಗಿ ಬೇರೂರಿತ್ತು. ವಿದ್ಯೆ ಆಗಿನ ಕಾಲದಲ್ಲಿ ಮೇಲುವರ್ಗದವರ ಏಕೈಕ ಸ್ವಾಮ್ಯವಾಗಿತ್ತು. ಎರಡನೆಯದಾಗಿ, ಪವಿತ್ರ ಗ್ರಂಥಗಳ ವಾಚನವನ್ನು ಕೇಳಿದರೆ ಅಥವಾ ಪವಿತ್ರ ಗ್ರಂಥಗಳನ್ನು ಓದಿದರೆ ಅದು ಪಾಪದ ಕೃತ್ಯ ಎಂಬ ಭಯದ ಭ್ರಾಂತಿಯನ್ನು ಪರಿಶಿಷ್ಟ ಜಾತಿಯವರ ಮನಸ್ಸಿನಲ್ಲಿ ಮೇಲು ವರ್ಗದವರು ಬಿತ್ತಿದ್ದಾರೆ. ಈ ಮೂಢ ನಂಬಿಕೆಗೆ ಬಲಿಯಾಗಿರುವ ಪರಿಶಿಷ್ಟ ಜಾತಿಯವರು ಗುರುಕುಲಗಳಿಂದ ದೂರ ಉಳಿದಿದ್ದರು. ಹಾಗಾಗಿ ಅವರಲ್ಲಿನ ಅನಕ್ಷರತೆ ಹಲವಾರು ಶತಮಾನಗಳಷ್ಟು ಹಳೆಯದು. ಬದುಕಿನ ಎಲ್ಲ ನೆಮ್ಮದಿಗೆ ಹಾಗೂ ಉನ್ನತಿ/ಪ್ರಗತಿಗೆ ವಿದ್ಯೆ ಮಾತ್ರವೇ ಸನ್ಮಾರ್ಗ ಎನ್ನುವುದನ್ನು ಬಹುತೇಕ ಪರಿಶಿಷ್ಟ ಜಾತಿಗಳವರು ಈಗ ಅರಿತುಕೊಂಡಿರುವುದು ಸಂತಸದ ಸಂಗತಿ.

ಪರಿಶೀಲನೆಗೆ ಅರ್ಹವಾದ ಇನ್ನೊಂದು ಸಮಸ್ಯೆ ಇದೆ. ಅದೇನೆಂದರೆ ಪರಿಶಿಷ್ಟ ಜಾತಿಯ ಇತರ ವರ್ಗಗಳವರು ವಿದ್ಯಾವಂತರಾಗುತ್ತಿದ್ದಾರೆ. ಆದರೆ, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಮಕ್ಕಳನ್ನು ಮಾತ್ರವೇ ಶಿಕ್ಷಣ ಕ್ಷೇತ್ರದಲ್ಲಿ ಒಟ್ಟಾರೆ ಕಡೆಗಣಿಸಲಾಗುತ್ತಿದೆ. ಹೀಗೆ ಶೋಚನೀಯವಾಗಿ ಕಡೆಗಣಿಸುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ಆ ಪೈಕಿ ಒಂದು ಪೌರಕಾರ್ಮಿಕರ ಕೆಲಸದ ವೇಳೆಗಳಲ್ಲಿ ಈಗ ಅನುಸರಿಸುತ್ತಿರುವ ವಿಧಾನ. ತಂದೆ ತಾಯಿಯಂದಿರು ತಮ್ಮ ಮಕ್ಕಳನ್ನು ಮನೆಯಲ್ಲಿಯೇ ಬಿಟ್ಟು ಕೆಲಸಕ್ಕೆ ಹೋಗುವುದರಿಂದ ಅಂತಹ ಮಕ್ಕಳಿಗೆ ವಿದ್ಯೆ ಹೇಳಿ ಕೊಡಲು ಅಥವಾ ಉಸ್ತುವಾರಿ ಮಾಡಲು ಯಾರೂ ಇರುವುದಿಲ್ಲ. ಪೌರಕಾರ್ಮಿಕರು ತಮ್ಮ ಕೆಲಸ ಕಾರ್ಯಗಳಲ್ಲಿ ಮಕ್ಕಳನ್ನೂ ಬಳಸಿಕೊಳ್ಳುತ್ತಾರೆ ಅಥವಾ ತಮ್ಮ ಚಿಕ್ಕಮಕ್ಕಳನ್ನು ನೋಡಿ ಕೊಂಡಿರುವಂತೆ ದೊಡ್ಡ ಮಕ್ಕಳಿಗೆ ಹೇಳುತ್ತಾರೆ. ಹೀಗೆ, ಮಕ್ಕಳ ಶಿಕ್ಷಣ ಸಂಪೂರ್ಣವಾಗಿ ಕಡೆಗಣಿತವಾಗಿದೆ.

ಈ ಬಗೆಯ ಪ್ರಸ್ತುತ ವಿಷಾದನೀಯ ಪರಿಸ್ಥಿತಿಗೆ ರಾಜ್ಯ ಸರ್ಕಾರವನ್ನು ದೂಷಿಸಬೇಕಾಗಿದೆ. "ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ" ಯನ್ನು ಜಾರಿಗೆ ತರಲು ರಾಜ್ಯ ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿಲ್ಲ. 14 ವರ್ಷ ವಯಸ್ಸಿನವರೆಗೆ ಮಕ್ಕಳನ್ನು ಪೌರಕಾರ್ಮಿಕರು ಶಾಲೆಗೆ ಕಳುಹಿಸದೇ ಇದ್ದರೆ ಅದು ಶಿಕ್ಷಾರ್ಹ ಅಪರಾಧವೆಂದು ರಾಜ್ಯ ಸರ್ಕಾರ ಘೋಷಿಸಬೇಕು. ಕಾಯಿದೆಯನ್ನು ಜಾರಿಗೆ ತರದಿದ್ದರೆ ರಾಜ್ಯದ ಶಿಕ್ಷಣ ಇಲಾಖೆಯನ್ನು ಜವಾಬ್ದಾರಿಯನ್ನಾಗಿ ಮಾಡಬೇಕು. ಆದ್ದರಿಂದ, ಸಮಿತಿಯು ತನ್ನ 'ಮಧ್ಯಂತರ ವರದಿ' ಯಲ್ಲಿ, ಪೌರಕಾರ್ಮಿಕರ ಹಾಗೂ ಪೌರಕಾರ್ಮಿಕರ ಮ್ಕಕಳ ಶಿಕ್ಷಣ ಅತ್ಯಂತ ಮಹತ್ವದ ವಾಸ್ತವಾಂಶವಾಗಿರುವುದರಿಂದ ಅದೂ ಸೇರಿದಂತೆ ಅವರ ಮ್ಕಕಳ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ನಿಭಾಯಿಸಲು ಸರ್ಕಾರವು 'ಪೌರಕಾರ್ಮಿಕ ಕಲ್ಯಾಣ' ಮಂಡಳಿಯನ್ನು ಸ್ಥಾಪಿಸಬೇಕೆಂದು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಶಿಫಾರಸು

ಮಾಡಿದೆ. ಈ ಮಂಡಳಿಯು ಅಸ್ತಿತ್ವಕ್ಕೆ ಬಂದ ಕೂಡಲೇ, ಹಂತಹಂತವಾಗಿ ಪೌರಕಾರ್ಮಿಕರ ಮತ್ತು ಅವರ ಮಕ್ಕಳ ಶಿಕ್ಷಣಕ್ಕೆ ನಿಬಂಧನೆಗಳನ್ನು ರೂಪಿಸಲು ಮತ್ತು ಮೇಲ್ವಿಚಾರಣೆಗೆ ಮೊದಲು ಕೂಡಲೇ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಈ ಮಧ್ಯೆ ಈ ಮುಂದೆ ಹೇಳಿರುವ ಯೋಜನೆಗಳನ್ನು ಜಾರಿಗೆ ತರಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಪೌರಕಾರ್ಮಿಕರು ಎಲ್ಲಿ ವಾಸಿಸುತ್ತಾರೋ ಆ ಬಡಾವಣೆಗಳಲ್ಲಿ ಪೌರಕಾರ್ಮಿಕರ ಮಕ್ಕಳಿಗಾಗಿ ಶಿಶು ಮಂದಿರಗಳನ್ನು, ನರ್ಸರಿಗಳನ್ನು ಮತ್ತು ಪ್ರಾಥಮಿಕ ಶಾಲೆಗಳನ್ನು ನಿರ್ಮಿಸಬೇಕು. ಏಕೆಂದರೆ, ಪರಿಶಿಷ್ಟ ಜಾತಿಗಳ ಶಾಲೆಗಳಲ್ಲಿ ಪೌರಕಾರ್ಮಿಕರ ಮಕ್ಕಳನ್ನು ಸೇರಿಸಿಕೊಳ್ಳುತ್ತಿಲ್ಲ. ಇದಕ್ಕೆ ಸಮರ್ಥನೆಯಾಗಿ, ರಾಜ್ಯದ ಅನೇಕ ಸ್ಥಳಗಳಲ್ಲಿ ವಾಸ್ತವವಾಗಿ ಏನಾಗುತ್ತಿದೆ ಎಂಬುದನ್ನು ಇಲ್ಲಿ ಹೇಳಲೇಬೇಕಾಗಿದೆ.

ಪರಿಶಿಷ್ಟ ಜಾತಿಯವರ ಮಕ್ಕಳಿಗಾಗಿಯೇ ನಡೆಸುತ್ತಿದ್ದ ಶಾಲೆಯಲ್ಲಿ ಪೌರಕಾರ್ಮಿಕರ ಮಕ್ಕಳನ್ನು ಸೇರಿಸಿಕೊಂಡಿರಲಿಲ್ಲ ಎಂಬುದನ್ನು ಸಮಿತಿಯ ಅಧ್ಯಕ್ಷರು ಮಂಡ್ಯ ಜಿಲ್ಲೆಯ ಬೆಳ್ಳೂರಿಗೆ ಭೇಟಿ ಕೊಟ್ಟಿದ್ದ ಸಮಯದಲ್ಲಿ ಗಮನಿಸಿದ್ದಾರೆ.

ಪೌರಕಾರ್ಮಿಕರ ಮಕ್ಕಳಿಗೆ ಕಾಲೇಜು ಹಂತದವರೆಗೆ ಬಟ್ಟೆ ಬರೆ, ಪುಸ್ತಕಗಳು ಮತ್ತು ಹಾಸ್ಟೆಲ್ ಸೌಲಭ್ಯ ಮುಂತಾಗಿ ಎಲ್ಲ ಸೌಕರ್ಯಗಳನ್ನು ಸರ್ಕಾರವು ಕಡ್ಡಾಯವಾಗಿ ಕೊಡುವುದು ಆವಶ್ಯಕ. ಈ ಶೈಕ್ಷಣಿಕ ಅಭಿಯಾನದಲ್ಲಿ ಪೌರಕಾರ್ಮಿಕರ ಮಕ್ಕಳು ವ್ಯವಸ್ಥಿತವಾಗಿ ಉನ್ನತ ವಿದ್ಯಾಭ್ಯಾಸಕ್ಕೆ ಸಜ್ಜುಗೊಳ್ಳಲು ಅವರ ನಿಯತ ಹಾಜರಾತಿಗೆ ಉತ್ತೇಜನ ಕೊಡಲು ಸೂಕ್ತ ಸ್ಕಾಲರ್‌ಶಿಪ್‌ನ್ನು ಸಹ ಕೊಡಬೇಕು.

ಪೌರಕಾರ್ಮಿಕರ ಮ್ಕಕಳು ತಮ್ಮ ಶೈಕ್ಷಣಿಕ ಪಥದಲ್ಲಿ ಯಶಸ್ವಿಯಾಗಿ ಸಾಗಿ ಶಿಕ್ಷಣವನ್ನು ಪೂರ್ಣಗೊಳಿಸಲು ರಾಜ್ಯದ ಒಳಗಡೆ ಹಾಗೂ ಹೊರಗಡೆ ಶೈಕ್ಷಣಿಕ ಪ್ರವಾಸಗಳಿಗೆ ಏರ್ಪಾಡು ಮಾಡುವುದು ಅವಶ್ಯಕ. ಪ್ರವಾಸ ಕಾಲದುದ್ದಕ್ಕೂ ಪೌರಕಾರ್ಮಿಕರ ವಿದ್ಯಾರ್ಥಿಗಳಿಗೆ ಸರಿಯಾಗಿ ಮಾರ್ಗದರ್ಶನ ನೀಡಲು ಒಳ್ಳೆಯ ತಿಳಿವಳಿಕೆಯುಳ್ಳ ಸುಶಿಕ್ಷಿತ ಉಪಾಧ್ಯಾಯರನ್ನು ನಿಯೋಜಿಸಬೇಕು. ಎಲ್ಲ ಖರ್ಚು ವೆಚ್ಚವನ್ನು ಸರ್ಕಾರವೇ ಭರಿಸಬೇಕು.

ಉತ್ತೇಜನ ಹಾಗೂ ಪ್ರೋತ್ಸಾಹಕ ಕ್ರಮವಾಗಿ ಈ ಶೈಕ್ಷಣಿಕ ಅಭಿಯಾನದಲ್ಲಿ ಪೌರಕಾರ್ಮಿಕರು ತಮ್ಮ ಮಕ್ಕಳು ಶಾಲಾ ದಿನಗಳಲ್ಲಿ ತಪ್ಪದೆ ಹಾಜರಾಗುವಂತೆ ಮಾಡಿದ್ದಕ್ಕಾಗಿ, ಪೌರಕಾರ್ಮಿಕರಿಗೆ ಪ್ರತಿ ಮಕ್ಕಳಿಗೆ ವಿಶೇಷ ಭತ್ಯೆಯಾಗಿ 10 ರೂಪಾಯಿ ಕೊಡಬೇಕು. ಪೌರಕಾರ್ಮಿಕರ ಮಕ್ಕಳು ಓದಿನಲ್ಲಿ, ಕ್ರೀಡೆಗಳಲ್ಲಿ ಇತರ ಮಕ್ಕಳಿಗಿಂತ ಒಳ್ಳೆಯ ಸಾಧನೆ ತೋರಿದಾಗ ಅವರ ತಂದೆ ತಾಯಿಗೆ ಮೆಚ್ಚುಗೆ ಮತ್ತು ಪ್ರೋತ್ಸಾಹಕ ಕ್ರಮವಾಗಿ ಕೂಡಲೇ ಹೆಚ್ಚುವರಿ ಇಂಕ್ರಿಮೆಂಟನ್ನು ಕೊಡಬೇಕು.

ಸಂವಿಧಾನದಲ್ಲಿ ಪರಿಶಿಷ್ಟ ಜಾತಿಯವರಿಗೆ ನೌಕರಿಯಲ್ಲಿ ಶೇ.15ರಷ್ಟನ್ನು ನಿಗದಿಪಡಿಸಲಾಗಿದೆ ಎಂಬುದೇನೋ ನಿಜ. ಆದರೆ, ವಾಸ್ತವವಾಗಿ ಪೌರಕಾರ್ಮಿಕರ ಮಕ್ಕಳಿಗೆ ಈ ನಿರ್ದೇಶಕ ತತ್ವದಿಂದ ಏನೇನೂ ಪ್ರಯೋಜನವಾಗಿಲ್ಲ. ಏಕೆಂದರೆ ಅವರನ್ನು ಎಲ್ಲ ರೀತಿಯಿಂದಲೂ ಕಡೆಗಣಿಸಲಾಗಿದೆ. ಅವರಲ್ಲಿ ಹೊಸದಾಗಿ ಹುಮ್ಮಸ್ಸು ಸ್ಫೂರ್ತಿಯನ್ನು ತುಂಬಲು, ಸರ್ಕಾರದ, ಅರೆ–ಸರ್ಕಾರದ ಮತ್ತು ಸಾರ್ವಜನಿಕ ಉದ್ಯಮಗಳಲ್ಲಿ ಸೂಕ್ತ ನೌಕರಿಯನ್ನು ಪೌರಕಾರ್ಮಿಕರ ವಿದ್ಯಾವಂತ ತರುಣರಿಗೆ ಒದಗಿಸಲಾಗುತ್ತದೆಂಬ ನಿರ್ದಿಷ್ಟ ಭರವಸೆಯನ್ನು ಸರ್ಕಾರ ಕೊಡಬೇಕು. ಹೀಗೆ ಮಾಡದಿದ್ದರೆ ಪೌರಕಾರ್ಮಿಕರ ಮಕ್ಕಳು ವಿದ್ಯಾವಂತರಾಗಲು ಮುಂದೆ ಬರುವ ಹಾಗೂ ವಿದ್ಯಾವಂತರಾಗಲು ಯಾವುದೇ ಆಸಕ್ತಿ ತೋರುವ ಯಾವ ನಿರೀಕ್ಷೆಯನ್ನು ಇಟ್ಟುಕೊಳ್ಳುವಂತಿಲ್ಲ.

ಪೌರಕಾರ್ಮಿಕರ ವಿದ್ಯಾವಂತ ತರುಣರನ್ನು, ತರುಣಿಯರನ್ನು ನೌಕರಿ ಅವಕಾಶಗಳಿಂದ ಶೋಚನೀಯವಾಗಿ ಕಡೆಗಣಿಸಲಾಗಿದೆಯೆಂಬುದಕ್ಕೆ ಸಮರ್ಥನೆಯಾಗಿ ಎರಡು ದೃಷ್ಟಾಂತಗಳನ್ನು ಇಲ್ಲಿ ಹೇಳಿದರೆ

ಸಾಕೆನಿಸುತ್ತದೆ. ಸಮಿತಿಯು ರಾಯಚೂರು ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ ಮೂರು ವಿಲಕ್ಷಣ ಹಾಗೂ ಕಳವಳಕಾರಿ ಸಂಗತಿಗಳು ಸಮಿತಿಯ ಗಮನಕ್ಕೆ ಬಂದವು. ಮೊದಲನೆಯದು, ಬಸವಿ ಪದ್ಧತಿಗೆ ಬಲವಂತವಾಗಿ ನೂಕಲ್ಪಟ್ಟಿದ್ದ ಯುವ ತರುಣಿಯೊಬ್ಬಾಕಿ ಆ ಪದ್ಧತಿಯ ವಿರುದ್ಧ ಸಿಡಿದೆದ್ದು ಒಳ್ಳೆಯ ಬದುಕನ್ನು ರೂಪಿಸಿಕೊಳ್ಳುವ ನಿರ್ಧಾರ ತೆಗೆದುಕೊಂಡು ಹೊರಬಂದಿದ್ದರು. ತನ್ನ ಸ್ವಂತ ಪ್ರಯತ್ನಗಳಿಂದಲೇ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪಾಸು ಮಾಡಿದ್ದಳು. ಅದೇ ಜಾತಿಯ ಎಂದರೆ ಪರಿಶಿಷ್ಟ ಜಾತಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಪಾಸು ಮಾಡಿಕೊಂಡಿದ್ದ ತರುಣನೊಂದಿಗೆ ಆಕೆಯ ಮದುವೆಯಾಗಿತ್ತು. ಗಂಡ ಹೆಂಡತಿ ಇಬ್ಬರೂ ಕಳೆದ ಮೂರು ವರ್ಷಗಳಿಂದ ಎಷ್ಟೇ ಪ್ರಯತ್ನ ಮಾಡುತ್ತಿದ್ದರೂ ಅವರ ವಿದ್ಯಾರ್ಹತೆಗೆ ಸೂಕ್ತವಾದ ಯಾವುದೇ ನೌಕರಿ ಅವರಿಗೆ ಸಿಕ್ಕಿಲ್ಲ. ಇಬ್ಬರು ದುರ್ಭರ ಪರಿಸ್ಥಿತಿಯಲ್ಲಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯೂ ಅವರ ನೆರವಿಗೆ ಬಂದಿಲ್ಲ. ಇದೊಂದು ಶೋಚನೀಯ ಸಂಗತಿ. ಅದನ್ನು ಕೂಡಲೇ ಪರಿಹರಿಸಲೇಬೇಕು.

ಎರಡನೆಯದು, ಮೆಕಾನಿಕಲ್ ಇಂಜಿನಿಯರಿಂಗ್. ತರುಣ ಪದವೀಧರನೊಬ್ಬನ ಹುದ್ದೆಯನ್ನು ಅರೆಸರ್ಕಾರಿ ಸಂಸ್ಥೆಯೊಂದು ಇನ್ನೂ ಖಾಯಂ ಮಾಡಿಲ್ಲ ಎಂಬುದು ಸಮಿತಿಯ ಗಮನಕ್ಕೆ ಬಂದಿದೆ.

ಮತ್ತೊಂದು, ದೃಷ್ಟಾಂತವನ್ನು ಸಮಿತಿಯು ದಾಖಲೆಗೆ ಸೇರಿಸ ಬಯಸುತ್ತದೆ. ಅದೇನೆಂದರೆ, ಖಾಸಗಿ ಜಾಡಮಾಲಿ ಕೆಲಸಕ್ಕೆ ನಿಯೋಜಿಸಿಕೊಂಡಿದ್ದ ಬಾಲ್ಮೀಕಿ ಸಮುದಾಯದ 20 ಚಾಲಕರನ್ನು ಸಮಾಜ ಕಲ್ಯಾಣ ಇಲಾಖೆಯು ಪ್ರಾರಂಭಿಸಿದ್ದ ಹರಿಜನ ಹಾಸ್ಟೆಲಿಗೆ ಸೇರಿಸಿಕೊಳ್ಳದಿರುವ ಶೋಚನೀಯ ಸಂಗತಿಗೆ ಸಂಬಂಧಿಸಿದ್ದು. ಕಸಗುಡಿಸುವವರ ಮತ್ತು ಜಾಡಮಾಲಿಗಳ ಮ್ಕಕಳಿಗೆ ನ್ಯಾಯೋಚಿತ ಹಾಗೂ ಒಳ್ಳೆಯ ಆದರಣೆ ನೀಡುವುದನ್ನು ಸುನಿಶ್ಚಿತಪಡಿಸಿಕೊಂಡು ಈ ಬಗೆಯ ಲೋಪದೋಷಗಳಾಗದಂತೆ ನೋಡಿಕೊಳ್ಳುವುದು ಆವಶ್ಯಕ. ಪೌರಕಾರ್ಮಿಕರಾಗಿ ಕೆಲಸ ಮಾಡುತ್ತಿರುವವರ ಮಕ್ಕಳ ತಂದೆ ತಾಯಿ ಇರುವ ಸ್ಥಳಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಆ ಮಕ್ಕಳನ್ನು ಸೇರಿಸಿಕೊಳ್ಳದಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಯಾವುದೇ ಸ್ಥಳದಲ್ಲಿರುವ ಪೌರಕಾರ್ಮಿಕರ ಮಕ್ಕಳು ಈ ಹಾಸ್ಟೆಲ್ ಸೌಕರ್ಯ ಪಡೆದುಕೊಳ್ಳಬೇಕಾದರೆ ಬೇರೊಂದು ದೂರದ ಸ್ಥಳಕ್ಕೆ ಹೋಗಬೇಕಾಗಿದೆ. ಆದ್ದರಿಂದ ಪೌರಕಾರ್ಮಿಕರ ಮಕ್ಕಳನ್ನು, ಅವರ ಸ್ಥಳಗಳಲ್ಲೇ ಇರುವ ಹಾಸ್ಟೆಲ್‌ಗಳಿಗೆ ಸೇರಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

ಕಸಗುಡಿಸುವವರ ಹಾಗೂ ಜಾಡಮಾಲಿಗಳ ಮಕ್ಕಳ ಶಿಕ್ಷಣವನ್ನು ಮೇಲ್ವಿಚಾರಣೆ ಮಾಡಲು ಹಾಗೂ ನಿಬಂಧನೆಗಳನ್ನು ರೂಪಿಸಲು, ಸೂಕ್ತ ನೌಕರಿಯು ಒದಗುವಂತಾಗಲು, ಪೌರಕಾರ್ಮಿಕರೂ ಕೂಡ ಅಕ್ಷರಸ್ಥರಾಗುವುದನ್ನು ಸುನಿಶ್ಚಿತಪಡಿಸಿಕೊಳ್ಳಲು, ಎಲ್ಲಕ್ಕಿಂತಲೂ ಮಿಗಿಲಾಗಿ, ಅವರ ಸಾಂಸ್ಕೃತಿಕ ಮಟ್ಟದಲ್ಲಿ ಸುಧಾರಣೆ ತರಲು ಈಗಾಗಲೇ ಸಲಹೆ ಮಾಡಿರುವಂತೆ "ಪೌರಕಾರ್ಮಿಕ ಕಲ್ಯಾಣ ಮಂಡಳಿ"ಯನ್ನು ಈ ಎಲ್ಲ ಕಾರ್ಯಗಳನ್ನು ನೆರವೇರಿಸಲು ಕೂಡಲೇ ಸ್ಥಾಪಿಸುವುದು ಆವಶ್ಯಕ. ಮಂಡಳಿಯನ್ನು ಸ್ಥಾಪಿಸದಿದ್ದರೆ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಭರವಸೆ ಇಲ್ಲದವರಾಗಿಯೇ ಉಳಿಯುತ್ತಾರೆ ಹಾಗೂ ಹಿಂದಿನಂತೆಯೇ ಆತ್ಮವಿಶ್ವಾಸ ಕಳೆದುಕೊಳ್ಳುತ್ತಾರೆ.

**ವಯಸ್ಕ ಶಿಕ್ಷಣ**

ಪೌರಕಾರ್ಮಿಕರಿಗೆ ಸಮರೋಪಾದಿಯಲ್ಲಿ ಕಡ್ಡಾಯ ವಯಸ್ಕ ಶಿಕ್ಷಣದ ಪ್ರಯೋಜನವನ್ನು ಒದಗಿಸಬೇಕೆಂದು ಸಮಿತಿಯು ಬಲವಾಗಿ ಅಭಿಪ್ರಾಯ ಪಡುತ್ತದೆ. ಕಳೆದೆರಡು ದಶಕಗಳಿಂದಲೂ ಚಾಲ್ತಿಯಲ್ಲಿರುವ 'ವಯಸ್ಕ ಶಿಕ್ಷಣ ಪರಿಷತ್ತು' ಇದನ್ನು ಕಡ್ಡಾಯ ಮಾಡಬೇಕು. ಪೌರಕಾರ್ಮಿಕರನ್ನು ವಿದ್ಯಾವಂತರನ್ನಾಗಿ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಶಿಕ್ಷಣಕ್ಕೆ ಮನರಂಜನೆಗೆ ಹಾಗೂ ಸ್ವಂತ ನೈರ್ಮಲ್ಯಕ್ಕೆ ಅವರಿಗೆ

ಒಳ್ಳೆಯ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಪೌರಕಾರ್ಮಿಕರ ಕೆಲಸದ ವೇಳೆಗಳಲ್ಲಿ ಬದಲಾವಣೆ ಮಾಡಲು ಸಮಿತಿಯು ಈಗಾಗಲೇ ಶಿಫಾರಸು ಮಾಡಿದೆ.

ಎಲ್ಲ ಮುನಿಸಿಪಾಲಿಟಿಗಳು, ಪೌರಕಾರ್ಮಿಕರು ತಮ್ಮ ಬುದ್ಧಿ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಹಾಗೂ ಒಳ್ಳೆಯ ಜೀವನ ಸಾಗಿಸಲು ಅವರುಗಳ ಕಾಲೋನಿಯಲ್ಲಿ ನಿಯತಕಾಲಿಕವಾಗಿ ಉಪನ್ಯಾಸಗಳನ್ನು, ಫಿಲಂ ಪ್ರದರ್ಶನಗಳನ್ನು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಏರ್ಪಡಿಸಬೇಕು. ಕೇಳಿಸುವ ಹಾಗೂ ನೋಡಿಸುವ ಕಾರ್ಯಕ್ರಮಗಳಿಂದ ಅತಿ ಕಡಿಮೆ ಅವಧಿಯಲ್ಲಿ ಸರಿಯಾದ ರೀತಿಯಲ್ಲಿ ಅವರಿಗೆ ತಿಳಿವಳಿಕೆ ಮೂಡುವಂತಾಗುತ್ತದೆ. ವಾರ್ತಾ ಇಲಾಖೆ, ಜನಾರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆಯಂತಹ ಸೇವಾ ಇಲಾಖೆಗಳ ಮತ್ತು ಸ್ಥಳೀಯ ರೋಟರಿ ಕ್ಲಬ್ ಹಾಗೂ ಲಯನ್ಸ್ ಕ್ಲಬ್‌ಗಳು, ಜೆಸೀಸ್ ಮುಂತಾದ ಸಾಮಾಜಿಕ ಹಾಗೂ ಸೇವಾ ಸಂಘ ಸಂಸ್ಥೆಗಳ ನೆರವಿನಿಂದ ಹಾಗೂ ಸಹಕಾರದಿಂದ ಈ ಕಾರ್ಯಕ್ರಮಗಳನ್ನು ಸುಲಭವಾಗಿ ಏರ್ಪಾಟು ಮಾಡಬಹುದಾದ್ದರಿಂದ ಮುನಿಸಿಪಾಲಿಟಿಗಳ ಮೇಲೆ ಹಣಕಾಸಿನ ಹೊರೆ ಬೀಳುವುದಿಲ್ಲ.

ಕಾರ್ಪೊರೇಷನ್‌ಗಳು ಹಾಗೂ ಮುನಿಸಿಪಾಲಿಟಿಗಳು ಕನಿಷ್ಠ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಪೌರಕಾರ್ಮಿಕರಿಗಾಗಿ ತಂಡಗಳಲ್ಲಿ ಶೈಕ್ಷಣಿಕ ಪ್ರವಾಸಗಳಿಗೆ ವ್ಯವಸ್ಥೆ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಈ ಖರ್ಚುವೆಚ್ಚವನ್ನು ಭರಿಸಲು ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ತಮ್ಮ ಬಜೆಟಿನಲ್ಲಿ ಶಾಸನಾತ್ಮಕವಾಗಿ ಸೂಕ್ತ ಏರ್ಪಾಟು ಮಾಡಿಕೊಳ್ಳಬೇಕು.

ರಾಜ್ಯದಲ್ಲಿ ಪೌರಕಾರ್ಮಿಕರ ಕಾಲೋನಿಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲ ಅವರಿಗಾಗಿಯೇ ಪ್ರತ್ಯೇಕ ಶಾಲೆಗಳಿರುವುದರ ಬದಲು ಒಂದು ದೇವಸ್ಥಾನ ಇರಲೇಬೇಕು. ಬಳ್ಳಾರಿಯಲ್ಲಿ ಪೌರಕಾರ್ಮಿಕರು ಇರುವ ಕಾಲೋನಿಯಲ್ಲಿ ಪೌರಕಾರ್ಮಿಕರೇ ಲಕ್ಷ ರೂಪಾಯಿ ವೆಚ್ಚದಲ್ಲಿ ದೇವಸ್ಥಾನವನ್ನು ಕಟ್ಟಿಸಿದ್ದಾರೆ.

ಚಿತ್ರ

**ರಾಜ್ಯದಲ್ಲಿ ಎಲ್ಲಕಡೆ ಇರುವ ಪೌರಕಾರ್ಮಿಕರಿಗಾಗಿ ಅವರದೇ ಆದ ದೇವಾಲಯ ಇರಬೇಕು. ಬಳ್ಳಾರಿ ಪೌರಕಾರ್ಮಿಕರು ಲಕ್ಷ ರೂಗಳನ್ನು ಖರ್ಚು ಮಾಡಿ ತಮ್ಮ ಕಾಲೋನಿಯಲ್ಲಿ ದೇವಾಲಯವನ್ನು ನಿರ್ಮಿಸಿಕೊಂಡಿದ್ದಾರೆ**

# ಅಧ್ಯಾಯ XIII

## ಸಾಮಾಜಿಕ ಏಕೀಕರಣ

ಭಾರತದಲ್ಲಿ ಸಾಮಾಜಿಕ ಹಾಗೂ ಭಾವಾತ್ಮಕ ಏಕೀಕರಣಕ್ಕೆ 'ಅಸ್ಪೃಶ್ಯತೆ' ಯೇ ಒಂದು ಬಹು ದೊಡ್ಡ ಅಡಚಣೆ. ಅನೇಕ ಸಮಾಜ ಸುಧಾರಕರು ಈ ಪಿಡುಗನ್ನು ನಿರ್ಮೂಲನೆ ಮಾಡಲು ಬಹು ಪ್ರಯಾಸಪಟ್ಟರೂ ಕೂಡ ಈ ಪಿಡುಗನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಜನರೇ ಸ್ವತಃ ಸಾಮಾಜಿಕ ಕ್ರಾಂತಿಯಿಂದ ಅಥವಾ ಕ್ರಾಂತಿ ಮಾಡದಯೇ ಈ ಪಿಡುಗನ್ನು ನಿರ್ಮೂಲನೆ ಮಾಡಬಹುದಾಗಿದೆ. ಜನರು ಬಯಸಿದರೂ ಅಥವಾ ಬಯಸದಿದ್ದರೂ ಸಾಮಾಜಿಕ ಅಥವಾ ರಾಜಕೀಯ ಕ್ರಾಂತಿಗಳು ಆಗೇ ಆಗುತ್ತವೆ. ಶ್ರೀ ಅರಬಿಂದೊ ಮಾತುಗಳಲ್ಲಿ ಹೇಳುವುದಾದರೆ, ರೂಸೊ ಹಾಗೂ ವೋಲ್ಟೈರ್ ಏನನ್ನೂ ಬರೆಯದಿದ್ದರೂ ಹಾಗೂ ಜಾಗತಿಕ ಚಿಂತನಾ ವಿಧಾನದ ಕಾಲದಲ್ಲಾದ 18ನೆಯ ಶತಮಾನದ ಫಿಲಸಾಫಿಕಲ್ ಮೂವ್‌ಮೆಂಟ್ ತನ್ನ ದಿಟ್ಟ ಹಾಗೂ ಆಮೂಲಾಗ್ರ ಆಲೋಚನಾ ವಿಧಾನದಲ್ಲಿ ಸಫಲವಾಗದಿದ್ದರೂ ಆರ್ಥಿಕ ಅವಶ್ಯಕತೆಯಿಂದಾಗಿ ಫ್ರೆಂಚ್ ಮಹಾ ಕ್ರಾಂತಿಯು, ಆಗೇ ಆಗುತ್ತಿತ್ತು, ಆಯಿತು.

ಅದೇನೇ ಇರಲಿ, ಈಗಿನ ಸಮಸ್ಯೆ ಏನೆಂದರೆ ಸಾಮಾಜಿಕ ಹಾಗೂ ಭಾವಾತ್ಮಕ ಏಕೀಕರಣವನ್ನು ಹೇಗೆ ಸಾಧಿಸಬೇಕು? ಸ್ವಾತಂತ್ರ್ಯ ಸಿಕ್ಕಾದ ಮೇಲೆ ಈ ಎರಡು ಪ್ರಕ್ರಿಯೆಗಳು ಜೊತೆ ಜೊತೆಯಲ್ಲೇ ಆಗಬೇಕಿತ್ತು. ಆದರೆ, ದುರದೃಷ್ಟವಶಾತ್ ಇದು ಆಗಲೇ ಇಲ್ಲ. ಅದರ ಈಗಿನ ವೇಗವನ್ನು ನೋಡಿದರೆ ಈ ಗುರಿಯನ್ನು ಮುಟ್ಟಲು ಹಲವಾರು ದಶಕಗಳೇ ಬೇಕಾಗುತ್ತವೆ. ಆದರೆ, ಅಷ್ಟು ದೀರ್ಘಕಾಲದವರೆಗೆ ದೇಶ ಕಾಯದು. ಭಾರತದ ಜನರ ಎಲ್ಲ ವರ್ಗಗಳಲ್ಲಿ ಸಂಪೂರ್ಣವಾಗಿ ಏಕತೆ ಇರದೇ ಹೋದರೆ ವಿದೇಶಿ ಆಕ್ರಮಣವಾದಾಗ ಹಾಗೂ ಆಂತರಿಕ ಕ್ಷೋಭೆ ಉಂಟಾದಾಗ ದೇಶಕ್ಕೆ ಅದನ್ನು ಎದುರಿಸಲು ಸಾಧ್ಯವಾಗುವುದಿಲ್ಲ. ಹಲವಾರು ಭಿನ್ನ ಪಂಗಡಗಳ ಹಾಗೂ ಜಾತಿಗಳ ನಡುವೆ ಏಕತೆ ಇಲ್ಲದಿರುವುದರಿಂದ ಹಾಗೂ ಭಿನ್ನಾಭಿಪ್ರಾಯಗಳಿರುವುದರಿಂದ ದೇಶವು ಈ ಹಿಂದೆ ಸಂಕಟಕ್ಕೊಳಗಾಗಿದೆ.

ಸಂಘಟಿತ ವರ್ಗವನ್ನು ರೂಪಿಸುವ ಹಾಗೂ ದೇಶದಲ್ಲಿ ಸಂಪೂರ್ಣ ಹಾಗೂ ಸುಭದ್ರ ಏಕತೆಯನ್ನು ಸಾಧಿಸುವ ಅಗತ್ಯತೆ ಹಿಂದೆಂದಿಗಿಂತಲೂ ಈಗ ತುಂಬಾನೆ ಇದೆ. ಪುರುಷ ಹಾಗೂ ಮಹಿಳಾ ಜನ ಸಮೂಹ ಅಸ್ಪೃಶ್ಯರೆಂದು ಎಲ್ಲಿಯವರೆಗೆ ವರ್ಗೀಕೃತರಾಗಿರುತ್ತಾರೋ ಹಾಗೂ ಅವರನ್ನು ಹೊರಗಿಡಲಾಗುತ್ತದೋ ಅಲ್ಲಿಯವರೆಗೆ ಈ ಧ್ಯೇಯವನ್ನು ಸಾಧಿಸಲಾಗುವುದಿಲ್ಲ. ದೇಶದ ಹಿತದೃಷ್ಟಿಯಿಂದ ಈ ಅನಿಷ್ಟವನ್ನು ನಿರ್ಮೂಲನೆ ಮಾಡಬೇಕು ಮತ್ತು ದೇಶದಾದ್ಯಂತ ಜಾತಿ, ವರ್ಣ ಅಥವಾ ಮತಗಳ ನಡುವೆ ಯಾವುದೇ ತಾರತಮ್ಯ ಇರಕೂಡದು. ಆದ್ದರಿಂದ ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಮತ್ತು ಸಾಮಾಜಿಕ ಏಕತೆ ತರಲು ಹಂತಹಂತವಾಗಿ ವ್ಯವಸ್ಥಿತ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳುವುದು ಆವಶ್ಯಕ.

1955ರಲ್ಲಿ, ಒಕ್ಕೂಟ ಸರ್ಕಾರವು ಕೇಂದ್ರ ಶಾಸನವೊಂದನ್ನು ರೂಪಿಸಿತು. ಅಸ್ಪೃಶ್ಯತೆ ಆಚರಣೆಗೆ ತಕ್ಕ ಕಠಿಣ ಶಿಕ್ಷೆಯನ್ನು ಗೊತ್ತುಪಡಿಸಿತು. ಅದು, ಸಮಗ್ರವಾದ ಶಾಸನ. ಅದು ಜನರ ಎಲ್ಲ ವರ್ಗಗಳಿಗೆ ಅನ್ವಯವಾಗುತ್ತದೆ. ಎಲ್ಲ ರಾಜ್ಯಗಳು ಶಾಸನವನ್ನು ತಂದಿವೆ ಹಾಗೂ ಅಸ್ಪೃಶ್ಯತೆಯನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿವೆ.

ಎರಡನೆಯದಾಗಿ, ಜನರ ಮನಸ್ಸಿನಲ್ಲಿ ಎಲ್ಲ ಅನಿಷ್ಟಗಳು ಬೇರೂರಿರುವುದರಿಂದ ವ್ಯಾಪಕ ಪ್ರಚಾರದ ಮೂಲಕ ಹಾಗೂ ಪರಿಣಾಮಕಾರಿ ಶೈಕ್ಷಣಿಕ ಆಂದೋಲನದ ಮೂಲಕ ಜನರನ್ನು ಸುಶಿಕ್ಷಿತರನ್ನಾಗಿ ಮಾಡಬೇಕಾದ ಅವಶ್ಯಕತೆ ಇದೆ. ಜನರ ಮನಸ್ಸಿನಲ್ಲಿ ಪರಿವರ್ತನೆ ತರಬೇಕಾಗಿದೆ ಹಾಗೂ ಸಾಮಾಜಿಕ, ನೈತಿಕ, ರಾಜಕೀಯ ಹಾಗೂ ಆರ್ಥಿಕ ಕಾರಣಗಳ ಮೇಲೂ ಅಸ್ಪೃಶ್ಯತೆ ಆಚರಣೆ ಅಪರಾಧವೆಂಬುದನ್ನು ಜನರು ತಿಳಿದುಕೊಳ್ಳುವಂತೆ ಮಾಡಬೇಕಾಗಿದೆ. ರೇಡಿಯೋ, ಫಿಲಂಗಳು, ಪೋಸ್ಟರುಗಳು, ಕರಪತ್ರಗಳು ಹಾಗೂ ಸುವಿಧಿತ ಪುಸ್ತಕಗಳು ಮುಂತಾದ ಎಲ್ಲ ಪ್ರಚಾರ ಮಾಧ್ಯಮಗಳನ್ನು ಈ ಕಾರ್ಯಕ್ಕಾಗಿ ತೊಡಗಿಸಿಕೊಳ್ಳುವುದು ಆವಶ್ಯಕ.

ಮೂರನೆಯದಾಗಿ, ಎಲ್ಲ ಸ್ವಯಂ ಸೇವಾ, ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳ ನೆರವನ್ನು ಹಾಗೂ ಸಕ್ರಿಯ ಸಹಕಾರವನ್ನು ಅಸ್ಪೃಶ್ಯತೆಯ ಸಾಮಾಜಿಕ ಪಿಡುಗನ್ನು ತೊಲಗಿಸುವ ಭಾರಿ ಪ್ರಯತ್ನದಲ್ಲಿ ಬಳಸಿಕೊಳ್ಳಬೇಕು.

ನಾಲ್ಕನೆಯದಾಗಿ, ಪೌರಕಾರ್ಮಿಕರ ಬದುಕಿನ ಹಾಗೂ ಕೆಲಸದ ಸ್ಥಿತಿಗಳಲ್ಲಿ ತಡ ಮಾಡದೆ ಸುಧಾರಣೆಗಳನ್ನು ತರಬೇಕಾಗಿದೆ ಹಾಗೆ ಮಾಡಿದರೆ ಸಮಾಜದಲ್ಲಿ ಇತರರಿಗಿಂತಲೂ ತಾವೇನೂ ಕಡಿಮೆ ಅಲ್ಲ ಎಂಬ ಭಾವನೆ ಮಾನಸಿಕವಾಗಿ ಅವರಲ್ಲಿ ಮೂಡುತ್ತದೆ.

ಇನ್ನೊಂದು ಅಪಾಯವೂ ಇದೆ. ಪೌರಕಾರ್ಮಿಕರಿಗಿಂತಲೂ ತಾವೇ ಶ್ರೇಷ್ಠರೆಂಬ ಮೇಲರಿಮೆಯನ್ನು ಹಾಗೂ ಪೌರಕಾರ್ಮಿಕರ ಬಗ್ಗೆ ಕೀಳರಿಮೆಯೆಂಬ ವಿಕೃತ ಮನೋಭಾವನೆಯನ್ನು ಬೆಳೆಸಿಕೊಂಡಿರುವ ಪರಿಶಿಷ್ಟ ಜಾತಿಯ ಜನರಲ್ಲೇ ಅಸ್ಪೃಶ್ಯತೆ ಆಚರಣೆಯಲ್ಲಿದೆ.

ರಾಷ್ಟ್ರೀಯ ಐಕ್ಯತೆಯ ಇನ್ನೊಂದು ಪ್ರಮುಖ ಅಂಶವೆಂದರೆ ದೇಶದ ಏಕೀಕರಣ. 1961 ರಲ್ಲಿ ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಐಕ್ಯತಾ ಸಮಾವೇಶದಲ್ಲಿ, ಪಂಡಿತ್ ಜವಹರಲಾಲ್ ನೆಹರೂರವರು ಆ ಕಾಲದ ಅಗ್ರಗಣ್ಯ ನಾಯಕರಾಗಿದ್ದಾಗ ಈ ಅಂಶಕ್ಕೆ ಒತ್ತುಕೊಟ್ಟಿತ್ತು ಹಾಗೂ ಈ ಧ್ಯೇಯವನ್ನು ತಲುಪಲು ಪರಿಣಾಮಕಾರಿ ಹಾಗೂ ಎಲ್ಲವನ್ನು ಒಳಗೊಳ್ಳುವ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಯಿತು. ಅಲ್ಲಿಂದೀಚೆಗೆ, ಹೆಚ್ಚು ಹೆಚ್ಚು ಕ್ರಿಯಾಶೀಲ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹಾಗಾಗಿ ಬಹುಕಾಲದ ಪಿಡುಗಾದ ಅಸ್ಪೃಶ್ಯತೆಯನ್ನು ತೊಡೆದು ಹಾಕಲಾಗುತ್ತದೆಂದು ನಿರೀಕ್ಷಿಸಲಾಗಿದೆ. ದೇಶವು ಎಲ್ಲ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ರಂಗಗಳಲ್ಲಿ ಸಂಘಟಿತ ಶಕ್ತಿಯಾಗಿ ಹೊರಹೊಮ್ಮುತ್ತದೆಂದು ಯುಕ್ತವಾಗಿ ನಿರೀಕ್ಷಿಸಬಹುದಾಗಿದೆ.

# ಅಧ್ಯಾಯ XIV

## ರಾಜಕೀಯ ಪ್ರಾತಿನಿಧ್ಯ

ಇತಿಹಾಸಪೂರ್ವದ ಸಮಾಜಗಳಲ್ಲಿ ಆಯುಧಗಳು ಹಾಗೂ ಮಧ್ಯಕಾಲೀನ ಯುಗದ ಸಮಾಜಗಳಲ್ಲಿ ಕೋವಿ, ಬಂದೂಕುಗಳು ರಾಜ್ಯಾಡಳಿತವನ್ನು ನಿಯಂತ್ರಿಸುತ್ತಿದ್ದವು. ಈಗ ಪ್ರಜಾಪ್ರಭುತ್ವದಲ್ಲಿ ಮತಪೆಟ್ಟಿಗೆಯು ರಾಜಕೀಯ ಅಧಿಕಾರದ ಕೀಲಿಗಳನ್ನು ನಿಯಂತ್ರಿಸುತ್ತಿದೆ. ಶಾಸನ ಸಭೆಗಳು ಸಾಮಾಜಿಕ ಲಕ್ಷ್ಮಣರೇಖೆಗಳನ್ನು ರೂಪಿಸುತ್ತವೆ. ಹಾಗಾಗಿ, ಸಮಾಜದ ಯಾವುದೇ ನಿರ್ದಿಷ್ಟ ಗುಂಪಿನ ಅಥವಾ ವರ್ಗದವರು ಎದುರಿಸುತ್ತಿರುವ ಸಮಸ್ಯೆಗಳನ್ನು ಶಾಸನಸಭೆಗಳು ಇಡಿಯಾಗಿ ಹಾಗೂ ಸಂಪೂರ್ಣವಾಗಿ ಪರಾಮರ್ಶೆ ಮಾಡುವುದು ಆವಶ್ಯಕ. ಅಮೆರಿಕಾದ ಪ್ರಸಿದ್ಧ ಮುತ್ಸದ್ಧಿ ಅಬ್ರಾಹಂ ಲಿಂಕನ್ ರ ಮಾತುಗಳಲ್ಲಿ ಹೇಳುವುದಾದರೆ, ಪ್ರಜಾಪ್ರಭುತ್ವವೆಂದರೆ ಜನರಿಂದ ಜನರಿಗಾಗಿ ಮತ್ತು ಜನರಿಗೋಸ್ಕರ ಇರುವ ಸರ್ಕಾರ"

ಪೌರಕಾರ್ಮಿಕರು ತಮ್ಮದಲ್ಲದ ತಪ್ಪಿಗೆ ಹೇಳತೀರದಷ್ಟು ಸಂಕಷ್ಟಗಳಿಗೆ ಹಾಗೂ ಕಿರುಕುಳಗಳಿಗೆ ಒಳಗಾಗಿದ್ದಾರೆ. ಪ್ರೊ.ಮಲ್ಕಾನಿಯವರ ಮಾತುಗಳಲ್ಲಿ ಹೇಳುವುದಾದರೆ ಜಾಡಮಾಲಿ ವೃತ್ತಿಯನ್ನು ನಾವು ಎಷ್ಟು ಕೀಳುಮಟ್ಟಕ್ಕೆ ಇಳಿಸಿದ್ದೇವೆಂಬುದು ಬಹುತೇಕ ಹಿಂದೂಗಳಿಗೆ ಗೊತ್ತಿಲ್ಲ, ಈ ವೃತ್ತಿಗೆ ನಾವು ಮೂರು ನಿರ್ಬಂಧಗಳನ್ನು ಹಾಕಿಬಿಟ್ಟಿದ್ದೇವೆ. ಅವು ಯಾವುವೆಂದರೆ "ಕಣ್ಣಿದ್ದರೂ ನೋಡಬಾರದು, ಹತ್ತಿರಕ್ಕೆ ಸೇರಿಸಬಾರದು ಮತ್ತು ಮುಟ್ಟಿಸಿಕೊಳ್ಳಬಾರದು."

ಪೌರಕಾರ್ಮಿಕರು ಸಮರ್ಪಣಾ ಭಾವದಿಂದ ಸಮಾಜಕ್ಕೆ ಎಷ್ಟೋ ಸೇವೆ ಸಲ್ಲಿಸುತ್ತಿದ್ದರೂ ಬದಲಿಗೆ ಸಮಾಜದಿಂದ ಅವರಿಗೆ ಸಿಗುತ್ತಿರುವುದು ಅತ್ಯಲ್ಪ ಮಾತ್ರ. ಸಮಿತಿಯು ಪೌರಕಾರ್ಮಿಕರ ಹಲವಾರು ಸ್ಥಳಗಳಿಗೆ ಭೇಟಿ ನೀಡಿದ್ದಾಗ ಪೌರಕಾರ್ಮಿಕರಿಗೆ ಒಳ್ಳೆಯ ಹಾಗೂ ಶುದ್ಧ ಕುಡಿಯುವ ನೀರು ಲಭ್ಯವಿರದಿರುವುದು ಸಮಿತಿಯು ಗಮನಿಸಿದೆಯೆಂಬುದನ್ನು ನೋವಿನಿಂದ ಹೇಳಬೇಕಾಗಿದೆ. ಮಾನವನ ಸುಸ್ಥಿತಿಗೆ ಶುದ್ಧ ಕುಡಿಯುವ ನೀರು ಅತ್ಯಂತ ಆವಶ್ಯಕ. ಒಳ್ಳೆಯ ಕುಡಿಯುವ ನೀರು ಇರದಿದ್ದರೆ ಒಳ್ಳೆಯ ಆರೋಗ್ಯದಿಂದಿರಲು ಸಾಧ್ಯವೇ ಇಲ್ಲ. ಕುಡಿಯುವ ನೀರಿನ ಪ್ರಾಥಮಿಕ ಅವಶ್ಯಕತೆ ಬಗ್ಗೆ ಹೇಳುವುದಾದರೆ ಅವರ ಹಕ್ಕುಗಳನ್ನು ಮತ್ತು ಅವರಿಗೆ ಅಗತ್ಯವಾಗುವ ಮೂಲ ಅವಶ್ಯಕತೆಗಳ ಹಕ್ಕನ್ನು ಯಾರೂ ಎತ್ತಿಹಿಡಿಯುತ್ತಿಲ್ಲ.

ಪಟ್ಟಣದ ಹೊಲಸನ್ನು ಸಾಗಿಸುವ ಮತ್ತು ಹಾಗೆ ಮಾಡುವಾಗ ಅವರ ವೃತ್ತಿ ಬದುಕಿನ ಕೆಲಸದ ಎಲ್ಲ ಸಮಯದಲ್ಲಿ ಅನಾರೋಗಕ್ಕೆ ತುತ್ತಾಗುವ ಎಲ್ಲ ಪೌರಕಾರ್ಮಿಕರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಬೇಕೆಂಬುದನ್ನು ಇಲ್ಲಿ ಒತ್ತಿ ಹೇಳಬೇಕಿದೆ. 1961ರ ಜನವರಿ 2 ರಂದು ನವದೆಹಲಿಯಲ್ಲಿ ನಡೆದ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸಭೆಯಲ್ಲಿ ದಿವಂಗತ ಪಂಡಿತ್ ಜವಹರಲಾಲ್ ನೆಹ್ರೂರವರು "ಇದು ನಮ್ಮ ಸರ್ಕಾರ. ನಮಗೆ ನಮ್ಮ ದೇಶದ ಸಂವಿಧಾನ ಇದೆ. ನಮ್ಮ ಕಾರ್ಮಿಕ ಬಂಧುಗಳಿಗೆ ಹಾಗೂ "ಕೀಳು" ಎಂದು ಭಾವಿಸಲ್ಪಟ್ಟಿರುವವರಿಗೆ ವಿಶೇಷ ಆದರಣೆ ಹಾಗೂ ರಕ್ಷಣೆ ಕೊಡಬೇಕೆಂದು ಸಂವಿಧಾನ ಹೇಳಿದೆ. ಹುಟ್ಟಿನಿಂದ ಮೇಲುಕೀಳು ಎಂಬ ಅನಿಷ್ಟ ಭಾವನೆಯನ್ನು ತೊಡೆದು ಹಾಕುವುದು ಅದರಲ್ಲೂ ಮುಖ್ಯವಾಗಿ ನೈರ್ಮಲ್ಯ ಕೆಲಸಗಾರರ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವುದು ನಮ್ಮ ಕರ್ತವ್ಯ. ನಿಮಗೆಲ್ಲರಿಗೂ ಸಮರ್ಪಕವಾದ ಮನೆಯನ್ನು ಕಟ್ಟಿಕೊಡುವುದು ಹಾಗೂ ನೀರು, ದೀಪ, ಶಾಲೆಗಳು, ಆಟದ ಮೈದಾನಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದು ಮುನಿಸಿಪಲ್ ಕಾರ್ಪೊರೇಷನ್‌ಗಳ ಪ್ರಾಥಮಿಕ ಕರ್ತವ್ಯವೆಂದು ನಾನು ಭಾವಿಸಿದ್ದೇನೆ."

ಈ ಉದಾತ್ತ ಹಾಗೂ ಉಜ್ವಲ ಭಾವನೆಗಳು ಕೇವಲ ಕನಸುಗಳಾಗಿಯೇ ಉಳಿದಿವೆ. ಸಾಕಾರಗೊಂಡಿಲ್ಲ. ಈ ಸಮಸ್ಯೆಯನ್ನು ನಿಭಾಯಿಸಲು ಅತ್ಯಂತ ಪ್ರಾಮಾಣಿಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದೇ ಹೋದರೆ ಇದು ಹಾಗೆಯೇ ಮುಂದುವರಿಯುತ್ತಿರುತ್ತದೆ. ಗುರುತರವಾದ ವ್ಯಾಧಿಗಳಿಗೆ ಗುರುತರವಾದ ಪರಿಹಾರವೇ ಮದ್ದು ಎಂಬುದು ಒಂದು ನಾಣ್ಣುಡಿ. ಇದು ಪೌರಕಾರ್ಮಿಕರಿಗೂ ಅನ್ವಯವಾಗುತ್ತದೆ.

ಚಪ್ಪಲಿ ಕಾಲಿಗೆ ಎಲ್ಲಿ ಕಚ್ಚುತ್ತದೆನ್ನುವುದು ಹಾಕಿ ಕೊಂಡು ತಿರುಗುವವನಿಗೇ ಗೊತ್ತಿರುತ್ತದೆ. ಪೌರಕಾರ್ಮಿಕರ ನಾಯಕರುಗಳಿಗೆ ಈ ಸಮಸ್ಯೆಗಳು ಎಲ್ಲರಿಗಿಂತಲೂ ಚೆನ್ನಾಗಿಯೇ ಗೊತ್ತಿರುತ್ತದೆ. ಅವರು ಈ ಜನರ ಬವಣೆಗಳಿಗೆ ಸಹಾನುಭೂತಿ ತೋರುತ್ತಾರೆ ಹಾಗೂ ಮರುಗುತ್ತಾರೆಂಬುದರಲ್ಲಿ ಸಂಶಯವೇನಿಲ್ಲ. ನಮ್ಮ ಸಂವಿಧಾನದ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿ ಪೌರಕಾರ್ಮಿಕರು ಮುಂದಾದ ದುರ್ಬಲ ವರ್ಗಗಳಿಗೆ ಕೆಲವೊಂದು ಸಂರಕ್ಷಣೆಗಳನ್ನು ಹಾಗೂ ರಕ್ಷಣೆಗಳನ್ನು ನಿರ್ದಿಷ್ಟಪಡಿಸಲಾಗಿದೆ. ಆದ್ದರಿಂದ, ಪೌರಕಾರ್ಮಿಕ ಹಿತಾಸಕ್ತಿಗಳನ್ನು ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ, ರಾಜ್ಯ ಶಾಸನಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಪ್ರತಿನಿಧಿಸುವುದು ಅತ್ಯಂತ ಆವಶ್ಯಕ. ರಾಜ್ಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಶಾಸನ ಸಭೆಯಲ್ಲಿ ಕೆಲವೊಂದು ಸಂಖ್ಯೆಯಷ್ಟು ಸ್ಥಾನಗಳನ್ನು ಮೀಸಲು ಕ್ಷೇತ್ರಗಳಲ್ಲಾಗಲಿ ಅಥವಾ ಸಾಮಾನ್ಯ ಕ್ಷೇತ್ರಗಳಲ್ಲಾಗಲಿ ಆ ಕ್ಷೇತ್ರಗಳ ಜನಸಂಖ್ಯೆ ಆಧಾರದ ಮೇಲೆ ಮೀಸಲಿಡಬೇಕು. ಯಾವಯಾವ ರಾಜ್ಯಗಳಲ್ಲಿ ಶಾಸನ ಸಭೆಯಲ್ಲಿ ಎರಡು ಸದನಗಳಿರುವವೋ ಅವುಗಳಲ್ಲಿ ಕನಿಷ್ಠ ಪಕ್ಷ ಇಬ್ಬರು ಪೌರಕಾರ್ಮಿಕರನ್ನು ಮೇಲ್ಮನೆಗೆ ನಾಮಕರಣ ಮಾಡಬೇಕು. ಭಾರತ ಸಂಸತ್ತಿನ ಲೋಕಸಭೆಗೂ ಹಾಗೂ ರಾಜ್ಯ ಸಭೆಗೂ ಇದೇ ವಿಧಾನವನ್ನು ಅನ್ವಯ ಮಾಡಬೇಕು. ಪೌರಕಾರ್ಮಿಕ ಹಿತಾಸಕ್ತಿಗಳನ್ನು ರಕ್ಷಿಸಲು ಈ ಸಮಂಜಸ ಹಾಗೂ ಮಾನವೀಯ ತತ್ವವನ್ನು ಅಳವಡಿಸಿಕೊಳ್ಳದೇ ಹೋದರೆ ಬರೀ ಕಾಗದದ ಮೇಲಿರುವ ಯೋಜನೆಗಳಿಂದ ಹಾಗೂ ಶಿಫಾರಸುಗಳಿಂದ ಅವರ ಸಮಸ್ಯೆಗಳು ಪರಿಹಾರವಾಗಲಾರವು.

# ಅಧ್ಯಾಯ XV

## ಸಂಕೀರ್ಣ ವಿಷಯಗಳು

ಪೌರಕಾರ್ಮಿಕರಿಗೆ ಯಾವ ಯಾವ ಎಲ್ಲ ಹಕ್ಕುಗಳನ್ನು ಸವಲತ್ತುಗಳನ್ನು ಹಾಗೂ ಸೌಕರ್ಯಗಳನ್ನು ಕೊಡಬೇಕೆಂದು ಸಮಿತಿಯು ಈಗಾಗಲೇ ಶಿಫಾರಸು ಮಾಡಿದೆ. ಸಮಿತಿಯು ಶಿಫಾರಸು ಮಾಡಿರುವ ಅವೇ ಎಲ್ಲ ಹಕ್ಕುಗಳನ್ನು, ಸವಲತ್ತುಗಳನ್ನು ಹಾಗೂ ಸೌಕರ್ಯಗಳನ್ನು ಈ ಮುಂದೆ ಹೇಳಿರುವ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಒದಗಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಆ ಸಂಸ್ಥೆಗಳು ಯಾವುವೆಂದರೆ –

1. ರೈಲ್ವೆ ಹಾಗೂ ಕೈಗಾರಿಕಾ ಕಾಲೋನಿಗಳು
2. ಸೇವಾ ಕಾಲೊನಿಗಳು
3. ಖಾಸಗಿ ನಿವಾಸ ಬಡಾವಣೆಗಳು
4. ಪೊಲೀಸು ವಸತಿ ಗೃಹಗಳು
5. ಅನಧಿಕೃತ ಖಾಸಗಿ ಬಡಾವಣೆಗಳು
6. ಟ್ರಸ್ಟ್ ಬೋರ್ಡ್‌ಗಳು
7. ಗೃಹ ನಿರ್ಮಾಣ ಮಂಡಳಿಗಳು
8. ನೈರ್ಮಲ್ಯ ಮಂಡಳಿಗಳು
9. ಸಿನಿಮಾ ಮಂದಿರಗಳು
10. ತಾಲ್ಲೂಕು ಅಭಿವೃದ್ಧಿ ಮಂಡಳಿಗಳು
11. ಒಳಚರಂಡಿ ಮಂಡಳಿ
12. (ಸರ್ಕಾರಿ ಹಾಗೂ ಖಾಸಗಿ) ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು
13. (ಸರ್ಕಾರಿ ಹಾಗೂ ಖಾಸಗಿ) ಕೈಗಾರಿಕೆಗಳು

ಮೇಲೆ ಹೇಳಿರುವ ಸಂಸ್ಥೆಗಳಲ್ಲಿ ಈ ಕೆಲಸಗಾರರ ಬೇಡಿಕೆಗಳನ್ನು ಹೇಳಿಕೊಳ್ಳಲು ಸಮರ್ಪಕ ಪ್ರಾತಿನಿಧ್ಯವೇ ಇಲ್ಲವಾದ್ದರಿಂದ ಈ ಸೌಲಭ್ಯಗಳನ್ನು ಅವರಿಗೂ ವಿಸ್ತರಿಸುವುದು ಆವಶ್ಯಕ. ಈ ಕೈಗಾರಿಕಾ ಸಂಸ್ಥೆಗಳಲ್ಲಿ ಈ ಕೆಲಸಗಾರರು ಕಷ್ಟದ ಕೆಲಸಗಳನ್ನು ಮಾಡಬೇಕೆಂದು ಹಾಗೂ ಹೆಚ್ಚು ಕಾಲದ ವೇಳೆ ಕೆಲಸ ಮಾಡಬೇಕೆಂದು ಹೇಳಲಾಗುತ್ತದೆ. ಹಾಗಾಗಿ, ಪೌರಕಾರ್ಮಿಕರಿಗೆ ಏನೇನು ಸೌಕರ್ಯಗಳನ್ನು ಹಾಗೂ ಸವಲತ್ತುಗಳನ್ನು ಕೊಡಲಾಗುತ್ತಿದೆಯೋ ಕಸಗುಡಿಸುವವರಿಗೂ ಹಾಗೂ ಜಾಡಮಾಲಿಗಳಿಗೂ ಕೊಡಬೇಕಾದುದು ನ್ಯಾಯ ಸಮ್ಮತ.

ಕಾರ್ಪೊರೇಷನ್‌ಗಳು, ಮುನಿಸಿಪಾಲಿಟಿಗಳು ಮುಂತಾದವುಗಳ ಅಧಿಕಾರ ವ್ಯಾಪ್ತಿಗಳ ಒಳಗಿರುವ ಅನಧಿಕೃತ ಬಡಾವಣೆಗಳು, ಗ್ರಾಮ ಪಂಚಾಯತ್‌ಗಳು ಮುಂತಾದವುಗಳಲ್ಲಿ ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸ ಮಾಡುತ್ತಿರುವ ಎಲ್ಲರನ್ನು ಆಯಾಯ ಸ್ಥಳೀಯ ಸಂಸ್ಥೆಗಳಲ್ಲೇ ಸೇವಾ ಅವಿಚ್ಛಿನ್ನತೆ ಸೌಲಭ್ಯ ಕೊಟ್ಟು ವಿಲೀನ ಮಾಡಿಕೊಳ್ಳಬೇಕು. ಈ ಕೆಲಸಗಾರರಲ್ಲಿ ಬಹು ಜನರು ದೀರ್ಘ ವರ್ಷಗಳು ಸೇವೆಯಲ್ಲಿದ್ದರೂ ಅವರುಗಳನ್ನು ತಾತ್ಕಾಲಿಕ ಕೆಲಸಗಾರರೆಂದೇ ಪರಿಗಣಿಸಲಾಗುತ್ತಿದೆ. ಹಾಗಾಗಿ ಈ ಜನರು ಹಾಗೂ ಅವರ ಕುಟುಂಬಗಳು ಅನಿಶ್ಚಿತ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದಾರೆ. ಇದು ಅವರು ಚೆನ್ನಾಗಿ ಕೆಲಸ ಮಾಡುವುದಕ್ಕೆ ಪೂರಕವಾಗಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅವರನ್ನು ಖಾಯಂ ಮಾಡದಿದ್ದರೆ ಕೆಲಸ ಮಾಡಲು ಅವರಲ್ಲಿ ಏನೇನೂ ಆಸಕ್ತಿ ಉಳಿದಿರುವುದಿಲ್ಲ. ಆದ್ದರಿಂದ, ಈ ಎಲ್ಲ ಕೆಲಸಗಾರರನ್ನು, ಅವರುಗಳು ಸಲ್ಲಿಸಿರುವ ಸೇವಾವಧಿಯಲ್ಲಿ ಯಾವುದೇ ಭಂಗ ಮಾಡದೆ ಅವರವರ ನೌಕರಿಯನ್ನು ಈ ಕೂಡಲೇ ಸ್ಥಿರೀಕರಿಸಬೇಕು.

ಪೌರಕಾರ್ಮಿಕರು ಸತ್ತ ಎಮ್ಮೆಗಳ, ದನಗಳ ಮತ್ತು ಕುರಿಗಳ ಮಾಂಸವನ್ನು ತಿನ್ನುವ ಕೆಟ್ಟ ಅಭ್ಯಾಸವನ್ನು ರೂಢಿ ಮಾಡಿಕೊಂಡಿದ್ದಾರೆ. ದವಸ ಧಾನ್ಯಗಳು ಮುಂತಾದವುಗಳ ಕೊರತೆಯಿಂದಾಗಿ ಅಂತಹ ಮಾಂಸವನ್ನು ಅವರು ತಿನ್ನುತ್ತಾರೆ. ಏಕೆಂದರೆ ಪೌರಕಾರ್ಮಿಕರೆಲ್ಲರೂ ಮಾಂಸಹಾರಿಗಳಾದುದರಿಂದ ತಾಜಾ ಮಾಂಸವನ್ನು ಕೊಳ್ಳುವ ಶಕ್ತಿ ಅವರಿಗಿರುವುದಿಲ್ಲ. ಹೀಗಾಗಿ ಸತ್ತ ಪಶುಗಳ ಮಾಂಸವನ್ನು ಸೇವಿಸುವುದು ಅವರಿಗೆ ರೂಢಿಗತವಾಗಿದೆ. ಈ ಪದ್ಧತಿಯನ್ನು ತಕ್ಷಣವೇ ನಿಲ್ಲಿಸಬೇಕಾಗಿದೆ. ಆದ್ದರಿಂದ ಯಾರು ಪ್ರಾಣಿಗಳನ್ನು ಸಾಕಿರುತ್ತಾರೋ ಅವರು ಅವುಗಳು ಸತ್ತಾಗ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಸ್ಥಳೀಯ ಸಂಸ್ಥೆಗಳು ಅಂತಹ ಸತ್ತ ಪ್ರಾಣಿಗಳ ದೇಹವನ್ನು ಸರಿಯಾಗಿ ವಿಲೇ ಮಾಡಬೇಕಾದುದು ಅವುಗಳ ಕರ್ತವ್ಯ. ಪೌರಕಾರ್ಮಿಕರು ಕೂಡ ಅವುಗಳ ಮಾಂಸವನ್ನು ತಿನ್ನದಂತೆ ತಡೆಯುವುದು ಕೂಡಾ ಸ್ಥಳೀಯ ಸಂಸ್ಥೆಗಳ ಕರ್ತವ್ಯ. ಸತ್ತ ಪ್ರಾಣಿಗಳ ದೇಹವನ್ನು ವಿಲೆ ಮಾಡುವುದಕ್ಕೆ ಮತ್ತು ಅದನ್ನು ತಿನ್ನದಂತೆ ತಡೆಯುವುದಕ್ಕೆ ಸೂಕ್ತ ಮಾರ್ಗದರ್ಶನಗಳನ್ನು ಸ್ಥಳೀಯ ಮಂಡಳಿಗಳಿಗೆ ನೀಡಬೇಕೆಂದು ಸಮಿತಿಯು ಸಲಹೆ ಮಾಡುತ್ತದೆ.

ಸಮಿತಿಯು ಒತ್ತಿ ಹೇಳಬಯಸುವ ಇನ್ನೊಂದು ಅಂಶವೇನೆಂದರೆ ಯಾವ ಕಾರಣಕ್ಕೂ ಅವರಿರುವ ಸ್ಥಳಗಳ ಹತ್ತಿರದಲ್ಲಿರುವ ಆಸ್ಪತ್ರೆಯ, ಶವಾಗಾರದಿಂದ ಸತ್ತ ದೇಹಗಳನ್ನು ಪೌರಕಾರ್ಮಿಕರು ಸಾಗಿಸದಂತೆ ಮಾಡಬೇಕು. ಶವಗಳ ವಿಲೆಗಾಗಿ ಸೂಕ್ತ ವ್ಯವಸ್ಥೆಯನ್ನು ಮಾಡುವುದು ಆಸ್ಪತ್ರೆ ಅಧಿಕಾರಿಗಳ ಕರ್ತವ್ಯ. ಪೌರಕಾರ್ಮಿಕರು ಶವಗಳನ್ನು ಸಾಗಿಸಲು ಸ್ಥಳೀಯ ಪೊಲೀಸರು ಒತ್ತಾಯ ಮಾಡಕೂಡದು. ಸತ್ತ ದೇಹವನ್ನು ಸಾಗಿಸುವುದು ಅನಾರೋಗ್ಯಕಾರಕವಾದುದಷ್ಟೇ ಅಲ್ಲ –

ಸತ್ತ ದೇಹವನ್ನು ಸಾಗಿಸುವಾಗ ಪೌರಕಾರ್ಮಿಕರ ಮನಸ್ಸಿನಲ್ಲಿ ಒಂದು ರೀತಿಯ ಮಾನಸಿಕ ಮೈಲಿಗೆ ಭಾವನೆ ಬಂದು ವಿಲೇ ಕೆಲಸ ಮಾಡಿದ ಮೇಲೆ ತಾನು ಮಾಡಿದ ಆ ಕೆಲಸವನ್ನು ಮರೆಯಲು ಮದ್ಯಪಾನ ಮಾಡುತ್ತಾರೆ.

ಅಸ್ಪೃಶ್ಯತೆಯ ನಿರ್ಮೂಲನೆಗೆ ನಿರ್ದಿಷ್ಟ ಸರ್ಕಾರಿ ಆದೇಶವಿದ್ದರೂ, ಪೌರಕಾರ್ಮಿಕರ ಜಾತಿ ಮತ್ತು ವೃತ್ತಿಯ ಕಾರಣದಿಂದಾಗಿ ಅವರ ಮೇಲೆ ದೌರ್ಜನ್ಯ ಎಸಗುವುದು ಹಾಗೂ ಕೀಳಾಗಿ ಕಾಣುವುದು ಮುಂದುವರೆದಿರುವುದು ಶೋಚನೀಯ. ಅನೇಕ ಸ್ಥಳಗಳಲ್ಲಿ ಬಾವಿಗಳಿಂದ ನೀರು ಸೇದಿಕೊಳ್ಳಲು, ಪೂಜಾ ಸ್ಥಳಗಳಿಗೆ ಪ್ರವೇಶ ಮಾಡಲು, ಊಟದ ಸ್ಥಳಗಳಿಗೆ, ಕ್ಷೌರಿಕರ ಅಂಗಡಿಗಳಿಗೆ ಶಾಲೆಗಳಿಗೆ ಪ್ರವೇಶ ಮಾಡಲು ಈಗಲೂ ಅವಕಾಶ ಕೊಡುತ್ತಿಲ್ಲ. ಈ ಬಗೆಯ ತಾರತಮ್ಯಗಳೇ ಅಲ್ಲದೆ, ಅವರ ಮೇಲೆ ಅಸ್ಪೃಶ್ಯತೆಯ ದೌರ್ಜನ್ಯಗಳನ್ನು ಎಸಗಿದಾಗ ಅವರಿಗೆ ಪರಿಹಾರವನ್ನು ಒದಗಿಸುತ್ತಿಲ್ಲ. ಸ್ಥಳ ಸಣ್ಣದೇ ಇರಲಿ ಅಥವಾ ದೊಡ್ಡದೇ ಇರಲಿ ಅವರನ್ನು ತೀರಾ ಕಡೆಗಣಿಸಲಾಗುತ್ತಿದೆ. ಅವರು ಅಧಿಕಾರವುಳ್ಳವರ ಮೇಲೆ ಅಥವಾ ಸ್ಥಿತಿವಂತರ ಮೇಲೆ ದೂರುಗಳನ್ನು ಸಲ್ಲಿಸುವಂತಿಲ್ಲ. ಹಲವಾರು ಪ್ರಸಂಗಗಳಲ್ಲಿ ತಾನೇನಾದರೂ ದೂರನ್ನು ಸಲ್ಲಿಸಿದರೆ ತನ್ನ ಮೇಲುಂಟಾಗುವ ಪರಿಣಾಮಗಳಿಗೆ ಹೆದರಿ ಸುಮ್ಮನಾಗಿ ಬಿಡುತ್ತಾರೆ. ತನಗಾದ ಎಲ್ಲಾ ಅವಮಾನ, ಅಪಮಾನ ಎಲ್ಲವನ್ನು ನುಂಗಿಕೊಂಡು ತಮ್ಮ ಪಾಡಿಗೆ ತಾವು ಇರುತ್ತಾರೆ. ಅಸ್ಪ್ರಶ್ಯತೆಯ ಆಚರಣೆಯ ಪ್ರಕರಣಗಳಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳುವುದು ಹಾಗೂ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವುದು ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕರ್ತವ್ಯವಾಗಿರುತ್ತದೆ.

ಸರ್ವೇ ಸಾಮಾನ್ಯವಾಗಿ ಪೌರಕಾರ್ಮಿಕರು ತುಂಬಾ ಸಾಲವನ್ನು ಮಾಡಿಕೊಂಡಿರುತ್ತಾರೆ. ಎಷ್ಟೋ ಸಲ ಏನಗಾಗುತ್ತದೆಂದರೆ ಸಾಲದ ಹೊರೆ ಜಾಸ್ತಿಯಾಗಿ ಅವರು ಘನತೆ ಗೌರವದಿಂದ ಸಹಜ ಜೀವನವನ್ನು ನಡೆಸಲಿಕ್ಕೆ ಆಗುವುದಿಲ್ಲ. ಸಾಲ ತೀರಿಸಲು ಮತ್ತೆ ಖಾಸಗಿ ಹಣ ಸಾಲ ಕೊಡುವವರಿಂದ ಸಾಲವನ್ನು ತೆಗೆದುಕೊಳ್ಳುತ್ತಾರೆ. ಈ ಲೇವಾದೇವಿಗಾರರು ದುಬಾರಿ ಬಡ್ಡಿ ವಿಧಿಸುತ್ತಾರೆ. ಆದ್ದರಿಂದ ಒಂದು ಕಾನೂನನ್ನು ರೂಪಿಸಿ ಪೌರಕಾರ್ಮಿಕರು

ತಾವು ಮಾಡಿರುವ ಸಾಲಗಳ ಮರುಪಾವತಿಯನ್ನು ಮುಂದೂಡುವ ಅಧಿಕಾರವನ್ನು ಪೌರಕಾರ್ಮಿಕರಿಗೆ ಕೊಡುವುದು ಅವಶ್ಯಕ. ಸಾಲ ಮರುಪಾವತಿ ಉದ್ದೇಶಕ್ಕಾಗಿ ಆಯಾಯ ಮುನಿಸಿಪಾಲಿಟಿಗಳು ಪೌರಕಾರ್ಮಿಕರ "ಸಂಬಳದಲ್ಲಿ ಕಡಿತ ಖಾತರಿ" ಯನ್ನು ಅನುಸೂಚಿತ ಬ್ಯಾಂಕುಗಳಿಗೆ ಒದಗಿಸಬೇಕು. ಹಾಗೆ ಮಾಡಿದರೆ ಅನುಸೂಚಿತ ಬ್ಯಾಂಕುಗಳು ಪೌರಕಾರ್ಮಿಕರಿಗೆ ಸುಲಭದ ಷರತ್ತುಗಳ ಮೇಲೆ ಸಾಲ ಸೌಲಭ್ಯವನ್ನು ವಿಸ್ತರಿಸುತ್ತವೆ.

ನಮ್ಮ ದೇಶದಲ್ಲಿ ಜನ ಸಂಖ್ಯೆ ಹೆಚ್ಚಳವನ್ನು ತಡೆಯುವ ಸಲುವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಜನಸಂಖ್ಯೆ ನಿಯಂತ್ರಣಕ್ಕೆ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿವೆ. ಪೌರಕಾರ್ಮಿಕರ ಮತ್ತು ಅವರ ಕುಟುಂಬಗಳ ಜನರು ತಮ್ಮ ಕುಟುಂಬಗಳ ಮಿತಿಯನ್ನು ಕಾಪಾಡಿಕೊಳ್ಳುವ ಅವಶ್ಯಕತೆಯನ್ನು ಮೂಡಿಸಬೇಕು. ಮೂರು ಮಕ್ಕಳಾದ ಮೇಲೆ ಪ್ರತಿಯೊಬ್ಬ ಪೌರಕಾರ್ಮಿಕನು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕು. ಈ ಶಸ್ತ್ರ ಚಿಕಿತ್ಸೆಗೆ ಒಳಗಾದವರಿಗೆ ಕುಟುಂಬ ಕಲ್ಯಾಣ ಸಂಸ್ಥೆಯು ಕೊಡುವ ವಾಡಿಕೆಯ ಹಣದ ಜೊತೆಗೆ ಆಯಾಯ ಮುನಿಸಿಪಾಲಿಟಿಗಳು ಕೂಡಾ ಅಂತಹ ಪ್ರತಿಯೊಬ್ಬ ಪೌರಕಾರ್ಮಿಕನಿಗೂ 500 ರೂಪಾಯಿಯನ್ನು ಕೊಡಬೇಕು.

# ಅಧ್ಯಾಯ XVI
## ಸಾಮಾಜಿಕ ಭದ್ರತೆ

ಪೌರಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಳು ತೀರಾ ಕಡಿಮೆ ಇವೆ. ಅಷ್ಟೇ ಅಲ್ಲ, ಅಸಮರ್ಪಕವಾಗಿವೆ. ಸೇವೆಯಿಂದ ನಿವೃತ್ತರಾದ ಮೇಲೆ ಅವರಿಗೆ ಉತ್ತಮ ಭವಿಷ್ಯವೇ ಇರುವುದಿಲ್ಲ. ಬದುಕನ್ನು ಸಾಗಿಸುವುದೇ ಬಹು ದೊಡ್ಡ ಸಮಸ್ಯೆಯಾಗುತ್ತದೆ. ಏಕೆಂದರೆ ಹಣಕಾಸಿನ ವಿಷಯದಲ್ಲಿ ಅವರು ತೀರಾ ದುರ್ಬಲರಾಗಿರುತ್ತಾರೆ. ಅವರಲ್ಲಿ ಬೇರಾವುವೇ ಮಾರ್ಗ ಇರುವುದಿಲ್ಲ.

ಪೌರಕಾರ್ಮಿಕರನ್ನು ಇತರ ಸರ್ಕಾರಿ ಇಲಾಖೆಗಳ ನಾಲ್ಕನೆಯ ದರ್ಜೆಯ ನೌಕರರಿಗೆ ಸಮಾನವೆಂದು ಪರಿಗಣಿಸಿರುವುದರಿಂದ ಸರ್ಕಾರವು ಅವರಿಗೆ ಪಿಂಚಣಿಯನ್ನು ಮತ್ತು ಗ್ರಾಚ್ಯುಯಿಟಿಯನ್ನು ಮಂಜೂರು ಮಾಡುತ್ತದೆ ಎನ್ನುವುದೇನೋ ನಿಜ. ಆದರೆ ಕೆಲವೇ ಕೆಲವು ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರಿಗೆ ಪಿಂಚಣಿ ಪ್ರಯೋಜನಗಳನ್ನು ಕೊಡುತ್ತಿವೆ. ಬೆಂಗಳೂರು ಸಿಟಿ ಕಾರ್ಪೋರೇಷನ್ ಸೇರಿದಂತೆ ಅನೇಕ ದೊಡ್ಡ ಮುನಿಸಿಪಾಲಿಟಿಗಳು ಪೌರಕಾರ್ಮಿಕರಿಗೆ ಯಾವುದೇ ಪಿಂಚಣಿಯನ್ನು ಮಂಜೂರು ಮಾಡುತ್ತಿಲ್ಲ. ಪೌರಕಾರ್ಮಿಕರು ನಿವೃತ್ತರಾದ ಮೇಲೆ ಪಿಂಚಣಿ ಮತ್ತು ಗ್ರಾಜ್ಯುಟಿಯ ಮೇಲೆಯೇ ಅವಲಂಬಿತರಾಗುವುದರಿಂದ ಅವರ ಪಿಂಚಣಿಯನ್ನು ಮತ್ತು ಗ್ರಾಜ್ಯುಟಿಯನ್ನು ವಿಳಂಬ ಮಾಡದೇ ತ್ವರಿತವಾಗಿ ಸಂದಾಯ ಮಾಡಬೇಕು. ಅನೇಕ ಸ್ಥಳೀಯ ಸಂಸ್ಥೆಗಳು ಸಕಾಲದಲ್ಲಿ ಸಂದಾಯ ಮಾಡದೆ ಇರುವುದು ಸಮಿತಿಯ ಗಮನಕ್ಕೆ ಬಂದಿವೆ. ಕೆಲವೊಂದು ಸ್ಥಳೀಯ ಸಂಸ್ಥೆಗಳಂತೂ ಒಲ್ಲದ ಮನಸ್ಸಿನಿಂದ ತೀರಾ ವಿಳಂಬ ಮಾಡಿ ಹಣ ಪಾವತಿ ಮಾಡುತ್ತಿವೆ. ಈ ಸಮಿತಿಯು ಈ ಹಿಂದೆ ಶಿಫಾರಸು ಮಾಡಿರುವಂತೆ ಪೌರಕಾರ್ಮಿಕರ ಪಿಂಚಣಿ ಮತ್ತು ಗ್ರಾಚುಯಿಟಿ ಹಣವನ್ನು ಸಂದಾಯ ಮಾಡುವುದು ಎಲ್ಲಾ ಸ್ಥಳೀಯ ಸಂಸ್ಥೆಗಳ ಆದ್ಯ ಕರ್ತವ್ಯವೆಂದು ಸಮಿತಿಯು ಭಾವಿಸುತ್ತದೆ.

ಪೌರಕಾರ್ಮಿಕರ ಹಣಕಾಸಿನ ಸಂಪನ್ಮೂಲಗಳು ತೀರಾ ಕಡಿಮೆ. ಹಲವಾರು ಕಾರಣಗಳಿಂದಾಗಿ ಅವರು ತಮ್ಮ ವೃದ್ಧಾಪ್ಯ ಕಾಲದ ಜೀವನಕ್ಕಾಗಿ ಸ್ವಲ್ಪವನ್ನಾದರೂ ಉಳಿತಾಯ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಉಳಿತಾಯ ಮಾಡಿರುವುದೂ ಇಲ್ಲ, ಮೇಲಾಗಿ ತುಂಬಾನೆ ಸಾಲವನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ ಪೌರಕಾರ್ಮಿಕರು ಬದುಕನ್ನು ಸವಾಲಾಗಿ ಸ್ವೀಕರಿಸಿ ಧೈರ್ಯದಿಂದ ಹಣಕಾಸಿನ ಸಮಸ್ಯೆಗಳನ್ನು ಎದುರಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ಎಲ್ಲಾ ವಾಸ್ತವಾಂಶಗಳನ್ನು ಪರಿಗಣಿಸಿಯೇ ಸಮಿತಿಯು, "ಕಡ್ಡಾಯ ಜೀವ ವಿಮಾ ಯೋಜನೆ"ಯನ್ನು ಪ್ರಾರಂಭಿಸದಿದ್ದರೆ ಅವರು ತಮ್ಮ ಜೀವಮಾನದಲ್ಲಿ ಏನನ್ನೂ ಉಳಿತಾಯ ಮಾಡುವುದಕ್ಕೆ ಆಗುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದೆ. ಒತ್ತಾಯ ಮಾಡಿಯಾದರೂ ವಿಮೆ ಮಾಡಿಸುವುದು ಅವಶ್ಯಕ. ಪೌರಕಾರ್ಮಿಕರು ವಿಮಾ ಪಾಲಿಸಿಗಳ ಹಣದ ಕಂತನ್ನು ಪಾವತಿ ಮಾಡುವುದು ಅಗತ್ಯವೆಂಬ ತಿಳುವಳಿಕೆಯನ್ನು ಅವರಲ್ಲಿ ಮೂಡಿಸಲು ಎಲ್ಲ ಪ್ರಯತ್ನಗಳನ್ನು ಮಾಡುವುದು ಅತ್ಯಗತ್ಯ.

ಕರ್ನಾಟಕ ಸರ್ಕಾರವು ಇತ್ತೀಚೆಗೆ 'ಕುಟುಂಬ ಕಲ್ಯಾಣ ಯೋಜನೆ' ಯೆಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ಮಧ್ಯಮ ವರ್ಗದ ಮತ್ತು ಕಡಿಮೆ ಆದಾಯ ಗುಂಪುಗಳ ಸರ್ಕಾರಿ ನೌಕರರಿಗೆ ಯಾವಾಗಲೂ ಹಣಕಾಸಿನ ಸ್ಥಿರತೆ ಇರುವುದಿಲ್ಲ. ಸರ್ಕಾರಿ ನೌಕರನು ಕೆಲಸದ ಮೇಲಿರುವಾಗಲೇ ನಿಧನ ಹೊಂದಿದಾಗ ಅವನ ಕುಟುಂಬ ಬೀದಿಗೆ ಬೀಳುತ್ತದೆ. ದುಡಿಯುವ ವ್ಯಕ್ತಿಯ ಮರಣದ ನಂತರ ಅನೇಕ ಕುಟುಂಬಗಳಿಗೆ ಜೀವನ ಸಾಗಿಸಲು ಏನೇನೂ ಇರುವುದಿಲ್ಲ. ಹಸಿವು ಹಾಗೂ ಅಗೌರವದಿಂದ ಅಂಥ ಕುಟುಂಬಗಳನ್ನು ರಕ್ಷಿಸಲು ಅವುಗಳಿಗೆ ಪುನರ್ ವ್ಯವಸ್ಥೆ ಕಲ್ಪಿಸಲು ಒಂದೇ ಮೊತ್ತದಲ್ಲಿ ಅನುದಾನವನ್ನು ನೀಡಬೇಕೆಂದು ಹೊಸ ಯೋಜನೆಯಲ್ಲಿ ಹೇಳಲಾಗಿದೆ. ಈ ಕುಟುಂಬ ಕಲ್ಯಾಣ ಯೋಜನೆಯು ಇತರ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಮಾಡಿರುವಂತೆಯೇ ಕಡ್ಡಾಯವಾಗಿ ಇಂತಹ ಕುಟುಂಬಗಳಿಗೂ ಅನ್ವಯವಾಗುವಂತೆ

ಮಾಡಬೇಕು. ಹೀಗೆ ಮಾಡದಿದ್ದರೆ, ಜೀವನದಲ್ಲಿ ಅನಿರೀಕ್ಷಿತ ಘಟನೆಗಳು ಪೌರಕಾರ್ಮಿಕರಿಗೆ ಎದುರಾದಾಗ, ಅವುಗಳನ್ನು ಎದುರಿಸುವ ಭರವಸೆಯೇ ಅವರಿಗಿರುವುದಿಲ್ಲ.

ಬೆಂಗಳೂರಿನ ಪೌರಕಾರ್ಮಿಕರ ಪ್ರಯೋಜನಕ್ಕಾಗಿ ಬೆಂಗಳೂರು ನಗರ ಕಾರ್ಪೋರೇಷನ್‌ನ ಕೆಲಸಗಾರರ ಸಂಘವು 'ಕಲ್ಯಾಣ ನಿಧಿ'ಯೊಂದನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಿರುವುದನ್ನು ಸಮಿತಿಯು ಶ್ಲಾಘಿಸುತ್ತದೆ. ಮನೆ ನಿವೇಶನಗಳನ್ನು ಕೊಳ್ಳಲು, ಸ್ವಂತ ಮನೆಯನ್ನು ಕಟ್ಟಿಕೊಳ್ಳಲು ಅಥವಾ ಉನ್ನತ ವಿದ್ಯಾಭ್ಯಾಸಕ್ಕಾಗಿ ಮಕ್ಕಳನ್ನು ಕಳುಹಿಸಲು ಪೌರಕಾರ್ಮಿಕರಿಗೆ ನೆರವಾಗಲು ಈ ನಿಧಿಯನ್ನು ಬಳಸಲಾಗುತ್ತದೆ. ರಾಜ್ಯದ ಇತರ ಭಾಗಗಳಲ್ಲಿರುವ ಪೌರಕಾರ್ಮಿಕರ ಸಂಘ ಸಂಸ್ಥೆಗಳು ಮತ್ತು ಕಾರ್ಮಿಕ ಸಂಘಗಳು ಈ ವಿಧಾನಗಳನ್ನು ಅಳವಡಿಸಿಕೊಂಡು ಅವರವರ ಪ್ರದೇಶಗಳಲ್ಲಿ ಪೌರಕಾರ್ಮಿಕರ ಕಲ್ಯಾಣಕ್ಕಾಗಿ ನಿಧಿಯನ್ನು ಸ್ಥಾಪಿಸಬೇಕೆಂದು ಸಮಿತಿಯು ಆಶಿಸುತ್ತದೆ.

ವಂಶಪಾರಂಪರ್ಯದ ವೃತ್ತಿಯೆನ್ನಲಾದ ಜಾಡಮಾಲಿ ವೃತ್ತಿಯನ್ನು ತೊಡೆದು ಹಾಕಲು ಎಲ್ಲಿ ಸಾಧ್ಯವೋ ಅಲ್ಲಿ ಕೃಷಿಭೂಮಿಯನ್ನು ಪೌರಕಾರ್ಮಿಕರಿಗೆ ಮಂಜೂರು ಮಾಡಬೇಕು. ಅವರು ನಿವೃತ್ತರಾದ ನಂತರ ವ್ಯವಸಾಯಗಾರರಾಗಿ ನೆಲೆಗೊಳ್ಳಲು ಉತ್ತೇಜನ ನೀಡಬೇಕು.

ಪೌರಕಾರ್ಮಿಕರಲ್ಲಿ ಬಹುತೇಕ ಪುರುಷರು ಮತ್ತು ಮಹಿಳೆಯರು ನಿವೃತ್ತರಾದ ನಂತರ ತಮ್ಮ ವೃದ್ಧಾಪ್ಯದಲ್ಲಿ ತಾವೇ ಸ್ವತಃ ಬದುಕನ್ನು ಸಾಗಿಸಬೇಕಾಗುತ್ತದೆ. ಏಕೆಂದರೆ ಅಂತಹ ಕಾಲದಲ್ಲಿ ಅವರನ್ನು ನೋಡಿಕೊಳ್ಳಲು ಯಾರೂ ಇರುವುದಿಲ್ಲ. ಸೇವೆಯಲ್ಲಿರುವಾಗ ಅವರು ಅತ್ಯಂತ ಅಪಾಯಕಾರಿ ಕೆಲಸಗಳನ್ನು ಮಾಡುತ್ತಾರೆ. ಅವರು ಕೆಲಸ ಮಾಡುವಾಗ ಅವರಿಗೆ ಅನೇಕ ಸಾಂಕ್ರಾಮಿಕ ರೋಗಗಳು ತಗುಲಿರುತ್ತವೆ ಹಾಗೂ ಕೊನೆಯವರೆಗೆ ಬಾಧಿಸುತ್ತವೆ. ಹೀಗಾಗಿ ಅವರ ಪಾಲನೆ ಮತ್ತು ಪೋಷಣೆಯನ್ನು ವೃದ್ಧಾಪ್ಯದಲ್ಲಿ ಯಾರೂ ಮಾಡುವುದಿಲ್ಲ. ಕೊನೆಯವರೆಗೂ ಅವರು ಸಂಕಷ್ಟದಲ್ಲಿಯೇ ಜೀವನ ಸಾಗಿಸುತ್ತಾರೆ.

ಎಲ್ಲಾ ಜಿಲ್ಲೆಗಳ ಕೇಂದ್ರ ಕಾರ್ಯಸ್ಥಾನದಲ್ಲಿ ಅನಾರೋಗ್ಯದಿಂದಿರುವ ಹಾಗೂ ಅಶಕ್ತರಾದ ಪೌರಕಾರ್ಮಿಕರಿಗಾಗಿ ವೃದ್ಧಾಶ್ರಮಗಳನ್ನು ತೆರೆಯಬೇಕೆಂದು ಅಲ್ಲಿ ಪೌರಕಾರ್ಮಿಕರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸ್ಸು ಮಾಡುತ್ತದೆ. ಅಲ್ಲಿ ಉಚಿತವಾಗಿ ಊಟೋಪಚಾರ, ಔಷಧಗಳು ಹಾಗೂ ದಾದಿಯರ ಸೇವೆಯನ್ನು ಒದಗಿಸಬೇಕು. ಪ್ರಸ್ತಾವಿತ ವೃದ್ಧಾಶ್ರಮಗಳನ್ನು ಆಧುನಿಕ ರೀತಿ–ನೀತಿಗಳ ಪ್ರಕಾರ ನಿರ್ವಹಣೆ ಮಾಡುವ ಕರ್ತವ್ಯ ಪೌರಕಾರ್ಮಿಕರ ಕಲ್ಯಾಣ ಮಂಡಳಿಯದ್ದಾಗಿರುತ್ತದೆ.

# ಅಧ್ಯಾಯ XVII

## ಕಾರ್ಮಿಕ ಸಂಘಗಳು

ರಾಷ್ಟ್ರೀಯ ಕಾರ್ಮಿಕ ಆಯೋಗವು ಕಸಗುಡಿಸುವವರಿಗೆ ಮತ್ತು ಜಾಡಮಾಲಿಗಳಿಗೆ ಸಹ 1947ರ ಕೈಗಾರಿಕಾ ವಿವಾದಗಳ ಅಧಿನಿಯಮದ ಪ್ರಯೋಜನಗಳನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರೂ ರಾಜ್ಯದಲ್ಲಿರುವ ಸ್ಥಳೀಯ ಮಂಡಳಿಗಳಲ್ಲಿ ನೌಕರಿಯಲ್ಲಿರುವ ಪೌರಕಾರ್ಮಿಕರಿಗೆ ಸರ್ಕಾರವು ಆ ಸವಲತ್ತನ್ನು ಈವರೆಗೂ ಕೊಟ್ಟಿರುವುದಿಲ್ಲ. ಬೆಂಗಳೂರು, ಮೈಸೂರು, ಕೆ.ಜಿ.ಎಫ್, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮುಂತಾದ ದೊಡ್ಡ ನಗರಗಳಲ್ಲಿ ಮಾತ್ರ ಪೌರಕಾರ್ಮಿಕರು ಕಾರ್ಮಿಕ ಸಂಘಗಳನ್ನು ಸಂಘಟಿಸಿಕೊಂಡಿದ್ದಾರೆ. ಅವರ ಸಂಘಟಿತ ಬಲದಿಂದ ಈ ನಗರಗಳಲ್ಲಿ ಒಳ್ಳೆಯ ಸೇವಾ ಸ್ಥಿತಿಗಳು ಅವರಿಗೆ ಲಭ್ಯವಾಗಿವೆ. ಆದರೆ, ಅಸಂಘಟಿತ ಪೌರಕಾರ್ಮಿಕರ ಸ್ಥಿತಿಗತಿಗಳು ಊಹೆಗೆ ನಿಲುಕದಷ್ಟು ಚಿಂತಾಜನಕವಾಗಿವೆ. ಪೌರಕಾರ್ಮಿಕರನ್ನು ಸ್ಥಳೀಯ ಕಾರ್ಮಿಕ ಸಂಘಗಳ ವ್ಯಾಪ್ತಿಗೆ ತರಲು ಅಲ್ಲೊಂದು ಇಲ್ಲೊಂದು ಪ್ರಯತ್ನಗಳಾಗಿವೆ. ಅಂತಹ ಪ್ರಯತ್ನಗಳು ಸಂಘಟಕರ ರಾಜಕೀಯ ಪಕ್ಷ ನಿಷ್ಠೆಯ ಕಾರಣದಿಂದಾಗಿ ವಿಫಲವಾಗಿವೆ. ರಾಜಕಾರಣಿಗಳು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಕಾರ್ಮಿಕ ಸಂಘಗಳನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರಾದ್ದರಿಂದ ದೇಶದಲ್ಲಿರುವ ಎಲ್ಲಾ ಕಾರ್ಮಿಕ ಸಂಘಗಳು ರಾಜಕೀಯ ಹಾಗೂ ರಾಜಕಾರಣಿಗಳ ಪ್ರಭಾವಕ್ಕೆ ಒಳಗಾಗದಂತೆ ಮಾಡಬೇಕೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಪೌರಕಾರ್ಮಿಕರು ಸಾರ್ವಜನಿಕ ಉಪಯುಕ್ತತೆ ಸೇವೆಗೆ ಸೇರಿದವರಾಗಿರುವುದರಿಂದ ಅವರೇನಾದರೂ ಮುಷ್ಕರ ಹೂಡಿದರೆ ಇಡೀ ಸಮುದಾಯದ ಆರೋಗ್ಯ ಮತ್ತು ನೈರ್ಮಲ್ಯದ ಮೇಲೆ ಗುರುತರ ಪರಿಣಾಮಗಳು ಉಂಟಾಗುತ್ತವೆ. ಕೆಲವೊಮ್ಮೆ ಅವರಿಂದ ಈ ಬಗೆಯ ಮುಷ್ಕರಗಳು ಅನಿವಾರ್ಯವಾಗಿರುತ್ತವೆ. ಏಕೆಂದರೆ ಸ್ಥಳೀಯ ಅಧಿಕಾರಿಗಳು ಮತ್ತು ಸರ್ಕಾರವು ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸದಿರುವುದು ಮತ್ತು ಹಠಮಾರಿ ಧೋರಣೆ ಮುಷ್ಕರಕ್ಕೆ ಕಾರಣವಾಗಿರುತ್ತವೆ. ಸ್ಥಳೀಯ ಅಧಿಕಾರಿಗಳು ಮತ್ತು ಸರ್ಕಾರವು ಪೌರಕಾರ್ಮಿಕರ ಸಮಂಜಸ ಮತ್ತು ನ್ಯಾಯಸಮ್ಮತ ಬೇಡಿಕೆಗಳಿಗೆ ಸ್ಪಂದಿಸದಿರುವುದು ಮುಷ್ಕರಕ್ಕೆ ಕಾರಣ. ಆದ್ದರಿಂದ, ಪೌರಕಾರ್ಮಿಕರನ್ನು **"ಕೆಲಸಗಾರರು"** ಎಂದು ಪರಿಗಣಿಸುವುದು ಹಾಗೂ ಅವರಿಗೆ 1947ರ ಕೈಗಾರಿಕಾ ವಿವಾದಗಳ ಕಾಯ್ದೆಯ ನಿಬಂಧನೆಗಳನ್ನು ವಿಸ್ತರಿಸುವುದು ಮತ್ತು ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳಲು ಅವರಿಗೆ ಉತ್ತೇಜನ ನೀಡುವುದು ವಿಹಿತ.

ಪೌರಕಾರ್ಮಿಕರ ಕಾರ್ಮಿಕ ಸಂಘಗಳು ತಮ್ಮ ಸದಸ್ಯರ ಹಕ್ಕುಗಳನ್ನು ಮತ್ತು ಸವಲತ್ತುಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರವಹಿಸುವುದಷ್ಟೇ ಅಲ್ಲ. ಆಡಳಿತ ಮಂಡಲಿಯ ಜೊತೆ ಹಾಗೂ ಸಾರ್ವಜನಿಕರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳುವಲ್ಲಿಯೂ ಸಹ ಗಮನಾರ್ಹ ಪಾತ್ರ ವಹಿಸುತ್ತವೆ.

ಪೌರಕಾರ್ಮಿಕರು ಎಲ್ಲೆಲ್ಲಿ ಕಾರ್ಮಿಕ ಸಂಘಗಳನ್ನು ಸ್ಥಾಪಿಸಿಕೊಂಡಿರುತ್ತಾರೋ ಅಲ್ಲಿನ ಅಧಿಕಾರಿಗಳು ಆ ಸಂಘಗಳನ್ನು ಗುಣಾವಗುಣಗಳ ಮೇಲೆ ಮತ್ತು ಸಂಖ್ಯಾ ಬಲವನ್ನು ಪರಿಗಣನೆಗೆ ತೆಗೆದುಕೊಂಡು ಮಾನ್ಯತೆ ನೀಡಬೇಕು ಮತ್ತು ಅವುಗಳ ಕಾರ್ಯಾಲಯಕ್ಕೆ ಸ್ಥಳಾವಕಾಶ ಮುಂತಾದ ಸೌಲಭ್ಯಗಳನ್ನು ಅಂತಹ ಸಂಘಗಳಿಗೆ ಒದಗಿಸಬೇಕು. ರಾಜಕೀಯ ಸಿದ್ಧಾಂತಕ್ಕೆ ಅಂಟಿಕೊಂಡಿರುವ ಗುಂಪುಗಳು ಕಾರ್ಮಿಕ ಸಂಘಗಳಲ್ಲಿರಲು ಉತ್ತೇಜನ ಕೊಡಲೇಬಾರದು. ಯಾವುದಕ್ಕೂ ಹೇಸದ ಜನರು ತಮ್ಮ ಜೀವನೋಪಾಯಕ್ಕಾಗಿ ಕಾರ್ಮಿಕ ಸಂಘಗಳನ್ನು ಬಳಸಿಕೊಳ್ಳುತ್ತಿದ್ದಾರೆ ಹಾಗೂ ಏನೂ ತಿಳಿಯದ ಪೌರಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರ ಸಂಬಳದಿಂದ ಸಂಘದ ಸದಸ್ಯತ್ವದ ವಂತಿಗೆಯನ್ನು ಕಡಿತ ಮಾಡಿಕೊಂಡು ಯಾವುದೇ ಬ್ಯಾಂಕಿನಲ್ಲಿರುವ ಸಂಘದ ಖಾತೆಗೆ ಜಮೆ ಮಾಡುವುದು ಸ್ಥಳೀಯ ಮಂಡಳಿಗಳ ಜವಾಬ್ದಾರಿಯಾಗಿರಬೇಕು.

ಪ್ರತಿಯೊಂದು ಸ್ಥಳೀಯ ಮಂಡಳಿಯಲ್ಲಿ ಒಂದೇ ಒಂದು ಕಾರ್ಮಿಕ ಸಂಘಕ್ಕೆ ಮಾನ್ಯತೆ ನೀಡಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸ್ಸು ಮಾಡುತ್ತದೆ. ಸ್ಥಳೀಯ ಮಂಡಳಿಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳುವುದಕ್ಕೆ ಉತ್ತೇಜನ ನೀಡಬಾರದು.

ಪೌರಕಾರ್ಮಿಕ ಸಂಘಗಳ ಅಧಿಕೃತ ಪ್ರತಿನಿಧಿಗಳನ್ನು ಕೌನ್ಸಿಲ್‌ಗಳಿಗೆ ನಾಮ ನಿರ್ದೇಶನ ಮಾಡಬೇಕು. ಇದರಿಂದ ಪೌರಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಣೆ ಮಾಡಿದಂತಾಗುತ್ತದೆ; ಅಷ್ಟೇ ಅಲ್ಲ ಅವರು ಯಾವ ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿರುವರೋ ಆ ಸಮುದಾಯದ ಒಳಿತಿಗೂ ಸಹ ಸಮಾನ ಜವಾಬ್ದಾರರೆಂಬ ಭಾವನೆ ಅವರಲ್ಲಿ ಮೂಡುವುದಕ್ಕೆ ಸಾಧ್ಯತೆ ಮಾಡಿಕೊಡುತ್ತದೆ

# ಅಧ್ಯಾಯ VIII

## ನಾಗರಿಕರಿಗೆ ಒಂದು ಮನವಿ

ನಮ್ಮಲ್ಲಿ ಭವ್ಯ ಸಾಂಸ್ಕೃತಿಕ ಪರಂಪರೆ ಇದ್ದರೂ ಕೂಡ ನಮ್ಮ ಜನರು ಸಾಮಾನ್ಯವಾಗಿ ವೈಯಕ್ತಿಕ ಸ್ವಚ್ಛತೆಗೆ ಹಾಗೂ ಯಾವುದೇ ನಿರ್ದಿಷ್ಟ ಪ್ರದೇಶ ಸಂಬಂಧಿಸಿದಂತೆಯೂ ಸಾಮುದಾಯಿಕ ಸ್ವಚ್ಛತೆಗೆ ಅಷ್ಟೊಂದು ಗಮನ ಕೊಡುವುದಿಲ್ಲ. ನಮ್ಮ ನಗರಗಳು ಮತ್ತು ಪಟ್ಟಣಗಳು ಇನ್ನೂ ಓಬಿರಾಯನ ಕಾಲದವುಗಳಂತೆಯೇ ಇವೆ.

ಒಂದು ಪ್ರಸಿದ್ಧ ನಿಯತಕಾಲಿಕೆಯ ಸಂಪಾದಕರು "ಭಾರತದಲ್ಲಿ ಹೊರತು ಪ್ರಪಂಚದ ಇನ್ಯಾವ ಭಾಗದಲ್ಲೂ ರೈಲ್ವೆ ಹಳಿಗಳಿರುವ ಕಡೆ, ಹೆದ್ದಾರಿಗಳ ಬದಿಗಳಲ್ಲಿ ನಾಚಿಕೆಯಿಲ್ಲದೆ ಮಲ ವಿಸರ್ಜನೆ ಮಾಡುವುದಿಲ್ಲ. ಗೋಡೆಗಳ ಮೇಲೆ, ಪಾದಚಾರಿ ರಸ್ತೆಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದಿಲ್ಲ.

ಪ್ರಪಂಚದ ಯಾವ ಭಾಗದಲ್ಲಾದರೂ, ಕೆಮ್ಮಿ ಕೆಮ್ಮಿ ಗಂಟಲಿನಿಂದ ಉಗುಳುವುದನ್ನು, ಮೂಗುಗಳಿಂದ ಸಿಂಬಳ ತೆಗೆಯುವುದನ್ನು, ಕಫ ಉಗುಳುವುದನ್ನು ನೋಡಿದ್ದೀರಾ?

ಗುಡಿಸಿದ ಕಸವನ್ನು ಹಸಿ ತ್ಯಾಜ್ಯವನ್ನು ಸಾರ್ವಜನಿಕ ರಸ್ತೆಯಲ್ಲಿ ಬಿಸಾಡುವುದನ್ನು ನೋಡಿದ್ದೀರಾ? ಎಂದು ಬರೆದಿದ್ದಾರೆ.

ಈ ಅಭ್ಯಾಸಗಳು ನಿಜಕ್ಕೂ ಹೇಸಿಗೆಯವು ಹಾಗೂ ಉಪದ್ರವಕಾರಿ ಇವುಗಳಿಂದ ವಿಷಮಶೀತ ಜ್ವರ, ಕಾಲರಾ ಮತ್ತು ಕ್ಷಯ ರೋಗಗಳು ಹಬ್ಬುತ್ತವೆ.

ನಮ್ಮ ನಗರಗಳಿಗಿಂತಲೂ ಹಾಗೂ ಪಟ್ಟಣಗಳಿಗಿಂತಲೂ ಗಲೀಜಾಗಿದ್ದ ಸಿಂಗಪೂರ್ ಮತ್ತು ಹಾಂಕಾಂಗ್ ನಗರಗಳು ಇಂದು ಬಹು ಸ್ವಚ್ಛತೆಯುಳ್ಳ ನಗರಗಳೆಂದು ಹೆಸರುವಾಸಿಯಾಗಿವೆ. ಸ್ವಚ್ಛವಾಗಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗಿರುವಾಗ ನಮಗೂ ಸಾಧ್ಯವಾಗಬೇಕಲ್ಲವೇ.......... ನಮ್ಮ ಗಲೀಜು ನಗರಗಳನ್ನು ಹಾಗೂ ಪಟ್ಟಣಗಳನ್ನು ಸಿಂಗಪೂರ್ ಹಾಗೂ ಹಾಂಕಾಂಗ್‌ನಂತೆಯೇ ಕಡಿಮೆ ಖರ್ಚುವೆಚ್ಚದಲ್ಲಿ ಹಾಗೂ ಕಡಿಮೆ ಅವಧಿಯಲ್ಲಿ ಸ್ವಚ್ಛ ನಗರಗಳನ್ನಾಗಿ ನಾವು ಕೂಡ ಪರಿವರ್ತಿಸಬಹುದೆಂಬುದನ್ನು ಸಮಿತಿಯು ಒಪ್ಪುತ್ತದೆ.

ನಮ್ಮ ಜನರು ತಮ್ಮತಮ್ಮ ಮನೆಯಲ್ಲಿ ಅನಗತ್ಯವಾದುದು ಏನಾದರೂ ಇರಲಿ ಅದನ್ನು ಸಾರ್ವಜನಿಕ ರಸ್ತೆಗಳಿಗೆ ಎಸೆದು ಬಿಡುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈ ಬಗೆಯ ಕಸಕಡ್ಡಿಯನ್ನು ತೆರವು ಮಾಡುವ ಕಾರ್ಯವನ್ನು ಯಾವ ಸ್ಥಳೀಯ ಮಂಡಳಿಯು ಮಾಡುತ್ತಿಲ್ಲ. ಹಾಗಾಗಿ ನಿಮಿಷ ನಿಮಿಷಕ್ಕೂ ಕಸದ ಗುಡ್ಡೆ ರಾಶಿರಾಶಿಯಾಗುತ್ತಲೇ ಹೋಗುತ್ತದೆ. ಯಾವುದಾದರೂ ಒಂದು ಗೊತ್ತುಪಡಿಸಿದ ಜಾಗದಲ್ಲಿ ಕಸಕಡ್ಡಿಯನ್ನು ಹಾಕುವುದರ ಪ್ರಾಮುಖ್ಯತೆಯನ್ನು ನಮ್ಮ ಜನರು ಅರಿತು ಕೊಳ್ಳಬೇಕು. ಹಾಗೆ ಮಾಡಿದ್ದಾದರೆ ಸ್ಥಳೀಯ ಮಂಡಳಿಗಳು ಕಸದ ರಾಶಿಯನ್ನು ಸೂಕ್ತ ಮಧ್ಯಂತರಗಳಲ್ಲಿ ತೆರವು ಮಾಡಲು ಸಾಧ್ಯವಾಗುತ್ತದೆ.

ಜನಾರೋಗ್ಯದ ನಿರ್ವಹಣೆ ವಿಷಯದಲ್ಲಿ ಒಂದು ಸ್ಥಳದ ನಾಗರಿಕರು ಬೇರೆ ಸ್ಥಳದ ನಾಗರಿಕರಿಗೂ ಸಮಾನ ಹಕ್ಕುಗಳಿವೆಯೆಂಬುದನ್ನು ತಿಳಿದುಕೊಂಡಿರಬೇಕು. ಅಡ್ಡಾದಿಡ್ಡಿಯಾಗಿ ಕಸಕಡ್ಡಿಯನ್ನು ರಸ್ತೆಗೆ ಸುರಿಯುವುದು ಮತ್ತು ಸಾರ್ವಜನಿಕವಾಗಿ ಹೇಸಿಗೆ ಮಾಡುವುದು ಇತರ ನಾಗರಿಕ ಹಕ್ಕುಗಳ ನೇರ ಉಲ್ಲಂಘನೆ ಎಂಬುದನ್ನು ಸಹ ತಿಳಿದುಕೊಂಡಿರಬೇಕು.

ನಾಗರಿಕರು ತಮ್ಮ ತಮ್ಮ ಮನೆಗಳಲ್ಲಿ ವೇಸ್ಟ್ ಬಾಸ್ಕೆಟ್‌ಗಳನ್ನು ಇಟ್ಟುಕೊಂಡಿರಬೇಕು. ಅವುಗಳಿಗೆ ಎಲ್ಲ ಕಸಕಡ್ಡಿಯನ್ನು ಹಾಗೂ ಮನೆಯಲ್ಲಿನ ಅನಗತ್ಯ ವಸ್ತುಗಳನ್ನು ಹಾಕಬೇಕು. ಬಾಸ್ಕೆಟ್ ತುಂಬಿದಾಗ ಅದರೊಳಗೆ ಸಂಗ್ರಹವಾಗಿರುವುದನ್ನು ಸಾರ್ವಜನಿಕ ಕಸದ ತೊಟ್ಟಿಗೆ ಹಾಕಬೇಕು. ತಮ್ಮತಮ್ಮ ಮನೆಯನ್ನು ಸ್ವಚ್ಛ ಮಾಡುವ ಗೃಹಿಣಿಯರು ಕಸಕಡ್ಡಿಯನ್ನು ರಸ್ತೆಗೆ ಎಸೆಯದೆ ಮನೆಯಲ್ಲಿಯೇ ಇಟ್ಟಿರುವ ಬಾಸ್ಕೆಟ್‌ಗೆ ಹಾಕಬೇಕು.

ಮಕ್ಕಳ ತಾಯಂದಿರು ತಮ್ಮ ಮಕ್ಕಳು ತಮ್ಮ ಮನೆಯ ಮುಂದಿರುವ ಸಾರ್ವಜನಿಕ ರಸ್ತೆಯಲ್ಲಿ ಕಕ್ಕಾ ಮಾಡಲು ಬಿಟ್ಟು ಬಿಡುತ್ತಾರೆ. ಇದೊಂದು ಕೆಟ್ಟ ಅಭ್ಯಾಸ. ಇದರಿಂದ ಇಡೀ ವಾತಾವರಣವೇ ಕಲುಷಿತಗೊಳ್ಳುತ್ತದೆ, ಅಷ್ಟೇ ಅಲ್ಲ, ಆರೋಗ್ಯಕ್ಕೆ ಗುರುತರ ಸ್ವರೂಪದ ಅಪಾಯಕಾರಕವೂ ಹೌದು. ಈ ಅಭ್ಯಾಸವನ್ನು ತಾಯಂದಿರು ಈ ಕೂಡಲೇ ತಪ್ಪಿಸಬೇಕೆಂದು ಮತ್ತು ಮಕ್ಕಳು ಕಕ್ಕಾ ಮತ್ತು ಮೂತ್ರವಿಸರ್ಜನೆ ಮಾಡುವುದಕ್ಕೆ ಶೌಚಾಲಯಕ್ಕೆ ಹೋಗುವುದನ್ನು ರೂಢಿ ಮಾಡಿಸಬೇಕು.

ಪ್ರಪಂಚದ ಎಲ್ಲಾ ದೇಶಗಳಲ್ಲಿ ಜನರು ಅತ್ಯುತ್ತಮ ನಾಗರಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾರೆ ಯಾರ ಸಲಹೆಗಳನ್ನು ಕೇಳದೆಯೇ ಯಾರದೇ ಮಧ್ಯ ಪ್ರವೇಶಕ್ಕೆ ಅವಕಾಶ ಕೊಡದೆಯೇ ತಮ್ಮ ನಗರಗಳನ್ನು ಸ್ವಚ್ಛವಾಗಿಟ್ಟುಕೊಂಡಿರುತ್ತಾರೆ. ಭಾರತದಲ್ಲಿ ಎಷ್ಟೇ ಮನವಿಗಳನ್ನು ಮಾಡಿಕೊಂಡರೂ, ಕಿವಿಗೆ ಕೇಳಿಸದ ಹಾಗೆ ಇರುತ್ತಾರೆ. ವಯಸ್ಕ ಪುರುಷರು ಮತ್ತು ಮಹಿಳೆಯರು ದೇಹ ಬಾಧೆಯನ್ನು ಸಾರ್ವಜನಿಕ ಸ್ಥಳದಲ್ಲಿಯೇ ಮುಗಿಸಿಕೊಳ್ಳುವ ಅಸಹ್ಯವಾದ ರೂಢಿ ಮಾಡಿಕೊಂಡಿದ್ದಾರೆ. ಸಾರ್ವಜನಿಕ ಉಪದ್ರವ ನಿಷೇಧ ಕಾಯ್ದೆ ಇದ್ದರೂ ಕೂಡಾ ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಿಲ್ಲ. ಹಾಗಾಗಿ ನಮ್ಮ ಸಾರ್ವಜನಿಕ ಹಾದಿ ಬೀದಿಗಳು ಯಾವಾಗಲೂ ಗಲೀಜಾಗಿಯೇ ಇರುತ್ತವೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಎಲ್ಲ ಸ್ಥಳಗಳಲ್ಲೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಸಾರ್ವಜನಕರೇ ಸ್ವತಃ ನಗರಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಮುನ್ಸಿಪಲ್ ಅಧಿಕಾರಿಗಳಿಗೆ ಸಹಕಾರ ನೀಡಬೇಕು. ಜಪಾನ್‌ನಂತಹ ದೇಶಗಳಲ್ಲಿ ನಗರಗಳ ಸ್ವಚ್ಛತೆಯನ್ನು ಕಾಪಾಡಲು ಸಾರ್ವಜನಿಕರಿಗೆ ಮನವಿ ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ. ಆದ್ದರಿಂದ, ಪಟ್ಟಣದ ಎಲ್ಲ ಪ್ರದೇಶಗಳನ್ನು ಸಂಪೂರ್ಣವಾಗಿ ಸ್ವಚ್ಛವಾಗಿಟ್ಟುಕೊಳ್ಳಲು ಎಲ್ಲ ಆವಶ್ಯಕ ಕ್ರಮಗಳನ್ನು ಸಾರ್ವಜನಿಕರು ಕೈಗೊಳ್ಳಬೇಕೆಂದು ಸಮಿತಿಯು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತದೆ.

ಇನ್ನೊಂದು ಕೆಟ್ಟ ಚಾಳಿಯೇನೆಂದರೆ ನಮ್ಮ ಜನರು ಸಾರ್ವಜನಿಕ ರಸ್ತೆಗಳಲ್ಲಿ ಮನಬಂದಂತೆ ಉಗುಳುತ್ತಿರುತ್ತಾರೆ. ಇದಕ್ಕಿಂತಲೂ ಹೊಲಸಿನ, ಹೇಸಿಗೆಯ ಚಾಳಿ ಮತ್ತೊಂದಿರಲಾರದು. ಮುಕ್ತ ಹಾದಿಬೀದಿಗಳಲ್ಲಿ ಜನರು ಉಗುಳಿದಾಗ ಅನೇಕ ರೋಗಗಳು ಭಯಂಕರವಾಗಿ ಹರಡಿ ಅಲ್ಲಿನ ಸಾರ್ವಜನಿಕರ ಆರೋಗ್ಯಕ್ಕೆ ಮಾರಕವಾಗುತ್ತದೆ. ಭಾರತದಲ್ಲಿ ಹೊರತು ಜನರು ಇನ್ಯಾವುದೇ ದೇಶದಲ್ಲಿ ಹೀಗೆ ಮಾಡುವುದಿಲ್ಲ. ಸಾರ್ವಜನಿಕರು ಮುಕ್ತ ಹಾದಿ ಬೀದಿಗಳಲ್ಲಿ ಉಗುಳಬಾರದೆಂದು ಸಮಿತಿಯು ಆಗ್ರಹಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತದೆ.

ಸ್ವಚ್ಛಗೊಳಿಸುವ ಕೆಲಸಗಾರರು ಮತ್ತು ಕಸಗುಡಿಸುವವರು ನಗರಗಳನ್ನು ಮತ್ತು ಪಟ್ಟಣಗಳನ್ನು ಸ್ವಚ್ಛಗೊಳಿಸಲು ಬೆಳ್ಳಂಬೆಳಗ್ಗೆಯೇ ಬಂದು ಬಿಡುತ್ತಾರೆ. ಮೊದಲು ಒಂದು ರಸ್ತೆಯನ್ನು ಸ್ವಚ್ಛಗೊಳಿಸುವ ಕೆಲಸ ಮುಗಿಸಿದ ಮೇಲೆ ಇನ್ನೊಂದು ರಸ್ತೆಗೆ ಹೋಗುತ್ತಾರೆ. ತದನಂತರ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಾರೆ. ಅವರು ಹೀಗೆ ರಸ್ತೆಗಳನ್ನು ಸ್ವಚ್ಛಗೊಳಿಸಿದ ನಂತರ ಬೆಳಿಗ್ಗೆ ತಡವಾಗಿ ವರ್ತಕರು ಹಾಗೂ ಅಂಗಡಿ ಮಾಲೀಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರೆಯುತ್ತಾರೆ. ಒಳಗಿನ ಕಸಕಡ್ಡಿಗಳನ್ನೆಲ್ಲಾ ಗುಡಿಸಿ ಹೊರಗೆ ರಸ್ತೆಗೆ ಎಸೆಯುತ್ತಾರೆ. ಹಾಗಾಗಿ ಕಸ ಗುಡಿಸುವವರು ಹಾದಿಬೀದಿಗಳನ್ನು ಮೊದಲು ಸ್ವಚ್ಛಗೊಳಿಸಿದ್ದು ನಿರರ್ಥಕವಾಗುತ್ತದೆ. ಅಂಗಡಿ, ಮುಂಗಟ್ಟುಗಳ ಮಾಲೀಕರ ಈ ಪ್ರವೃತ್ತಿ ಶೋಚನೀಯವಾದುದು. ವಾಣಿಜ್ಯ ಮತ್ತು ಇತರ ವರ್ತಕ ಸಂಘ ಸಂಸ್ಥೆಗಳು ತಮ್ಮ ಸದಸ್ಯರಿಗೆ ಹಾದಿಬೀದಿಗಳಲ್ಲಿ ಮಾಲಿನ್ಯ ಉಂಟು ಮಾಡುವುದನ್ನು ಬಿಟ್ಟು ಬಿಡಲು ಸಲಹೆ ಮಾಡಬೇಕೆಂದು ಸಮಿತಿಯು ಮನವಿ ಮಾಡಿಕೊಳ್ಳುತ್ತದೆ.

ಕೊನೆಯಲ್ಲಿ, ಜನಾರೋಗ್ಯ ಮತ್ತು ನೈರ್ಮಲ್ಯದಲ್ಲಿ ಉತ್ತಮ ಗುಣಮಟ್ಟವನ್ನು ಕಾಪಾಡಲು ಸಾರ್ವಜನಿಕರು ನಾಗರಿಕ ಅಧಿಕಾರಿಗಳಿಗೆ ಹೃತ್ಪೂರ್ವಕವಾಗಿ ಸಹಕಾರ ನೀಡುತ್ತಾರೆಂದು ಎಂದು ಸಮಿತಿಯು ವಿಶ್ವಾಸಪೂರ್ವಕವಾಗಿ ನಂಬುತ್ತದೆ.

# ಅಧ್ಯಾಯ XIX

## ಉಪದ್ರವ ಎಸಗುವುದರ ವಿರುದ್ಧ ಕಟ್ಟುನಿಟ್ಟಿನ ನಿಯಮಗಳನ್ನು ರಚಿಸಬೇಕು

ಸಕ್ರಿಯರಾಗಿರಬೇಕೆಂದು ನಮ್ಮ ಜನರಿಗೆ ಒತ್ತಾಯ ಪೂರ್ವಕವಾಗಿಯಾದರೂ ಮನವರಿಕೆ ಮಾಡಿಕೊಡದಿದ್ದರೆ ನಮ್ಮ ಜನರು ಸಮಯ ಸ್ಫೂರ್ತಿಯಿಂದ ಮುಂದೆ ಸಾಗುವುದೇ ಇಲ್ಲ ಎಂಬುದು ಕಟು ಅನುಭವ. ನಮ್ಮ ಜನರಲ್ಲಿ ನಾಗರಿಕ ಪ್ರಜ್ಞೆಯ ಬೆಳವಣಿಗೆ ಹೇಳಿಕೊಳ್ಳುವಷ್ಟು ಆದಂತಿಲ್ಲ. ಕೆಲವೊಂದು ರೀತಿಯ ಒತ್ತಾಯ, ಬಲಾತ್ಕಾರ ಹೇರದಿದ್ದರೆ ತಮ್ಮದೇ ಆರೋಗ್ಯದ ಒಳಿತಿಗಾಗಿ ಕೊಟ್ಟ ಸೂಚನೆಗಳನ್ನು ಹಾಗೂ ನೈತಿಕ ಹೊಣೆಗಾರಿಕೆಗಳನ್ನು ನಿರ್ವಹಿಸಲು ಅವರು ಸಿದ್ಧರಿರುವುದಿಲ್ಲ. ನಮ್ಮ ಜನರು ಯಾವಾಗಲೂ ತಮ್ಮ ಸವಲತ್ತುಗಳ ಬಗ್ಗೆಯೇ ತಗಾದೆ ಮಾಡುತ್ತಾರೆಯೇ ಹೊರತು ತಮಗಿರುವ ಜವಾಬ್ದಾರಿಗಳನ್ನು ಹಾಗೂ ಹೊಣೆಗಾರಿಕೆಗಳನ್ನು ತಿಳಿದುಕೊಂಡಿರುವುದಿಲ್ಲ.

ಬಾಂಬೆಯ ಡಾ॥ ಬಿ.ಎಸ್.ವರ್ಮಾರ ಪ್ರಕಾರ, ಮೇಲ್ಮೈಗಳಿಂದ ಕೊಕ್ಕೆ ಹುಳು, ತಂತು ಹುಳು ಹಾಗೂ ಜಂತು ಹುಳು ಹರಡುತ್ತವೆ. ದೇಶದಲ್ಲಿ ರಕ್ತ ಹೀನತೆಗೆ ಬಹು ಮುಖ್ಯ ಕಾರಣವೆಂದರೆ ಕೊಕ್ಕೆ ಹುಳು. ಇತರೆ ಕಾಯಿಲೆಗಳೆಂದರೆ ಕಾಲರಾ, ವಿಷಮಶೀತ ಜ್ವರ (ಟೈಫಾಯ್ಡ್, ಅರೆ ಟೈಫಾಯ್ಡ್) ಆಮಶಂಕೆ, ಭೇದಿ ಮತ್ತು ಕಾಮಾಲೆ. ಮೂಗಿನಿಂದ ಸಿಂಬಳ ತೆಗೆದು ಹಾಕುವುದರಿಂದ ಕ್ಷಯ, ಶ್ವಾಸ ಸಂಬಂಧಿ ಕಾಯಿಲೆಗಳು, ಸಿಡುಬು, ಸೀತಾಳೆ ಸಿಡುಬು, ದಡಾರ ಮುಂತಾದವು ಹರಡುತ್ತವೆ.

ನಮ್ಮ ಜನರ ಗಲೀಜು ಅಭ್ಯಾಸಗಳನ್ನು ತೊಡೆದು ಹಾಕಿಸಬೇಕಾದರೆ ಸಿಂಗಪೂರ್ ಹಾಗೂ ಹಾಂಗ್‌ಕಾಂಗ್‌ನ ಮಾದರಿಯನ್ನು ಅನುಸರಿಸುವುದು ಆವಶ್ಯಕ. ಅಲ್ಲಿ ಸಾರ್ವಜನಿಕ ಉಪದ್ರವವನ್ನು ಎಸಗುವುದರ (ಮೂತ್ರ ವಿಸರ್ಜನೆ, ಮಲ ವಿಸರ್ಜನೆ ಅಥವಾ ಉಗುಳುವುದರ) ವಿರುದ್ಧ ಮತ್ತು ಕಸ ಕಡ್ಡಿ ಎಸೆಯುವುದರ ವಿರುದ್ಧ ಅತಿ ಕಠಿಣ ನಿಯಮಗಳನ್ನು ರೂಪಿಸಿದ್ದಾರೆ ಹಾಗೂ ಅವುಗಳನ್ನು ಕಟ್ಟುನಿಟ್ಟಿನಿಂದ ಜಾರಿಗೆ ತಂದಿದ್ದಾರೆ. ಕೆಲವೇ ಕೆಲವು ತಿಂಗಳುಗಳಲ್ಲಿ ಆ ನಗರಗಳು ಪ್ರಪಂಚದಲ್ಲೇ ಅತ್ಯಂತ ಸ್ವಚ್ಛ ಸುಂದರ ನಗರಗಳಾಗಿ ಮಾರ್ಪಟ್ಟಿವೆ. ಉಪದ್ರವ ಎಸಗುವುದರ ವಿರುದ್ಧ ರಾಷ್ಟ್ರದ ಹಿತದೃಷ್ಟಿಯಿಂದ ಈ ಮುಂದೆ ಹೇಳಿರುವ ಅತಿ ಕಠಿಣ ನಿಯಮಗಳನ್ನು ಅನುಸರಿಸಲು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.

1. ಸಾರ್ವಜನಿಕ ರಸ್ತೆಗಳ ಮೇಲೆ ಕಸಕಡ್ಡಿ ಹಾಕಿದ ಜನರು, ಹಾಗೆ ಮೊದಲ ಸಲ ಹಾಕಿದ್ದಕ್ಕೆ 5 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು. ಮೂರು ಸಲ ಹಾಗೆ ಮಾಡಿದರೆ ಒಂದು ವಾರದ ಸಾದಾ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.
2. ತಮ್ಮ ಮಕ್ಕಳನ್ನು ಸಾರ್ವಜನಿಕ ರಸ್ತೆಯಲ್ಲಿ ಹಾಗೂ ಪಾದಚಾರಿ ರಸ್ತೆಯಲ್ಲಿ ಕಕ್ಕ, ಉಚ್ಚೆ ಮಾಡಲು ಬಿಡುವ ಜನರು, ಪ್ರತಿಸಲಕ್ಕೂ 5 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು. ಇದು ಪುನರಾವರ್ತನೆಯಾದರೆ ದಂಡವನ್ನು ಹೆಚ್ಚಿಸಬಹುದು.
3. ಸಾರ್ವಜನಿಕ ಸ್ಥಳದಲ್ಲಿ ದೇಹಬಾಧೆ ತೀರಿಸಿಕೊಳ್ಳುವ ವಯಸ್ಕರು, ಹಾಗೆ ಮಾಡಿದ ಮೊದಲ ಸಲಕ್ಕೆ 5 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು. ಮತ್ತೆಮತ್ತೆ ಹಾಗೆ ಮಾಡಿದರೆ 15 ದಿನಗಳ ಸಾದಾ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.
4. ಸಾರ್ವಜನಿಕ ರಸ್ತೆಯಲ್ಲಿ ಸಾರ್ವಜನಿಕರು ಉಗುಳಿದರೆ ಹಾಗೆ ಉಗುಳಿದ ಪ್ರತಿ ಸಲಕ್ಕೂ 2 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು.
5. ಎಲ್ಲ ಬಗೆಯ ವಾಹನ ಮಾಲೀಕರು ಸಾರ್ವಜನಿಕ ಹಾದಿಬೀದಿಗಳಲ್ಲಿ ಹಾಗೂ ಪಾದಾಚಾರಿ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕ್ ಮಾಡಿದರೆ ಹಾಗೂ ವಾಹನಗಳನ್ನು ತೊಳೆಸಿದರೆ, ದುರಸ್ತಿ ಮಾಡಿಸಿದರೆ, ಹಾಗೆ ಮಾಡಿದ ಪ್ರತಿಸಲಕ್ಕೂ 25 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು.
6. ಕಲ್ಯಾಣ ಮಂಟಪಗಳನ್ನು ಹಾಗೂ ಹೊಟೇಲುಗಳನ್ನು ಇಟ್ಟುಕೊಂಡಿರುವವರು, ತ್ಯಾಜ್ಯಗಳನ್ನು ಹಾಕಲು ತಮ್ಮದೇ ಆದ ವ್ಯವಸ್ಥೆಗಳನ್ನು ಮಾಡಿಕೊಂಡಿರಬೇಕು. ಹಾಗೆ ಮಾಡಿಕೊಂಡಿರದಿದ್ದರೆ ಹಾಗೂ ಬಳಕೆದಾರರು ಸಾರ್ವಜನಿಕ ರಸ್ತೆಗಳಲ್ಲಿ ತ್ಯಾಜ್ಯವನ್ನು

ಹೊರಗೆಸೆಯಲು ಆಸ್ಪದ ಮಾಡಿಕೊಟ್ಟರೆ, ಹಾಗೆ ಮಾಡಿದ ಪ್ರತಿ ಸಲಕ್ಕೂ 50 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು.

7. ಎಮ್ಮೆಗಳ ಹಾಗೂ ಹಸುಗಳ ಮಾಲೀಕರು ಸಾರ್ವಜನಿಕ ಹಾದಿ ಬೀದಿಗಳಲ್ಲಿ ಹಾಗೂ ಪಾದಾಚಾರಿ ರಸ್ತೆಗಳಲ್ಲಿ ಎಮ್ಮೆಗಳನ್ನು, ಹಸುಗಳನ್ನು ಕಟ್ಟಿ ಹಾಕಿ, ಆ ಜಾಗದಲ್ಲಿ ಮಾಲಿನ್ಯ ಉಂಟು ಮಾಡಿದರೆ ಹಾಗೆ ಮಾಡಿದ ಮೊದಲ ಸಲಕ್ಕೆ 25 ರೂಪಾಯಿ ದಂಡಕ್ಕೆ ಹಾಗೂ ಹಾಗೆ ಮಾಡಿದ ಪ್ರತಿ ಸಲಕ್ಕೂ ಒಂದು ವಾರದ ಸಾದಾ ಕಾರಾವಾಸಕ್ಕೆ ಗುರಿಯಾಗತಕ್ಕದ್ದು.
8. ಕಟ್ಟಡಗಳ ನಿರ್ಮಾಣದ ಕಂಟ್ರಾಕ್ಟರುಗಳು ತಮ್ಮ ಸಾಮಗ್ರಿಗಳನ್ನು ಸಾರ್ವಜನಿಕ ರಸ್ತೆಯಲ್ಲಿ ಹಾಗೂ ಪಾದಾಚಾರಿ ರಸ್ತೆಗಳಲ್ಲಿ ರಾಶಿ ಹಾಕಿಸಿಕೊಂಡು ಸಾರ್ವಜನಿಕರ ಹಾಗೂ ಪೌರಕಾರ್ಮಿಕರ ವಾಡಿಕೆಯ ಚಟುವಟಿಕೆಗಳಿಗೆ ಅಡ್ಡಿ ಅಡಚಣೆ ಉಂಟು ಮಾಡಿದರೆ, ಹಾಗೆ ಮಾಡಿದ ಪ್ರತಿ ಸಲಕ್ಕೂ 50 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು.
9. ಅಂಗಡಿ ಮಾಲೀಕರು, ಅದಾಗಲೇ ಸ್ವಚ್ಚಗೊಳಿಸಿದ್ದ ರಸ್ತೆಗಳಿಗೆ ಕಸಕಡ್ಡಿಗಳನ್ನು ಹಾಕಿದರೆ, ಹಾಗೆ ಮಾಡಿದ ಪ್ರತಿ ಸಲಕ್ಕೂ 50 ರೂಪಾಯಿ ದಂಡಕ್ಕೆ ಗುರಿಯಾಗತಕ್ಕದ್ದು.

ಈ ಬೈಲಾಗಳನ್ನು ಎಲ್ಲ ಸ್ಥಳೀಯ ಮಂಡಳಿಗಳು ವ್ಯಾಪಕವಾಗಿ ಪ್ರಚಾರ ಮಾಡಬೇಕೆಂದು ಹಾಗೂ ಈ ಹೊಸ ಬೈಲಾಗಳಲ್ಲಿ ಹೇಳಿರುವ ದಂಡಗಳನ್ನು ಸಾರ್ವಜನಿಕರ ಗಮನಕ್ಕೆ ತರಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. ಈ ಬೈಲಾಗಳ ಬಗ್ಗೆ ಸಾರ್ವಜನಿಕರು ಆದ್ಯಂತವಾಗಿ ತಿಳಿದುಕೊಳ್ಳಲು ಯಾವ ಸಮಯವನ್ನು ನಿಗದಿ ಮಾಡಬೇಕಾಗಿದೆಯೋ ಆ ಸಮಯ ಮುಗಿದ ನಂತರ ಆಯಾಯ ಮುನಿಸಿಪಾಲಿಟಿಗಳು ಈ ಬೈಲಾಗಳ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

# ಅಧ್ಯಾಯ XX
## ಪೌರಕಾರ್ಮಿಕರಿಗೆ ಹಾಗೂ ಸ್ಥಳೀಯ ಮಂಡಳಿಗಳ ಮೇಲ್ವಿಚಾರಣಾ ಸಿಬ್ಬಂದಿಗಳಿಗೆ ಒಂದು ಮನವಿ

ಪ್ರಾಮಾಣಿಕವಾದ ಯಾವ ಕೆಲಸವೂ ಸ್ವಾಭಿಮಾನಕ್ಕೆ, ಘನತೆ ಗೌರವಕ್ಕೆ ಕುಂದು ತರುವಂಥದ್ದಾಗಿರುವುದಿಲ್ಲ. ಆದರೆ, ದುರಾದೃಷ್ಟವೆಂದರೆ ಪೌರಕಾರ್ಮಿಕ ವೃತ್ತಿಯು ಒಂದು ತುಚ್ಛ ವೃತ್ತಿಯೆಂದು ಭಾವಿಸಲ್ಪಟ್ಟಿದೆ. ಇದಕ್ಕೆಲ್ಲಾ ಪೌರಕಾರ್ಮಿಕರಿಂದಾಗಿರುವ ತಪ್ಪೇ ಕಾರಣ. ಏಕೆಂದರೆ ಆ ವೃತ್ತಿಯ ಬಗೆಗೆ ಅವರಿಗಿರುವ ಅಜ್ಞಾನ ಹಾಗೂ ಮೂಢ ನಂಬಿಕೆಗಳಿಗೆ ಅಂಟಿಕೊಂಡಿರುವುದರಿಂದಾಗಿ ಇತರರು ಈ ವೃತ್ತಿಯನ್ನು ಕೀಳು ವೃತ್ತಿಯೆಂದು ಭಾವಿಸಿದ್ದಾರೆ.

ಕಸಗುಡಿಸುವವರು ಹಾಗೂ ಜಾಡಮಾಲಿಗಳು ಶೋಷಿತ ಹಾಗೂ ದಮನಿತ ಸಮುದಾಯದವರೆಂಬುದೇನೋ ನಿಜ. ಆದರೂ, ಭಾರತ ಗಣರಾಜ್ಯದ ಸಂವಿಧಾನವು ಅವರಿಗೂ ಹೊಸ ಗೌರವ ಹಾಗೂ ಘನತೆಯನ್ನು ಕಲ್ಪಿಸಿದೆ ಮತ್ತು ತಮ್ಮ ಸ್ಥಿತಿಗತಿಯನ್ನು ಸಾಧ್ಯವಾದ ಎಲ್ಲ ರೀತಿಯಲ್ಲೂ ಅವರೇ ಸ್ವತಃ ಸುಧಾರಣೆ ತಂದುಕೊಳ್ಳಲು ಅವರಿಗೆ ಅಡೆತಡೆ ಯಾವುದೂ ಇಲ್ಲ. ಸಂವಿಧಾನವು ಖಾತ್ರಿಯಾಗಿ ಕೊಟ್ಟಿರುವ ಎಲ್ಲ ಅವಕಾಶಗಳನ್ನು ಅವರು ಬಳಸಿಕೊಂಡು ಬದುಕಿನ ಬಗ್ಗೆ ತಮಗಿರುವ ದೃಷ್ಟಿಕೋನವನ್ನು ಹಾಗೂ ವಿಧಾನವನ್ನು ಬಳಸಿಕೊಳ್ಳಬಹುದಾಗಿದೆ.

ಪೌರಕಾರ್ಮಿಕರು ತಮ್ಮ ವೃತ್ತಿ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬೇಕು. ಇಡೀ ಸಮುದಾಯದ ಆರೋಗ್ಯ ಹಾಗೂ ನೈರ್ಮಲ್ಯಕ್ಕೆ ತಾವೇ ಜವಾಬ್ದಾರರೆಂಬುದನ್ನು ಅವರು ತಿಳಿದುಕೊಳ್ಳಬೇಕು ಹಾಗೂ ಬೇರೆಯವರಿಗಿಂತ ತಾವೇನೂ ಕಡಿಮೆ ಇಲ್ಲವೆಂದು ಭಾವಿಸಿಕೊಳ್ಳಬೇಕು.

ಈ ದಿನಗಳಲ್ಲಿ ಸಮಾಜಕ್ಕೆ ಪೌರಕಾರ್ಮಿಕರ ಸೇವೆಯ ಅವಶ್ಯಕತೆಯಿದೆಯಾದರೂ, ಅವರೂ ಸಮಾಜವು ನಮ್ಮ ಸಮಾನರೇ ಎಂದು ಒಪ್ಪಿಕೊಂಡಿಲ್ಲ. ಇದಕ್ಕೆ ನಮ್ಮ ರಾಷ್ಟ್ರವನ್ನು ಕೊರೆಯುತ್ತಿರುವ ಅನಿಷ್ಟ ಜಾತಿ ಪದ್ಧತಿಯೇ ಕಾರಣ. ಈ ವೃತ್ತಿಗೆ ಹೀಗೆ ಹೊಸ ಕಳಂಕ ಅಂಟಿಕೊಂಡಿದೆ. ಆದರೆ ಪೌರಕಾರ್ಮಿಕರೇ ಈ ವೃತ್ತಿಯನ್ನು ಗೌರವಯುತವಾದುದನ್ನಾಗಿ ಮಾಡುವ ಮೂಲಕ ಅದಕ್ಕೆ ಅಂಟಿಕೊಂಡಿರುವ ಕಳಂಕವನ್ನು ತೊಡೆದು ಹಾಕಬಹುದಾಗಿದೆ.

ಈ ದಿನಗಳಲ್ಲಿ, ಸಮಾಜದ ಕಣ್ಣಿಗೆ ಪೌರಕಾರ್ಮಿಕರು ಕೀಳಾಗಿ ಕಾಣುತ್ತಿರುವುದಕ್ಕೆ ಅವರ ದುರಭ್ಯಾಸಗಳೇ ಕಾರಣ. ಪಟ್ಟಣವನ್ನು ಸ್ವಚ್ಛವನ್ನಾಗಿಡುವ ಈ ಜನರು ತಮ್ಮನ್ನೇ ಸ್ವಚ್ಛವಾಗಿಟ್ಟುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಈ ವೃತ್ತಿಯು ಅವರನ್ನು ಕೊಳಕಾಗಿಸಿಲ್ಲ, ಬದಲಿಗೆ ಅವರುಗಳೇ ಈ ವೃತ್ತಿಯನ್ನು ಕೊಳಕಾಗಿಸಿದ್ದಾರೆ. ಪೌರಕಾರ್ಮಿಕರು ಏನೇ ಆಗಲಿ ತಮ್ಮನ್ನು ಸ್ವತಃ ಶುಭ್ರವಾಗಿಟ್ಟುಕೊಳ್ಳಬೇಕೆಂದು ಹಾಗೂ ನೈರ್ಮಲ್ಯ ದಿಂದಿರಬೇಕೆಂದು ಸಮಿತಿಯು ಅವರಿಗೆ ಮನವಿ ಮಾಡಿಕೊಳ್ಳುತ್ತದೆ.

ಪೌರಕಾರ್ಮಿಕರು, ಅವರದೇ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಈ ಮುಂದೆ ಹೇಳಿರುವ ಕೆಲವೊಂದು ಸಲಹೆಗಳನ್ನು ಪಾಲಿಸಬೇಕೆಂದು ಸಮಿತಿಯು ಪೌರಕಾರ್ಮಿಕರಿಗೆ ಮನವಿ ಮಾಡಿಕೊಳ್ಳುತ್ತದೆ.

1. ಸ್ನಾನ ಮಾಡಲು ದುಡ್ಡೇನು ಖರ್ಚಾಗುವುದಿಲ್ಲ. ದಿನದ ಕೆಲಸ ಮುಗಿಸಿ ಮನೆಗೆ ಹೋದ ಮೇಲೆ ಸ್ನಾನ ಮಾಡಿ ಮೈ ತೊಳೆದುಕೊಂಡು ನೀಟಾಗಿರಬೇಕು. ಬಟ್ಟೆಗಳನ್ನು ಒಗೆದು ಕೊಳ್ಳಬೇಕು. ಈ ಕೆಲಸಗಳನ್ನು ಉಪೇಕ್ಷೆ ಮಾಡುವುದರಿಂದ ಪೌರಕಾರ್ಮಿಕರು ಕೊಳಕಾಗಿ ಹಾಗೂ ಕೆದರಿ ಕೊಂಡಂತೆ ಕಾಣುತ್ತಾರೆ. ಹೀಗಾಗಿ ಇತರರು ಅವರಿಂದ ದೂರ ಇರುತ್ತಾರೆ. ಆದ್ದರಿಂದ ಪೌರಕಾರ್ಮಿಕರು ಸಾಧ್ಯವಾದಷ್ಟು ಆಗಾಗ ಸ್ನಾನ ಮಾಡಬೇಕು ಹಾಗೂ ನಿಯತ ಮಧ್ಯಂತರಗಳಲ್ಲಿ ಮುಖ ಕ್ಷೌರ ಮಾಡಿಕೊಳ್ಳಬೇಕು.
2. ಕೆಲಸ ಮಾಡದಿರುವಾಗ ಪೌರಕಾರ್ಮಿಕರು ಕೆಲಸದ ಸಮವಸ್ತ್ರವನ್ನು ಧರಿಸಲೇಬಾರದು. ಈ ದಿನಗಳಲ್ಲಿ ಪೌರಕಾರ್ಮಿಕರು ದಿನದ 24 ಗಂಟೆಗಳೂ ಕೆಲಸದ ಸಮವಸ್ತ್ರದಲ್ಲೇ

ಇರುತ್ತಾರೆ. ನೋಡುವವರು ಇವರನ್ನು ಕಸಗುಡಿಸುವವರು, ಜಾಡಮಾಲಿಗಳೆಂದು ಕೊಳ್ಳುತ್ತಾರೆ. ತಮ್ಮ ಕೆಲಸವಾದ ಮೇಲೆ ಪೌರಕಾರ್ಮಿಕರು, ತಮ್ಮ ಸಮವಸ್ತ್ರವನ್ನು ಕೂಡಲೇ ಬಿಚ್ಚಿಟ್ಟು ಬೇರೆ ಬಟ್ಟೆ ಹಾಕಿಕೊಂಡ ನಂತರವೇ ಮುನಿಸಿಪಲ್ ಕಾರ್ಯಾಲಯದ ಆವರಣವನ್ನು ಬಿಡಬೇಕು.

3. ಪೊರಕೆಗಳನ್ನಾಗಲಿ ಅಥವಾ ಇತರ ಕೆಲಸದ ಸಲಕರಣೆಗಳನ್ನಾಗಲಿ ಹೆಗಲ ಮೇಲೆ ಹೊತ್ತು ಒಯ್ಯಬಾರದು. ತಮ್ಮ ಕೆಲಸ ಮುಗಿದ ಮೇಲೆ ಅವುಗಳನ್ನು ಮನೆಗೆ ಒಯ್ಯಬಾರದು. ಬರಿ ಕೈಗಳಿಂದ ಕಸಕಡ್ಡಿಯನ್ನು, ಹೊಲಸನ್ನು ಮುಟ್ಟಲೇಬಾರದು. ಮಲ್ಕಾನಿ ಸಮಿತಿಯ ವರದಿಯಲ್ಲಿ ಶಿಫಾರಸು ಮಾಡಿರುವಂತೆ ಮುನಿಸಿಪಾಲಿಟಿಯು ಸಲಕರಣೆಗಳನ್ನು ಸರಬರಾಜು ಮಾಡದೇ ಹೋದರೆ, ಸರಬರಾಜು ಮಾಡಬೇಕೆಂದು ಪೌರಕಾರ್ಮಿಕರು ತಗಾದೆ ಮಾಡಬೇಕು.
4. ಪೌರಕಾರ್ಮಿಕರಿಗೆ ಕೆಟ್ಟ ಹೆಸರು ಬರುವಂತೆ ಮಾಡಿರುವ ಇನ್ನೊಂದು ವಾಸ್ತವಾಂಶ ಯಾವುದೆಂದರೆ ಕುಡಿತದ ಚಟ. ಈ ಚಟ ಹತ್ತಿತೆಂದರೆ ಬಿಡುವುದು ಕಷ್ಟ. ಆದರೆ, ಕೊನೆಪಕ್ಷ ಕುಡಿಯುವ ಪ್ರಮಾಣವನ್ನಾದರೂ ಕಡಿಮೆ ಮಾಡಿಕೊಳ್ಳಬೇಕು. ಕುಡಿದ ನಂತರ ಕೆಲಸಕ್ಕೆ ಹೋಗಲೇಬಾರದು ಅಥವಾ ಸಾರ್ವಜನಿಕರಿಗೆ ಕಾಣಿಸಿಕೊಳ್ಳಬಾರದು. ತಮ್ಮ ಮಕ್ಕಳು ಹೆಂಡತಿ ಸಮಕ್ಷಮ ಕುಡಿಯಲೇಬಾರದು ಹಾಗೂ ಮದ್ಯಪಾನೀಯ ಅಂಗಡಿಯಿಂದ ಮದ್ಯ ತಂದು ಕೊಡುವಂತೆ ಹೆಂಡತಿ ಮಕ್ಕಳಿಗೆ ಹೇಳಲೇಬಾರದು.
5. ಪೌರಕಾರ್ಮಿಕರು ವಿದ್ಯಾಭ್ಯಾಸದ ಮಹತ್ವವನ್ನು ತಿಳಿದುಕೊಳ್ಳಬೇಕು. ಏನೇ ಆಗಲಿ, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಕಲಿತ ವಿದ್ಯೆ ಕೊನೆಯವರೆಗೂ ಇರುತ್ತದೆಯೋ ಹೊರತು ಸಂಪತ್ತು ಇರುವುದಿಲ್ಲ. ತಮ್ಮ ವೈಯಕ್ತಿಕ ಅಗತ್ಯಗಳಿಗೆ ಆದ್ಯತೆ ಕೊಡದೆ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ತಮ್ಮ ಮಕ್ಕಳನ್ನು ತಾವು ಕೆಲಸ ಮಾಡುವ ಜಾಗಗಳಿಗೆ ಯಾವ ಕಾಲದಲ್ಲೂ ಕರೆದುಕೊಂಡು ಹೋಗಲೇಬಾರದು.
6. ಅನಾವಶ್ಯಕವಾಗಿ ಖರ್ಚು ಮಾಡುವುದರಿಂದ ಪೌರಕಾರ್ಮಿಕರು ಹಣಕಾಸಿನಲ್ಲಿ ದುರ್ಬಲರಾಗುತ್ತಿದ್ದಾರೆ. ಶೋಷಕರಿಂದ ಶೋಷಣೆಗೆ ಬಲಿಯಾಗುತ್ತಿದ್ದಾರೆ. ಸಾಲದ ಸುಳಿಗೆ ಸಿಲುಕಿಸುವ ಅನಾವಶ್ಯಕ ಹಾಗೂ ಅಸಮಂಜಸ ರೂಢಿ ಆಚರಣೆಗಳಿಗೆ ಪೌರಕಾರ್ಮಿಕರು ಖರ್ಚು ವೆಚ್ಚ ಮಾಡಲೇಬಾರದು. ತಮ್ಮ ಬದುಕಿನ ಉನ್ನತಿಗೆ ಅಥವಾ ಕುಟುಂಬದ ಜೀವನ ಮಟ್ಟದ ಏಳಿಗೆಗೆ ಅವರುಹಣ ಖರ್ಚು ಮಾಡುತ್ತಿಲ್ಲ. ಬದಲಿಗೆ ಅನಗತ್ಯ ರೂಢಿ ಆಚರಣೆಗಳಿಗಾಗಿ ಖರ್ಚುವೆಚ್ಚ ಮಾಡುತ್ತಾರೆ. ಆದ್ದರಿಂದ, ಅವಶ್ಯಕತೆಗಳಿಗಾಗಿ ಖರ್ಚು ಮಾಡಬೇಕೆಂದು ಮತ್ತು ಅನಗತ್ಯ ವಸ್ತುಗಳಿಗಾಗಿ ಖರ್ಚು ಮಾಡಬಾರದೆಂದು ಪೌರಕಾರ್ಮಿಕರಿಗೆ ಸಮಿತಿಯು ಮನವಿ ಮಾಡಿಕೊಳ್ಳುತ್ತದೆ.

ಸರಿಯಾದ ರೀತಿಯಲ್ಲಿ ಪೌರಕಾರ್ಮಿಕರಿಗೆ ಸಲಹೆ ಕೊಡುವವರು ಅಥವಾ ಮಾರ್ಗದರ್ಶನ ಮಾಡುವವರು ಯಾರೂ ಇಲ್ಲದಿರುವುದರಿಂದ ಸಮಿತಿಯು ಸ್ಥಳೀಯ ಸಂಸ್ಥೆಗಳ ಆಡಳಿತ ವೃಂದದಲ್ಲಿರುವವರಿಗೆ, ಅವರು ಪೌರಕಾರ್ಮಿಕ ಸಹ–ನಾಗರಿಕರಾದ್ದರಿಂದ ಹಾಗೂ ರಾಷ್ಟ್ರದ ಸೇವೆಯಲ್ಲಿರುವ ಸಹೋದ್ಯೋಗಿಗಳಾದ್ದರಿಂದ ಪೌರಕಾರ್ಮಿಕರಿಗೆ ಸಲಹೆ ನೀಡಬೇಕೆಂದು ಹಾಗೂ ಮಾರ್ಗದರ್ಶನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತದೆ.

# ಅಧ್ಯಾಯ XXI

## ಪೌರಕಾರ್ಮಿಕ ದಿನಾಚರಣೆ

ಪೌರಕಾರ್ಮಿಕರಲ್ಲಿ ಏಕತೆ ಮತ್ತು ಒಗ್ಗಟ್ಟಿನ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಹಾಗೂ ಪೌರಕಾರ್ಮಿಕರು ಸಲ್ಲಿಸುತ್ತಿರುವ ಸೇವೆ ಬಗ್ಗೆ ಸಮುದಾಯದ ಇತರೆ ವರ್ಗಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ವರ್ಷಕ್ಕೊಮ್ಮೆ "ಪೌರಕಾರ್ಮಿಕ ದಿನ" ವನ್ನು ರಾಜ್ಯದಲ್ಲಿರುವ ಎಲ್ಲ ಸ್ಥಳೀಯ ಸಂಸ್ಥೆಗಳು ಆಚರಿಸುವುದು ಆವಶ್ಯಕ.

ಆದ್ದರಿಂದ, ಈ ಸಮಿತಿಯನ್ನು ರಚಿಸಿದ ದಿನವಾದ ಸೆಪ್ಟೆಂಬರ್ 23 ನ್ನು ಅಥವಾ ಸಮಿತಿಯನ್ನು ಅಧಿಕೃತವಾಗಿ ಪ್ರಾರಂಭಿಸಿದ ದಿನವಾದ ಫೆಬ್ರವರಿ 22 ನ್ನು ರಾಜ್ಯದಾದ್ಯಂತ 'ಪೌರ ದಿನ'ವೆಂದು ಸರ್ಕಾರವು ಘೋಷಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಆ ದಿನ ಎಲ್ಲ ಪೌರಕಾರ್ಮಿಕರಿಗೆ ರಜಾ ದಿನವಾಗಿರಬೇಕು. ಆ ವಾರ್ಷಿಕ ದಿನದ ಸಮಾರಂಭದಲ್ಲಿ ಪೌರಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿ ತಮ್ಮ ಹೆಂಡತಿ ಮಕ್ಕಳೊಂದಿಗೆ ಭಾಗಿಯಾಗಬೇಕು. ಆ ದಿನ ಸ್ಥಳೀಯ ಮಂಡಳಿಗಳು ಸೂಕ್ತ ಸಮಾರಂಭಗಳನ್ನು ಏರ್ಪಡಿಸಬೇಕು. ಅಂತಹ ಸಮಾರಂಭದಲ್ಲಿ–

(1) ಅತ್ಯಂತ ಸರಿಯಾದ ರೀತಿಯಲ್ಲಿ ಪೌರಕಾರ್ಮಿಕರ ವಸತಿಗಳ ನಿರ್ವಹಣೆ ಮಾಡಿರುವುದಕ್ಕಾಗಿ

(2) ಸರಿಯಾದ ರೀತಿಯಲ್ಲಿ ಪೌರಕಾರ್ಮಿಕರ ಬಡಾವಣೆಗಳ ನಿರ್ವಹಣೆ ಮಾಡಿರುವುದಕ್ಕಾಗಿ

(3) ವಿದ್ಯಾಭ್ಯಾಸದಲ್ಲಿ ಬಹು ಒಳ್ಳೆಯ ಪ್ರಗತಿ ಮಾಡಿರುವ ಪೌರಕಾರ್ಮಿಕರ ಮಕ್ಕಳಿಗೆ

(4) ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ

(5) ಅಭಿನಯ ಪ್ರತಿಭೆಗಳಿಗೆ

(6) ತನಗೊಪ್ಪಿಸಿದ ಪ್ರದೇಶವನ್ನು ಪೌರಕಾರ್ಮಿಕರು ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಇಟ್ಟುಕೊಂಡಿರುವುದಕ್ಕಾಗಿ

(7) ವರ್ಷವಿಡೀ ಪ್ರಾಮಾಣಿಕವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾದುದಕ್ಕಾಗಿ ಬಹುಮಾನಗಳನ್ನು ಹಾಗೂ ಪಾರಿತೋಷಕಗಳನ್ನು ವಿತರಣೆ ಮಾಡಬಹುದಾಗಿದೆ.

(8) ಆಯಾಯ ಸ್ಥಳದ ಗಣ್ಯರನ್ನು ಸಮಾರಂಭದಲ್ಲಿ ಭಾಗಿಯಾಗಲು ಆಮಂತ್ರಣ ನೀಡಬೇಕು. ಗಣ್ಯರಿಗೆ ಹಾಗೂ ಪೌರಕಾರ್ಮಿಕರಿಗೆ ಸಮಾರಂಭಕ್ಕೆ ಮುಂಚೆಯಾಗಲಿ ಅಥವಾ ಸಮಾರಂಭದ ನಂತರವಾಗಲಿ ಲಘು ಉಪಹಾರದಿಂದ ಸತ್ಕರಿಸಬೇಕು.

# ಅಧ್ಯಾಯ XXII

## ಪುನರ್ ವ್ಯವಸ್ಥೆ

ಸೇವೆಯಿಂದ ನಿವೃತ್ತರಾಗುವ ಪೌರಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಜೀವನ ನಡೆಸಲು ಕೆಲಸ ಸಿಗುವುದಿಲ್ಲ. ದೈಹಿಕವಾಗಿ ಗಟ್ಟಿಮುಟ್ಟನಿಂದಿದ್ದ ಕಾಲದಲ್ಲಿ ಜನಾರೋಗ್ಯ ನಿರ್ವಹಣೆ ಸಲುವಾಗಿ ಅತಿ ದುಡಿಮೆಯ ಮತ್ತು ಅಪಾಯಕಾರಕ ಕೆಲಸ ಮಾಡಿದ ಇವರುಗಳು ವಯಸ್ಸಾಗುತ್ತಿದ್ದಂತೆ ಅವಗಣನೆಗೆ ಹಾಗೂ ನಿಂದನೆಗೆ ಒಳಗಾಗುತ್ತಾರೆ. ಅರ್ಧಕ್ಕೂ ಹೆಚ್ಚು ಸಂದರ್ಭಗಳಲ್ಲಿ ಬಂಧುಬಳಗದವರೇ ತೊರೆದು ಬಿಡುತ್ತಾರೆ. ಮನೆ ಇರೋಲ್ಲ, ವೈದ್ಯಕೀಯ ಚಿಕಿತ್ಸೆ ಆರೈಕೆ ಇರಲ್ಲ ಹಾಗೂ ಸಮಾಧಾನ, ಸಾಂತ್ವನ ಹೇಳಲು ಯಾರೂ ಇರಲ್ಲ.

ಸಮಾಜಕ್ಕೆ ಪೌರಕಾರ್ಮಿಕರ ಅವಶ್ಯಕತೆ ಇದೆ ಎನ್ನುವುದನ್ನು ಅವರಿಗೆ ಮನವರಿಕೆ ಮಾಡಿಕೊಡುವುದು, ಅವರಲ್ಲಿ ಮನೋ ಸ್ಥೈರ್ಯ ತುಂಬುವುದು ಈಗ ಬಹು ಮುಖ್ಯವಾಗಿ ಆಗಬೇಕಾದ ಕಾರ್ಯ. ದೇಶದ ಆರ್ಥಿಕ ಅಭಿವೃದ್ಧಿಗೆ ಅವರೂ ಕೂಡ ತಮ್ಮ ಕೈಲಾದಷ್ಟು ಕೊಡುಗೆ ನೀಡುತ್ತಿದ್ದಾರೆಂಬುದನ್ನು ಹಾಗೂ ಯಾವುದೇ ಪ್ರಯೋಗಾರ್ಥ ಜೀವನದ ಬದಲು ಸ್ವತಂತ್ರ ಜೀವನವನ್ನು ಕಟ್ಟಿಕೊಳ್ಳಬಲ್ಲರೆಂಬುದನ್ನು ಸ್ವಾವಲಂಬಿಗಳಾಗಬಲ್ಲರೆಂಬುದನ್ನು ಅವರಿಗೆ ತಿಳಿ ಹೇಳಬೇಕು. ಈ ನಿವೃತ್ತ ಪೌರಕಾರ್ಮಿಕರನ್ನು 1. ಚಾಪೆ ಹೆಣೆಯುವುದು 2. ತೆಂಗಿನ ನಾರು ನೇಯುವುದು 3. ಚರ್ಮ ಹದ ಮಾಡುವುದು 4. ಬೂಟು ತಯಾರಿಸುವುದು ಮತ್ತು ಇತರ ಚರ್ಮದ ವಸ್ತುಗಳನ್ನು ತಯಾರಿಸುವುದು ಮುಂತಾದ ಕರಕುಶಲ ಹಾಗೂ ಗ್ರಾಮ ಕೈಗಾರಿಕೆಗಳಲ್ಲಿ ನೇಮಕ ಮಾಡಿಕೊಳ್ಳಬಹುದು. ಈಗಾಗಲೇ ಶಿಫಾರಸು ಮಾಡಿರುವಂತೆ ಪುನರ್ ವ್ಯವಸ್ಥೆ ಕಾರ್ಯವನ್ನು ಪ್ರಸ್ತಾವಿತ ಪೌರಕಾರ್ಮಿಕ ಮಂಡಳಿಯು ಕೈಗೊಳ್ಳುತ್ತದೆ.

ಪೌರಕಾರ್ಮಿಕರು ಯಾರಾದರೂ ವ್ಯವಸಾಯವನ್ನು ಕೈಗೊಳ್ಳಬಯಸಿದರೆ ಅಂಥವರಿಗೆ ಭೂಸುಧಾರಣೆಗಳ ಕಾಯಿದೆ ಪ್ರಕಾರ ಈಗಿರುವ ಹೆಚ್ಚುವರಿ ಭೂಮಿಗಳ ಪೈಕಿ ಸೂಕ್ತ ಭೂಮಿಯನ್ನು ವ್ಯವಸಾಯದ ಉದ್ದೇಶಕ್ಕಾಗಿ ಹಂಚಿಕೆ ಮಾಡಬೇಕು.

# ಅಧ್ಯಾಯ XXIII

## ಹಣಕಾಸು ಸಂಪನ್ಮೂಲ

ತಮ್ಮಲ್ಲಿರುವ ಹಣಕಾಸು ಸಂಪನ್ಮೂಲ ತೀರಾ ಸೀಮಿತವಿರುವುದರಿಂದ ಹಾಗೂ ತುಂಬಾನೆ ಕಡಿಮೆ ಇರುವುದರಿಂದಾಗಿ ಸಮಿತಿಯ ಪ್ರಸ್ತಾವನೆಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲವೆಂದು ಸ್ಥಳೀಯ ಸಂಸ್ಥೆಗಳು ಹೇಳುವ ಸಾಧ್ಯತೆ ಉಂಟು. ಅಂಥದೊಂದು ಆಕ್ಷೇಪಣೆಯನ್ನು ಅವು ಎತ್ತದಂತೆ ಮಾಡಲು ಅವು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸಮಿತಿಯು ಈ ಮುಂದಿನಂತೆ ಶಿಫಾರಸು ಮಾಡುತ್ತದೆ.

1. ಹಣಕಾಸಿನ ಕೊರತೆ ಇರುವ ಸ್ಥಳೀಯ ಮಂಡಳಿಗಳಿಗೆ ಎಂದರೆ ಅರ್ಹ ಮಂಡಳಿಗಳಿಗೆ ರಾಜ್ಯ ಸರ್ಕಾರವು ಹಣಕಾಸಿನ ನೆರವನ್ನು ಕೊಡಬೇಕು.
2. ತಮ್ಮ ಸ್ಥಳೀಯ ಅಧಿಕಾರ ವ್ಯಾಪ್ತಿಯೊಳಗೆ, ತೆರಿಗೆ ವಿಧಿಸಬಹುದಾದ ಎಲ್ಲ ಬಾಬುಗಳಿಗೆ ಶೇ 6 ರಷ್ಟು ಹೆಚ್ಚುವರಿ ವಿಶೇಷ ಉಪಕರವನ್ನು ಸ್ಥಳೀಯ ಸಂಸ್ಥೆಗಳೇ ವಿಧಿಸಬಹುದು.
3. ಮುನಿಸಿಪಲ್ ಸರಹದ್ದುಗಳ ಒಳಗಿರುವ ಮದ್ಯದ ಅಂಗಡಿಗಳ ಮೇಲೆ ಈಗಾಗಲೇ ವಿಧಿಸಿರುವ ಲೆವಿಯನ್ನು ಸ್ಥಳೀಯ ಸಂಸ್ಥೆಗಳು ಹೆಚ್ಚಿಸಬೇಕು.
4. ಸ್ಥಳೀಯ ಸಂಸ್ಥೆಗಳು ಭೂ ನಿರ್ಧರಣೆಯನ್ನು ನಿವಾಸದ ಮನೆಗಳ ಮೇಲೆ ಶೇ.5 ರಷ್ಟು ಮತ್ತು ನಿವಾಸೇತರ ಕಟ್ಟಡಗಳ ಮೇಲೆ ಶೇ.15 ರಷ್ಟು ಹೆಚ್ಚಿಸಬೇಕು.
5. ಮುನಿಸಿಪಲ್ ಸರಹದ್ದುಗಳ ಒಳಗಿರುವ ಎಲ್ಲ ಸಿನೆಮಾ ಮಂದಿರಗಳ ಆದಾಯದ ಮೇಲೆ ಶೇ 5 ರಷ್ಟು ವಿಶೇಷ ಲೆವಿಯನ್ನು ವಿಧಿಸಬೇಕು.
6. ಸ್ಥಳೀಯ ಸಂಸ್ಥೆಗಳು ಎಲ್ಲ ರೆಸ್ಟೊರಾಂಟ್‌ಗಳ ಹಾಗೂ ಹೊಟೇಲುಗಳ ಮೇಲೆ ಶೇ 10 ರಷ್ಟು ಲೆವಿಯನ್ನು ವಿಧಿಸಬಹುದು.
7. ಸ್ಥಳೀಯ ಸಂಸ್ಥೆಗಳು ಟೆರಿಲಿನ್, ರೆಯಾನ್, ಸಿಲ್ಕ್ ಮುಂತಾದ ಬಟ್ಟೆಗಳ ಮೇಲೆ ಆಕ್ಟ್ರಾಯಿ ಸುಂಕವನ್ನು ಹೆಚ್ಚಿಸಬಹುದು.
8. ಸ್ಥಳೀಯ ಸಂಸ್ಥೆಗಳು ಮೊದಲಿದ್ದಂತೆಯೇ ವೃತ್ತಿತೆರಿಗೆಯನ್ನು ಪುನಃ ವಿಧಿಸುವ ವಿಷಯವನ್ನು ಪರಿಶೀಲಿಸಬಹುದು.

ಮೇಲೆ ಹೇಳಿರುವಂತೆ ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳು ತಮ್ಮ ಆದಾಯವನ್ನು ಮೇಲೆ ಸಲಹೆ ಮಾಡಿರುವಂತೆ ಹೆಚ್ಚಿಸಿಕೊಳ್ಳುವುದು ಅವಶ್ಯಕವೆಂಬುದನ್ನು ಪರಿಗಣಿಸುತ್ತವೆಂದು ಸಮಿತಿಯು ಪ್ರಾಮಾಣಿಕವಾಗಿ ಆಶಿಸುತ್ತದೆ. ಹೀಗೆ ಸಂಗ್ರಹಿಸಿದ ಹಣವನ್ನು ಪೌರಕಾರ್ಮಿಕರ ಬದುಕಿನ ಮತ್ತು ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವಂತಹ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರಲು ಮೀಸಲಿಡಬೇಕು.

# ಅಧ್ಯಾಯ XXIV

## ಖಾಯಂ ಮಂಡಳಿ ಏಕೆ ಬೇಕು?

ಸ್ವಾತಂತ್ರ್ಯ ಬಂದಾದ ಮೇಲೆ, ಭಾರತ ಸರ್ಕಾರವು ಸಮಾನತಾ ಸಮಾಜಕ್ಕೆ, ಬೇರೆ ಮಾತುಗಳಲ್ಲಿ ಹೇಳುವುದಾದರೆ ಕಲ್ಯಾಣ ರಾಜ್ಯದ ಸರಿಯಾದ ಮಾದರಿಯ ಸಮಾಜಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಿತ್ತು. ಈ ಧ್ಯೇಯವು ಸಾಕಾರಗೊಳ್ಳಲು ಒಕ್ಕೂಟ ಸರ್ಕಾರವು ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲಿನ ಸ್ತರದಿಂದಷ್ಟೇ ಅಲ್ಲ, ಕೆಳಸ್ತರದಿಂದಲೂ ಕೊನೆಯವರೆಗೂ ಅಸ್ತಿತ್ವದಲ್ಲಿ ಇರುವಂತಹ ಬದಲಾವಣೆ ತರಲು ಪ್ರಯತ್ನಿಸಿತು. 1971ರ ಸಾರ್ವತ್ರಿಕ ಚುನಾವಣೆಯ ನಂತರ ನಮ್ಮ ರಾಷ್ಟ್ರದ ಬಹು ಜನಪ್ರಿಯ ನಾಯಕಿ ಶ್ರೀಮತಿ ಇಂದಿರಾ ಗಾಂಧಿಯವರು ರಾಷ್ಟ್ರದಿಂದ ಬಡತನವನ್ನು ಆಖೈರಾಗಿ ತೊಲಗಿಸುವ ಭಾರತ ಸರ್ಕಾರದ ಉದ್ದೇಶವನ್ನು ಪ್ರಕಟಿಸಿದರು. ಈ ಧ್ಯೇಯ ಈಡೇರಬೇಕಾದರೆ ದಿನದಲ್ಲಿ ಒಪ್ಪೊತ್ತಿನ ಊಟಕ್ಕೂ ಹೆಣಗಾಡುತ್ತಿರುವ ತುಳಿತಕ್ಕೊಳಗಾದ ಮಿಲಿಯನ್ ಗಟ್ಟಳೆ ಜನರ ಕ್ಷೇಮಾಭಿವೃದ್ಧಿ ಆವಶ್ಯಕ. ಆದ್ದರಿಂದ ತುಳಿತಕ್ಕೊಳಗಾದ ಸಮುದಾಯದವರ ಕ್ಷೇಮಾಭಿವೃದ್ಧಿಗಾಗಿ ಎಲ್ಲ ರಾಜ್ಯ ಸರ್ಕಾರಗಳಿಗೆ ವಿಶೇಷ ಸೂಚನೆಗಳನ್ನು ನೀಡಲಾಯಿತು.

ಅದರಂತೆ, ಕರ್ನಾಟಕ ಸರ್ಕಾರವು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸರ ಸಕ್ರಿಯ ನೇತೃತ್ವದಲ್ಲಿ ಹಾಗೂ ಪೌರಾಡಳಿತ ಮಂತ್ರಿ ಶ್ರೀ ಬಿ.ಬಸವಲಿಂಗಪ್ಪನವರ ಮುಂದಾಳತ್ವದಲ್ಲಿ ರಾಜ್ಯದಲ್ಲಿ ತುಳಿತಕ್ಕೊಳಗಾದವರ ಹಾಗೂ ದಮನಿತ ಅಲ್ಪ ಸಂಖ್ಯಾತರ ಪ್ರಯೋಜನಕ್ಕಾಗಿ ಅನೇಕ ಕಲ್ಯಾಣ ಹಾಗೂ ಅಭಿವರ್ಧಕ ಯೋಜನೆಗಳನ್ನು ರೂಪಿಸಿತು.

ಬಹುತೇಕ ಕಸಗುಡಿಸುವವರಾಗಿ ಹಾಗೂ ಜಾಡಮಾಲಿಗಳಾಗಿ ಮುನಿಸಿಪಾಲಿಟಿಗಳಲ್ಲಿ ನೇಮಕ ಗೊಂಡಿರುವ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ಜನರು, ತುಳಿತಕ್ಕೊಳಗಾದ ಸಮುದಾಯದ ಪೈಕಿ, ಹೆಚ್ಚು ಶೋಷಣೆಗೊಳಗಾದವರು. ಶತ ಶತಮಾನಗಳಿಂದಲೂ ಈ ಜನರ ಬಗ್ಗೆ ಯಾರೂ ಆಸಕ್ತಿಯನ್ನೇ ತೋರಿಸಿಲ್ಲ. ಈ ಜನರು ಒಟ್ಟಾರೆ ಕಡೆಗಣಿತರಾಗಿದ್ದಾರೆ. ಆ ದಿನಗಳಲ್ಲಿ ಅಧಿಕಾರದಲ್ಲಿದ್ದ ಸರ್ಕಾರಗಳೂ ಕೂಡ ಈ ಜನರ ಸಾಮಾಜಿಕ ಹಾಗೂ ಹಣಕಾಸು ಮಟ್ಟಗಳಲ್ಲಿ ಸುಧಾರಣೆ ತರಲು ಗಮನಹರಿಸಿಯೇ ಇಲ್ಲ. ರಾಷ್ಟ್ರದಲ್ಲಿ ಈ ಜನರ ಜೀವನ ಮಟ್ಟ ಅತ್ಯಂತ ಕೆಳಮಟ್ಟದಲ್ಲಿದೆ. ಹೀಗಾಗಿ, ಅವರ ಮುಂದಿನ ಭವಿಷ್ಯ ತೀರಾ ಮಂಕಾಗಿರುವುದರಿಂದ ಶ್ರೀ ಡಿ. ದೇವರಾಜ ಅರಸರ ಜನಪ್ರಿಯ ಸರ್ಕಾರವು ಈ ಜನರ ಬದುಕಿನಲ್ಲಿ ಹಾಗೂ ಕೆಲಸದ ಸ್ಥಿತಿಗಳಲ್ಲಿ ಆಮೂಲಾಗ್ರ ಬದಲಾವಣೆ ತರುವ ಮನಸ್ಸು ಮಾಡಿತು.

ಈ ಧ್ಯೇಯಗಳನ್ನು ಪರಿಣಾಮಕಾರಿಯಾಗಿ ಆಚರಣೆಗೆ ತರಲು ಹಾಗೂ ಕಾರ್ಯಗತಗೊಳಿಸಲು ಅಷ್ಟೆ ಸಮರ್ಥ ಹಾಗೂ ಸಮರ್ಪಣ ಭಾವದ ಮಂತ್ರಿಯವರಿದ್ದರು. ಅವರೇ ಶ್ರೀ ಬಿ. ಬಸವಲಿಂಗಪ್ಪನವರು. ಆದರ್ಶವಾದಿ ಪೌರಾಡಳಿತ ಮಂತ್ರಿ ಬಿ. ಬಸವಲಿಂಗಪ್ಪನವರು ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಕ್ರಮಗಳನ್ನು ಕೈಗೊಂಡು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಶ್ರೇಷ್ಠ ಸಾಧನೆ ಮಾಡಿದರು. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಶೋಚನೀಯ ಸ್ಥಿತಿಗಳಲ್ಲಿ ಸುಧಾರಣೆ ತರುವಲ್ಲಿ ಅವರ ಕೆಲವು ಸಾಧನೆಗಳನ್ನು ಈ ಮುಂದೆ ಹೇಳಲಾಗಿದೆ:

ಸ್ಥಳೀಯ ಸಂಸ್ಥೆಗಳಲ್ಲಿ ನೇಮಕಗೊಂಡಿರುವ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಏಕ ರೂಪದ ವೇತನ ಶ್ರೇಣೀಗಳೇ ಇರಲಿಲ್ಲ. ಏಕೆಂದರೆ ಒಳ್ಳೆಯ ವೇತನ ಹಾಗೂ ಸೇವಾ ಸ್ಥಿತಿಗತಿಗಳಿಗೆ ಈ ಬಡ ವರ್ಗದ ಜನರ ಸಹಜ ಕೋರಿಕೆಗಳನ್ನು ಮುನಿಸಿಪಲ್ ಕೌನ್ಸಿಲ್‌ಗಳು ಕಡೆಗಣಿಸಿದ್ದವು. ಸರ್ಕಾರದ ನೀತಿಯಲ್ಲಿ ಎಲ್ಲ ಒಪ್ಪಿಕೊಂಡಿದ್ದ ಎಲ್ಲ ತತ್ವಗಳನ್ನು ಗಾಳಿಗೆ ತೂರಿ ತೀರಾ ಅಕ್ರಮ ರೀತಿಯಲ್ಲಿ ಅವರಿಗೆ ಸಂಬಳದಲ್ಲಿ ಅಲ್ಪ ಮೊತ್ತವನ್ನು ಕೊಡಲಾಗುತ್ತಿತ್ತು. ಸೇವಾವಧಿಯುದ್ದಕ್ಕೂ ಅವರಲ್ಲಿ ಕೆಲವರು ಅರೆ–ಕಾಲಿಕ ಆಧಾರದ ಮೇಲೆ ಇನ್ನು

ಕೆಲವರು ದಿನಗೂಲಿ ಆಧಾರದ ಮೇಲೆ ನೌಕರಿಯಲ್ಲಿದ್ದರು. ಯಾವುದೇ ಬಗೆಯ ಸೇವಾ ಭದ್ರತೆ ಅವರಿಗಿರಲಿಲ್ಲ. ವೃದ್ಧಾಪ್ಯದಿಂದಾಗಿ ಅವರ ಸೇವೆಯನ್ನು ಕೊನೆಗೊಳಿಸಿದಾಗ ವಾಸ್ತವವಾಗಿ ಅವರು ಬೀದಿಗೆ ಬೀಳುತ್ತಿದ್ದರು. ಹಸಿವಿನಿಂದ ಬಳಲುತ್ತಿದ್ದರು, ಭಿಕ್ಷೆ ಬೇಡುವ ಸ್ಥಿತಿಗೆ ಬರುತ್ತಿದ್ದರು. ಶ್ರೀ ಬಿ. ಬಸವಲಿಂಗಪ್ಪನವರು ಈ ಜನರ ಈ ಶೋಚನೀಯ ಸ್ಥಿತಿಗೆ ಮಮ್ಮಲ ಮರುಗಿ, ರಾಜ್ಯದಲ್ಲಿರುವ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಸರ್ಕಾರದ ಇಲಾಖೆಗಳ IV ನೇ ದರ್ಜೆ ನೌಕರರಿಗೆ ಇರುವಂತಹ ಸೇವಾ ಪ್ರಯೋಜನಗಳನ್ನು ಸೇವಾ ಷರತ್ತುಗಳನ್ನು ವಿಸ್ತರಿಸುವ ಒಂದು ಹೊಸ ಸರ್ಕಾರಿ ಆದೇಶವನ್ನು ಹೊರಡಿಸಿದರು. ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಇದೊಂದು ತೀರಾ ಪರಿಣಾಮಕಾರಿ ಕ್ರಮ.

ಸರ್ಕಾರಿ ನೌಕರರು ಅನುಭವಿಸುತ್ತಿರುವ ಎಲ್ಲ ಪ್ರಯೋಜನಗಳನ್ನು ಕಸಗುಡಿಸುವವರಿಗೂ ಹಾಗೂ ಜಾಡಮಾಲಿಗಳಿಗೂ ವಿಸ್ತರಿಸುವ ಇತರ ಸರ್ಕಾರಿ ಆದೇಶಗಳನ್ನು ಹೊರಡಿಸಲಾಯಿತು.

ಶತಶತಮಾನಗಳಿಂದಲೂ ಸಮಾಜದಿಂದ ತಿರಸ್ಕಾರಕ್ಕೆ ಹಾಗೂ ಅವಮಾನಕ್ಕೆ ಒಳಗಾಗಿದ್ದು, ತುಳಿತಕ್ಕೊಳಗಾಗಿದ್ದ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಭರವಸೆಯ ಹಾಗೂ ಆಶೋತ್ತರಗಳ ಒಂದು ಹೊಸ ಯುಗವು ತೆರೆದುಕೊಂಡಿತು.

ಕಸಗುಡಿಸುವವರ ಮತ್ತು ಜಾಡಮಾಲಿಗಳ ಪ್ರಯೋಜನಕ್ಕಾಗಿ ಕರ್ನಾಟಕ ಸರ್ಕಾರವು ಈ ಅನೇಕ ಸರ್ಕಾರಿ ಆದೇಶಗಳನ್ನು ಹೊರಡಿಸಿದರೂ, ಅವುಗಳನ್ನು ಯಾವ ಉದ್ದೇಶಕ್ಕಾಗಿ ಹೊರಡಿಸಲಾಗಿತ್ತೋ ಆ ಉದ್ದೇಶದ ಈಡೇರಿಕೆಗಾಗಿ ಕಾರ್ಯಗೊಳಿಸಲಿಲ್ಲ ಎಂದು ಸಮಿತಿಯು ವಿಷಾದದಿಂದಲೇ ಹೇಳಬೇಕಾಗಿದೆ. ಸಾಂಪ್ರದಾಯಿಕ ಅಧಿಕಾರ ಶಾಹಿಗೆ ಈ ಜನರ ಬಗ್ಗೆ ಅನುಕಂಪ ಇಲ್ಲದಿರುವುದು ತಿಳಿವಳಿಕೆ ಇಲ್ಲದಿರುವುದು ಭಾವನೆಗಳಲ್ಲಿ ಕೊರತೆ ಇರುವುದೇ ಕಾರಣ. ಸ್ಥಳೀಯ ಮಂಡಳಿಗಳಲ್ಲಿ ಅಧಿಕಾರಿ ಶ್ರೇಣಿಯ ವಿವಿಧ ಮಟ್ಟಗಳಲ್ಲಿರುವ ಹಲವಾರು ಅಧಿಕಾರಿಗಳು ಈ ಆದೇಶಗಳನ್ನು ಕಾರ್ಯರೂಪಕ್ಕೆ ತರುವ ಗೊಡವೆಗೇ ಹೋಗಿಲ್ಲ ಇಲ್ಲವೆ ಕಸಗುಡಿಸುವವರ ಮತ್ತು ಜಾಡಮಾಲಿಗಳ ಸಮಸ್ಯೆಗಳನ್ನು ತಿಳಿದಕೊಳ್ಳುವ ಸಲುವಾಗಿ ಸಾಕಷ್ಟು ಪ್ರಯತ್ನಗಳನ್ನು ಮಾಡುವ ಗೊಡವೆಗೇ ಹೋಗಿಲ್ಲ.

ಕಾಲಕಾಲಕ್ಕೆ ನೇಮಕಗೊಂಡ ಅನೇಕ ಸಮಿತಿಯ ಸದುದ್ದೇಶವುಳ್ಳ ಹಾಗೂ ಸುವ್ಯವಸ್ಥಿತವಾಗಿ ದಾಖಲಿಸಿದ ವರದಿಗಳನ್ನು ಹಾಗೂ ಶಿಫಾರಸುಗಳನ್ನು ಲೆಕ್ಕಕ್ಕೆ ತೆಗೆದುಕೊಂಡೇ ಇಲ್ಲ ಎಂಬುದು ಎಲ್ಲರಿಗಾಗಿರುವ ವಿಷಾದನೀಯ ಅನುಭವ. ಅಂಥ ಎಲ್ಲ ವರದಿಗಳನ್ನು ಮೂಲೆ ಗುಂಪು ಮಾಡುವ ಅಧಿಕಾರಿಶಾಹಿಯ ಚಾಲಾಕಿತನವೇ ಇದಕ್ಕೆ ಕಾರಣ. ಈ ಶಿಫಾರಸುಗಳಲ್ಲಿ ಒಂದು ತುಣುಕನ್ನು ಕಾರ್ಯರೂಪಕ್ಕೆ ತಂದಿದ್ದರೂ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಅದೃಷ್ಟ ಬಹಳಷ್ಟು ಖುಲಾಯಿಸಿರುತ್ತಿತ್ತು.

ಈ ವಿಷಯಕ್ಕಿರುವ ಇನ್ನೊಂದು ಮುಖವೆಂದರೆ ಕಸಗುಡಿಸುವವರಿಗೂ ಹಾಗೂ ಜಾಡಮಾಲಿಗಳಿಗೂ ಅಸ್ಪೃಶ್ಯತೆಯ ಸಮಸ್ಯೆಗೂ ನಿಕಟ ನಂಟಿದೆ. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ತಾಂಡವ ಮಾಡುತ್ತಿರುವ ಅಸ್ಪೃಶ್ಯತೆ ಅಪರಾಧಗಳನ್ನು ಸರಿಯಾಗಿ ತನಿಖೆ ಮಾಡುತ್ತಿಲ್ಲ ಮತ್ತು ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸುತ್ತಿಲ್ಲ. ಸಮಾಜದ ಸವರ್ಣೀಯರೇ ಇರುವ ಅಧಿಕಾರ ಶಾಹಿಯು ಸಮಾಜದ ಈ ವರ್ಗದವರ ಸುಧಾರಣೆ ಬಗ್ಗೆ ಪೂರ್ವ ನಿರ್ಧಾರಿತ ಭಾವ ಶೂನ್ಯತೆಯುಳ್ಳವರಾಗಿದ್ದಾರೆ. ಈಗಿರುವ ಸ್ಥಿತಿಯೇ ಮುಂದುವರಿಯುವುದರಲ್ಲಿ ಅವರಿಗೆ ಅವರದೇ ಆದ ವೈಯಕ್ತಿಕ ಆಸಕ್ತಿ ಇರುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಾದ ನಂತರ ಕಳೆದ 27 ವರ್ಷಗಳಲ್ಲಿ, ಪರಿಶಿಷ್ಟ ಜಾತಿಗಳ ಮತ್ತು ಇತರೆ ಕಡೆಗಣಿತ ಅಲ್ಪ ಸಂಖ್ಯಾತರ ಸರ್ವಾಂಗೀಣ ಪ್ರಗತಿ ಸಾಧಿಸುವ ಸಲುವಾಗಿ ಮಿಲಿಯನ್‌ಗಟ್ಟಲೆ ರೂಪಾಯಿಗಳನ್ನು

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಎರಡೂ ಖರ್ಚು ಮಾಡಿವೆ. ಈ ನೀತಿಯ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಸರ್ಕಾರದ ಹಲವಾರು ನೀತಿಗಳನ್ನು ಅನುಷ್ಠಾನಕ್ಕೆ ತರಲು ಹಾಗೂ ಪರಿಶಿಷ್ಟ ಜಾತಿಗಳಿಗೆ ಹಾಗೂ ಪಂಗಡಗಳಿಗೆ ಒಳ್ಳೆಯ ಸೌಕರ್ಯಗಳನ್ನು ಕಲ್ಪಿಸಲು ಸಮಾಜ ಕಲ್ಯಾಣ ಇಲಾಖೆಯೆಂಬ ಒಂದು ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಲಾಗಿದೆ. ಕಸಗುಡಿಸುವವರ ಹಾಗೂ ಜಾಡಮಾಲಿಗಳ ವಾಸ್ತವಿಕ ಪ್ರಗತಿಯ ವಿಷಯದಲ್ಲಿ ಈ ಇಲಾಖೆಯು ಕಣ್ಣಿಗೆ ಕಾಣುವಂತಹ ಯಾವುದೇ ಪ್ರಗತಿಯನ್ನು ಸಾಧಿಸಿಲ್ಲ. ಈ ಇಲಾಖೆಗಳ ಅಧಿಕಾರಿಗಳು ಕಸಗುಡಿಸುವವರ ಮತ್ತು ಜಾಡಮಾಲಿಗಳ ಸಂಕಷ್ಟಗಳನ್ನು ಹಾಗೂ ಕುಂದು ಕೊರತೆಗಳನ್ನು ಕಂಡು ಕೊಳ್ಳಲು ಅವರ ಕಾಲೋನಿಗಳಿಗೆ ಭೇಟಿ ಕೊಡುವ ಜವಾಬ್ದಾರಿಯನ್ನೇ ನಿಭಾಯಿಸಿಲ್ಲವೆಂಬುದು ಸಮಿತಿಯು ಅಧ್ಯಯನ ಪ್ರವಾಸ ಕೈಗೊಂಡಿದ್ದಾಗ ಸಮಿತಿಯ ಗಮನಕ್ಕೆ ಬಂದಿದೆ.

ಅಂಕಿ ಸಂಖ್ಯೆ ಆಧಾರಿತ ಅಧ್ಯಯನವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿದಾಗ ಈ ಎಲ್ಲ 27 ವರ್ಷಗಳಲ್ಲಿ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕಲ್ಯಾಣಕ್ಕಾಗಿ ಸರ್ಕಾರವು ಅಪಾರ ಹಣ ಖರ್ಚು ಮಾಡಿದ್ದರೂ ಈ ಎಲ್ಲ ವರ್ಷಗಳಲ್ಲಿ ಅವರ ಸ್ಥಿತಿಗತಿಗಳಲ್ಲಿ ಯಾವ ಸುಧಾರಣೆಯೂ ಆಗದೆ ಹಾಗೆಯೇ ಉಳಿದಿದ್ದಾರೆಂಬ ತೀರ್ಮಾನಕ್ಕೆ ಸಮಿತಿಯು ಬಂದಿದೆ. ಭಾರೀ ಪ್ರಮಾಣದ ಹಣದ ಮೊತ್ತವನ್ನು ಖರ್ಚು ಮಾಡಿದರೂ ಸಮಾಜದ ಈ ನಿರ್ದಿಷ್ಟ ವರ್ಗದ ಜನರಿಗೆ ಯಾವುದೇ ಬಗೆಯ ಯಾವ ಪ್ರಯೋಜನವೂ ತಲುಪಿಲ್ಲವೆಂಬುದು ಈ ವಾಸ್ತವಾಂಶಗಳಿಂದ ತಿಳಿದು ಬರುತ್ತದೆ. ಆದ್ದರಿಂದ, ಹಲವಾರು ಕಲ್ಯಾಣ ಕ್ರಮಗಳ ಅನುಷ್ಠಾನದ ಮೇಲೆ ನಿಗಾ ಇಡಲು ನಿಯಮಗಳಿಗೆ ಮಿತಿ ಮೀರಿ ಕಟ್ಟು ಬೀಳುವ ಅಧಿಕಾರಿಶಾಹಿಯ ಕಪಿ ಮುಷ್ಠಿಗಳಿಗೆ ಸಿಲುಕದ ಒಂದು ಸೂಕ್ತ ವ್ಯವಸ್ಥೆಯನ್ನು ಸ್ಥಾಪಿಸುವುದು ಅಗತ್ಯ. ಈ ಉದ್ದೇಶವನ್ನು ಸಾಕಾರಗೊಳಿಸುವ ಸಲುವಾಗಿ ಸಂಪೂರ್ಣವಾಗಿ ಸ್ವಾಯತ್ತ ಹಾಗೂ ಹಣಕಾಸು ಸ್ವಾತಂತ್ರ್ಯವುಳ್ಳ 'ಪೌರಕಾರ್ಮಿಕ ಕಲ್ಯಾಣ ಮಂಡಳಿ' ಯೆಂಬ ಒಂದು ಮಂಡಳಿಯನ್ನು ಸ್ಥಾಪಿಸದೇ ಬೇರೆ ಮಾರ್ಗವೇ ಇಲ್ಲ. ಸಮಿತಿಯ ಹಲವಾರು ಶಿಫಾರಸುಗಳ ಮೇಲೆ ರಾಜ್ಯ ಸರ್ಕಾರವು ಸಮುಚಿತ ಆದೇಶಗಳನ್ನು ಹೊರಡಿಸಿದರೂ, ಸರ್ಕಾರದ ಈ ಕಲ್ಯಾಣ ಆದೇಶಗಳು ಕಾಗದದಲ್ಲಿಯೇ ಉಳಿದು ಬಿಡುತ್ತವೆ ಹಾಗೂ ಈ ಹಿಂದೆ ಇದೇ ರೀತಿಯ ಆದೇಶಗಳಿಗೆ ಯಾವ ಗತಿ ಬಂತೋ ಇವಕ್ಕೂ ಹಾಗೇ ಆಗುತ್ತದೆ ಎಂಬ ಶಂಕೆ ಸಮಿತಿಗಿದೆ. ಆದ್ದರಿಂದ, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸರ್ವಾಂಗೀಣ ಪ್ರಗತಿಯ ಹಾಗೂ ಕಲ್ಯಾಣದ ಉದ್ದೇಶವುಳ್ಳ ಈ ಸಮಿತಿಯ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರುವ ಅಧಿಕಾರ ವ್ಯಾಪ್ತಿಯುಳ್ಳ ಒಂದು ಶಾಸನಾತ್ಮಕ ಮಂಡಳಿಯನ್ನು ನೇಮಕ ಮಾಡುವಂತೆ ಸಮಿತಿಯು ಸರ್ಕಾರವನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ.

ಚಿತ್ರ

**ಸಹನೆ, ತಾಳ್ಮೆಯಿಂದ ಒಳ್ಳೆಯ ಬದುಕಿಗಾಗಿ ಕಾದು ಕುಳಿತಿದ್ದಾರೆ. ಇತರರಂತೆ ಒಳ್ಳೆಯ ಬದುಕಿಗಾಗಿ ಈ ಜನ ಯಾವಾಗಲೂ ಹೀಗೆಯೇ ನಿರೀಕ್ಷೆಯಲ್ಲಿರಬೇಕೇ?**

ಅಂಥದ್ದೊಂದು ಕ್ರಮವನ್ನು ತೆಗೆದುಕೊಳ್ಳದಿದ್ದರೆ ಸಮಾಜದ ಈ ಅತ್ಯಂತ ದಮನಿತ ವರ್ಗಕ್ಕೆ ಎಂದೆಂದಿಗೂ ಯಾವ ಒಳ್ಳೆಯದೂ ಆಗುವುದಿಲ್ಲ ಮತ್ತು ಇದುವರೆಗೂ ಮಾಡಿರುವ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತವೆ.

**ಪ್ರಸ್ತಾವಿತ ಮಂಡಳಿಯ ಕರ್ತವ್ಯಗಳು**

1. ಸಮಿತಿಯು ಈಗ ಮಾಡಿರುವ ಎಲ್ಲ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಬೇಕು.
2. ಪೌರಕಾರ್ಮಿಕರ ಸುಧಾರಣೆಗಾಗಿ ರೂಪಿಸಿರುವ ಎಲ್ಲ ಚಾಲ್ತಿ ಸರ್ಕಾರಿ ಆದೇಶಗಳನ್ನು ಹಾಗೂ ಕಲ್ಯಾಣ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮಾಡಬೇಕು.
3. ಸಾರ್ವಜನಿಕ ನಾಗರಿಕ ಪ್ರಜ್ಞೆಯನ್ನು ಮೂಡಿಸಬೇಕು.
4. ಪೌರಕಾರ್ಮಿಕರಲ್ಲಿ ಹಾಗೂ ಪರಸ್ಪರ ಅವಲಂಬನೆ ಪ್ರಜ್ಞೆಯನ್ನು ಜಾಗೃತಗೊಳಿಸಬೇಕು ಹಾಗೂ ಆತ್ಮ ವಿಶ್ವಾಸ ಮತ್ತು ಸ್ವಾವಲಂಬನೆ ಬಗ್ಗೆ ಅರಿವು ಮೂಡಿಸಬೇಕು.
5. ಪೌರಕಾರ್ಮಿಕರ ಮಕ್ಕಳಿಗಾಗಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸಬೇಕು. 'ಕಡ್ಡಾಯ ಶಿಕ್ಷಣ ಕಾಯ್ದೆ' ಯ ನಿಬಂಧನೆಗಳನ್ನು ಜಾರಿಗೆ ತರಲು ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳೊಂದಿಗೆ ಸಮನ್ವಯ ಸಹಕಾರದೊಂದಿಗೆ ಒಟ್ಟುಗೂಡಿ ಪ್ರಯತ್ನಗಳನ್ನು ಕೈಗೊಳ್ಳಬೇಕು.
6. ರಾಜ್ಯ ವಯಸ್ಕ ಸಾಕ್ಷರತೆ ಪರಿಷತ್ತಿನೊಂದಿಗೆ ಸಮಾಲೋಚಿಸಿ ಪೌರಕಾರ್ಮಿಕರ ಶಿಕ್ಷಣಕ್ಕಾಗಿ ಹಂತ ಹಂತದ ಕಾರ್ಯಕ್ರಮಗಳನ್ನು ರೂಪಿಸಬೇಕು. ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವುದು ಮಂಡಳಿಯ ಕರ್ತವ್ಯ.
7. ಪೌರಕಾರ್ಮಿಕರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಏಳಿಗೆಗಾಗಿ ಸಮಗ್ರ ಯೋಜನೆಗಳನ್ನು ರೂಪಿಸಬೇಕು. ಈ ಕಾರ್ಯಕ್ರಮಗಳಲ್ಲಿ ಮನರಂಜನೆಯನ್ನಷ್ಟೇ ಅಲ್ಲ ಬೋಧನೆಯನ್ನು ಒದಗಿಸುವ ಉದ್ದೇಶವಿದ್ದು ನಾಟಕಗಳಲ್ಲಿ ಅಭಿನಯಿಸುವುದು, ಉಪನ್ಯಾಸ ಕೊಡುವುದು, ಫಿಲಂ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು ಒಳಗೊಂಡಿರುತ್ತವೆ.

8. ಪೌರಕಾರ್ಮಿಕರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕರಕುಶಲ ಕಲೆಯಲ್ಲಿ ನಿಪುಣತೆ ಗಳಿಸಲು ಪೌರಕಾರ್ಮಿಕರಿಗೆ ಹಾಗೂ ಅವರ ಸ್ತ್ರೀಯರಿಗೆ ಮಂಡಳಿಯು ಸೂಕ್ತ ತಾಂತ್ರಿಕ ತರಬೇತಿಯನ್ನು ನೀಡಬೇಕು. ಪೌರಕಾರ್ಮಿಕರ ಹಾಗೂ ಅವರ ಕುಟುಂಬಗಳ ಪ್ರಯೋಜನಕ್ಕಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.
9. ಪೌರಕಾರ್ಮಿಕರ ಕುಡಿತದ ಚಟವನ್ನು ಬಿಡಿಸಲು ಮಂಡಳಿಯು ಆ ವಿಷಯದಲ್ಲಿನ ತಜ್ಞರಿಂದ ಕುಡಿತದ ಚಟದಿಂದ ವಿಮುಕ್ತಿ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಬೇಕು.
10. ಪೌರಕಾರ್ಮಿಕರ ವಿದ್ಯಾವಂತ ಹಾಗೂ ಅವಿದ್ಯಾವಂತ ಮಕ್ಕಳಿಗೆ ಸೂಕ್ತ ಉದ್ಯೋಗವನ್ನು ಒದಗಿಸುವ ನೀತಿಯನ್ನು ಮಂಡಳಿಯು ರೂಪಿಸಬೇಕು.
11. ಅಸ್ಪೃಶ್ಯತೆ ನಿಷೇಧ ಕಾಯಿದೆಗೆ ಎಷ್ಟು ಪ್ರಾಶಸ್ತ್ಯ ಸಿಗಬೇಕಿತ್ತೋ ಅಷ್ಟ ಸಿಕ್ಕದಿರುವುದರಿಂದ ಆ ಕಾಯ್ದೆ ಕಾರ್ಯರೂಪಕ್ಕೆ ಬಂದಿರುವುದನ್ನು ಮೇಲ್ವಿಚಾರಣೆ ಮಾಡಬೇಕು.
12. ಪೌರಕಾರ್ಮಿಕರ ಕಾಲೋನಿಗಳನ್ನು ಆಧುನಿಕ ರೀತಿಯಲ್ಲಿ ಇಟ್ಟುಕೊಳ್ಳುವುದರ ಮೇಲೆ ಮಂಡಳಿಯು ಮೇಲ್ವಿಚಾರಣೆ ಮಾಡಬೇಕು ಮತ್ತು ಬೇರೆಯವರು ಅನುಕರಣೆ ಮಾಡುವಂತೆ ಅವುಗಳನ್ನು ಮಾದರಿ ಕಾಲೋನಿಗಳನ್ನಾಗಿ ಪರಿವರ್ತನೆ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಪೌರಕಾರ್ಮಿಕರ ವೃದ್ಧಾಶ್ರಮಗಳು **'ಚೆಷೈರ್ ಹೋಮ್ಸ್'** ರೀತಿಯಲ್ಲಿ ನಿರ್ವಹಣೆಯಾಗುತ್ತಿರುವುದನ್ನು ಮಂಡಳಿಯು ಗಮನಿಸುತ್ತಿರಬೇಕು.

# ಅಧ್ಯಾಯ XXV

## ಸಮಾಪನ

ವರದಿಯಲ್ಲಿ ಅನೇಕ ನ್ಯೂನತೆಗಳಿರುವುದು ಸಮಿತಿಗೆ ಗೊತ್ತಿದೆ. ಸಮಿತಿಯು ಯಾವ ಸಂದರ್ಭ ಸನ್ನಿವೇಶಗಳಲ್ಲಿ ಬಹು ಶ್ರಮದಿಂದ ಕಾರ್ಯನಿರ್ವಹಿಸಬೇಕಾಯಿತೆಂದರೆ ಅಪೂರ್ಣತೆಯ ಆರೋಪವನ್ನು ಯಾರೂ ತಪ್ಪಿಸಿಕೊಳ್ಳಲಾಗದಂತಹ ಸಂದರ್ಭ ಸನ್ನಿವೇಶಗಳಲ್ಲಿ ಸಮಿತಿಯು ಕಾರ್ಯನಿರ್ವಹಿಸಿದೆ. ಆದರೂ, ರಾಜ್ಯದಲ್ಲಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕೆಲಸದ ಸ್ಥಿತಿಗಳನ್ನು ಕುರಿತಂತೆ ಸಮಗ್ರವಾದುದೆನ್ನಬಹುದಾದ ವರದಿಯನ್ನು ಸಿದ್ಧಪಡಿಸಲು ತನ್ನ ಶಕ್ತಿ ಮೀರಿ ಪ್ರಯತ್ನಿಸಿದೆ.

ಸಮಿತಿಯು ರಾಜ್ಯದೊಳಗಡೆ ಪ್ರವಾಸ ಮಾಡಿದಾಗ ಪೌರಕಾರ್ಮಿಕರನ್ನು ಯಾರೇ ಅಧಿಕಾರಿಯ ಮಧ್ಯ ಪ್ರವೇಶ ಇಲ್ಲದಯೇ ಅಥವಾ ಯಾವುದೇ ಒತ್ತಾಯವಿಲ್ಲದೆಯೇ ಮುಖಾಮುಖಿ ಭೇಟಿ ಮಾಡಿದೆ. ಮುಕ್ತ ಹಾಗೂ ನೇರ ಚರ್ಚೆ ಆಗಿದೆ. ಸಮಿತಿಯು ನೇರವಾಗಿ ಮಾಹಿತಿ ಸಂಗ್ರಹಿಸಿದೆ, ಅಷ್ಟೇ ಅಲ್ಲ ಪೌರಕಾರ್ಮಿಕರಲ್ಲಿ ಹೊಸ ಭರವಸೆ ಹಾಗೂ ನಿರೀಕ್ಷೆಗಳನ್ನು ಮೂಡಿಸುವಲ್ಲಿ ಸಫಲವಾಗಿದೆ. ಈವರೆಗೂ ಅವರಿಗೆ ಗೊತ್ತಿರದಿದ್ದಂತಹ ಹಕ್ಕುಗಳ ಮತ್ತು ಸವಲತ್ತುಗಳ ಬಗ್ಗೆ ಪೌರಕಾರ್ಮಿಕರಿಗೆ ತಿಳಿವಳಿಕೆ ಕೊಡುವಲ್ಲಿಯೂ ಸಮಿತಿಯು ಸಫಲವಾಗಿದೆ.

ಹಲವಾರು ಸ್ಥಳೀಯ ಮಂಡಳಿಗಳ ಅಧಿಕಾರಿಗಳೊಂದಿಗೆ ಪೌರಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಸಮಿತಿಯು ಚರ್ಚಿಸಿದೆ. ಸ್ಥಳೀಯ ಸಂಸ್ಥೆಗಳಿಂದಾಗಿರುವ ಹಲವಾರು ಲೋಪದೋಷಗಳನ್ನು ಸಹ ಸಮಿತಿಯು ಎತ್ತಿ ತೋರಿಸಿದೆ ಮತ್ತು ಎಷ್ಟು ಸಾಧ್ಯವೋ ಅಷ್ಟು ಬೇಗನೆ ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಸಮಿತಿಯು ಸಲಹೆ ಮಾಡಿದೆ.

ಸಮಿತಿಯು ಸೃಜಿಸಿದ ಹೊಸ ಭರವಸೆ ಹಾಗೂ ಆಶಾವಾದದ ವಾತಾವರಣದಿಂದಾಗಿ ಪೌರಕಾರ್ಮಿಕರು ಸಮಿತಿಯ ಶಿಫಾರಸುಗಳ ಅನುಷ್ಠಾನವನ್ನು ಹಾಗೂ ಅವರ ಕುಂದು ಕೊರತೆಗಳು ನಿವಾರಣೆಯಾಗುವುದನ್ನು ಉತ್ಸುಕರಾಗಿ ಎದುರು ನೋಡುತ್ತಿದ್ದಾರೆ. ಅವರ ಕುಂದು ಕೊರತೆಗಳು ನಿಜವಾದವುಗಳೆಂದು ಹಾಗೂ ಅವುಗಳನ್ನು ಕೂಡಲೇ ಪರಿಹರಿಸಬೇಕೆಂಬ ತೀರ್ಮಾನಕ್ಕೆ ಸಮಿತಿಯು ಬಂದಿದೆ.

ಸಮಿತಿಯ ಶ್ರಮದ ಕೆಲಸ ಕಾರ್ಯಗಳಲ್ಲಿ ಪೌರಕಾರ್ಮಿಕರು ಹಾಗೂ ಮುನಿಸಿಪಲ್ ಕಾರ್ಪೊರೇಷನ್ನಿನ ಅಧಿಕಾರಿಗಳು ಸಹಕರಿಸಿದ್ದಕ್ಕಾಗಿ ಸಮಿತಿಯು ಅವರುಗಳಿಗೆ ಆಭಾರಿಯಾಗಿದೆ.

ಶ್ರೀ ದೇವರಾಜ ಅರಸರ ನೇತೃತ್ವದ ಕರ್ನಾಟಕ ಸರ್ಕಾರಕ್ಕೆ ಹಾಗೂ ಪೌರಾಡಳಿತ ಹಾಗೂ ಕಾನೂನು ಮಂತ್ರಿ ಶ್ರೀ ಡಿ.ಕೆ.ನಾಯ್ಕರಿಗೆ ಅವರು ನೀಡಿದ ನಿರಂತರ ಆದರಣೆಗಾಗಿ ಹಾಗೂ ಕೊಟ್ಟ ಗಮನಕ್ಕಾಗಿ ಈ ಮಹನೀಯರಿಗೆ ತುಂಬಾನೆ ಆಭಾರಿಯಾಗಿದೆ.

ಈ ಸಮಿತಿಯನ್ನು ರಚಿಸಲು ಕಾರಣರಾದ ಹಾಗೂ ಕಾಲಕಾಲಕ್ಕೆ ಈ ಸಮಿತಿಗೆ ಮಾರ್ಗದರ್ಶನ ನೀಡಿದ ಪೌರಾಡಳಿತ ಮಂತ್ರಿ ಶ್ರೀ ಬಿ. ಬಸವಲಿಂಗಪ್ಪನವರಿಗೆ ಸಮಿತಿಯು ಕೃತಜ್ಞತೆ ಸಲ್ಲಿಸದಿದ್ದರೆ ಸಮಿತಿಯು ತನ್ನ ಕರ್ತವ್ಯವನ್ನು ಮರೆತಂತೆಯೇ ಸರಿ. ಶ್ರೀಯುತರಿಗೆ ಇರುವ ಪ್ರೌಢಜ್ಞಾನ, ಕ್ರಿಯಾಶೀಲತೆ, ಎಲ್ಲಕ್ಕೂ ಮಿಗಿಲಾಗಿ ಪೌರಕಾರ್ಮಿಕರ ಬವಣೆಗಳಿಗೆ ಅವರು ತೋರುವ ಹೃತ್ಪೂರ್ವಕ ಅನುಕಂಪ, ಸಹಾನುಭೂತಿ ಎಲ್ಲರಿಗೂ ತಿಳಿದೇ ಇದೆ. ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಈವರೆಗೂ ಕಡೆಗಣಿತರಾಗಿದ್ದ ಹಾಗೂ ಅನಾದರಣೆಗೆ ಒಳಗಾಗಿದ್ದ ಸಾವಿರಾರು ಪೌರಕಾರ್ಮಿಕರ ಜೀವನದಲ್ಲಿ ಹೊಸ ಭರವಸೆ ಮತ್ತು ಸಂತಸದ ಹೊಸ ಅಧ್ಯಾಯ ತೆರೆದು ಕೊಳ್ಳಲು ಸಾಧ್ಯವಾಗಿದ್ದೇ ಶ್ರೀಯುತರ ಕ್ರಿಯಾಶೀಲ ಹಾಗೂ ದಿಟ್ಟ ಧೋರಣೆಯಿಂದ.

ಇತರ ವರದಿಗಳಿಗೆ ಆದ ಗತಿಯೇ ಈ ವರದಿಗೂ ಆಗಕೂಡದು, ಆದ್ದರಿಂದ ಯಾವುದೇ ವಿಳಂಬ ಮಾಡದೆ ಸಮಿತಿಯ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಮನಃಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತದೆ. ಸಮಾಜದ ದುರ್ಬಲ ವರ್ಗಗಳ ಬೆಂಬಲಕ್ಕೆ ಸದಾ ನಿಂತಿರುವ ಪ್ರಸ್ತುತ ಸರ್ಕಾರವು ಕೂಡಲೇ ಸಮಿತಿಯ ಪ್ರಸ್ತಾವಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವ ಸಲುವಾಗಿ ಶಿಫಾರಸು ಮಾಡಿರುವಂತೆ ಸೂಕ್ತ ವ್ಯವಸ್ಥೆಗೆ ಕೂಡಲೇ ಏರ್ಪಾಟು ಮಾಡುತ್ತದೆಂಬ ನಂಬಿಕೆ ಸಮಿತಿಗೆ ಇದೆ.

ಚಿತ್ರ

**ಈ ದಿನ ಈ ಮುಗ್ಧ ಮಕ್ಕಳು ನಗುತ್ತಿದ್ದಾರೆ, ಮುಂಬರುವ ದಿನಗಳಲ್ಲಿ ತಮ್ಮ ಭವಿಷ್ಯದಲ್ಲೇನಿದೆ ಎಂಬುದು ಪಾಪ, ಈ ಮಕ್ಕಳಿಗೆ ಗೊತ್ತಿಲ್ಲ. ಈ ಮಕ್ಕಳೂ ಕೂಡ ಕಸಗುಡಿಸುವ ವೃತ್ತಿಯನ್ನು ಕೈಗೊಳ್ಳಬೇಕೇ?**

## ಭಾಗ II

## ಪ್ರವಾಸ – ಅವಲೋಕನ

ರಾಜ್ಯದಲ್ಲಿರುವ ಪೌರಕಾರ್ಮಿಕರ ಈಗಿನ ಸ್ಥಿತಿಗತಿಗಳ ಅಧ್ಯಯನ ಮಾಡಲು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ರಾಜ್ಯದಲ್ಲಿ ದೂರ ದೂರದಲ್ಲಿರುವ ಸ್ಥಳೀಯ ಮಂಡಳಿಗಳಿಗೂ ಭೇಟಿ ನೀಡಿದ್ದಾರೆ. ಪೌರಕಾರ್ಮಿಕರ ಬದುಕಿನ ಮತ್ತು ಕೆಲಸದ ಸ್ಥಿತಿಗತಿಗಳಲ್ಲಿ ಎದ್ದು ಕಾಣುವ ಅಸಮತೆಗಳು ಮತ್ತು ಸಮಾಜ ಹಾಗೂ ಅಧಿಕಾರಿ ವರ್ಗ ಎರಡೂ ಈ ಜನರಿಗೆ ಎದ್ದು ಕಾಣುವಂತಹ ಅನ್ಯಾಯಗಳನ್ನೆಸಗಿರುವುದು ಸಮಿತಿಯ ಗಮನಕ್ಕೆ ಬಂದವು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅಧ್ಯಕ್ಷರು ಹಾಗೂ ಸದಸ್ಯರುಗಳು ಈ ಅನ್ಯಾಯಗಳಲ್ಲಿ ಕೆಲವೊಂದನ್ನು ಸರಿಪಡಿಸಲು ಸ್ಥಳದಲ್ಲೇ ಸರಿಯಾದ ಯೋಗ್ಯ ಕ್ರಮಗಳನ್ನು ತೆಗದುಕೊಂಡಿದ್ದಾರೆ. ಈ ಮುಂದಿನ ಪುಟಗಳಲ್ಲಿ ಅವರುಗಳು ತಮ್ಮ ಅವಲೋಕನಗಳನ್ನು ಹಾಗೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಎಲ್ಲ ಸ್ಥಳೀಯ ಮಂಡಳಿಗಳ ಬಗ್ಗೆ ಮಾಡಿದ ಅವಲೋಕನಗಳನ್ನು ಈ ವರದಿಗೆ ಸೇರಿಸುವುದು ಸಾಧ್ಯವಾಗದು. ಆದರೆ, ಹೆಚ್ಚು ಪ್ರಾಮುಖ್ಯವಾದವುಗಳೆಂದು ಸಮಿತಿಯು ಭಾವಿಸಿದವುಗಳನ್ನು ಹಾಗೂ ಎದ್ದು ಕಾಣುವಂಥವುಗಳನ್ನು ಮುಂದಿನ ಪುಟಗಳಲ್ಲಿ ಹೇಳಲಾಗಿದೆ.

**ಆನೇಕಲ್**

ಮಲದ ಸಾಗಣೆಗೆ ಸೂಕ್ತ ಸಲಕರಣೆಗಳನ್ನು ರೂಪಿಸುವುದಕ್ಕೆ ಹಾಗೂ ತಲೆ ಮೇಲೆ ಮಲವನ್ನು ಹೊತ್ತು ಒಯ್ಯುವುದನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದ ಉಪ ಸಮಿತಿಯು ಅಧ್ಯಕ್ಷರು ಹಾಗೂ ಸದಸ್ಯರುಗಳು ಬೆಂಗಳೂರು ಜಿಲ್ಲೆಯಲ್ಲಿರುವ ಆನೇಕಲ್ ಟೌನ್ ಮುನಿಸಿಪಾಲಿಟಿಗೆ, ತಲೆ ಮೇಲೆ ಮಲ ಹೊತ್ತು ಒಯ್ಯುವ ಈಗಿನ ವಿಧಾನವನ್ನು ಅಧ್ಯಯನ ಮಾಡಲು ಭೇಟಿ ಇತ್ತರು. ಅಲ್ಲಿ ಮುನಿಸಿಪಾಲಿಟಿ ಕೆಲಸಗಾರರು ಮಲವನ್ನು ಸಾಗಿಸುತ್ತಿಲ್ಲ, ಅಕ್ಕಪಕ್ಕದಲ್ಲಿರುವ ರೈತರು ಮೂರು ತಿಂಗಳಿಗೆ ಒಂದು ಸಲ ಎತ್ತಿನಗಾಡಿಗಳಲ್ಲಿ ಬಂದು ಶೌಚಾಲಯಗಳಲ್ಲಿ ಸಂಗ್ರಹಿತವಾಗಿರುವ ಮಲವನ್ನು ಒಯ್ಯುತ್ತಾರೆ. ಅದನ್ನು ವ್ಯವಸಾಯದ ಗೊಬ್ಬರವನ್ನಾಗಿ ಬಳಸುತ್ತಾರೆ ಎನ್ನುವುದು ಅಧ್ಯಕ್ಷರ ಹಾಗೂ ಸದಸ್ಯರಿಗೆ ತಿಳಿದು ಬಂತು. ಅಲ್ಲಿನ ಭೇಟಿಯನ್ನು ಪೌರಕಾರ್ಮಿಕರನ್ನು ಭೇಟಿ ಮಾಡುವುದಕ್ಕಾಗಿ ಮತ್ತು ಅವರ ಕುಂದು ಕೊರತೆಗಳೇನಾದರೂ ಇದ್ದರೆ ಅವುಗಳನ್ನು ಅಧ್ಯಯನ ಮಾಡುವುದಕ್ಕಾಗಿ ಬಳಸಿಕೊಳ್ಳಲಾಯಿತು. ಆನೇಕಲ್ಲಿನ ಪೌರಕಾರ್ಮಿಕರು ವಡ್ಡ ಸಮುದಾಯದವರು ತೆಲುಗನ್ನು ಮಾತನಾಡುತ್ತಾರೆ. ಮುನಿಸಿಪಾಲಿಟಿಯ ಭೂಮಿಯಲ್ಲಿ ಕಟ್ಟಿಕೊಂಡಿರುವ ಗುಡಿಸಲಿನಲ್ಲಿ ವಾಸವಾಗಿದ್ದಾರೆ. ಹಲವಾರು ವರ್ಷಗಳಿಂದಲೂ ಅವರು ಆ ಭೂಮಿಯಲ್ಲಿನ ಗುಡಿಸಲುಗಳಲ್ಲಿ ವಾಸ ಮಾಡಲು ಅವಕಾಶ ಕೊಡಲಾಗಿದೆ. ಅವರುಗಳು ಮುನಿಸಿಪಲ್ ಅಧಿಕಾರಿಗಳ ದಾಕ್ಷಿಣ್ಯದಲ್ಲಿದ್ದಾರೆ. ಅವರುಗಳನ್ನು ಆ ಜಾಗದಿಂದ ಯಾವ ಸಮಯದಲ್ಲಾದರೂ ಹೊರಹಾಕಬಹುದಾಗಿದೆ. ಪೌರಕಾರ್ಮಿಕರಿಗೆ ಅನೇಕ ಸೇವೆಗಳನ್ನು ಹಾಗೂ ಇತರ ಪ್ರಯೋಜನಗಳನ್ನು ವಿಸ್ತರಿಸಿರುವ ಅನೇಕ ಸರ್ಕಾರಿ ಆದೇಶಗಳನ್ನು ಮುನಿಸಿಪಲ್ ಕೌನ್ಸಿಲ್ ಕಾರ್ಯರೂಪಕ್ಕೆ ತಂದಿಲ್ಲ. ಅಲ್ಲಿ ನಮ್ಮ ಸಮಕ್ಷಮ ಇದ್ದ ಮುನಿಸಿಪಾಲಿಟಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಈ ವಿಷಯವನ್ನು ಗಮನಕ್ಕೆ ತಂದಾಗ ಹಣಕಾಸಿನ ಸಂಪನ್ಮೂಲ ಇಲ್ಲದಿರುವುದರಿಂದ ಪೌರಕಾರ್ಮಿಕರಿಗೆ ಕೊಡಬೇಕಾದ ಪ್ರಯೋಜನಗಳನ್ನು ಕೊಡಲು ಆಗಲಿಲ್ಲವೆಂದು ನಮಗೆ ತಿಳಿಸಲಾಯಿತು. ಸರ್ಕಾರದ ಅನೇಕ ಕಲ್ಯಾಣ ಆದೇಶಗಳನ್ನು ಕಾರ್ಯರೂಪಕ್ಕೆ ತರದಿರುವುದಕ್ಕೆ ಎಲ್ಲ ಮುನಿಸಿಪಾಲಿಟಿಗಳು ಅದೇ ಬಗೆಯ ಹಾರಿಕೆಯ ಉತ್ತರವನ್ನು ಆ ದಿನದಿಂದ ಈ ದಿನದವರೆಗೂ ಸಮಿತಿಗೆ ಕೊಡುತ್ತಲೇ ಇವೆ. ಪೌರಕಾರ್ಮಿಕರ ಕೆಲವು ಮಕ್ಕಳು ಎಸ್.ಎಸ್.ಎಲ್.ಸಿ ವರೆಗೆ ಓದಿದ್ದು, ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಮಕ್ಕಳು ನೋಂದಣಿ ಮಾಡಿಸಿದ್ದರೂ ಒಂದು ಸೂಕ್ತ ಉದ್ಯೋಗವನ್ನು ಮಕ್ಕಳು ಕಂಡುಕೊಳ್ಳಲು ಆಗಿಲ್ಲ.

**ಬಳ್ಳಾರಿ**

ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಬಳ್ಳಾರಿಗೆ ಭೇಟಿ ನೀಡಿದಾಗ ಆ ನಗರದಲ್ಲಿ ಮಲವನ್ನು ತಲೆ ಮೇಲೆ ಹೊತ್ತು ಒಯ್ಯುವ ವಿಧಾನ ಚಾಲ್ತಿಯಲ್ಲಿತ್ತು. ನಮ್ಮ ಸಮಾಜದ ಒಂದು ವರ್ಗದ ಜನರಿಗೆ ಅನಾಗರೀಕ ಕಾರ್ಯವನ್ನು ವಿಧಿಸಿರುವುದನ್ನು ಸಮಿತಿಯು ಕಣ್ಣಾರೆ ಕಂಡಿತು. ಬ್ಯಾಸ್ಕೆಟ್‌ಗೆ ತುಂಬಿದ ಮಲ ಸಂದಿಗಳಲ್ಲಿ ಸೋರುತ್ತಿದ್ದರೂ ಅದನ್ನೇ ಮಹಿಳಾ ಜಾಡಮಾಲಿಯು ತಲೆ ಮೇಲೆ ಹೊತ್ತು ಒಯ್ಯುತ್ತಿರುವುದನ್ನು, ಮನೆ ಮನೆಗೆ ಹೋಗುತ್ತಿರುವುದನ್ನು ಸಮಿತಿಯು ಗಮನಿಸಿತು. ಪ್ರತಿಯೊಂದು ರಸ್ತೆಯಲ್ಲಿರುವ ಶೌಚಾಲಯದ ಬಾಗಿಲನ್ನು ತೆರೆದು ಆಕೆ ಒಳಗಡೆಗೆ ಕೈ ಹಾಕಿ ಮಲವನ್ನು ಬಳಿದು, ಸಣ್ಣ ಟಿನ್ ಶೀಟ್ ಮೇಲೆ ಹಾಕಿ, ಆಕೆ ಮತ್ತೆ ಮತ್ತೆ ಮಲವನ್ನು ಕೆರೆದು ತೆಗೆಯುತ್ತಿದ್ದಾಗ ಮಲ ಆಕೆಯ ಕೈ ಮೇಲೆಲ್ಲಾ ಹಾಗೂ ಮೈ ಮೇಲೆಲ್ಲಾ ಚಿಮ್ಮುತ್ತಿತ್ತು. ಶೌಚಾಲಯವನ್ನು ತೊಳೆದು ಸ್ವಚ್ಚಗೊಳಿಸಿದ ಮೇಲೆ, ಮಲ ತುಂಬಿದ್ದ ಬ್ಯಾಸ್ಕೆಟ್‌ನ್ನು ತಲೆ ಮೇಲೆ ಹೊತ್ತು, ಅದೇ ಕೆಲಸ ಮಾಡಲು ಇನ್ನೊಂದು ಕಡೆಗೆ ಹೋಗುತ್ತಿದ್ದಳು. ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹೋಗುತ್ತಿದ್ದಾಗ, ತಲೆಯ ಮೇಲೆ ಹೊತ್ತಿದ್ದ ಬ್ಯಾಸ್ಕೆಟ್‌ನಿಂದ ಮಲ ಸೋರಿ ತಲೆ ಕೆಳಗಡೆಗೆ ಜಿನುಗುತ್ತಿತ್ತು ಹಾಗೂ ಆಕೆಯ ಬೆನ್ನಿನ ಭಾಗವೆಲ್ಲಾ ಸಂಪೂರ್ಣವಾಗಿ ಒದ್ದೆಯಾಗಿತ್ತು. ಈ ಬಗೆಯ ಸೇವೆಯೇ ಮುಂದುವರಿಯಬೇಕೆಂದು ಬಳ್ಳಾರಿಯ ಕೆಲವರು ನಾಗರಿಕರು ನ್ಯಾಯಾಲಯದಿಂದ ಆದೇಶ ತಂದಿದ್ದರಿಂದ ಈ ಅಮಾನವೀಯ, ಅನಾಗರಿಕ ಹಾಗೂ ತುಂಬಾನೆ ಅಸಹ್ಯದ ವಿಧಾನ ಈಗಲೂ ಮುಂದುವರಿಯುತ್ತಿದೆಯೆಂದು ಮುನಿಸಿಪಲ್ ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದರು. ಆದರೆ ಒಂದು ವರ್ಷದೊಳಗಾಗಿ ನ್ಯಾಯಾಲಯದ ನಿರ್ಬಂಧಕಾಜ್ಞೆಯನ್ನು ತೆರವುಗೊಳಿಸಲಾಯಿತು. ಮುನಿಸಿಪಾಲಿಟಿಯು ತನ್ನ ನೌಕರರಿಂದ ಈ ಬಗೆಯ ಹೇಯ ಜಾಡಮಾಲಿ ಸೇವೆಯನ್ನು ನಿಲ್ಲಿಸಿತು.

ಆ ಕಾಲದಲ್ಲಿ ಬಳ್ಳಾರಿ ನಗರ ಮುನಿಸಿಪಾಲಿಟಿಯು 315 ಜಾಡಮಾಲಿಗಳನ್ನು ನೇಮಕ ಮಾಡಿಕೊಂಡಿತ್ತು. ಸ್ವಲ್ಪ ಕಾಲಾನಂತರ ಅವರೆಲ್ಲರನ್ನು 138 ಕಸಗುಡಿಸುವವರೊಂದಿಗೆ ವಿಲೀನಗೊಳಿಸಲಾಯಿತು. ಅವರಿಗೆ ಗಟಾರ ಸ್ವಚ್ಚಗೊಳಿಸುವುದು, ರಸ್ತೆ ಗುಡಿಸುವುದು ಮುಂತಾದ ಕೆಲಸಗಳನ್ನು ವಹಿಸಲಾಯಿತು.

ಬಳ್ಳಾರಿಗೆ ಸಮಿತಿಯು ಭೇಟಿ ನೀಡಿದ್ದಾಗ, ಬಳ್ಳಾರಿಯ ಪೌರಕಾರ್ಮಿಕರಿಗೆ 1972ರ ಕರ್ನಾಟಕ ಮುನಿಸಿಪಲ್ ಸೇವೆಗಳ ನಿಯಮಗಳ ನಿಬಂಧನೆಗಳ ಪ್ರಕಾರ ನಿವೃತ್ತಿ ಹಾಗೂ ಪಿಂಚಣಿ ಪ್ರಯೋಜನಗಳನ್ನು ಕೊಡಲಾಗುತ್ತಿರುವುದನ್ನು ಸಿಟಿ ಮುನಿಸಿಪಾಲಿಟಿಯ ಕಮಿಷನರ್‌ರವರು ಸಮಿತಿಗೆ ತಿಳಿಸಿದರು. 1975ರಲ್ಲಿ ಯಾವುದೇ ತಿಳಿವಳಿಕೆ ಕೊಡದೆಯೇ 24 ಪೌರಕಾರ್ಮಿಕರು ನಿವೃತ್ತರಾದಾಗ ಅವರುಗಳು ಯಾವುದೇ ಬಗೆಯ ನಿವೃತ್ತಿ ಪ್ರಯೋಜನಕ್ಕೆ ಅರ್ಹರಾಗಿರಲಿಲ್ಲ ಎಂಬುದು ಬೆಳಕಿಗೆ ಬಂತು. ಈಗ ಬಳ್ಳಾರಿಯ ಯಾರೇ ಪೌರಕಾರ್ಮಿಕ ನಿವೃತ್ತನಾದರೆ ಅವನಿಗೆ ಪಿಂಚಣಿಯೂ ಸಿಗದೆ ಇಲ್ಲವೆ ಗ್ರಾಚುಯಿಟಿಯೂ ಸಿಗದೆ ಪುಡಿಗಾಸು ಇಲ್ಲದೆ ಮನೆಗೆ ಹೋಗಬೇಕಾಗಿದೆ. ಯಾರೆ ಬಳಗದವರ ಅಥವಾ ಇತರರ ಹಂಗಿನಲ್ಲಿ ತನ್ನ ಉಳಿದ ಬದುಕನ್ನು ಸಾಗಿಸಬೇಕಾಗಿದೆ.

ಬಳ್ಳಾರಿಯು ಪೌರಕಾರ್ಮಿಕರಲ್ಲಿ ಬಹುತೇಕ ಜನರು ತೆಲುಗು ಮಾದಿಗ ಸಮುದಾಯದವರು. ಗಣನೀಯ ಸಂಖ್ಯೆಯಲ್ಲಿ ಮುಸ್ಲಿಮರೂ ಇದ್ದಾರೆ. ಈ 40 ಮುಸ್ಲಿಂ ಪೌರಕಾರ್ಮಿಕರು ಹಿಂದೆ ಜಾಡಮಾಲಿ ಕೆಲಸ ಮಾಡುತ್ತಿದ್ದರು. ಬಳ್ಳಾರಿಯ ಇತರ ನಾಗರಿಕರಿಗೆ ಈ ಮುಸ್ಲಿಮರು ಜಾಡಮಾಲಿ ಮಾಡುತ್ತಿದ್ದಾರೆಂಬುದು ಗೊತ್ತಿತ್ತಾದರೂ ಈ ಮುಸ್ಲಿಮರ ಮೇಲೆ ಯಾವುದೇ ಬಗೆಯ ಬಹಿಷ್ಕಾರ ಇರಲಿಲ್ಲ. ಆದರೆ, ಅದೇ ಪರಿಶಿಷ್ಟ ಜಾತಿಯ ಸಮುದಾಯದವರನ್ನು ಸಮಾಜವು ಅಸ್ಪೃಶ್ಯರೆಂದು ಪರಿಗಣಿಸಿತ್ತು.

**ಭದ್ರಾವತಿ**

ಶಿವಮೊಗ್ಗದಲ್ಲಿರುವ ಈ ಗಜಿಬಿಜಿ ಕೈಗಾರಿಕಾ ಪಟ್ಟಣವು ನಾಲ್ಕು ಭಾಗಗಳಲ್ಲಿ ಹರಡಿದೆ – ಹಳೆಯ ಪಟ್ಟಣ, ಹೊಸ ಪಟ್ಟಣ, ಪೇಪರ್ ಟೌನ್ ಮತ್ತು ಅಧಿಸೂಚಿಸಿದ ಪ್ರದೇಶ.

ಹಳೆಯ ಪಟ್ಟಣದ ನಾಗರಿಕ ಸಮಸ್ಯೆಗಳನ್ನು ಭದ್ರಾವತಿ ಪಟ್ಟಣ ಮುನ್ಸಿಪಲ್ ಕೌನ್ಸಿಲ್ ನೋಡಿಕೊಳ್ಳುತ್ತಿದೆ. ಹೊಸ ಪಟ್ಟಣವು ಮೈಸೂರು ಕಬ್ಬಿಣ ಕಾರ್ಖಾನೆಯ ಜವಾಬ್ದಾರಿಗೆ ಹಾಗೂ ಪೇಪರ್ ಟೌನ್ ಮೈಸೂರು ಪೇಪರ್ ಮಿಲ್ಸ್ ಜವಾಬ್ದಾರಿಗೆ ಒಳಪಟ್ಟಿದೆ. ಈ ನಾಲ್ಕು ಭಾಗಗಳಲ್ಲಿ ಪ್ರತ್ಯೇಕ ಪ್ರತ್ಯೇಕ ನೈರ್ಮಲ್ಯ ಸಿಬ್ಬಂದಿ ಇದ್ದಾರೆ. ಈ ಎರಡು ಪಟ್ಟಣಗಳ ಸುತ್ತಮುತ್ತ ಇರುವ ಪ್ರದೇಶಗಳನ್ನು ಶಿವಮೊಗ್ಗ ಜಿಲ್ಲೆ ಜಿಲ್ಲಾಧಿಕಾರಿಯವರ ನೇರ ನಿಯಂತ್ರಣಕ್ಕೊಳಪಟ್ಟಿರುವ ಅಧಿಸೂಚಿತ ಪ್ರದೇಶದ ಮುನಿಸಿಪಾಲಿಟಿಯು ನೋಡಿಕೊಳ್ಳುತ್ತಿದೆ.

ಹಳೆಯ ಪಟ್ಟಣದ ಹಾಗೂ ಅಧಿಸೂಚಿಸಿದ ಪ್ರದೇಶದ ಮುನಿಸಿಪಾಲಿಟಿಗಳ ನೌಕರರಿಗೆ ಕರ್ನಾಟಕ ಮುನಿಸಿಪಲ್ ಸೇವಾ ನಿಬಂಧನೆ ನಿಯಮಗಳು ಅನ್ವಯವಾಗುತ್ತವೆ. ಕಾರ್ಖಾನೆಗಳ ನೈರ್ಮಲ್ಯ ಸಿಬ್ಬಂದಿಗೆ ಫ್ಯಾಕ್ಟರಿ ಕಾಯಿದೆಯು ಅನ್ವಯವಾಗುತ್ತದೆ. ಭದ್ರಾವತಿಯಲ್ಲಿರುವ ನಾಲ್ಕು ವಿವಿಧ ಸಂಘಟನೆಗಳ ನೌಕರರ ಮಜೂರಿ ವಿವರಗಳನ್ನು ಈ ಮುಂದಿನ ಕೋಷ್ಟಕಗಳಲ್ಲಿ ಕೊಡಲಾಗಿದೆ:

**ವೇತನ ಶ್ರೇಣಿಗಳು**

1. ಹಳೆಯ ಪಟ್ಟಣ – ರೂ 65–2–95 + ಸರ್ಕಾರಿ ಭತ್ಯೆ ಸರಿ ಸುಮಾರು ರೂ 180
2. ಅಧಿಸೂಚಿತ ಪ್ರದೇಶ – ರೂ 65–2–95 + ಸರ್ಕಾರಿ ಭತ್ಯೆ ಸರಿ ಸುಮಾರು ರೂ 180
3. ಪೇಪರ್ ಟೌನ್ – ರೂ 90–3 1/2–118–4–126 + ಭತ್ಯೆಗಳು ಒಟ್ಟು 238.50
4. ಹೊಸ ಟೌನ್ – ರೂ 300–6–348 + ಭತ್ಯೆಗಳು ಒಟ್ಟು ರೂ. 270.00

ಪೇಪರ್ ಟೌನ್‌ನ ಮತ್ತು ಹೊಸ ಟೌನ್‌ನ ನೈರ್ಮಲ್ಯ ಸಿಬ್ಬಂದಿಯು ವೈದ್ಯಕೀಯ ಚಿಕಿತ್ಸೆ ಹಣದ ಮರುಪಾವತಿ, ವಸತಿ ಗೃಹಗಳು, ಹಾಜರಾತಿ ಬೋನಸ್, ಸೇವಾ ಬೋನಸ್ ಮತ್ತು ಲಾಭದ ಬೋನಸ್ ಮುಂತಾದ ಅನೇಕ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ. ಆದರೆ, ಹಳೆಯ ಟೌನ್‌ನ ಹಾಗೂ ಅಧಿಸೂಚಿತ ಪ್ರದೇಶದ ಮುನಿಸಿಪಾಲಿಟಿಗಳ ಪೌರಕಾರ್ಮಿಕರು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಈ ಹಳೆಯ ಟೌನ್‌ನ ಹಾಗೂ ಅಧಿಸೂಚಿತ ಪ್ರದೇಶದ ಮುನಿಸಿಪಾಲಿಟಿಗಳಲ್ಲಿ ಅತ್ಯಂತ ತಾರತಮ್ಯ ಎದ್ದು ಕಾಣುತ್ತಿದೆ. ಈ ಎರಡು ಮುನಿಸಿಪಾಲಿಟಿಗಳಲ್ಲಿ ಕೆಲವೇ ಕೆಲವು ಸವರ್ಣೀಯ ಹಿಂದೂಗಳು ಜಾಡಮಾಲಿ ವೃಂದದಲ್ಲಿ ನೌಕರಿಯಲ್ಲಿದ್ದಾರೆ. ಆದರೆ, ಅವರಿಗೆ ಮುನಿಸಿಪಾಲಿಟಿ ಕಾರ್ಯಾಲಯಗಳ ನೆಲವನ್ನು ಗುಡಿಸುವ ಕೆಲಸವನ್ನು ವಹಿಸಿಲ್ಲ. ಬದಲಿಗೆ ಮಾಲಿಗಳು, ಅಟೆಂಡರುಗಳು ಮುಂತಾದ ಕೆಲಸವನ್ನು ಅವರಿಗೆ ವಹಿಸಲಾಗಿದೆ. ಪರಿಶಿಷ್ಟ ಜಾತಿಗಳ ಪೌರಕಾರ್ಮಿಕರಿಗೆ ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸ ಮಾಡಬೇಕೆಂದು ಹೇಳಲಾಗಿದೆ. ಈ ಪರಿಶಿಷ್ಟ ಜಾತಿಯ ಪೌರಕಾರ್ಮಿಕರು, ತಮಗಿಷ್ಟವಿಲ್ಲದಿದ್ದರೂ ನಿರ್ಗತಿಕರ ಹೆಣಗಳನ್ನು ಸಾಗಿಸುವ ಮತ್ತು ಹೂಳುವ ಕೆಲಸ ಮಾಡಬೇಕೆಂದು ಹೇಳಲಾಗಿದೆ.

ಈ ಹಿಂದೆ ಮಾಡಿದಂತೆ, ಹಳೆಯ ಟೌನ್ ಪ್ರದೇಶದಲ್ಲಿ ಪರಿಶಿಷ್ಟ ಜಾತಿಯ ಪೌರಕಾರ್ಮಿಕರು ಈ ದಿನಗಳಲ್ಲೂ ಮಲವನ್ನು ಸಾಗಿಸುತ್ತಿದ್ದಾರೆ.

**ಬೆಳಕವಾಡಿ**

ಬೆಳಕವಾಡಿಯು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿರುವ ಒಂದು ಸಣ್ಣ ಪಟ್ಟಣ. ಅಲ್ಲಿ ಆ ಪಟ್ಟಣದ ನೈರ್ಮಲ್ಯ ನಿವಾರಣೆಗಾಗಿ 5 ಪುರುಷರು, 2 ಮಹಿಳೆಯರು ಇದ್ದಾರೆ. ಮಂಡ್ಯ ಜಿಲ್ಲೆಯ ಇತರ ಭಾಗಗಳಲ್ಲಿರುವಂತೆ, ಇಲ್ಲೂ ಕೂಡ ಸಾರ್ವಜನಿಕರು ಪೌರಕಾರ್ಮಿಕರನ್ನು ಅಸ್ಪೃಶ್ಯರೆಂದೇ ಪರಿಗಣಿಸಿದ್ದಾರೆ. ಬೆಳಕವಾಡಿಯ ಮುನಿಸಿಪಾಲಿಟಿಯ ಈ ವರ್ಗದ ಒಬ್ಬ ಮಾಜಿ ಕೌನ್ಸಿಲರ್ ತನ್ನನ್ನು ಹೊಟೇಲಿನ ಹಾಗೂ ಕ್ಷೌರದ ಅಂಗಡಿಯ ಒಳಗಡೆಗೆ ಸೇರಿಸುವುದಿಲ್ಲವೆಂದು ದೂರಿದ್ದಾನೆ.

**ಬೀದರ್**

ಸಮಿತಿಗೆ ನಮ್ಮ ರಾಜ್ಯದ ಆಡಳಿತ ವ್ಯವಸ್ಥೆಯ ಮುನಿಸಿಪಲ್ ಸಿವಿಲ್ ಸೇವೆಗಳಲ್ಲಿ ಏಕರೂಪತೆ ಇಲ್ಲದಿರುವುದು ಬೀದರ್ ನಗರ ಮುನಿಸಿಪಾಲಿಟಿಗೆ ಭೇಟಿ ಇತ್ತಿದಾಗ ಕಂಡು ಬಂತು. ಇಲ್ಲಿ, ಬೀದರ್ ಪೌರಕಾರ್ಮಿಕರು ಪಿಂಚಣಿ ಹಾಗೂ ಗ್ರಾಚುಯಿಟಿ ಎರಡನ್ನೂ ಪಡೆಯುತ್ತಿದ್ದಾರೆ. ಏಕೆಂದರೆ ಬೀದರ್ ಪೌರಕಾರ್ಮಿಕರು ಹಿಂದಿನ ಹೈದರಾಬಾದ್ ಸಿವಿಲ್ ಸೇವೆಗಳ ನಿಯಮಗಳ ವ್ಯಾಪ್ತಿಗೆ ಒಳಪಟ್ಟಿದ್ದಾರೆ.

1956ರಲ್ಲಿ ರಾಜ್ಯಗಳ ಪುನರ್ ಸಂಘಟನೆಯಾದಾಗ, ಹೈದರಾಬಾದ್ ಸಂಸ್ಥಾನದಲ್ಲಿದ್ದ ಬೀದರ್, ರಾಯಚೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿದವು. ಹಿಂದಿನ ಮದ್ರಾಸ್ ಸಂಸ್ಥಾನದಿಂದ ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಅದಾಗಲೇ ಸೇರಿತ್ತು. ಆಡಳಿತದ ಉದ್ದೇಶಕ್ಕಾಗಿ ರಾಜ್ಯವನ್ನು ಬೆಂಗಳೂರು, ಮೈಸೂರು, ಬೆಳಗಾಂವಿ ಮತ್ತು ಗುಲ್ಬರ್ಗಾ ವಿಭಾಗಗಳನ್ನಾಗಿ ವಿಂಗಡಿಸಲಾಯಿತು. ಬೀದರ್, ರಾಯಚೂರು, ಗುಲ್ಬರ್ಗಾ ಹಾಗೂ ಬಳ್ಳಾರಿ ಜಿಲ್ಲೆಗಳು ಗುಲ್ಬರ್ಗಾ ವಿಭಾಗಕ್ಕೆ ಒಳಪಟ್ಟವು. ಬಳ್ಳಾರಿ ಜಿಲ್ಲೆಯು ಅನೇಕ ವರ್ಷಗಳಿಂದಲೂ ಕರ್ನಾಟಕ ರಾಜ್ಯದಲ್ಲೇ ಇದ್ದರೂ ಈ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವ ಪೌರಕಾರ್ಮಿಕರು ಈಗಲೂ ಈ ಹಿಂದಿನ ಮದ್ರಾಸ್ ಸಿವಿಲ್ ಸೇವೆಗಳ ವ್ಯಾಪ್ತಿಗೊಳಪಟ್ಟಿರುವುದರಿಂದ ಅವರುಗಳು ನಿವೃತ್ತಿ ಪ್ರಯೋಜನಗಳಿಗೆ ಅರ್ಹರಲ್ಲ. ಆದರೆ, ಬೀದರ್, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿರುವ ಸ್ಥಳೀಯ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವ ಪೌರಕಾರ್ಮಿಕರಿಗೆ ಪೂರ್ಣ ನಿವೃತ್ತಿ ಪ್ರಯೋಜನಗಳು ಸಿಗುತ್ತಿವೆ. ಅದೇ ಗುಲ್ಬರ್ಗಾ ವಿಭಾಗದ ಪೌರಕಾರ್ಮಿಕರ ಸೇವಾ ಸ್ಥಿತಿಗತಿಗಳಲ್ಲಿ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ವ್ಯತ್ಯಾಸ ಇದೆ. ಆದ್ದರಿಂದ ರಾಜ್ಯದಲ್ಲಿರುವ ಎಲ್ಲ ಸ್ಥಳೀಯ ಸಂಸ್ಥೆಗಳಿಗಾಗಿ ಏಕರೂಪದ ಸಾಮಾನ್ಯ ಸಂಹಿತೆಯೊಂದನ್ನು ರಾಜ್ಯ ಸರ್ಕಾರವು ಅಳವಡಿಸಿಕೊಳ್ಳುವುದಕ್ಕೆ ಇದು ಸಕಾಲ.

50,070 ಜನಸಂಖ್ಯೆಯುಳ್ಳ ಬೀದರ್ ನಗರ ಮುನಿಸಿಪಾಲಿಟಿಯು 108 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 43 ಮಹಿಳೆಯರಿದ್ದಾರೆ. ಯಾವುದೇ ಬಗೆಯಲ್ಲಿ ಮಲವನ್ನು ಸಾಗಿಸುವ, ಮಲವನ್ನು ತಲೆ ಮೇಲೆ ಹೊತ್ತು ಒಯ್ಯುವ ಕೆಲಸವನ್ನು ನಿಷೇಧಿಸಿರುವ ಸರ್ಕಾರದ ಆದೇಶದ ನಂತರ ಜಾಡಮಾಲಿ ಕೆಲಸವನ್ನು ತನ್ನ ನೌಕರರು ಮಾಡುತ್ತಿಲ್ಲವೆಂದು ಮುನಿಸಿಪಾಲಿಟಿಯು ಹೇಳಿಕೊಂಡರೂ, ನಾಗರಿಕರು ಖಾಸಗಿಯಾಗಿ ನೇಮಕ ಮಾಡಿಕೊಂಡಿರುವ ಜಾಡಮಾಲಿಗಳು ತಲೆ ಮೇಲೆ ಮಲವನ್ನು ಹೊತ್ತು ಒಯ್ಯುವ ಕೆಲಸವನ್ನು ಬೀದರ್‌ನಲ್ಲಿ ಈಗಲೂ ಮಾಡುತ್ತಿದ್ದಾರೆ. ಇದಲ್ಲದೆ, ಬೀದರ್ ನಲ್ಲಿ ಮುನಿಸಿಪಾಲಿಟಿ ನೌಕರರಿಂದ ಒಂದಲ್ಲ ಒಂದು ವಿಧಾನದಲ್ಲಿ ಜಾಡಮಾಲಿ ಕೆಲಸ ಈಗಲೂ ಆಗುತ್ತಿದೆ.

ಬೀದರ್‌ನಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿರುವ ಪೌರಕಾರ್ಮಿಕರು ಪಾದಚಾರಿ ರಸ್ತೆ ಮೇಲಿರುವ ಹಾಗೂ ರಸ್ತೆಗಳ ಮೇಲಿರುವ ಮಲವನ್ನು ಸಾಗಿಸುವ ಕೆಲಸ ಮಾಡುತ್ತಿಲ್ಲ. ಆದರೆ, ಅದರ ಸುತ್ತಮುತ್ತ ಕಸಗುಡಿಸುತ್ತಾರೆ. ಈ ಹಿಂದೆ ಜಾಡಮಾಲಿಗಳಾಗಿದ್ದ ಈಗ ಕಸಗುಡಿಸುವವರ ವೃಂದದಲ್ಲಿರುವವರಿಗೆ ಪಾದಚಾರಿ ರಸ್ತೆಗಳ ಮೇಲಿರುವ ಹಾಗೂ ರಸ್ತೆಗಳ ಮೇಲಿರುವ ಮಲವನ್ನು ಸಾಗಿಸುವ ಕೆಲಸ ವಹಿಸಲಾಗಿದೆ.

ಬೀದರ್ ನಗರ ಮುನಿಸಿಪಾಲಿಟಿಯು ಅಧಿಕೃತವಾಗಿ ಜಾಡಮಾಲಿ ಸೇವೆಯನ್ನು ಹಿಂತೆಗೆದುಕೊಂಡಿದೆಯಾದರೂ, ಈ ನಗರದಲ್ಲಿ ಈಗಲೂ 150 ಖಾಸಗಿ ಜಾಡಮಾಲಿಗಳಿದ್ದಾರೆ. ಅವರುಗಳು ಈಗಲೂ ಮನೆಗಳ ಶೌಚಾಲಯಗಳಿಂದ ಮಲವನ್ನು ತೆಗೆದು ತಲೆ ಮೇಲೆ ಹೊತ್ತು ಸಾಗಿಸುವ ಕೆಲಸ ಮಾಡುತ್ತಿದ್ದಾರೆ. ಬಹು ಹಿಂದೆಯೇ ಹರಿಯಾಣ ಮತ್ತು ಉತ್ತರ ಪ್ರದೇಶದಿಂದ ಬೀದರಿಗೆ ವಲಸೆ ಬಂದಿರುವ ಈ ಖಾಸಗಿ ಜಾಡಮಾಲಿಗಳು ಉತ್ತರ ಭಾರತದ ಹಿಂದಿ ಮಾತನಾಡುವ ಬಾಲ್ಮೀಕಿ ಸಮುದಾಯದವರು.

ಖಾಸಗೀ ಜಾಡಮಾಲಿಗಳ ನಿವಾಸದ ಬಡಾವಣೆಗಳಿಗೆ ಸಮಿತಿಯು ಭೇಟಿ ನೀಡಿದಾಗ ಈ ಜನರು ಇತರ ಜಾತಿಗಳವರ ಮಧ್ಯೆ, ಸ್ವಚ್ಛ ಪರಿಸರದಲ್ಲಿ ವಾಸ ಮಾಡುತ್ತಿರುವುದನ್ನು ಕಂಡು ಸಮಿತಿಗೆ ಆಶ್ಚರ್ಯವಾಯಿತು.

ಚೆನ್ನಾಗಿ ಕಟ್ಟಿದ, ವಿಶಾಲ ಜಾಗವನ್ನುಳ್ಳ, ಮಂಚಗಳು, ರೇಡಿಯೋ ಮತ್ತು ಸೈಕಲ್ ಮುಂತಾದ ಆಧುನಿಕ ಸೌಕರ್ಯಗಳು ಇರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಈ ಖಾಸಗೀ ಜಾಡಮಾಲಿಗಳು ಅವರ ಕೆಲಸಗಳನ್ನು ಮುಗಿಸಿ ಬಂದಾದ ಮೇಲೆ, ಇವರುಗಳು ಜಾಡಮಾಲಿಗಳು ಎಂಬುದು ಗುರುತು ಹತ್ತದ ಹಾಗಿರುತ್ತಾರೆ. ಹೇಗೆಂದರೆ ಇವರುಗಳು ಹಾಗೂ ಇವರುಗಳ ಕುಟುಂಬದವರು ನೀಟಾಗಿ ಬಟ್ಟೆ ಬರೆ ಹಾಕಿಕೊಂಡಿರುತ್ತಾರೆ ಹಾಗೂ ಚೆನ್ನಾಗಿ ಕಾಣುತ್ತಿರುತ್ತಾರೆ. ಇವರುಗಳು ಎಷ್ಟೋ ಮನೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಹಾಗಾಗಿ ಈ ಖಾಸಗೀ ಜಾಡಮಾಲಿಗಳ ತಿಂಗಳ ಆದಾಯ ರೂ.400–500 ರಷ್ಟಿರುತ್ತದೆ.

ಈ ಖಾಸಗೀ ಜಾಡಮಾಲಿಗಳು ತಮಗೆ ಈಗಿರುವಂತೆಯೇ ಬದಲಿ ಹಾಗೂ ಹಣಕಾಸಿನ ನೌಕರಿಯನ್ನು ಒದಗಿಸಿಕೊಟ್ಟರೆ ತಾವು ಈ ವೃತ್ತಿಯನ್ನು ಬಿಡುವುದಾಗಿ ಸಮಿತಿಗೆ ತಿಳಿಸಿದರು. (ರಾಜ್ಯದಲ್ಲಿರುವ IV ನೇ ದರ್ಜೆ ನೌಕರರ ಒಟ್ಟು ತಿಂಗಳ ಸಂಬಳ ರೂ.249.40 ಮಾತ್ರ)

ಈ ಬಾಲ್ಮೀಕಿ ಜಾಡಮಾಲಿಗಳು ಯಾರೇ ಸವರ್ಣೀಯ ಹಿಂದೂಗಳು ಹೇಗೆ ತಮ್ಮ ಮನೆಗಳನ್ನು ಚೆನ್ನಾಗಿ ಹಾಗೂ ಸ್ವಚ್ಛವಾಗಿಟ್ಟುಕೊಂಡಿದ್ದಾರೋ ಹಾಗೆಯೇ ತಮ್ಮ ಮನೆಗಳನ್ನು ಚೆನ್ನಾಗಿ ಸ್ವಚ್ಛವಾಗಿಟ್ಟು ಕೊಂಡಿದ್ದಾರೆ. ಸವರ್ಣೀಯರ ಮನೆಗಳಲ್ಲಿ ಈ ಬಾಲ್ಮೀಕಿ ಜಾಡಮಾಲಿಗಳು ಕುಳಿತುಕೊಳ್ಳಲು, ತಿಂಡಿ ತಿನ್ನಲು, ಊಟ ಮಾಡಲು ಸಂಕೋಚಪಟ್ಟುಕೊಳ್ಳುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿತು.

ಈ ಬಾಲ್ಮೀಕಿ ಜಾಡಮಾಲಿಗಳು ತಮ್ಮ ಮಕ್ಕಳು ವಿದ್ಯಾವಂತರಾಗಲು ತುಂಬಾನೇ ಆಸಕ್ತಿವಹಿಸುತ್ತಾರೆ. ಸರಿ ಸುಮಾರು 12 ಮಕ್ಕಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಾಸಾಗಿದ್ದಾರೆಂಬುದನ್ನು ಸಮಿತಿಯು ಗಮನಿಸಿತು. ಆದರೆ, ಬೀದರ್ ನಗರ ಮುನಿಸಿಪಾಲಿಟಿಯು ನೇಮಕ ಮಾಡಿಕೊಂಡಿರುವ ಪೌರಕಾರ್ಮಿಕರ ಸ್ಥಿತಿಗತಿ ಇದಕ್ಕೆ ತದ್ವಿರುದ್ಧವಾಗಿದೆ. ಈ ಪೌರಕಾರ್ಮಿಕರು A.K.Colony ಎಂದು ಕರೆಯುವ ಪ್ರತ್ಯೇಕ ಕಾಲೋನಿಯಲ್ಲಿ ವಾಸಿಸುತ್ತಿದ್ದಾರೆ. ಮುನಿಸಿಪಾಲಿಟಿಯ ಭೂಮಿಯಲ್ಲಿ ಗುಡಿಸಲುಗಳನ್ನು ಮಣ್ಣಿನ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮುನಿಸಿಪಾಲಿಟಿಯು ತನ್ನ ನೌಕರರಿಗೇ ಈ ಕಾಲೋನಿಯಲ್ಲಿ ನಾಗರಿಕ ಸೌಕರ್ಯಗಳನ್ನು ಒದಗಿಸಿಲ್ಲ. ಕಾಲೋನಿಯಲ್ಲಿ ಒಂದೇ ಒಂದು ನಲ್ಲಿ ಇದೆ. ಅದರ ಸುತ್ತಲೂ ಗಲೀಜು ನೀರು ತುಂಬಿದ ಹೊಂಡವಿದೆ. ಈ ಪೌರಕಾರ್ಮಿಕರಕು ಈ ದಿನಗಳಲ್ಲೂ ಅದೇ ನಿಂತ ಮಲಿನ ನೀರನ್ನೇ ಬಳಸುತ್ತಿದ್ದಾರೆ. ತಾವು ಅನೇಕ ಬಗೆಯ ರೋಗರುಜಿನಗಳಿಗೆ ತುತ್ತಾಗುತ್ತಿರುವುದರ ಬಗ್ಗೆ ಬಹುತೇಕ ಪೌರಕಾರ್ಮಿಕರು ದೂರು ಕೊಡದಿರುವುದು ಆಶ್ಚರ್ಯಕರ.

**ಬೆಳಗಾವಿ**

ಬೆಳಗಾವಿ ನಗರವು ಹಿಂದಿನಿಂದಲೂ ಈಗಲೂ ಕನ್ನಡಿಗರ ಹಾಗೂ ಮಹಾರಾಷ್ಟ್ರೀಯರ ನಡುವೆ ವಿವಾದಕ್ಕೆ ಒಳಗಾಗಿರುವ ನಗರ. ಹಿತಕರ ಹವೆ, ಪರಿಸರ ಉಳ್ಳ ಐತಿಹಾಸಿಕ ನಗರ. ಇಲ್ಲಿ ಎರಡು ಭಾಗಗಳಿವೆ. ಒಂದು ನಗರ, ಇನ್ನೊಂದು ಕಂಟೋನ್‌ಮೆಂಟ್ ಎಂದರೆ ದಂಡು ಪ್ರದೇಶ. ದಂಡು ಪ್ರದೇಶದ ನೈರ್ಮಲ್ಯದ ಕೆಲಸ ಕಾರ್ಯಗಳನ್ನು ಮಿಲಿಟರಿ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ. ಈ ನಗರದಲ್ಲಿ ಸರಿ ಸುಮಾರು 2 ಲಕ್ಷ ಜನರಿದ್ದಾರೆ. ಮುನಿಸಿಪಾಲಿಟಿಗೆ ಪ್ರತಿವರ್ಷ 95 ಲಕ್ಷ ರೂಪಾಯಿ ಆದಾಯವಿದೆ. ಈ ನಗರದಲ್ಲಿ 230 ಕಸಗುಡಿಸುವವರು, 272 ಜಾಡಮಾಲಿಗಳು ಕೆಲಸ ಮಾಡುತ್ತಿದ್ದಾರೆ. ಎರಡೂ ನೌಕರಿ ವೃಂದದಲ್ಲಿ ಸರಿ ಸುಮಾರು 108 ಮಹಿಳಾ ಕೆಲಸಗಾರ್ತಿಯರಿದ್ದಾರೆ. ಈ ನಗರ ಮುನಿಸಿಪಾಲಿಟಿಯು ಪೌರಕಾರ್ಮಿಕರಿಗೆ ಕೇವಲ 81 ಮನೆಗಳನ್ನು ಕಟ್ಟಿಸಿದೆ. ಇನ್ನುಳಿದವರು ಪ್ರತ್ಯೇಕ ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ. ಮುನಿಸಿಪಾಲಿಟಿಯು ತನ್ನ ನೌಕರರಿಗೆ ಯಾವುದೇ ಮನೆ ನಿವೇಶನವನ್ನು ಮಂಜೂರು ಮಾಡಿಲ್ಲ.

ಇಲ್ಲಿನ, ಅನೇಕ ನೌಕರರು ಸಮಿತಿಗೆ ಅವರುಗಳ ಅನೇಕ ಕಷ್ಟಗಳನ್ನು ಎಂದರೆ ಈ ನೌಕರರಿಗೆ ಅವರ ಲೆಕ್ಕದಲ್ಲಿರುವ ರಜೆಯನ್ನು ಕೊಡುತ್ತಿಲ್ಲ, ರಜಾ ದಿನಗಳಲ್ಲೂ ಕೂಡ ಮಾಡಿದ ಹೆಚ್ಚುವರಿ ಕೆಲಸಕ್ಕೆ ಹಣ

ಕೊಡುವುದಿಲ್ಲ ಅಥವಾ ಪರಿಹಾರ ರಜೆ ಕೊಡುವುದಿಲ್ಲ, ಮಹಿಳಾ ಕೆಲಸಗಾರ್ತಿಯರಿಗೆ ಕೇವಲ ಒಂದೇ ಒಂದು ತಿಂಗಳು ಹೆರಿಗೆ ರಜೆ ಕೊಡುತ್ತಾರೆ, ಮುನಿಸಿಪಾಲಿಟಿಯು ತನ್ನದೆ ಆಸ್ಪತ್ರೆಗಳನ್ನು ನಡೆಸುತ್ತಿದ್ದರೂ, ಆ ಆಸ್ಪತ್ರೆಗಳಲ್ಲಿ ಪೌರಕಾರ್ಮಿಕರಿಗೆ ಆದ್ಯತೆಗೆ ಅನುಕೂಲ ಕಲ್ಪಿಸಿಕೊಡುತ್ತಿಲ್ಲವೆಂದು ಹೇಳಿಕೊಂಡರು.

**ಬಿಜಾಪುರ**

ಒಂದು ಕಾಲದಲ್ಲಿ ಅದಿಲ್ ಷಾ ಹಿ ಸುಲ್ತಾನನ ನೆಲೆಯಾಗಿದ್ದ ಬಿಜಾಪುರವು ಈಗ ಹಾಳು ಬಿದ್ದ ಸ್ಥಿತಿಯಲ್ಲಿದೆ. ಸುಲ್ತಾನರ ಆಳ್ವಿಕೆಯಲ್ಲಿ ಬಿಜಾಪುರವು ಶಿಲ್ಪಕಲಾ ವೈಭವದ ಚಟುವಟಿಕೆಗಳ ತುಂಬು ಅಗರವಾಗಿತ್ತು. ಈ ದಿನಗಳಲ್ಲೂ ಕೂಡ ಗೋಲ್ ಗುಂಬಜ್ ಮತ್ತು ಇಬ್ರಾಹಿಂ ರೋಜಾ ರಚನೆಗಳು ವಾಸ್ತುಶಿಲ್ಪ ನಿರ್ಮಾಣದ ನೈಪುಣ್ಯತೆಗಷ್ಟೇ ಅಲ್ಲ, ಮಧ್ಯಯುಗೀನ ಶಿಲ್ಪ ವಿಜ್ಞಾನದಲ್ಲಿನ ಅದ್ಭುತ ಕೌಶಲದ ಪ್ರತೀಕವಾಗಿವೆ. ಅಂಥದೊಂದು ಭವ್ಯ ನಗರವು ಈಗ ಶೋಚನೀಯ ಸ್ಥಿತಿಯಲ್ಲಿದೆ.

ಬಿಜಾಪುರವು ರಾಜ್ಯದಲ್ಲೇ ದೊಡ್ಡ ಜಿಲ್ಲೆ. ಬಿಜಾಪುರ ನಗರವು ಜಿಲ್ಲೆಯ ಕೇಂದ್ರ ಕಾರ್ಯಸ್ಥಾನ. ಬಿಜಾಪುರ ನಗರ ಮುನಿಸಿಪಾಲಿಟಿಯು ಒಟ್ಟು 146 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 81 ಪುರುಷರು, ಇನ್ನುಳಿದವರು ಮಹಿಳೆಯರು. ಇವರುಗಳ ಸ್ಥಿತಿಗತಿ ತೀರಾ ಶೋಚನೀಯ, ಹೃದಯ ಕಲಕುವಂಥದ್ದು. ಇವರುಗಳ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಮುನಿಸಿಪಲ್ ಅಧಿಕಾರಿಗಳು ಯಾವ ಕ್ರಮಗಳನ್ನೂಕೈಗೊಂಡಿಲ್ಲ. ಪೌರಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಸರ್ಕಾರವು ಕಾಲಕಾಲಕ್ಕೆ ಅನೇಕ ಆದೇಶಗಳನ್ನು ಹೊರಡಿಸಿದ್ದರೂ ಅವುಗಳನ್ನು ಕಾರ್ಯರೂಪಕ್ಕೆ ತಂದೇ ಇಲ್ಲ. ಮುನಿಸಿಪಾಲಿಟಿಯು ಕೇವಲ 56 ಮನೆಗಳನ್ನು ಕಟ್ಟಿಸಿದೆ. ಅವೂ ಕೂಡ ಸಮಾಧಾನಕರ ಸ್ಥಿತಿಯಲ್ಲಿಲ್ಲ. ಈ ಆಧುನಿಕ ಕಾಲದಲ್ಲಿ ತೀರಾ ಎಂದರೆ ತೀರಾ ಅಸಹ್ಯಪಡುವ ರೋಗವಾದ ಕುಷ್ಠರೋಗಕ್ಕೆ ಅನೇಕ ಪೌರಕಾರ್ಮಿಕರು ತುತ್ತಾಗಿರುವುದನ್ನು ಗಮನಿಸಿ ಸಮಿತಿಗೆ ದಿಗ್ಭ್ರಮೆಯಾಯಿತು. ಕುಷ್ಠರೋಗವು ಅಂಟು ರೋಗವೆಂದು ಪರಿಗಣಿತವಾಗಿರುವುದರಿಂದ ಈ ಪೌರಕಾರ್ಮಿಕರು ತಮ್ಮ ಕೆಲಸ ಮಾಡುವಾಗ ಸಾರ್ವಜನಿಕರ ಸಂಪರ್ಕಕ್ಕೆ ಬರುವುದರಿಂದ ಈ ರೋಗವು ಇತರರಿಗೂ ಹರಡುವ ಪ್ರತಿಯೊಂದು ಸಾಧ್ಯತೆಯೂ ಇರುತ್ತದೆ.

ಈ ರೋಗವು ಏಕೆ ಪೌರಕಾರ್ಮಿಕರಿಗೆ ಅಂಟಿದೆ ಹಾಗೂ ಅದರಿಂದ ಬಳಲುತ್ತಿದ್ದಾರೆಂಬುದಕ್ಕೆ ಅನೇಕ ಕಾರಣಗಳಿವೆ. ಬರಿಗೈಯಿಂದ ಮಲವನ್ನು ಎತ್ತಿ ಸಾಗಿಸುವ ತೀರಾ ಅಸಹಜ ಹಾಗೂ ಅನಾಗರಿಕ ವಿಧಾನಗಳನ್ನು ಅಳವಡಿಸಿಕೊಂಡಿರುವುದೇ ಕಾರಣ. ಮುನಿಸಿಪಲ್ ಅಧಿಕಾರಿಗಳು ವೈದ್ಯಕೀಯ ಚಿಕಿತ್ಸೆಗಾಗಲಿ ಅಥವಾ ವೈದ್ಯಕೀಯ ತಪಾಸಣೆಗಾಗಲಿ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಕುಷ್ಠ, ಕೊಕ್ಕೆಹುಳು ರೋಗ, ಕ್ಷಯ ಮುಂತಾದ ರೋಗಗಳು ಪೌರಕಾರ್ಮಿಕರಲ್ಲಿ ವ್ಯಾಪಕವಾಗಿರುವುದನ್ನು ಪರೀಕ್ಷಿಸಲು ಮತ್ತು ಸಮರೋಪಾದಿಯಲ್ಲಿ ರೋಗಗಳನ್ನು ನಿರ್ಮೂಲನ ಮಾಡುವ ಸಲುವಾಗಿ ಕ್ರಮಗಳನ್ನು ಸೂಚಿಸಲು ವೈದ್ಯಕೀಯ ತಜ್ಞರನ್ನು ನೇಮಿಸಲು ಸರ್ಕಾರವು ಈ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ.

**ಚಿಕ್ಕಮಗಳೂರು**

ಜಿಲ್ಲೆಯ ಕೇಂದ್ರ ಸ್ಥಾನವನ್ನು ಇದೇ ಹೆಸರಿನಿಂದ ಕರೆಯಲಾಗುತ್ತಿದೆ. 43,000 ಜನಸಂಖ್ಯೆಯುಳ್ಳ ಟೌನ್ ಮುನಿಸಿಪಾಲಿಟಿಯ ವಾರ್ಷಿಕ ಆದಾಯ 16 ಲಕ್ಷ ರೂಪಾಯಿ. ಈ ಪಟ್ಟಣದ ನೈರ್ಮಲ್ಯ ನಿರ್ವಹಣೆ ಕೆಲಸಕ್ಕಾಗಿ ಮುನಿಸಿಪಾಲಿಟಿಯು 103 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಸರ್ಕಾರದ ಆದೇಶಗಳಂತೆ, ನೀರು ಹಾಕಿ ಹರಿಸುವ ಎಲ್ಲ ಶೌಚಾಲಯಗಳನ್ನು ಫ್ಲಷ್‌ಔಟ್ ಶೌಚಾಲಯಗಳನ್ನಾಗಿ ಪರಿವರ್ತಿಸಿರುವ ಹಾಗೂ ಜಾಡಮಾಲಿ ಸೇವೆಯನ್ನು ನಿಲ್ಲಿಸಿರುವ ಮುನಿಸಿಪಾಲಿಟಿಗಳಲ್ಲಿ ರಾಜ್ಯದಲ್ಲೇ ಇದೇ ಪ್ರಪ್ರಥಮ ಮುನಿಸಿಪಾಲಿಟಿ. ಆದರೆ, ತಮ್ಮ ಶೌಚಾಲಯಗಳ ಪರಿವರ್ತನೆಗೆ ಮುನಿಸಿಪಾಲಿಟಿಗೆ ಸಹಕಾರ ನೀಡಿದ್ದ ಜನರೇ ಈಗ ತಮ್ಮ ಶೌಚಾಲಯದ ಮಲವನ್ನು ದಾರಿಯಲ್ಲಿನ ತೆರೆದ ಗಟಾರಗಳಿಗೆ ಹರಿಯಬಿಡುತ್ತಿದ್ದಾರೆ. ಹಾಗಾಗಿ, ಪೌರಕಾರ್ಮಿಕರು ಮತ್ತದೇ ಇನ್ನೊಂದು ಬಗೆಯ ಜಾಡಮಾಲಿ ಕೆಲಸವನ್ನು ಒತ್ತಾಯದಿಂದ ಮಾಡುತ್ತಿದ್ದಾರೆ.

**ಚನ್ನಪಟ್ಟಣ**

ಚನ್ನಪಟ್ಟಣ ಟೌನ್ ಮುನಿಸಿಪಾಲಿಟಿಯು 58 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 26 ಪುರುಷರು, 32 ಮಹಿಳೆಯರು ಇವರುಗಳ ಪೈಕಿ, ಪರಿಶಿಷ್ಟ ಜಾತಿಯಲ್ಲದ ಇಬ್ಬರು ಕಸಗುಡಿಸುವ ವೃಂದದಲ್ಲಿದ್ದರು. ಆದರೆ, ಆ ಇಬ್ಬರಿಗೆ ಕಸಗುಡಿಸುವ ಕೆಲಸವಲ್ಲದ ಬೇರೆ ಕೆಲಸಗಳನ್ನು ವಹಿಸಲಾಗಿದೆ. ಚನ್ನಪಟ್ಟಣವು ರಾಜ್ಯದ ರಾಜಧಾನಿಗೆ ತೀರಾ ಸಮೀಪದಲ್ಲಿದ್ದರೂ, ಈ ಟೌನ್‌ನಲ್ಲಿ ಕೂಡ ಅವರನ್ನು ಹೊಟೇಲುಗಳ, ಕ್ಷೌರದಂಗಡಿಗಳ ಒಳಗಡೆಗೆ ಸೇರಿಸುತ್ತಿಲ್ಲವೆಂದು ಪೌರಕಾರ್ಮಿಕರು ಸಮಿತಿಗೆ ದೂರು ಕೊಟ್ಟರು. ಈ ಪಟ್ಟಣದಲ್ಲಿ ಸವರ್ಣೀಯರಷ್ಟೇ ಅಲ್ಲ. ಕಸಗುಡಿಸುವ ಹಾಗೂ ಜಾಡಮಾಲಿ ವೃತ್ತಿಯ ಈ ಜನರನ್ನು ಪರಿಶಿಷ್ಟ ಜಾತಿಯವರು ಕೀಳಾಗಿ ಕಾಣುತ್ತಿದ್ದಾರೆ. ಪರಿಶಿಷ್ಟ ಜಾತಿಯವರಿಗಾಗಿ ಇರುವ ಶಾಲೆಗಳಲ್ಲಿ ಪೌರಕಾರ್ಮಿಕರ ಮಕ್ಕಳನ್ನು ಸೇರಿಸಿಕೊಳ್ಳುತ್ತಿಲ್ಲ. ತಮ್ಮ ಸಂಬಳವನ್ನು ಕಾಲಕಾಲಕ್ಕೆ ಕೊಡುತ್ತಿಲ್ಲ. ಸರ್ಕಾರಿ ಆಸ್ಪತ್ರೆಯ ವೈದ್ಯರು ಕೊಡುವ ವೈದ್ಯಕೀಯ ಪ್ರಮಾಣಪತ್ರವನ್ನು ಕೊಡದಿದ್ದರೆ ಕೇವಲ ಒಂದು ದಿನಕ್ಕೂ ಅಥವಾ ಎರಡು ದಿನಗಳಿಗೂ ಸಿಕ್ ಲೀವ್ ನ್ನು ಮಂಜೂರು ಮಾಡುವುದಿಲ್ಲ ಎಂದು ಪೌರಕಾರ್ಮಿಕರು ಹೇಳಿಕೊಂಡರು.

**ಚಾಮರಾಜನಗರ**

ಚಾಮರಾಜನಗರ ಮೈಸೂರು ಜಿಲ್ಲೆಯಲ್ಲಿದೆ. ತಾಲ್ಲೂಕಿಗೂ ಇದೆ ಹೆಸರು. ಇದೇ ಕೇಂದ್ರ ಕಾರ್ಯಸ್ಥಾನ. 31,000 ಜನಸಂಖ್ಯೆಯನ್ನುಳ್ಳ ಪಟ್ಟಣ. ಟೌನ್ ಮುನಿಸಿಪಾಲಿಟಿಗೆ ಸುಮಾರು 6 ಲಕ್ಷ ರೂಪಾಯಿ ಆದಾಯವಿದೆ. 63 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಈ ಪೈಕಿ ಐವರು ಇನ್ನು ನಾಮಿನಲ್ ರೋಲ್‌ನಲ್ಲೇ ಇದ್ದಾರೆ. ಆರು ಜಾಡಮಾಲಿಗಳಿದ್ದಾರೆ.

ಈ ಎಲ್ಲ ಪೌರಕಾರ್ಮಿಕರು ಮಧುರೆ ಮಾದಿಗ ಸಮುದಾಯದವರು. ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಿಂದ ವಲಸೆ ಬಂದವರು. ಈ ಪೌರಕಾರ್ಮಿಕರು ವಾಸಿಸುತ್ತಿರುವ ಕಾಲೋನಿಯಲ್ಲಿ ಕುಡಿಯುವ ನೀರಿನ ಸೌಲಭ್ಯದ ಕೊರತೆಯಿದೆ. ಮೂಲ ನಾಗರಿಕ ಸೌಲಭ್ಯದ ಕೊರತೆಯೂ ಇದೆ. ಮುಖ್ಯ ರಸ್ತೆಯಲ್ಲಿ ನಲ್ಲಿ ಇದೆಯಾದರೂ, ಅಲ್ಲಿ ಸಮೀಪದಲ್ಲಿ ವಾಸಿಸುತ್ತಿರುವ ಮುಸ್ಲಿಮರು, ನಲ್ಲಿಯ ನೀರನ್ನು ಪೌರಕಾರ್ಮಿಕರು ತೆಗೆದುಕೊಳ್ಳಲು ಬಿಡುತ್ತಿಲ್ಲ. ಹಾಗಾಗಿ, ಪೌರಕಾರ್ಮಿಕರು ನೀರಿಗಾಗಿ ಅಲ್ಲೇ ಪಕ್ಕದಲ್ಲಿರುವ ಗಲೀಜು ಹಾಗೂ ಮಲಿನ ನೀರುಬಾವಿಯನ್ನು ಅವಲಂಬಿಸಿದ್ದಾರೆ. ಸವರ್ಣೀಯ ಹಿಂದೂಗಳ ಹೊಟೇಲಿನ ಒಳಗಡೆಗೆ ಪೌರಕಾರ್ಮಿಕರನ್ನು ಸೇರಿಸುತ್ತಿಲ್ಲ. ಎದ್ದು ಕಾಣುವಂತಹ ಈ ಬೇಧ ಭಾವವನ್ನು ಗಮನಿಸಿ ಮುನಿಸಿಪಾಲಿಟಿಯ ಗಮನಕ್ಕೆ ಸಮಿತಿಯು ತಂದಾಗ, ಇನ್ನು ಮುಂದೆ ಹಾಗಾಗದಂತೆ ಕ್ರಮ ತೆಗೆದುಕೊಳ್ಳುವುದಾಗಿ ಮುನಿಸಿಪಾಲಿಟಿ ಅಧಿಕಾರಿಗಳು ಸಮಿತಿಯ ಅಧ್ಯಕ್ಷರಿಗೆ ತಿಳಿಸಿದರು. ಆದರೆ, ಮುಂದೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಚಾಮರಾಜನಗರದಲ್ಲಿ ಅದೇ ದುಸ್ಥಿತಿ ಮುಂದುವರಿದಿದೆ.

**ಚಿಕ್ಕನಾಯಕನ ಹಳ್ಳಿ**

ಚಿಕ್ಕನಾಯಕನ ಹಳ್ಳಿ ತುಮಕೂರು ಜಿಲ್ಲೆಯಲ್ಲಿರುವ ತಾಲ್ಲೂಕು. ಬೆಂಗಳೂರಿನಿಂದ 160 ಕಿ.ಮೀ ದೂರದಲ್ಲಲಿದೆ. 13,063 ಜನಸಂಖ್ಯೆಯುಳ್ಳ ಪಟ್ಟಣ. ಟೌನ್ ಮುನಿಸಿಪಾಲಿಟಿಯು 28 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಟೌನ್ ಮುನಿಸಿಪಾಲಿಟಿಗೆ ವರ್ಷಕ್ಕೆ, ಸುಮಾರು 2 ಲಕ್ಷ ರೂಪಾಯಿ ಆದಾಯವಿದ್ದರೂ ಪೌರಕಾರ್ಮಿಕರಿಗೆ ಸಕಾಲದಲ್ಲಿ ಅವರ ಸಂಬಳವನ್ನು ಕೊಡುತ್ತಿಲ್ಲದಿರುವುದು ಹಾಗೂ ಸಂಬಳಕ್ಕಾಗಿ ಪ್ರತಿ ತಿಂಗಳ ಮೂರನೆಯ ವಾರದವರೆಗೆ ಪೌರಕಾರ್ಮಿಕರು ಕಾಯಬೇಕಾಗಿರುವುದು ವಿಷಾದನೀಯ ಸಂಗತಿ. ದೇಶದ ಅರ್ಥ ವ್ಯವಸ್ಥೆಯಲ್ಲಿ ಪೌರಕಾರ್ಮಿಕರು ಅತ್ಯಂತ ಕೆಳಸ್ತರದಲ್ಲಿ ಇರುವವರು. ಇವರ ಬಗ್ಗೆ ಈ ಅಸಹನೀಯ ವಿಧಾನ ಅನುಸರಿಸುತ್ತಿರುವುದು ನಿಜಕ್ಕೂ ಖಂಡನೀಯ. ಈ ಕೆಲಸಗಾರರಿಗೆ ಕೇವಲ ಒಂದೂವರೆ ದಿನ ವಾರದ ರಜಾ ದಿನ ಸಿಗುತ್ತಿದೆ.

**ಚಿತ್ರದುರ್ಗ**

ಚಿತ್ರದುರ್ಗ ಪಟ್ಟಣವು ಬೆಂಗಳೂರಿನಿಂದ 145 ಕಿ.ಮೀ ದೂರದಲ್ಲಿದೆ. ಇದು ಜಿಲ್ಲೆಯ ಕೇಂದ್ರ ಕಾರ್ಯಸ್ಥಾನ. 59,000 ಜನಸಂಖ್ಯೆಯನ್ನುಳ್ಳ ಪಟ್ಟಣ. ಮುನಿಸಿಪಾಲಿಟಿಗೆ ವರ್ಷಕ್ಕೆ ಸುಮಾರು 20 ಲಕ್ಷ ರೂಪಾಯಿ ಆದಾಯವಿದೆ. ಮುನಿಸಿಪಾಲಿಟಿಯಲ್ಲಿ 130 ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ 70 ಮಹಿಳೆಯರಿದ್ದಾರೆ. ಸರಿ ಸುಮಾರು 118 ಪೌರಕಾರ್ಮಿಕರು ಮಾದಿಗ ಸಮುದಾಯದವರು. ಉಳಿದವರು ನಾಯಕ, ಕುಂಬಾರ, ಮುಸ್ಲಿಂ ಮುಂತಾದ ಜಾತಿಯವರು. ಮಾದಿಗ ಸಮುದಾಯದವರಲ್ಲದ ಪೌರಕಾರ್ಮಿಕರಿಗೆ ಕಸಗುಡಿಸುವ ಕೆಲಸ ಮಾಡಿಸದೆ ಬೇರೆ ಕೆಲಸವನ್ನು ವಹಿಸಲಾಗಿದೆ.

ಈ ಪೌರಕಾರ್ಮಿಕರು ನಾಲ್ಕು ಬೇರೆ ಬೇರೆ ಜಾಗಗಳಲ್ಲಿ ಇತರೆ ಹರಿಜನರೊಂದಿಗೆ ವಾಸಿಸುತ್ತಿದ್ದಾರೆ. ಈ ಕಾಲೋನಿಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಮಾದಿಗ ಸಮುದಾಯದ ಪೌರಕಾರ್ಮಿಕರು ಭಿನ್ನ ರೀತಿಯ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದೇನೆಂದರೆ ಇತರೆ ಜಾತಿಯವರ ಸಮಾಧಿ ಜಾಗದಲ್ಲಿ ಈ ಮಾದಿಗ ಸಮುದಾಯದವರ ಶವಗಳನ್ನು ಹೂಳಲು ಬಿಡುತ್ತಿಲ್ಲ. ಈ ಪೌರಕಾರ್ಮಿಕರಲ್ಲಿ ಯಾರಾದರೂ ಸತ್ತ ಸಂದರ್ಭದಲ್ಲಿ ಶವವನ್ನು ಪಟ್ಟಣದ ಸರಹದ್ದುಗಳಿಂದಾಚೆಗೆ ಮೂರು ಮೈಲಿ ದೂರ ತೆಗೆದುಕೊಂಡು ಹೋಗುತ್ತಾರೆ ಹಾಗೂ ರಸ್ತೆ ಬದಿಗಳಲ್ಲೇ ಶವವನ್ನು ಹೂಳತ್ತಾರೆ.

**ದಾವಣಗೆರೆ**

ಚಿತ್ರದುರ್ಗ ಜಿಲ್ಲೆಯಲ್ಲಿರುವ ಕೈಗಾರಿಕಾ ಹಾಗೂ ವಾಣಿಜ್ಯ ನಗರ. ಸುಮಾರು 2 ಲಕ್ಷ ಜನಸಂಖ್ಯೆ ಇರುವ ನಗರ. ನಗರ ಮುನಿಸಿಪಾಲಿಟಿಯು 356 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಪೌರಕಾರ್ಮಿಕರ ಒಟ್ಟು ಸಂಖ್ಯೆ ಪೈಕಿ 126 ಮಹಿಳೆಯರಿದ್ದಾರೆ. ಉಳಿದವರು ಪುರುಷರು. ಈ ಪೌರಕಾರ್ಮಿಕರು ಮಾದಿಗ ಸಮುದಾಯದವರು. ಕನ್ನಡ ಹಾಗೂ ತೆಲುಗು ಮಾತನಾಡುತ್ತಾರೆ.+

ಈ ಪೌರಕಾರ್ಮಿಕರು A.K.Colony ಎಂದು ಕರೆಯುವ ಕಾಲೋನಿಯಲ್ಲಿ ಪರಿಶಿಷ್ಟ ಜಾತಿಯವರೊಂದಿಗೆ ವಾಸಿಸುತ್ತಿದ್ದಾರೆ. ಈ ಕಾಲೋನಿಗೆ ಒಮ್ಮೆ ಮಹಾತ್ಮ ಗಾಂಧಿಯವರು ಭೇಟಿ ಕೊಟ್ಟಿದ್ದರೆಂಬುದು ಇಲ್ಲಿ ಜನಜನಿತ. ಆದರೆ, ಇಲ್ಲಿ ಎಲ್ಲ ನಾಗರಿಕ ಸೌಲಭ್ಯಗಳಿಗೂ ಕೊರತೆಯಿದೆ. ಇಲ್ಲಿ ಪೌರಕಾರ್ಮಿಕರೇ ಕಟ್ಟಿಕೊಂಡಿರುವ ಮನೆಗಳು ಅಡ್ಡಾ ದಿಡ್ಡಿ ಸ್ಥಿತಿಯಲ್ಲಿವೆ.

**ದೇವದುರ್ಗ**

ರಾಯಚೂರು ಜಿಲ್ಲೆಯಲ್ಲಿರುವ ದೇವದುರ್ಗ ಮುನಿಸಿಪಾಲಿಟಿಯು 19 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರ ಪೈಕಿ 12 ಮಹಿಳೆಯರಿದ್ದಾರೆ. ದೇವದುರ್ಗದ ಪೌರಕಾರ್ಮಿಕರು ಪಟ್ಟಣದ ಹೊರಗಿರುವ ಸಣ್ಣ ಗುಡ್ಡದ ಇಳಿಜಾರಿನಲ್ಲಿ ವಾಸಿಸುತ್ತಿದ್ದಾರೆ. ಏಕೆಂದರೆ, ಪಟ್ಟಣದ ಸರಹದ್ದುಗಳ ಒಳಗಡೆಯ ಯಾವ ಜಾಗದಲ್ಲೂ ಇವರು ವಾಸಿಸಲು ಅವಕಾಶ ಕೊಡುತ್ತಿಲ್ಲ. ಈ ಸಣ್ಣಗುಡ್ಡದ ಸುತ್ತಮುತ್ತಲೂ ಜವುಗು ಪ್ರದೇಶ ಇರುವುದರಿಂದ ಮಳೆಗಾಲದಲ್ಲಿ ಈ ಜನರಿಗೆ ತುಂಬಾನೆ ತೊಂದರೆಯಾಗುತ್ತದೆ. ಅಕ್ಕಪಕ್ಕದಲ್ಲಿ ನೀರಿನ ಬಾವಿ ಇಲ್ಲದಿರುವುದರಿಂದ ಟ್ಯಾಂಕಿನ ಅಶುದ್ಧ ನೀರನ್ನೇ ಈ ಜನರು ಬಳಸುತ್ತಿದ್ದಾರೆ. ಸಂಬಳವನ್ನು ಸಕಾಲದಲ್ಲಿ ಕೊಡುತ್ತಿಲ್ಲವೆಂದು ಈ ಜನರು ದೂರುತ್ತಿದ್ದಾರೆ. ತಮ್ಮ ಮಕ್ಕಳನ್ನು ಶಾಲೆಗಳಲ್ಲಿ ಸೇರಿಸಿಕೊಳ್ಳುತ್ತಿಲ್ಲವೆಂದು ಸಹ ಈ ಪೌರಕಾರ್ಮಿಕರು ದೂರಿದ್ದಾರೆ.

**ದೊಡ್ಡಬಳ್ಳಾಪುರ**

ಬೆಂಗಳೂರು ಜಿಲ್ಲೆಯಲ್ಲಿರುವ ಈ ಪಟ್ಟಣ ರೇಷ್ಮೆಗೆ ಹಾಗೂ ನಯವಾದ ಗ್ರಾನೈಟ್ ಚಪ್ಪಡಿಗಳಿಗೆ ಪ್ರಸಿದ್ಧ. ಟೌನ್ ಮುನಿಸಿಪಾಲಿಟಿಯು 56 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 24 ಮಹಿಳೆಯರಿದ್ದಾರೆ. 32 ಪುರುಷರಿದ್ದಾರೆ. ಇವರೆಲ್ಲರೂ ತೆಲುಗು ಮಾತನಾಡುವ ವಡ್ಡ ಸಮುದಾಯದವರು.

ಪಟ್ಟಣದ ಮಧ್ಯ ಭಾಗದಲ್ಲಿ ಈ ಪೌರಕಾರ್ಮಿಕರ ಕಾಲೋನಿ ಇದೆ. ಪಟ್ಟಣದಿಂದ ಹೊರಗಡೆಗೆ ಇವರನ್ನು ಎತ್ತಂಗಡಿ ಮಾಡುವ ಪ್ರಯತ್ನಗಳಾಗಿದ್ದವು. ಆದರೂ, ಆ ಪ್ರಯತ್ನಗಳು ವಿಫಲವಾದವು. ಕಳೆದ ಕೆಲವು ದಶಕಗಳಿಂದಲೂ ಅಲ್ಲೇ ಮನೆ ಕಟ್ಟಿಕೊಂಡಿರುವ ಪ್ಲಾಟ್‌ಗಳಿಗೆ ಒಡೆತನದ ಹಕ್ಕನ್ನು ಮಂಜೂರು ಮಾಡಲಾಗಿದೆ.

**ಗದಗ**

ಗದಗ–ಬೆಟಗೇರಿ ನಗರ ಮುನಿಸಿಪಾಲಿಟಿಯು 321 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 173 ಮಹಿಳೆಯರು, 148 ಪುರುಷರಿದ್ದಾರೆ. ಇವರ ಪೈಕಿ 144 ಪೌರಕಾರ್ಮಿಕರು ನಾಮಿನಲ್ ರೋಲ್‌ನಲ್ಲಿದ್ದಾರೆ. ಇದು ಸರ್ಕಾರದ ಆದೇಶಗಳಿಗೆ ತದ್ವಿರುದ್ಧವಾದುದು. ಇವರ ಪೈಕಿ, 104 ಪೌರಕಾರ್ಮಿಕರು, ತೆಲುಗು ಮಾದಿಗರು, 133 ಪೌರಕಾರ್ಮಿಕರು ಕನ್ನಡ ಚಲವಾದಿಗಳು, 76 ಪೌರಕಾರ್ಮಿಕರು ಕನ್ನಡ ಮಾದಾರರು ಹಾಗೂ 8 ಪೌರಕಾರ್ಮಿಕರು ಕನ್ನಡ ಸಿಕ್ಕಲಿಗ ಸಮುದಾಯದವರು. ತೆಲುಗು ಪೌರಕಾರ್ಮಿಕರು ಬಳ್ಳಾರಿ ಜಿಲ್ಲೆಯಿಂದ ವಲಸೆ ಬಂದವರು. ಈ ಪೌರಕಾರ್ಮಿಕರು ಎರಡು ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ. ಅವುಗಳೆಂದರೆ, ಮಾದಾರ ಓಣಿ, ಚಲವಾದಿ ಓಣಿ. ಪೌರಕಾರ್ಮಿಕರಿಗಾಗಿ ಮುನಿಸಿಪಾಲಿಟಿಯು 37 ಮನೆಗಳನ್ನು ಕಟ್ಟಿ ಕೊಟ್ಟಿದೆ. ಬಹುತೇಕ ಪೌರಕಾರ್ಮಿಕರು ದನದ ಮಾಂಸವನ್ನು ಸೇವಿಸುತ್ತಾರೆ.

**ಗುಂಡ್ಲುಪೇಟೆ**

ಗುಂಡ್ಲುಪೇಟೆ ಜನಸಂಖ್ಯೆ ಸುಮಾರು 15,000. ವಾರ್ಷಿಕ ಆದಾಯ 3 ಲಕ್ಷ ರೂಪಾಯಿ. ನೇಮಕ ಮಾಡಿಕೊಂಡಿರುವ 26 ಪೌರಕಾರ್ಮಿಕರ ಪೈಕಿ 18 ಪುರುಷರು. ಉಳಿದವರು ಮಹಿಳೆಯರು. ಪೌರಕಾರ್ಮಿಕರಿಗಾಗಿ ಮುನಿಸಿಪಾಲಿಟಿಯು ಕೇವಲ 16 ಮನೆಗಳನ್ನು ಕಟ್ಟಿಸಿಕೊಟ್ಟಿದೆ. ಈ ಎಲ್ಲ 26 ಪೌರಕಾರ್ಮಿಕರಿಗೆ 30’ x 40’ ಅಳತೆಯ ನಿವೇಶನಗಳನ್ನು ಮಂಜೂರು ಮಾಡಲು ಮುನಿಸಿಪಲ್ ಅಧಿಕಾರಿಗಳ ಪ್ರಯತ್ನಗಳು ಮೆಚ್ಚುವಂಥವಾದರೂ ಈ ನಿವೇಶನಗಳು ಮಿಶ್ರ ಗೊಬ್ಬರದ ಹಳೆಯ ಅಂಗಣದಲ್ಲಿರುವುದು ಒಳ್ಳೆಯ ಸಂಗತಿಯೇನಲ್ಲ.

ಪ್ರತಿದಿನವೂ ಸುಮಾರು 8½ ಗಂಟೆ ಕಾಲ ತಮ್ಮಿಂದ ಕೆಲಸ ಮಾಡಿಸುತ್ತಾರೆಂದು ಈ ಪೌರಕಾರ್ಮಿಕರು ಸಮಿತಿಗೆ ತಿಳಿಸಿದರು. ಈ ಪೌರಕಾರ್ಮಿಕರು ಗುಂಡ್ಲು ಪೇಟೆಯಲ್ಲಿರುವ ಹೊಟೇಲುಗಳ, ಕ್ಷೌರದಂಗಡಿಗಳ ಒಳಗಡೆಗೆ ಹೋಗುವುದನ್ನು ನಿಷೇಧಿಸಿರುವುದನ್ನು ಸಮಿತಿಯ ಗಮನಕ್ಕೆ ತರಲಾಯಿತು. ಸತ್ತ ದನವನ್ನು ಈ ಪೌರಕಾರ್ಮಿಕರಿಗೆ ಕೊಡಲಾಗುತ್ತದೆ. ಅವರು ಅದರ ಚರ್ಮವನ್ನು ಸುಲಿದು ತೆಗೆದಾದ ಮೇಲೆ ದನದ ಮಾಂಸವನ್ನು ಅಡುಗೆ ಮಾಡಿಕೊಂಡು ತಿನ್ನುತ್ತಾರೆಂಬುದು ಸಮಿತಿಗೆ ತಿಳಿದು ಬಂತು.

**ಗುಲ್ಬರ್ಗಾ**

ಗುಲ್ಬರ್ಗಾ ಐತಿಹಾಸಿಕ ಸೊಬಗಿನ ನಗರ. ಈಗ್ಗೆ ನಾಲ್ಕು ದಶಕಗಳ ಹಿಂದೆ ಮುಸ್ಲಿಂ ರಾಜವಂಶವೊಂದು ಇಲ್ಲಿ ಸ್ಥಾಪಿತವಾಯಿತು. ಈ ಪ್ರದೇಶವನ್ನು ಆಳಿದ ಸುಲ್ತಾನರು ಕಲೆ ಮತ್ತು ಶಿಲ್ಪಕಲಾ ಸೌಂದರ್ಯದ ಆರಾಧಕರಾಗಿದ್ದರು. ಅವರ ಆಳ್ವಿಕೆಯಲ್ಲಿ ಕೋಮುಸೌಹಾರ್ದ ನೆಲೆಸಿತ್ತು. ಈ ಮುಸ್ಲಿಂ ಅರಸರ ಆಳ್ವಿಕೆಯಲ್ಲಿ ಗುಲ್ಬರ್ಗಾ ವಾಸ್ತುಶಿಲ್ಪ ಕಲಾ ವೈಭವದ ಆಗರವಾಗಿತ್ತು. ಗುಲ್ಬರ್ಗಾದ ನಿಜವಾದ ಅರ್ಥವೇನೆಂದರೆ “ಗುಲಾಬಿ ಪುಷ್ಪಗಳ ಪಥ”. ಈಗಲೂ ಕೂಡ ಈ ನಗರಕ್ಕೆ ವಾಣಿಜ್ಯ ಕೇಂದ್ರವೆಂಬ ಪ್ರಾಮುಖ್ಯತೆ ಇದೆ. ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವೂ ಹೌದು. ಡಿವಿಷನಲ್ ಕಮಿಷನರ್‌ರ ಹಾಗೂ ಇತರ ವಿಭಾಗೀಯ ಕಚೇರಿಗಳಿಗೆ ಗುಲ್ಬರ್ಗಾ ಕೇಂದ್ರ ಕಾರ್ಯ ಸ್ಥಾನವಾಗಿದೆ.

1½ ಲಕ್ಷ ಜನಸಂಖ್ಯೆಯುಳ್ಳ ಈ ಐತಿಹಾಸಿಕ ನಗರದಲ್ಲಿ ಕೇವಲ 290 ಪೌರಕಾರ್ಮಿಕರಿದ್ದಾರೆ. ಕಚೇರಿ ದಾಖಲೆಗಳನ್ನು ಪರಿಶೀಲಿಸಿದಾಗ ಕಳೆದ ಒಂದು ದಶಕದಿಂದಲೂ ಯಾರೇ ಪೌರಕಾರ್ಮಿಕನನ್ನು ನೇಮಕ ಮಾಡಿಕೊಂಡಿಲ್ಲದಿರುವುದು ಸ್ಪಷ್ಟವಾಗಿ ಕಂಡು ಬಂತು. ಈ ನಗರವು ಇತರ ಎಲ್ಲ ಆಧುನಿಕ ನಗರಗಳಂತೆ ಅತಿ

ವೇಗವಾಗಿ ಬೆಳೆಯುತ್ತಿದೆ. ಹೊಸ ಕೈಗಾರಿಕೆಗಳು ಸ್ಥಾಪನೆಯಾಗಿವೆ. ಒಟ್ಟಾರೆ ಹೇಳಬೇಕೆಂದರೆ ನಗರವು ತಕ್ಕ ಸೌಕರ್ಯಗಳಿಲ್ಲದಿದ್ದರೂ ಭಾರೀ ಪ್ರಾಮುಖ್ಯತೆಯನ್ನು ಪಡೆದಿದೆ. ತಲೆ ಮೇಲೆ ಮಲವನ್ನು ಹೊತ್ತು ಸಾಗಿಸುವುದನ್ನು ಸರ್ಕಾರವು ನಿಷೇಧಿಸಿದ್ದರೂ ಈಗಲೂ ಖಾಸಗೀ ಜಾಡಮಾಲಿ ಕೆಲಸ ಅವ್ಯಾಹತವಾಗಿ ನಡೆಯುತ್ತಿದೆ.

ಸಮಿತಿಯು ಭೇಟಿ ನೀಡಿದಾಗ ಸಮಿತಿಯು ಗಮನಿಸಿದ ಇನ್ನೊಂದು ಶೋಚನೀಯ ಸಂಗತಿ ಏನೆಂದರೆ, ಸರ್ಕಾರದ ಸ್ಪಷ್ಟ ನಿರ್ದೇಶನಗಳಿದ್ದರೂ ನೀರು ಹಾಕಿ ಮಲ ಹರಿಸುವ ಶೌಚಾಲಯಗಳನ್ನು ಫ್ಲಷ್ ಔಟ್ ಶೌಚಾಲಯಗಳನ್ನಾಗಿ ಪರಿವರ್ತಿಸಿಲ್ಲ. ಬಹಳ ಹಿಂದೆಯೇ ಗುಲ್ಬರ್ಗಾಕ್ಕೆ ವಲಸೆ ಬಂದ ಹರಿಯಾಣ ಬಾಲ್ಮೀಕಿ ಸಮುದಾಯದವರು ಖಾಸಗಿ ಜಾಡಮಾಲಿ ಕೆಲಸ ಮಾಡುತ್ತಿದ್ದಾರೆ. ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಈ ಎಲ್ಲ ಖಾಸಗಿ ಜಾಡಮಾಲಿಗಳನ್ನು ಭೇಟಿ ಮಾಡಿದರು ಹಾಗೂ ಅವರ ಸಮಸ್ಯೆಗಳ ಮತ್ತು ತೊಂದರೆಗಳ ಬಗ್ಗೆ ನೇರ ಚರ್ಚೆ ನಡೆಸಿದರು. ಜೀವನಕ್ಕಾಗಿ ಬದಲಿ ನೌಕರಿಯನ್ನು ಕೊಡಿಸಿದರೆ ತಾವು ಈ ವೃತ್ತಿಯನ್ನು ತೊರೆಯಲು ಈ ಖಾಸಗಿ ಬಾಲ್ಮೀಕಿ ಸಮುದಾಯದವರು ಸಿದ್ಧರಿರುವುದನ್ನು ಸಮಿತಿಯು ಸಂತೋಷದಿಂದಲೇ ಗಮನಿಸಿತು. ತಮ್ಮ ಜೀವನದಲ್ಲಿ ಹೊಸ ಅಧ್ಯಾಯವನ್ನು ತೆರೆಯಲು ಉತ್ಸುಕರಾಗಿರುವ ಈ ಜನರಿಗೆ ಸರ್ಕಾರವು ಸೂಕ್ತ ನೌಕರಿಯನ್ನು ಒದಗಿಸಬೇಕೆಂದು ಸಮಿತಿಯು ಆಗ್ರಹ ಪೂರ್ವಕವಾಗಿ ಶಿಫಾರಸು ಮಾಡಿತ್ತು. ವಿಷಾದನೀಯ ಸಂಗತಿಯೆಂದರೆ, ಕಳೆದ ಎರಡು ವರ್ಷಗಳಿಂದಲೂ ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಮುನಿಸಿಪಲ್ ಅಧಿಕಾರಿಗಳು ಪೌರಕಾರ್ಮಿಕರಿಗೆ ಸೂಕ್ತ ಸೌಕರ್ಯಗಳನ್ನು ಒದಗಿಸಲು ಯಾವುದೇ ಆಸಕ್ತಿ ತೋರಿಸಿಲ್ಲ. ಈ ಜನರು ಮೂರು ಬೇರೆ ಬೇರೆ ಬಹುದೂರದ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿಗೆ ನಲ್ಲಿಗಳನ್ನಾಗಲಿ ಅಥವಾ ಬೀದಿ ದೀಪಗಳನ್ನಾಗಲಿ ಒದಗಿಸಿಲ್ಲ. ಅಷ್ಟೇ ಅಲ್ಲ ಅವರುಗಳ ಬಡಾವಣೆಯಲ್ಲಿ ಶೌಚಾಲಯಗಳನ್ನು ಕಟ್ಟಿಸಿಲ್ಲ. ಹಾಗಾಗಿ ಹೆಂಗಸರು ಬಹು ದೂರದಲ್ಲಿರುವ ಜಾಗಗಳಿಗೆ ದೇಹ ಬಾಧೆ ತೀರಿಸಿಕೊಳ್ಳಲು ಹೋಗಬೇಕಾಗಿದೆ. ಇದು ತೀರಾ ಅಮಾನವೀಯ ಪರಿಸ್ಥಿತಿ.

ಜಗತ್ ಕಾಲೋನಿಯೆಂದು ಕರೆಯುವ ಒಂದು ನಿರ್ದಿಷ್ಟ ಬಡಾವಣೆಯಲ್ಲಿ ಪೌರಕಾರ್ಮಿಕರ ಮಕ್ಕಳು ಒಳ್ಳೆಯ ವಿದ್ಯಾವಂತರಾಗಿದ್ದಾರೆ. ಸುಮಾರು ನೂರು ಜನ ಹಲವಾರು ವಿಷಯಗಳಲ್ಲಿ ವಿಶ್ವವಿದ್ಯಾನಿಲಯ ಪದವಿಗಳನ್ನು ಪಡೆದಿದ್ದಾರೆ.

**ಗಂಗಾವತಿ**

ರಾಯಚೂರಿನಲ್ಲಿರುವ ಗಂಗಾವತಿಯು ಬೆಳೆಯುತ್ತಿರುವ ಪಟ್ಟಣ. ಜನಸಂಖ್ಯೆ 40,000. ಕೃಷಿ ಆಧಾರಿತ ಕೈಗಾರಿಕೆಗಳಿಗೆ ವಿಫುಲ ಅವಕಾಶಗಳಿವೆ. ಒಟ್ಟು 80 ಪೌರಕಾರ್ಮಿಕರಿದ್ದಾರೆ. ಇವರಲ್ಲಿ 46 ಮಹಿಳೆಯರಿದ್ದಾರೆ.

ಅಧಿಕಾರಿಗಳಿಗೆ ಮುನ್ನಂದಾಜು ಮಾಡುವ ಧೋರಣೆಯ ಹಾಗೂ ಸಮರ್ಪಕ ನಿರ್ವಹಣೆಯ ಕೊರತೆ ಇರುವುದರಿಂದ ರಾಜ್ಯದಲ್ಲಿ ಪೌರಕಾರ್ಮಿಕರು ತೊಂದರೆಗೊಳಗಾಗಿರುವ ಮುನಿಸಿಪಾಲಿಟಿಗಳಲ್ಲಿ ಇದೂ ಒಂದು. ಯಾವುದೇ ಪರಿಹಾರ ಭತ್ಯೆ ಇಲ್ಲದಯೇ ಪೌರಕಾರ್ಮಿಕರು 8 ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಈ ಜನರ ಸೇವಾ ರಿಜಿಸ್ಟರುಗಳನ್ನು ಸರಿಯಾಗಿ ಇಟ್ಟಿಲ್ಲ ಹಾಗೂ ಪೌರಕಾರ್ಮಿಕರ ಜನನ ದಿನಾಂಕವನ್ನು ಬೇಕಾಬಿಟ್ಟಿ ನಮೂದು ಮಾಡಿರುವುದರಿಂದ ಅವರ ನಿವೃತ್ತಿ ಸಮಯದಲ್ಲಿ ಯಾವಾಗಲೂ ಸಮಸ್ಯೆಯಾಗುತ್ತಿದೆ. ರಾಜ್ಯದಲ್ಲಿರುವ ಬಹುತೇಕ ಸ್ಥಳೀಯ ಮಂಡಳಿಗಳಲ್ಲಿ ಇದೇ ಶೋಚನೀಯ ಪರಿಸ್ಥಿತಿ ಇರುವುದನ್ನು ಸಮಿತಿಯು ವಿಷಾದದಿಂದಲೇ ಗಮನಿಸಿದೆ.

ವಿಷಾದಕರವಾದ ಇನ್ನೊಂದು ಸಂಗತಿಯೆಂದರೆ ಈ ಸ್ಥಳದ ಪೌರಕಾರ್ಮಿಕರಿಗೆ ಸರಿಯಾದ ಉಪಕರಣ ಹಾಗೂ ಸಲಕರಣೆಗಳನ್ನು ಒದಗಿಸಿಲ್ಲ. ತುಂಬಾನೆ ಗಲೀಜಿನದಷ್ಟೇ ಅಲ್ಲ. ತೀರಾ ಅಪಾಯಕಾರಿಯಾದ ವಿಧಾನವೆಂದರೆ ಈ ಪೌರಕಾರ್ಮಿಕರು ಬರಿಗೈಯಲ್ಲೇ ಗಟಾರಗಳನ್ನು ಸ್ವಚ್ಛಗೊಳಿಸುತ್ತಿದ್ದಾರೆ.

ಈ ಪೌರಕಾರ್ಮಿಕರು ವಾಸಿಸುತ್ತಿರುವ ಕಾಲೋನಿಯನ್ನು 'ಹರಿಜನ ವಾಡಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಇದು ಜಾತ್ಯಾತೀತ ತತ್ವಗಳಿಗೆ ತೀರಾ ತದ್ವಿರುದ್ಧವಾದ ಹೆಸರು. ಅಂಥ ಹೆಸರುಗಳು ಎಲ್ಲೆಲ್ಲಿ ಇವೆಯೋ ಅವೆಲ್ಲವನ್ನು ಕೂಡಲೇ ಬದಲಾಯಿಸಬೇಕು. ಇನ್ನು ಕೆಟ್ಟ ಸಂಗತಿಯೇನೆಂದರೆ ಈ ಪೌರಕಾರ್ಮಿಕರು ವಾಸಿಸುತ್ತಿರುವ ಜಾಗದ ಮಧ್ಯದಲ್ಲೇ ಹೆಂಡದ ಅಂಗಡಿ ಇದೆ. ಪರಿಶಿಷ್ಟ ಜಾತಿಯವರು ಹಾಗೂ ಪರಿಶಿಷ್ಟ ಪಂಗಡದವರು ವಾಸಿಸುವ ಪ್ರದೇಶದ ಸಮೀಪದಲ್ಲಿ ಮದ್ಯದಂಗಡಿಗಳು ಇರುವುದನ್ನು ನಿಷೇಧಿಸಿರುವ ಸರ್ಕಾರದ ನಿರ್ದೇಶನಗಳಿಗೆ ಇದು ತದ್ವಿರುದ್ಧ.

ಸಮಿತಿಯು ಈ ಸ್ಥಳಕ್ಕೆ ಭೇಟಿ ನೀಡಿದಾಗ ಪೌರಕಾರ್ಮಿಕರು ತಾವು ಹಣಕಾಸಿನ ಕೊರತೆಯ ಹಳ್ಳದಲ್ಲಿ ಬಿದ್ದಿದ್ದೇವೆಂಬ ತಮ್ಮ ಬವಣೆಗಳನ್ನು ಸಮಿತಿಗೆ ಹೇಳಿಕೊಂಡರು. ಸ್ವತಂತ್ರವಾಗಿ ಸಹಕಾರ ಸಂಘಗಳನ್ನು ರಚಿಸಿಕೊಂಡು ಪೌರಕಾರ್ಮಿಕರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಬೇಕೆಂದು ಸಮಿತಿಯು ಪೌರಕಾರ್ಮಿಕರಿಗೆ ಸಲಹೆ ಇತ್ತಿತ್ತು. ಪೌರಕಾರ್ಮಿಕರ ಸಂಘಟಿತ ಪ್ರಯತ್ನಗಳಿಂದಾಗಿ ಸ್ವಲ್ಪ ಕಾಲಾನಂತರ ಸಹಕಾರ ಸಂಘವೊಂದರ ಸ್ಥಾಪನೆಯಾಯಿತು. ಆದರೆ, ಪೌರಕಾರ್ಮಿಕರ ಸಂಬಳದಿಂದ ಕಡಿತ ಮಾಡಿಕೊಳ್ಳಲು ಸ್ಥಳೀಯ ಮುನಿಸಿಪಲ್ ಕೌನ್ಸಿಲ್ ಮುಂದೆ ಬಂದರೂ ದುರದೃಷ್ಟವಶಾತ್, ಈ ಪ್ರದೇಶದಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳು ಈ ಸಹಕಾರ ಸಂಘಕ್ಕೆ ನೆರವಿನ ಹಸ್ತ ಚಾಚಲು ಮುಂದೆ ಬಂದಿಲ್ಲ.

**ಗುಬ್ಬಿ**

ತುಮಕೂರು ಜಿಲ್ಲೆಯ ಗುಬ್ಬಿ ಟೌನ್ ಮುನಿಸಿಪಾಲಿಟಿಯ ಪೌರಕಾರ್ಮಿಕರು, ಪಟ್ಟಣದಲ್ಲಿ ತಮ್ಮನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದಾರೆಂದು ಸಮಿತಿಯ ಗಮನಕ್ಕೆ ತಂದರು. ಪಟ್ಟಣದಲ್ಲಿರುವ ದೇವಸ್ಥಾನಗಳ ಹಾಗೂ ಹೊಟೇಲುಗಳ ಒಳಗಡೆಗೆ ತಮ್ಮನ್ನು ಸೇರಿಸುತ್ತಿಲ್ಲವೆಂದು ಪೌರಕಾರ್ಮಿಕರು ಸಮಿತಿಯ ಅಧ್ಯಕ್ಷರಿಗೆ ಹೇಳಿಕೊಂಡರು.

**ಗುಡಿಬಂಡೆ**

ಕೋಲಾರ ಜಿಲ್ಲೆಯ ಗುಡಿಬಂಡೆ ಟೌನ್ ಮುನಿಸಿಪಾಲಿಟಿಯಲ್ಲಿ ಗುಡಿಬಂಡೆಗೆ ಸಮಿತಿಯ ಅಧ್ಯಕ್ಷರು ಭೇಟಿ ನೀಡಿದ್ದಾಗ, ಕೇವಲ ಇಬ್ಬರು ಪೌರಕಾರ್ಮಿಕರಿದ್ದರು. ಮಂಜೂರಾದ ಸಿಬ್ಬಂದಿ ಸಂಖ್ಯೆ 5, ಮೂವರನ್ನು ಕೆಲ ಕಾಲ ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿತ್ತು. ಸ್ಥಳೀಯ ಸಂಸ್ಥೆಗಳ ಎಲ್ಲ ತಾತ್ಕಾಲಿಕ ನೌಕರರ ಸೇವೆಯನ್ನು ಸ್ಥಿರೀಕರಿಸಿ ಸರ್ಕಾರದ ಆದೇಶ ನಂ.ಐಐಎಂಎ 47 ಎಂಎಲ್‌ಆರ್ ತಾರೀಖು 29-4-1979ನ್ನು ಸರ್ಕಾರ ಹೊರಡಿಸಿದ್ದರೂ ಈ ಮುನಿಸಿಪಾಲಿಟಿಯು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದ ಪೌರಕಾರ್ಮಿಕರ ಸೇವೆಯನ್ನು ಸ್ಥಿರೀಕರಿಸುವ ಬದಲು ಅವರ ಸೇವೆಯನ್ನು ಕೊನೆಗೊಳಿಸಿತು. ಗುಡಿಬಂಡೆ ಪೌರಕಾರ್ಮಿಕರಿಗೆ ಕೇವಲ ಅರ್ಧ ದಿನ ವಾರದ ರಜಾ ದಿನವನ್ನು ಕೊಡಲಾಗುತ್ತಿದೆ.

**ಹಾಸನ**

ಹಾಸನ ಟೌನ್ ಮುನಿಸಿಪಾಲಿಟಿಯು 85 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 34 ಪುರುಷರು, ಉಳಿದವರು ಮಹಿಳೆಯರು. ರಾಜ್ಯದ ಬಹುತೇಕ ಕಡೆಗಳಲ್ಲಿದ್ದಂತೆಯೇ ಹಾಸನದಲ್ಲೂ ಕೂಡ ಪೌರಕಾರ್ಮಿಕರ ಕಾಲೋನಿಯು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಅವರ ಕಾಲೋನಿಯಲ್ಲಿ ಯಾವ ಮೂಲ ಸೌಕರ್ಯಗಳೂ ಇಲ್ಲ. ಪೌರಕಾರ್ಮಿಕರ ಕುಟುಂಬದವರು ದೇಹ ಬಾಧೆ ತೀರಿಸಿಕೊಳ್ಳಬೇಕಾದರೆ ಹತ್ತಿರದ ಹೊಲಗದ್ದೆಗಳಿಗೆ ಹೋಗಬೇಕಾಗಿದೆ.

ಹಾಸನಕ್ಕೆ ಸಮಿತಿಯ ಅಧ್ಯಕ್ಷರು ಭೇಟಿ ನೀಡಿದ್ದಾಗ ನೀರು ಹಾಕಿ ಸ್ವಚ್ಛಗೊಳಿಸುವಂತಹ ಬಗೆಯ 3500 ಶೌಚಾಲಯಗಳ ಪೈಕಿ, ಸರ್ಕಾರದ ನಿರ್ದೇಶನದ ಪ್ರಕಾರ 1500 ಶೌಚಾಲಯಗಳನ್ನು ಮಾತ್ರವೇ ಫ್ಲಷ್ ಔಟ್ ಬಗೆಯವುಗಳನ್ನಾಗಿ ಪರಿವರ್ತಿಸಲಾಗಿದೆ. ಮುನಿಸಿಪಾಲಿಟಿಯ ಪೌರಕಾರ್ಮಿಕರು ಜಾಡಮಾಲಿ ಕೆಲಸವನ್ನು ಮಾಡದಂತೆ ನಿಲ್ಲಿಸಿದ್ದರೂ, ಕೆಲವು ಪೌರಕಾರ್ಮಿಕರು ಹೆಚ್ಚುವರಿ ಆದಾಯಕ್ಕಾಗಿ ಸಾರ್ವಜನಿಕ ಶೌಚಾಲಯಗಳನ್ನು ಗುಟ್ಟಾಗಿ ಸ್ವಚ್ಛಗೊಳಿಸುತ್ತಿದ್ದಾರೆಂಬುದನ್ನು ಅಧ್ಯಕ್ಷರ ಗಮನಕ್ಕೆ ತರಲಾಯಿತು. ಪೊಲೀಸ್ ವಸತಿ ಗೃಹಗಳ ಮಲವನ್ನು ಸಾಗಿಸಲು ಪೊಲೀಸ್ ಇಲಾಖೆಯು ಆ ಕೆಲಸಕ್ಕಾಗಿಯೇ ನೇಮಕ ಮಾಡಿಕೊಂಡಿರುವ ಜಾಡಮಾಲಿಗಳು ಈಗಲೂ ಆ ಕೆಲಸ ಮಾಡುತ್ತಿದ್ದಾರೆಂಬುದು ಅಧ್ಯಕ್ಷರಿಗೆ ತಿಳಿದುಬಂತು.

**ಹೊಸಕೋಟೆ**

ಹೊಸಕೋಟೆ ಪಟ್ಟಣದಲ್ಲಿ ಬಹುತೇಕ ಶೌಚಾಲಯಗಳು ಗುಂಡಿ ಬಗೆಯವು. ಅಲ್ಲಿನ ಮಲವನ್ನು ರೈತರು ತಮ್ಮ ಜಮೀನುಗಳಿಗೆ ಗೊಬ್ಬರವಾಗಿ ಬಳಸಲು ಸಾಗಿಸುತ್ತಾರೆ. ಹೀಗಾಗಿ, ಮುನಿಸಿಪಲ್ ನೌಕರರು ಮಲವನ್ನು ಸಾಗಿಸುವುದನ್ನು ನಿಷೇಧಿಸಿರುವ ಸರ್ಕಾರಿ ಆದೇಶದ ಅನುಷ್ಠಾನ ಇಲ್ಲಿ ಸುಲಭವಾಯಿತು. ಮುನಿಸಿಪಾಲಿಟಿಯು 17 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. 10 ಪುರುಷರು, 7 ಮಹಿಳೆಯರು ಅವರೆಲ್ಲರೂ ಬೋವಿ ಸಮುದಾಯದವರು.

ಈ ಪಟ್ಟಣದಲ್ಲಿ ಪೌರಕಾರ್ಮಿಕರಿಗೆ ಕೈ ಹಿಡಿಕೆಯುಳ್ಳ ಉದ್ದನೆಯ ಪೊರಕೆಯನ್ನು ಒದಗಿಸಲಾಗಿದೆ. ಇದರಿಂದ ನಿಂತುಕೊಂಡೇ ರಸ್ತೆಯನ್ನು ಗುಡಿಸಲು ಸಾಧ್ಯವಾಗಿದೆ. ಧೂಳೂ ಕೂಡ ಮೇಲೇಳುವುದಿಲ್ಲ. ಯಾರಾದರೂ ಕೆಲಸಗಾರ ಕಾಯಿಲೆ ಬಿದ್ದಾಗ, ರಜೆಗಾಗಿ ಕೋರಿಕೊಂಡರೆ ಆ ಕೆಲಸಗಾರರಿಗೆ ರಜೆ ಮಂಜೂರಾಗುವುದಕ್ಕೆ ಮುಂಚೆಯೇ ತಾನು ರಜೆ ಮೇಲಿದ್ದಾಗ ತನ್ನ ಜಾಗದಲ್ಲಿ ಬದಲಿ ಕೆಲಸಗಾರನನ್ನು ಆತ ವ್ಯವಸ್ಥೆ ಮಾಡಬೇಕಾಗುತ್ತದೆ.

**ಹುಣಸೂರು**

ಅಸ್ಪೃಶ್ಯತೆಯೆಂಬ ಪೀಡೆ ಪೌರಕಾರ್ಮಿಕರನ್ನು ಈಗಲೂ ಕಾಡುತ್ತಿದೆ. ಅದರಲ್ಲೂ, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚು. ಈ ಎರಡೂ ಜಿಲ್ಲೆಗಳ ಇತರ ಭಾಗಗಳಂತೆಯೇ, ಹುಣಸೂರಿನ ಪೌರಕಾರ್ಮಿಕರನ್ನು ಹೋಟೇಲುಗಳ ಮತ್ತು ಕ್ಷೌರದಂಗಡಿಗಳ ಒಳಗಡೆಗೆ ಸೇರಿಸುತ್ತಿಲ್ಲ. ಒಂದು ಲೋಟ ಟೀ ಅಥವಾ ಕಾಫಿ ಬೇಕಾದರೆ ಪೌರಕಾರ್ಮಿಕರೇ ಲೋಟ ಒಯ್ಯಬೇಕಾಗಿತ್ತು ಅಥವಾ ಹೋಟೇಲಿನ ಹೊರಗಡೆ ಇಟ್ಟಿರುವ ಲೋಟದಲ್ಲಿ ಹಾಕಿಸಿಕೊಂಡು ಕುಡಿಯಬೇಕಾಗಿತ್ತು. ಮುಖ ಕ್ಷೌರ ಮಾಡಿಸಿಕೊಳ್ಳಲು ಅಥವಾ ತಲೆ ಕೂದಲು ಕತ್ತರಿಸಿ ಕೊಳ್ಳಲು ಹತ್ತಿರವಿರುವ ಪಟ್ಟಣಗಳಿಗೆ ಹೋಗಬೇಕಾಗಿತ್ತು. ಕಣ್ಣಿಗೆ ರಾಚುವಂತಹ ಈ ಬಗೆಯ ತಾರತಮ್ಯವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಾಗ ಅವರು ಕೊಟ್ಟ ಉತ್ತರವನ್ನು ಈ ಮುಂದೆ ಕೊಡಲಾಗಿದೆ:

"ಹುಣಸೂರಿನ ಎಲ್ಲ ಹರಿಜನ ಪೌರಕಾರ್ಮಿಕನನ್ನು ಕರೆಸಿಕೊಂಡು ಅವರ ಕುಂದುಕೊರತೆಗಳನ್ನು ಆಲಿಸಲಾಯಿತು. ಹುಣಸೂರು ಪಟ್ಟಣದಲ್ಲಿರುವ ಸುಮಾರು 20 ಸ್ಥಳೀಯ ಹೋಟೇಲು ಮಾಲೀಕರನ್ನು ಹಾಗೂ 6 ಕ್ಷೌರದಂಗಡಿ ಮಾಲೀಕರನ್ನು ಕರೆಸಿಕೊಂಡು, ಹೋಟೇಲುಗಳ ಹಾಗೂ ಕ್ಷೌರದಂಗಡಿಗಳ ಒಳಗಡೆಗೆ ತಮ್ಮನ್ನು ಸೇರಿಸುತ್ತಿಲ್ಲ ಎನ್ನುವ ಅವರ ದೂರುಗಳ ಬಗ್ಗೆ ವಿಚಾರಣೆ ನಡೆಸಲಾಯಿತು.. . . . . . . ಹರಿಜನರ ಒಬ್ಬ ಮುಂದಾಳು, ಹೋಟೇಲು ಮಾಲೀಕರಾಗಲಿ ಅಥವಾ ಕ್ಷೌರದಂಗಡಿಯವರಾಗಲಿ ಪೌರಕಾರ್ಮಿಕರು ಹೋಟೇಲಿಗೆ ಅಥವಾ ಕ್ಷೌರದಂಗಡಿಗೆ ಹೋಗಲು ಆಕ್ಷೇಪಣೆ ಮಾಡುತ್ತಿಲ್ಲ. ಕ್ಷೌರದಂಗಡಿಯವರು ಹೆಚ್ಚು ಬೆಲೆ ನಿಗದಿಪಡಿಸಿರುವುದರಿಂದ, ಯಾರೇ ಅಧಿಕಾರಿಗಳು ಪೌರಕಾರ್ಮಿಕರ ಕಾಲೋನಿಗಳಿಗೆ ಭೇಟಿ ನೀಡಿದಾಗ, ಬೆಲೆಗಳನ್ನು ಇಳಿಸಿಕೊಳ್ಳುವ ಇರಾದೆಯಿಂದ, ಆ ಅಧಿಕಾರಿಗಳಿಗೆ, ಹೋಟೇಲು ಹಾಗೂ ಕ್ಷೌರದಂಗಡಿ ಮಾಲೀಕರು ನಮ್ಮನ್ನು ಒಳಕ್ಕೆ ಸೇರಿಸುತ್ತಿಲ್ಲ ಅಂತ ದೂರುತ್ತಾರೆ ಎಂದು ಹೇಳಿದ."

ಹುಣಸೂರು ಪಟ್ಟಣದ ಹೊಟೇಲು ಹಾಗೂ ಕ್ಷೌರದಂಗಡಿ ಮಾಲೀಕರಿಗೆ ಈ ಬಗ್ಗೆ ಸೂಕ್ತ ಸಲಹೆ, ಸೂಚನೆ ನೀಡಲಾಗಿದೆ.

**ಹುನಗುಂದ**

ಬಿಜಾಪುರ ಜಿಲ್ಲೆಯಲ್ಲಿರುವ ಹುನಗುಂದ ಟೌನ್ ಮುನಿಸಿಪಾಲಿಟಿಯು ನೇಮಕ ಮಾಡಿಕೊಂಡಿರುವ 22 ಪೌರಕಾರ್ಮಿಕರ ಪೈಕಿ ಮೂವರಿಗೆ ಜಾಡಮಾಲಿ ಕೆಲಸ ವಹಿಸಲಾಗಿದೆ. ಈ 27 ಪೌರಕಾರ್ಮಿಕರಲ್ಲಿ 5 ಮಹಿಳೆಯರು, 12 ಪುರುಷರು ಇದ್ದಾರೆ. ಪೌರಕಾರ್ಮಿಕರು ಅರೆಕಾಲಿಕ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಕಸಗುಡಿಸುವ ಕೆಲಸ ಮಾಡುತ್ತಿರುವವರು ತಿಂಗಳಿಗೆ 20 ರೂಪಾಯಿ ಪಡೆಯುತ್ತಿದ್ದಾರೆ. ಜಾಡಮಾಲಿಗಳು ಪ್ರತಿ ತಿಂಗಳು 70 ರೂಪಾಯಿ ಪಡೆಯುತ್ತಿದ್ದಾರೆ. ಹುನಗುಂದ ಮುನಿಸಿಪಾಲಿಟಿಯಲ್ಲಿ ಇನ್ನೊಂದು ವಿಚಿತ್ರ ವಿಧಾನ ಚಾಲ್ತಿಯಲ್ಲಿದೆ. ಅದೇನೆಂದರೆ ಅರೆಕಾಲಿಕ ಆಧಾರದ ಮೇಲಿರುವವರಲ್ಲಿ ಎರಡು ಗುಂಪುಗಳಿವೆ. ಈ ಗುಂಪುಗಳು ಅಧಿಕಾರಿಗಳ ಮನಸ್ಥಿತಿಯಂತೆ ಒಂದು ತಿಂಗಳು ಅಥವಾ ಎರಡು ತಿಂಗಳು ಸರದಿ ಮೇಲೆ ಕೆಲಸ ಮಾಡುತ್ತಾರೆ.

**ಹುಬ್ಬಳ್ಳಿ – ಧಾರವಾಡ**

ಹುಬ್ಬಳ್ಳಿ–ಧಾರವಾಡ 3,79,166 ಜನಸಂಖ್ಯೆಯನ್ನುಳ್ಳ ನಗರ. ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್ 862 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಈ ಪೈಕಿ 248 ಪೌರಕಾರ್ಮಿಕರು ಕಾರ್ಪೊರೇಷನ್ನಿನ ಧಾರವಾಡ ಘಟಕದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾರ್ಪೊರೇಷನ್ನಿನ ವಾರ್ಷಿಕ ಆದಾಯ ತೆರಿಗೆ 2,32,30,700 ರೂಪಾಯಿ.

ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್‌ನ 862 ಪೌರಕಾರ್ಮಿಕರ ಪೈಕಿ 452 ಪುರುಷರಿದ್ದಾರೆ. 440 ಮಹಿಳೆಯರಿದ್ದಾರೆ. ಇವರ ಪೈಕಿ 28 ಪೌರಕಾರ್ಮಿಕರು ತಾತ್ಕಾಲಿಕ ಆಧಾರದ ಮೇಲೆ ನೌಕರಿಯಲ್ಲಿದ್ದಾರೆ.

ಈ ಕಾರ್ಪೊರೇಷನ್ನಿನ ಪೌರಕಾರ್ಮಿಕರು, ಹಿಂದಿನ ಬಾಂಬೆ ಮುನಿಸಿಪಾಲಿಟಿಗಳ ನಿಯಮಗಳಿಗೆ ಒಳಪಟ್ಟಿದ್ದಾರೆ. ಹಾಗಾಗಿ, ರಾಜ್ಯದಲ್ಲಿರುವ ಇತರೆ ಪೌರಕಾರ್ಮಿಕರಂತಲ್ಲದೆ ಪಿಂಚಣಿ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆ.

ಈ ಕಾರ್ಪೊರೇಷನ್ ತನ್ನ ಪೌರಕಾರ್ಮಿಕರಿಗೆ ಈ ಮುಂದಿನ ಪ್ರಯೋಜನಗಳನ್ನು ಕೊಟ್ಟಿದೆ:

1. ಹಬ್ಬದ ಮುಂಗಡ ಹಾಗೂ ಸಂಬಳ ಮುಂಗಡ
2. ಸಂತಾನಹರಣ ಚಿಕಿತ್ಸೆ ಮಾಡಿಸಿಕೊಂಡವರಿಗೆ ರೂ. 100/– ನಗದು
3. ವಿಶೇಷ ಪೌಷ್ಠಿಕಾಹಾರ ಕಾರ್ಯಕ್ರಮ
4. ಉಚಿತ ವೈದ್ಯಕೀಯ ನೆರವು ಮತ್ತು ಹೆರಿಗೆ ಸೌಲಭ್ಯ

ಕಾರ್ಪೊರೇಷನ್ 354 ಮನೆಗಳನ್ನು ಕಟ್ಟಿಸಿದೆ ಹಾಗೂ ಕಂತು ಖರೀದಿ ಆಧಾರದ ಮೇಲೆ ಅವುಗಳನ್ನು ಪೌರಕಾರ್ಮಿಕರಿಗೆ ಹಂಚಿಕೆ ಮಾಡಿದೆ. ಪ್ರತಿಯೊಂದು ಮನೆಯ ಬೆಲೆ 1800 ರೂಪಾಯಿ. ತಿಂಗಳ ಕಂತು 18 ರೂಪಾಯಿ ಮಾತ್ರ. ಈ ಕಂತನ್ನು ಹಂಚಿಕೆದಾರರಿಂದ ಸಂಗ್ರಹಿಸಲಾಗುತ್ತದೆ. ಮನೆಯ ಬೆಲೆ ಸಂಗ್ರಹಿಸಿದ ಮೇಲೆ ಹಂಚಿಕೆದಾರರಿಗೆ ಮನೆಯ ಒಡೆತನವನ್ನು ವರ್ಗಾಯಿಸಲಾಗುತ್ತದೆ.

ಹುಬ್ಬಳ್ಳಿ ಪೌರಕಾರ್ಮಿಕರು ಐದು ಬೇರೆ ಬೇರೆ ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ.

ಚನ್‌ಪೇಟ್ ಕಾಲೋನಿಯಲ್ಲಿ ಕಾರ್ಪೊರೇಷನ್ ಪೌರಕಾರ್ಮಿಕರಿಗಾಗಿ 72 ಮನೆಗಳನ್ನು ಕಟ್ಟಿಸಿದೆ. ಈ ಪೈಕಿ ಸುಮಾರು 40 ಮನೆಗಳನ್ನು ಹೊರಗಿನವರಿಗೆ ಬಾಡಿಗೆಗೆ ಕೊಡಲಾಗಿದೆ.

ಪೌರಕಾರ್ಮಿಕರ ಇನ್ನೊಂದು ಕಾಲೋನಿಯನ್ನು 'ಭಾಂಗಿ' ಕಾಲೋನಿಯೆಂದು ಕರೆಯುತ್ತಾರೆ. ಅದು ಅಲ್ಲಿನ ನಿವಾಸಿಗಳ ಜಾತಿಯ ಹಾಗೂ ವೃತ್ತಿಯ ಸೂಚಕವಾಗಿದೆ. ಈ ಬಡಾವಣೆಯಲ್ಲಿ ಹೊರಗಿನವರು ಒಂದು ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಆ ಕಾರ್ಖಾನೆಯಿಂದ ಅಲ್ಲಿನ ನಿವಾಸಿಗಳಿಗೆ ಕಿರಿಕಿರಿ ಉಂಟಾಗುತ್ತಿದೆ.

ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್ನಿನ ಪೌರಕಾರ್ಮಿಕರ ಬದುಕಿನ ಹಾಗೂ ಕೆಲಸದ ಸ್ಥಿತಿಗಳ ಬಗ್ಗೆ ಹೇಳುವುದಾದರೆ ಅವು ಮುಂದಿನಂತಿವೆ:

ಅನೇಕ ಕಾರ್ಮಿಕರು, 10–15 ವರ್ಷಗಳು ಸೇವೆ ಸಲ್ಲಿಸಿದ್ದರೂ, ಸರ್ಕಾರದ ಆದೇಶ ನಂ. ಎಚ್‌ಎಮ್‌ಎ 47 ಎಮ್‌ಎಲ್‌ಆರ್ 72 ದಿನಾಂಕ: 7–3–1973 ರಲ್ಲಿ ಹೇಳಿರುವುದಕ್ಕೆ ತದ್ವಿರುದ್ಧವಾಗಿ ಈಗಲೂ ನಾಮಿನಲ್ ರೋಲ್‌ನಲ್ಲೇ ಇದ್ದಾರೆ.

ಸರ್ಕಾರದ ಆದೇಶ ನಂ. HMA 48 TMM 72 ದಿನಾಂಕ: 7–3–1973 ಕ್ಕೆ ತದ್ವಿರುದ್ಧವಾಗಿ ನಿಯತವಾಗಿ ಟವಲ್‌ಗಳು, ಚಪ್ಪಲಿಗಳು ಹಾಗೂ ಸಾಬೂನನ್ನು ಒದಗಿಸುತ್ತಿಲ್ಲ.

ಪೌರಕಾರ್ಮಿಕರು ವಾಸಿಸುವ ಬಡಾವಣೆಗಳಲ್ಲಿ ಮೂಲ ನಾಗರಿಕ ಸೌಕರ್ಯಗಳನ್ನು ಒದಗಿಸಿಲ್ಲ.

ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳ ಪೂರ್ಣ ಪ್ರಯೋಜನವನ್ನು ವಿಸ್ತರಿಸಿಲ್ಲ.

ಖಾಯಂ ವೃಂದದಲ್ಲಿ ಖಾಲಿ ಸ್ಥಾನಗಳು ಉಂಟಾದಾಗಲೆಲ್ಲ ಹಲವಾರು ವರ್ಷಗಳ ಕಾಲ ತಾತ್ಕಾಲಿಕ ವೃಂದದಲ್ಲಿ ಇರುವವರನ್ನು ನೇಮಕ ಮಾಡಿಕೊಳ್ಳುವ ಬದಲು ಹೊರಗಿನವರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

**ಹೊಸಪೇಟೆ**

ಬಳ್ಳಾರಿ ಜಿಲ್ಲೆಯಲ್ಲಿ ಪ್ರಸಿದ್ಧ ಹಂಪಿಯ ಸಮೀಪದಲ್ಲಿರುವ ಹೊಸಪೇಟೆಯು 65,000 ಜನಸಂಖ್ಯೆಯನ್ನುಳ್ಳ ನಗರ. ಸಿಟಿ ಮುನಿಸಿಪಾಲಿಟಿಗೆ ವಾರ್ಷಿಕ 33 ಲಕ್ಷ ರೂಪಾಯಿ ಆದಾಯವಿದೆ. ನಗರದ ನೈರ್ಮಲ್ಯ ನಿರ್ವಹಣೆಗಾಗಿ 176 ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಮುನಿಸಿಪಾಲಿಟಿಯು 84 ಮಹಿಳಾ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ.

ಮುನಿಸಿಪಾಲಿಟಿಯು 18 ಕೆಲಸಗಾರರಿಗೆ ಮನೆಗಳನ್ನು ಒದಗಿಸಿದೆ. ಇನ್ನುಳಿದವರು ಮುನಿಸಿಪಲ್ ಭೂಮಿಯಲ್ಲಿ ತಾವೇ ಕಟ್ಟಿಕೊಂಡಿರುವ ಮಣ್ಣಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಪೌರಕಾರ್ಮಿಕರ ಈ ಕಾಲೋನಿಯನ್ನು 'ಇಂದಿರಾ ನಗರ' ಎಂದು ಕರೆಯುತ್ತಾರೆ.

ಸರ್ಕಾರದ IVನೇ ದರ್ಜೆ ನೌಕರರಿಗೆ ಸಮಾನರೆಂದು ತಮ್ಮನ್ನು ವರ್ಗೀಕರಿಸಿದ್ದರೂ, "ಸರ್ಕಾರಕ್ಕೆ ಬಿಟ್ಟು ಕೊಟ್ಟ" ರಜೆಯ ಸೌಲಭ್ಯವನ್ನು ತಮಗೆ ವಿಸ್ತರಿಸಿಲ್ಲವೆಂದು ಪೌರಕಾರ್ಮಿಕರು ಸಮಿತಿಗೆ ಹೇಳಿಕೊಂಡರು.

**ಹರಿಹರ**

ಚಿತ್ರದುರ್ಗ ಜಿಲ್ಲೆಯಲ್ಲಿರುವ ಹರಿಹರ ತಾಲ್ಲೂಕು ಕೇಂದ್ರ ಕಾರ್ಯಸ್ಥಾನ. 33,888 ಜನಸಂಖ್ಯೆಯನ್ನುಳ್ಳ ಪಟ್ಟಣ. ವಾರ್ಷಿಕ ಆದಾಯ . . . . ಲಕ್ಷ ರೂಗಳು. ಮುನಿಸಿಪಾಲಿಟಿಯು 41 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಅವರಲ್ಲಿ 4 ಮಹಿಳೆಯರು ಇದ್ದಾರೆ. ಮುನಿಸಿಪಲ್ ನೌಕರರಿಂದ ಜಾಡಮಾಲಿ ಸೇವೆ ಮಾಡಿಸಿಕೊಳ್ಳಬಾರದೆಂದು ಸರ್ಕಾರವು ನಿಷೇಧಿಸಿದ ನಂತರ ಜಾಡಮಾಲಿ ಕೆಲಸ ಮಾಡುತ್ತಿದ್ದವರನ್ನು

ಕಸಗುಡಿಸುವವರ ವೃಂದದಲ್ಲಿ ವಿಲೀನಗೊಳಿಸಲಾಯಿತೆಂದು ಮುನಿಸಿಪಾಲಿಟಿಯು ಹೇಳಿತು. ಯಾವುದೇ ಬಗೆಯ ಜಾಡಮಾಲಿ ಕೆಲಸವನ್ನು ಸರ್ಕಾರವು ನಿಷೇಧಿಸಿಯಾದ ಮೇಲೆ, ಜಾಡಮಾಲಿ ಪೌರಕಾರ್ಮಿಕರುಗಳನ್ನು ಕೆಲಸದಿಂದ ತೆಗೆದುಹಾಕಿದ್ದಾರೆಂದು ಪೌರಕಾರ್ಮಿಕರು ಸಮಿತಿಯ ಅಧ್ಯಕ್ಷರಿಗೆ ಹೇಳಿದರು.

ಅನಾಥ ಶವಗಳನ್ನು, ತಮಗಿಷ್ಟವಿಲ್ಲದಿದ್ದರೂ, ಒಯ್ಯುವಂತೆ ಹಾಗೂ ಹೂಳುವಂತೆ ತಮಗೆ ಹೇಳುತ್ತಿದ್ದಾರೆಂದು ಹರಿಹರ ಪೌರಕಾರ್ಮಿಕರು ಹೇಳಿಕೊಂಡರು.

**ಹೊನ್ನಾವರ**

ಪೌರಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದಕ್ಕೆ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮುನಿಸಿಪಾಲಿಟಿಯನ್ನು ಸುಲಭವಾಗಿ ದೃಷ್ಟಾಂತ ಕೊಡಬಹುದು. ಸಮಿತಿಯು ಈ ಮುನಿಸಿಪಾಲಿಟಿಗೆ ಭೇಟಿ ನೀಡಿದ್ದಾಗ ಪೌರಕಾರ್ಮಿಕರಿಗೆ ಒಂದು ವಾರದಲ್ಲಿ ಒಂದು ಪೂರ್ಣ ದಿನವನ್ನು ಅಥವಾ 2½ ದಿನವನ್ನು ವಾರದ ರಜೆ ದಿನವನ್ನಾಗಿ ಕೊಡದೆ ಕೇವಲ 1½ ದಿನ ವಾರದ ರಜಾ ದಿನವನ್ನು ಕೊಡುತ್ತಿರುವುದು ತಿಳಿದು ಬಂದಿತು. ಮುನಿಸಿಪಾಲಿಟಿಯ ಅಧಿಕಾರಿಗಳು 2½ ದಿನ ವಾರದ ರಜಾ ದಿನವನ್ನು ಕೊಡುವುದಾಗಿ ಸಮಿತಿಗೆ ಭರವಸೆ ಇತ್ತರು. 2½ ದಿನಗಳ ರಜಾ ದಿನವನ್ನು ಕೊಟ್ಟಿರುವುದನ್ನು ಎಷ್ಟೋ ದಿನಗಳ ನಂತರ ಸಮಿತಿಗೆ ವರದಿ ಮಾಡಲಾಯಿತು.2 ½ ದಿನಗಳ ರಜಾ ದಿನಗಳನ್ನು ಕೊಡಲು ಕೇಳಿಕೊಂಡರೆ, ರಾಷ್ಟ್ರೀಯ ಹಾಗೂ ಹಬ್ಬದ ರಜಾದಿನಗಳನ್ನು ಕೊಡುವುದಿಲ್ಲವೆಂದು ಪೌರಕಾರ್ಮಿಕರಿಗೆ ತಿಳಿಸಲಾಗಿತ್ತಂತೆ.

**ಹಿರಿಯೂರು**

ಹಿರಿಯೂರು ಟೌನ್ ಮುನಿಸಿಪಾಲಿಟಿಯಲ್ಲಿ 32 ಪೌರಕಾರ್ಮಿಕರಿದ್ದಾರೆ. ಅವರೆಲ್ಲರೂ ನಾಮಿನಲ್ ರೋಲ್‌ನಲ್ಲಿದ್ದಾರೆ. ಈ ಪಟ್ಟಣದಲ್ಲಿ, ಪಕ್ಕದ ಸಿರಾ ಟೌನ್‌ನಲ್ಲಿದ್ದಂತೆ, ಪೌರಕಾರ್ಮಿಕರಲ್ಲೇ ಪರಸ್ಪರ ತಾರತಮ್ಯ ಇದೆ. ಜಾಡಮಾಲಿಗಳಿಗಿಂತ ತಾವೇ ಮೇಲು ಎಂದು ಕಸಗುಡಿಸುವವರು ಭಾವಿಸುತ್ತಾರೆ, ಸಾಮಾಜಿಕವಾಗಿ ಜಾಡಮಾಲಿಗಳೊಂದಿಗೆ ಬೆರೆಯುವುದೇ ಇಲ್ಲ.

ಈ ಪಟ್ಟಣದಲ್ಲಿ ಕೂಡ ಪೌರಕಾರ್ಮಿಕರು ಇತರ ಜಾತಿಯವರಿಂದ ದೂರ ಬೇರೆ ಕಾಲೋನಿಯಲ್ಲಿ ವಾಸಿಸುತ್ತಾರೆ. ಆ ಕಾಲೋನಿಯನ್ನು A.K.Colony ಎಂದು ಕರೆಯುತ್ತಾರೆ. ಈ ಜನರ ಕಾಲೋನಿಯಲ್ಲಿ ಒಳ ಚರಂಡಿಗಳು, ಶೌಚಾಲಯಗಳು ಯಾವುವೂ ಇಲ್ಲ. ಮುನಿಸಿಪಾಲಿಟಿಯು ನಲ್ಲಿಯನ್ನು ಒದಗಿಸಿದೆ. ಅದೂ ಕೂಡ ಚರಂಡಿಯ ಹತ್ತಿರ ಇದೆ. ಪೌರಕಾರ್ಮಿಕರಿಗೆ ಒಂದೂವರೆ ದಿನ ಮಾತ್ರ ವಾರದ ರಜಾ ದಿನವನ್ನು ಕೊಡಲಾಗುತ್ತಿದೆ.

**ಹುಮನಾಬಾದ್**

ಬೀದರ್ ಜಿಲ್ಲೆಯಲ್ಲಿರುವ ಹುಮನಾಬಾದ್ 16,357 ಜನಸಂಖ್ಯೆಯನ್ನುಳ್ಳ ಪಟ್ಟಣ. ಟೌನ್ ಮುನಿಸಿಪಾಲಿಟಿಯ ವಾರ್ಷಿಕ ಆದಾಯ ರೂ. 3,50,000. ಮುನಿಸಿಪಾಲಿಟಿಯು 14 ಪುರುಷರನ್ನು, 6 ಮಹಿಳೆಯರನ್ನು ನೇಮಕ ಮಾಡಿಕೊಂಡಿದೆ. ತಮಗೆ ಮೇಲ್ವಿಚಾರಣಾ ಸಿಬ್ಬಂದಿ ಅನಾವಶ್ಯಕವಾಗಿ ಕಿರುಕುಳ ಕೊಡುತ್ತಿದ್ದಾರೆಂದು ಹಾಗೂ ಪ್ರತಿದಿನವೂ 8 ಗಂಟೆಗಳಿಗೂ ಹೆಚ್ಚು ಸಮಯ ಕೆಲಸ ಮಾಡಬೇಕೆಂದು ಒತ್ತಾಯಿಸುತ್ತಾರೆಂದು ಸಮಿತಿಗೆ ಹೇಳಿಕೊಂಡರು. ತಮಗೆ ಕೊಟ್ಟಿರುವ ಸಮವಸ್ತ್ರವೂ ಕೂಡ ಕಳಪೆ ಗುಣಮಟ್ಟದ್ದೆಂದು ಸಮಿತಿಗೆ ಹೇಳಿಕೊಂಡರು.

**ಇಂಡಿ**

ಇಂಡಿ ಟೌನ್ ಮುನಿಸಿಪಾಲಿಟಿಯ ಪೌರಕಾರ್ಮಿಕರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಏಕೆಂದರೆ ಈ ಮುನಿಸಿಪಾಲಿಟಿಯು, ಅವರುಗಳನ್ನು ಅರೆಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಂಡಿದೆ. ಈ ಕ್ರಮ, ಹಾಗೆ ಮಾಡಿಕೊಳ್ಳಕೂಡದೆಂದು ಹೇಳಿರುವ ಸರ್ಕಾರದ ಆದೇಶಗಳ ನೇರ ಉಲ್ಲಂಘನೆಯಾಗುತ್ತದೆ. ಹಾಗೆಯೇ ಪೌರಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಹೊರಡಿಸಿರುವ ಎಲ್ಲ ಇತರ ಸರ್ಕಾರಿ ಆದೇಶಗಳನ್ನು ಕಡೆಗಣಿಸಲಾಗಿದೆ. ಈ ಲೋಪದೋಷಗಳನ್ನು ಪ್ರಶ್ನಿಸಿದಾಗ ಮುನಿಸಿಪಾಲಿಟಿಯ ವಕ್ತಾರ, ಪೌರಕಾರ್ಮಿಕರ ಸ್ಥಿತಿಗಳಲ್ಲಿ ಸುಧಾರಣೆ ತರಲು ಹಣಕಾಸಿನ ಕೊರತೆ ಮುಖ್ಯ ಕಾರಣವೆಂದು ತಿಳಿಸಿದರು.

14,000 ಜನಸಂಖ್ಯೆಯುಳ್ಳ ಇಂಡಿ ಪಟ್ಟಣದಲ್ಲಿ ಕೇವಲ 9 ಪೌರಕಾರ್ಮಿಕರಿದ್ದಾರೆ. ಜನಸಂಖ್ಯೆಯಲ್ಲಿ ಹೆಚ್ಚಳವಾದ ಮಾತ್ರಕ್ಕೇ ಸಣ್ಣ ಸಣ್ಣ ಟೌನ್ ಪಂಚಾಯಿತಿಗಳನ್ನು ಮುನಿಸಿಪಾಲಿಟಿಗಳ ಸ್ಥಾನಮಾನಕ್ಕೆ ಸರ್ಕಾರವು ಹೇಗೆ ಮೇಲ್ದರ್ಜೆಗೇರಿಸುತ್ತದೆ ಎನ್ನುವುದು ಊಹೆಗೂ ನಿಲುಕದ್ದು. ಹಲವಾರು ರಾಜಕೀಯ ಪರಿಗಣನೆಗಳ ಕಾರಣದಿಂದಾಗಿ ಬಹುತೇಕ ಉತ್ತರ ಕರ್ನಾಟಕದಲ್ಲಿ ಅಂತಹ ಮುನಿಸಿಪಾಲಿಟಿಗಳು ಹುಟ್ಟಿಕೊಳ್ಳುತ್ತಿವೆ.

**ಕೋಲಾರ**

ಕೋಲಾರ ಪಟ್ಟಣವು ಕೋಲಾರ ಜಿಲ್ಲೆಯ ಕೇಂದ್ರ ಕಾರ್ಯಸ್ಥಾನ. ಕೋಲಾರವು ಪ್ರಾಚೀನ ಹಿಂದೂ ಸಾಮ್ರಾಜ್ಯದ ಪ್ರಾಚೀನ ಪಟ್ಟಣಗಳಲ್ಲಿ ಒಂದು. ಈ ಭಾಗವನ್ನು ದೀರ್ಘಕಾಲ ಗಂಗರು ಆಳಿದರು. ಕೋಲಾರ ಪಟ್ಟಣವು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 7 ರಲ್ಲಿದೆ. ಮದ್ರಾಸ್‌ಗೆ ಹಾಗೂ ದಕ್ಷಿಣ ಭಾರತದ ಇತರ ಪ್ರಮುಖ ಪಟ್ಟಣಗಳಿಗೆ ಈ ಮಾರ್ಗವಾಗಿಯೇ ಹೋಗಬೇಕಾಗುತ್ತದೆ.

ಈ ಪಟ್ಟಣದ ಪೌರಕಾರ್ಮಿಕರು ಬೋವಿ ಸಮುದಾಯದವರು. 'ಬೋವಿ ಕಾಲೋನಿ'ಯೆಂಬ ಕಾಲೋನಿಯಲ್ಲಿ ವಾಸಿಸುತ್ತಾರೆ. ಈ ಕಾಲೋನಿಗೆ ಅಧ್ಯಕ್ಷರು ಭೇಟಿ ಕೊಟ್ಟಿದ್ದಾಗ, ಈ ಕಾಲೋನಿಯ ಹೆಸರನ್ನು 'ಅಂತರಗಂಗೆ ನಗರ' ಎಂದು ಬದಲಾಯಿಸಲಾಗಿದೆಯೆಂದು ಹೇಳಿಕೊಂಡರು. ಇದು ಒಳ್ಳೆಯ ಆಗುಹೋಗುಗಳಿಗೆ ಹಾಗೂ ಸ್ವಚ್ಛ ಪರಿಸರಗಳ ಬಗ್ಗೆ ಪೌರಕಾರ್ಮಿಕರು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡಿದ್ದಾರೆಂಬುದನ್ನು ಸೂಚಿಸುತ್ತದೆ.

ಈ ಕೆಲಸಗಾರರನ್ನು ತೀರಾ ಕಡೆಗಣಿಸಲಾಗಿದೆ. ಇವರುಗಳ ಕ್ಷೇಮಾಭಿವೃದ್ಧಿಯ ಉದ್ದೇಶವುಳ್ಳ ಸರ್ಕಾರದ ಬಹುತೇಕ ಆದೇಶಗಳನ್ನು ಕಾರ್ಯರೂಪಕ್ಕೆ ತಂದೇ ಇಲ್ಲ. ಪೌರಕಾರ್ಮಿಕರನ್ನು ಅದರಲ್ಲೂ ಮಹಿಳಾ ಪೌರಕಾರ್ಮಿಕರನ್ನು ತೀರಾ ಕೀಳಾಗಿ ಕಾಣಲಾಗುತ್ತಿದೆ. ಕೆಟ್ಟ ಹಾಗೂ ಹೊಲಸು ಮಾತುಗಳಲ್ಲಿ ನಿಂದಿಸುತ್ತಾರೆ.

ಈ ಪಟ್ಟಣದಲ್ಲಿ ಜಾಡಮಾಲಿ ಕೆಲಸ ಇಲ್ಲದಿದ್ದರೂ ಪೊಲೀಸ್ ವಸತಿಗೃಹಗಳಲ್ಲಿ ಖಾಸಗಿ ಜಾಡಮಾಲಿ ಕೆಲಸ ನಡೆಯುತ್ತಿರುವುದು ನಿಜಕ್ಕೂ ವಿಷಾದನೀಯ.

**ಕಮಲಾಪುರ**

ಕಮಲಾಪುರ ಬಳ್ಳಾರಿ ಜಿಲ್ಲೆಯಲ್ಲಿರುವ ಒಂದು ಸಣ್ಣ ಪಟ್ಟಣ. ಹಂಪಿಗೆ ಸಮೀಪದಲ್ಲಿದೆ. ತಾನೂ ಒಂದು ಮುನಿಸಿಪಾಲಿಟಿಯೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಆದರೆ, ತನ್ನ ನೌಕರರಿಗೆ ಯಾವುದೇ ಬಗೆಯ ಸೌಲಭ್ಯವನ್ನು ಕೊಟ್ಟಿಲ್ಲ. ಪೌರಕಾರ್ಮಿಕರಿಗೆ ಸರಿಯಾಗಿ ತಿಂಗಳ ಸಂಬಳವನ್ನು ಕೊಡುತ್ತಿಲ್ಲ. ಈ ಮುನಿಸಿಪಾಲಿಟಿಗೆ ಸಮಿತಿಯ ಅಧ್ಯಕ್ಷರು ಭೇಟಿ ಕೊಟ್ಟಿದ್ದಾಗ, ಪೌರಕಾರ್ಮಿಕರಿಗೆ ಸುಮಾರು 8 ತಿಂಗಳ ಸಂಬಳ ಕೊಟ್ಟಿಲ್ಲವೆಂದು ತಿಳಿದುಬಂತು. ಸುಮಾರು 8 ತಿಂಗಳ ಸಂಬಳ ಕೊಡದಿರುವುದಕ್ಕೆ ಮುನಿಸಿಪಾಲಿಟಿಯ ಆದಾಯ ತಕ್ಕಷ್ಟಿಲ್ಲ ಎಂಬ ಕಾರಣ ಕೊಡಲಾಯಿತು.

ಯಾವುದೇ ಮುನಿಸಿಪಾಲಿಟಿಯು ಕಮಲಾನಗರ ಮುನಿಸಿಪಾಲಿಟಿಯಂತಿರಲೇಬಾರದು ಎನ್ನುವುದಕ್ಕೆ ಕಮಲಾನಗರ ಮುನಿಸಿಪಾಲಿಟಿಯೇ ಜ್ವಲಂತ ನಿದರ್ಶನ. ಪೌರಕಾರ್ಮಿಕರನ್ನು ಮುನಿಸಿಪಾಲಿಟಿಯೇ ಶೋಷಣೆ ಮಾಡುತ್ತಿದೆ.

ಪೌರಕಾರ್ಮಿಕರು ಅತ್ಯಂತ ಶೋಚನೀಯ ಸ್ಥಿತಿಗಳಲ್ಲಿ ಜೀವಿಸುತ್ತಿದ್ದಾರೆ. ಅವರ ನಿವಾಸದ ಪ್ರದೇಶದಲ್ಲಿ ಯಾವ ನಾಗರಿಕ ಸೌಕರ್ಯವನ್ನೂ ಒದಗಿಸಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಹಣಕಾಸಿನ ನೆರವಿನಿಂದ, ಪೌರಕಾರ್ಮಿಕರ ವಾಸಕ್ಕಾಗಿ ಮುನಿಸಿಪಾಲಿಟಿಯು ಮನೆಗಳನ್ನು ಕಟ್ಟಿಸಲು ಪ್ರಯತ್ನ ಮಾಡಿರುವುದೇನೋ ನಿಜ. 12 ಮನೆಗಳ ತಳಪಾಯ ಮಾಡಿದ ನಂತರ ಮುಂದಿನ ಕೆಲಸವನ್ನು ರದ್ದು ಮಾಡಲಾಗಿದೆ.

ಕಮಲಾಪುರದಲ್ಲಿ ಪೌರಕಾರ್ಮಿಕರ ಮಕ್ಕಳನ್ನು ಶಾಲೆಗಳಿಗೆ ಸೇರಿಸಿಕೊಳ್ಳುತ್ತಿಲ್ಲವೆಂದು ಸಮಿತಿಗೆ ತಿಳಿದು ಬಂತು.

ಇಲ್ಲಿ ಪೌರಕಾರ್ಮಿಕರಿಗೆ ಯಾವ ಸೇವಾ ಸೌಲಭ್ಯಗಳನ್ನು ಕೊಡುತ್ತಿಲ್ಲ. ವಾರಕ್ಕೆ ಒಂದೂವರೆ ದಿನ ಮಾತ್ರ ವಾರದ ರಜಾ ದಿನ ಕೊಡಲಾಗುತ್ತಿದೆ. ಪೌರಕಾರ್ಮಿಕರಿಗೆ ಇತರ ಯಾವುದೇ ರಜೆಗಳನ್ನು ಮಂಜೂರು ಮಾಡುತ್ತಿಲ್ಲ. ಕಮಲಾಪುರದಲ್ಲಿ ಪೌರಕಾರ್ಮಿಕರನ್ನು ನಿಂದನೆ ಹಾಗೂ ಶೋಷಣೆ ಮಾಡುವಷ್ಟು ಬೇರೆಲ್ಲೂ ಮಾಡುತ್ತಿಲ್ಲವೆಂದು ಕಾಣುತ್ತದೆ.

**ಕಾರವಾರ**

ಕರಾವಳಿ ಪಟ್ಟಣ ಕಾರವಾರವು ಕರ್ನಾಟಕದ ಇತಿಹಾಸದಲ್ಲಿ ಸಂವತ್ಸರಗಳಲ್ಲಿ ತನ್ನದೇ ಆದ ಐತಿಹಾಸಿಕ ಪಾತ್ರವಹಿಸಿದೆ. ಮೂರು ಬೇರೆ ಬೇರೆ ಬಡಾವಣೆಗಳಲ್ಲಿ ಪೌರಕಾರ್ಮಿಕರು ವಾಸಿಸುತ್ತಿದ್ದಾರೆ. ಮೂರು ಬಡಾವಣೆಗಳಿಗೂ ಜಾತಿಯ ಹೆಸರು ಅಂಟಿಕೊಂಡಿದೆ. ಅವುಗಳನ್ನು "ಹರಿಜನ ಚಾಲಾ", "ಹೊಸ ಹರಿಜನ ಚಾಲಾ" ಮತ್ತು "ಹಳೇ ಹರಿಜನ ಚಾಲಾ" ಎಂದು ಕರೆಯುತ್ತಾರೆ. ಈ ಹೆಸರುಗಳನ್ನು ಬದಲಾಯಿಸಲು ಯಾವ ಕ್ರಮಗಳನ್ನು ಕೈಗೊಂಡಿರದಿರುವುದನ್ನು ಸಮಿತಿಯು ಗಮನಿಸಿದೆ.

ಇಲ್ಲಿ ಬಹಳ ಮುಖ್ಯವಾಗಿ ಎದ್ದು ಕಾಣುತ್ತಿರುವಂತಹ ಸಂಗತಿಯೇನೆಂದರೆ ಈ ಎಲ್ಲ ಮೂರೂ ಪೌರಕಾರ್ಮಿಕರ ಕಾಲೋನಿಗಳಿಗೆ ಮೂಲ ಸೌಕರ್ಯಗಳನ್ನೇ ಒದಗಿಸಿಲ್ಲ. ಆದರೂ ಇದೇ ಮುನಿಸಿಪಾಲಿಟಿಯು ಈ ಕಾಲೋನಿಗಳಿಗೆ ಸಾಮಾನ್ಯ ನಾಗರಿಕ ಸೌಲಭ್ಯಗಳನ್ನು ಒದಗಿಸಲು ವಿಫಲವಾಗಿದ್ದರೂ ಹೊಸ ಹರಿಜನ ಚಾಲಾದಲ್ಲಿ 'ಮಹಿಳಾ ಮತ್ತು ಶಿಶು ಕಲ್ಯಾಣ ಕೇಂದ್ರ' ವನ್ನು ತೆರೆದಿರುವುದು ಸಮಿತಿಗೆ ಸಂತಸವನ್ನು ತಂದಿದೆ.

ಸರ್ಕಾರವು ಜಾಡಮಾಲಿ ಕೆಲಸವನ್ನು ನಿಷೇಧಿಸಿದ ಪರಿಣಾಮವಾಗಿ ಮುನಿಸಿಪಾಲಿಟಿಯು ತಾನು ನೇಮಕ ಮಾಡಿಕೊಂಡಿದ್ದ 14 ಜಾಡಮಾಲಿಗಳನ್ನು ಕೆಲಸದಿಂದ ತೆಗೆದು ಹಾಕಿರುವುದು ಸಮಿತಿಯ ಗಮನಕ್ಕೆ ಬಂತು. ಆ ಸರ್ಕಾರಿ ಆದೇಶದ ಬಗ್ಗೆ ಮುನಿಸಿಪಲ್ ಅಧಿಕಾರಿಗಳು ಮಾಡಿರುವ ವ್ಯಾಖ್ಯಾನ ಸರಿಯಾದುದಲ್ಲ.

ಒಳ್ಳೆಯ ಮನಸ್ಸಿನಿಂದ ತಮಗೆ ಯಾವ ಬಗೆಯ ರಜೆಯನ್ನು ಮಂಜೂರು ಮಾಡುತ್ತಿಲ್ಲವೆಂದು ಪೌರಕಾರ್ಮಿಕರು ಹೇಳಿಕೊಂಡರು. ನಿಯಮಗಳ ಪ್ರಕಾರ ಪೂರ್ಣ ಹೆರಿಗೆ ರಜೆಯನ್ನು ಕೊಡುತ್ತಿಲ್ಲವೆಂದು ಮಹಿಳಾ ಪೌರಕಾರ್ಮಿಕರು ಹೇಳಿಕೊಂಡರು.

**ಮೊಳಕಾಲ್ಮೂರು**

ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆಯ ಗಡಿಭಾಗದಲ್ಲಿರುವ ಒಂದು ಚಿಕ್ಕ ತಾಲ್ಲೂಕು. ಮೊಳಕಾಲ್ಮೂರಿನಲ್ಲಿ ಪೌರಕಾರ್ಮಿಕರ ಒಂದು ಚಿಕ್ಕ ತುಕಡಿ ಇದೆ. ಮಹಿಳಾ ಪೌರಕಾರ್ಮಿಕರು ಇಲ್ಲ.

ಸಮವಸ್ತ್ರಗಳು, ಚಪ್ಪಲಿಗಳು, ಸಾಬೂನು ಹಾಗೂ ಟವೇಲ್ ಗಳನ್ನು ನೀಡುವಂತೆ ಸರ್ಕಾರವು ಹೊರಡಿಸಿರುವ ಆದೇಶಗಳನ್ನು ಇಲ್ಲಿ ಕಾರ್ಯರೂಪಕ್ಕೆ ತಂದಿಲ್ಲ. ಪೌರಕಾರ್ಮಿಕರಿಗೆ ರಜೆಯ ಅವಶ್ಯಕತೆ ಉಂಟಾದಾಗ ಅವರ ರಜೆ ಲೆಕ್ಕದಲ್ಲಿರುವ ರಜೆಯನ್ನು ಅವರಿಗೆ ಕೊಡುತ್ತಿಲ್ಲ.

ಈ ಸಣ್ಣ ಪಟ್ಟಣದಲ್ಲಿ, ಪೌರಕಾರ್ಮಿಕರ ಹುಡುಗನೊಬ್ಬ ಪಿಯುಸಿ ಓದುತ್ತಿರುವುದು ಹಾಗೂ ಈ ಸಮುದಾಯದ ಇನ್ನೊಬ್ಬ ತರುಣ ಶಾಲಾ ಮಾಸ್ತರನಾಗಿರುವುದು ನಿಜಕ್ಕೂ ಸಂತಸದ ಸಂಗತಿ.

**ಮಾನ್ವಿ**

ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ 14,000 ಜನಸಂಖ್ಯೆಯನ್ನುಳ್ಳ ಪಟ್ಟಣ. ವಾರ್ಷಿಕ ಆದಾಯ ಸುಮಾರು 3 ಲಕ್ಷ ರೂಪಾಯಿ. ನೇಮಕ ಮಾಡಿಕೊಂಡಿರುವ 18 ಪೌರಕಾರ್ಮಿಕರಲ್ಲಿ 3 ಮಹಿಳೆಯರು 15 ಪುರುಷರು ಇದ್ದಾರೆ. ಈ ಪೌರಕಾರ್ಮಿಕರಲ್ಲಿ ಬಹುತೇಕ ಜನ ಮಹ್ತರ ಸಮುದಾಯದವರು. ರಾಜಸ್ತಾನದಿಂದ ವಲಸೆ ಬಂದವರು. ಈ ಸಮುದಾಯದವರು, ತಾವು ಕನ್ನಡ ಮಾತನಾಡುವ ಪೌರಕಾರ್ಮಿಕರಿಗಿಂತಲೂ ಜಾತಿಯಲ್ಲಿ ಶ್ರೇಷ್ಠರೆಂದು ಭಾವಿಸುತ್ತಾರೆ.

ಮುನಿಸಿಪಾಲಿಟಿಯು 21 ಪೌರಕಾರ್ಮಿಕರಿಗೆ ನಿವೇಶನಗಳನ್ನು ಮಂಜೂರು ಮಾಡಿದೆ. ಈ ನಿವೇಶನಗಳು ಆರ್ಥಿಕವಾಗಿ ದುರ್ಬಲ ಜನರ ಎಲ್ಲ ಜಾತಿಗಳಿಗೆ ಹಾಗೂ ಮತಸ್ಥರಿಗೆ ಮಂಜೂರು ಮಾಡಿದ 4000 ನಿವೇಶನಗಳಲ್ಲೇ ಒಳಗೊಂಡಿರುವುದನ್ನು ತಿಳಿದು ಸಮಿತಿಗೆ ಸಂತೋಷವಾಯಿತು.

ಮಾನ್ವಿಯು ಪೌರಕಾರ್ಮಿಕರಿಗೆ ಒಂದು ವಾರದಲ್ಲಿ ಕೇವಲ 1½ ದಿನ ವಾರದ ರಜಾ ದಿನವನ್ನು ಕೊಡಲಾಗುತ್ತಿದೆ.

**ಮುಧೋಳ**

ಮುನಿಸಿಪಾಲಿಟಿಯು ನೇಮಕ ಮಾಡಿಕೊಂಡಿರುವ ಪೌರಕಾರ್ಮಿಕರಿಗೆ ಪ್ರಯೋಜನಗಳನ್ನು ಹಾಗೂ ಸೌಲಭ್ಯಗಳನ್ನು ಮಂಜೂರು ಮಾಡಿರುವ ಸರ್ಕಾರದ ಆದೇಶಗಳು ಬಿಜಾಪುರ ಜಿಲ್ಲೆಯಲ್ಲಿರುವ ಮುಧೋಳ ಮುನಿಸಿಪಾಲಿಟಿಯ ಪೌರಕಾರ್ಮಿಕರಿಗೆ ಗೊತ್ತೇ ಇಲ್ಲ. ಮುಧೋಳ ಪೌರಕಾರ್ಮಿಕರು ಬೆಳಬೆಳಿಗ್ಗೆ 5.30 AM ಕ್ಕೆ ತಮ್ಮ ಕೆಲಸಕ್ಕೆ ತೊಡಗುತ್ತಾರೆ. ದಿನದಲ್ಲಿ 8 ಗಂಟೆಗೂ ಮೀರಿ ಕೆಲಸ ಮಾಡುತ್ತಾರೆ. ಮುಧೋಳ ಮುನಿಸಿಪಾಲಿಟಿಯು ಯಾವ ಸರ್ಕಾರಿ ಆದೇಶವನ್ನು ಜಾರಿಗೆ ತಂದಿಲ್ಲ. ಪೌರಕಾರ್ಮಿಕರು ಎಲ್ಲ ಪ್ರಯೋಜನಗಳಿಂದ ವಂಚಿತರಾಗಿದ್ದಾರೆ.

**ಮಾಗಡಿ**

ಬೆಂಗಳೂರು ಜಿಲ್ಲೆಯಲ್ಲಿರುವ ಮಾಗಡಿಯಲ್ಲಿ 20 ಪೌರಕಾರ್ಮಿಕರಿದ್ದಾರೆ. ಇವರೆಲ್ಲರೂ ಆದಿ ಕರ್ನಾಟಕ ಸಮುದಾಯದವರು. ಮುನಿಸಿಪಾಲಿಟಿಯಲ್ಲಿ ಮಹಿಳಾ ಪೌರಕಾರ್ಮಿಕರಿಲ್ಲ. ಪೌರಕಾರ್ಮಿಕರು ಪಟ್ಟಣದಿಂದ ಬಹು ದೂರದಲ್ಲಿ ವಾಸಿಸುತ್ತಿದ್ದಾರೆ. ಮುನಿಸಿಪಾಲಿಟಿಯು ಕಟ್ಟಿಸಿಕೊಟ್ಟಿರುವ ಮನೆಗಳು ಪ್ರಾಣಿಗಳ ವಾಸಕ್ಕೂ ಯೋಗ್ಯವಾದವುಗಳಲ್ಲ. ಅನೇಕ ಸರ್ಕಾರಿ ಆದೇಶಗಳು ಇನ್ನೂ ಜಾರಿಗೆ ಬರಬೇಕಾಗಿದೆ.

**ಮೇಲುಕೋಟೆ**

ಮಂಡ್ಯ ಜಿಲ್ಲೆಯಲ್ಲಿರುವ ಮೇಲುಕೋಟೆ ಪಟ್ಟಣದ ಕೆಲವೊಂದು ಬೀದಿಗಳಲ್ಲಿ ಸವರ್ಣೀಯರ ಎದುರಿಗೆ ನಡೆಯುವ ಧೈರ್ಯ ಈ ದಿನಗಳಲ್ಲಿ ಪೌರಕಾರ್ಮಿಕರಿಗಿಲ್ಲ. ಇದನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಾಗ, ಮೇಲುಕೋಟೆ ಪಟ್ಟಣ ಮುನಿಸಿಪಾಲಿಟಿಯ ಆಡಳಿತಾಧಿಕಾರಿಯು ಮೇಲು ಕೋಟೆಯಲ್ಲಿ ಅಸ್ಪೃಶ್ಯತೆ ಆಚರಣೆ ಚಾಲ್ತಿಯಲ್ಲಿರುವುದನ್ನು ಒಪ್ಪಿಕೊಂಡರು. ಅವರು ಕೊಟ್ಟ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

"ಮೇಲುಕೋಟೆಯ ಎಲ್ಲ ವರ್ಗದ ಜನರು ಈ ಪೌರಕಾರ್ಮಿಕರನ್ನು ಅಸ್ಪೃಶ್ಯರೆಂದು ಭಾವಿಸಿಲ್ಲ. ಈ ಜನರೇ ಕ್ಷೌರದಂಗಡಿಗಳಿಗೆ ಹೋಗುವುದಿಲ್ಲ. ಅವರೇ ಮುಖ ಕ್ಷೌರ ಮಾಡಿಕೊಳ್ಳುತ್ತಾರೆ. ಅವರ ಸಮುದಾಯದವರೇ ಹೇರ್ ಕಟಿಂಗ್ ಮಾಡುತ್ತಾರೆ. ಮೇಲುಕೋಟೆಯಲ್ಲಿರುವ ದೇವಸ್ಥಾನಗಳಿಗೆ ಪೌರಕಾರ್ಮಿಕರ ಪ್ರವೇಶವನ್ನು ಬಹಿಷ್ಕರಿಸಿಲ್ಲ. ಪೌರಕಾರ್ಮಿಕರು ಮುಖ್ಯ ಬೀದಿಗಳಲ್ಲಿ ಎದುರಿಗೆ ಬಂದಾಗ ಸವರ್ಣೀಯರ ಕೆಲವೊಂದು ನಿರ್ದಿಷ್ಟ ಮತಸ್ಥರು, ಈ ದಿನಗಳಲ್ಲಿ ಸಿಟ್ಟು ಮಾಡಿಕೊಂಡು ರೇಗುತ್ತಾರೆನ್ನುವುದು ಸ್ವಲ್ಪ ಮಟ್ಟಿಗೆ ನಿಜ. ಆದರೆ, ಈ ಬಗ್ಗೆ ನಿರ್ದಿಷ್ಟ ದೂರುಗಳಿಲ್ಲ. ಯಾರಾದರೂ ಬರಹದಲ್ಲಿ ದೂರು ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ."

ಸವರ್ಣೀಯರ ಕೆಲವೊಂದು ನಿರ್ದಿಷ್ಟ ಮತಸ್ಥರು ಈ ದಿನಗಳಲ್ಲಿ ಪೌರಕಾರ್ಮಿಕ ತಮ್ಮ ಎದುರಿಗೆ ಬರುವುದಕ್ಕೆ, ಹತ್ತಿರ ಬರುವುದಕ್ಕೆ ಆಕ್ಷೇಪಿಸುತ್ತಾರೆಂಬುದನ್ನು ಟೌನ್ ಮುನಿಸಿಪಾಲಿಟಿಯ ಆಡಳಿತಾಧಿಕಾರಿಯು ಒಪ್ಪಿಕೊಂಡರು. ಆದರೆ ಅವರಾಗಲಿ ಬೇರೆ ಅಧಿಕಾರಿಗಳಾಗಲಿ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಲು ಇಚ್ಛಿಸುತ್ತಿಲ್ಲ.

**ಮಂಗಳೂರು**

ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಕಾರ್ಯಸ್ಥಾನ. 1,65,174 ಜನಸಂಖ್ಯೆಯನ್ನುಳ್ಳ ನಗರ. ಸಿಟಿ ಮುನಿಸಿಪಾಲಿಟಿಯ ವಾರ್ಷಿಕ ಆದಾಯ 60 ಲಕ್ಷ ರೂಪಾಯಿ. ಮುನಿಸಿಪಾಲಿಟಿಯು 266 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 183 ಕೆಲಸಗಾರರು, ಈ ಹಿಂದೆ ಜಾಡಮಾಲಿಗಳಾಗಿದ್ದವರು. 188 ಮಹಿಳಾ ಕೆಲಸಗಾರರಿದ್ದಾರೆ. ಸರಿ ಸುಮಾರು 70 ಕೆಲಸಗಾರರನ್ನು ತಾತ್ಕಾಲಿಕವಾಗಿ ರೂ. 5.30 ಪೈ ದಿನಗೂಲಿ ಮೇಲೆ ನೇಮಕ ಮಾಡಿಕೊಳ್ಳಲಾಗಿದೆಯೆಂಬುದು ಸಮಿತಿಯ ಗಮನಕ್ಕೆ ಬಂತು. ಮುನಿಸಿಪಾಲಿಟಿಯು ಕೇವಲ 10 ಮನೆಗಳನ್ನು ಒದಗಿಸಿದೆ. ಉಳಿದವರು ನಗರದ ನಾನಾ ಭಾಗಗಳಲ್ಲಿ ಗುಡಿಸಲುಗಳನ್ನು, ಮಣ್ಣಿನ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ನಗರದ ಮಧ್ಯ ಭಾಗದಲ್ಲಿ ಒಂದೇ ಕಾಲೋನಿಯಲ್ಲಿ ಪೌರಕಾರ್ಮಿಕರು ವಾಸಿಸುವಂತೆ ಮಾಡಲು ಮುನಿಸಿಪಲ್ ಅಧಿಕಾರಿಗಳು ಪ್ರಯತ್ನ ಪಟ್ಟಾಗ, ತಮ್ಮ ವಾಸದ ಜಾಗದ ಒಳಗಡೆಯಲ್ಲಿ ಪೌರಕಾರ್ಮಿಕರಿಗೆ ಜಾಗ ಕೊಡುವುದಕ್ಕೆ ಹಿಂದೂ ಸವರ್ಣೀಯರು ಆಕ್ಷೇಪಿಸಿದರು. ವಿಧಿಯಿಲ್ಲದೆ ಆ ಪ್ರಸ್ತಾವನೆಯಲ್ಲಿ ಕೈಬಿಡ ಬೇಕಾಯಿತೆಂದು ವರದಿಯಾಗಿದೆ.

ಲಾರಿಗಳಲ್ಲಿ ಕಸವನ್ನು ಸಾಗಿಸುವ ಕೆಲಸವನ್ನು ಯಾರಿಗೆ ವಹಿಸಲಾಗಿದೆಯೋ ಆ ಕೆಲಸಗಾರರಿಗೆ ಗಂ–ಬೂಟುಗಳು, ಸಲಕರಣೆಗಳು ಮುಂತಾದ ಯಾವ ರಕ್ಷಕ ಸಾಮಗ್ರಿಗಳನ್ನು ಕೊಟ್ಟಿಲ್ಲದಿರುವುದನ್ನು ಸಮಿತಿಯು ಗಮನಿಸಿತು. ಕಸ ಸುರಿಯುವ ಅಂಗಣದಲ್ಲಿ ಕೆಲಸಗಾರರು ಬರಿಗೈಯಲ್ಲಿ ಕಸ, ಹೊಲಸನ್ನು ಬಳಿದು ಸುರಿಯುತ್ತಿದ್ದಾರೆ. ಖಾಸಗಿಯಾಗಿ ಹಾಗೂ ಗುಟ್ಟಾಗಿ ಮಲವನ್ನು ಸಾಗಿಸುವ ವ್ಯವಸ್ಥೆ ಮಂಗಳೂರಿನಲ್ಲಿ ಈಗಲೂ ಚಾಲ್ತಿಯಲ್ಲಿದೆಯೆಂಬುದೂ ಸಹ ಸಮಿತಿಗೆ ತಿಳಿದು ಬಂತು.

**ಮಂಡ್ಯ**

ಮಂಡ್ಯ ನಗರ 22,058 ಜನಸಂಖ್ಯೆಯನ್ನುಳ್ಳ ನಗರ. ಮಂಡ್ಯ ಸಿಟಿ ಮುನಿಸಿಪಾಲಿಟಿಯು 135 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಮುನಿಸಿಪಾಲಿಟಿಯ ವಾರ್ಷಿಕ ಆದಾಯ 24 ಲಕ್ಷ ರೂಪಾಯಿ. ಮಂಡ್ಯದ ಬಹುತೇಕ ಪೌರಕಾರ್ಮಿಕರು ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಿಂದ ವಲಸೆ ಬಂದವರು. ತೆಲುಗು ಮಾತನಾಡುವ ಮಧುರೆ ಮಾದಿಗ ಸಮುದಾಯದವರು.

ವಡ್ಡ ಸಮುದಾಯದ ಪೌರಕಾರ್ಮಿಕರು ನಗರದ ಮಧ್ಯ ಭಾಗದಲ್ಲಿ ವಾಸಿಸುತ್ತಾರೆ. ಇತರರು ನಗರ ಹೊರ ಭಾಗದಲ್ಲಿ ಸ್ವೀಪರ್ಸ್ ಕಾಲೋನಿ ಎಂದು ಕರೆಯುವ ಕಾಲೋನಿಯಲ್ಲಿ ವಾಸಿಸುತ್ತಾರೆ. ಈ ಕಾಲೋನಿಯಲ್ಲಿ ಮುನಿಸಿಪಾಲಿಟಿಯು 20 ಮನೆಗಳನ್ನು ಕಟ್ಟಿಸಿದೆ.

ವಡ್ಡ ಸಮುದಾಯದ ಪೌರಕಾರ್ಮಿಕರು ವಾಸಿಸುತ್ತಿರುವ ಜಾಗವನ್ನು ಕಾಳಮ್ಮ ಗುಡಿ ಕಾಲೋನಿ ಎಂದು ಕರೆಯುತ್ತಾರೆ. ವಡ್ಡ ಪೌರಕಾರ್ಮಿಕರು ಗುಡಿಸಲುಗಳನ್ನು ಕಟ್ಟಿ ಕೊಂಡಿರುವ ಜಾಗವು ಮುನಿಸಿಪಾಲಿಟಿಯ ಜಾಗ. ಈ ಜಾಗ ನಗರದ ಮಧ್ಯ ಭಾಗದಲ್ಲೇ ಇರುವುದರಿಂದ, ಕೆಲವು ಸವರ್ಣೀಯರು ಅಲ್ಲಿ ವಾಣಿಜ್ಯ ಬೆಳವಣಿಗೆ ದೃಷ್ಟಿಯಿಂದ ಅಲ್ಲಿನ ಪೌರಕಾರ್ಮಿಕರನ್ನು ಅಲ್ಲಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಬದಲಿ ಜಾಗ ಕೊಟ್ಟರೆ ಆ ಜಾಗವನ್ನು ತೆರವು ಮಾಡಿಕೊಡುವುದಕ್ಕೆ ಪೌರಕಾರ್ಮಿಕರು ಸಹ ಇಚ್ಛಿಸಿದ್ದರಂತೆ. ಕೆಲವು ವರ್ಷಗಳ ಹಿಂದೆ, ಈ ಉದ್ದೇಶಕ್ಕಾಗಿ ಪ್ರತ್ಯೇಕ ಪ್ಲಾಟನ್ನು ರೂಪಿಸಲಾಗಿತ್ತಂತೆ. ಆ ಜಾಗದ ಬೆಲೆಯನ್ನು ಮುನಿಸಿಪಾಲಿಟಿಗೆ ತಾವು ಬಹು ಹಿಂದೆಯೇ ಪಾವತಿ ಮಾಡಿದ್ದೇವೆಂದು ಆದರೆ, ಸವರ್ಣೀಯರ ಇನ್ನೊಂದು ಮತಸ್ಥರು ಆಕ್ಷೇಪಿಸಿದ್ದರಿಂದಾಗಿ ಯಾವುದೂ ಈಡೇರಿಲ್ಲವೆಂದು ಪೌರಕಾರ್ಮಿಕರು ಹೇಳಿಕೊಂಡರು.

**ಮೈಸೂರು**

ಮೈಸೂರು 3,55,636 ಜನ ಸಂಖ್ಯೆಯನ್ನುಳ್ಳ ನಗರ. ಮೈಸೂರು ಸಿಟಿ ಮುನಿಸಿಪಾಲಿಟಿಯು 845 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 479 ಪುರುಷರು, 366 ಮಹಿಳಾ ಕೆಲಸಗಾರರು. ಮುನಿಸಿಪಾಲಿಟಿಯ ವಾರ್ಷಿಕ ಆದಾಯ 1,50,21,304.00 ರೂಪಾಯಿ.

ಮೈಸೂರು ಪೌರಕಾರ್ಮಿಕರು ನಾಲ್ಕು ಬೇರೆ ಬೇರೆ ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ಬೇರೆ ಕಡೆಗಳಲ್ಲಿದ್ದಂತೆ, ಈ ವಿಶ್ವ ಪ್ರಸಿದ್ಧ ನಗರದಲ್ಲಿ ಕೂಡ ಪೌರಕಾರ್ಮಿಕರು ಅಸಹನೀಯ, ಶೋಚನೀಯ ಪರಿಸರದಲ್ಲಿ ವಾಸಿಸುತ್ತಿದ್ದಾರೆ. ಮುನಿಸಿಪಾಲಿಟಿಯು ಪೌರಕಾರ್ಮಿಕರಿಗಾಗಿ 436 ಮನೆಗಳನ್ನು ಕಟ್ಟಿ ಕೊಟ್ಟಿದ್ದರೂ ಇವೆಲ್ಲವೂ, ಸರಿಯಾದ ನಿರ್ವಹಣೆ ಹಾಗೂ ದುರಸ್ತಿ ಇಲ್ಲದೆ ಶಿಥಿಲ ಸ್ಥಿತಿಯಲ್ಲಿವೆ. ಗಾಂಧಿ ನಗರ ಬಡಾವಣೆಯಲ್ಲಿ ಪೌರಕಾರ್ಮಿಕರ ವಾಸಕ್ಕಾಗಿ ಮುನಿಸಿಪಾಲಿಟಿಯು ಕಟ್ಟಿರುವ ಕೆಲವು ಮನೆಗಳನ್ನು ಹೊರಗಿನವರು ಬಲವಂತದಿಂದ ಆಕ್ರಮಿಸಿಕೊಂಡು ಕಳ್ಳ ಬಟ್ಟಿ ತಯಾರಿಕೆಯಲ್ಲಿ ತೊಡಗಿದ್ದಾರೆಂಬುದನ್ನು ಸಮಿತಿಯ ಗಮನಕ್ಕೆ ತರಲಾಯಿತು. ತಮ್ಮ ಮನೆಯ ಶೌಚಾಲಯಗಳನ್ನು ಪರಿವರ್ತಿಸಿಕೊಳ್ಳದಿರುವ ಮೈಸೂರಿನ ಕೆಲ ನಿವಾಸಿಗಳು ಪೌರಕಾರ್ಮಿಕರನ್ನು ಖಾಸಗಿ ಜಾಡಮಾಲಿ ಕೆಲಸಕ್ಕೆ ತೊಡಗಿಸಿಕೊಳ್ಳುವ ಪದ್ಧತಿ ಇರುವುದನ್ನು ಸಮಿತಿಯು ಗಮನಿಸಿತು.

**ನವಲಗುಂದ**

ಧಾರವಾಡ ಜಿಲ್ಲೆಯ ನವಲಗುಂದ ಮುನಿಸಿಪಾಲಿಟಿಯು ತಿಂಗಳಿಗೆ 25 ರೂಪಾಯಿ ಅತ್ಯಲ್ಪ ಹಣಕ್ಕೆ ಅರೆ–ಕಾಲಿಕ ಜಾಡಮಾಲಿಗಳನ್ನು ನೇಮಕ ಮಾಡಿಕೊಂಡಿದೆ. ಕಳೆದ ಕೆಲವು ವರ್ಷಗಳಲ್ಲಿ ಕೆಲವು ಪೌರಕಾರ್ಮಿಕರು ವಯೋನಿವೃತ್ತಿ ಮೇಲೆ ನಿವೃತ್ತರಾಗಿದ್ದಾರೆ. ಆದರೆ, ನಿವೃತ್ತಿ ಪ್ರಯೋಜನಗಳನ್ನು ಇನ್ನೂ ಅವರಿಗೆ ಕೊಟ್ಟಿಲ್ಲ.

**ಪಾವಗಡ**

ಪಾವಗಡ ಟೌನ್ ಮುನಿಸಿಪಾಲಿಟಿಯು 9,002 ಜನಸಂಖ್ಯೆಯನ್ನುಳ್ಳ ಪಟ್ಟಣ. 16 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಮುನಿಸಿಪಾಲಿಟಿಯ ವಾರ್ಷಿಕ ಆದಾಯ 2,50,000 ರೂಪಾಯಿ. ತಮ್ಮನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗುತ್ತಿದೆಯೆಂದು ಹಾಗೂ ದೇವಸ್ಥಾನಗಳು, ಹೋಟೇಲು ಮುಂತಾದ ಕಡೆಗಳಲ್ಲಿ ತಮ್ಮನ್ನು ಸೇರಿಸುತ್ತಿಲ್ಲವೆಂದು ಪೌರಕಾರ್ಮಿಕರು ಸಮಿತಿಗೆ ಹೇಳಿಕೊಂಡರು.

ಪೌರಕಾರ್ಮಿಕರ ಬದುಕಿನ ಸ್ಥಿತಿಗಳಲ್ಲಿ ಯಾವುದೇ ರೀತಿಯ ಸುಧಾರಣೆ ತರಲು ಮುನಿಸಿಪಾಲಿಟಿಯು ಪ್ರಯತ್ನ ಮಾಡಿಲ್ಲ.

**ರಾಮನಗರ**

ಬೆಂಗಳೂರು ಜಿಲ್ಲೆಯಲ್ಲಿರುವ ರಾಮನಗರ ಮುನಿಸಿಪಾಲಿಟಿಯು 18 ಪುರುಷ ಹಾಗೂ 16 ಮಹಿಳಾ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಸಮಿತಿಯ ಅಧ್ಯಕ್ಷರು ಅಲ್ಲಿಗೆ ಭೇಟಿ ನೀಡಿದಾಗ, ಸರ್ಕಾರಿ ಆದೇಶಗಳ ಪ್ರಕಾರ ಪೌರಕಾರ್ಮಿಕರಿಗೆ ಚಪ್ಪಲಿ, ಸೋಪು ಹಾಗೂ ಟವೆಲ್‌ಗಳನ್ನು ಒದಗಿಸಿಲ್ಲವೆಂಬುದನ್ನು ಸಮಿತಿಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. ತೆಲುಗು ಮಾತನಾಡುವ ವಡ್ಡ ಸಮುದಾಯದ ಹಾಗೂ ಮಾದಿಗ ಸಮುದಾಯದ ಪೌರಕಾರ್ಮಿಕರು ಪಟ್ಟಣದ ಅತ್ಯಂತ ಅನಾರೋಗ್ಯಕರ ತಾಣದಲ್ಲಿ ವಾಸಿಸುತ್ತಿದ್ದಾರೆ. ಉತ್ತಮ ರೀತಿಯಲ್ಲಿ ವಿನ್ಯಾಸಗೊಳಿಸಿದ ಬಡಾವಣೆಯಲ್ಲಿ ಈ ಜನರಿಗೆ ಮನೆಗಳನ್ನು ಕಟ್ಟಿಕೊಡಲು ಅಥವಾ ನಿವೇಶನಗಳನ್ನು ಮಂಜೂರು ಮಾಡಲು ಯಾವ ಪ್ರಯತ್ನಗಳನ್ನೂ ಮಾಡಿಲ್ಲ. ರಾಮನಗರಕ್ಕೆ ಸಮಿತಿಯ ಅಧ್ಯಕ್ಷರು ಭೇಟಿ ನೀಡಿದ್ದಾಗ, ಮುನಿಸಿಪಾಲಿಟಿಯು ತಮಗೆ ಮಾರಾಟ ಮಾಡಿದ್ದ ಜಾಗವನ್ನು ಪಡೆದುಕೊಳ್ಳಲು ಕೆಲವರು ಪ್ರಭಾವಿ ನಾಗರಿಕ ಜನರು ತಾವಿರುವ ಈಗಿನ ನಿವಾಸದ ಬಡಾವಣೆಯಿಂದ ತಮ್ಮನ್ನು ಒಕ್ಕಲೆಬ್ಬಿಸುವುದಾಗಿ ಹೆಸರಿಸುತಿದ್ದಾರೆಂದು ಪೌರಕಾರ್ಮಿಕರು ಸಮಿತಿಯು ಅಧ್ಯಕ್ಷರಿಗೆ ಹೇಳಿಕೊಂಡರು. ಪೌರಕಾರ್ಮಿಕರ ಕಾಲೋನಿಗಳಲ್ಲಿ ಅಂತಹ ಜಾಗಗಳನ್ನು ಕೊಂಡುಕೊಳ್ಳುವುದಕ್ಕೆ, ಪೌರಕಾರ್ಮಿಕರು ಯಾವ ಆ ಜಾಗದಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೋ ಅವು ಪಟ್ಟಣದ ಕೇಂದ್ರ ಭಾಗದಲ್ಲಿರುವುದು, ಹಾಗಾಗಿ ವಾಣಿಜ್ಯ ರೀತ್ಯಾ ಬೆಲೆ ಬಾಳುವಂಥವುಗಳಾಗಿರುವುದೇ ಕಾರಣ.

**ರಾಯಚೂರು**

ರಾಯಚೂರು ನಗರದಲ್ಲಿ ಈಗಲೂ ಮಲವನ್ನು ತಲೆ ಮೇಲೆ ಹೊತ್ತು ಸಾಗಿಸುತ್ತಿರುವುದನ್ನು ಕಾಣಬಹುದು. ಮುನಿಸಿಪಾಲಿಟಿಯು ನಗರದಲ್ಲಿರುವ ಶೌಚಾಲಯಗಳನ್ನು ನೀರು ಹಾಕಿ ಹರಿಸುವ ಎಲ್ಲ ಸರ್ವೀಸ್ ಟೈಪ್ ಶೌಚಾಲಯಗಳನ್ನು ಪರಿವರ್ತಿಸದಿರುವುದೇ ಕಾರಣ. ನಗರದಲ್ಲಿ ಒಟ್ಟು 2,385 ಶೌಚಾಲಯಗಳಿದ್ದು, ಮುನಿಸಿಪಲ್ ಅಧಿಕಾರಿಗಳು ಕೇವಲ 815 ಶೌಚಾಲಯಗಳನ್ನು ಪರಿವರ್ತಿಸಿದ್ದಾರೆ. ಹಾಗಾಗಿ, ರಾಯಚೂರು ನಗರದಲ್ಲಿ ಈಗಲೂ ಜಾಡಮಾಲಿ ಕೆಲಸ ಮುಂದುವರಿದಿದೆ. ಉತ್ತರ ಭಾರತದ ಬಾಲ್ಮೀಕಿ ಸಮುದಾಯದ 150 ಜನರು ರಾಯಚೂರಿನ ನಿವಾಸಿಗಳೊಂದಿಗೆ ಖಾಸಗಿ ನಿಯೋಜನೆಗೆ ಒಪ್ಪಿಕೊಂಡು ಜಾಡಮಾಲಿ ಕೆಲಸ ಮಾಡುತ್ತಿದ್ದಾರೆ.

ರಾಯಚೂರು ನಗರವು 79,630 ಜನಸಂಖ್ಯೆಯನ್ನುಳ್ಳ ನಗರ. ಸಿಟಿ ಮುನಿಸಿಪಾಲಿಟಿಯು 231 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಈ ಪೈಕಿ 39 ಜನರು ಹಿಂದಿನ ಜಾಡಮಾಲಿಗಳು. ಈಗ ಅವರಿಗೆ ಬೇರೆ ಕೆಲಸವನ್ನು ವಹಿಸಲಾಗಿದೆ. ಪೌರಕಾರ್ಮಿಕರ ವಾಸಕ್ಕಾಗಿ ಮುನಿಸಿಪಾಲಿಟಿಯು ಕೇವಲ 28 ಮನೆಗಳನ್ನು

ಕಟ್ಟಿಸಿದೆ. ಇತರ ಪೌರಕಾರ್ಮಿಕರು 'ಹರಿಜನ ವಾಡಾ' ಎಂದು ಕರೆಯುತ್ತಿರುವ ಕಾಲೋನಿಯಲ್ಲಿ ತಮ್ಮ ಸ್ವಂತ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

**ಶೋರಾಪುರ**

ಶೋರಾಪುರ ಪಟ್ಟಣವು 21,056 ಜನ ಸಂಖ್ಯೆಯನ್ನುಳ್ಳ ನಗರ. ಟೌನ್ ಮುನಿಸಿಪಾಲಿಟಿಯು 26 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಪ್ರತಿ ದಿನವೂ 8 ಗಂಟೆಗಳಿಗಿಂತಲೂ ಹೆಚ್ಚು ಕಾಲ ಪೌರಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದಾರೆಂದು ಹಾಗೂ 1½ ದಿನವನ್ನು ವಾರದ ರಜಾ ದಿನವಾಗಿ ಕೊಡಲಾಗುತ್ತಿದೆಯೆಂಬುದನ್ನು ಸಮಿತಿಯ ಗಮನಕ್ಕೆ ತರಲಾಯಿತು. ಸಮಿತಿಯು ಶೋರಾಪುರಕ್ಕೆ ಭೇಟಿ ಇತ್ತಿದ್ದಾಗ, ಮುನಿಸಿಪಾಲಿಟಿಯು ಪೌರಕಾರ್ಮಿಕರ ಕ್ಷೇಮಾಭಿವೃದ್ಧಿ ಕುರಿತ ಯಾವುದೇ ಸರ್ಕಾರಿ ಆದೇಶಗಳನ್ನು ಕಾರ್ಯರೂಪಕ್ಕೆ ತರದಿರುವುದನ್ನು ಸಮಿತಿಯು ಗಮನಿಸಿತು. ಶೋರಾಪುರದಲ್ಲಿ ಖಾಸಗೀ ಜಾಡಮಾಲಿ ಕೆಲಸ ಈಗಲೂ ನಡೆಯುತ್ತಿದೆ.

**ಸಿಂಧನೂರು**

ರಾಯಚೂರು ಜಿಲ್ಲೆಯಲ್ಲಿರುವ ಸಿಂಧನೂರು 14,300 ಜನಸಂಖ್ಯೆಯನ್ನುಳ್ಳ ಪಟ್ಟಣ. ಸಿಟಿ ಮುನಿಸಿಪಾಲಿಟಿಯು 23 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಈ ಪಟ್ಟಣದಲ್ಲಿ ಪೌರಕಾರ್ಮಿಕರನ್ನು ಹೊಟೇಲುಗಳ, ದೇವಸ್ಥಾನಗಳ ಒಳಗಡೆಗೆ ಸೇರಿಸುತ್ತಿಲ್ಲವೆಂಬುದು ಸಮಿತಿಯು ಸಿಂಧನೂರಿಗೆ ಭೇಟಿ ಕೊಟ್ಟಿದ್ದಾಗ ತಿಳಿದು ಬಂತು. ಪ್ರತಿದಿನವೂ 8 ಗಂಟೆಗಳಿಗಿಂತಲೂ ಹೆಚ್ಚು ಕಾಲ ಪೌರಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದಾರೆಂದುಹಾಗೂ 1½ ದಿನವನ್ನು ವಾರದ ರಜಾ ದಿನವನ್ನಾಗಿ ಕೊಡಲಾಗುತ್ತಿದೆಯೆಂಬುದು ಸಮಿತಿಗೆ ತಿಳಿದುಬಂತು. ಪಕ್ಕದ ಬಳ್ಳಾರಿ ಜಿಲ್ಲೆಯ ಪೌರಕಾರ್ಮಿಕರು ಇನ್ನೂ ಪಿಂಚಣಿ ಹಾಗೂ ಗ್ರಾಚುಯಿಟಿಗೆ ಅರ್ಹರಾಗಿಲ್ಲ. ಆದರೆ, ಸಿಂಧನೂರಿನ ಪೌರಕಾರ್ಮಿಕರು ಪಿಂಚಣಿ ಹಾಗೂ ಗ್ರಾಚುಯಿಟಿಗೆ ಅರ್ಹರಾಗಿದ್ದಾರೆ. ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಮನೆಗಳನ್ನು ಕಟ್ಟಿಕೊಡುವ ಕೇಂದ್ರ ಪುರಸ್ಕೃತ ಯೋಜನೆಯ ಅಡಿಯಲ್ಲಿ ಸರ್ಕಾರವು 16,800 ರೂಪಾಯಿಯನ್ನು ಮಂಜೂರು ಮಾಡಿದೆ. ಪೌರಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಸಲುವಾಗಿ ಮುನಿಸಿಪಾಲಿಟಿಯು ಈ ಹಣವನ್ನು ಬಳಸುತ್ತಿದೆ.

**ಶಿವಮೊಗ್ಗ**

ಶಿವಮೊಗ್ಗ ಸಿಟಿ ಮುನಿಸಿಪಾಲಿಟಿಯು 414 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ 132 ಮಹಿಳೆಯರಿದ್ದಾರೆ. ಉಳಿದವರು ಪುರುಷ ಕೆಲಸಗಾರರು. ಶಿವಮೊಗ್ಗ 1,02,703 ಜನಸಂಖ್ಯೆಯನ್ನುಳ್ಳ ನಗರ. ನಗರ ಮುನಿಸಿಪಾಲಿಟಿಯ ವಾರ್ಷಿಕ ಆದಾಯ 89 ಲಕ್ಷ ರೂಪಾಯಿ.

ಈ ನಗರದಲ್ಲಿ ಈಗಲೂ ಸುಮಾರು 200 ಜನರು ಜಾಡಮಾಲಿ ಕೆಲಸ ಮಾಡುತ್ತಿದ್ದಾರೆ.

ಸಿಟಿ ಮುನಿಸಿಪಾಲಿಟಿಯು, ನಾಮ ಮಾತ್ರದ ಬೆಲೆಯಲ್ಲಿ 258 ನಿವೇಶನಗಳನ್ನು ಹಂಚಿಕೆ ಮಾಡಿದೆ ಹಾಗೂ ಕೆಲವು ಕಾರ್ಮಿಕರಿಗೆ ಉಚಿತವಾಗಿ ಹಂಚಿಕೆ ಮಾಡಿದೆ. ಪೌರಕಾರ್ಮಿಕರಿಗೆ 14 ಮನೆಗಳನ್ನು ಕಟ್ಟಿಸಿಕೊಡುವ ಕೆಲಸ ಪ್ರಾರಂಭಿಸಿದೆ. ಶಿವಮೊಗ್ಗ ಪೌರಕಾರ್ಮಿಕರು ಈಗ ಮಾತ್ರವೇ ಗ್ರಾಚುಯಿಟಿಗೆ ಅರ್ಹರಾಗಿದ್ದಾರೆ.

**ಶಿರಾ**

ಅಸ್ಪೃಶ್ಯತೆಯ ಅನಿಷ್ಠ ಪದ್ಧತಿ ಈಗಲೂ ಈ ಪಟ್ಟಣದಲ್ಲಿ ಆಚರಣೆಯಲ್ಲಿದೆ. ಸವರ್ಣೀಯ ಹಿಂದೂಗಳು ಹಾಗೂ ಮುಸ್ಲಿಮರು ತಮ್ಮ ಹೊಟೇಲುಗಳ ಒಳಗಡೆಗೆ ಪೌರಕಾರ್ಮಿಕರನ್ನು ಸೇರಿಸುತ್ತಿಲ್ಲ. ಮುನಿಸಿಪಾಲಿಟಿಯಲ್ಲಿ ಕೆಲಸ ಮಾಡುತ್ತಿರುವ ಕಸಗುಡಿಸುವವರು, ಜಾಡಮಾಲಿಗಳಿಗಿಂತಲೂ ಶ್ರೇಷ್ಠರೆಂದು ಭಾವಿಸಿದ್ದಾರೆ. ಜಾಡಮಾಲಿಗಳನ್ನು ತಮ್ಮ ಸಮೀಪಕ್ಕೆ ಸೇರಿಸುತ್ತಿಲ್ಲ. ಟೌನ್ ಮುನಿಸಿಪಾಲಿಟಿಯು, ಸಮಾಜ ಕಲ್ಯಾಣ ಇಲಾಖೆಯ ನೆರವಿನೊಂದಿಗೆ ಪೌರಕಾರ್ಮಿಕರ ವಾಸಕ್ಕಾಗಿ ಕೆಲವೊಂದು ಮನೆಗಳನ್ನು ಕಟ್ಟಿಸಿದೆ. ಕೆಲವು ಜಾಡಮಾಲಿಗಳಿಗೆ ಮನೆಗಳನ್ನು ಹಂಚಿಕೆ ಮಾಡಿದೆ. ಕಸಗುಡಿಸುವವರು ಹಾಗೂ ಜಾಡಮಾಲಿಗಳು ಒಂದೇ ಜಾತಿಯವರಾದರೂ, ಜಾಡಮಾಲಿಗಳಿಗಿಂತಲೂ ತಾವೇ ಶ್ರೇಷ್ಠರೆಂದುಕೊಳ್ಳುವ ಕಸಗುಡಿಸುವವರು ಜಾಡಮಾಲಿಗಳನ್ನು ತಮ್ಮ ಜಾಗದ ಒಳಗಡೆಗೆ ಬರಲು ಬಿಡುತ್ತಿಲ್ಲ. ಕಸಗುಡಿಸುವವರು ಜಾಡಮಾಲಿಗಳೊಂದಿಗೆ ಸೌಹಾರ್ದದಿಂದ ಇರಲು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಎಷ್ಟೇ ಸಲಹೆ ಕೊಟ್ಟರೂ ಜಗ್ಗದ ಕಸಗುಡಿಸುವವರು ಜಾತಿ ಶ್ರೇಣಿಯಲ್ಲಿ ತಮ್ಮ ವೃತ್ತಿಯು ಮೇಲಿರುವುದರ ಆಧಾರ ಮೇಲೆ ಜಾಡಮಾಲಿಗಳೊಂದಿಗೆ ಇರಲು ನಿರಾಕರಿಸಿದರು.

**ಯಾದಗಿರಿ**

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಯಾದಗಿರಿ ಪಟ್ಟಣದ ಖಾಸಗಿ ಜಾಡಮಾಲಿಗಳು, ಮಲವನ್ನು ಒಯ್ಯುವುದನ್ನು ನಿಷೇಧಿಸಿರುವುದಕ್ಕೆ ನ್ಯಾಯಾಲಯದ ತಡೆಯಾಜ್ಞೆ ಕೋರಿದ್ದಾರೆ. ತಲೆ ಮೇಲೆ ಮಲವನ್ನು ಹೊತ್ತು ಸಾಗಿಸುವ ವೃತ್ತಿಯಲ್ಲಿ ಮುಂದುವರಿಯುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ವಾದ ಮಂಡಿಸಿದ್ದಾರೆ. ಈಗಲೂ ಈ ಜನರು ಯಾದಗಿರಿ ಪಟ್ಟಣದಲ್ಲಿ ಅದೇ ವೃತ್ತಿಯಲ್ಲಿ ಮುಂದುವರಿದಿದ್ದಾರೆ.

ಯಾದಗಿರಿ 32,760 ಜನಸಂಖ್ಯೆಯನ್ನುಳ್ಳ ಪಟ್ಟಣ. 57 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ ಈ ಹಿಂದಿನ 9 ಮಂದಿ ಜಾಡಮಾಲಿಗಳು ಈಗ ಕಸಗುಡಿಸುವ ಕೆಲಸ ಮಾಡುತ್ತಿದ್ದಾರೆ. ಯಾದಗಿರಿ ಮುನಿಸಿಪಾಲಿಟಿಯು ತನ್ನ ಪೌರಕಾರ್ಮಿಕರಿಗೆ ಯಾವುದೇ ಬಗೆಯ ಕ್ಷೇಮಾಭಿವೃದ್ಧಿ ಸೌಲಭ್ಯಗಳನ್ನು ಒದಗಿಸಿಲ್ಲ.

**ಯಳಂದೂರು**

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಪೌರಕಾರ್ಮಿಕರು ಹಾಗೂ ಅವರ ಕುಟುಂಬದವರು ಸಮಾಜದ ಮೇಲು ಜಾತಿಯವರೆನ್ನಲಾದ ಜನರಿಂದ ಹಾಗೂ ಪರಿಶಿಷ್ಟ ಜಾತಿಯ ಇತರ ವರ್ಗದ ಜನರಿಂದಲೇ ತಿರಸ್ಕಾರಕ್ಕೆ ಒಳಗಾಗಿದ್ದಾರೆ. ಯಳಂದೂರು ಇದಕ್ಕೇನೂ ಹೊರತಾಗಿಲ್ಲ. ಆದರೆ, ಇತರ ಸ್ಥಳಗಳಲಿ ಹೊಟೇಲುಗಳಲ್ಲಿ ಪೌರಕಾರ್ಮಿಕರಿಗೆ ಪ್ರತ್ಯೇಕ ಲೋಟಗಳನ್ನಿಟ್ಟಿದ್ದರು. ಯಳಂದೂರಿನಲ್ಲಿ ಹಾಗಿಲ್ಲ, ಪೌರಕಾರ್ಮಿಕರು ಹೊಟೇಲಿನಲ್ಲಿ ಕಾಫಿ, ಟೀ ಕುಡಿಯಲು ಮನೆಯಿಂದ ಲೋಟಗಳನ್ನು ತಂದು ಕಾಫಿ, ಟೀ ಕುಡಿಯುತ್ತಾರೆ. ಯಳಂದೂರಿನಲ್ಲಿ ಪೌರಕಾರ್ಮಿಕರು ಯಾವಾಗಲೂ ಅಲ್ಯೂಮಿನಿಯಂ ಕಪ್‌ಗಳನ್ನು ತನ್ನೊಂದಿಗೆ ಇಟ್ಟುಕೊಂಡಿರುವುದನ್ನು ಯಾರಾದರೂ ಕಾಣಬಹುದು.

ಯಳಂದೂರು 5129 ಜನಸಂಖ್ಯೆಯನ್ನುಳ್ಳ ಪಟ್ಟಣ. ಮುನಿಸಿಪಾಲಿಟಿಯು 9 ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ ಐವರು ಪುರುಷರು. ಇವರು ತೆಲುಗು ಮಾತನಾಡುವ ಮಾದಿಗ ಸಮುದಾಯದವರು. ಈ ಪೌರಕಾರ್ಮಿಕರಿಗೆ ಮುನಿಸಿಪಾಲಿಟಿಯು ಮನೆ ನಿವೇಶನಗಳನ್ನು ಮಂಜೂರು ಮಾಡಿದೆ.

**ಬೆಂಗಳೂರು**

ಬೆಂಗಳೂರು, ಭಾರತದ ಅತ್ಯಂತ ಸ್ವಚ್ಛ ನಗರಗಳಲ್ಲಿ ಒಂದು ಎನ್ನುವ ಹೆಗ್ಗಳಿಕೆಯ ಶ್ರೇಯಸ್ಸು ಬೆಂಗಳೂರು ನಗರ ಕಾರ್ಪೊರೇಷನ್‌ನ ಪೌರಕಾರ್ಮಿಕರಿಗೆ ಸಲ್ಲಬೇಕು. ಆದರೂ ಮಲವನ್ನು ಯಾವುದೇ ವಿಧಾನದಲ್ಲಿ ಸಾಗಿಸುವುದನ್ನು ಸರ್ಕಾರವು ನಿಷೇಧಿಸಿದ್ದರೂ ಬೆಂಗಳೂರಿನ ಕೆಲವೊಂದು ಬಡಾವಣೆಗಳಲ್ಲಿ ಮಲವನ್ನು ಈಗಲೂ ತಲೆ ಮೇಲೆ ಹೊತ್ತು ಸಾಗಿಸುತ್ತಿರುವುದು ಶೋಚನೀಯ ಸಂಗತಿ.

ಬೆಂಗಳೂರು ಸರಿಸುಮಾರು 20 ಲಕ್ಷ ಜನಸಂಖ್ಯೆಯನ್ನುಳ್ಳ ನಗರ. ಕಾರ್ಪೊರೇಷನ್, 2435 ಪುರುಷ ಹಾಗೂ 2090 ಮಹಿಳಾ ಪೌರಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಇವರಲ್ಲಿ ಸುಮಾರು ಶೇಕಡಾ 95 ರಷ್ಟು ಜನರು ತೆಲುಗು ಮಾತನಾಡುವ ವಡ್ಡ ಹಾಗೂ ಮಾದಿಗ ಸಮುದಾಯದವರು. ಇವರಲ್ಲಿ ಕೆಲವರು ಒಕ್ಕಲಿಗ, ಲಿಂಗಾಯತ ಹಾಗೂ ಹಾಗೂ ಮುಸ್ಲಿಂ ಸಮುದಾಯದವರೂ ಇದ್ದಾರೆ. ತೀವ್ರ ನಿರುದ್ಯೋಗದ ಸಮಸ್ಯೆಯಿಂದಷ್ಟೇ ಅಲ್ಲ, ಈಗ ಕಾರ್ಪೊರೇಷನ್‌ನಲ್ಲಿ ಪೌರಕಾರ್ಮಿಕರಿಗೆ ಒಳ್ಳೆಯ ಸೇವಾ ಷರತ್ತುಗಳು ಹಾಗೂ ಪ್ರಯೋಜನಗಳು ಸಿಗುತ್ತಿರುವುದರಿಂದ ಪೌರಕಾರ್ಮಿಕರ ಕೆಲಸ ಮಾಡಲು ಅನೇಕ ಸವರ್ಣೀಯ ಹಿಂದೂಗಳು ಮುಂದೆ ಬರುತ್ತಿದ್ದಾರೆ.

ಪರಿಶಿಷ್ಟ ಜಾತಿಗಳಲ್ಲಿ ತಮಿಳು ಮಾತನಾಡುವ ಕೆಲವರು ಹಾಗೂ ಕನ್ನಡ ಮಾತನಾಡುವ ಪರಿಶಿಷ್ಟ ಜಾತಿಯವರು ಈ ಕೆಲಸ ಮಾಡುತ್ತಿಲ್ಲ. ಈ ಕೆಲಸ ಮಾಡುತ್ತಿರುವವರಿಂದ ದೂರ ಇದ್ದಾರೆ. ಹೀಗಾಗಿ, ಬೆಂಗಳೂರಿನ ಪೌರಕಾರ್ಮಿಕರು ಪ್ರತ್ಯೇಕವಾಗಿ ಪ್ರತ್ಯೇಕ ಜಾಗಗಳಲ್ಲಿ ವಾಸಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಅಂಥ ಜಾಗಗಳು ಸುಮಾರು 30 ಇವೆ. ಬಹಳಷ್ಟು ಪೌರಕಾರ್ಮಿಕರು ಗೋರಿಪಾಳ್ಯ, ಕುಂಬಾರ ಗುಂಡಿ, ಬೋರೆ ಬ್ಯಾಂಕ್ ರಸ್ತೆ, ಮರ್ಫಿ ಟೌನ್, ಶಾಂತಿ ನಗರ ಹಾಗೂ ಹಳೆಯ ಸಾವರ ಬೀದಿಯಲ್ಲಿ ವಾಸಿಸುತ್ತಿದ್ದಾರೆ. ಗೋರಿಪಾಳ್ಯಕ್ಕೆ 'ಜಗಜೀವನ ರಾಮನಗರ' ಎಂದು ಹೊಸ ಹೆಸರು ಇಡಲಾಗಿದೆ. ಈ ಪೌರಕಾರ್ಮಿಕರು ಆಂಧ್ರಪ್ರದೇಶದ ಚಿತ್ತೂರು, ಅನಂತಪುರ ಹಾಗೂ ನೆಲ್ಲೂರು ಜಿಲ್ಲೆಗಳಿಂದ ಹಾಗೂ ಬಳ್ಳಾರಿ ಜಿಲ್ಲೆಯಿಂದ ಬಂದವರು. ಅನೇಕ ದಶಕಗಳಿಂದ ಬೆಂಗಳೂರಿನಲ್ಲಿ ಈ ಜನರು ವಾಸಿಸುತ್ತಿದ್ದರೂ ತಮ್ಮ ಸ್ವಂತ ರೀತಿ ರಿವಾಜುಗಳನ್ನು ಪಾಲಿಸುತ್ತಾರೆ.

ಬೆಂಗಳೂರು ನಗರ ಕಾರ್ಪೊರೇಷನ್ ಪೌರಕಾರ್ಮಿಕರಿಗೆ ಸುಮಾರು 1000 ಮನೆಗಳನ್ನು ಒದಗಿಸಿದೆ. ಉಳಿದವರು ಕಾರ್ಪೊರೋಷನ್ನಿನ ಭೂಮಿಯಲ್ಲಿ ಮಣ್ಣಿನ ಮನೆಗಳನ್ನು ಹಾಗೂ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಪೌರಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ಕಾರ್ಯವನ್ನು ಕಾರ್ಪೊರೇಷನ್ ಆರಂಭಿಸಿದೆ. ಭಕ್ಷಿ ಗಾರ್ಡನ್‌ನಲ್ಲಿ ವಾಸಿಸುತಿರುವ ಪೌರಕಾರ್ಮಿಕರಿಗೆ ಕಾರ್ಪೊರೇಷನ್ 450 ಮನೆ ನಿವೇಶನಗಳನ್ನು ಹಂಚಿಕೆ ಮಾಡಿದೆ. ಜಗ ಜೀವನರಾಮ್ ನಗರದಲ್ಲಿ ವಾಸಿಸುತ್ತಿರುವ ಪೌರಕಾರ್ಮಿಕರಿಗೆ ಕನಿಷ್ಠ ಬೆಲೆಯಲ್ಲಿ 108 ಮನೆಗಳನ್ನು ಒದಗಿಸಲು ಕಾರ್ಪೊರೇಷನ್ ಉದ್ದೇಶಿಸಿದೆ. ಇಷ್ಟನ್ನು ಬಿಟ್ಟರೆ, ಪೌರಕಾರ್ಮಿಕರು ವಾಸಿಸುತ್ತಿರುವ ಇತರ ಬಡಾವಣೆಗಳಲ್ಲಿ ಸುಧಾರಣೆ ತರಲು ಕಾರ್ಪೊರೇಷನ್ ಯಾವುದೇ ರೀತಿಯಲ್ಲಿ ಪ್ರಯತ್ನ ಮಾಡಿಲ್ಲ. ಪೌರಕಾರ್ಮಿಕರ ಬಡಾವಣೆಗಳಲ್ಲಿ ಕಾರ್ಪೊರೇಷನ್ ಯಾವುದೇ ನರ್ಸರಿ ಅಥವಾ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿಲ್ಲ. ಆದರೆ, ಕೆಲವೊಂದು ಬಡಾವಣೆಗಳಲ್ಲಿ ಕೆಲವು ಶಿಶು ಮಂದಿರಗಳನ್ನು ತೆರೆಯಲಾಗಿದೆ.

ಬಹಳಷ್ಟು ಪೌರಕಾರ್ಮಿಕರು ಕ್ಷಯ ಮತ್ತು ಇತರ ದೀರ್ಘಕಾಲೀನ ರೋಗಗಳಿಗೆ ಒಳಗಾಗಿದ್ದಾರೆ. ಅವರಿಗೆ ನಿಯತಕಾಲಿಕ ವೈದ್ಯಕೀಯ ಪರೀಕ್ಷೆ ಮಾಡಿಸುತ್ತಿಲ್ಲ. ಕ್ಷಯ ರೋಗಿಗಳಿಗೆ ಯಾವುದೇ ವಿಶೇಷ ರಜೆ ಕೊಡುತ್ತಿಲ್ಲ.

ರಾಜ್ಯದಲ್ಲಿರುವ ಬೇರೆ ಕಡೆಗಳಲ್ಲಿ ಮಹಿಳಾ ಪೌರಕಾರ್ಮಿಕರಿಗೆ ಟವೆಲ್ ಗಳನ್ನು ಕೊಡುತ್ತಿಲ್ಲ. ಆದರೆ, ಬೆಂಗಳೂರಿನ ಮಹಿಳಾ ಪೌರಕಾರ್ಮಿಕರಿಗೆ ಟವೆಲ್‌ಗಳನ್ನು ಒದಗಿಸಲಾಗುತ್ತಿದೆ. ಕಾರ್ಪೊರೇಷನ್ ಕೆಲವು ಕಡೆ

ನೌಕರರ ಹಾಜರಾತಿ ಘಟಕಗಳನ್ನು ನಿರ್ಮಿಸಿದೆ. ಅಲ್ಲಿ ಪೌರಕಾರ್ಮಿಕರ ಹಾಜರಾತಿಯನ್ನು ದಾಖಲಿಸಲಾಗುತ್ತಿದೆ. ಅಲ್ಲಿ ಪೌರಕಾರ್ಮಿಕರು ತಮ್ಮ ಕೆಲಸದ ಸಲಕರಣೆ ಮುಂತಾದವುಗಳನ್ನು ಇಡುತ್ತಾರೆ. ಆದರೆ, ಪೌರಕಾರ್ಮಿಕರು ತಮ್ಮ ನಿವಾಸದ ಬಡಾವಣೆಗಳಲಿಂದ ಬಹು ದೂರದ ಕಾರ್ಯ ಸ್ಥಳಗಳಿಗೆ ಹೋಗಿ ಬರಲು ಕಾರ್ಪೊರೇಷನ್ ಯಾವುದೇ ಸಾರಿಗೆ ಸೌಲಭ್ಯ ಒದಗಿಸದಿರುವುದು ಶೋಚನೀಯ.

ಬೆಂಗಳೂರು ಸಿಟಿ ಕಾರ್ಪೊರೇಷನ್‌ನ ಪೌರಕಾರ್ಮಿಕರು ಸುಸಂಘಟಿತರಾಗಿದ್ದಾರೆ. ಒಳ್ಳೆಯ ಬದುಕಿಗೆ 'ಸ್ವಾವಲಂಬನೆಯೇ ಅತ್ಯುತ್ತಮ ಮಾರ್ಗೋಪಾಯ' ಎಂಬುದನ್ನು ಸಾಬೀತುಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮೂರು ಕಾರ್ಮಿಕ ಸಂಘಗಳಿವೆ. ಅವುಗಳು ಯಾವುವೆಂದರೆ ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ಕೆಲಸಗಾರರ ಮಹಾ ಮಂಡಳಿ ಬೆಂಗಳೂರು ಜಿಲ್ಲಾ ಕಾರ್ಪೊರೇಷನ್ ಮತ್ತು ಸ್ಥಳೀಯ ಮಂಡಳಿಗಳ ನೌಕರರ ಒಕ್ಕೂಟ ಹಾಗೂ ರಾಜ್ಯ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳ ಕೆಲಸಗಾರರ ಸಂಘ. ಇವು ನೋಂದಾಯಿತ ಸಂಘಸಂಸ್ಥೆಗಳು. ಇವು ಆಯಾಯ ಪ್ರದೇಶಗಳಲ್ಲಿ ಪ್ರತಿಯೊಂದು ಪೌರಕಾರ್ಮಿಕರ ಕಾಲೋನಿಗಳ ಸುಧಾರಣ ಕಾರ್ಯವನ್ನು ನೋಡಿಕೊಳ್ಳುತ್ತವೆ.

ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ ಪರಿಶಿಷ್ಟ ಜಾತಿ ಕೆಲಸಗಾರರ ಸಹಕಾರ ಸಂಘವು ತನ್ನ ಸದಸ್ಯರುಗಳ ಹಣಕಾಸು ಸ್ಥಿತಿಗಳಲ್ಲಿ ಸುಧಾರಣೆ ತರಲು ಉತ್ತಮ ಸೇವೆ ಸಲ್ಲಿಸುತ್ತಿದೆ. ಸಂಘವು ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಅವುಗಳಲ್ಲಿ ಪೌರಕಾರ್ಮಿಕರ ಮಕ್ಕಳ ಶಿಕ್ಷಣ ನಿಧಿ ಶ್ಲಾಘನೀಯವಾದದ್ದು. ಪೌರಕಾರ್ಮಿಕರ ಮಕ್ಕಳ ನಿವಾಸ ಶಾಲೆಯನ್ನು ಪ್ರಾರಂಭಿಸಲು 2 ಲಕ್ಷ ರೂಪಾಯಿ ಶಿಕ್ಷಣ ನಿಧಿಯನ್ನು ಮೀಸಲಿಡಲಾಗಿದೆ. ಸಂಘವು 'ಕುಟುಂಬ ಪರಿಹಾರ ನಿಧಿ' ಯನ್ನು ಪ್ರಾರಂಭಿಸಿದೆ. ಈ ನಿಧಿಯಿಂದ, ಮೃತ ಪೌರಕಾರ್ಮಿಕರ ಹಾಗೂ ನಿವೃತ್ತ ಪೌರಕಾರ್ಮಿಕರ ಅವಲಂಬಿತರಿಗೆ ತತ್‌ಕ್ಷಣದಲ್ಲಿ ಪರಿಹಾರ ದೊರೆಯುತ್ತದೆ. ಸಂಘವು ತನ್ನ ಸದಸ್ಯರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತದೆ.

ಕಾರ್ಪೊರೇಷನ್, ತಾನೇ ಸ್ವತಃ 'ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ ಪೌರಕಾರ್ಮಿಕರ ಕಲ್ಯಾಣ ನಿಧಿ' ಯೆಂದು ಕರೆಯುವ ಒಂದು ಯೋಜನೆಯನ್ನು ಆಯೋಜಿಸಿದೆ. ಮೃತ ಪೌರಕಾರ್ಮಿಕರಿಗೆ ತತ್‌ಕ್ಷಣದ ಪರಿಹಾರವಾಗಿ 1000 ರೂಪಾಯಿ ಕೊಡಲಾಗುತ್ತದೆ. ಇದೇ ಸೌಲಭ್ಯವನ್ನು ನಿವೃತ್ತರಾಗುವ ಪೌರಕಾರ್ಮಿಕರಿಗೂ ಕೊಡಲಾಗುತ್ತದೆ. ಕಾರ್ಪೊರೇಷನ್‌ನ ಹಾಗೂ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಈ ನಿಧಿಯ ನಿರ್ವಹಣೆ ಮಾಡುತ್ತಾರೆ.

ಕಾರ್ಪೊರೇಷನ್‌ನ ಕೆಲಸಗಾರರು ಸಲ್ಲಿಸುವ ಸೇವೆಗಳಿಗೆ ಗೌರವ ಸಲ್ಲಿಸಲು ಕಾರ್ಪೊರೇಷನ್ ಪ್ರತಿ ವರ್ಷವೂ, ನಗರದ ಸಂಸ್ಥಾಪಕ ಕೆಂಪೇಗೌಡರ ಹೆಸರಿನಲ್ಲಿ 'ಕೆಂಪೇಗೌಡ ದಿನ' ವನ್ನು ಆಚರಿಸಲಾಗುತ್ತದೆ. ಆಟಗಳಲ್ಲಿ ಹಾಗೂ ಪಂದ್ಯಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಾಗೂ ಪಾರಿತೋಷಕಗಳನ್ನು ಪ್ರದಾನ ಮಾಡಲಾಗುತ್ತದೆ.

ಇತ್ತೀಚೆಗೆ ಕಾರ್ಪೊರೇಷನ್ 'ಕರ್ನಾಟಕ ರಾಜ್ಯೋತ್ಸವ ದಿನ' ವನ್ನು ಹಾಗೂ 'ಪ್ರಧಾನ ಮಂತ್ರಿ ಜನ್ಮ ದಿನ' ವನ್ನು ಆಚರಿಸಿತು. ಆ ಸಮಾರಂಭದಲ್ಲಿ ಆಟಗಳಲ್ಲಿ ಹಾಗೂ ಪಂದ್ಯಗಳಲ್ಲಿ ಹಾಗೂ ಕೆಲಸದಲ್ಲಿ, ಹಾಜರಾತಿಯಲ್ಲಿ ಒಳ್ಳೆಯ ಸಾಧನೆ ಮಾಡಿದವರಿಗೆ ಬಹುಮಾನಗಳನ್ನು ಪ್ರದಾನ ಮಾಡಲಾಯಿತು. ರಾಜ್ಯದಲ್ಲಿರುವ ಇತರ ಸ್ಥಳೀಯ ಮಂಡಳಿಗಳು ತಮ್ಮ ಕೆಲಸಗಾರರಲ್ಲಿ ಹುರುಪು, ಹುಮ್ಮಸ್ಸು ಮೂಡಿಸಲು ಹಾಗೂ ಬದ್ಧತೆಯನ್ನು ಬಲಪಡಿಸಲು ಬೆಂಗಳೂರು ಕಾರ್ಪೊರೇಷನ್‌ನ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಸಮಿತಿಯು ಇತರ ಎಲ್ಲ ಸ್ಥಳೀಯ ಸಂಸ್ಥೆಗಳನ್ನು ಕೋರಿಕೊಳ್ಳುತ್ತದೆ.

## ಕರ್ನಾಟಕದ ರಾಜ್ಯದ ಹೊರಗಿನ ರಾಜ್ಯಗಳ ನಗರಗಳಲ್ಲಿರುವ ಹಾಗೂ ಪಟ್ಟಣಗಳಲ್ಲಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳು

ಕರ್ನಾಟಕ ರಾಜ್ಯದ ಹೊರಗಿನ ರಾಜ್ಯಗಳ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿ ನೇಮಕಗೊಂಡಿರುವ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಯಾವುವೇ ವಿಶೇಷ ಸವಲತ್ತುಗಳನ್ನು ಕೊಡಲಾಗಿದೆಯೇ ಎಂಬುದನ್ನು ಕಂಡುಕೊಳ್ಳಲು ಹಾಗೂ ಅವರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳನ್ನು ಕರ್ನಾಟಕದ ಪೌರಕಾರ್ಮಿಕರ ಬದುಕಿನ ಹಾಗೂ ಕಾಯಕದ ಸ್ಥಿತಿಗಳೊಂದಿಗೆ ಹೋಲಿಕೆ ಮಾಡಿ ತಿಳಿದುಕೊಳ್ಳಲು ಬಾಂಬೆ, ದೆಹಲಿ, ಕಲ್ಕತ್ತ ಮತ್ತು ಭುವನೇಶ್ವರ ನಗರಗಳಿಗೆ ಹೋಗಿ ಅಲ್ಲಿನ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳ ಖುದ್ದು ಅಧ್ಯಯನ ಮಾಡಿ ಬರುವಂತೆ ಸರ್ಕಾರವು ಸಮಿತಿಗೆ ಅನುಮತಿ ನೀಡಿತ್ತು. ಅದರಂತೆ, ಸಮಿತಿಯು 1974ರ ಜುಲೈ ತಿಂಗಳಲ್ಲಿ ಬಾಂಬೆಗೆ ಹಾಗೂ 1975ರ ಸೆಪ್ಟೆಂಬರ್ ತಿಂಗಳಲ್ಲಿ ದೆಹಲಿ, ಭುವನೇಶ್ವರ ಹಾಗೂ ಕಲ್ಕತ್ತ ನಗರಗಳಿಗೆ ಭೇಟಿ ಕೊಟ್ಟಿತ್ತು. ಅಲ್ಲಿನ ಪೌರಕಾರ್ಮಿಕರ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳ ಬಗ್ಗೆ ಸಮಿತಿಯ ಅವಲೋಕನಗಳನ್ನು ಈ ಮುಂದೆ ಕೊಡಲಾಗಿದೆ.

### ಬಾಂಬೆ

ಬೃಹತ್ ಬಾಂಬೆ ಮುನಿಸಿಪಲ್ ಕಾರ್ಪೋರೇಷನ್‌ನ ಕ್ಷೇತ್ರ ವ್ಯಾಪ್ತಿ 437 ಚದರ ಕಿಲೋಮೀಟರ್‌ಗಳು. ಅಲ್ಲಿ **ಈ ಕ್ಷೇತ್ರ ವ್ಯಾಪ್ತಿಯು** 15 ವಾರ್ಡ್‌ಗಳಲ್ಲಿ ವಿಂಗಡಣೆಯಾಗಿದೆ. 65 ಲಕ್ಷ ಜನಸಂಖ್ಯೆಯನ್ನುಳ್ಳ ಬಾಂಬೆ ನಗರದಲ್ಲಿ 13,000 ಕಸಗುಡಿಸುವವರು ಹಾಗೂ ಜಾಡಮಾಲಿಗಳು ಇದ್ದಾರೆ. ಅವರನ್ನು 'ಕನ್‌ಸರ್‌ವೆನ್ಸಿ ಸ್ಟಾಫ್' (ನೈರ್ಮಲ್ಯ ರಕ್ಷಕ ಸಿಬ್ಬಂದಿ) ಅಂತ ಕರೆಯುತ್ತಾರೆ.

ಬೃಹತ್ ಬಾಂಬೆ ಮುನಿಸಿಪಲ್ ಕಾರ್ಪೋರೇಷನ್ನಿನ ಕನ್‌ಸರ್‌ವೆನ್ಸಿ ಸ್ಟಾಫ್‌ನ್ನು (ನೈರ್ಮಲ್ಯ ರಕ್ಷಕ ಸಿಬ್ಬಂದಿಯನ್ನು) ಕಸಗುಡಿಸುವವರು, ಮೋಟಾರ್ ಲೋಡರ್‌ಗಳು ಮತ್ತು ಹಲಾಲ್ ಕೋರ್‌ಗಳು ಎಂದು ವರ್ಗೀಕರಿಸಲಾಗಿದೆ.

ಕಸಗುಡಿಸುವವರು, ಕಸಗುಡಿಸಿ, ಕಸ ಕಡ್ಡಿಯನ್ನು ಬಿನ್‌ಗಳು ಹಾಗೂ ಶೆಡ್‌ಗಳು ಮುಂತಾದವುಗಳಲ್ಲಿ ಹಾಕುವ ಕೆಲಸ ಮಾಡುತ್ತಾರೆ.

ಮೋಟಾರ್ ಲೇಡರ್‌ಗಳು ಕಸದ ಬಿನ್‌ಗಳನ್ನು ಎತ್ತಿ ವಾಹನದೊಳಕ್ಕೆ ಹಾಕುವ ಕೆಲಸ ಮಾಡುತ್ತಾರೆ. ತದನಂತರ ವಾರ್ಡ್‌ನಲ್ಲಿ ತುಂಬಿದ್ದ ಕಸಕಡ್ಡಿಯನ್ನು ವಿಲೇ ಜಾಗಗಳಿಗೆ ಸಾಗಿಸಲಾಗುತ್ತದೆ.

ಹಲಾಲ್ ಕೋರ್‌ಗಳು, ಖಾಸಗೀ ಶೌಚಾಲಯಗಳು, ಸೆಸ್ ಪೂಲ್‌ಗಳು ಮುಂತಾದವುಗಳಿಂದ ಕಸಕಡ್ಡಿಯನ್ನು ಸಂಗ್ರಹಿಸುವ ಹಾಗೂ ತೆಗೆಯುವ ಕೆಲಸ ಮಾಡುತ್ತಾರೆ.

ಈ ಮೂರು ವರ್ಗದ ನೈರ್ಮಲ್ಯ ರಕ್ಷಕ ಸಿಬ್ಬಂದಿಯು ಎರಡು ನಿಯತ ಕಾಲಾವಧಿಯಲ್ಲಿ ಎಂದರೆ ಬೆಳಿಗ್ಗೆ 6.30 ರಿಂದ 10.00 ರವರೆಗೆ ಹಾಗೂ ಮಧ್ಯಾಹ್ನ 1.45 ರಿಂದ ಸಂಜೆ 4.45 ರವರೆಗೆ ಪ್ರತಿದಿನವೂ ಕೆಲಸ ಮಾಡುತ್ತಾರೆ. ಮೋಟಾರ್ ಲೋಡರ್‌ಗಳಿಗೆ ಸರದಿ ಪ್ರಕಾರ ವಾರದ ರಜಾ ದಿನಗಳನ್ನು ಕೊಡಲಾಗುತ್ತದೆ. ಕಸಗುಡಿಸುವವರಿಗೆ 2½ ದಿನ ವಾರದ ರಜಾ ದಿನವನ್ನು ಕೊಡಲಾಗುತ್ತದೆ. ಕೆಲಸಗಾರರಿಗೆ ಹಬ್ಬ ಹರಿದಿನಗಳಲ್ಲಿ ಹಾಗೂ ರಾಷ್ಟ್ರೀಯ ರಜಾ ದಿನಗಳಲ್ಲಿ ಅರ್ಧ ದಿನ ರಜೆ ಮಾತ್ರ ಕೊಡಲಾಗುತ್ತದೆ.

**ವೇತನ ಶ್ರೇಣಿಗಳು**

ಬಾಂಬೆ ಮುನಿಸಿಪಲ್ ಕಾರ್ಪೊರೇಷನ್‌ನ ನೈರ್ಮಲ್ಯ ರಕ್ಷಕ ಸಿಬ್ಬಂದಿಗೆ ರೂ. 48–2–66–3–90 ಕಾಲಿಕ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ. ಅವರುಗಳಿಗೆ ತುಟ್ಟಿ ಸಂಬಳವನ್ನು ಹಾಗೂ ತುಟ್ಟಿ ಭತ್ಯೆಯನ್ನು ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಹೆಚ್ಚಳವಾದುದಕ್ಕನುಸಾರವಾಗಿ ಮಂಜೂರು ಮಾಡಲಾಗುತ್ತಿದೆ.

**ವಿಶೇಷ ಭತ್ಯೆಗಳು**

ಮೋಟಾರ್ ಲೋಡರ್‌ಗಳಿಗೆ ಹಾಗೂ ಹಲಾಲ್ ಕೋರ್‌ಗಳಿಗೆ ಪ್ರತಿ ತಿಂಗಳೂ 10 ರೂಪಾಯಿ ಅನ್‌ಕ್ಲೀನ್ ವರ್ಕ್ ಅಲೋಯೆನ್ಸ್ (ಶುಚಿತ್ವ ಕಾರ್ಯಭತ್ಯೆ) ಯನ್ನು ಹಾಗೂ ಪ್ರತಿ ತಿಂಗಳಿಗೆ 8 ರೂಪಾಯಿ ವಾಷಿಂಗ್ ಚಾರ್ಜಸ್ (ಮಾರ್ಜನ ಖರ್ಚುಗಳನ್ನು) ಕೊಡಲಾಗುತ್ತಿದೆ.

**ಮನೆಗಳು**

ನೈರ್ಮಲ್ಯ ರಕ್ಷಕ ಸಿಬ್ಬಂದಿ ಪೈಕಿ 6000 ಸಿಬ್ಬಂದಿಗೆ ನಗರ ನಾನಾ ಭಾಗಗಳಲ್ಲಿರುವ ಜಾಗಗಳಲ್ಲಿ ಉಚಿತ ಮನೆಗಳನ್ನು ಒದಗಿಸಲಾಗಿದೆ. ಯಾರಿಗೆ ಉಚಿತವಾಗಿ ಮನೆಗಳನ್ನು ಒದಗಿಸಿಲ್ಲವೋ ಅವರುಗಳಿಗೆ ಪ್ರತಿ ತಿಂಗಳೂ 10 ರೂಪಾಯಿ ಮನೆ ಬಾಡಿಗೆ ಭತ್ಯೆಯನ್ನು ಸಂದಾಯ ಮಾಡಲಾಗುತ್ತಿದೆ.

**ರಜೆ**

ಬಾಂಬೆ ಮುನಿಸಿಪಲ್ ಕಾರ್ಪೊರೇಷನ್‌ನ ನೈರ್ಮಲ್ಯ ರಕ್ಷಕ ಸಿಬ್ಬಂದಿಯು ಈ ಮುಂದೆ ಹೇಳಿರುವಂತೆ ರಜೆಗೆ ಅರ್ಹರಾಗಿದ್ದಾರೆ:

1. ಗಳಿಕೆ ರಜೆ:
   - i) ಕರ್ತವ್ಯದ ಮೇಲಿದ್ದ ಅವಧಿಗೆ 1/11 ರಂತೆ ಎಂದರೆ 11 ದಿನಗಳಿಗೆ ಒಂದು ದಿನದಂತೆ, ಗರಿಷ್ಠ 120 ದಿನಗಳು
   - ii) 2 ವರ್ಷಗಳ ಬ್ಲಾಕ್ ಅವಧಿಯಲ್ಲಿ ಮೂವತ್ತು ದಿನಗಳ ರಜೆಯ ನಗದೀಕರಣ
2. ಅರ್ಧ ವೇತನ ರಜೆ:
   - i) ಪ್ರತಿ ವರ್ಷ 20 ದಿನಗಳು
   - ii) ಈ ರಜೆಯನ್ನು ಇಡೀ ಸೇವಾವಧಿಯಲ್ಲಿ 240 ದಿನಗಳಷ್ಟಕ್ಕೆ ಮಾತ್ರ ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ ಪರಿವರ್ತಿಸಿಕೊಳ್ಳಬಹುದು
3. ಕ್ಷತಿ ರಜೆ
4. ಹೆರಿಗೆ ರಜೆ: ಹೆರಿಗೆ ಪ್ರಾರಂಭವಾದ ದಿನಾಂಕದಿಂದ 3 ತಿಂಗಳು ಅಥವಾ ಹೆರಿಗೆ ದಿನಾಂಕದಿಂದ 6 ವಾರಗಳು ಇದರಲ್ಲಿ ಯಾವುದು ಮೊದಲೋ ಬರುವುದೋ ಆ ರಜೆ
5. ಕ್ಷಯ ರಜೆ: ಒಂದು ವರ್ಷ, ಒಂದೇ ಸಲ ಕೆಲಸಗಾರರು ಕುಟುಂಬ ಪಿಂಚಣಿ – ಕಂ – ಗ್ರಾಚುಯಿಟಿಗೆ ಅರ್ಹರಾಗಿದ್ದಾರೆ.

**ಸಮವಸ್ತ್ರಗಳು**

ಪುರುಷ ಸಿಬ್ಬಂದಿಗೆ ವರ್ಷಕ್ಕೆ 2 ಅಂಗಿಗಳು, 2 ಪೈಜಾಮಗಳು, ಒಂದು ಜತೆ ಚಪ್ಪಲಿ, ಒಂದು ಕಂಬಳಿ ಅಥವಾ ಕೊಡೆ ಒದಗಿಸಲಾಗುತ್ತದೆ. ಮಹಿಳಾ ಸಿಬ್ಬಂದಿಗೆ ವರ್ಷಕ್ಕೆ 9 ಮೊಳದ 2 ಸೀರೆಗಳು, 2 ಲಂಗ ಮತ್ತು 2 ಜಾಕೆಟ್‌ಗಳನ್ನು ಒದಗಿಸಲಾಗುತ್ತಿದೆ.

**ಕಲ್ಯಾಣ ಚಟುವಟಿಕೆಗಳು**

ಬೃಹತ್ ಬಾಂಬೆ ಕಾರ್ಪೊರೇಷನ್‌ನಲ್ಲಿ ತನ್ನ ಸಿಬ್ಬಂದಿಯ ಹಾಗೂ ಕೆಲಸಗಾರರ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳಲು ಪ್ರತ್ಯೇಕ ಸಂಪೂರ್ಣ ಹೊಣೆಗಾರಿಕೆಯನ್ನುಳ್ಳ ವಿಭಾಗವಿದೆ. ಅದು 44 ಕ್ಷೇಮಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿದೆ. ಕಾರ್ಮಿಕ ಅಧಿಕಾರಿಯು ಅದರ ಮುಖ್ಯಸ್ಥರಾಗಿದ್ದಾರೆ. ಅವರಿಗೆ ಒಳ್ಳೆಯ ತರಬೇತಿ ಹೊಂದಿದ ಸಹಾಯಕರು ನೆರವಾಗುತ್ತಾರೆ.

ಬೃಹತ್ ಬಾಂಬೆ ಮುನಿಸಿಪಲ್ ಕಾರ್ಪೊರೇಷನ್‌ನ ಕಾರ್ಮಿಕ ವಿಭಾಗವು ಕೆಲಸಗಾರರ ಕುಂದು ಕೊರತೆಗಳ ನಿವಾರಣೆಗೆ ಮಾರ್ಗೋಪಾಯ ಕಂಡುಕೊಳ್ಳುವುದಷ್ಟೇ ಅಲ್ಲ. ಕೆಲಸಗಾರರ ಹಾಗೂ ಅವರ ಕುಟುಂಬಗಳ ಪ್ರಯೋಜನಕ್ಕಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ನಡೆಸುತ್ತದೆ.

ಕ್ಷೇಮಾಭಿವೃದ್ಧಿ ಕೇಂದ್ರಗಳಲ್ಲಿ ಜಿಮ್ನೇಸ್ಸಿಯಂ (ವ್ಯಾಯಾಮ) ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೇರಂ, ಟೇಬಲ್ ಟೆನಿಸ್, ವಾಲಿಬಾಲ್, ಪುಟ್‌ಬಾಲ್, ಕ್ರಿಕೆಟ್ ಹಾಗೂ ಕಬ್ಬಡಿ ಮುಂತಾದ ಒಳಾಂಗಣ ಹಾಗೂ ಹೊರಾಂಗಣ ಸೌಲಭ್ಯಗಳನ್ನು ಈ ಕೇಂದ್ರಗಳಲ್ಲಿ ಕಲ್ಪಿಸಲಾಗಿದೆ. ಎಲ್ಲ ಕೇಂದ್ರಗಳಿಗೂ ರೇಡಿಯೋ ಒದಗಿಸಲಾಗಿದೆ.

ಮಹಿಳಾ ಕೆಲಸಗಾರರಿಗೆ ಈ ಕ್ಷೇಮಾಭಿವೃದ್ಧಿ ಕೇಂದ್ರಗಳಲ್ಲಿ ಹೊಲಿಗೆ, ದರ್ಜಿ ಹಾಗೂ ಕರಕುಶಲ ಕೆಲಸ ಕಲಿಯಲು ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಕಾರ್ಮಿಕ ವಿಭಾಗವು ವಿಹಾರ ಹಾಗೂ ವಿನೋದ ಪ್ರವಾಸಗಳನ್ನು ಸಂಘಟಿಸುತ್ತದೆ. ಪ್ರೌಢವಯಸ್ಕರನ್ನು ಭಾರತದಲ್ಲಿರುವ ಐತಿಹಾಸಿಕ ಪ್ರಾಮುಖ್ಯತೆಯ ಸ್ಥಳಗಳಿಗೆ ಕರೆದೊಯ್ಯಲಾಗುತ್ತದೆ. ಈ ಪ್ರವಾಸಗಳ ಕಾರ್ಯಕ್ರಮದ ಖರ್ಚು ವೆಚ್ಚಗಳನ್ನು ಕಾರ್ಮಿಕ ವಿಭಾಗವೇ ಭರಿಸುತ್ತದೆ. ಕೆಲಸಗಾರರನ್ನು ಕುಡಿತದ ಚಟದಿಂದ ಬಿಡಿಸಲು ಹಾಗೂ ಮನರಂಜನೆ ಒದಗಿಸಲು ಕಾರ್ಮಿಕ ವಿಭಾಗವು ಹಲವಾರು ಕೇಂದ್ರಗಳಲ್ಲಿ ಪ್ರತಿದಿನವೂ ಫಿಲಂ ಪ್ರದರ್ಶನ ಏರ್ಪಡಿಸುತ್ತದೆ.

ಕೆಲಸಗಾರರ ಕಾಲೋನಿಗಳಲ್ಲಿ ನರ್ಸರಿ ಶಾಲೆಗಳನ್ನು ಒದಗಿಸುವುದರ ಜೊತೆಗೆ ಕಾರ್ಮಿಕ ವಿಭಾಗವು ಕೆಲಸಗಾರರ ಮಕ್ಕಳಿಗೆ ಸ್ಕಾಲರ್ ಶಿಫ್‌ಗಳನ್ನು ಮಂಜೂರು ಮಾಡುತ್ತಿದೆ. ಈ ಯೋಜನೆ ಪ್ರಕಾರ ಮಾಧ್ಯಮಿಕ ಶಿಕ್ಷಣದಲ್ಲಿ ಶೇ.50ರಷ್ಟು ಅಂಕಗಳನ್ನು ತೆಗೆದ ವಿದ್ಯಾರ್ಥಿಗಳಿಗೆ 120 ರೂಪಾಯಿಯನ್ನು ಹಾಗೂ ಕಾಲೇಜು ಶಿಕ್ಷಣದಲ್ಲಿ 2 ದರ್ಜೆಯಲ್ಲಿ ಪಾಸು ಮಾಡಿದ ವಿದ್ಯಾರ್ಥಿಗಳಿಗೆ 300 ರೂಪಾಯಿ ಕೊಡುಗೆ ಕೊಡಲಾಗುತ್ತದೆ. ಮುನಿಸಿಪಲ್ ನೌಕರ ಸಂಬಳ ಎಷ್ಟೇ ಇರಲಿ, ಆತನ ಮಕ್ಕಳು ಎಷ್ಟೇ ಇರಲಿ, ಅವರಿಗೆಲ್ಲರಿಗೂ ಈ ಸೌಲಭ್ಯ ಸಿಗುತ್ತದೆ.

ಇನ್ನೊಂದು ಯೋಜನೆ ಪ್ರಕಾರ, ರೂ.150 ವರೆಗೆ ಮಾತ್ರ ವೇತನ ಇರುವ ಕೆಲಸಗಾರನ ಒಬ್ಬ ವಿದ್ಯಾರ್ಥಿಗೆ ಮಾತ್ರ ಮಾಧ್ಯಮಿಕ ಶಿಕ್ಷಣಕ್ಕಾಗಿ 60 ರೂಪಾಯಿ ಸ್ಕಾಲರ್‌ಶಿಪ್‌ನ್ನು ಕೊಡಲಾಗುತ್ತಿದೆ. ರೂ. 500 ವರೆಗೆ ಮಾತ್ರ ವೇತನ ಇರುವ ಗ್ರೇಡ್‌ನ ಕೆಲಸಗಾರನ ಒಬ್ಬ ವಿದ್ಯಾರ್ಥಿಗೆ ಮಾತ್ರ, ಕಾಲೇಜು ಶಿಕ್ಷಣಕ್ಕಾಗಿ ಪ್ರತಿ ವರ್ಷ 250 ರೂಪಾಯಿ ಸ್ಕಾಲರ್ ಶಿಪ್ ಕೊಡಲಾಗುತ್ತದೆ.

ನಮ್ಮ ಪೌರಕಾರ್ಮಿಕರ ಹಾಗೂ ಬಾಂಬೆ ಪೌರಕಾರ್ಮಿಕರ ಸೇವಾ ಹಾಗೂ ಕೆಲಸದ ಸ್ಥಿತಿಗಳಲ್ಲಿ ಅಷ್ಟೊಂದು ವ್ಯತ್ಯಾಸವೇನಿಲ್ಲ. ಆದರೆ, ನಮ್ಮ ಪೌರಕಾರ್ಮಿಕರಿಗೆ ಇರುವವುಗಳೊಂದಿಗೆ ಹೋಲಿಸಿ ನೋಡಿದರೆ

ಬಾಂಬೆ ಪೌರಕಾರ್ಮಿಕರ ಹಣಕಾಸಿನ ಮತ್ತು ಸಾಮಾಜಿಕ ಸ್ಥಿತಿಗತಿಗಳು ನಮ್ಮ ಪೌರಕಾರ್ಮಿಕರಿಗಿಂತಲೂ ಎಷ್ಟೋ ಉತ್ತಮವಾಗಿವೆ. ಅದಕ್ಕೆ ಕಾರಣಗಳನ್ನು ಹುಡುಕಿಕೊಂಡು ಎಲ್ಲಿಗೋ ಹೋಗಬೇಕಾಗಿಲ್ಲ. ಅದಮ್ಯ ಕ್ರಿಯಾಶೀಲ ವ್ಯಕ್ತಿತ್ವವನ್ನುಳ್ಳ ಡಾ ಬಿ.ಆರ್.ಅಂಬೇಡ್ಕರ್‌ರವರ ಅವಿರತ ಪ್ರಯತ್ನಗಳಿಂದಾಗಿ ಬಾಂಬೆ ಪೌರಕಾರ್ಮಿಕರ ಸ್ಥಿತಿಗಳಲ್ಲಿ ಅಷ್ಟೊಂದು ಉತ್ತಮ ಸುಧಾರಣೆಗಳಾಗಿವೆ. ಡಾ.ಅಂಬೇಡ್ಕರ್‌ರವರಿಗೆ ನ್ಯೂನತೆ ಎಲ್ಲಿದೆ ಎಂಬುದು ಗೊತ್ತಿತ್ತು. ಪೌರಕಾರ್ಮಿಕರ ಮಕ್ಕಳು ಒಳ್ಳೆಯ ವಿದ್ಯಾವಂತರಾಗದಿದ್ದರೆ ಜೀವನದಲ್ಲಿ ಮುಂದೆ ಬರಲಾರರು ಎಂಬುದು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು. ಅದಕ್ಕೋಸ್ಕರವೇ ಅವರು, ಈ ದಮನಿತ ಸಮುದಾಯದವರ ಪ್ರಯೋಜನಕ್ಕಾಗಿ ಶಾಲೆ, ಕಾಲೇಜುಗಳನ್ನು ತೆರೆಯಲು ತುಂಬಾನೆ ಮಹತ್ವ ಕೊಟ್ಟಿದ್ದರು. ಸಂಕುಚಿತ ಮನೋಭಾವನೆ ಅಷ್ಟೊಂದು ಇಲ್ಲದ ಬಾಂಬೆ ನಗರದಲ್ಲಿ ಕಟ್ಟುನಿಟ್ಟಿನ ಜಾತಿ ಭೇದ ಭಾವಗಳಿಗೆ ಯಾವುದೇ ಆಸ್ಪದ ಇರಲಿಲ್ಲ. ಹಾಗಾಗಿ, ಅಷ್ಟೊಂದು ಸಂಕುಚಿತ ಮನೋಭಾವನೆಗಳೇ ಇಲ್ಲದ ಇಲ್ಲಿನ ವ್ಯಾಪಕ ಸಮಾಜದಲ್ಲಿ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಮಕ್ಕಳಿಗೆ ಒಳ್ಳೆಯ ಸಾಮಾಜಿಕ ಸಮ್ಮಿಳಿತದ ಅವಕಾಶಗಳು ಧಾರಾಳವಾಗಿ ದೊರೆತವು.

**ದೆಹಲಿ**

ಭಾರತ ಗಣರಾಜ್ಯದ ರಾಜಧಾನಿ. ರಾಜಧಾನಿಯನ್ನು ಮೂರು ವಲಯಗಳಲ್ಲಿ ವಿಂಗಡಿಸಲಾಗಿದೆ. ಹಳೆ ದೆಹಲಿ, ಹೊಸ ದೆಹಲಿ ಹಾಗೂ ದಂಡು ಪ್ರದೇಶ.

ಸರಿಯಾಗಿ ಯೋಜಿಸದ ಹಾಗೂ ಜನ ನಿಬಿಡ ಪ್ರದೇಶವಾದ ಹಳೆ ದೆಹಲಿಯು ದೆಹಲಿ ಮುನಿಸಿಪಲ್ ಕಾರ್ಪೊರೇಷನ್ ಕ್ಷೇತ್ರಾಧಿಕಾರ ವ್ಯಾಪ್ತಿಗೆ ಸೇರಿದೆ. ಇಲ್ಲಿ ಚುನಾಯಿತ ಪೌರ ಮಂಡಳಿಯಿದೆ. ಅತ್ಯುತ್ತಮ ರೀತಿಯಲ್ಲಿ ಯೋಜಿಸಿದ, ಅತ್ಯುತ್ತಮವಾಗಿ ವಿನ್ಯಾಸಗೊಳಿಸಿದ ಹೊಸ ದೆಹಲಿಯು ಹೊಸ ದೆಹಲಿ ಮುನಿಸಿಪಲ್ ಕೌನ್ಸಿಲ್ ಆಡಳಿತ ವ್ಯಾಪ್ತಿಗೆ ಸೇರಿವೆ. ಇದು ನಾಮ ನಿರ್ದೇಶಿತ ಮಂಡಳಿ. ದಂಡು ಪ್ರದೇಶದ ನೈರ್ಮಲ್ಯ ನಿರ್ವಹಣೆ ಕೆಲಸವನ್ನು 'ದಂಡು ಪ್ರದೇಶ ಮಂಡಳಿ' ಯೆಂದು ಕರೆಯುವ ಇನ್ನೊಂದು ಪ್ರತ್ಯೇಕ ಮಂಡಳಿಯು ನೋಡಿಕೊಳ್ಳುತ್ತದೆ.

ದೆಹಲಿಯ ಅನೇಕ ಭಾಗಗಳಲ್ಲಿ ಮುನಿಸಿಪಲ್ ಕೆಲಸಗಾರರು ತಲೆ ಮೇಲೆ ಮಲ ಹೊತ್ತು ಸಾಗಿಸುವ ಅಸಹನೀಯ ಪದ್ಧತಿ ಇನ್ನು ಚಾಲ್ತಿಯಲ್ಲಿದೆಯೆಂಬುದನ್ನು ತಿಳಿದು ಸಮಿತಿಗೆ ದಿಗ್ಭ್ರಮೆಯಾಯಿತು. ಭಾರತ ರಾಜಧಾನಿಯಲ್ಲಿ ಈ ಪದ್ಧತಿ ಮುಂದುವರಿದಿರುವುದಕ್ಕೆ ಅಧಿಕಾರಿಗಳು ಅನೇಕ ಕಾರಣಗಳನ್ನು ಮುಂದಿಟ್ಟರು.

ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನ ಕ್ಷೇತ್ರ ವ್ಯಾಪ್ತಿಯನ್ನು 100 ವಾರ್ಡ್‌ಗಳನ್ನುಳ್ಳ 8 ವಲಯಗಳಲ್ಲಿ ವಿಂಗಡಿಸಲಾಗಿದೆ. ಕಾರ್ಪೊರೇಷನ್ 14000 ಕಸಗುಡಿಸುವವರನ್ನು ಹಾಗೂ ಜಾಡಮಾಲಿಗಳನ್ನು ನೇಮಕ ಮಾಡಿ ಕೊಂಡಿದೆ. ಅವರನ್ನು ಸಫಾಯಿ ಮಜ್ದೂರರೆಂದು ಕರೆಯಲಾಗುತ್ತಿದೆ. ಇವರುಗಳ ವೇತನ ಶ್ರೇಣಿ ಹಾಗೂ ಭತ್ಯೆಗಳು ಸರ್ಕಾರದ IV ನೇ ದರ್ಜೆಯ ನೌಕರರಿಗೆ ಸಮಾನವಾಗಿವೆ. ಇವರುಗಳ ಸಂಬಳ ಎಲ್ಲ ಸೇರಿ ಪ್ರತಿ ತಿಂಗಳಿಗೆ ಒಟ್ಟು 315 ರೂಪಾಯಿ. ಕಾರ್ಪೊರೇಷನ್ ಪ್ರತಿ ದಿನಕ್ಕೆ 5 ರೂಪಾಯಿ 25 ಪೈಸೆ ದಿನಗೂಲಿ ಮೇಲೆ ತಾತ್ಕಾಲಿಕ ನೌಕರರನ್ನು ಸಹ ನೇಮಕ ಮಾಡಿಕೊಂಡಿದೆ.

ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನ ಸಫಾಯಿ ಮಜ್ದೂರರಿಗೆ ಉಚಿತ ವೈದ್ಯಕೀಯ ನೆರವು ಒದಗಿಸಲಾಗುತ್ತಿದೆ. ಅವಶ್ಯಕತೆ ಉಂಟಾದಾಗಲೆಲ್ಲ ವೈದ್ಯಕೀಯ ವೆಚ್ಚದ ಮರುಪಾವತಿಗೆ ಸಹ ಅವರುಗಳು ಅರ್ಹರಾಗಿದ್ದಾರೆ.

ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಸಂಪೂರ್ಣ ಹೊಣೆಗಾರಿಕೆಯನ್ನುಳ್ಳ ಕಾರ್ಮಿಕ ಕಲ್ಯಾಣ ವಿಭಾಗವಿದೆ. ಅದು ಕಲ್ಯಾಣ ಕಾರ್ಯಕ್ರಮಗಳನ್ನು ನೋಡಿಕೊಳ್ಳುವುದರ ಜೊತೆಗೆ ಕೆಲಸಗಾರರ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕಾಯ್ದೆಯು ಜಾರಿಯಾಗುವ ಕಾರ್ಯವನ್ನು ನೋಡಿಕೊಳ್ಳುತ್ತದೆ. ಕೆಲಸಗಾರರ ಕಾಲೋನಿಗಳಲ್ಲಿರುವ ಕ್ಷೇಮಾಭಿವೃದ್ಧಿ ಸಂಘಗಳಲ್ಲಿ ಹಾಗೂ ಸಮುದಾಯ ಭವನಗಳಲ್ಲಿ ಕೆಲಸಗಾರರ ಮತ್ತು ಅವರ ಕುಟುಂಬಗಳ ಪ್ರಯೋಜನಕ್ಕಾಗಿ ಮನರಂಜನೆ ಹಾಗೂ ಶೈಕ್ಷಣಿಕ ಸೌಲಭ್ಯಗಳಿವೆ. ಕಾರ್ಮಿಕ ಕಲ್ಯಾಣ

ವಿಭಾಗವು ಕೆಲಸಗಾರರ ಪ್ರಯೋಜನಕ್ಕಾಗಿ ಗ್ರಾಹಕ ಸಹಕಾರ ಸಂಘಗಳ ಹಾಗೂ ಸಹಕಾರ ಬ್ಯಾಂಕ್‌ಗಳ ಏರ್ಪಾಟಿಗೆ ಉತ್ತೇಜನ ನೀಡಿದೆ.

ಸಫಾಯಿ ಮಜ್ದೂರರು ಬಾಲ್ಮೀಕಿ ಸಮುದಾಯದವರು. ಉತ್ತರ ಭಾರತದಲ್ಲಿ ಇವರುಗಳನ್ನು ಹರಿಜನರೆಂದು ಪರಿಗಣಿಸಿದ್ದಾರೆ. ಇವರುಗಳು ಪರಿಶಿಷ್ಟ ಜಾತಿಯ ಜನರು.

'ಹೊಸ ದೆಹಲಿ ಮುನಿಸಿಪಲ್ ಕಮಿಟಿ' ಎಂದೇ ಕರೆಯುತ್ತಿರುವ ಹೊಸ ದೆಹಲಿ ಮುನಿಸಿಪಲ್ ಕಾರ್ಪೊರೇಷನ್ 2700 ಕೆಲಸಗಾರರನ್ನು ನೇಮಕ ಮಾಡಿಕೊಂಡಿದೆ. ಇವರುಗಳನ್ನು 'ಸಫಾಯಿ ಕರ್ಮಚಾರಿ' ಗಳೆಂದು ಕರೆಯಲಾಗುತ್ತಿದೆ. ಈ ಕೆಲಸಗಾರರ ವೇತನ ಶ್ರೇಣೀಗಳನ್ನು ಈ ಮುಂದೆ ವಿವರಿಸಿದೆ.

ಕಸಗುಡಿಸುವವರ, ಲಾರಿ ಕೆಲಸಗಾರರ ಹಾಗೂ ಮಲೇರಿಯಾ ನಿವಾರಣೆ ಗ್ಯಾಂಗ್‌ಮೆನ್‌ನ ವೇತನ ಶ್ರೇಣಿ ರೂ. 196–3–22–ಇಬಿ–232. ಮೋರಿ, ಗಟಾರ ಸ್ವಚ್ಛತೆ ಕೆಲಸಗಾರನ ವೇತನ ಶ್ರೇಣಿ 200–250. ಮೂಲ ವೇತನದ ಜೊತೆಗೆ ಇವರುಗಳು ಅವರುಗಳ ಒಟ್ಟು ಸಂಬಳದ ಶೇ.936 ರಷ್ಟು ತುಟ್ಟಿ ಭತ್ಯೆಗೆ, ಶೇ.6½ ಯಷ್ಟು ನಗರ ಪರಿಹಾರ ಭತ್ಯೆಗೆ ಹಾಗೂ ಶೇ 15 ರಷ್ಟು ಮನೆ ಬಾಡಿಗೆ ಭತ್ಯೆಗೆ ಅರ್ಹರಾಗಿದ್ದಾರೆ.

ಕಸಗುಡಿಸುವವರಿಗೆ ಪ್ರತಿ ತಿಂಗಳಿಗೆ 5 ರೂಪಾಯಿ ಡರ್ಟ್ ಅಲೊಯನ್ಸ್ ಕೊಡಲಾಗುತ್ತಿದೆ. ಮೋರಿ ಗಟಾರ ಸ್ವಚ್ಛತೆ ಕೆಲಸಗಾರರಿಗೆ ಹಾಗೂ ಲಾರಿ ಕೆಲಸಗಾರರಿಗೆ ಈ ಡರ್ಟ್ ಅಲೊಯೆನ್ಸ್ 5 ರೂಪಾಯಿ ಜೊತೆಗೆ ಸೋಪ್ ಹಾಗೂ ಆಯಿಲ್ ಬದಲಿಗೆ ತಿಂಗಳಿಗೆ 10 ರೂಪಾಯಿ ಹೆಚ್ಚುವರಿ ಭತ್ಯೆ ಕೊಡಲಾಗುತ್ತಿದೆ. ಎಲ್ಲ ವರ್ಗದ ಕೆಲಸಗಾರರಿಗೆ ಪ್ರತಿತಿಂಗಳಿಗೆ 10 ರೂಪಾಯಿ ವಾಷಿಂಗ್ ಆಲೊಯೆನ್ಸ್ ಕೊಡಲಾಗುತ್ತಿದೆ.

ಕನಿಷ್ಠ ಮಜೂರಿ ಕಾಯ್ದೆ ಪ್ರಕಾರ, ಕೆಲಸಗಾರರು ಓವರ್ ಟೈಂ ಭತ್ಯೆಗೆ ಅರ್ಹರಾಗಿದ್ದಾರೆ.

ರಜೆ ಸೌಲಭ್ಯಗಳ ಜೊತೆಗೆ ಕೆಲಸಗಾರರು ಭಾರತದಲ್ಲಿ ಎಲ್ಲಿಗಾದರೂ ಪ್ರಯಾಣ ಮಾಡುವುದಕ್ಕಾಗಿ ನಾಲ್ಕು ವರ್ಷಗಳಿಗೆ ಒಂದು ಸಲ ಮಾತ್ರ ರಜೆ ಪ್ರಯಾಣ ರಿಯಾಯಿತಿಗೆ ಅರ್ಹರಾಗಿದ್ದಾರೆ.

ಹೊಸ ದೆಹಲಿ ಮುನಿಸಿಪಲ್ ಸಮಿತಿಯ ಸಫಾಯಿ ಕರ್ಮಚಾರಿಗಳು ಹಬ್ಬದ ಮುಂಗಡ, ಭವಿಷ್ಯ ನಿಧಿ ಮುಂಗಡ, ಮನೆ ನಿರ್ಮಾಣ ಮುಂಗಡ, ವಾಹನ ಖರೀದಿ ಮುಂಗಡ ಮುಂತಾದ ಮುಂಗಡಗಳ ಮಂಜೂರಾತಿಗೆ ಸಹ ಅರ್ಹರಾಗಿದ್ದಾರೆ.

ಹೊಸ ದೆಹಲಿ ಮುನಿಸಿಪಲ್ ಸಮಿತಿಯು ತನ್ನ ಕೆಲಸಗಾರರಿಗೆ ಅನೇಕ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪ್ರಮುಖವಾದವುಗಳನ್ನು ಈ ಮುಂದೆ ಕೊಡಲಾಗಿದೆ:

1. ನೌಕರರು ಸೇವೆಯಿಂದ ವಾಸ್ತವಿಕವಾಗಿ ನಿವೃತ್ತರಾಗುವುದಕ್ಕೆ ಮುಂಚೆಯೇ ದೈಹಿಕ ಅಶಕ್ತತೆ ಕಾರಣದಿಂದಾಗಿ ನಿವೃತ್ತರಾದರೆ ಅವರಿಗೆ ಅಥವಾ ಸೇವೆಯಲ್ಲಿರುವಾಗಲೇ ಮೃತರಾಗುವ ನೌಕರರ ಅವಲಂಬಿತರಿಗೆ ಅವರ 12 ತಿಂಗಳ ಒಟ್ಟು ಸಂಬಳಕ್ಕೆ ಮೀರದ ಎಕ್ಸ್–ಗ್ರೇಷಿಯಾ ನೆರವು ನೀಡುವುದಕ್ಕಾಗಿ ಕಂಪಾಷನೇಟ್ ಫಂಡ್ ಯೋಜನೆಯನ್ನು ಜಾರಿಗೆ ತಂದಿದೆ. ಅಲ್ಲದೆ ಮೃತ ನೌಕರನ ಅಂತ್ಯ ಕ್ರಿಯೆಗಾಗಿ ಅಥವಾ ನೌಕರನು ದೀರ್ಘಕಾಲೀನ ಅನಾರೋಗ್ಯದಿಂದಾಗಿ ಸಂಬಳ ಹಾಗೂ ಭತ್ಯೆ ರಹಿತ ರಜೆ ಮೇಲಿದ್ದರೆ 250 ರೂಪಾಯಿ ಅಡ್–ಹಾಕ್ ಗ್ರ್ಯಾಂಟ್ ಕೊಡಲಾಗುತ್ತದೆ.
2. ನೌಕರರ ಮಕ್ಕಳ ತಾಂತ್ರಿಕ ವಿದ್ಯಾಭ್ಯಾಸಕ್ಕಾಗಿ ಎಂದರೆ ಡಿಗ್ರಿ ಕೋರ್ಸ್‌ಗಳಿಗೆ ಪ್ರತಿ ತಿಂಗಳಿಗೆ 60 ರೂಪಾಯಿ, ಡಿಪ್ಲೊಮಾ ಕೋರ್ಸ್‌ಗಳಿಗೆ ತಿಂಗಳಿಗೆ 40 ರೂಪಾಯಿ ಸ್ಕಾಲರ್ ಶಿಪ್ ಕೊಡಲಾಗುತ್ತಿದೆ.

3. ಹೊಸ ದೆಹಲಿ ಮುನಿಸಿಪಲ್ ಸಮಿತಿಯ ನೌಕರರಿಗೆ ಭವಿಷ್ಯ ನಿಧಿ ಹಾಗೂ ಗ್ರಾಚುಯಿಟಿ ಸೌಲಭ್ಯ ಕೊಡಲಾಗುತ್ತಿದೆ. ಅಡ್–ಹಾಕ್ ಆಧಾರದ ಮೇಲೆ ಪಿಂಚಣಿ ಯೋಜನೆಯನ್ನು ಸಹ ಆರಂಭಿಸಲಾಗಿದೆ.

ಸಮಿತಿಗೆ, ಭಾರತದ ಉಪ ರಾಷ್ಟ್ರಪತಿಯವರಾದ ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿಯವರನ್ನು ಸಮಕ್ಷಮ ಭೇಟಿಯಾಗುವ ಹಾಗೂ ನಮ್ಮ ಸಮಾಜದ ನತದೃಷ್ಟ ಜನರ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವಲ್ಲಿ ಶ್ರೀಯುತರ ಅತ್ಯಮೂಲ್ಯ ಅಭಿಪ್ರಾಯ ಹಾಗೂ ಸಲಹೆಗಳನ್ನು ಪಡೆಯುವ ಸುಯೋಗ ಪ್ರಾಪ್ತವಾಗಿತ್ತು. ಕರ್ನಾಟಕದಲ್ಲಿನ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕು ಹಾಗೂ ಕಾಯಕದ ಸ್ಥಿತಿಗತಿಗಳ ಸುಧಾರಣೆಗೆ ಸಮಿತಿಯ ಶಿಫಾರಸುಗಳ ಬಗ್ಗೆ ಸನ್ಮಾನ್ಯ ಉಪ–ರಾಷ್ಟ್ರಪತಿಯವರು ತೀವ್ರ ಆಸಕ್ತಿ ತೋರಿದರು. ಸಮಿತಿಯು ಶಿಫಾರಸುಗಳನ್ನು ಅಕ್ಷರಶಃ ಹಾಗೂ ವಸ್ತುತಃ ಕಾರ್ಯರೂಪಕ್ಕೆ ತರಲು ಅಗತ್ಯವಾದ ಅನುಸರಣಾ ಕ್ರಮಗಳನ್ನು ಕೈಗೊಳ್ಳಲು ಸೂಚನೆ ಇತ್ತರು. ಅಸ್ಪೃಶ್ಯತೆಯ ನಿರ್ಮೂಲನೆಗೆ ಶ್ರದ್ಧೆಯಿಂದ ಹಾಗೂ ಬದ್ಧತೆಯಿಂದ ಕೆಲಸ ಮಾಡಲು ಸಮಿತಿಗೆ ಸಲಹೆ ಇತ್ತರು. ಜಾತಿ ಮತದ ಎಲ್ಲ ತಾರತಮ್ಯಗಳು ತೊಲಗಿ ಹೋಗದಿದ್ದರೆ ರಾಷ್ಟ್ರವು ಯಾವುದೇ ಮೂರ್ತ ಪ್ರಗತಿ ಸಾಧಿಸಲಾಗದೆಂದು ಶ್ರೀಯುತರು ಅಭಿಪ್ರಾಯಪಟ್ಟರು. ಸಮಿತಿಯ ಕೆಲಸವನ್ನು ಸಹ ಶ್ರೀಯುತರು ಶ್ಲಾಘಿಸಿದರು.

ಭಾರತ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರೊಂದಿಗೆ ಸಂದರ್ಶನದ ಸೌಭಾಗ್ಯವೂ ಸಮಿತಿಗೆ ಪ್ರಾಪ್ತವಾಯಿತು. ದೇಶದಲ್ಲಿರುವ ಎಲ್ಲ ಕಸಗುಡಿಸುವವರ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವುದು ಇಂದಿನ ತುರ್ತು ಅಗತ್ಯವೆಂದು ಸನ್ಮಾನ್ಯ ಪ್ರಧಾನ ಮಂತ್ರಿಯವರು ಹೇಳಿದರು ಹಾಗೂ ಈ ಕಡೆಗಣಿತ ಸಮುದಾಯದ ಜೀವನ ಮಟ್ಟದಲ್ಲಿ ಸುಧಾರಣೆ ತರುವಲ್ಲಿ ಕರ್ನಾಟಕ ಸರ್ಕಾರವು ತೆಗೆದುಕೊಂಡಿರುವ ಎಲ್ಲ ಆವಶ್ಯಕ ಕ್ರಮಗಳಿಗೆ ಪ್ರಧಾನ ಮಂತ್ರಿಯವರು ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಈಗಾಗಲೇ ತಲೆ ಮೇಲೆ ಮಲ ಹೊತ್ತು ಸಾಗಿಸುವ ಕೆಲಸವನ್ನು ನಿಷೇಧಿಸಿರುವುದರಿಂದ ಈ ಅನಿಷ್ಠ ಪದ್ಧತಿಯನ್ನು ದೇಶದ ಎಲ್ಲ ಕಡೆಗಳಲ್ಲಿ ನಿಷೇಧಿಸಬೇಕೆಂದು ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಸನ್ಮಾನ್ಯ ಪ್ರಧಾನಮಂತ್ರಿಯವರಿಗೆ ಮನವಿ ಮಾಡಿಕೊಂಡರು. ಮಾನ್ಯ ಪ್ರಧಾನಿಯವರು ಈ ಬಗ್ಗೆ ಮಾತನಾಡುತ್ತಾ ಇದಕ್ಕಾಗಿ ಬದಲಿ ವಿಧಾನಗಳನ್ನು ರೂಪಿಸಬೇಕಾಗುತ್ತದೆಂದು ಹಾಗೂ ಅಂಥ ನೌಕರರಿಗೆ ಸೂಕ್ತ ನೌಕರಿ ಅವಕಾಶ ಕಲ್ಪಿಸಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗುತ್ತದೆಂದು ಅಭಿಪ್ರಾಯ ಪಟ್ಟರು. ಸಮಿತಿಯ ಕೆಲಸದಲ್ಲಿ ಎಲ್ಲವೂ ಒಳ್ಳೆಯದಾಗಲಿ ಎಂದು ಸನ್ಮಾನ್ಯ ಪ್ರಧಾನಿಯವರು ಹಾರೈಸಿದರು.

ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಒಕ್ಕೂಟದ ಆಹಾರ ಮತ್ತು ಕೃಷಿ ಮಂತ್ರಿಯವರಾದ ಶ್ರೀ ಜಗಜೀವನ ರಾಂರನ್ನು ಭೇಟಿ ಮಾಡಿ ಶ್ರೀಯುತರ ಸಲಹೆ ಸೂಚನೆಗಳನ್ನು ಪಡೆಯ ಬಯಸಿತು. ಹಣಕಾಸಿನ ಹಾಗೂ ಸಾಮಾಜಿಕ ಪುನರ್ ವ್ಯವಸ್ಥೆ ಕಲ್ಪಿಸಿ ಈ ಕೆಲಸಗಾರರಿಗೆ ಸೂಕ್ತ ನ್ಯಾಯ ದೊರಕಿಸಿಕೊಡಲು ಸಮಿತಿಯು ಎಲ್ಲ ಪ್ರಯತ್ನಗಳನ್ನು ಮಾಡಬೇಕೆಂದು ಮಂತ್ರಿಯವರು ಸಲಹೆ ಇತ್ತರು. ಈ ಜನರಿಗೆ ಸಮರ್ಪಕ ವಿದ್ಯಾಭ್ಯಾಸ ಹಾಗೂ ಹಣಕಾಸಿನ ಸ್ಥಿರತೆ ಕಲ್ಪಿಸದಿದ್ದರೆ ಅವರುಗಳ ಜೀವನ ಮಟ್ಟದಲ್ಲಿ ಸುಧಾರಣೆಯಾಗಲಾರದೆಂದು ಅಭಿಪ್ರಾಯ ಪಟ್ಟರು. ಈ ಎರಡು ಅಂಶಗಳ ಮೇಲೆ ಸಮಿತಿಯು ತನ್ನ ಗಮನವನ್ನು ಕೇಂದ್ರೀಕರಿಸಬೇಕೆಂದು ಸಹ ಸಲಹೆ ಇತ್ತರು.

ಒಕ್ಕೂಟದ ರೈಲ್ವೆ ಉಪ–ಮಂತ್ರಿ ಸರ್ದಾರ್ ಶ್ರೀ ಬೂಟಾಸಿಂಗ್‌ರವರು ಒಂದಲ್ಲ ಒಂದು ರೀತಿಯಲ್ಲಿ ನೆರವಾಗುತ್ತಿರುವುದಕ್ಕಾಗಿ ಅವರಿಗೆ ಸಮಿತಿಯು ತುಂಬು ಮನಸ್ಸಿನಿಂದ ಕೃತಜ್ಞತೆ ಸಲ್ಲಿಸಿತು. ಶ್ರೀಯುತರು ಹಲವಾರು ವರ್ಷಗಳ ಕಾಲ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಕುರಿತ ಸಂಸದೀಯ ಸಮಿತಿಯ ಅಧ್ಯಕ್ಷರಾಗಿದ್ದರು. ನೈರ್ಮಲ್ಯ ಕೆಲಸಗಾರರ ಎಲ್ಲ ಸಮಸ್ಯೆಗಳೂ ಚೆನ್ನಾಗಿ ತಿಳಿದುಕೊಂಡವರಾಗಿದ್ದರು. ರಾಷ್ಟ್ರದಲ್ಲಿನ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳಲ್ಲಿ ಹೇಗೆ ಸುಧಾರಣೆ ತರಬಹುದೆಂಬುದನ್ನು ಶ್ರೀಯುತರು ತಮಗಿದ್ದ ಅಪಾರ ಅನುಭವದ ಆಧಾರದ ಮೇಲೆ ತುಂಬಾನೆ ಅತ್ಯಮೂಲ್ಯವಾದ ಸಲಹೆಗಳನ್ನು ನೀಡಿದರು.

**ಕಲ್ಕತ್ತ**

ಎಲ್ಲ ಕಡೆಗಳಲ್ಲೂ ಇದ್ದಂತೆ, ಕಲ್ಕತ್ತದಲ್ಲೂ ಕೂಡ, ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸವನ್ನು ಹರಿಜನರೇ ಮಾಡುತ್ತಿದ್ದಾರೆ. ಕೆಲವೇ ಕೆಲವು ಬಂಗಾಳಿ ಹರಿಜನರು ಈ ವೃತ್ತಿಯಲ್ಲಿದ್ದಾರೆ. ಕಲ್ಕತ್ತ ಕಾರ್ಪೊರೇಷನ್ ನೇಮಕ ಮಾಡಿಕೊಂಡಿರುವ ಬಹಳಷ್ಟು ಕಸಗುಡಿಸುವವರು ಹಾಗೂ ಜಾಡಮಾಲಿಗಳು ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯದವರು.

ಕಲ್ಕತ್ತ ಕಾರ್ಪೊರೇಷನ್, ಭಾರತದಲ್ಲೇ ಅತ್ಯಂತ ಹಳೆಯ ಪೌರ ಮಂಡಳಿ. ಈ ಮಂಡಳಿಯು 19,000 ನೈರ್ಮಲ್ಯ ಕೆಲಸಗಾರರನ್ನು ನೇಮಕ ಮಾಡಿಕೊಂಡಿದೆ. ನೈರ್ಮಲ್ಯ ಕೆಲಸಗಾರನ ತಿಂಗಳ ಒಟ್ಟು ಸಂಬಳ 250 ರೂಪಾಯಿ ಮಾತ್ರ. ಈ ಕೆಲಸಗಾರರಲ್ಲಿ ಸುಮಾರು ಶೇ.50 ರಷ್ಟು ಜನರಿಗೆ ಬಾಡಿಗೆರಹಿತ ಮನೆಗಳನ್ನು ಒದಗಿಸಲಾಗಿದೆ. ಪ್ರತಿದಿನವೂ ಈ ಕೆಲಸಗಾರರು 6 ಗಂಟೆಗಳು ಮಾತ್ರ ಕೆಲಸ ಮಾಡುತ್ತಾರೆ.

ಕಲ್ಕತ್ತ ಕಾರ್ಪೊರೇಷನ್‌ನ ನೈರ್ಮಲ್ಯ ಕೆಲಸಗಾರರ ಸೇವಾ ಸ್ಥಿತಿಗತಿಗಳಲ್ಲಿ ಹಾಗೂ ಸೌಲಭ್ಯಗಳಲ್ಲಿ ಕೆಲವೊಂದು ವಿಶೇಷ ಗುಣಲಕ್ಷಣಗಳಿವೆ. ಉದಾಹರಣೆಗೆ ಹೇಳುವುದಾದರೆ ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸ ಮಾಡುವ ಒಬ್ಬ ಕೆಲಸಗಾರ ವರ್ಷದಲ್ಲಿ ಒಂದೇ ಒಂದು ದಿನ ಕೆಲಸ ಮಾಡಿದರೂ ಅವನು ಖಾಯಂ ನೌಕರರಿಗೆ ಕೊಡುವ ಎಲ್ಲ ರಜೆ ಸೌಲಭ್ಯಕ್ಕೂ ಅರ್ಹನಾಗುತ್ತಾನೆ. ಕೆಲಸಗಾರರು ರಾಜಕೀಯ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ತೊಡಗಬಹುದಾಗಿದೆ.

ಕಾರ್ಪೊರೇಷನ್‌ನ ಒಬ್ಬರು ಕನ್‌ಸರ್‌ವೆನ್ಸಿ ಡೆಪ್ಯೂಟಿ ಡೈರಕ್ಟರ್‌ರವರು ಕರಾರು ಆಧಾರದ ಮೇಲೆ ಕಾರ್ಮಿಕ ಮುಂದಾಳಾಗಿದ್ದಾರೆ. ಕಾರ್ಪೊರೇಷನ್‌ನ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಈ ರೀತಿ ಹೊಸ ಮಾರ್ಗಗಳನ್ನು ಕಂಡುಕೊಳ್ಳಲಾಗಿದೆ. ಉಸಿರುಗಟ್ಟುವ ಆಳುಗುಂಡಿಗಳಲ್ಲಿನ ಹೊಲಸನ್ನು ತೆಗೆದು ಸ್ವಚ್ಛ ಮಾಡಲು ಮೆಕಾನಿಕಲ್ ಗ್ಯಾಡ್ಜೆಟ್ ಬಳಸಬೇಕಾಗಿರುವುದನ್ನು ಬಿಟ್ಟರೆ ಕಲ್ಕತ್ತ ಕಾರ್ಪೊರೇಷನ್ ಯಾವುದೇ ಆಧುನಿಕ ಸಲಕರಣೆಗಳನ್ನು ಕೊಟ್ಟಿಲ್ಲ.

**ಭುವನೇಶ್ವರ**

ಭುವನೇಶ್ವರದ ಒರಿಸ್ಸಾ ರಾಜ್ಯದ ರಾಜಧಾನಿ. ಹೊಸ ನಗರ ಭುವನೇಶ್ವರ ನೋಟಿಫೈಡ್ ಏರಿಯಾ ಕೌನ್ಸಿಲ್‌ನಗರದ ಪೌರ ವಿಷಯಗಳನ್ನು ನೋಡಿಕೊಳ್ಳುತ್ತದೆ. 370 ಕಸಗುಡಿಸುವವರನ್ನು ಹಾಗೂ ಜಾಡಮಾಲಿಗಳನ್ನು ನೇಮಕ ಮಾಡಿಕೊಂಡಿದೆ. ಈ ಕೆಲಸಗಾರರು ಮೆಹ್ತರ್ ಜಾತಿಯವರು. ಭುವನೇಶ್ವರದ ಪಕ್ಕದ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಕಸಗುಡಿಸುವವರ ಹಾಗೂ ಜಾಡಮಾಲಿಗಳ ವೇತನ ಶ್ರೇಣಿ ರೂ.200–2–3–250. ಇವರುಗಳ ಮೂಲ ವೇತನದ ಹೊರತು ಬೇರಾವ ಭತ್ಯೆಗಳನ್ನು ಕೊಡುತ್ತಿಲ್ಲ. ರಜಾ ದಿನಗಳಲ್ಲಿ ಹಾಗೂ ಇತರ ಪ್ರಮುಖ ಸಂದರ್ಭಗಳಲ್ಲಿ ಕೆಲಸ ಮಾಡಿದವರಿಗೆ ಓವರ್ ಟೈಂ ಮಜೂರಿಯನ್ನು ಕೊಡುತ್ತಾರೆ.

ಈ ಹಿಂದೆ, ಒರಿಸ್ಸಾ ರಾಜ್ಯದ ರಾಜಧಾನಿಯಾಗಿದ್ದ ಕಟಕ್ ನಗರಕ್ಕೂ ಭೇಟಿ ನೀಡುವ ಅವಕಾಶವನ್ನು ಸಮಿತಿಯು ಬಳಸಿಕೊಂಡಿತು. ಮೇಲುವರ್ಗದ ಇತರರೇ ಶ್ರೇಷ್ಠರೆಂದು ಭಾವಿಸಿ, ಅವರುಗಳ ಬಳಿಯೇ ಸಹಾಯವನ್ನು ಯಾಚಿಸುತ್ತ, ಅವರುಗಳ ಮೇಲೆಯೇ ಅವಲಂಬಿತರಾಗುವುದರ ಬದಲು ತನ್ನ ಸ್ವಂತ ಪ್ರಯತ್ನಗಳಿಂದಲೇ ಮನುಷ್ಯ ಏನೇನು ಸಾಧಿಸಬಲ್ಲ ಎಂಬುದನ್ನು ಸಮಿತಿಯು ಸ್ವತಃ ಮನವರಿಕೆ ಮಾಡಿಕೊಂಡಿತು. ಕಟಕ್ ನಲ್ಲಿ ಸಮಿತಿಯು ಕೆಲಸಗಾರರ ಎರಡು ಕಾಲೋನಿಗಳಿಗೆ ಭೇಟಿ ನೀಡಿತು. ಒಂದು ಮುನಿಸಿಪಾಲಿಟಿಯೇ ನಿರ್ಮಿಸಿನಿರ್ವಹಿಸುತ್ತಿರುವ ಕಾಲೋನಿ ಇನ್ನೊಂದು ಕೆಲಸಗಾರರು ತಾವೇ ನಿರ್ಮಿಸಿಕೊಂಡಿರುವ ಮನೆಗಳಲ್ಲಿ ವಾಸಿಸುತ್ತಿರುವ ಕಾಲೋನಿ. ಈ ಕಾಲೋನಿಗಳು ಎರಡೂ ಬೇರೆ ಬೇರೆ ಕಡೆ ಇವೆ. ಒಂದಕ್ಕೊಂದು ತದ್ವಿರುದ್ಧದ ಚಿತ್ರಣ ಕೊಡುತ್ತವೆ.

ಕೆಲಸಗಾರರಲ್ಲಿ ಕೆಲವರಿಗೆ ಮುನಿಸಿಪಾಲಿಟಿಯೇ ಉಚಿತ ಮನೆಗಳನ್ನು ನಿರ್ಮಿಸಿರುವ ಕಾಲೋನಿ ಒತ್ತೊತ್ತಾಗಿದೆ. ಸಮರ್ಪಕ ನಿರ್ವಹಣೆ ಇಲ್ಲ. ಆದರೆ, ಎದ್ದು ಕಾಣುವಂತಹ ವ್ಯತ್ಯಾಸ ಕೆಲಸಗಾರರು ಎಲ್ಲಿ ಸ್ವತಃ ಮನೆಗಳನ್ನು ಕಟ್ಟಿಕೊಂಡಿದ್ದಾರೋ, ವಾಸಿಸುತ್ತಿದ್ದಾರೋ ಅಲ್ಲಿ ಕಂಡುಬರುತ್ತದೆ. ಆ ಕಾಲೋನಿಯಲ್ಲಿ ಒಳ್ಳೆಯ ಸ್ವಚ್ಛತೆ ಹಾಗೂ ಚೆಂದ ಕಣ್ಣಿಗೆ ಕಾಣುತ್ತದೆ.

ಭುವನೇಶ್ವರದಲ್ಲಿ ಸಮಿತಿಯು, ನಗರಾಭಿವೃದ್ಧಿ ಇಲಾಖೆಯ ಹಾಗೂ ಮುನಿಸಿಪಲ್ ನಿರ್ದೇಶನಾಲಯದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿತು. ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಒರಿಸ್ಸಾ ಮುಖ್ಯಮಂತ್ರಿ ಸನ್ಮಾನ್ಯ ನಂದಿನಿ ಸತ್ಪತಿಯವರನ್ನು ಭೇಟಿ ಮಾಡಿ ಸಮಿತಿಯು ಕರ್ನಾಟಕದಲ್ಲಿ ಈಗಾಗಲೇ ಮಾಡಿರುವ ಕಾರ್ಯಗಳನ್ನು ವಿವರಿಸಿತು. ಮಾನವೀಯತೆಗೆ ಪಿಡುಗಾಗಿರುವ ಅಸ್ಪೃಶ್ಯತೆಯನ್ನು ತೊಲಗಿಸಲು ಯೋಜಿತ ಪ್ರಯತ್ನಗಳನ್ನು ಮಾಡಬೇಕೆಂದು ಸಲಹೆ ನೀಡುತ್ತಾ, ಸಮಿತಿಯು ಈವರೆಗೆ ಮಾಡಿರುವ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ಕೊನೆಯಲ್ಲಿ ಕೆಲವೊಂದು ಅಭಿಪ್ರಾಯ**

ದೇಶದ ಅನೇಕ ಭಾಗಗಳಲ್ಲಿ ಎಲ್ಲೆಲ್ಲಿ ನೈರ್ಮಲ್ಯ ಹಾಗೂ ಜನಾರೋಗ್ಯಕ್ಕಾಗಿ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಕೆಲಸ ಮಾಡುತ್ತಿರುವರೋ ಅವರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳನ್ನು ಪರಸ್ಪರ ಹೋಲಿಸಿ ಅಧ್ಯಯನ ಮಾಡಿರುವುದು ಸಮಿತಿಗೆ ತೃಪ್ತಿ ತಂದಿದೆ. ಭಾರತದ ಸನ್ಮಾನ್ಯ ಉಪ ರಾಷ್ಟ್ರಪತಿಯವರು, ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು, ಒಕ್ಕೂಟದ ಸನ್ಮಾನ್ಯ ಆಹಾರ ಹಾಗೂ ಕೃಷಿ ಮಂತ್ರಿಯವರು, ಸನ್ಮಾನ್ಯ ರೈಲ್ವೆ ಉಪಮಂತ್ರಿಯವರು ಹಾಗೂ ಇನ್ನಿತರ ಗಣ್ಯರು ಕೊಟ್ಟ ಸಲಹೆ ಸೂಚನೆಗಳಿಂದ ಸಮಿತಿಗೆ ತುಂಬಾನೆ ಪ್ರಯೋಜನವಾಗಿದೆ.

ಸಮಿತಿಯು ಎಲ್ಲೆಲ್ಲಿಗೆ ಭೇಟಿ ನೀಡಿತ್ತೊ ಅಲ್ಲೆಲ್ಲಾ ಮುನಿಸಿಪಲ್ ಕೆಲಸಗಾರರು, ಅವರುಗಳನ್ನು ಏನೇ ಹೆಸರಿನಿಂದ ಕರೆಯುತ್ತಿದ್ದರೂ, ಒಂದೇ ಸಮುದಾಯದವರು ಎಂದರೆ ಹರಿಜನರು. ಈ ಅಸಹ್ಯ, ಕೀಳು ಕೆಲಸ ಮಾಡುವುದೇ ನಮ್ಮ ಹಣೆ ಬರಹ ಅಂತ ಹರಿಜನರು ದೇಶದಾದ್ಯಂತ ಈ ಅನಿಷ್ಟದ ಕೆಲಸದಲ್ಲಿ ತೊಡಗಿದ್ದಾರೆ. ಸ್ಥಳೀಯ ಮಂಡಳಿಗಳ ಅಧಿಕಾರಿಗಳೊಂದಿಗೆ ಸಮಿತಿಯು ಈ ವಿಷಯವನ್ನು ಚರ್ಚಿಸಿತು. ಫಲಶೃತಿಯಾಗಿ ಕಂಡುಕೊಂಡ ಸತ್ಯವೇನೆಂದರೆ ಪರಿಶಿಷ್ಟ ಜಾತಿಯ ಜನರ ಹೊರತು ಬೇರಾವ ಸಮುದಾಯದವರೂ ಈ ಕೆಲಸ ಮಾಡಲಾರರು. ಈ ಎಲ್ಲ ವರ್ಷಗಳಲ್ಲೂ ಬೇರು ಬಿಟ್ಟಿರುವ ವೃತ್ತಿಯೇ ಜಾತಿ ಸೂಚಕವೆಂಬ ಹಣೆ ಪಟ್ಟಿಯನ್ನು ಅಳಿಸಿ ಜಾತಿ ಮತ್ತು ವೃತ್ತಿ ಬೇರೆ ಬೇರೆ ಎಂದು ಪರಿಗಣಿಸಿ ಪ್ರತ್ಯೇಕಿಸಲು ಪ್ರತಿಯೊಂದು ಕ್ರಮಕೈಗೊಳ್ಳಬೇಕೆಂಬ ನಿರ್ಣಯಕ್ಕೆ ಸಮಿತಿಯು ಬಂದಿದೆ.

ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳ ಬಗ್ಗೆ ಹೇಳುವುದಾದರೆ, ಕೆಲವು ಕಡೆಗಳಲ್ಲಿ ಸ್ಥಿತಿಗತಿಗಳು ಚೆನ್ನಾಗಿವೆ. ಕೆಲವು ಕಡೆಗಳಲ್ಲಿ ಸ್ಥಿತಿಗತಿಗಳು ಸ್ವಲ್ಪ ಮಟ್ಟಿಗೆ ಪರವಾಗಿಲ್ಲ. ಕೆಲವು ಕಡೆಗಳಲ್ಲಂತೂ ಏನೇನೂ ಸಮಾಧಾನಕರವಾಗಿಲ್ಲ. ಕರ್ನಾಟಕ ಪೌರಕಾರ್ಮಿಕರ ಬಗ್ಗೆ ಹೇಳುವುದಾದರೆ, ಕರ್ನಾಟಕ ಮುನಿಸಿಪಾಲಿಟಿಗಳ (ಅಧಿಕಾರಿಗಳ ಹಾಗೂ ನೌಕರರ ಸೇವಾ ನಿಬಂಧನೆಗಳು) ನಿಯಮಗಳು, 1972 ರ ಹಲವಾರು ನಿಬಂಧನೆಗಳನ್ನು ರಾಜ್ಯ ಸರ್ಕಾರವು ಕಾರ್ಯರೂಪಕ್ಕೆ ತಂದಿದ್ದಿದ್ದರೆ, ಬೇರೆ ಕಡೆಗಳಲ್ಲಿ ಇರುವ ಪೌರಕಾರ್ಮಿಕರ ಸ್ಥಿತಿಗತಿಗಳಿಗಿಂತಲೂ ನಮ್ಮ ಪೌರಕಾರ್ಮಿಕರ ಸ್ಥಿತಿಗತಿಗಳು ತುಂಬಾನೆ ಚೆನ್ನಾಗಿರುತ್ತಿದ್ದವೇನೋ ಎಂಬ ನಿರ್ಣಯಕ್ಕೆ ಸಮಿತಿಯು ಬಂದಿದೆ. ರಾಜ್ಯದಾದ್ಯಂತ ಇರುವ ಪೌರಕಾರ್ಮಿಕರ ಅತ್ಯುತ್ತಮ ಹಿತದೃಷ್ಟಿಯಿಂದ ಈ ಕಾಯ್ದೆಯ ನಿಬಂಧನೆಗಳನ್ನು ಜಾರಿಗೆ ತರಲು ಕೂಡಲೇ ಕ್ರಮಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರಕ್ಕೆ ತೀವ್ರ ಆಸೆಯಿಂದ ಮನವಿ ಮಾಡಿಕೊಳ್ಳುತ್ತದೆ.

## ಭಾಗ III

## ಮೈಸೂರು ಸರ್ಕಾರದ ನಡವಳಿಗಳು

ವಿಷಯ : ರಾಜ್ಯದಲ್ಲಿರುವ ದೊಡ್ಡ ಪಟ್ಟಣಗಳ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುತ್ತಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕೆಲಸದ ಸ್ಥಿತಿಗಳಲ್ಲಿ ಸುಧಾರಣೆ–ಸ್ಥಿತಿಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯ ನೇಮಕ ಕುರಿತು

**ಪ್ರಸ್ತಾವನೆ:**

1. ಅಂದಾಜು ಸಮಿತಿಯು ತನ್ನ 48ನೆಯ ವರದಿಯಲ್ಲಿ ಸರ್ಕಾರಕ್ಕೆ ಈ ಮುಂದಿನಂತೆ ಶಿಫಾರಸು ಮಾಡಿದೆ,–

(ಎ) ತಲೆ ಮೇಲೆ ಮಲ ಹೊತ್ತು ಸಾಗಿಸುವ ಪದ್ಧತಿಯನ್ನು ಎಷ್ಟು ಸಾಧ್ಯವೋ ಅಷ್ಟು ಅತ್ಯಲ್ಪ ಕಾಲದಲ್ಲಿ ತೊಲಗಿಸಲು ಗೃಹ ಮಂತ್ರಾಲಯವು ಹೆಚ್ಚು ಹೆಚ್ಚಾಗಿ ಸಕ್ರಿಯ ಮತ್ತು ಈ ತುರ್ತು ಅಗತ್ಯವನ್ನು ರಾಜ್ಯದ ಮುನಿಸಿಪಾಲಿಟಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮನಗಾಣಿಸಬೇಕು.

(ಬಿ) ತಲೆ ಮೇಲೆ ಮಲ ಹೊತ್ತು ಸಾಗಿಸುವ ವಿಧಾನದ ಬದಲು ಕೈಗಾಡಿಗಳಲ್ಲಿ ಅಥವಾ ತಳ್ಳು ಗಾಡಿಗಳಲ್ಲಿ ಸಾಗಿಸುವುದು ಯಾವ ಯಾವ ಮುನಿಸಿಪಾಲಿಟಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಹಲವಾರು ಹಣಕಾಸಿನ ಹಾಗೂ ಇತರ ಕಾರಣಗಳಿಂದ ಸಂಪೂರ್ಣವಾಗಿ ಸಾಧ್ಯವಾಗುವುದಿಲ್ಲವೋ ಆ ಮುನಿಸಿಪಾಲಿಟಿಗಳಿಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ, ಆ ಪದ್ಧತಿಯನ್ನು ನಿರ್ಮೂಲನ ಮಾಡಲು ಉತ್ತೇಜನ ನೀಡಬೇಕು ಹಾಗೂ ಹಣಕಾಸು ನೆರವು ಕೊಡಬೇಕು.

2. ಈ ಶಿಫಾರಸುಗಳು, ಮಾನ್ಯ ಗೃಹ ಮಂತ್ರಿ ದಿ. ಶ್ರೀ ಜಿ.ಬಿ.ಪಂತ್‌ರ ಅಧ್ಯಕ್ಷತೆಯಲ್ಲಿ 1957ರ ಅಕ್ಟೋಬರ್ 12 ರಂದು ನಡೆದ ಕೇಂದ್ರೀಯ ಹರಿಜನ ಕಲ್ಯಾಣ ಸಲಹಾ ಮಂಡಳಿಯ ಮುಂದೆ ಚರ್ಚೆಗೆ ಬಂದಿದ್ದವು. ಸಂಸತ್ ಸದಸ್ಯ ಶ್ರೀ ಎನ್.ಆರ್.ಮಲ್ಕಾನಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಇಡೀ ದೇಶದಲ್ಲಿ ಅಧ್ಯಯನ ಪ್ರವಾಸ ಮಾಡಿ, ತನ್ನ ಶಿಫಾರಸುಗಳನ್ನು ಒಪ್ಪಿಕೊಳ್ಳುವುದಕ್ಕಾಗಿ ಹಾಗೂ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ 1960ರ ಡಿಸೆಂಬರ್ 26 ರಂದು ಭಾರತ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತು. ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳಲ್ಲಿ ಹಾಗೂ ದೊಡ್ಡ ಪಟ್ಟಣಗಳಲ್ಲಿ 'ಸ್ವೀಪರುಗಳು ಹಾಗೂ ಸ್ಕ್ಯಾವೆಂಜರು'ಗಳೆಂಬ ಹೆಸರಿನಿಂದ ಕರೆಯುತ್ತಿರುವ ಜನ ವರ್ಗದ ಬದುಕಿನ ಹಾಗೂ ಕೆಲಸದ ಸ್ಥಿತಿಗಳಲ್ಲಿ ಸುಧಾರಣೆ ತರಲು ಯಾವ ಪ್ರಯತ್ನವೂ ಆಗಿಲ್ಲ. ಹಾಗಾಗಿ, ಈ ಸಮಸ್ಯೆ ಬಗ್ಗೆ ಕೆಲವೊಂದು ಮುನಿಸಿಪಾಲಿಟಿಗಳು ತಾವಾಗಿಯೇ ಸ್ವಲ್ಪ ಆಸಕ್ತಿ ತೋರಿರುವುದನ್ನು ಬಿಟ್ಟರೆ ಈ ಜಾಡಮಾಲಿ ಪದ್ಧತಿಯನ್ನು ತೊಲಗಿಸಲು ಹಾಗೂ ಸಮಾಜದ ಈ ನತದೃಷ್ಟರ ಬದುಕಿನ ಹಾಗೂ ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ವಾಸ್ತವಿಕ ಅಥವಾ ಕಣ್ಣಿಗೆ ಕಾಣುವ ಯಾವ ಪ್ರಯತ್ನವೂ ಆಗಿಲ್ಲ.

3. ಈ ಎಲ್ಲ ವರ್ಷಗಳಲ್ಲಿ, ಅನಿಶ್ಚಿತ ನೌಕರಿಯನ್ನುಳ್ಳ ಹಾಗೂ ಮಜೂರಿ ಇಷ್ಟೊಂದು ಕಡಿಮೆಯೇ ಎನ್ನುವಂತಹ ಕಲ್ಪಿಸಿಕೊಳ್ಳಲಾಗದ ಕಡಿಮೆ ಮಜೂರಿಯನ್ನುಳ್ಳ, ಸಮಾಜದ ಈ ವರ್ಗದ ಜನರ ಮೌಢ್ಯವನ್ನು ಶೋಷಣೆ ಮಾಡುವ ಪ್ರಯತ್ನಗಳು ಆಗುತ್ತಲೇ ಇವೆ. ಯಾವ ಕಾಲ ಘಟ್ಟದಲ್ಲೂ ಅವರುಗಳಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಮತ್ತು ಅವರುಗಳು ಮಾನವ ಘನತೆ, ಗೌರವದಿಂದ ಬಾಳುವಂತೆ ಮಾಡಲು ಪ್ರಯತ್ನ ಮಾಡಿಯೇ ಇಲ್ಲ. 1959ರ ಏಪ್ರಿಲ್ 3 ರಂದು ನಡೆದ ರಾಜ್ಯಗಳ ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಗೃಹ ಮಂತ್ರಿ ಸನ್ಮಾನ್ಯ ಶ್ರೀ ಜಿ. ಪಂತ್‌ರು ಮಾಡಿದ ಭಾಷಣದಲ್ಲಿ ಅವರಾಡಿದ ಮಾತುಗಳನ್ನು ನೆನಪಿಸಿಕೊಳ್ಳಬಹುದಾಗಿದೆ.

ಅವರು ಮಾತನಾಡುತ್ತ, ತಲೆ ಮೇಲೆ ಮಲ ಹೊತ್ತು ಒಯ್ಯುವ ಮಾನವ ಪದ್ಧತಿಯು ಸಂಪೂರ್ಣವಾಗಿ ಹಾಗೂ ಕೂಡಲೇ ತೊಲಗಿಸಿರುವುದನ್ನು ನೋಡಲು ನಾನು ಬಹು ಉತ್ಸುಕನಾಗಿದ್ದೇನೆಂದು ಹೇಳಿದ್ದರು.

4. ಅಂದಾಜು ಸಮಿತಿಯು ತನ್ನ 48 ನೇ ವರದಿಯಲ್ಲಿ ಹೇಳಿರುವ ಶಿಫಾರಸುಗಳಲ್ಲಿ, ಈ ಜನರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರದ ಅಗತ್ಯತೆಗಳೆಲ್ಲವನ್ನು ಹೇಳಿಲ್ಲ. ಬಹುಷಃ ಆ ಶಿಫಾರಸುಗಳನ್ನು 20 ವರ್ಷಗಳ ಹಿಂದೆ ಮಾಡಿದ್ದರಿಂದಲೋ ಏನೋ ಸಮಾಜದಲ್ಲಿ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಮುಂಗಾಣುವುದಕ್ಕೆ ಆಗಿರಲಿಲ್ಲವೆಂದು ಕಾಣುತ್ತದೆ. ಜನರ ಈ ವರ್ಗವು ಎದುರಿಸುತ್ತಿರುವ ಎಲ್ಲ ಸಮಸ್ಯೆಯನ್ನು ವ್ಯಾಪಕವಾಗಿ ಪರಾಮರ್ಶಿಸುವ ಅಗತ್ಯ ಇಂದು ಉಂಟಾಗಿದೆ. ವಾಸ್ತವಾಂಶಗಳನ್ನು ಪರ್ಯಾಲೋಚಿಸುವುದು ಹಾಗೂ ಅಂದಾಜು ಸಮಿತಿಯ ಶಿಫಾರಸುಗಳ ಸಹಿತ, ಈ ಜನರ ಬದುಕಿನ ಹಾಗೂ ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ, ಪರಿಸರದ ಸ್ಥಿತಿಗಳಲ್ಲಿ ಸುಧಾರಣೆ, ಈ ಜನರಿಗೆ ತರಬೇತಿ ಈ ಜನರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಏರ್ಪಾಟು, ಗ್ರಾಹಕ ಹಾಗೂ ಬ್ಯಾಂಕಿಂಗ್ ಸಹಕಾರ ಸಂಘಗಳನ್ನು ಸ್ಥಾಪನೆ ಹಾಗೂ ಬೇರೆ ವರ್ಗದ ಜನರನ್ನು ಈ ವೃತ್ತಿಗೆ ಸೆಳೆಯುವಂತೆ ಮಾಡುವುದು ಹಾಗೂ ಈ ವೃತ್ತಿಯನ್ನು ಹಣಕಾಸು ದೊರೆಯುವ ವೃತ್ತಿಯನ್ನಾಗಿ ಮಾಡುವುದು ಮುಂತಾದ ವಿಷಯಗಳನ್ನು ಪರಿಶೀಲಿಸುವುದು ಅನಿವಾರ್ಯವಾಗಿದೆ.

5. ನಾವು, ಈಗ 25ನೆಯ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಭಾರತ ಸರ್ಕಾರವು, ಕೆಲವೊಂದು ಒಪ್ಪಿಕೊಂಡ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ತೀರ್ಮಾನಿಸಿದೆ. ಜನರು ತಲೆ ಮೇಲೆ ಮಲವನ್ನು ಹೊತ್ತು ಸಾಗಿಸುವ ವಿಧಾನವನ್ನು ಅಂತ್ಯಗೊಳಿಸುವುದು ಸಮಾರಂಭಗಳ ಕಾರ್ಯಕ್ರಮಗಳಲ್ಲಿ ಒಂದು. ಈ ನಿರ್ದೇಶನಕ್ಕನುಸಾರವಾಗಿ ಮೈಸೂರು ಸರ್ಕಾರವು, ರಾಜ್ಯದಲ್ಲಿರುವ ಎಲ್ಲ ದೊಡ್ಡ ಪಟ್ಟಣಗಳಲ್ಲಿರುವ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡುತ್ತಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕೆಲಸದ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಪರಿಶೀಲಿಸಲು ಹಾಗೂ ಈ ಉದ್ದೇಶದ ಈಡೇರಿಕೆಗಾಗಿ ಸರ್ಕಾರವು ತೆಗೆದುಕೊಳ್ಳಬೇಕಾದ ಮುಂದಿನ ಕ್ರಮವನ್ನು ಸೂಚಿಸಲು ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ. ಸಮಿತಿಯು ರಾಜ್ಯದಾದ್ಯಂತ ಪ್ರವಾಸ ಮಾಡುತ್ತದೆ. ಮಾಹಿತಿ, ದತ್ತಾಂಶ ಮುಂತಾದವುಗಳನ್ನು ಸಂಗ್ರಹಿಸುತ್ತದೆ ಹಾಗೂ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡುತ್ತವೆ.

## ಆದೇಶ ಸಂಖ್ಯೆ: ಹೆಚ್‌ಎಂಎ 152 ಜಿಜಿಎಲ್ 72 ಬೆಂಗಳೂರು, ದಿನಾಂಕ 22 ಸೆಪ್ಟೆಂಬರ್ 1972

ಮೇಲೆ ವಿವರಿಸಿರುವ ಸಂಗತಿಗಳಿಂದಾಗಿ, ಮೈಸೂರು ಸರ್ಕಾರವು ಶ್ರೀ ಐಪಿಡಿ ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಈ ಮುಂದೆ ಹೇಳಿರುವ ಸದಸ್ಯರುಗಳನ್ನುಳ್ಳ ಸಮಿತಿಯನ್ನು, ರಾಜ್ಯದಾದ್ಯಂತ ಇರುವ ಎಲ್ಲ ಮುನಿಸಿಪಾಲಿಟಿಗಳಲ್ಲಿ ಹಾಗೂ ದೊಡ್ಡ ಪಟ್ಟಣಗಳಲ್ಲಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳ ಸಮಸ್ಯೆಯನ್ನು ಪರಿಶೀಲಿಸಲು ಹಾಗೂ ಮೇಲೆ ಹೇಳಿರುವ ಉದ್ದೇಶದ ಈಡೇರಿಕೆಗೆ ಸರ್ಕಾರಕ್ಕೆ ವರದಿ ಸಲ್ಲಿಸಲು, ರಚಿಸಿದೆ.

**ಅಧ್ಯಕ್ಷರು**

ಶ್ರೀಯುತರು–

1. ಐ.ಪಿ.ಡಿ. ಸಾಲಪ್ಪ, ನಂ.79, ಗೋರಿಪಾಳ್ಯ, ಬೆಂಗಳೂರು–18

**ಸದಸ್ಯರು**

2. ಪಿ.ಎನ್.ರಾಮಚಂದ್ರ, ಓಲ್ಡ್ ಸವಾರ್ ಲೈನ್, ಶೇಷಾದ್ರಿಪುರಂ, ಬೆಂಗಳೂರು – 2
3. ಶ್ರೀಮತಿ ಲಕ್ಷ್ಮಿ ಸುಬ್ಬರಾವ್, ನಂ. 84, ಗಾಯತ್ರಿದೇವಿ ಪಾರ್ಕ್, ಬೆಂಗಳೂರು – 3.
4. ಎಸ್.ಎ. ಮುಲ್ಲಾ, ಮರ್ಚೆಂಟ್, ಸುಭಾಷ್ ರಸ್ತೆ, ಧಾರವಾಡ.
5. ಕೆ. ಶ್ರೀರಾಮುಲು, ಎಂ.ಎಲ್.ಎ., ವಯ್ಯಾಲಿಕಾವಲ್ ಮುಖ್ಯರಸ್ತೆ, ಬೆಂಗಳೂರು–3.
6. ಪಿ.ಡಿ. ಬಂಜೇರಾ, ಎಂ.ಎಲ್.ಎ., ಮಂಗಳೂರು
7. ಟಿ.ಆರ್.ಶಾಮಣ್ಣ, ಎಂ.ಎಲ್.ಎ, 32, 4ನೇ ಮುಖ್ಯರಸ್ತೆ, ಎನ್.ಆರ್.ಕಾಲೋನಿ, ಬೆಂಗಳೂರು–9.
8. ನಾರಾಯಣ ಸಿಂಗ್, ಎಂ.ಎಲ್.ಎ, ಹೊಸಪೇಟೆ, ಬಳ್ಳಾರಿ ಜಿಲ್ಲೆ.
9. ಎಸ್.ಸಿ.ವೆಂಕಟೇಶ್, ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲೆ ಕಾಂಗ್ರೆಸ್ ಸಮಿತಿ, ನಂ.78, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3.
10. ಎ.ಕೆ.ಅನಂತಕೃಷ್ಣ, ಕಾರ್ಪೊರೇಟರ್, ಶಾಂತಿನಗರ, ಬೆಂಗಳೂರು–27.
11. ಜಿ.ಪಿ. ಗಂಜಿಗಟ್ಟಿ, c/o ಪರಿಶಿಷ್ಟ ಜಾತಿ ಕೋಶ, ನಂ.6, ಎಡ್ವರ್ಡ್ ರೋಡ್, ಬೆಂಗಳೂರು– 1
12. ಕೊಣಂದೂರು ಲಿಂಗಪ್ಪ, ಎಂ.ಎಲ್.ಎ., ಲಾಲಾ ಲಜಪತ್ ರಾಯ್ ರೋಡ್, ಶಿವಮೊಗ್ಗ.
13. ಎಂ.ರಘುಪತಿ, ಯುವ ನಾಯಕ, ಯಶವಂತಪುರ, ಬೆಂಗಳೂರು.

2. ಸಮಿತಿಗೆ ವಹಿಸಿದ ಪರಿಶೀಲನಾಂಶಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.
3. ಸಮಿತಿಗೆ ಪ್ರವಾಸ ಭತ್ಯೆ, ಸಿಎ ಹಾಗೂ ಡಿ.ಎಯನ್ನು ಅಧಿಸೂಚನೆ ನಂ. ಸಿಒಡಿ 1168–57, ದಿನಾಂಕ: 23 ಆಗಸ್ಟ್ 1957 ರಲ್ಲಿ ಪ್ರಕಟಿಸಿರುವ 1957ರ ಹೊಸ ಮೈಸೂರು ಪ್ರವಾಸ ಭತ್ಯೆ ನಿಯಮಗಳ 4 ನೆಯ ನಿಯಮದ ಪ್ರಕಾರ ಸಂದಾಯ ಮಾಡಲಾಗುತ್ತದೆ.
4. ಸಮಿತಿಯ ಅಧ್ಯಕ್ಷರು ಪ್ರತಿ ತಿಂಗಳು 500 ರೂಪಾಯಿ ಸಂಭಾವನೆಯನ್ನು ಪಡೆಯುತ್ತಾರೆ.
5. ಈ ಆದೇಶವನ್ನು ಹಣಕಾಸು ಇಲಾಖೆ ಸಹಮತದೊಂದಿಗೆ ಹೊರಡಿಸಲಾಗಿದೆ. ನೋಡಿ: ಹಣಕಾಸು ಇಲಾಖೆ ಟಿಪ್ಪಣಿ ಸಂಖ್ಯೆ: ಎಫ್‌ಡಿ 3135/ಎಸ್ II/72ದಿನಾಂಕ: 18 ಆಗಸ್ಟ್ 1972.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್ ರಾಮಚಂದ್ರರಾವ್
ಸರ್ಕಾರದ ಉಪ–ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1. ಮೈಸೂರು ಅಕೌಂಟೆಂಟ್ ಜನರಲ್, ಬೆಂಗಳೂರು
2. ಸರ್ಕಾರದ ಎಲ್ಲ ಕಾರ್ಯದರ್ಶಿಗಳು
3. ಕಂಟ್ರೋಲರ್, ರಾಜ್ಯ ಲೆಕ್ಕಪತ್ರಗಳ ಇಲಾಖೆ, ಬೆಂಗಳೂರು
4. ಡಿವಿಷನಲ್ ಕಮಿಷನರುಗಳು
5. ಜಿಲ್ಲೆಗಳ ಜಿಲ್ಲಾಧಿಕಾರಿಗಳು
6. ಮುನಿಸಿಪಾಲಿಟಿಗಳ ಚೀಫ್ ಆಫೀಸರುಗಳು ಹಾಗೂ ಮುನಿಸಿಪಲ್

ಕಮಿಷನರುಗಳು

7. ಸಮಿತಿಯ ಸದಸ್ಯರುಗಳು
8. ವಾರದ ಗೆಜೆಟ್
9. ಪ್ರೆಸ್ ಟೇಬಲ್

## ಅನುಬಂಧ

ಸಮಿತಿಗೆ ವಹಿಸಿದ ಪರಿಶೀಲನಾಂಶಗಳು ಹೀಗಿವೆ:

(1) ಹಲವಾರು ಮುನಿಸಿಪಾಲಿಟಿಗಳಲ್ಲಿ ಟೌನ್ ಪಂಚಾಯತ್‌ಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳನ್ನು ತಪಾಸಣೆ ಮಾಡುವುದು ಹಾಗೂ ಅವರುಗಳ ಒಳಿತಿಗಾಗಿ ಸರ್ಕಾರವು ರಚಿಸಬಹುದಾದ ವಿಶೇಷ ನಿಬಂಧನೆಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡುವುದು.

(2) ಅವರುಗಳ ಸಾಮಾಜಿಕ, ಹಣಕಾಸಿನ ಹಾಗೂ ಶೈಕ್ಷಣಿಕ ಸ್ಥಿತಿಗಳನ್ನು ತಪಾಸಣೆ ಮಾಡುವುದು ಮತ್ತು ಆ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಹೆಚ್ಚಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸು ಮಾಡುವುದು

(3) ಸಂಸತ್ತಿನ ಅಂದಾಜು ಸಮಿತಿಯು ತನ್ನ 48ನೆಯ ವರದಿಯಲ್ಲಿ ಮಾಡಿರುವ ಶಿಫಾರಸುಗಳನ್ನು ಪರಿಶೀಲಿಸುವುದು ಮತ್ತು ಮಲವನ್ನು ತಲೆ ಮೇಲೆ ಹೊತ್ತು ಅಥವಾ ಕೈಯಿಂದ ಬಳಿದು ಸಾಗಿಸುವ ಅಮಾನವೀಯ ಹಾಗೂ ಅನಾರೋಗ್ಯಕರ ಪದ್ಧತಿಯನ್ನು ಕ್ರಮೇಣ ತೊಲಗಿಸಲು ಶಿಫಾರಸುಗಳನ್ನು ಮಾಡುವುದು.

ಎನ್ ರಾಮಚಂದ್ರರಾವ್
ಸರ್ಕಾರದ ಉಪ–ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ವಿಷಯ :ಸ್ಥಳೀಯ ಮಂಡಳಿಗಳಲ್ಲಿ ಕೆಲಸ ಮಾಡುತ್ತಿರುವ IV ನೇ ದರ್ಜೆ
ನೌಕರರ ಸೇವಾ ನಿಬಂಧನೆಗಳು – ಸೂಚನೆಗಳು – ಕುರಿತು
ನಂ. ಹೆಚ್‌ಎಂಎ 47 ಎಂಎಲ್ ಆರ್ 72, ಬೆಂಗಳೂರು ದಿನಾಂಕ: 22, ಏಪ್ರಿಲ್ 1972

**ಸುತ್ತೋಲೆ**

ಸರ್ಕಾರವು ಅಂಗೀಕರಿಸಿರುವ ತುಕೋಳ್ ಆಯೋಗದ ವರದಿಯ ಆಧಾರದ ಮೇಲೆ ಮುನಿಸಿಪಾಲಿಟಿಗಳು IV ನೇ ದರ್ಜೆ ನೌಕರರಿಗೆ ಸಂಬಳವನ್ನು ಕೊಡುತ್ತಿಲ್ಲವೆಂದು ಅನೇಕ ಸ್ಥಳಗಳಿಂದ ಸರ್ಕಾರವು ವಿವರಗಳನ್ನು ಸಂಗ್ರಹಿಸಿದೆ. ಅನೇಕ ಮುನಿಸಿಪಾಲಿಟಿಗಳು IV ನೇ ದರ್ಜೆ ನೌಕರರ ನೇಮಕವನ್ನು ಸ್ಥಿರೀಕರಿಸದೆಯೇ ಅವರುಗಳನ್ನು ಅರೆ ಕಾಲಿಕ ಆಧಾರದ ಮೇಲೆಯೇ ಉಳಿಸಿಕೊಂಡಿವೆ. ಈ ನೌಕರರ ಸೇವೆಯನ್ನು ಅಡ್ ಹಾಕ್ ಆಧಾರದ ಮೇಲೆ ಮುಂದುವರಿಸುತ್ತಿರುವುದರಿಂದ ಸೇವಾ ಅನಿಶ್ಚಿತತೆ ಉಂಟಾಗಿದೆ ಹಾಗೂ ಅವರಿಗೆ ಲಭ್ಯವಾಗಬೇಕಾದ ಪ್ರಯೋಜನಗಳು ದೊರಕುತ್ತಿಲ್ಲ. ನೇಮಕಾತಿಯನ್ನು ಕೂಡ ಅಡ್‌ಹಾಕ್ ಆಧಾರದ ಮೇಲೆ ಹಾಗೂ ಅನಿರ್ದಿಷ್ಟ ಅವಧಿಗೆ ಹಾಗೂ ನೇಮಕಾತಿ ನಿಯಮಗಳ ನಿಬಂಧನೆಗಳನ್ನು ಪಾಲಿಸದೆ ಮಾಡಿಕೊಳ್ಳಲಾಗಿದೆ.

ಅನೇಕ ಮುನಿಸಿಪಾಲಿಟಿಗಳಲ್ಲಿ ಪಿಂಚಣಿ ಯೋಜನೆಗಳನ್ನು ಪ್ರಾರಂಭಿಸಿಲ್ಲ. ಈ ನೌಕರರಿಗೆ ವಿಮೆ ಹಾಗೂ ಗ್ರಾಚುಯಿಟಿ ಮುಂತಾದ ಕಲ್ಯಾಣ ಯೋಜನೆಗಳ ಬಗ್ಗೆ ಕೂಡ ಪರ್ಯಾಲೋಚನೆ ಮಾಡಿಲ್ಲ. ವಿಮೆ, ಗ್ರಾಚುಯಿಟಿ ಹಾಗೂ ಪಿಂಚಣಿ ಯೋಜನೆಗಳಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಪ್ರಾರಂಭಿಸದಿರುವುದಕ್ಕೆ ಹಾಗೂ ಸೇವಾ ಪ್ರಯೋಜನಗಳ ಸಹಿತ ಸೇವೆಯನ್ನು ಸ್ಥಿರೀಕರಿಸದಿರುವುದಕ್ಕೆ ಹಾಗೂ ನೇಮಕಾತಿ ನಿಯಮಗಳ ಪ್ರಕಾರ ಮುನಿಸಿಪಾಲಿಟಿಗಳಲ್ಲಿ ನೇಮಕಾತಿ ಮಾಡಿಕೊಳ್ಳದಿರುವುದಕ್ಕೆ ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರಗಳು ಇಂತಹ ಮಾನವೀಯ ವಿಷಯಗಳಿಗೆ ಗಮನ ಕೊಡದೆ ಕಡೆಗಣಿಸಿದ್ದೇ ಕಾರಣವೆಂದು ಸರ್ಕಾರವು ಅಭಿಪ್ರಾಯಪಟ್ಟಿದೆ.

ದೇಶದಲ್ಲಿ ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸಲು ತೀರ್ಮಾನ ಮಾಡಿದ ಈಗಿನ ಸರ್ಕಾರವು ಈ ವಿಷಯಗಳಿಗೆ ಗಮನ ಕೊಟ್ಟ ನಂತರ ಅರ್ಹ ಜನರಿಗೆ ನ್ಯಾಯ ದೊರಕಿಸಿಕೊಡಲು ಆದ್ಯ ಗಮನ ಕೊಡಬೇಕಾಗಿದೆ. IV ನೇ ದರ್ಜೆ ನೌಕರರಿಗೆ ಅರ್ಧ ಸಂಬಳ ಕೊಡುವ ಹಳೆಯ ರೂಢಿಯನ್ನು ಹಾಗೂ ಸಮುದಾಯದವರ ಅನುಕೂಲಕ್ಕೆ ತಕ್ಕಂತೆ ಈ ನೌಕರರನ್ನು ಶೋಷಣೆ ಮಾಡುವುದನ್ನು, ಇಂಥದೊಂದು ಅನ್ಯಾಯವನ್ನು ಯಾವುದೇ ಕಾರಣದ ಮೇಲೆ ಯಾವುದೇ ಮುನಿಸಿಪಾಲಿಟಿಯು ಮುಂದುವರಿಸಲು ಅವಕಾಶ ಕೊಡದೆ, ಅಂತ್ಯಗೊಳಿಸಬೇಕಾಗಿದೆ.

ಆಲ್.ಇಂ.ರಿ. 1955 ಸರ್ವೋಚ್ಚ ನ್ಯಾಯಾಲಯ 30 ರಲ್ಲಿ ವರದಿಯಾಗಿರುವ M/s ಅಲ್ಯೂಮಿನಿಯಂ ಕಂಪೆನಿ–ವಿರುದ್ಧ–ಅವರ ಕೆಲಸಗಾರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಲ್ಲಿ ವಿವರಿಸಿರುವ ತತ್ವಗಳನ್ನು ಯಾವುದೇ ಸಂಸ್ಥೆಯ ನೌಕರರ, ಅದರಲ್ಲೂ ಮುನಿಸಿಪಾಲಿಟಿಗಳ ಹಾಗೂ ಮಂಡಳಿಗಳ ನೌಕರರ ಸೇವಾ ನಿಬಂಧನೆಗಳಿಗೆ ಆಧಾರವನ್ನಾಗಿ ಮಾಡಬೇಕಿದೆ. ತೀರ್ಪಿನ ಸುಸಂಗತ ಭಾಗ ಹೀಗಿದೆ:

> "ಯಾವ ಅಪವಾದಗಳಿಗೂ ಅವಕಾಶ ಕೊಡದಂತಹ ಒಪ್ಪಲೇಬೇಕಾದ ಒಂದು ತತ್ವವಿದೆ. ಅದೇನೆಂದರೆ ಯಾವ ಕೈಗಾರಿಕೆಯಾದರೂ ಸರಿಯೆ, ಕನಿಷ್ಠ ಮಜೂರಿಯನ್ನು ಕೊಡುವ ಸಾಮರ್ಥ್ಯ ಇರದಿದ್ರೆ, ಅದು ಅಸ್ತಿತ್ವದಲ್ಲಿರುವುದಕ್ಕೆ ಹಕ್ಕಿಲ್ಲ. ಅಭಿವೃದ್ಧಿಯಾಗದ ದೇಶಗಳಲ್ಲಿ ಭಾರೀ ಪ್ರಮಾಣದಲ್ಲಿ ನಿರುದ್ಯೋಗ ಇರುತ್ತದೆ. ಅಲ್ಲಿ ಕೆಲಸಕ್ಕಾಗಿ ಹಾತೊರೆಯುವ ಅಸಂಘಟಿತ ಕಾರ್ಮಿಕರು ಕಡಿಮೆ ಕೂಲಿಗೆ ಸಿಗುವ ಸಾಧ್ಯತೆ ಇರಬಹುದು. ಆದರೆ, ಉದ್ಯಮದ ಉದ್ಯೋಗದಾತನು ತನ್ನ ನೌಕರನ

ಸಂಬಳಲ್ಲಿ ಜೀವನಾಧಾರಕ್ಕೆ ಬೇಕಾದುದಕ್ಕಿಂತಲೂ ಅಥವಾ ಕನಿಷ್ಠ ಮಜೂರಿಗಿಂತಲೂ ಮಜೂರಿಯನ್ನು ಕಡಿಮೆ ಮಾಡಿದರೆ, ಅಂತಹ ನಿಬಂಧನೆಗಳ ಮೇಲೆ ತನ್ನ ಉದ್ಯಮವನ್ನು ನಡೆಸಲು ಆತನಿಗೆ ಯಾವ ಹಕ್ಕು ಇರಲಾರದು. ಈವಿಷಯದ ಸಾಧಕ ಬಾಧಕಗಳನ್ನು ಪರಿಶೀಲಿಸುವಾಗ ಈ ನಿಲುವನ್ನು ಗಮನದಲ್ಲಿಟ್ಟುಕೊಳ್ಳಬೇಕು."

ಈ ತೀರ್ಪಿನಿಂದ, ನೌಕರರಿಗೆ ಒಳ್ಳೆಯ ಸಂಬಳ ಕೊಡಬೇಕು. ಉದ್ಯಮಕ್ಕೆ ಅದು ಸಾಧ್ಯವಾಗದಿದ್ದರೆ ಅದಕ್ಕೆ ಅಸ್ತಿತ್ವದಲ್ಲಿರುವ ಯಾವುದೇ ಹಕ್ಕಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆಯಾಯ ಮುನಿಸಿಪಾಲಿಟಿಗಳಲ್ಲಿರುವ ಎಲ್ಲ ನೌಕರರಿಗೆ ಈ ತತ್ವ ಅನ್ವಯವಾಗುತ್ತದೆ. ಕೆಲಸಗಾರರಿಗೆ, ನ್ಯಾಯೋಚಿತ ಸಂಬಳ ಸೇವಾ ಪ್ರಯೋಜನಗಳನ್ನು ಕೊಡದೆ ಸತಾಯಿಸುವುದನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ತಪ್ಪಿಸಬೇಕು.

ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳು, ಅಧಿಸೂಚಿತ ಪ್ರದೇಶ ಸಮಿತಿಗಳು, ನೈರ್ಮಲ್ಯ ಮಂಡಳಿಗಳು ಹಾಗೂ ಹೊಸ ಪಟ್ಟಣ ಮಂಡಳಿಗಳು ನಾಲ್ಕನೇ ದರ್ಜೆ ನೌಕರರ ನೇಮಕವನ್ನು ಸ್ಥಿರೀಕರಿಸಬೇಕೆಂದು ಹಾಗೂ IV ನೇ ದರ್ಜೆ ನೌಕರರು ನೇಮಕವಾದ ದಿನಾಂಕದಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ ಸೇವಾ ಪ್ರಯೋಜನಗಳನ್ನು ಈ ಕೂಡಲೇ ಕೊಡುವಂತೆ ನಿರ್ದೇಶನ ನೀಡಲಾಗಿದೆ. ಈ ನೌಕರರ ಸೇವಾ ರಿಜಿಸ್ಟರುಗಳನ್ನು ಈ ಕೂಡಲೇ ತೆರೆಯಬೇಕು ಹಾಗೂ ರಿಜಿಸ್ಟರನ್ನು ಈಗಾಗಲೇ ತೆರೆದಿದ್ದರೆ, ಈ ಕೂಡಲೇ ಅದರಲ್ಲಿ ಪೂರ್ವಾನ್ವಯವಾಗಿ ನಮೂದುಗಳನ್ನು ಮಾಡಬೇಕೆಂದು ಸಹ ನಿರ್ದೇಶನ ನೀಡಲಾಗಿದೆ.

ಸರ್ಕಾರದ ಆದೇಶ ಸಂ: ಹೆಚ್‌ಎಂಎ 92 ಎಂಎಲ್‌ಆರ್ 71 ದಿನಾಂಕ: 29 ಫೆಬ್ರವರಿ 1972/ ಮಾರ್ಚ್ 1972 (ಅನುಬಂಧ 1) ರಲ್ಲಿ ಈಗಾಗಲೇ ರೂಪಾಯಿ 65–2–95 ನ್ನು ಮಂಜೂರು ಮಾಡಿರುವುದರಿಂದ ಈ ಮುಂದೆ ಹೇಳಿರುವ ಹುದ್ದೆಗಳ ಪ್ರವರ್ಗಗಳ ನೌಕರರಿಗೆ ಎಂದರೆ:

1. ಜವಾನರು
2. ಮನೆ ಸೇವಕರು
3. ಕಾವಲುಗಾರ
4. ಪೌಂಡ್ ಕೀಪರ್
5. ಅಕ್ರಾಯಿ ಜವಾನ
6. ಕಸಗುಡಿಸುವವರು
7. ಜಾಡಮಾಲಿಗಳು
8. ಡಂಗುರ ಬಾರಿಸುವವರು
9. ಗ್ಯಾಂಗ್‌ಮ್ಯಾನ್
10. ಆಯಾಗಳು
11. ಗುಂಡಿ ತೆಗೆಯುವವ
12. ಕೇರ್ ಟೇಕರ್
13. ಕ್ಲೀನರ್ಸ್
14. ಹೆಲ್ಪರ್ಸ್
15. ಮಾಲಿಗಳು

- ಇವರುಗಳಿಗೆ 1970ರ ಜನವರಿ 1 ರಿಂದಲೇ ಆ ಪ್ರಕಾರ ಸಂಬಳ ಕೊಡಬೇಕು.

ಸರ್ಕಾರದ ಆದೇಶ ಸಂ: ಹೆಚ್ಎಂಎ 31 ಎಂಎನ್ಎ 72 ದಿನಾಂಕ:29, ಮಾರ್ಚ್ 1972ರಲ್ಲಿ (ಅನುಬಂಧ II) ಈಗಾಗಲೇ ಮಂಜೂರು ಮಾಡಿರುವ ತಿಂಗಳಿಗೆ 10 ರೂಪಾಯಿ ಹೆಚ್ಚುವರಿ ತುಟ್ಟಿಭತ್ಯೆಯನ್ನು 1972 ಜನವರಿ 1 ರಿಂದಲೇ ಕೊಡಬೇಕು. ಸರ್ಕಾರದ ಆದೇಶ ಸಂ:ಹೆಚ್ಎಂಎ 9 ಎಂಎಲಾರ್ 71 ದಿನಾಂಕ: 16, ಸೆಪ್ಟೆಂಬರ್ 1971 ರಲ್ಲಿ (ಅನುಬಂಧ II) ರಲ್ಲಿ ಪರಿಷ್ಕರಿತ ದರದಲ್ಲಿ ಮಂಜೂರು ಮಾಡಿರುವ ನಗರ ಪರಿಹಾರ ಭತ್ಯೆ ಕೊಡುವುದನ್ನು ಹಾಗೂ ಮನೆ ಬಾಡಿಗೆ ಭತ್ಯೆ ಕೊಡುವುದನ್ನು ಹಾಗೂ ವಿಶೇಷ ತುಟ್ಟಿಭತ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿರದಿದ್ದರೆ ಕೂಡಲೇ ಕಾರ್ಯರೂಪಕ್ಕೆ ತರಬೇಕು. ಈ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸುವುದು ಮುನಿಸಿಪಾಲಿಟಿಗಳು, ಅಧಿಸೂಚಿತ ಪ್ರದೇಶ ಸಮಿತಿಗಳು ಮುಂತಾದವುಗಳ ಮೇಲೆ ವಿಧಿಸುವ ಕಡ್ಡಾಯ ಹೊಣೆಗಾರಿಕೆಗಳಲ್ಲಿ ಒಂದು ಎಂದು ಪರಿಭಾವಿಸತಕ್ಕದ್ದು. ಮೈಸೂರು ಮುನಿಸಿಪಾಲಿಟಿಗಳ ಕಾಯ್ದೆಯ 303 ನೆಯ ಸೆಕ್ಷನ್ ಪ್ರಕಾರ ಮುಖ್ಯ ನಿಯಂತ್ರಣಾಧಿಕಾರಿಗಳಾಗಿರುವ ಡಿವಿಷನಲ್ ಕಮಿಷನರುಗಳನ್ನು ಹಾಗೂ ಜಿಲ್ಲಾಧಿಕಾರಿಗಳನ್ನು, ಯಾವುದೇ ದೂರುಗಳಿಗೆ ಆಸ್ಪದವಾಗದಂತೆ ಈ ಮೇಲಿನ ನಿರ್ದೇಶನಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ಕೋರಲಾಗಿದೆ. ಒಂದು ವೇಳೆ, ಈ ಮೇಲಿನ ನಿರ್ದೇಶನಗಳನ್ನು ಜಾರಿಗೆ ತರದಿದ್ದರೆ ಅದನ್ನು ತೀವ್ರವಾಗಿ ಪರಿಗಣಿಸಲಾಗುವುದು ಹಾಗೂ 1904 ರ ಮುನಿಸಿಪಲ್ ಕಾಯ್ದೆಯ 313 ನೆಯ ಪ್ರಕರಣ ನಿಬಂಧನೆಗಳನ್ನು ಅನ್ವಯ ಮಾಡುವುದೂ ಅಲ್ಲದೆ ಸದರಿ ಕಾಯ್ದೆಯ ನಿಬಂಧನೆಗಳ ಪ್ರಕಾರ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತದೆ.

ಪಿಂಚಣಿ ಯೋಜನೆ, ವಿಮೆ ಹಾಗೂ ಗ್ರಾಚುಯಿಟಿ ಯೋಜನೆಗಳು ಮುಂತಾದವುಗಳಿಗೆ ಸಂಬಂಧಪಟ್ಟಂತೆ ಸ್ಥಳೀಯ ಮಂಡಳಿಗಳ IV ನೇ ದರ್ಜೆ ನೌಕರರೂ ಸೇರಿದಂತೆ ನೌಕರರಿಗೆ ಅನ್ವಯವಾಗುವ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುತ್ತದೆ.

ಈ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಮೂರು ತಿಂಗಳ ಒಳಗಾಗಿ ತಪ್ಪದೆ ಸರ್ಕಾರಕ್ಕೆ ಸಲ್ಲಿಸಬೇಕು.

ಎನ್ ರಾಮಚಂದ್ರರಾವ್
ಸರ್ಕಾರದ ಉಪ–ಕಾರ್ಯದರ್ಶಿ
ಆರೋಗ್ಯ ಮತ್ತು ಮುನಿಸಿಪಲ್ ಆಡಳಿತ ಇಲಾಖೆ

ಇವರಿಗೆ:
ವಿಭಾಗಗಳ ಡಿವಿಷನಲ್ ಕಮಿಷನರುಗಳು,
ಜಿಲ್ಲೆಗಳ ಜಿಲ್ಲಾಧಿಕಾರಿಗಳು,
ಸಿಟಿ ಮುನಿಸಿಪಾಲಿಟಿಗಳ/ಟೌನ್ ಮುನಿಸಿಪಾಲಿಟಿಗಳ/ಅಧಿಸೂಚಿತ ಪ್ರದೇಶ ಸಮಿತಿಗಳ/ಹೊಸ ಪಟ್ಟಣ ಮಂಡಳಿಗಳು/ನೈರ್ಮಲ್ಯ ಮಂಡಳಿಗಳ ಅಧ್ಯಕ್ಷರು
ಮಹಾಲೇಖಪಾಲರು, ಬೆಂಗಳೂರು
ಕಂಟ್ರೋಲರ್, ರಾಜ್ಯ ಲೆಕ್ಕ ನಿಯಂತ್ರಣ ಇಲಾಖೆ, ಬೆಂಗಳೂರು
ಮಾಸಿಕ ಸಂಪುಟ

**ಮೈಸೂರು ಸರ್ಕಾರ**

ಮೈಸೂರು ಸರ್ಕಾರದ ಸಚಿವಾಲಯ

ನಂ. ಹೆಚ್ಎಂಎ 150 ಜಿಜಿಎಲ್ ಬೆಂಗಳೂರು, ದಿನಾಂಕ: 24 ಜುಲೈ 1972

**ಸುತ್ತೋಲೆ**

ವಿಷಯ: 25ನೆಯ ಸ್ವಾತಂತ್ರ್ಯ ದಿನಾಚರಣೆ ಸಮಾರಂಭ–ಕಸಗುಡಿಸುವವರಿಗೆ ಮತ್ತು ಇತರರಿಗೆ ಬಟ್ಟೆಗಳ ವಿತರಣೆ

1972ರ ಆಗಸ್ಟ್ 14 ರಂದು ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಗುವುದರಿಂದ ಈ ವರ್ಷದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಕ್ಕೆ ವಿಶೇಷ ಮಹತ್ವವಿದೆ. ಈ ಒಂದು ಅಪೂರ್ವ ಸಂದರ್ಭವನ್ನು ಬಡವ, ಬಲ್ಲಿದರಾದಿಯಾಗಿ ಎಲ್ಲ ಜನರೂ ಆಚರಿಸಬೇಕು ಹಾಗೂ ಹೃತ್ಪೂರ್ವಕವಾಗಿ ಮತ್ತು ಸ್ವಯಂ ಪ್ರೇರಿತರಾಗಿ ಭಾಗವಹಿಸಬೇಕು. ಈ ಅಪೂರ್ವ ಅವಕಾಶವನ್ನು ಬಳಸಿಕೊಂಡು, ಎಲ್ಲ ಸ್ಥಳೀಯ ಸಂಸ್ಥೆಗಳು, ಕಸಗುಡಿಸುವವರಿಗೆ ಹಾಗೂ ಅವರ ಮಕ್ಕಳಿಗೆ, ತಲಾ 20 ರೂಪಾಯಿ ಬೆಲೆ ಮೀರದಂತೆ ಬಟ್ಟೆಗಳನ್ನು ವಿತರಣೆ ಮಾಡಲು ಕೂಡಲೇ ಆವಶ್ಯಕ ಕ್ರಮ ಕೈಗೊಳ್ಳುವುದು ಅಪೇಕ್ಷಣೀಯವೆಂದು ಸರ್ಕಾರವು ಭಾವಿಸಿದೆ. ಆಯಾಯ ಸ್ಥಳೀಯ ಮಂಡಳಿಗಳು ಮುನಿಸಿಪಲ್ ನಿಧಿಯಿಂದ ಈ ಖರ್ಚನ್ನು ಭರಿಸಬಹುದು.

ಜಿ. ಸಿದ್ಧನಂಜಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಮುನಿಸಿಪಲ್ ಆಡಳಿತ ಇಲಾಖೆ

ಇವರಿಗೆ:

1. ವಿಭಾಗಗಳ ಡಿವಿಷನಲ್ ಕಮಿಷನರುಗಳು
2. ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ಮುನಿಸಿಪಲ್ ಕಮಿಷನರ್ಸ್/ಸಿಟಿ ಮುನಿಸಿಪಾಲಿಟಿಗಳ ಆಡಳಿತಗಾರರು/ . .. . .
4. ಮುನಿಸಿಪಾಲಿಟಿಗಳ/ನೈರ್ಮಲ್ಯ ಮಂಡಳಿಗಳ/ ಮತ್ತು ಪಟ್ಟಣ ಮಂಡಳಿಗಳ ಅಧ್ಯಕ್ಷರು
5. ವಾರದ ಗೆಜೆಟ್
6. ಸ್ಥಾಯೀ ರಕ್ಷಕ ಕಡತ
7. ಪ್ರೆಸ್ ಟೇಬಲ್

**ಮೈಸೂರು ಸರ್ಕಾರ**

ಮೈಸೂರು ಸರ್ಕಾರದ ಸಚಿವಾಲಯ
ನಂ. ಹೆಚ್ಎಂಎ 229 ಜಿಬಿಎಲ್ 72 ಬೆಂಗಳೂರು, ದಿನಾಂಕ: 30 ಮಾರ್ಚ್ 1973

**ಸುತ್ತೋಲೆ**

1972ರ ಸೆಪ್ಟೆಂಬರ್ 7 ರಂದು ಹಾಗೂ 8 ರಂದು ನವ ದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಎನ್ನುವ ಹೆಸರನ್ನು ಮುಂದುವರಿಸಬಾರದೆಂದು ತೀರ್ಮಾನಿಸಲಾಗಿದೆ. ಈ ಸಮ್ಮೇಳನದಲ್ಲಿ ಈ ವಿಷಯವನ್ನು ಸವಿವರವಾಗಿ ಚರ್ಚಿಸಲಾಗಿದೆ. ಕಸಗುಡಿಸುವವರು, ಜಾಡಮಾಲಿಗಳು ಎನ್ನುವ ಹೆಸರನ್ನು ಭಾರತದಾದ್ಯಂತ ಬದಲಾವಣೆ ಮಾಡಬೇಕೆಂದು ಸಹ ನಿರ್ಧರಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಪೌರಾಡಳಿತ ಮಂತ್ರಿಯವರು, ದೆಹಲಿಯಿಂದ ವಾಪಸು ಬಂದ ನಂತರ, ಇತರ ವಿಷಯಗಳ ಜೊತೆಗೆ ಕಸಗುಡಿಸುವವರು, ಜಾಡಮಾಲಿಗಳು ಎನ್ನುವ ಹೆಸರನ್ನು 'ಪೌರಕಾರ್ಮಿಕರು' ಎಂದು ಬದಲಾಯಿಸಲಾಗುತ್ತದೆಂದು ಪತ್ರಿಕಾ ಹೇಳಿಕೆ ಇತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳಿಗೆ, ಸ್ಥಳೀಯ ಮಂಡಳಿಗಳಿಗೆ ಹಾಗೂ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳಿಗೆ, "ಸ್ವೀಪರ್ಸ್ ಹಾಗೂ ಸ್ಕ್ಯಾವೆಂಜರ್ಸ್" ಎನ್ನುವ ಹೆಸರನ್ನು 'ಪೌರಕಾರ್ಮಿಕರು' ಎಂದರೆ ಮುನಿಸಿಪಲ್ ಕೆಲಸಗಾರ ಎಂದು ಬದಲಾಯಿಸಿಕೊಳ್ಳಬೇಕೆಂದು ಹಾಗೂ ಇನ್ನು ಮುಂದೆ ಇದೇ ಹೆಸರಿನಿಂದ ಕರೆಯಬೇಕೆಂದು ನಿರ್ದೇಶನ ನೀಡಲಾಗಿದೆ.

ಜಿ. ಸಿದ್ಧಗಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ

ಇವರಿಗೆ:

1. ವಿಭಾಗಗಳ ಡಿವಿಷನಲ್ ಕಮಿಷನರುಗಳು
2. ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ಕಾರ್ಪೊರೇಷನ್‌ಗಳ ಆಯುಕ್ತರು
4. ಅಧ್ಯಕ್ಷರು, ನಗರ ವಿಶ್ವಸ್ಥ ಮಂಡಳಿ, ಬೆಂಗಳೂರು/ಮೈಸೂರು
5. ಸಿಟಿ ಮುನಿಸಿಪಲ್ ಕೌನ್ಸಿಲ್/ಟೌನ್ ಮುನಿಸಿಪಲ್ ಕೌನ್ಸಿಲ್/ನೈರ್ಮಲ್ಯ ಮಂಡಳಿಗಳ/ಪಟ್ಟಣ ಮಂಡಳಿಗಳ/ ಅಧಿಸೂಚಿತ ಪ್ರದೇಶ ಸಮಿತಿಗಳ ಅಧ್ಯಕ್ಷರು
6. ವಾರದ ಗೆಜೆಟ್

**ಮೈಸೂರು ಸರ್ಕಾರದ ವ್ಯವಹರಣೆಗಳು**

ವಿಷಯ : ಸಿಟಿ ಮುನಿಸಿಪಲ್ ಕೌನ್ಸಿಲ್ ಬಳ್ಳಾರಿ – ಕನ್‌ಸರ್‌ವೆನ್ಸಿ ನೌಕರರಿಗೆ ಟವೆಲ್‌ಗಳು, ಬಾರ್ ಸೋಪ್‌ಗಳು ಮುಂತಾದವುಗಳ ಸರಬರಾಜು– ಮಂಜೂರಾತಿ ಕುರಿತು

ಆದೇಶ ಸಂಖ್ಯೆ: ಹೆಚ್ ಎಂಎ 48 ಟಿಎಂಎಂ 72 ಬೆಂಗಳೂರು, ದಿನಾಂಕ: ಮಾರ್ಚ್ 7 1973

**ಓದಿಕೊಳ್ಳಲಾಗಿದೆ:–**

ಗುಲ್ಬರ್ಗಾ ಡಿವಿಷನಲ್ ಕಮಿಷನರ್, ಗುಲ್ಬರ್ಗಾ ರವರ ಪತ್ರ ಸಂ: ಎಂಯುಎನ್/ಬಿಸಿಎಂ/ಎಸ್ ಎಬಿ/10/72–73 ದಿನಾಂಕ: 28 ಜೂನ್ 1973

**ಪ್ರಸ್ತಾವನೆ–**

ಬಳ್ಳಾರಿ ಸಿಟಿ ಮುನಿಸಿಪಲ್ ಕೌನ್ಸಿಲ್ 1972 ರ ಮಾರ್ಚ್ 30 ರಂದು ನಡೆದ ತನ್ನ ಸಭೆಯಲ್ಲಿ, 433 ಮುನಿಸಿಪಲ್ ಕನ್‌ಸರ್‌ವೆನ್ಸಿ ಕೆಲಸಗಾರರಿಗೆ ಖಾಯಮಾಗಿ ಕೊಡುವ ಆಧಾರದ ಮೇಲೆ ಈ ಮುಂದೆ ಹೇಳಿರುವ ಸಾಮಗ್ರಿಗಳನ್ನು ಎಂದರೆ,–

i) ಒಂದು ಪ್ರತಿ ತಿಂಗಳೂ ಪ್ರತಿಯೊಬ್ಬ ಕೆಲಸಗಾರನಿಗೆ ಅರ್ಧ ಬಾರ್ ಸೋಪ್

ii) ಪ್ರತಿ ವರ್ಷ ಪ್ರತಿಯೊಬ್ಬ ಪುರುಷ ಕೆಲಸಗಾರನಿಗೆ ಒಂದು ಜೊತೆ ಟವೆಲ್‌ಗಳು

iii) ಪ್ರತಿ ವರ್ಷ ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಜೊತೆ ಚಪ್ಪಲಿ

iv) (30) ಕಾಪೊಸ್ಟ್ ಯಾರ್ಡ್ ಕೆಲಸಗಾರರಿಗೆ ಗಂಬೂಟುಗಳು, ಸನ್ ಹ್ಯಾಟ್‌ಗಳು ಮತ್ತು ಗ್ಲೋವ್ಸ್

ಈ ವಿಷಯವನ್ನು ಸವಿವರವಾಗಿ ಚರ್ಚಿಸಿದ ನಂತರ ಸರ್ಕಾರವು ಬಳ್ಳಾರಿ ಮುನಿಸಿಪಲ್ ಕೌನ್ಸಿಲ್ ಕನ್‌ಸರ್‌ವೆನ್ಸಿ ಕೆಲಸಗಾರರಿಗೆ ಏನನ್ನು ಕೊಡಲು ಪ್ರಸ್ತಾವಿಸಿರುವುದೋ ಆ ಸಾಮಗ್ರಿಗಳು ಇತರ ಮುನಿಸಿಪಾಲಿಟಿಗಳಲ್ಲಿ, ಅಧಿಸೂಚಿತ ಪ್ರದೇಶಗಳಲ್ಲಿ ಹಾಗೂ ಕಾರ್ಪೊರೇಷನ್‌ಗಳಲ್ಲಿ ಇರುವ ಕನ್‌ಸರ್‌ವೆನ್ಸಿ ನೌಕರರಿಗೂ ಬೇಕಾಗುತ್ತದೆಂದು ಭಾವಿಸಿದೆ. ಅದರಂತೆ, ಈ ಮುಂದೆ ಹೇಳಿರುವ ಸಾಮಗ್ರಿಗಳನ್ನು ಎಂದರೆ–

(1) ಒಂದು ಪ್ರತಿ ತಿಂಗಳೂ ಪ್ರತಿಯೊಬ್ಬ ಕೆಲಸಗಾರನಿಗೆ ಅರ್ಧ ಬಾರ್ ಸೋಪ್

(2) ಪ್ರತಿ ವರ್ಷ ಪ್ರತಿಯೊಬ್ಬ ಪುರುಷ ಕೆಲಸಗಾರನಿಗೆ ಒಂದು ಜೊತೆ ಟವೆಲ್‌ಗಳು

(3) ಪ್ರತಿ ವರ್ಷ ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಜೊತೆ ಚಪ್ಪಲಿ

(4) ಪ್ರತಿ ವರ್ಷ ಕಾಪೊಸ್ಟ್ ಯಾರ್ಡ್ ಕೆಲಸಗಾರರಿಗೆ ಗಂಬೂಟುಗಳು, ಸನ್ ಹ್ಯಾಟ್‌ಗಳು ಮತ್ತು ಗ್ಲೋವ್ಸ್

v) ಪುರುಷ ಹಾಗೂ ಮಹಿಳಾ ಕೆಲಸಗಾರರಿಗೆ ಎರಡು ಜೊತೆ ಸಮವಸ್ತ್ರಗಳು – ಇವುಗಳನ್ನು ಆಯಾಯ ಮುನಿಸಿಪಾಲಿಟಿಗಳು, ಅಧಿಸೂಚಿತ ಪ್ರದೇಶಗಳು, ಸಮಿತಿಗಳು ಹಾಗೂ ಕಾರ್ಪೊರೇಷನ್‌ಗಳು, ಖರ್ಚುಗಳನ್ನು ಭರಿಸುವುದಕ್ಕೆ ಮುಂಚೆ, ಸ್ಪರ್ಧಾತ್ಮಕ ಟೆಂಡರುಗಳನ್ನು ಕರೆಯುವ ವಾಡಿಕೆಯ ಪ್ರಕ್ರಿಯೆಯನ್ನು ಅನುಸರಿಸಬೇಕೆಂಬ ಹಾಗೂ ಸರಬರಾಜು ಮಾಡಬೇಕಾದ ಸಾಮಗ್ರಿಗಳ ಬೆಲೆಯು ಮುನಿಸಿಪಲ್ ಕೌನ್ಸಿಲ್ ಮಂಜೂರು ಮಾಡಿದ ಶ್ರೇಣಿಯಲ್ಲಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು ತನ್ನ ಕನ್‌ಸರ್‌ವೆನ್ಸಿ ನೌಕರರಿಗೆ ಎಂದರೆ ಪುರುಷ ಹಾಗೂ ಮಹಿಳೆ

ಕೆಲಸಗಾರರಿಗೆ ಸರಬರಾಜು ಮಾಡಲು ಮಂಜೂರಾತಿ ನೀಡಲಾಗಿದೆ. ಇದಕ್ಕೆ ತಗಲುವ ಖರ್ಚು ವೆಚ್ಚಕ್ಕೆ ಮುನಿಸಿಪಾಲಿಟಿಯು ಪ್ರತಿ ವರ್ಷವೂ ತನ್ನ ಬಜೆಟ್ ನಲ್ಲಿ ಆವಶ್ಯಕ ಏರ್ಪಾಟು ಮಾಡಿಕೊಳ್ಳತಕ್ಕದ್ದು.

1961ರ ಮೈಸೂರು ಮುನಿಸಿಪಾಲಿಟಿಗಳ (ಖರ್ಚು ವೆಚ್ಚಗಳಿಗೆ ಅಧಿಕಾರ ನೀಡಿಕೆ) ನಿಯಮಗಳಿಗೆ ಆವಶ್ಯಕ ತಿದ್ದುಪಡಿಯನ್ನು ಪ್ರತ್ಯೇಕವಾಗಿ ಹೊರಡಿಸಲಾಗುತ್ತದೆ. ಸದರಿ ತಿದ್ದುಪಡಿಯನ್ನು ಹೊರಡಿಸುವ ತನಕ, ಮುನಿಸಿಪಾಲಿಟಿಗಳು, ಅಧಿಸೂಚಿತ ಪ್ರದೇಶಗಳ ಸಮಿತಿಗಳು ಮುಂತಾದವು, ಸಮವಸ್ತ್ರವನ್ನು ಹೊರತುಪಡಿಸಿ ಇತರ ಸಾಮಗ್ರಿಗಳ ಸರಬರಾಜಿಗೆ ಖರ್ಚನ್ನು ಭರಿಸಲು ಸದರಿ ನಿಯಮಗಳಲ್ಲಿ ಈಗಾಗಲೇ ಅವಕಾಶ ಇರುವುದರಿಂದ ಆ ಇತರ ಸಾಮಗ್ರಿಗಳ ಸರಬರಾಜಿಗೆ ತಗಲುವ ಖರ್ಚನ್ನು ಭರಿಸತಕ್ಕದ್ದು.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಕೆ. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ

ಇವರಿಗೆ:

1. ವಿಭಾಗಗಳ ಡಿವಿಷನಲ್ ಕಮಿಷನರುಗಳು
2. ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ರಾಜ್ಯದಲ್ಲಿರುವ ಎಲ್ಲ ಮುನ್ಸಿಪಾಲಿಟಿಗಳ ಮುಖ್ಯಾಧಿಕಾರಿಗಳು
4. ಅಧ್ಯಕ್ಷರು, ಅಧಿಸೂಚಿತ ಪ್ರದೇಶಗಳು
5. ಕಾರ್ಪೊರೇಷನ್‌ಗಳ ಆಯುಕ್ತರು
6. ಕಂಟ್ರೋಲರ್, ರಾಜ್ಯ ಲೆಕ್ಕಪತ್ರಗಳ ಇಲಾಖೆ, ಬೆಂಗಳೂರು

ಪ್ರತಿಯನ್ನು–

2. ವಾರದ ಗೆಜೆಟ್

(3) ಸ್ಥಾಯೀ ಗಾರ್ಡ್ ಫೈಲ್

**ಮೈಸೂರು ಸರ್ಕಾರ**

ಮೈಸೂರು ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

**ಸುತ್ತೋಲೆ**

ಸಂ: ಹೆಚ್‌ಎಂಎ 21 ಜಿಜಿಎಲ್ 73 ಬೆಂಗಳೂರು, ದಿನಾಂಕ: 21 ಮಾರ್ಚ್ 1973

**ವಿಷಯ:** – ಮಾನವ ಘನತೆ ವರ್ಷ 1973

1. ಮಲವನ್ನು ತಲೆ ಮೇಲೆ ಹೊತ್ತು ಸಾಗಿಸುವ ಹಾಗೂ ಮಲವನ್ನು ಕೈಯಿಂದ ಯಾವುದೇ ರೀತಿಯಲ್ಲಿ ತೆಗೆದು ಸಾಗಿಸುವ ತೀರಾ ಹಳೆಯ, ಹೇಸಿಗೆಯ ಹಾಗೂ ಅನಾರೋಗ್ಯಕರ ಪದ್ಧತಿಯನ್ನು 1973ರ ಆಗಸ್ಟ್ 15 ರ ಹೊತ್ತಿಗೆ ನಿರ್ಮೂಲನೆ ಮಾಡಲು ಸರ್ಕಾರವು ತೀರಾ ಉತ್ಸುಕವಾಗಿದೆ.
2. 1972ರಲ್ಲಿ, 25 ನೆಯ ಸ್ವಾತಂತ್ರ್ಯ ದಿನಾಚರಣೆಯ ಜಯಂತಿ ಸಂದರ್ಭದಲ್ಲಿ, ಆ ವರ್ಷದಲ್ಲಿ ಯಾವ ಯಾವ ಕಾರ್ಯಕ್ರಮಗಳಿಗೆ ಮೊದಲ ಆದ್ಯತೆ ಕೊಟ್ಟು ಕಾರ್ಯರೂಪಕ್ಕೆ ತರಬೇಕೆಂದು ಹೇಳಲಾಗಿತ್ತೋ ಆ ಕೆಲವು ಕಾರ್ಯಗಳನ್ನು ಸುತ್ತೋಲೆ ಸಂ: ಹೆಚ್‌ಎಂಎ 151 ಜಿಜಿಎಲ್ 72 ದಿನಾಂಕ: 26 ಜುಲೈ 1972ರಲ್ಲಿ ಸೂಚಿಸಲಾಗಿತ್ತು. ಆ ಕಾರ್ಯಕ್ರಮಗಳಲ್ಲಿ (i) ನೀರು ಹಾಕಿ ಸ್ವಚ್ಛಗೊಳಿಸುವ ಶೌಚಾಲಯಗಳನ್ನು ಫ್ಲಷ್‌ಔಟ್ ಶೌಚಾಲಯಗಳನ್ನಾಗಿ ಪರಿವರ್ತಿಸುವುದಕ್ಕೆ ಮತ್ತು (ii) ನೀರು ಹಾಕಿ ಸ್ವಚ್ಛಗೊಳಿಸುವ ಶೌಚಾಲಯಗಳನ್ನು ಇನ್ನು ಮುಂದೆ ನಿರ್ಮಿಸಬಾರದೆನ್ನುವುದಕ್ಕೆ, ಇವು ಬಲು ಮುಖ್ಯವಾದವುಗಳಾದ್ದರಿಂದ, ಒತ್ತು ಕೊಡಲಾಗಿತ್ತು.
3. ರಾಜ್ಯದಲ್ಲಿರುವ ಕೆಲವು ಸ್ಥಳೀಯ ಸಂಸ್ಥೆಗಳು ಶ್ಲಾಘನೀಯ ಪ್ರಯತ್ನಗಳನ್ನು ಮಾಡಿವೆ. ಆದರೆ, ಪ್ರಯತ್ನಗಳು ಸಾಕಷ್ಟಾಗಿಲ್ಲ ಅಥವಾ ಯಾವ ವೇಗದಲ್ಲಿ ಈ ಕೆಲಸ ಆಗಬೇಕಿತ್ತೋ ಆ ವೇಗದಲ್ಲಿ ಸಂದರ್ಭ ತೀವ್ರತೆಗನುಸಾರ ಆಗಿಲ್ಲ. ಇದಕ್ಕೆ ಸಂಬಂಧಪಟ್ಟಂತೆ, ವಿಭಾಗಗಳ ಡಿವಿಷನಲ್ ಕಮಿಷನರ್ ಗಳಿಗೆ ಹಾಗೂ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಇತರ ವಿಷಯಗಳ ಜೊತೆಗೆ ಈ ಮೇಲಿನ ಸೂಚನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದಷ್ಟೇ ಅಲ್ಲ, ಅಡೆತಡೆಯಾಗದಂತೆ ಮುನಿಸಿಪಾಲಿಟಿಗಳು ಪ್ರಗತಿ ಸಾಧಿಸುವ ಸಲುವಾಗಿ, ಮುನಿಸಿಪಾಲಿಟಿಗಳ ಈಗಿನ ಬೈಲಾಗಳಲ್ಲಿ ಯಾವುವಾದರೂ ನಿಬಂಧನೆಗಳನ್ನು ಸೇರಿಸಬೇಕಾಗುತ್ತದೆಯೇ ಎಂಬುದನ್ನು ಗಮನಿಸಬೇಕೆಂದು ನಿರ್ದೇಶನ ನೀಡಲಾಗಿತ್ತು. ಈ ವಿಷಯದಲ್ಲಿ ಕಣ್ಣಿಗೆ ಕಾಣುವಂತಹ ಯಾವ ಪ್ರಯತ್ನಗಳನ್ನೂ ಈವರೆಗೆ ಮಾಡಿಲ್ಲವೆಂದು ಕಾಣುತ್ತದೆ.
4. ಮಾನವ ಘನತೆ, ಗೌರವದ ದೃಷ್ಟಿಯಿಂದ, ಈ ಕಾರ್ಯಕ್ರಮ ಬೇಗ ಆಗುವಂತೆ ಮಾಡುವ ಸಲುವಾಗಿ ಪೌರಾಡಳಿತದ ಸಂಬಂಧಪಟ್ಟ ಅಧಿಕಾರಿಗಳಷ್ಟೇ ಅಲ್ಲ ಅಧಿಕಾರೇತರರೂ ಕೂಡ ಈ ಕಾರ್ಯಕ್ರಮಕ್ಕೆ ಅಗತ್ಯವಾದ ಚಾಲನೆ ನೀಡುವುದು ಆವಶ್ಯಕ. ಈ ಸಂದರ್ಭದಲ್ಲಿ, ಈ ಕಾರ್ಯಕ್ರಮವು ಜನಪ್ರಿಯವಾಗಲು ಹಾಗೂ ಅದರಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜನರು ಭಾಗವಹಿಸುವಂತಾಗಲು ಈ ಮುಂದೆ ಹೇಳಿರುವ ಮಾರ್ಗದರ್ಶನಗಳನ್ನು ನೀಡಲಾಗಿದೆ.
    (i) ಪ್ರತಿಯೊಂದು ನೈರ್ಮಲ್ಯ ಪಾಯಿಖಾನೆಯು ವಾಟರ್–ಕ್ಲೊಸೆಟ್ ರೀತಿಯದಾಗಿರಬೇಕು. ಮನೆಯ ಮಾಲೀಕನು ಅಥವಾ ಮನೆಯ ಸ್ವಾಧೀನಾನುಭವದಾರನು ಸ್ಥಳೀಯ ಪ್ರದೇಶದಲ್ಲಿ ಚರಂಡಿ ಇದ್ದರೆ ಆ ಚರಂಡಿಗೂ ಅದಕ್ಕೂ ಸಂಪರ್ಕ ಕಲ್ಪಿಸಬೇಕು. ಇಂತಿಷ್ಟು ಅವಧಿಯಲ್ಲಿ ಸಂಪರ್ಕ ಕಲ್ಪಿಸಬೇಕೆಂದು ಆ ಎಲ್ಲರಿಗೂ ನೋಟೀಸು ಮೂಲಕ ನಿರ್ದೇಶನ ನೀಡಬೇಕು.

(ii) ಮನೆಯ ಮಾಲೀಕನಾಗಲೀ ಅಥವಾ ಅದರ ಸ್ವಾಧೀನಾನುಭವದಾರನಾಗಲೀ ಸಂಪರ್ಕವನ್ನು ಕಲ್ಪಿಸಲು ತಪ್ಪಿದರೆ, ಮುನಿಸಿಪಲ್ ಕೌನ್ಸಿಲ್ ಸ್ವತಃ ಖರ್ಚು ಮಾಡಿ ಸಂಪರ್ಕ ಕಲ್ಪಿಸಬೇಕು ಮತ್ತು ಆ ಖರ್ಚನ್ನು ಅದು ತೆರಿಗೆ ಬಾಕಿ ಎಂಬಂತೆ ಮನೆಯ ಮಾಲೀಕನಿಂದ ಅಥವಾ ಅದರ ಸ್ವಾಧೀನದಲ್ಲಿರುವವನಿಂದ ವಸೂಲಿ ಮಾಡಿಕೊಳ್ಳಬೇಕು.

(iii) ಒಳ ಚರಂಡಿಯೇನಾದರೂ ಇದ್ದರೆ, ಪ್ರತಿದಿನವೂ ಅದಕ್ಕೆ ಹರಿಸುವ ವ್ಯವಸ್ಥೆ ಮಾಡಬೇಕು. ಒಳ ಚರಂಡಿಗೂ ಶೌಚಾಲಯಕ್ಕೂ ಸಂಪರ್ಕವನ್ನು ಮನೆ ಮಾಲೀಕರು ಕಲ್ಪಿಸುವುದು ಕಡ್ಡಾಯವೆಂದು ಹೇಳಬೇಕು. ಅಂಥ ಸ್ಥಳಗಳಲ್ಲಿ, ಕಟ್ಟಡ ಲೈಸೆನ್ಸ್ ಮಂಜೂರು ಮಾಡುವುದಕ್ಕೂ ಮೊದಲು ಇದನ್ನು ಪೂರ್ವಭಾವಿ ಷರತ್ತನ್ನಾಗಿ ವಿಧಿಸಬೇಕು. ಯಾರೇ ವ್ಯಕ್ತಿ ಈ ಸೂಚನೆಗಳನ್ನು ಉಲ್ಲಂಘಿಸಿದರೆ, ಕಾನೂನು ಪ್ರಕಾರ ದಂಡ ವಿಧಿಸಬೇಕು.

(iv) ಒಳ ಚರಂಡಿ ಇರದಿದ್ದರೆ ಸೆಪ್ಟಿಕ್ ಟ್ಯಾಂಕ್‌ಗೆ ಏರ್ಪಾಡು ಮಾಡಿ ಡ್ರೈ ಶೌಚಾಲಯಗಳನ್ನು ಒಂದು ನಿರ್ದಿಷ್ಟ ಕಾಲಾವಧಿಯೊಳಗೆ ವಾಟರ್ ಶೌಚಾಲಯಗಳನ್ನಾಗಿ ಮನೆ ಮಾಲೀಕರು ಪರಿವರ್ತಿಸುವುದು ಕಡ್ಡಾಯ ವೆಂದು ಹೇಳಬೇಕು. ಯಾರಾದರೂ ಈ ಸೂಚನೆಯನ್ನು ಉಲ್ಲಂಘಿಸಿದರೆ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ದಂಡ ವಿಧಿಸಬೇಕು.

(v) ವಾಟರ್ ಕ್ಲೊಸೆಟ್‌ನ್ನು ಕಲ್ಪಿಸದಿದ್ದರೆ, ಕಟ್ಟಡದ ನಿರ್ಮಾಣಕ್ಕೆ, ಕಟ್ಟಡದಲ್ಲಿ ಬದಲಾವಣೆ ಮಾಡುವುದಕ್ಕೆ ಅಥವಾ ಕಟ್ಟಡದಲ್ಲಿ ಸೇರ್ಪಡೆ ಮಾಡುವುಕ್ಕೆ ಲೈಸೆನ್ಸ್‌ನ್ನು ಕೊಡಲೇಬಾರದು.

(vi) ನಿರ್ದಿಷ್ಟ ಕಾಲಾವಧಿಯೊಳಗೆ ಮಾಲೀಕನಾಗಲಿ/ಸ್ವಾಧೀನಾನುಭವ ದಾರನಾಗಲೀ ಈ ಕಾರ್ಯ ಮಾಡಲು ತಪ್ಪಿದರೆ, ಮುನಿಸಿಪಾಲಿಟಿಯ ಖರ್ಚಿನಲ್ಲಿ ಮುನಿಸಿಪಲ್ ಕಮಿಷನರ್/ಚೀಫ್ ಆಫೀಸರ್ ಈ ಕಾರ್ಯ ಮಾಡಿಸಬೇಕು. ಇದಕ್ಕೆ ತಗುಲಿದ ಖರ್ಚನ್ನು, ತೆರಿಗೆ ಬಾಕಿ ಎಂಬಂತೆ ಆ ಮಾಲೀಕನಿಂದ/ಸ್ವಾಧೀನಾನುಭವದಾರನಿಂದ ವಸೂಲಿ ಮಾಡಿಕೊಳ್ಳಬೇಕು. ಮುನಿಸಿಪಾಲಿಟಿಯು ಸಾಕಷ್ಟು ಹಣಕಾಸು ಇರದ ಬಡವರ ಹಾಗೂ ಅರ್ಹರ ಮನೆಗೆ ಸಂಪರ್ಕ ಕೊಳವೆಗಳ ಮೂಲಕ ಪೋರ್ಸಿಲೀನ್ ಸಂಪರ್ಕ ಕಲ್ಪಿಸಲು ಇಚ್ಛಿಸಿದರೆ ಮುನಿಸಿಪಾಲಿಟಿಯು ಉಚಿತವಾಗಿ ಸಂಪರ್ಕ ಕಲ್ಪಿಸಿ ಕೊಡಬೇಕು. ಆದರೆ, ಪ್ರತಿಯೊಂದಕ್ಕೂ ತಗಲುವ ಖರ್ಚು 50 ರೂಪಾಯಿಗೆ ಮಾತ್ರ ಸೀಮಿತವಾಗಿರತಕ್ಕದ್ದು.

(vii) ಈ ಸೆಸ್‌ಪೂಲ್ ಗಳಿಗೆ ರೊಚ್ಚು ಹರಿದು ಹೋಗುವಂತಿರಬಾರದು.

ಈ ಮೇಲಿನ ಮಾರ್ಗದರ್ಶನಗಳಿಗೆ ಅನುಸಾರವಾಗಿ ಅತ್ಯುತ್ತಮ ಕಾರ್ಯನಿರ್ವಹಣೆ ಮಾಡಿದ್ದಕ್ಕಾಗಿ ಮುನಿಸಿಪಾಲಿಟಿಗೆ ಕೊಡುವ ಸೂಚ್ಯಂಕವನ್ನು ಮುನಿಸಿಪಾಲಿಟಿಯು ತನ್ನ ಪ್ರದೇಶದಲ್ಲಿ ಯಾವ ರೀತಿಯಲ್ಲಿ ನೈರ್ಮಲ್ಯ ನಿರ್ವಹಣೆ ಕೆಲಸ ಮಾಡಿರುವುದರ ಆಧಾರದ ಮೇಲೆ ಅದರಲ್ಲೂ ಮುಖ್ಯವಾಗಿ, ಚರಂಡಿ ಇರುವ ಕಡೆ ನೈರ್ಮಲ್ಯ ಪಾಯಿಖಾನೆಗೆ ಸಂಬಂಧಿಸಿದ ಕಾರ್ಯವನ್ನು, ಚರಂಡಿ ಇಲ್ಲದ ಕಡೆ ಸೆಸ್ ಪೂಲ್ ಏರ್ಪಾಟಿಗೆ ಸಂಬಂಧಿಸಿದ ಕಾರ್ಯವನ್ನು ಯಾವ ರೀತಿಯಲ್ಲಿ ಮಾಡಿರುವುದರ ಆಧಾರ ಮೇಲೆ ನಿರ್ಧರಿಸಲಾಗುತ್ತದೆ.

5. ಈ ಮೇಲಿನ ಮಾರ್ಗದರ್ಶನಗಳು ಸ್ಥಳೀಯ ಪ್ರದೇಶದಲ್ಲಿ ಸರ್ಕಾರದ ಹಲವಾರು ಇಲಾಖೆಗಳು ನಿರ್ವಹಿಸುತ್ತಿರುವ ಸಾರ್ವಜನಿಕ ಸಂಸ್ಥೆಗಳಿಗೂ ಅನ್ವಯವಾಗುತ್ತವೆ. ಆ ಸಂಸ್ಥೆಗಳು ಸಂದರ್ಭಾನುಸಾರ ನೈರ್ಮಲ್ಯ ಪಾಯಿಖಾನೆಗಳನ್ನು ಅಥವಾ ಸೆಸ್‌ಪೂಲ್ ಗಳನ್ನು

ಒದಗಿಸಲು ತಪ್ಪಿದರೆ, ಹೇಗೆ, ಮನೆಗಳ ಮಾಲೀಕರ/ಸ್ವಾಧೀನಾನುಭವದಾರರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೋ ಹಾಗೆಯೇ ಆ ಸಂಸ್ಥೆಗಳ ಬಗ್ಗೆಯೂ ಕ್ರಮ ಕೈಗೊಳ್ಳಲಾಗುತ್ತದೆ ಮತ್ತು ಆ ತಪ್ಪಿಗೆ, ಆ ಸಂಸ್ಥೆಗಳ ನಿರ್ವಹಣೆಯ ಪ್ರಭಾರದಲ್ಲಿರುವ ಅಧಿಕಾರಿಗಳನ್ನು ವೈಯಕ್ತಿಕ ಹೊಣೆಗಾರರೆಂದು ಪರಿಗಣಿಸಲಾಗುತ್ತದೆ.

6. ಎಲ್ಲ ಸರ್ಕಾರಿ ಕಟ್ಟಡಗಳಿಗೆ ಸಂಬಂಧಪಟ್ಟಂತೆಯೂ, ಲೋಕೋಪಯೋಗಿ ಇಲಾಖೆಯು ಮೇಲೆ ಹೇಳುವ ಕ್ರಮಗಳನ್ನು ಎಲ್ಲೆಲ್ಲಿ ಆವಶ್ಯಕವೋ, ಅಲ್ಲೆಲ್ಲಾ ತೆಗೆದುಕೊಂಡು ಮೇಲಿನ ಉದ್ದೇಶ ಈಡೇರುವಂತೆ ಮಾಡಬೇಕು. ಇದು ಸರ್ಕಾರದ ಪರಮ ಧ್ಯೇಯ. ತಲೆ ಮೇಲೆ ಮಲ ಹೊತ್ತು ಸಾಗಿಸುವ ಹೇಸಿಗೆಯ ಪದ್ಧತಿಯನ್ನು ಅದೇನೇ ಆಗಲಿ, 1973ರ ಆಗಸ್ಟ್ 15 ರ ಹೊತ್ತಿಗೆ ಮೂಲೋತ್ಪಾಟನೆ ಮಾಡಬೇಕೆಂಬುದು ಸರ್ಕಾರದ ಅಚಲ ದೃಢ ನಿರ್ಧಾರ.
7. ಸಿಟಿ ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟಂತೆ, ವಿಭಾಗಗಳ ಡಿವಿಷನಲ್ ಕಮಿಷನರ್ ಗಳು ಹಾಗೂ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳಿಗೆ ಸಂಬಂಧಪಟ್ಟಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಈ ಪ್ರಮುಖ ಕಾರ್ಯಕ್ಕೆ ಗಮನ ಕೇಂದ್ರೀಕರಿಸಬೇಕು ಹಾಗೂ ಈ ಗುರಿಯು ಗೊತ್ತುಪಡಿಸಿರುವ ಕಾಲಾವಧಿಯೊಳಗೇ ಈಡೇರುವಂತೆ ನೋಡಿಕೊಳ್ಳಬೇಕು ಮತ್ತು ಈ ಕಾರ್ಯವನ್ನು ನಿರ್ದಿಷ್ಟ ಗುರಿ ಸಾಧನೆಗಾಗಿ ನಡೆಯುವ ಕಾರ್ಯವೆಂದು ಭಾವಿಸಿ ಹುರುಪು ಹುಮ್ಮಸ್ಸಿನಿಂದ ಮಾಡಬೇಕು. ಯಾವುದೇ ಮುನಿಸಿಪಾಲಿಟಿಯು, ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಕಾರ್ಯನಿರ್ವಹಣೆ ಮಾಡಲು ತಪ್ಪಿದರೆ, ಮತ್ತು ಈ ಸೂಚನೆಗಳನ್ನು 1973 ರ ಆಗಸ್ಟ್ 15 ರ ಹೊತ್ತಿಗೆ ಕಾರ್ಯರೂಪಕ್ಕೆ ತರಲು ತಪ್ಪಿದರೆ, ತಪ್ಪಿದ ಮುನಿಸಿಪಾಲಿಟಿಯ ವಿರುದ್ಧ ರದ್ದು ಮಾಡುವುದೂ ಸೇರಿದಂತೆ ಅತಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಹಿಂಜರಿಯುವುದಿಲ್ಲ.
8. ಪ್ರತಿಯೊಂದು ಮುನಿಸಿಪಾಲಿಟಿಯು, ಮೇಲಿನ ಸೂಚನೆಗಳನ್ನು ತಾನು ಕಾರ್ಯರೂಪಕ್ಕೆ ತಂದಿರುವ ಬಗ್ಗೆ ಪ್ರತಿ ತಿಂಗಳ 10 ರಂದು ಅಥವಾ ಆ ದಿನಕ್ಕೂ ಮುಂಚೆ ಸರ್ಕಾರದ ಮಾಹಿತಿಗಾಗಿ ಮಾಸಿಕ ವರದಿಗಳನ್ನು ರವಾನಿಸತಕ್ಕದ್ದು.

ಎನ್ ರಾಮಚಂದ್ರರಾವ್
ಸರ್ಕಾರದ ಉಪ ಕಾರ್ಯದರ್ಶಿ
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ

ಇವರಿಗೆ–

1. ವಿಭಾಗಗಳ ಡಿವಿಷನಲ್ ಕಮಿಷನರುಗಳು
2. ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ನಗರ ಮುನಿಸಿಪಲ್ ಕೌನ್ಸಿಲ್/ಪಟ್ಟಣ ಮುನಿಸಿಪಲ್ ಕೌನ್ಸಿಲ್‌ಗಳ ಆಯುಕ್ತರು
4. ಕಂಟ್ರೋಲರ್, ರಾಜ್ಯ ಲೆಕ್ಕಪತ್ರಗಳ ಇಲಾಖೆ, ಬೆಂಗಳೂರು
5. ನಗರ ಮತ್ತು ಪಟ್ಟಣ ಮುನಿಸಿಪಾಲಿಟಿಗಳು/ಪಟ್ಟಣ ಮಂಡಳಿಗಳು ಮತ್ತು ನೈರ್ಮಲ್ಯ ಮಂಡಳಿಗಳ ಅಧ್ಯಕ್ಷರು
6. ವಾರದ ಗೆಜೆಟ್

**ಮೈಸೂರು ಸರ್ಕಾರ**

ಮೈಸೂರು ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು
ನಂ: ಹೆಚ್‌ಎಂಎ 237 ಜಿಜಿಎಲ್ 72 ದಿನಾಂಕ: 22 ಜೂನ್ 1973

**ಸುತ್ತೋಲೆ**

ವಿಷಯ : ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸಿ ಮುನಿಸಿಪಾಲಿಟಿಗಳ ಬಜೆಟ್ಟಿನಲ್ಲಿ ಶೇ 18 ರಷ್ಟನ್ನು ಮೀಸಲಿಡುವುದು

ಸರ್ಕಾರವು ರಾಜ್ಯದ ವಿಭಾಗಗಳ ಡಿವಿಷನಲ್ ಕಮಿಷನರುಗಳಿಗೆ ಮತ್ತು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಹಾಗೂ ಮುನಿಸಿಪಾಲಿಟಿಗಳ ಅಧ್ಯಕ್ಷರುಗಳಿಗೆ, ಅವರವರ ಕ್ಷೇತ್ರಾಧಿಕಾರ ವ್ಯಾಪ್ತಿಯೊಳಗಿರುವ ಪರಿಶಿಷ್ಟ ಜಾತಿಯವರಿಗೆ ಮತ್ತು ಪರಿಶಿಷ್ಟ ಪಂಗಡದವರಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸುವ ಕುರಿತು ಕಾಲಕಾಲಕ್ಕೆ ಸೂಚನೆಗಳನ್ನು ನೀಡಿದೆ. ಆದರೂ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಕಲ್ಪಿಸಿದ ಕಲ್ಯಾಣ ಕ್ರಮಗಳು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರಬೇಕೆಂದು ಆಶಿಸಲಾಗಿತ್ತೋ ಆ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿಲ್ಲವೆಂದು ಸರ್ಕಾರವು ಭಾವಿಸಿದೆ. ಪರಿಶಿಷ್ಟ ಜಾತಿಗಳವರಿಗೆ ಮತ್ತು ಪರಿಶಿಷ್ಟ ಪಂಗಡಗಳವರಿಗೆ ಸಂವಿಧಾನದಲ್ಲಿ ಖಾತ್ರಿಪಡಿಸಿರುವ ಸಾಂವಿಧಾನಿಕ ರಕ್ಷಣೆಗಳು 1970 ನೆಯ ಇಸವಿ ಮುಗಿದ ನಂತರ ನಿಂತು ಹೋಗುವುದರಿಂದ ಪರಿಶಿಷ್ಟ ಜಾತಿಗಳನ್ನು ಹಾಗೂ ಪರಿಶಿಷ್ಟ ಪಂಗಡಗಳವರನ್ನು ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಮುಂದುವರಿದ ಸಮುದಾಯಗಳ ಮಟ್ಟಕ್ಕೆ ತರಲು ಸರ್ಕಾರ ಬದ್ಧವಾಗಿದೆಯೆಂಬುದನ್ನು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಹಿಂದಿನ ಅನುಭವವನ್ನು ಪರಾಮರ್ಶಿಸಿದರೆ, ಯಾವ ಬಡಾವಣೆಗಳಲ್ಲಿ ಬಡವರು ವಾಸವಾಗಿದ್ದಾರೋ ಅಲ್ಲಿಗೆ ಮುನಿಸಿಪಾಲಿಟಿಗಳ ಸಾಕಷ್ಟು ಗಮನ ಕೊಟ್ಟಿಲ್ಲದಿರುವುದು ಹಾಗೂ ಅಭಿವೃದ್ಧಿಗಾಗಿ ಸರ್ಕಾರವು ಮಂಜೂರು ಮಾಡಿದ ಅನುದಾನಗಳನ್ನು, ಬಡ ಜನರಿಗೆ ಸಮರ್ಪಕ ಸೌಕರ್ಯಗಳನ್ನು ಒದಗಿಸಬೇಕೆಂಬ ಸರ್ಕಾರದ ಸೂಚನೆಗಳನ್ನು ತೀರಾ ಕಡೆಗಣಿಸಿ ಗಾಳಿಗೆ ತೂರಿ ಸ್ಥಿತಿವಂತರು ಮತ್ತು ಪ್ರಭಾವಿ ಜನರು ಯಾವ ಬಡಾವಣೆಗಳಲ್ಲಿ ವಾಸಿಸುತ್ತಿದ್ದಾರೋ ಆ ಬಡಾವಣೆಗಳಿಗಾಗಿ ಬಳಸುತ್ತಿರುವುದು ಕಂಡು ಬಂದಿದೆಯೇ ಹೊರತು ಮುನಿಸಿಪಾಲಿಟಿಗಳು ಈ ವಿಷಯದಲ್ಲಿ ಗಣನೀಯವಾಗಿ ಸ್ಪಂದಿಸಿಲ್ಲ.

ಹಾಗಾಗಿ, ಈ ಮುಂದೆ ಹೇಳಿರುವ ಕ್ರಮಗಳನ್ನು ಈ ಕೂಡಲೇ ಅಳವಡಿಸಿಕೊಳ್ಳಬೇಕೆಂದು ಈ ಮೂಲಕ ನಿರ್ದೇಶನ ನೀಡಲಾಗಿದೆ:

(1) ನಾಗರಿಕ ಸೌಕರ್ಯಕ್ಕಾಗಿ ಮತ್ತು ಇತರೆ ಕಡ್ಡಾಯ ಕಾರ್ಯಗಳಿಗಾಗಿ ಮುನಿಸಿಪಾಲಿಟಿಗಳಿಗೆ ನಿಗದಿಪಡಿಸಿರುವ ಒಟ್ಟು ಬಜೆಟ್ಟಿನಲ್ಲಿ ಶೇಕಡಾ 18 ರಷ್ಟನ್ನು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಡತಕ್ಕದ್ದು ಹಾಗೂ ಅವರುಗಳಿಗೆ ಪ್ರಯೋಜನಕಾರಿಯಾದ ಯೋಜನೆಗಳನ್ನು ಅವರವರ ಸ್ಥಳೀಯ ಪ್ರದೇಶಗಳಲ್ಲಿ ಅವರುಗಳ ಕಲ್ಯಾಣಕ್ಕಾಗಿ ಕಾರ್ಯರೂಪಕ್ಕೆ ತರತಕ್ಕದ್ದು.

(2) ಏನಾದರೊಂದು ಕಾರಣಕ್ಕಾಗಿ ಒಂದು ನಿರ್ದಿಷ್ಟ ವರ್ಷದಲ್ಲಿ ಯಾವುದೇ ಮೊತ್ತ ಬಳಕೆಯಾಗದೆ ಉಳಿದರೆ, ಆ ಉಳಿದ ಮೊತ್ತವನ್ನು ಮುಂದಿನ ವರ್ಷಕ್ಕೆ, ಆ ಮುಂದಿನ ವರ್ಷದ ಬಜೆಟ್ಟಿನಲ್ಲಿ ಒದಗಿಸಿದ ಶೇಕಡಾ 18 ರಷ್ಟು ಹಣದ ಜೊತೆಗೆ, ಪೂರ್ತಿಯಾಗಿ ಬಳಕೆ ಮಾಡಲು ಒಯ್ಯತಕ್ಕದ್ದು.

ಇಡೀ ಸಮುದಾಯದ ಸಾಮಾನ್ಯ ಪ್ರಯೋಜನಕ್ಕಾಗಿ ಉದ್ದೇಶಿಸಿರುವ ನಿಧಿಗಳನ್ನು ಸಹ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಆದ್ಯತೆ ಕೊಡುವಂತಹ ರೀತಿಯಲ್ಲಿ ಖರ್ಚು ಮಾಡಬೇಕು. ಅಲ್ಲದೆ, ಸುರಕ್ಷಿತ ನೀರು ಪೂರೈಕೆ, ಒಳ ಚರಂಡಿ, ದೀಪದ ವ್ಯವಸ್ಥೆ, ಶೈಕ್ಷಣಿಕ ಸಂಸ್ಥೆಗಳು, ರಸ್ತೆಗಳು ಮತ್ತು ಅಂಥವೇ ಇತರ ನಾಗರಿಕ ಸೌಕರ್ಯಗಳಂತಹ ಮುನಿಸಿಪಾಲಿಟಿಗಳ ಸ್ವತ್ತುಗಳನ್ನು ಪರಿಶಿಷ್ಟ ಜಾತಿಗಳಿಗೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಗಣನೀಯವಾಗಿ ಪ್ರಯೋಜನವಾಗುವಂತಹ ರೀತಿ ಜಾಗಗಳಲ್ಲಿ ಕಲ್ಪಿಸಬೇಕು.

ಜಿ. ಸಿದ್ಧನಂಜಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಪೌರಾಡಳಿತ ಇಲಾಖೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು

ನಂ. ಡಿಪಿಸಿ 24 ಬಿಟಿಎಕ್ಸ್ 73, ದಿನಾಂಕ 21 ನವೆಂಬರ್ 1973

**ಸುತ್ತೋಲೆ**

ವಿಷಯ: ಹೊಟೇಲುಗಳಲ್ಲಿ ಹರಿಜನರಿಗೆ ಆಹಾರ ಮತ್ತು ಪಾನೀಯಗಳನ್ನು ಬಡಿಸುವುದು

ಸಂಸತ್ತಿನ ಜಂಟಿ ಸಮಿತಿಯು ಅಸ್ಪೃಶ್ಯತೆ ಸಮಸ್ಯೆಗಳ ಅಧ್ಯಯನಕ್ಕಾಗಿ ಕರ್ನಾಟಕ ರಾಜ್ಯಕ್ಕೆ ಭೇಟಿ ಕೊಟ್ಟಿದ್ದಾಗ, ಹರಿಜನ ಗ್ರಾಹಕರಿಗೆ, ಊಟ, ತಿಂಡಿ ತಿನಿಸು ಹಾಗೂ ಪಾನೀಯಗಳನ್ನು ಬಡಿಸಬೇಕೆಂದು ಮತ್ತು ಹೊಟೇಲುಗಳಿಗೆ ಲೈಸೆನ್ಸ್ ಕೊಡುವಾಗ ಈ ಷರತ್ತನ್ನು ವಿಧಿಸಬೇಕೆಂದು ಸಲಹೆ ಮಾಡಿದೆ.

ತಾಲೂಕು ಅಭಿವೃದ್ಧಿ ಮಂಡಳಿಗಳ ಹಾಗೂ ಪಂಚಾಯತ್‌ಗಳ ಲೈಸೆನ್ಸ್ ನೀಡಿಕೆ ಅಧಿಕಾರಿಗಳು ಹೊಟೇಲುಗಳಿಗೆ ಲೈಸೆನ್ಸ್ ನೀಡುವಾಗ ಮೇಲೆ ಹೇಳಿದಂತೆ ಷರತ್ತನ್ನು ವಿಧಿಸಬೇಕೆಂದು ಮತ್ತು ಹೋಟೆಲುಗಳಲ್ಲಿ ಹಾಗೂ ಭೋಜನ ಗೃಹಗಳಲ್ಲಿ ಹರಿಜನ ಗ್ರಾಹಕರಿಗೆ ಊಟ, ತಿಂಡಿ ತಿನಿಸುಗಳನ್ನು ಮತ್ತು ಪಾನೀಯಗಳನ್ನು ಬಡಿಸುವುದನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಹೊಟೇಲುಗಳಿಗೆ ಮತ್ತು ಭೋಜನ ಗೃಹಗಳಿಗೆ ಸೂಚಿಸಬೇಕೆಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ಜೆ.ಬಿ.ಚೌಗುಲೆ
ಸರ್ಕಾರದ ಅಧೀನ ಕಾರ್ಯದರ್ಶಿ
ಡಿ.ಹೆಚ್.ಪಿ.ಸಿ. ಇಲಾಖೆ

ಕರ್ನಾಟಕ ಅಬಕಾರಿ ಕಮಿಷನರ್‌ರವರ ಕಚೇರಿ

ಬೆಂಗಳೂರು

ನಂ:ಇಎಕ್ಸ್‌ಇ/ಇಎಕ್ಸ್‌ಎಸ್/293/73–74 ದಿನಾಂಕ: 14 ಮಾರ್ಚ್ 1974

ಇವರಿಗೆ:
ಉಪ–ಆಯುಕ್ತರು
(ಅಬಕಾರಿ)
---------- ಜಿಲ್ಲೆ
ಮಾನ್ಯರೆ

ವಿಷಯ : ಕರ್ನಾಟಕ ರಾಜ್ಯದಲ್ಲಿ 1974–75 ರಲ್ಲಿ ಮದ್ಯಗಳ ಚಿಲ್ಲರೆ ಮಾರಾಟದ ಹಕ್ಕಿನ\ಗುತ್ತಿಗೆಯ ವಿಲೇವಾರಿ

ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರ ಮನೆಗಳ ಹತ್ತಿರ ಮದ್ಯದಂಗಡಿಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸರ್ಕಾರದ ಗೃಹ ಆಯುಕ್ತರು ಹಾಗೂ ಕಾರ್ಯದರ್ಶಿಯವರಿಂದ ಬಂದಿರುವ ಅರೆ ಸರ್ಕಾರಿ ಪತ್ರ ನಂ: ಹೆಚ್‌ಡಿ 62 ಇಎಲ್‌ಸಿ 74 ದಿನಾಂಕ: 7, ಮಾರ್ಚ್ 1974 ರ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ. ಆದ್ದರಿಂದ, ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರ ಮನೆಗಳ ಹತ್ತಿರ ಯಾವುದೇ ಮದ್ಯದಂಗಡಿಯನ್ನು ಸ್ಥಾಪಿಸಲು ಅನುಮತಿ ಕೊಡಬಾರದೆಂದು ನಿಮ್ಮನ್ನು ಕೋರಿಕೊಳ್ಳಲಾಗಿದೆ.

ನಿಮ್ಮ ವಿಶ್ವಾಸಿ,
ಸಹಿ
ಅಬಕಾರಿ ಆಯುಕ್ತರ ಪರವಾಗಿ

ಅಡಕಗಳು:–

ಗೃಹ ಇಲಾಖೆ ಆಯುಕ್ತರು ಹಾಗೂ ಸರ್ಕಾರದ ಕಾರ್ಯದರ್ಶಿ, ಗೃಹ ಇಲಾಖೆ ಇವರು ಕರ್ನಾಟಕ ಅಬಕಾರಿ ಆಯುಕ್ತರಿಗೆ ಬರೆದ ಅರೆ ಸರ್ಕಾರಿ ಪತ್ರ ನಂ: ಹೆಚ್‌ಡಿ 62 ಇಎಲ್‌ಸಿ 74 ದಿನಾಂಕ: 7, ಮಾರ್ಚ್ 1974

---

ನಿವಾಸದ ಬಡಾವಣೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮನೆಗಳ ಹತ್ತಿರ ಹೆಂಡದ ಅಂಗಡಿಗಳನ್ನು ಸ್ಥಾಪಿಸಬಾರದೆಂಬ ಸಲಹೆಯನ್ನು ಮುಖ್ಯಮಂತ್ರಿಯವರು ತತ್ವಶಃ ಒಪ್ಪಿದ್ದಾರೆ. ಈ ವಿಷಯದ ಬಗ್ಗೆ 1974–75ರ ಹರಾಜು ಪ್ರಕ್ರಿಯೆ ನಡೆಸುವಾಗ ಕ್ರಮ ಕೈಗೊಳ್ಳುವುದಾಗಿ ಈ ವಿಷಯದ ಬಗ್ಗೆ ಅವರು ಭರವಸೆ ಇತ್ತಿದ್ದಾರೆ. 1974–75 ರಲ್ಲಿ ಹರಾಜು ಪ್ರಕ್ರಿಯೆ ನಡೆಸುವಾಗ ಮಾನ್ಯ ಮುಖ್ಯಮಂತ್ರಿಯವರು ಇತ್ತಿರುವ ಭರವಸೆಯನ್ನು ಗಮನದಲ್ಲಿಟ್ಟುಕೊಂಡಿರಬೇಕೆಂದು ನಿಮ್ಮನ್ನು ಕೋರಿಕೊಳ್ಳಲಾಗಿದೆ.

ಕರ್ನಾಟಕ ಅಬಕಾರಿ ಆಯುಕ್ತರು

ಬೆಂಗಳೂರು

ಅಧಿಸೂಚನೆ

ನಂ:ಇಎಕ್ಸ್‌ಇ ಇಎಕ್ಸ್‌ಎಸ್ I 341/73–74 ದಿನಾಂಖ: 19 ಮಾರ್ಚ್ 1974

ಹರಾಜು ಪ್ರಕ್ರಿಯೆ – ಮದ್ಯದ ಚಿಲ್ಲರೆ ವ್ಯಾಪಾರದ ಗುತ್ತಿಗೆ ನಿಬಂಧನೆಗಳು ಹಾಗೂ ಷರತ್ತುಗಳು

22. ರೈಲ್ವೆ ನಿಲ್ದಾಣ, ರೈಲ್ವೆ ಕಾರ್ಯಾಗಾರಗಳು, ಇತರ ಕೆಲಸಗಾರರ ಕಾಲೋನಿಗಳು, ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳು, ಹರಿಜನ ಕಾಲೋನಿಗಳು ಮತ್ತು ಇತರ ರಾಷ್ಟ್ರೀಯ ಹೆದ್ದಾರಿಗಳ ಹತ್ತಿರ ಸ್ಥಾಪಿಸಿರುವ ಹೆಂಡದ ಅಂಡಗಿಗಳನ್ನು ಮುಚ್ಚಬೇಕೆಂದು ಅಥವಾ ಸಕ್ಷಮ ಪ್ರಾಧಿಕಾರವು ಹೇಳುವ ಇತರ ಜಾಗಕ್ಕೆ ಸ್ಥಳಾಂತರಿಸಬೇಕೆಂದು ಆದೇಶ ಮಾಡಬಹುದಾಗಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು

ನಂ: ಡಿಪಿಸಿ 59 ಬಿಎಕ್ಯೂ ದಿನಾಂಕ: 1 ಜುಲೈ 1974

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಅಭಿವೃದ್ಧಿ ವಸತಿ ಪಂಚಾಯತ್ ರಾಜ್ ಮತ್ತು ಸಹಕಾರ ಇಲಾಖೆ

ಇವರಿಗೆ:

ಎಲ್ಲ ವಿಭಾಗಗಳ ಡಿವಿಷನಲ್ ಕಮಿಷನರುಗಳು
ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು

ಮಾನ್ಯರೆ,

ವಿಷಯ: ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನರಿಗೆ ಸ್ಮಶಾನ ಭೂಮಿಯನ್ನು ಒದಗಿಸುವುದು

ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗ ಜನರಿಂದ, ತಮ್ಮ ಸ್ಮಶಾನ ಭೂಮಿಗಳನ್ನು ಗ್ರಾಮದಲ್ಲಿರುವ ಸಮಾಜದ ಇತರ ವರ್ಗಗಳ ಜನರು ಅನಧಿಕೃತವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಂದು ಇಲ್ಲವೆ ವೈಯಕ್ತಿಕ ಪ್ರಯೋಜನಗಳಿಗಾಗಿ ತಮ್ಮ ಭೂಮಿಯನ್ನು ವಾಸ್ತವಿಕವಾಗಿ ಸಾಗುವಳಿ ಮಾಡುತ್ತಿದ್ದಾರೆಂದು ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನರ ಭಾವನೆಗಳಿಗೆ ನೋವುಂಟು ಮಾಡುತ್ತಿದ್ದಾರೆಂದು ದೂರುಗಳು ಬರುತ್ತಿವೆ. ರೆವಿನ್ಯೂ ಹಾಗೂ ಪೊಲೀಸ್ ಇಲಾಖೆಗಳ ಸ್ಥಳೀಯ ಅಧಿಕಾರಿಗಳು ಸರ್ಕಾರಿ ಭೂಮಿಗಳಲ್ಲಿ ಒತ್ತುವರಿ ಮಾಡಿಕೊಳ್ಳುವುದಕ್ಕೆ ಉತ್ತೇಜನ ಕೊಡುತ್ತಿದ್ದಾರೆ. ಹಾಗಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರಿಗೆ ಅನಾವಶ್ಯಕ ಕಸಿವಿಸಿಯಾಗುತ್ತಿರುವುದಷ್ಟೇ ಅಲ್ಲ, ಅವರ ಭಾವನೆಗಳಿಗೆ ನೋವುಂಟಾಗಿರುವ ಅನೇಕ ದೃಷ್ಟಾಂತಗಳಿವೆ.

ಈ ವರ್ಗಗಳ ಜನರಿಗೆ ಸಂವಿಧಾನದಲ್ಲಿ ಒದಗಿಸಿರುವ ಸಾಮಾಜಿಕ ಹಾಗೂ ನಾಗರಿಕ ಹಕ್ಕುಗಳನ್ನು ರಕ್ಷಿಸುವುದು ಆವಶ್ಯಕವೆಂದು ಸರ್ಕಾರವು ಭಾವಿಸಿದೆ. ಆದ್ದರಿಂದ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನರ ಸ್ಮಶಾನ ಭೂಮಿಗಳಿಗೆ ರಕ್ಷಣೆ ಕೊಡಲು ವಿಶೇಷ ಎಚ್ಚರಿಕೆವಹಿಸಬೇಕೆಂದು ಮತ್ತು ಗ್ರಾಮ ಪಂಚಾಯತ್ ದಾಖಲೆಗಳಲ್ಲಿ ಹಾಗೂ ರೆವಿನ್ಯೂ ಇಲಾಖೆಗಳ ಕಚೇರಿಗಳಲ್ಲಿನ ದಾಖಲೆಗಳಲ್ಲಿ ಈ ಬಗ್ಗೆ ಸ್ಪಷ್ಟ ನಮೂದುಗಳನ್ನು ಮಾಡಬೇಕೆಂದು ಆಯಾ ಇಲಾಖೆಗಳ ಹಾಗೂ ಎಲ್ಲ ಪಟ್ಟಣ ಪಂಚಾಯತ್‌ಗಳು ಹಾಗೂ ಗ್ರಾಮ ಪಂಚಾಯತ್‌ಗಳು ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿದೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಬಜೆಟ್‌ನಲ್ಲಿ ಒದಗಿಸಿರುವ ಶೇ 18 ರಷ್ಟು ಹಣದಿಂದ ಈ ಜನರ ಸ್ಮಶಾನ ಭೂಮಿಗಳಲ್ಲಿ ಕಾಂಪೌಂಡ್ ಗೋಡೆ, ಮುಳ್ಳು ತಂತಿ ಬೇಲಿ, ದೀಪ ಹಾಗೂ ನೀರಿನ ವ್ಯವಸ್ಥೆ ಮುಂತಾದ ಸಮರ್ಪಕ ಸೌಕರ್ಯಗಳನ್ನು ಒದಗಿಸಬೇಕು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜನರಿಗೆ ಅವರವರ ಹಳ್ಳಿಗಳಲ್ಲಿ ಸ್ಮಶಾನ ಭೂಮಿ ಇರದಿದ್ದರೆ, ಯಾವ ಯಾವ ಹಳ್ಳಿಗಳಲ್ಲಿ ಸರ್ಕಾರಿ ಭೂಮಿ ಅಥವಾ ಪ್ಲಾಟ್ ಲಭ್ಯವಿದೆಯೋ ಆ ಎಲ್ಲ ಹಳ್ಳಿಗಳಲ್ಲಿ ಆ ಭೂಮಿಯನ್ನು ಅಥವಾ ಫ್ಲಾಟ್‌ನ್ನು ರೆವಿನ್ಯೂ ಇಲಾಖೆಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಅಧಿಕಾರಿಗಳು ಮೀಸಲಿಡಬೇಕು. ಸರ್ಕಾರಿ ಭೂಮಿಗಳು ಅಥವಾ ಪಂಚಾಯತ್ ಭೂಮಿಗಳು ಲಭ್ಯವಿದ್ದರೆ. ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಈ ಜನರಿಗೆ ಉಚಿತವಾಗಿ ಕೊಡಬೇಕು. ಸರ್ಕಾರಿ ಭೂಮಿ ಅಥವಾ

ಪಂಚಾಯತ್ ಭೂಮಿ ಲಭ್ಯವಿರದಿದ್ದರೆ ಈ ಜನರಿಗೆ ಆ ಉದ್ದೇಶಕ್ಕಾಗಿ ಸೂಕ್ತ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಒದಗಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮೇಲಿನಂತೆ ಕ್ರಮ ತೆಗೆದುಕೊಳ್ಳಲು ಡಿವಿಷನಲ್ ಕಮಿಷನರ್‌ಗಳನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಸಹಿ
ಎನ್. ಮುದ್ದರಾಜ್ ಅರಸ್
ಸರ್ಕಾರದ ಅಧೀನ ಕಾರ್ಯದರ್ಶಿ
ಡಿ.ಹೆಚ್.ಪಿ.ಸಿ ಇಲಾಖೆ

**ಕರ್ನಾಟಕ ಸರ್ಕಾರ**

**ಕರ್ನಾಟಕ ಸರ್ಕಾರದ ಸಚಿವಾಲಯ**

**ವಿಧಾನಸೌಧ, ಬೆಂಗಳೂರು**

ನಂ: ಡಿಪಿಸಿ 16 ವಿಎಸಿ 74 ದಿನಾಂಕ: 21 ಜುಲೈ 1974

**ಸುತ್ತೋಲೆ**

ವಿಷಯ : ಜನ ಸಮೂಹ ಬಂದು ಹೋಗುವ ಕಡೆಗಳಲ್ಲಿ ಕೋಮು ಹೆಸರಿನ ಫಲಕಗಳನ್ನುತೆಗೆದು ಹಾಕುವುದು

ಆಹಾರ ಪದಾರ್ಥಗಳನ್ನು ಬಡಿಸುತ್ತಿರುವ ಹೊಟೇಲುಗಳು, ಉಪಾಹಾರ ಗೃಹಗಳು, ಲಘು ಉಪಾಹಾರ ಮಂದಿರಗಳು, ಫಲಾಹಾರ ಮಂದಿರಗಳು, ಸ್ವಯಂ ಸೇವೆ ಮಂದಿರಗಳು ಹಾಗೂ ಭೋಜನ ಮಂದಿರಗಳು ಮುಂತಾಗಿ ಜನ ಸಮುದಾಯ ಬಂದು ಹೋಗುವ ಮಂದಿರಗಳ ಮಾಲೀಕರು ಕೋಮು ಹೆಸರಿನ ಫಲಕಗಳನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಮಾಜದ ಬೇರೆ ಬೇರೆ ವರ್ಗದ ಜನರಲ್ಲಿ ಸೌಹಾರ್ದತೆ ಆಧಾರದ ಮೇಲೆ ಸರ್ವಧರ್ಮ ಸಮಭಾವಕ್ಕೆ ಹಾಗೂ ಸಮಾಜವಾದಕ್ಕೆ ಉತ್ತೇಜನ ನೀಡುವ ದೃಷ್ಟಿಯಿಂದ ಅಂಥ ಹೆಸರಿನ ಫಲಕಗಳನ್ನು ಹಾಕುವುದಕ್ಕೆ ಉತ್ತೇಜನ ಕೊಡದಿರಲು ಸರ್ಕಾರವು ನಿರ್ಧರಿಸಿದೆ.

ಮೇಲೆ ಹೇಳಿರುವ ಜನ ಸಮೂಹ ಬಂದು ಹೋಗುವ ಮಂದಿರಗಳಲ್ಲಿ, ಅವುಗಳ ಮಾಲೀಕರು ಕೋಮು ಫಲಕಗಳನ್ನು ಹಾಕಿದ್ದರೆ ಅವುಗಳನ್ನು ಕೂಡಲೇ ತೆಗೆದುಹಾಕುವಂತೆ ಮಾಲೀಕರಿಗೆ ತಿಳಿವಳಿಕೆ ಕೊಡಬೇಕೆಂದು ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ತಮ್ಮ ಕ್ಷೇತ್ರಾಧಿಕಾರ ವ್ಯಾಪ್ತಿಯೊಳಗಿರುವ ಪಂಚಾಯತ್‌ಗಳಿಗೆ ನಿರ್ದೇಶನ ನೀಡಲಾಗಿದೆ.

ಸಹಿ

ಜೈ. ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಡಿಹೆಚ್‌ಪಿಸಿ ಇಲಾಖೆ

**ಮೈಸೂರು ಸರ್ಕಾರ**
**ಮೈಸೂರು ಸರ್ಕಾರದ ಸಚಿವಾಲಯ**
**ವಿಧಾನಸೌಧ, ಬೆಂಗಳೂರು**

ನಂ. ಹೆಚ್ಎಂಎ 180 ಎಂಎನ್ಎಂ 72, ದಿನಾಂಕ: 9 ಜುಲೈ 1973

**ಸುತ್ತೋಲೆ**

ವಿಷಯ: ಟೌನ್ ಮುನಿಸಿಪಲ್ ಕೌನ್ಸಿಲ್ ರಾಣೀ ಬೆನ್ನೂರು – ಸ್ವೀಪರ್ ನೌಕರಿ ಬಗ್ಗೆ ಸ್ಪಷ್ಟೀಕರಣ – ಕುರಿತು

ಸರ್ಕಾರವು ತನ್ನ ಆದೇಶ ಸಂ: ಪಿಎಲ್ಎಂ 258 ಟಿಇಟಿ 62 ದಿನಾಂಕ: 9 ಜೂನ್ 1966 ರಲ್ಲಿ ಪ್ರತಿಯೊಂದರಲ್ಲೂ 1000 ನಿವಾಸಿ ಜನಸಂಖ್ಯೆಗೆ ಅಥವಾ ಒಂದು ಮೈಲಿ ಮೀರದ ವ್ಯಾಪ್ತಿಗೆ ಕೊನೇ ಪಕ್ಷ ಒಬ್ಬ ಕಸಗುಡಿಸುವವ ಇರಬೇಕೆಂದು ನಿರ್ದಿಷ್ಟಪಡಿಸಿದೆ.

ರಾಣಿಬೆನ್ನೂರಿನಲ್ಲಿರುವ ಧಾರವಾಡ ಜಿಲ್ಲಾ ಮುನಿಸಿಪಲ್ ಕೋಮಗಾರ ಕಾರ್ಮಿಕ ಸಂಘವು, ಕಸಗುಡಿಸುವವರ ಕೆಲಸ ರಸ್ತೆಗಳನ್ನು ಸ್ವಚ್ಛಗೊಳಿಸುವುದು ಮಾತ್ರ, ಗಟಾರವನ್ನು ಸ್ವಚ್ಛ ಮಾಡುವುದು ಕಸಗುಡಿಸುವವರ ಕೆಲಸ ಅಲ್ಲವೆಂದು ಅದಕ್ಕಾಗಿ 'ಗಟಾರ ಸ್ವಚ್ಛ ಮಾಡುವವರು' ಎಂಬ ಪ್ರತ್ಯೇಕ ವರ್ಗವನ್ನು ನೇಮಕ ಮಾಡಿಕೊಳ್ಳಬೇಕೆಂದು ವಾದ ಮಂಡಿಸಿದೆ. ಅದರ ಆಡಳಿತಗಾರ, ಧಾರವಾಡ ಜಿಲ್ಲಾಧಿಕಾರಿ, ಬೆಳಗಾಂವಿ ವಿಭಾಗದ ಡಿವಿಷನಲ್ ಕಮಿಷನರ್ ಇವರುಗಳು ಸದರಿ ಕಾರ್ಮಿಕ ಸಂಘದ ವಾದವನ್ನು ಒಪ್ಪಿಲ್ಲ ಮತ್ತು ಆ ಸ್ಥಳೀಯ ಪ್ರದೇಶದಲ್ಲಿ ಗಟಾರವನ್ನು ಸ್ವಚ್ಛಗೊಳಿಸುವುದು ಹಾಗೂ ರಸ್ತೆಗಳನ್ನು ಗುಡಿಸುವುದು ಈ ಎರಡೂ ಕೆಲಸ ಕಸಗುಡಿಸುವವನದೆಂದು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರವು, ಬೆಳಗಾಂವಿ ವಿಭಾಗದ ಡಿವಿಷನಲ್ ಕಮಿಷನರ್‌ರವರ ಅಭಿಪ್ರಾಯವನ್ನು ಒಪ್ಪುತ್ತ, ಕಸಗುಡಿಸುವ ಯಾರಿಗೆ ಗಟಾರವನ್ನು ಸ್ವಚ್ಛ ಮಾಡುವ ಕೆಲಸವನ್ನು ವಹಿಸಲಾಗಿದೆಯೋ ಅವರಿಗೆ ವೇತನದ ಶೇ 10 ರಷ್ಟು ಹಣವನ್ನು ಹೆಚ್ಚುವರಿ ಭತ್ಯೆಯಾಗಿ ಸಂದಾಯ ಮಾಡುವುದು ಸಮಂಜಸವೆಂದು ಭಾವಿಸಿದೆ ಮತ್ತು ಈ ಮೇಲಿನ ಸೂಚನೆಗಳನ್ನು ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳು ಅನುಸರಿಸಬೇಕೆಂದು ನಿರ್ದೇಶನ ನೀಡಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಸ್ ಸಿದ್ಧನಂಜಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಹೆಚ್ಎಂಎ ಇಲಾಖೆ

ಇವರಿಗೆ:

1. ವಿಭಾಗಗಳ ಡಿವಿಷನಲ್ ಕಮಿಷನರುಗಳು
2. ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ನಗರ ಮುನಿಸಿಪಲ್ ಕೌನ್ಸಿಲ್/ಪಟ್ಟಣ ಮುನಿಸಿಪಲ್ ಕೌನ್ಸಿಲ್/ಅಧಿಸೂಚಿತ ಪ್ರದೇಶಗಳ ಅಧ್ಯಕ್ಷರು
4. ಕಂಟ್ರೋಲರ್, ರಾಜ್ಯ ಲೆಕ್ಕಪತ್ರಗಳ ಇಲಾಖೆ, ಬೆಂಗಳೂರು

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ, ಬೆಂಗಳೂರು

**ಸುತ್ತೋಲೆ**

ವಿಷಯ : ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ–ನಿಧಿಗಳ ಬಳಕೆ – ಸೂಚನೆಗಳು

ಉಲ್ಲೇಖ: 1. ಸುತ್ತೋಲೆ ಸಂ. ಡಿಪಿಸಿ 147 ಬಿಎಸಿ 71, ದಿನಾಂಕ: 15ನೇ ಫೆಬ್ರವರಿ 1972

2. ಸುತ್ತೋಲೆ ಸಂ. ಡಿಪಿಸಿ 69 ಬಿಎಸಿ 72, ದಿನಾಂಕ: 24ನೇ ಜುಲೈ 1972

3. ಸುತ್ತೋಲೆ ಸಂ. ಡಿಪಿಸಿ 65 ಬಿಎಸಿ 75, ದಿನಾಂಕ: 28ನೇ ಆಗಸ್ಟ್ 1973

ಮೇಲೆ ಹೇಳಿರುವ ಉಲ್ಲೇಖಗಳಲ್ಲಿ ಇತ್ತಿರುವ ಸೂಚನೆಗಳಿಗೆ ಡಿವಿಷನಲ್ ಕಮಿಷನರುಗಳ ಹಾಗೂ ಜಿಲ್ಲಾಧಿಕಾರಿಗಳ ಗಮನ ಸೆಳೆಯಲಾಗಿದೆ. ಮೇಲೆ ಹೇಳಿರುವ ಎಲ್ಲ ಸುತ್ತೋಲೆಗಳ ಪ್ರಕಾರ ಪ್ರತಿಯೊಂದು ತಾಲೂಕು ಅಭಿವೃದ್ಧಿ ಮಂಡಳಿಗಳ ಒಟ್ಟು ಬಜೆಟ್‌ನಲ್ಲಿ ಶೇಕಡಾ 18 ರಷ್ಟು ಹಣವನ್ನು ಪರಿಶಿಷ್ಟ ಜಾತಿಗಳ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಬಳಸಬೇಕೆಂದು ನಿರ್ದಿಷ್ಟಪಡಿಸಲಾಗಿದೆ.

ಸರ್ಕಾರವು, ಸಮಾಜ ಕಲ್ಯಾಣ ನಿರ್ದೇಶಕರೊಂದಿಗೆ ಸಮಾಲೋಚಿಸಿದ ನಂತರ, ತಾಲೂಕು ಅಭಿವೃದ್ಧಿ ಮಂಡಳಿಯ ಬಜೆಟ್‌ನಲ್ಲಿ ಒದಗಿಸಿದ ಹಣದಲ್ಲಿ ಶೇಕಡಾ 18 ರಷ್ಟು ಹಣವನ್ನು ಈ ಮುಂದೆ ಹೇಳಿರುವ ಯೋಜನೆಗೆ ಬಳಕೆ ಮಾಡಬೇಕೆಂಬ ತೀರ್ಮಾನಕ್ಕೆ ಬಂದಿದೆ:

I ಶಿಕ್ಷಣ

(i) ಒಂದೇ ತರಗತಿಯಿಂದ ನಾಲ್ಕನೇ ತರಗತಿವರೆಗೆ ಓದುತ್ತಿರುವ ಮಕ್ಕಳಿಗೆ ಪುಸ್ತಕಗಳ ಖರೀದಿಗಾಗಿ ಪ್ರತಿ ತಿಂಗಳಿಗೆ 5 ರೂಪಾಯಿ ಇನ್‌ಸೆಂಟಿವ್ ಸ್ಕಾಲರ್‌ಶಿಪ್. ಒಂದು ವೇಳೆ ಶಿಕ್ಷಣ ಇಲಾಖೆಯು ಎಲ್ಲೆಲ್ಲಿ ಈ ಸೌಲಭ್ಯವನ್ನು ಒದಗಿಸಿಲ್ಲವೋ ಅಲ್ಲೆಲ್ಲಾ ಈ ಸೌಲಭ್ಯ ಒದಗಿಸಬೇಕು.

(ii) ಮಹಿಳಾ ಕಲ್ಯಾಣ ಸಂಘಟಕರು 3 ರಿಂದ 6 ವರ್ಷಗಳ ವಯೋ ಗುಂಪಿನ ಮಕ್ಕಳ ಪ್ರಯೋಜನಕ್ಕಾಗಿ ನರ್ಸರಿ–ಕಂ–ಬಾಲವಾಡಿಗಳನ್ನು ಈ ಮುಂದಿನ ಷರತ್ತುಗಳ ಮೇಲೆ ಎಂದರೆ,–

(ಎ) ಸಂಘಟಕರಿಗೆ, ಸಮಾಜ ಕಲ್ಯಾಣ ಇಲಾಖೆಯು ಗೊತ್ತುಪಡಿಸಿರುವ ರೀತಿಯಂತೆಯೇ ಸಂಭಾವನೆ ಸಂದಾಯ ಮಾಡುವ

(ಬಿ) ಎಲ್ಲಿ ಇಂಥ ಸೌಲಭ್ಯವಿಲ್ಲವೋ ಅಂಥ ಕಡೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವ

(ಸಿ) ಪ್ರತಿಯೊಂದು ಅಂಥ ಕೇಂದ್ರದಲ್ಲಿ 50 ಮಕ್ಕಳಿಗೆ ಪ್ರತಿಯೊಂದಕ್ಕೆ 0.25 ದರದಲ್ಲಿ ಮಧ್ಯಾಹ್ನ ಊಟ ಕೊಡುವ

(ಡಿ) ಅಂಥ ಕೇಂದ್ರ ಇಲ್ಲದ ಕಡೆಗಳಲ್ಲಿ ಸ್ಥಳಾವಕಾಶಕ್ಕಾಗಿ ಪ್ರತಿ ತಿಂಗಳಿಗೆ 30 ರೂಪಾಯಿಯಂತೆ ಬಾಡಿಗೆ ಕೊಡುವ–ಷರತ್ತುಗಳ ಮೇಲೆ ನರ್ಸರಿ–ಕಂ–ಬಾಲವಾಡಿಗಳನ್ನು ಪ್ರಾರಂಭಿಸಬೇಕು.

**II** **ಹಣಕಾಸು**

(i) ಜೀವನೋಪಾಯಕ್ಕಾಗಿ ಉಪ ಕಸುಬುಗಳ ಹಲವಾರು ಕೌಶಲಗಳಲ್ಲಿ ತರಬೇತಿ ಪಡೆದ ನಂತರ ಸ್ವತಂತ್ರವಾಗಿ ಉಪ ಕಸುಬುಗಳನ್ನು ಪ್ರಾರಂಭಿಸಲು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಉಪಕರಣಗಳನ್ನು ಹಾಗೂ ಸಲಕರಣೆಗಳನ್ನು ಒದಗಿಸಬೇಕು.

(ii) ಸಂದರ್ಶನಕ್ಕೆ ಹಾಜರಾಗುವಂತೆ ನೇಮಕಾತಿ ಪ್ರಾಧಿಕಾರಗಳು ಪರಿಶಿಷ್ಟ ಜಾತಿಗಳಿಗೆ ಪರಿಶಿಷ್ಟ ಪಂಗಡಗಳಿಗೆ ಕರೆ ಕಳುಹಿಸಿದಾಗ ಅಲ್ಲಿಗೆ ಹೋಗಿ ಬರುವುದಕ್ಕಾಗಿ ಅವರಿಗೆ ವಾಸ್ತವಿಕ ಬಸ್ ಚಾರ್ಜ್ ಅಥವಾ III ನೇ ದರ್ಜೆ ರೈಲು ಪ್ರಯಾಣ ಚಾರ್ಜ್ ಕೊಡಬೇಕು.

(iii) ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅರಣ್ಯ ಇಲಾಖೆಯು ಸರಬರಾಜು ಮಾಡುವ ಟಿಂಬರ್ ಸಾಗಣೆ ಖರ್ಚನ್ನು ಕೊಡಬೇಕು.

III **ಸಾಂಸ್ಕೃತಿಕ**

(i) ಸಮುದಾಯ ಭವನಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ಹಣ ಕೊಡುಗೆ ನೀಡಬೇಕು.

(ii) ಸಮಾಜ ಕಲ್ಯಾಣ ಇಲಾಖೆಯು ಅಥವಾ ಸ್ವತಃ ಜನರೇ ನಿರ್ಮಿಸಿದ ಈಗಿರುವ ಸಮುದಾಯ ಕೇಂದ್ರಗಳ ದುರಸ್ತಿಗೆ ಹಣ ಕೊಡುಗೆ ನೀಡಬೇಕು.

(iii) ಸಮಾಜ ಕಲ್ಯಾಣ ಇಲಾಖೆಯು ನಿರ್ಮಿಸಿದ ಸಮುದಾಯ ಭವನಗಳಲ್ಲಿ ಕಿಚನ್ ಬ್ಲಾಕ್‌ಗಳ ನಿರ್ಮಾಣಕ್ಕಾಗಿ ಹಣ ಕೊಡುಗೆ ನೀಡಬೇಕು.

(iv) ಸಮುದಾಯ ಭವನಗಳು ಎಲ್ಲೆಲ್ಲಿ ಇಲ್ಲವೋ ಅಲ್ಲಿ ಅವುಗಳ ನಿರ್ಮಾಣಕ್ಕೆ ಅಥವಾ ಸಮಾಜ ಕಲ್ಯಾಣ ಇಲಾಖೆಯು ಅವುಗಳನ್ನು ನಿರ್ಮಿಸಬಯಸಿದರೆ ಅವುಗಳ ನಿರ್ಮಾಣಕ್ಕೆ ರೂ. 3,000 ದಿಂದ ರೂ 5,000 ಪ್ರಮಾಣದವರೆಗೆ ಕೊಡುಗೆ ಹಣ ನೀಡಬೇಕು.

**IV** **ಸಾಮಾನ್ಯ**

(i) ದೀರ್ಘಕಾಲೀನ ರೋಗಗಳಾದ ಕ್ಷಯ, ಕ್ಯಾನ್ಸರ್ ಮುಂತಾದ ರೋಗಗಳಿಂದ ಬಳಲುತ್ತಿರುವ ಬಡ ಪರಿಶಿಷ್ಟ ಜಾತಿಗಳ ಪರಿಶಿಷ್ಟ ಪಂಗಡಗಳ ಜನರಿಗೆ ಚಿಕಿತ್ಸೆಗಾಗಿ ಅವರುಗಳು ದೂರದ ಸ್ಥಳಗಳಲ್ಲಿರುವ ಆಸ್ಪತ್ರೆಗಳಿಗೆ ಹೋಗಲು ಮತ್ತು ಜಾಸ್ತಿ ಬೆಲೆಯ ಔಷಧಗಳನ್ನು ಉಚಿತವಾಗಿ ಒದಗಿಸಿರದಿದ್ದರೆ ಅಂತಹ ಔಷಧಗಳನ್ನು ಖರೀದಿಸಲು ಹಣಕಾಸು ನೆರವನ್ನು ಮಂಜೂರು ಮಾಡಬೇಕು.

(ii) ಪರಿಶಿಷ್ಟ ಜಾತಿಗಳ ಪರಿಶಿಷ್ಟ ಪಂಗಡಗಳ ಪ್ರತಿಯೊಬ್ಬ ವ್ಯಕ್ತಿಗೆ ಅವಶ್ಯಕತೆಗೆ ತಕ್ಕಂತೆ 1000 ರೂಪಾಯಿವರೆಗೆ ಹೆಂಚುಗಳು, ಇಟ್ಟಿಗೆಗಳು, ಮರ ಮುಟ್ಟು ಮುಂತಾದ ಕಟ್ಟಡ ಸಾಮಗ್ರಿಗಳನ್ನು ಒದಗಿಸಬೇಕು.

(iii) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಜಾತಿಯ ಜನರಿಗೆ ಬೆಂಕಿ ಆಕಸ್ಮಿಕ ಪರಿಹಾರವಾಗಿ 1000 ರೂಪಾಯಿವರೆಗೆ ಹಣ ಕೊಡಬೇಕು.

1. ಅದೇ ವ್ಯಕ್ತಿಗೆ, ಅದೇ ಗ್ರಾಮಕ್ಕೆ ಅದೇ ಉದ್ದೇಶಕ್ಕಾಗಿ ಆ ಇಲಾಖೆ ಈ ಇಲಾಖೆ ಒಂದಕ್ಕೊಂದು ಗೊತ್ತಿಲ್ಲದೆ ಖರ್ಚು ಭರಿಸುವುದನ್ನು ತಪ್ಪಿಸಲು ಜಿಲ್ಲಾಧಿಕಾರಿಯವರಿಂದಾಗಲಿ ಅಥವಾ ಸಮಾಜ ಕಲ್ಯಾಣ ನಿರ್ದೇಶಕರಿಂದಾಗಲೀ ಮುಂಚಿತವಾಗಿ ಅನುಮೋದನೆ ಪಡೆದುಈ ಮೇಲೆ ಹೇಳಿರುವ ಯೋಜನೆಗಳನ್ನು ಜಾರಿಗೆ ತರಬೇಕೆಂದು ನಿರ್ದೇಶನ ನೀಡಲಾಗಿದೆ.
2. ಡಿವಿಷನಲ್ ಕಮಿಷನರುಗಳು ಹಾಗೂ ಜಿಲ್ಲಾಧಿಕಾರಿಗಳು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಬರುವ ತಾಲೂಕು ಅಭಿವೃದ್ಧಿ ಮಂಡಳಿಗಳ ಮೇಲೆ ಪ್ಯಾರಾ 2 ರಲ್ಲಿ ಹೇಳಿರುವ ಕೆಲಸಗಳಿಗೆ ಒದಗಿಸುವ ನಿಧಿಗಳನ್ನು ಬಳಕೆ ಮಾಡುವುದನ್ನು ನೋಡಿಕೊಳ್ಳಬೇಕೆಂದು ಡಿಸ್ಟ್ರಿಕ್ ಡೆವೆಲಪ್‌ಮೆಂಟ್ ಕೌನ್ಸಿಲ್‌ಗಳ ಪದ ನಿಮಿತ್ತ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಪ್ರತಿಯೊಂದು ತಾಲೂಕು ಅಭಿವೃದ್ಧಿ ಮಂಡಳಿಯ ಬಜೆಟ್‌ನಲ್ಲಿ ಒದಗಿಸಿದ ಹಣವು ಸಂಪೂರ್ಣವಾಗಿ ಬಳಕೆಯಾಗಿರುವುದನ್ನು ಹಾಗೂ ಯಾವುದೇ ಮೊತ್ತವು ಬಳಕೆಯಾಗದೆ ಲ್ಯಾಪ್ಸ್ ಆಗಿಲ್ಲದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು. ಈ ಸೂಚನೆಗಳು 1974 ರ ಏಪ್ರಿಲ್ 1 ರಿಂದ ಎಲ್ಲರಿಗೂ ಅನ್ವಯವಾಗುತ್ತವೆ.
3. ತಮ್ಮ ತಮ್ಮ ವಿಭಾಗಗಳಲ್ಲಿರುವ ತಾಲೂಕು ಅಭಿವೃದ್ಧಿ ಮಂಡಳಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಪ್ರತಿ ವರ್ಷದ ಮಾರ್ಚ್ 31ರ ಹೊತ್ತಿಗೆ ಸರ್ಕಾರಕ್ಕೆ ವರದಿ ಕಳುಹಿಸಬೇಕೆಂದು ಡಿವಿಷನಲ್ ಕಮಿಷನರ್‌ಗಳನ್ನು ಕೋರಲಾಗಿದೆ. ಈ ಸುತ್ತೋಲೆಯಲ್ಲಿ ಹೇಳಿರುವ ಸೂಚನೆಗಳನ್ನು ಚಾಚೂ ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಒತ್ತಿ ಹೇಳಲಾಗಿದೆ.
4. ಈ ಬಗ್ಗೆ ಈ ಹಿಂದೆ ಹೊರಡಿಸಿದ್ದ ಎಲ್ಲ ಸೂಚನೆಗಳನ್ನು ರದ್ದುಪಡಿಸಿ ಈ ಮೇಲಿನ ಸೂಚನೆಗಳನ್ನು ಹೊರಡಿಸಲಾಗಿದೆ.

ಜೆ. ಬಿ. ಚೌಗುಲೆ
ಸರ್ಕಾರದ ಅಧೀನ ಕಾರ್ಯದರ್ಶಿ
ಡಿ.ಹೆಚ್.ಪಂಚಾಯತ್ ರಾಜ್
ಮತ್ತು ಸಹಕಾರ ಇಲಾಖೆ

# ಭಾಗ IV

## ಇನ್ನೊಂದು ಪ್ಲೇಗ್ ಕೂಪ

ಅಲಹಾಬಾದ್‌ನಲ್ಲಿರುವ ಬಸ್ತಿಗಳ ಅಸಹ್ಯಕರ ಸ್ಥಿತಿಗತಿಯ ಬಗ್ಗೆ ಕೆಲವು ತಿಂಗಳ ಹಿಂದೆ ನಾನು ಸಾರ್ವಜನಿಕರ ಗಮನ ಸೆಳೆದದ್ದು ಓದುಗರ ಜ್ಞಾಪಕದಲ್ಲಿರಬಹುದು. ಪ್ರೊಫೆಸರ್ ಮುಲ್ಕಾನಿಯವರು ಈಗ ನನಗೆ ದೆಹಲಿಯ ಬಸ್ತಿಗಳ ಚಿತ್ರಣಗಳನ್ನು ಕಳುಹಿಸಿದ್ದಾರೆ. ದೆಹಲಿಯ ಈ ಚಿತ್ರಣಗಳು ಅಲಹಾಬಾದ್‌ನವುಗಳಿಗಿಂತಲೂ ಅಷ್ಟೊಂದು ಉತ್ತಮವಾಗೇನೂ ಇಲ್ಲ ಎಂಬುದನ್ನು ತೋರಿಸುತ್ತವೆ. ವಿವರಿಸಲಾಗದಷ್ಟು ಅದೇ ಹೇಸಿಗೆ, ಕಸಕಡ್ಡಿಪರಿಣಾಮವಾಗಿ ಅಷ್ಟೇ ಕೀಳು ಸ್ಥಿತಿಯ ಅದೇ ಕತೆ. ಯಾರ ಶ್ರಮದ ದುಡಿಮೆಯ ಮೇಲೆಯೇ ದೆಹಲಿಯ ನಿವಾಸಿಗಳ ಆರೋಗ್ಯ ಅವಲಂಬಿತವಾಗಿದೆಯೋ ಆ ಜಾಡಮಾಲಿಗಳು ಕಿಟಕಿಗಳಿಲ್ಲದ ಹಾಗೂ ದೀಪ ಇಲ್ಲದ ಜೋಪಡಿಗಳ ಒಳಗೆ ಚಿಕ್ಕ ಜಾಗದಲ್ಲಿ ವಾಸಿಸುತ್ತಿದ್ದಾರೆ. ಪ್ರೊಫೆಸರ್ ಮಲ್ಕಾನಿಯವರು ಕೊನೆಯಲ್ಲಿ ವ್ಯಕ್ತಪಡಿಸಿರುವ ಮಾತುಗಳನ್ನೇ ಇಲ್ಲಿ ಹೇಳುವುದಕ್ಕಿಂತಲೂ ನನಗೆ ಬೇರೆ ಮಾರ್ಗವಿಲ್ಲ:

"ತೀರಾ ಜೋರು ಮಳೆ ಬೀಳುತ್ತಿತ್ತು, ಅನೇಕ ಬಸ್ತಿಗಳ ಒಳಗಡೆ ಕೆಸರು, ಹೊರಗಡೆ ಹೊಂಡಗಳು, ಯಾರಿಗೂ ನಡೆದು ಸಾಗದಂತಹ ಸ್ಥಿತಿ. ಒಳ್ಳೆಯ ಮನಸ್ಸಿನ ಜಾಡಮಾಲಿಗಳು ಕಲ್ಲುಗಳನ್ನು ಎತ್ತಿ ತಂದು ಅಲ್ಲಲ್ಲಿ ಹಾಕಿದ್ದ ಕಲ್ಲುಗಳ ಮೇಲೆ ನಡೆದು ಸಾಗಬೇಕಾಗಿತ್ತು. ಕೆಲವರು ದೆಹಲಿ ಗಣ್ಯರೂ ಸೇರಿದಂತೆ ನಾವೂ ಇದ್ದೆವು. ಒಬ್ಬರೇನೋ ಬಸ್ತಿಯ ಒಳಗಡೆಗೆ ಪ್ರವೇಶಿಸಿದರು, ಆದರೆ, ಅದೇನಂತ ಹೇಳಲಾಗದ ಹೇಸಿಗೆ ಮೇಲೆ ನಡೆದು ಸಾಗಿದ್ದರೆಂದು ಅನಿಸುತ್ತದೆ, ಆ ಘೋರ ದುರ್ವಾಸನೆ ತಾಳದೆ ತೂರಾಡುತ್ತಾ ವಾಪಸು ಬಂದು ಬಿಟ್ಟರು. ಇನ್ನೊಬ್ಬರು, ವಾಪಸ್ಸು ಬಂದು ಬಿಟ್ಟರು, ಮತ್ತೆ ಹೋಗಲು ಬಯಸಲಿಲ್ಲ. ಏಕೆಂದರೆ ಕರುಳು ಹಿಂಡಿದಂತಾಗಿ, ವಾಂತಿ ಮಾಡಿಕೊಳ್ಳುವಂತಾಗಿತ್ತಂತೆ. ಇನ್ನು ಮೂರನೆಯವರಂತೂ, ಇಷ್ಟೊಂದು ಹೇಸಿಗೆಯಲ್ಲಿ ಜನ ಹೇಗೆ ಬದುಕುತ್ತಿದಾರೋ, ಹೇಸಿಗೆಯಂತೆಯೇ ಕಾಣುತ್ತಿದ್ದಾರಲ್ಲ." ಅಂತಆಶ್ಚರ್ಯಪಟ್ಟರು. ಈಸಿ ಸ್ಟ್ರೀಟ್‌ನಲ್ಲಿ ವಾಸಿಸುತ್ತಿರುವವರೊಬ್ಬರು "ಅಯ್ಯೋ, ನನ್ನ ಮನೆಯಲ್ಲೂ ನೀರು ಸೋರುತ್ತಿದೆ, ನೀರು ಸೋರುತ್ತಿರದ ಮನೆ ದೆಹಲಿಯಲ್ಲಿ ಯಾವುದಾದರೂ ಇದೆಯೇ? ಚಿಂತೆ ಏಕೆ?" ಅಂತ ಗೊಣಗುತ್ತಿದ್ದರು. ಇವರು ಮೇಲಿನ ನಾಲ್ವರು ಗಣ್ಯರ ಬಗ್ಗೆ ಏಕೆ ಹಾಗೆ ಹೇಳುತ್ತಿದ್ದಾರೆಂದರೆ, ಅನೇಕ ಭಾಂಗಿಗಳೇ, "ನಾವು ಬಡಪಾಯಿಗಳು, ಹುಟ್ಟುವುದು ಈ ಹೇಸಿಗೆಯಲ್ಲೇ, ಸಾಯುವುದೂ ಈ ಹೇಸಿಗೆಯಲ್ಲೇ, ದುರ್ವಾಸನೆಯಿಂದ ತುಂಬಿರುವ ಇದೇ ನಮಗೆ, ಬೆಳಕಿನ, ಹಗಲಿನ, ರಾತ್ರಿಯ ಲೋಕ. ನಾವು ಅಗ್ಗದ ಬಡ ಜೀವಿಗಳು ಎಂದು ಹೇಳುತ್ತಿದ್ದುದನ್ನು ಇವರು ಕೇಳಿಸಿಕೊಂಡಿದ್ದರಂತೆ. ಈ ಬಸ್ತಿಗಳಲ್ಲಿ ಬದುಕು ಅಸಹ್ಯಕರ, ಬಹುಮಟ್ಟಿಗೆ ಭೀಕರ. ಉತ್ಪ್ರೇಕ್ಷಿಸಿ ಹೇಳ ಹೊರಟರೆ ಇನ್ನೂ ಭಯಂಕರವೆನಿಸಿಬಿಡುತ್ತದೆ"

ಇಂತಹ ಪ್ಲೇಗ್ ಕೂಪಗಳನ್ನು ನಾವು ಎಲ್ಲಿಯವರೆಗೆ ಸಹಿಸಿಕೊಂಡಿರುತ್ತೇವೆಯೋ, ಸಮಾಜದ ಅತ್ಯಂತ ಉಪಯುಕ್ತ ಸೇವಕರನ್ನು ಮಾನವೀಯತೆಯನ್ನು ಮರೆತು ಕೀಳಾಗಿ ಕಾಣುತ್ತಿವೆಯೋ ಅಲ್ಲಿಯವರೆಗೂ ಹೇಸಿಗೆಯಿಂದ ಹಾಗೂ ಅನೈರ್ಮಲ್ಯದಿಂದ ಉಂಟಾಗುವ ರೋಗಗಳಿಗೆ ತುತ್ತಾಗುವುದರಲ್ಲಿ ನಾವೂ ಭಾಗಸ್ಥರೆಂಬುದನ್ನು ಹೇಳಿದರೆ ಆಶ್ಚರ್ಯಪಡಬೇಕಾಗಿಲ್ಲ. ಕೊಳೆತ ಅವಯವ ಹೇಗೆ ಇಡೀ ದೇಹವನ್ನು ಬಾಧಿಸುತ್ತದೋ, ಹಾಳುಗೆಡವುತ್ತದೋ, ಹಾಗೆಯೇ ಜಾಡಮಾಲಿಗಳ ಸ್ಥಿತಿಗತಿಯು ಸಮಾಜದ ಕೊಳೆತ ಅವಯವದ ಹಾಗೂ ಇಡೀ ಸಮಾಜ ಹಾಳುಬಿದ್ದಿರುವುದರ ಪ್ರತೀಕ. ಸಕಾಲದಲ್ಲಿ ನಾವು ಜಾಗೃತರಾಗದಿದ್ದರೆ ಜಾಡಮಾಲಿಗಳ ಸ್ಥಿತಿಗಳಲ್ಲಿ ಕ್ಷಿಪ್ರ ಸುಧಾರಣೆಗಳನ್ನು ತರದಿದ್ದರೆ, ಎಚ್ಚರಿಕೆ ಭಗವಂತನ ನಿರ್ಧಾರ ಬೇರೆಯದೇ ಆಗಿರುತ್ತದೆ. ಜಾಡಮಾಲಿಗಳಿಗೆ ಸಭ್ಯ ನಿವಾಸದ ಜಾಗಗಳನ್ನು ಒದಗಿಸುವ ವಿಷಯ ಕೇವಲ ಹಿಂದೂಗಳಷ್ಟೇ ನಿಭಾಯಿಸುವಂತಹ ವಿಷಯ ಅಲ್ಲ. ಇದು, ಇಡೀ ಸಮಾಜಕ್ಕೆ ಸಂಬಂಧಪಟ್ಟಿದೆ. ಆದ್ದರಿಂದ ಈ ವಿಷಯದಲ್ಲಿ ಸುಧಾರಕರ ಮತ್ತು ಸಂಪ್ರದಾಯಸ್ಥರ ನಡುವೆ ಅಥವಾ ಹಿಂದೂಗಳ ಮತ್ತು ಹಿಂದೂಗಳಲ್ಲದವರ ನಡುವೆ ಭೇದ ಇರಬೇಕಾದ ಅಗತ್ಯವೇನಿಲ್ಲ. ಈಗಲಾದರೂ ದೆಹಲಿ ಮುನಿಸಿಪಾಲಿಟಿಯು, ತನ್ನಲ್ಲಿರುವ ಬಸ್ತಿಗಳ ಶೋಚನೀಯ

ಸ್ಥಿತಿಗತಿಗೆ ಆದ್ಯ ಗಮನ ಕೊಡುತ್ತದೆಂದು, ಅತ್ಯಗತ್ಯ ಕ್ರಮ ತೆಗೆದುಕೊಂಡು, ಅಸಹ್ಯಕರ ಸ್ಥಿತಿಯನ್ನು ನಿರ್ಮೂಲನೆ ಮಾಡುತ್ತದೆಂದು ಆಶಿಸೋಣ."

ಎಂ.ಕೆ.ಗಾಂಧಿ

('ಹರಿಜನ' ಪತ್ರಿಕೆ, ಸೆಪ್ಟೆಂಬರ್ 1933)

1964ರ ಜನವರಿ 2 ರಂದು ರಾಮಲೀಲಾ ಮೈದಾನದಲ್ಲಿ ನಡೆದ ಸ್ವೀಪರುಗಳ ಸಾರ್ವಜನಿಕ ಸಮ್ಮೇಳನದಲ್ಲಿ ಜವಹರಲಾಲ್ ನೆಹರೂರವರು ಮಾಡಿದ ಭಾಷಣದಿಂದ ಉದ್ಧೃತ ಭಾಗಗಳು:

"ನಿಮ್ಮ ಈ ಸಭೆಯನ್ನು ಉದ್ದೇಶಿಸಿ ಮಾತನಾಡಬೇಕೆಂದು ನೀವು ನನ್ನನ್ನು ಕೇಳಿಕೊಂಡಾಗ ನಿಮ್ಮ ಆಹ್ವಾನ ಇಷ್ಟವಾಯಿತಾದರೂ ನನಗೆ ಸ್ವಲ್ಪ ಹಿಂಜರಿಕೆಯಾಯಿತು. ನಾನು ಮಾಡಬೇಕಾದ ಕೆಲಸ ತುಂಬಾನೆ ಇತ್ತು. ಅಷ್ಟೊಂದು ಸುಲಭವಾಗಿ ಬಿಟ್ಟು ಬರಲಾಗದ ಕೆಲಸ ಇತ್ತು. ಆದರೆ ಸಫಾಯಿ ಮಜ್ದೂರರ ಈ ವಿಶೇಷ ಸಮಾವೇಶದಲ್ಲಿ ಭಾಗಿಯಾಗುವುದನ್ನು ನಿರಾಕರಿಸಲು ನನ್ನಿಂದಾಗಲಿಲ್ಲ. ಹಾಗಾಗಿ, ನಾನು ಎಲ್ಲಿ ಈಗ ನಿಮ್ಮ ಮುಂದಿದ್ದೇವೆ. ನಿಮ್ಮನ್ನು ಉದ್ದೇಶಿಸಿ ಮಾತನಾಡಲು ಪದಗಳು ನನಗೆ ಸಿಗುತ್ತಿಲ್ಲ. ತಡಕಾಡುತ್ತಿದ್ದೇನೆ. ನೀವು ವಾಸಿಸುತ್ತಿರುವ ಜಾಗಗಳಿಗೆ ಹಲವು ವರ್ಷಗಳ ಹಿಂದೆ, ನಾನು ಅನೇಕ ಸಲ ಭೇಟಿ ಕೊಟ್ಟಿದ್ದೆ. ನಿಮ್ಮ ಗುಡಿಸಲುಗಳನ್ನು ನೋಡಿ ನನಗೆ ದಿಗ್ಭ್ರಮೆಯಾಯಿತು. ನಾಚಿಕೆಯಾಯಿತು. ಅದಕ್ಕೋಸ್ಕರವೇ ನಾನು ಆಗಾಗ ನಿಮ್ಮ ಮುಂದೆ ಬರಲು ಹಿಂಜರಿದಿದ್ದೆ. ಆದರೂ, ನಿಮ್ಮ ಶೋಚನೀಯ ಸ್ಥಿತಿಯನ್ನು ಬಗೆಹರಿಸುವ ಚಿಂತನೆ ನನ್ನಲ್ಲಿತ್ತು. ಇದ್ದು ನಮ್ಮ ಸರ್ಕಾರ, ನಮಗೆ ನಮ್ಮದೇ ಆದ ಸಂವಿಧಾನ ಇದೆ. ನಮ್ಮ ಕೆಲಸಗಾರರಿಗೆ ಹಾಗೂ ಕೀಳೆಂದು ಪರಿಗಣಿತರಾದವರಿಗೆ ವಿಶೇಷ ಆದರಣೆ ಹಾಗೂ ರಕ್ಷಣೆ ಸಿಗಬೇಕು ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಹುಟ್ಟಿನಿಂದ ಮೇಲು, ಕೀಳು ಎಂಬ ಈ ಅನಿಷ್ಟ ಪಿಡುಗನ್ನು ತೊಲಗಿಸುವುದು ಅದರಲ್ಲೂ ನೈರ್ಮಲ್ಯ ಕೆಲಸ ಮಾಡುವವರ ಸ್ಥಿತಿಗಳಲ್ಲಿ ಸುಧಾರಣೆ ತರುವುದು ನಮ್ಮ ಕರ್ತವ್ಯ. ಈ ವಿಷಯದಲ್ಲಿ ಗಾಂಧೀಜಿ ಏನು ಹೇಳಿದ್ದಾರೆ. ನುಡಿದಂತೆಯೇ ನಡೆದು ಅವರು ಬದುಕಿದ್ದರು ಎಂಬುದು ನಿಮಗೆಲ್ಲರಿಗೂ ಚೆನ್ನಾಗಿ ತಿಳಿದಿದೆ. ನೀವು ಎಲ್ಲಿ ವಾಸವಾಗಿದ್ದೀರೋ ಅಂತಹ ಜಾಗಗಳಲ್ಲೇ ಗಾಂಧೀಜಿಯವರು ಆಗಾಗ ವಾಸಿಸುತ್ತಿದ್ದರು. ಮನಸ್ಸು ಮಾಡಿದ್ದರೆ ದೊಡ್ಡ ಅರಮನೆಯಂತಹ ಭವ್ಯ ಬಂಗಲೆಯಲ್ಲಿ ಅವರು ವಾಸ ಮಾಡಬಹುದಿತ್ತು. ಆದರೆ, ಯಾರು ಶೋಚನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೋ, ಯಾರನ್ನು ಸಮಾಜವು ಕೀಳಾಗಿ ಕಾಣುತ್ತಿದೆಯೋ ಅಂಥವರ ನಡುವೆ ಅವರು ವಾಸಿಸಲು ಇಚ್ಛಿಸಿದರು. ತಾನು ಹಾಗೆ ವಾಸಿಸಿದರೆ, ಜನರ ಗಮನವನ್ನು ನಿಮ್ಮ ಅಸಹನೀಯ ಸ್ಥಿತಿಗತಿಗಳ ಕಡೆಗೆ ಸೆಳೆಯುವುದು ಹಾಗೂ ನಿಮ್ಮ ಸ್ಥಿತಿಗಳಲ್ಲಿ ಬಹುಷಃ ಸುಧಾರಣೆಯಾಗುವುದು ಸಾಧ್ಯವೆಂದು ಅವರು ಭಾವಿಸಿದ್ದರು. ಈ ಬಹು ದೊಡ್ಡ ನಗರ ದೆಹಲಿಯಲ್ಲಿ ದೊಡ್ಡ ದೊಡ್ಡ ವೈಭವದ ವಿಲಾಸದ ಮನೆಗಳಿವೆ. ಭಾರಿ ಕಚೇರಿಗಳನ್ನು ಕಟ್ಟಲಾಗುತ್ತಿದೆ. ಆದರೆ, ಸಾಮಾನ್ಯ ಮನುಷ್ಯ ಎಲ್ಲಿ ವಾಸಿಸುತ್ತಿದ್ದಾನೆ, ಅವನಿಗೆ ಯಾವ ಯಾವ ಸೌಕರ್ಯ ಒದಗಿಸಲಾಗಿದೆ, ಅವರಿಗಿರುವ ಅನಾನುಕೂಲಗಳೇನು, ಅಂಥವುಗಳನ್ನು ಹೋಗಲಾಡಿಸಲಾಗಿದೆಯೇ, ಇಲ್ಲವೇ –ಇವೆಲ್ಲವೂ ಒಂದು ನಗರದ ಪ್ರಗತಿಯ ನಿಜವಾದ ಮಾನದಂಡಗಳು. ಒಂದು ಕಡೆ ಅರಮನೆಗಳಂತಹ ಭವ್ಯ ಕಟ್ಟಡಗಳಿವೆ. ಇನ್ನೊಂದು ಕಡೆ ಹೇಸಿಗೆಯ ಗಲೀಜಿನ ಬಸ್ತಿಗಳಿವೆ. ಇದು ಪ್ರಗತಿಯ ಲಕ್ಷಣ ಅಲ್ಲ. ಈ ನಗರ ಕೊಳೆಗೇರಿಗಳಿಂದ ತುಂಬಿ ಹೋಗಿದೆ. ಇವುಗಳನ್ನು ಹಂತ ಹಂತವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ದೀರ್ಘಕಾಲ ತೆಗೆದುಕೊಂಡರೂ ಸರಿಯೇ, ಅವುಗಳನ್ನು ತೆರವುಗೊಳಿಸಲಾಗುವುದೆಂಬ ನಂಬಿಕೆ ನನಗಿದೆ. ದುರಾದೃಷ್ಟವೆಂದರೆ, ಅಲ್ಲಿರುವ ಜನರೇ ಅಡ್ಡಿ ಅಡಚಣೆ ಮಾಡುತ್ತಿದ್ದಾರೆ. ಇತರ ಜಾಗಗಳಿಗೆ ಹೋಗಲು ಒಪ್ಪುತ್ತಿಲ್ಲ. ಆದರೆ, ಕೊಳೆಗೇರಿಗಳಲ್ಲೇ ಇರುತ್ತೇವೆಂಬುದು ಸರಿ ಅಲ್ಲ. ನಾವೆಲ್ಲರೂ ಸ್ವಚ್ಛ ಜಾಗಗಳಲ್ಲಿ ವಾಸಿಸಬೇಕು. ಹಾಗೆಯೇ, ಅದರಲ್ಲೂ ಮುಖ್ಯವಾಗಿ ನೈರ್ಮಲ್ಯ ಕೆಲಸ ಮಾಡುವವರು ಸ್ವಚ್ಛ ಜಾಗಗಳಲ್ಲಿಯೇ ವಾಸಿಸಬೇಕು. ಈ ವಿಷಯದಲ್ಲಿ ವಿಳಂಬವಾಗುತ್ತಿರುವುದರ ಹಾಗೂ ಹಳೆಯ ಸ್ಥಿತಿಗತಿ ಇನ್ನೂ ಉಳಿದುಕೊಂಡಿರುವುದರ ಸುಳಿಯಲ್ಲಿಯೇ ನಾವು ಸಿಲುಕಿ ಕೊಂಡಿದ್ದೇವೆ. ಪ್ರತಿಯೊಬ್ಬ ಭಾರತೀಯನಿಗೂ ತಕ್ಕಷ್ಟು ಹಾಲು, ಆಹಾರ ದೊರಕಬೇಕು, ವಾಸಿಸಲು ನೀಟಾದ ಮನೆ ಇರಬೇಕು, ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರಕಬೇಕು, ಎಲ್ಲರಿಗೂ ಆರೋಗ್ಯ ನಮ್ಮ ಮತ್ತು ನಮ್ಮ ಸಂವಿಧಾನದ ಆಶಯ. ಈ ಮೂಲ

ಆವಶ್ಯಕತೆಗಳು ಈಡೇರಬೇಕು. ವಾಸಿಸಲು ಕೆಲವರಿಗೆ ಭವ್ಯ ಬಂಗಲೆ ಇರಬೇಕೆನ್ನುವುದು, ನನಗಿದೆಯೆಲ್ಲ ಅಂಥದ್ದು, ಉಳಿದವರು ಅನಾನುಕೂಲಗಳಲ್ಲಿ ಹಾಗೂ ಅಸೌಕರ್ಯಗಳಲ್ಲಿ ಹೆಣಗಾಡಬೇಕು ಎನ್ನುವುದು ಸರಿ ಅಲ್ಲ. ಇಂಥವು ಇನ್ನೂ ಮುಂದುವರಿದಿರುವುದು ನಮ್ಮ ಸಮಾಜದ ವೈಫಲ್ಯಗಳಲ್ಲದೆ ಬೇರೇನೂ ಅಲ್ಲ. ಸ್ಥಿತಿಗತಿಗಳಲ್ಲಿ ಕ್ರಮೇಣ ಸುಧಾರಣೆಯಾಗುತ್ತದೆಂಬ ನಂಬಿಕೆ ನನಗಿದೆ. ನಮ್ಮ ಎಲ್ಲ ಮಕ್ಕಳೂ ಶಾಲೆಗಳಲ್ಲಿ ಓದುವಂತಾಗಬೇಕು, ಏಕೆಂದರೆ ವಿದ್ಯೆಯ ಹೊರತು ಮತ್ತಾವುದರಿಂದಲೂ ಒಂದು ಸಮುದಾಯದ ಏಳಿಗೆ ಸಾಧ್ಯವಿಲ್ಲ. ವಿದ್ಯಾವಂತರು ತಮ್ಮ ಬದುಕನ್ನು ಬೇರೆ ಬೇರೆ ರೀತಿಯಲ್ಲಿ ರೂಪಿಸಿಕೊಳ್ಳುತ್ತಾರೆ. ತಮ್ಮ ತಂದೆ ತಾಯಿ ಅನುಭವಿಸಿದ ಬದುಕಿನ ಸ್ಥಿತಿಗಳನ್ನು ವಿದ್ಯಾವಂತರು ಸಹಿಸುವುದಿಲ್ಲ. ಆದ್ದರಿಂದ ನಾನು ಶಿಕ್ಷಣಕ್ಕೆ ಅತ್ಯಂತ ಪ್ರಾಶಸ್ತ್ಯ ಕೊಡುತ್ತೇನೆ. ಶಿಕ್ಷಣದಿಂದ ಮಾತ್ರ ಪ್ರಗತಿ ಸಾಧ್ಯ ಅದಿಲ್ಲದಿದ್ದರೆ ಸಮಾಜ ಹಿಂದುಳಿದೆಯೆಂದು, ಕೀಳೆಂದು ಪರಿಗಣಿತವಾಗುತ್ತದೆ. ಮೇಲು ಕೀಳು ಎಂಬ ಭಾವನೆ ಇರಬಾರದು, ಎಲ್ಲರಿಗೂ ಸಮಾನ ಅವಕಾಶಗಳಿರಬೇಕು.

ನೀವು ಸಫಾಯಿ ಕೆಲಸ ಮಾಡುತ್ತಿದ್ದೀರಿ. ಅದನ್ನು ಆವಶ್ಯಕ ಸೇವೆ ಎಂದು ಪರಿಗಣಿಸಲಾಗಿದೆ. ಯಾರು ನೈರ್ಮಲ್ಯ ಕೆಲಸ ಮಾಡುತ್ತಿದ್ದಾರೋ ಅವರನ್ನು ಕೀಳು ಎಂದು ಭಾವಿಸುವುದು ಸರಿ ಅಲ್ಲ. ನೀವು ಮಾಡುವ ಕೆಲಸದ ವಿಧಾನದಲ್ಲಿ ಬದಲಾವಣೆ ತಂದುಕೊಂಡರೆ ಬಹುಷಃ ಈಗ ನಿಮಗಿರುವ ಅನಾನುಕೂಲಗಳೂ, ಕಿರಿಕಿರಿ ಕಡಿಮೆ ಕಡಿಮೆಯಾಗುತ್ತವೆ. ಆದ್ದರಿಂದ, ಈ ವಿಷಯಕ್ಕೆ ಎಂದರೆ, ನೈರ್ಮಲ್ಯ ಕೆಲಸಗಾರರು ಹೇಗೆ ಕೆಲಸ ಮಾಡಬೇಕು, ಅವರು ಹೇಗೆ ವಾಸಿಸಬೇಕು, ಅವರ ತೊಂದರೆಗಳೇನು, ಅವರ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕು ಎಂಬ ಬಗ್ಗೆ ವಿಶೇಷ ಗಮನ ಕೊಡಬೇಕೆಂದು ನಾನು ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ನ್ನು ಕೇಳಿಕೊಳ್ಳುತ್ತೇನೆ. ನೀರು, ದೀಪ, ಶಾಲೆಗಳು, ಆಟದ ಮೈದಾನ ಹಾಗೂ ಇತರ ಸೌಕರ್ಯಗಳ ಜೊತೆಗೆ ಶುಭ್ರವಾದ ಮನೆಗಳನ್ನು ನಿಮಗಾಗಿ ಕಾರ್ಪೊರೇಷನ್ ಕಟ್ಟಿಸಿಕೊಡುವುದು ಕಾರ್ಪೊರೇಷನ್ನಿನ ಮೊದಲ ಕರ್ತವ್ಯವೆಂದು ನಾನು ಭಾವಿಸಿದ್ದೇನೆ.

ನೀವು ಸ್ವಚ್ಛ ಮಾಡುತ್ತಿರುವ ರೀತಿಯಲ್ಲಿ ವೈಜ್ಞಾನಿಕ ವಿಧಾನಗಳಿಂದ ಈಗ ಸುಧಾರಣೆ ಮಾಡಿಕೊಳ್ಳುವುದು ಹೇಗೆ ಎಂದು ನಾನು ನಿಮಗೆ ಹೇಳಲು ಇಚ್ಛಿಸುತ್ತೇನೆ. ಸಾಂಪ್ರದಾಯಿಕ ರೀತಿಯಲ್ಲಿ ಇನ್ನು ಮುಂದೆ ಕೆಲಸ ಮಾಡುವ ಅವಶ್ಯಕತೆ ಇಲ್ಲ. ಚೊಕ್ಕಟವಿಲ್ಲದ ಕೆಲಸವನ್ನು ಚೊಕ್ಕಟವಾಗಿಯೂ ಮಾಡಬಹುದು. ಚೊಕ್ಕಟವಿಲ್ಲದಂತೆ ಇನ್ನು ಮುಂದೆ ಮಾಡುವ ಅವಶ್ಯಕತೆ ಇಲ್ಲ. ನೈರ್ಮಲ್ಯ ಕೆಲಸದ ಜೊತೆಗೆ ನೀವು ಇತರ ವೃತ್ತಿಗಳಲ್ಲಿ ತೊಡಗಬಹುದು. ವಂಶಪಾರಂಪರ್ಯದ ಈ ವೃತ್ತಿಗೆ ನೀವು ಅಂಟಿಕೊಂಡಿರಲೇಬೇಕೆಂಬ ಕಡ್ಡಾಯ ಏನಿಲ್ಲ. ಎಲ್ಲ ಭಾರತೀಯರು ಮರ್ಯಾದೆಯಿಂದ ಬಾಳಬೇಕು, ಗೌರವದಿಂದ ಕೆಲಸ ಮಾಡಬೇಕು. ಅದಕ್ಕಾಗಿ ತಕ್ಕ ಪ್ರತಿಫಲ ಸಿಗಬೇಕು. ಹಾಗಾದಾಗ ಮಾತ್ರ ನಮ್ಮ ದೇಶ ಪ್ರಗತಿಯತ್ತ ಸಾಗುತ್ತಿದೆಯೆಂದು ನಾವೆಲ್ಲರೂ ಭಾವಿಸಬೇಕಾಗುತ್ತದೆ. 6 ವರ್ಷಗಳ ಹಿಂದೆ ನಮಗೆ ಸಾತಂತ್ರ್ಯ ಬಂತು, ಅಲ್ಲಿಂದೀಚೆಗೆ ನಾವು ಬಹಳಷ್ಟು ಸಾಧಿಸಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳು ಪ್ರಾರಂಭವಾಗಿವೆ. ಕೃಷಿಗೆ ಗಮನ ಕೊಡಲಾಗಿದೆ. ಸುಧಾರಣೆಗಳನ್ನು ತರಲಾಗಿದೆ. ಆದರೂ ದುರ್ಬಲ ವರ್ಗಗಳಿಗೆ ನಾವು ಗಮನಕೊಟ್ಟಿಲ್ಲವೆಂಬುದು ಹಾಗೂ ಅವರಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲವೆಂಬುದು ನನಗೆ ನೋವುಂಟು ಮಾಡಿದೆ. ಅವರಿಗೆ ಹೆಚ್ಚು ಗಮನ ಕೊಟ್ಟಿದ್ದಿದ್ದರೆ, ಅವರ ಏಳಿಗೆಯಾಗುತ್ತಿತ್ತು. ಹಾಗೆಯೆ ಇತರರ ಏಳಿಗೆ ಸಹ ಆಗುತ್ತಿತ್ತು. ಅದಕ್ಕಿಂತ ಮಿಗಿಲಾಗಿ ಈ ಮೇಲು, ಕೀಳು ಎಂಬ ರೋಗ ತೊಲಗಿ ಹೋಗುತ್ತಿತ್ತು. ಜಾತಿಗಳ ಬಲೆಯಲ್ಲಿ ಹಾಗೂ ಮೇಲು ಕೀಳು ಎಂಬ ರೋಗದಲ್ಲಿ ಸಿಲುಕಿ ನಮ್ಮ ಜನ ತುಂಬಾನೆ ಸಂಕಷ್ಟಗಳಿಗೆ ಒಳಗಾಗಿದ್ದಾರೆ. ನಿಮ್ಮ ಒಳಿತಿಗಾಗಿ ಹಾಗೂ ದೇಶದ ಒಳಿತಿಗಾಗಿ ನೀವು ಕೂಡ ಬಹಳಷ್ಟು ಮಾಡಬಲ್ಲಿರಿ. ನೀವು ವಾಸಿಸುತ್ತಿರುವ ಜಾಗಗಳನ್ನು ಸ್ವಚ್ಛವಾಗಿಟ್ಟುಕೊಂಡಿಲ್ಲದಿರುವುದನ್ನು ನಾನು ಆಗಾಗ ನೋಡಿದ್ದೇನೆ. ನೀವುಗಳೇ ಪ್ರಯತ್ನ ಮಾಡದಿದ್ದರೆ ನಿಮ್ಮ ಜಾಗಗಳನ್ನು ಸ್ವಚ್ಛತೆಯಿಂದಿಟ್ಟು ಕೊಳ್ಳಲಾಗದು. ನೀಟಾದ ಮನೆಗಳನ್ನು ನಿಮಗೆ ಕಟ್ಟಿಸಿಕೊಟ್ಟರೆ, ನೀವು ಅದರಲ್ಲಿ ನೀಟಾಗಿಯೇ ವಾಸಿಸಿದರೆ, ಅದರಿಂದ ನಿಮಗೂ ಒಳಿತಾಗುತ್ತದೆ, ಇಡೀ ದೇಶಕ್ಕೂ ಒಳಿತಾಗುತ್ತದೆ. ನಿಮ್ಮ ಕೆಲವೊಂದು ರೂಢಿಗಳು, ಆಚರಣೆಗಳು, ಬಹಳ ಹಳೆಯ ಕಾಲದವು. ಅವುಗಳ ಅಗತ್ಯ ಇಲ್ಲ. ಅಂತಹ ವ್ಯರ್ಥ ರೂಢಿ, ಆಚರಣೆಗಳನ್ನು ತೊಲಗಿಸಿಕೊಂಡು ಒಳ್ಳೆಯವುಗಳನ್ನು ಅಳವಡಿಸಿಕೊಂಡರೆ ನಿಮಗೂ ಒಳ್ಳೆಯದಾಗುತ್ತದೆ. ನಿಮ್ಮ ಕುಟುಂಬಕ್ಕೂ ಒಳ್ಳೆಯದಾಗುತ್ತದೆ.

ಈ ಅಂಶವನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಆದರೆ, ನಿಮ್ಮ ಹಿತಚಿಂತಕರಿಗೆ, ನಿಮ್ಮ ಪೂರ್ಣ ಸಹಕಾರವಿರದಿದ್ದರೆ ಅವರೂ ಕೂಡ ಯಶಸ್ಸು ಸಾಧಿಸಲಾರರು."

**ಇಳೆಯ ಪೆರುಮಾಳ್ ಸಮಿತಿಯ ಅವಲೋಕನಗಳು ಮತ್ತು ಆ ಸಮಿತಿಯ ಶಿಫಾರಸುಗಳು**

ಸಮಿತಿಗೆ ತನ್ನ ಪ್ರವಾಸದ ಕಾಲದಲ್ಲಿ, ರಾಜ್ಯ ಸರ್ಕಾರಗಳು ಕಸಗುಡಿಸುವವರಿಗಾಗಿ ಹಾಗೂ ಜಾಡಮಾಲಿಗಳಾಗಿ ನಿರ್ಮಿಸಿರುವ ಕೆಲವೊಂದು ಕಾಲೋನಿಗಳಿಗೆ ಭೇಟಿ ಕೊಡುವ ಅವಕಾಶ ದೊರೆಕಿತ್ತು. ಬಹಳಷ್ಟು ಕಾಲೋನಿಗಳಲ್ಲಿ ದೀಪದ ವ್ಯವಸ್ಥೆಯೇ ಇರಲಿಲ್ಲ. ಸುತ್ತಮುತ್ತಲಿನ ಜಾಗಗಳು ತೀರಾ ಗಲೀಜಾಗಿದ್ದವು. ಯಾವುದೇ ನೈರ್ಮಲ್ಯ ವ್ಯವಸ್ಥೆ ಇರಲಿಲ್ಲ. ಸುತ್ತಮುತ್ತಲಿನ ಜಾಗಗಳನ್ನು, ಮಲವನ್ನು ಸುರಿಯಲು ಮುನಿಸಿಪಾಲಿಟಿಗಳು ಬಳಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿ. ಮನೆಗಳಿಗೆ ನಲ್ಲಿಗಳನ್ನು ಒದಗಿಸಿರಲಿಲ್ಲ. ಬಹಳಷ್ಟು ಕಡೆ, ಇಡೀ ಕಾಲೋನಿಗೆ ಒಂದೇ ಒಂದು ನಲ್ಲಿಯನ್ನು ಒದಗಿಸಿರಲಿಲ್ಲ. ಬಹಳಷ್ಟು ಕಡೆ, ಇಡೀ ಕಾಲೋನಿಗೆ ಒಂದೇ ಒಂದು ನಲ್ಲಿಯನ್ನು ಒದಗಿಸಿರುವುದು ಕಂಡುಬಂತು. ಮಳೆಗಾಲದಲ್ಲಿ ಮನೆಗಳ ಒಳಗಡೆ ನೀರು ಸೋರುತ್ತಿರುವುದು, 15–20 ವರ್ಷಗಳಾದರೂ ಮನೆಗಳಿಗೆ ದುರಸ್ತಿ ಮಾಡಿಸಿಯೇ ಇಲ್ಲದಿರುವುದು ಕಂಡು ಬಂತು.

ಮೇಲಿನ ವಾಸ್ತವಿಕ ಸಂಗತಿಗಳ ದೃಷ್ಟಿಯಿಂದ, ಸಮಿತಿಯು ಈ ಮುಂದೆ ಹೇಳಿರುವ ಕ್ರಮಗಳನ್ನು ಪರಿಗಣನೆಗಾಗಿ ಸಲಹೆ ಮಾಡಿದೆ:

(i) ದೀಪ, ನೈರ್ಮಲ್ಯ, ಕೂಡುದಾರಿಗಳು, ವೈದ್ಯಕೀಯ ಸೌಲಭ್ಯಗಳು, ನಲ್ಲಿಗಳು ಮುಂತಾದವುಗಳಿಗೆ ಎಲ್ಲ ಕಾಲೋನಿಗಳಲ್ಲಿ ಸಮರ್ಪಕ ವ್ಯವಸ್ಥೆ ಮಾಡಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು.

(ii) ಯಾವ ಯಾವ ಬಡಾವಣೆಗಳಲ್ಲಿ ವಸತಿ ಕಾಲೋನಿಗಳನ್ನು ರಾಜ್ಯ ಸರ್ಕಾರಗಳು ನಿರ್ಮಿಸಿವೆಯೋ ಅವುಗಳು ತೀರಾ ಕೊಳಕು, ಅನಾರೋಗ್ಯಕರವಾದವುಗಳಾಗಿವೆ. ಕೆಲವು ಕಾಲೋನಿಗಳು ದುರ್ವಾಸನೆ ಸೂಸುವ ಹೊಲಸು ರೊಚ್ಚು ಹರಿಯುವ ನಾಲೆಗಳ ಬಳಿ ಇವೆ. ಆದ್ದರಿಂದ, ಕಸಗುಡಿಸುವವರಿಗಾಗಿ, ಜಾಡಮಾಲಿಗಳಿಗಾಗಿ ಕಾಲೋನಿಗಳನ್ನು ಸ್ವಚ್ಛತೆ ಇರುವ ಹಾಗೂ ನೈರ್ಮಲ್ಯವುಳ್ಳ ಕಾಲೋನಿಗಳಲ್ಲಿ ನಿರ್ಮಿಸಿರುವುದನ್ನು ರಾಜ್ಯ ಸರ್ಕಾರಗಳು ಸುನಿಶ್ಚಿತಪಡಿಸಿಕೊಳ್ಳಬೇಕು.

(iii) ಸ್ಥಳೀಯ ಸಂಸ್ಥೆಯಲ್ಲಿ ಒಬ್ಬನಿಗಿಂತ ಹೆಚ್ಚು ಜನ ಉದ್ಯೋಗದಲ್ಲಿದ್ದರೆ, ಬಾಡಿಗೆಯನ್ನು ಒಬ್ಬನಿಂದ ಪಡೆದುಕೊಳ್ಳಬೇಕೇ ಹೊರತು ಯಾವುದೇ ಕಾರಣಕ್ಕೂ ಎಲ್ಲರಿಂದಲೂ ಅಲ್ಲ.

(iv) ಉಚಿತವಾಗಿ ದುಡಿಮೆ ಮಾಡುವುದರಿಂದಾಗಲಿ ಅಥವಾ ಸಾಮಗ್ರಿ ಮುಂತಾದವುಗಳನ್ನು ಕೊಡುವುದರಿಂದಾಗಲಿ ನಿರ್ಮಾಣದ ವೆಚ್ಚಕ್ಕೆ ತನ್ನ ಪಾಲನ್ನು ಕೊಡುವಂತೆ ಫಲಾನುಭವಿಯನ್ನು ಯಾವ ಸಂದರ್ಭದಲ್ಲೂ ಕೇಳಬಾರದು.

(v) ಪರಿಶಿಷ್ಟ ಜಾತಿಗಳಿಗೆ ಒಂದು ಖಾಯಂ ಆಶ್ರಯವನ್ನು ಒದಗಿಸುವುದೇ ಈ ಯೋಜನೆಯ ಉದ್ದೇಶವಾದ್ದರಿಂದ, ನೌಕರರು ಸೇವೆಯಿಂದ ನಿವೃತ್ತರಾದ ಮೇಲೆ ಮನೆಗಳನ್ನು ಖಾಲಿ ಮಾಡುವಂತೆ ಸ್ಥಳೀಯ ಸಂಸ್ಥೆಗಳು ಒತ್ತಾಯ ಮಾಡುವುದು ಸರಿಯಲ್ಲ. ಮನೆಗಳ ಹಂಚಿಕೆಯಾದವರಿಗೆ ಒಡೆತನದ ಹಕ್ಕನ್ನು ನೀಡುವುದು ಸಾಧ್ಯವಾಗದಿದ್ದರೆ, ಪರಿಶಿಷ್ಟ ಜಾತಿಯ ನೌಕರರಿಗೆ ಮನೆಗಳ ನಿರ್ಮಾಣಕ್ಕಾಗಿ ಹಿಂದುಳಿದ ವರ್ಗಗಳ ಬಾಬಿನಿಂದ ಯಾವುದೇ ಹಣವನ್ನು ಕೊಡಬೇಕಾಗಿಲ್ಲ.

ಅಂಥ ಸಂದರ್ಭಗಳಲ್ಲಿ ಯೋಜನೆಯ ಸಾಮಾನ್ಯ ಬಾಬಿನ ವಸತಿ ಯೋಜನೆಯಿಂದ ಹಣವನ್ನು ಒದಗಿಸಬೇಕು.

ಸಾರ್ವಜನಿಕ ಜೀವನದಲ್ಲಿ ಆಲೋಚನೆಗಳು, ಆಧ್ಯಾತ್ಮಿಕ ಭಾವನೆಗಳುಸದ್ಗುಣಗಳಿಂದ ತುಂಬಿರಬೇಕು

ಗೋಪಾಲ ಕೃಷ್ಣ ಗೋಖಲೆ

------------------

" ನಮ್ಮಲ್ಲೇ ಮೌಢ್ಯ ತುಂಬಿ ತುಳುಕಾಡುತ್ತಿದೆ.
ನಾವು ಸಾರ್ವಜನಿಕರಿಗೆ ಉಪದೇಶ ಮಾಡಲು ಹೋಗದಿರೋಣ"

– ರೈಟ್ ಆನರಬಲ್ ವಿ.ಎಸ್.ಶ್ರೀನಿವಾಸ ಶಾಸ್ತ್ರಿ

ಪಿ.ಕೋದಂಡರಾವ್
"ಅಲೋಹ" 26, ಶ್ರೀ ಕೃಷ್ಣರಾವ್ ರಸ್ತೆ,
ಬಸವನಗುಡಿ, ಬೆಂಗಳೂರು – 560004

ದಿನಾಂಕ: ಡಿಸೆಂಬರ್, 14, 1974

ಪ್ರಿಯ ಗೆಳೆಯ,

ಕ್ರಿಸ್‌ಮಸ್ ಮತ್ತು ಹೊಸ ವರ್ಷದ ನಿಮಿತ್ತ ನಿನಗೆ, ನಿನ್ನ ಕುಟುಂಬಕ್ಕೆ ಹಾಗೂ ಸಹೋದ್ಯೋಗಿಗಳಿಗೆ ನನ್ನ ಮತ್ತು ನನ್ನ ಶ್ರೀಮತಿಯ ಶುಭ ಹಾರೈಕೆಗಳು ಹಾಗೂ ಹಾರ್ದಿಕ ಶುಭಾಶಯಗಳು. ನೀವೆಲ್ಲರೂ ಕ್ಷೇಮದಿಂದದ್ದೀರೆಂದು ನಾವು ನಂಬಿದ್ದೇವೆ.

ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ಕುರಿತಂತೆ ನನ್ನ ಸಲಹೆ ಸೂಚನೆಗಳಿಗಾಗಿ ನಿನ್ನ, ದಿನಾಂಕ 5ರ ಪತ್ರಕ್ಕೆ ತುಂಬಾ ಧನ್ಯವಾದಗಳು. ಆಮಂತ್ರಣ, ನನಗೆ ಸಂದ ಗೌರವ.

ಜಾಡಮಾಲಿಗಳು ಬ್ಯಾಸ್ಕೆಟ್‌ನಲ್ಲಿ ಮಲವನ್ನು ಒಯ್ಯುವುದನ್ನು ನಿಲ್ಲಿಸುವುದೇ ಮೊಟ್ಟ ಮೊದಲ ಸುಧಾರಣೆಯೆಂಬುದು ನನ್ನ ಅಭಿಪ್ರಾಯ. ಈ ಸುಧಾರಣೆಗೆ, ಶ್ರೀ ಬಸವಲಿಂಗಪ್ಪನವರು, ಮಂತ್ರಿಯಾಗಿದ್ದ ಅವಧಿಯಲ್ಲಿ ಈಗಾಗಲೇ ಆದೇಶ ಹೊರಡಿಸಿರುವುದು ಸಂತೋಷದ ಸಂಗತಿ. ಈ ಸುಧಾರಣೆ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ ಎಂಬುದನ್ನು ನನಗೆ ತಿಳಿಸಿದರೆ ನಾನು ನಿನಗೆ ತುಂಬಾ ಆಭಾರಿಯಾಗಿರುತ್ತೇನೆ.

ನನ್ನಲ್ಲಿರುವ ಮಾಹಿತಿ ಸರಿಯಾದುದಾಗಿದ್ದರೆ, ಗಟ್ಟಿಮುಟ್ಟಾದ ಕಸಗುಡಿಸುವವರು ಹಾಗೂ ಜಾಡಮಾಲಿಗಳು, ಅವರ ಕುಟುಂಬದ ಮಕ್ಕಳು ಕೆಲಸ ಮಾಡುತ್ತಿದ್ದಾರೆ ಹಾಗೂ ಮಜೂರಿ ಸಂಪಾದಿಸುತ್ತಿದ್ದಾರೆ. ಅವರುಗಳ ಮಜೂರಿಯ ಬಹುಭಾಗ ಹೆಂಡ, ಸಾರಾಯಿಗೆ ಕರಗಿ ಹೋಗುತ್ತಿದೆಯೇ ಹೊರತು, ಅವರುಗಳ ಬದುಕಿನ ಸ್ಥಿತಿಗಳ ಸುಧಾರಣೆಗೆ, ಶಿಕ್ಷಣಕ್ಕೆ, ಆರೋಗ್ಯಕ್ಕೆ, ಮನರಂಜನೆಗೆ ಬಳಕೆಯಾಗುತ್ತಿಲ್ಲ. ಪ್ರತಿ ವರ್ಷವೂ ಸರ್ಕಾರವು ಅತಿ ಹೆಚ್ಚು ಹಣಕ್ಕೆ ಹರಾಜು ಕೂಗಿದವರಿಗೆ ಮದ್ಯದಂಗಡಿಗಳನ್ನು ಕೊಡುವುದು, ಆ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಸಮಾಜ ವಿರೋಧಿ ನೀತಿ. ಪಾನ ನಿಷೇಧವೇ ಅತ್ಯುತ್ತಮ ನೀತಿ. ಇನ್ನೊಂದು ಅತ್ಯುತ್ತಮ ನೀತಿಯೆಂದರೆ, ಅಫೀಮಿಗೆ ಪಡಿತರ ಇರುವಂತೆಯೇ, ವಿಸ್ಕಿಯಂತಹ, ವಿದೇಶಿ ಮದ್ಯಗಳೂ ಸೇರಿದಂತೆ ಎಲ್ಲ ಮದ್ಯಗಳಿಗೂ ಪ್ರತಿಯೊಬ್ಬನಿಗೂ ಪಡಿತರ ಜಾರಿಗೆ ತರಬೇಕು. ಎಲ್ಲಕ್ಕಿಂತ ಮಿಗಿಲಾಗಿ, ಸರ್ಕಾರಕ್ಕೆ ಇದರಿಂದ ಆದಾಯ ಇರಬಾರದು ಅಥವಾ ಖಾಸಗೀ ವ್ಯಾಪಾರಿಗಳಿಗೆ ಲಾಭ ಆಗಕೂಡದು. ಎಲ್ಲಿಯವರೆಗೆ ವಿದೇಶಿ ಮದ್ಯಗಳಿಗೆ ನಿಷೇಧ ಇರುವುದಿಲ್ಲವೋ ಅಥವಾ ಪ್ರತಿಯೊಬ್ಬನಿಗೂ ಪಡಿತರ ಇರುವುದಿಲ್ಲವೋ ಅಲ್ಲಿಯವರೆಗೆ ಕಸಗುಡಿಸುವವರು, ಜಾಡಮಾಲಿಗಳು, ಹೆಂಡ, ಸಾರಾಯಿ ಕುಡಿಯುವುದನ್ನು ನಿಯಂತ್ರಿಸಲು ಆಗುವುದಿಲ್ಲ ಅಥವಾ ತಪ್ಪಿಸಲು ಆಗುವುದಿಲ್ಲ. ವಿಸ್ಕಿ ಮುಂತಾದವನ್ನು ಕುಡಿಯುವುದನ್ನು ನಿಲ್ಲಿಸುವುದರಲ್ಲಿ, ತ್ಯಾಗದ ಅಂಶ ಇದ್ದರೆ, ಅದು ಉಳ್ಳವರಿಂದ ಎಂದರೆ ಗಟ್ಟಿ ಕುಳಗಳಿಂದ ಮಾತ್ರ ಸಾಧ್ಯ. ಇವರುಗಳು ಬಡವರ ಹಿತದೃಷ್ಟಿಯಿಂದ ತ್ಯಾಗ ಮಾಡಲೇಬೇಕು.

ಜೂಜು, ಕಸಗುಡಿಸುವವರಲ್ಲಿ, ಜಾಡಮಾಲಿಗಳಲ್ಲಿ ಚಾಲ್ತಿಯಲ್ಲಿದೆಯೆಂದು ಹಾಗೂ ಅವರ ಸಂಪಾದನೆ ಅದಕ್ಕೇ ಹೋಗುತ್ತಿದೆಯೆಂದು ನನಗೆ ತಿಳಿದು ಬಂದಿದೆ. ಜೂಜನ್ನು, ಕಾನೂನು ನಿಷೇಧಿಸಿದೆಯೆಂಬುದೂ ನನಗೆ ತಿಳಿದುಬಂದಿದೆ. ಆದರೆ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿದೆ

ಎಂಬುದು ನನಗೆ ಗೊತ್ತಿಲ್ಲ. ಕುದುರೆ ಜೂಜನ್ನು ಹಾಗೂ ಇತರ ಬಗೆಯ ಜೂಜುಗಳನ್ನು ನಿಷೇಧಿಸದಿದ್ದರೆ, ಬಡ ವರ್ಗದವರು ಜೂಜಾಡಬಾರದೆಂದು ಹೇಳುವುದು ಸರಿಯಾಗಲಾರದು. ಬಡ ವರ್ಗದವರ ಹಿತದೃಷ್ಟಿಯಿಂದ ಕುದುರೆ ಜೂಜನ್ನು ರದ್ದು ಮಾಡಲೇಬೇಕು.

ಕಸಗುಡಿಸುವವರ ಹಾಗೂ ಜಾಡಮಾಲಿಗಳ, ಶಾಲೆಗೆ ಹೋಗುವ ವಯೋಮಾನದ ಮಕ್ಕಳೂ ಕೂಡ, ಮಜೂರಿಗಾಗಿ ಕೆಲಸ ಮಾಡುತ್ತಾರೆಂಬುದು ನನಗೆ ತಿಳಿದು ಬಂದಿದೆ. ಅಂಥ ಮಕ್ಕಳು ರಾತ್ರಿ ಅಥವಾ ಸಂಜೆ ಶಾಲೆಗೆ ಹೋಗುವಂತೆ ಮಾಡುವುದು ಸಾಧ್ಯವಿದೆ. ಅಂಥ ಶಾಲೆಗಳಲ್ಲಿ ಅನುಭವಿ ಮಾಸ್ತರುಗಳ ಉಸ್ತುವಾರಿಯಲ್ಲಿ ಮಕ್ಕಳು ಶಾಂತ ಪರಿಸರದಲ್ಲಿ ಕಲಿಯುತ್ತಾರೆ. ಅಂಥ ಮಕ್ಕಳಿಗೆ ಪಂದ್ಯಗಳು, ಐತಿಹಾಸಿಕ ಮತ್ತು ಇತರ ಆಸಕ್ತಿಯ ಸ್ಥಳಗಳಿಗೆ ಪ್ರವಾಸಗಳು ಮುಂತಾಗಿ ಆರೋಗ್ಯಕರ ಮನರಂಜನೆ ಸೌಲಭ್ಯಗಳನ್ನು ಸಹ ಒದಗಿಸಬೇಕು. ಈ ವಿಷಯಗಳಲ್ಲಿ 'ದೀನ ಸೇವಾ ಸಂಘ'ದ ಅನುಭವ ತುಂಬಾನೆ ಉಪಯೋಗಕ್ಕೆ ಬರುತ್ತದೆ.

ಕಸಗುಡಿಸುವವರು ಬಳಸುವ ಪೊರಕೆಗಳಿಗೆ ಬೊಂಬಿನ ಕೈ ಹಿಡಿಕೆ ಇರಬೇಕು. ಪೊರಕೆ 5 ಅಡಿ ಉದ್ದದ್ದಿರಬೇಕು. ಅಂಥದಿದ್ದರೆ, ಕಸಗುಡಿಸುವವರು ಸಣ್ಣ ಪೊರಕೆ ಹಿಡಿದು ಮಾಡುವಂತೆ ಬೆನ್ನು ಬಾಗಿಸಿ ಕಸಗುಡಿಸಬೇಕಾಗುವುದಿಲ್ಲ. ಉದ್ದದ ಪೊರಕೆಯಿಂದ ಗುಡಿಸಿದಾಗ ಕಸದ ಧೂಳು ಏಳುವುದಿಲ್ಲ. ಹೆಚ್ಚೆಂದರೆ ಧೂಳಿನ ಸ್ವಲ್ಪ ಕಣಗಳು ಹತ್ತಿಕೊಳ್ಳಬಹುದು.

ಧೂಳಿನ ಕಣಗಳು, ಸ್ವಲ್ಪ ಮಟ್ಟಿಗೆ ಕಣ್ಣಿಗೆ, ಮೂಗಿಗೆ, ಕಿವಿಗೆ ಹೋಗಬಹುದೇನೋ ಕಸವನ್ನು ನೆಲದ ಒಂದು ಪಕ್ಕಕ್ಕೆ ಗುಡಿಸಬೇಕೇ ಹೊರತು, ಧೂಳು ಮೇಲೇಳುವಂತೆ ಝಾಡಿಸಬಾರದು.

ನೀನಾಗಲಿ ಅಥವಾ ನಿನ್ನ ಸಹೋದ್ಯೋಗಿಗಳಲ್ಲಿ ಒಬ್ಬರು ಮೊದಲೇ ತಿಳಿಸಿ ಮನೆಗೆ ಬಂದರೆ ನನಗೆ ಸಂತೋಷವಾಗುತ್ತದೆ. ನಾವು ಹೇಗೆ ಕಸಗುಡಿಸುತ್ತೇವೆ, ಪೊರಕೆಯನ್ನು ಹೇಗೆ ಬಳಸುತ್ತೇವೆಂಬುದನ್ನು ನಾನು ತೋರಿಸುತ್ತೇನೆ.

ಬೇರೆ ಯಾವುದಾದರೂ ಆಲೋಚನೆಗಳು ನನ್ನ ಮನಸ್ಸಿಗೆ ಹೊಳೆದರೆ, ನಾನು ನಿನ್ನ ಪರಿಗಣನೆಗಾಗಿ ಅವುಗಳನ್ನು ನಿನಗೆ ತಿಳಿಸುತ್ತೇನೆ.

ವಂದನೆಗಳೊಂದಿಗೆ,

ನಿನ್ನ ನಂಬುಗೆಯ,
ಪಿ.ಕೋದಂಡರಾವ್

ಶ್ರೀ ಐ.ಪಿ.ಡಿ. ಸಾಲಪ್ಪ,
ಸ್ವೀಪರುಗಳ ಹಾಗೂ ಜಾಡಮಾಲಿಗಳ ಬದುಕು
ಹಾಗೂ ಕೆಲಸಗಳಲ್ಲಿ ಸುಧಾರಣೆ ಕುರಿತ
ಸಮಿತಿಯ ಅಧ್ಯಕ್ಷರು
ಮಾಣಿಕ್ಯವೇಲ ಮ್ಯಾನ್‌ಸನ್ಸ್, ಅರಮನೆ ರಸ್ತೆ,
ಬೆಂಗಳೂರು – 52

## ಕರ್ನಾಟಕ ಸರ್ಕಾರ
## ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ಕುರಿತ ಸಮಿತಿ

**ಅಧ್ಯಕ್ಷರು:**

1 ಶ್ರೀ ಐ.ಪಿ.ಡಿ. ಸಾಲಪ್ಪ – ಬೆಂಗಳೂರು

**ಸದಸ್ಯರು:**

2. ಶ್ರೀಮತಿ ಲಕ್ಷ್ಮಿ ಸುಬ್ಬರಾವ್ – ಬೆಂಗಳೂರು
3. ಶ್ರೀ ಪಿ.ಎನ್.ರಾಮಚಂದ್ರ – ಬೆಂಗಳೂರು
4. ಶ್ರೀ ಎಸ್.ಸಿ.ವೆಂಕಟೇಶ್ – ಬೆಂಗಳೂರು
5. ಶ್ರೀ ಎಂ.ರಘುಪತಿ – ಬೆಂಗಳೂರು
6. ಶ್ರೀ ಎ.ಕೆ.ಅನಂತಕೃಷ್ಣ – ಬೆಂಗಳೂರು
7. ಶ್ರೀ ಟಿ.ಆರ್. ಶಾಮಣ್ಣ, ಎಂ.ಎಲ್.ಎ – ಬೆಂಗಳೂರು
8. ಶ್ರೀ ಕೆ. ಶ್ರೀರಾಮುಲು, ಎಂ.ಎಲ್.ಎ – ಬೆಂಗಳೂರು
9. ಶ್ರೀ ಪಿ.ಡಿ. ಬಂಜೇರಾ, ಎಂ.ಎಲ್.ಎ – ಮಂಗಳೂರು
10. ಶ್ರೀ ಸತ್ಯ ನಾರಾಯಣ ಸಿಂಗ್, ಎಂ.ಎಲ್.ಎ – ಹೊಸಪೇಟೆ
11. ಶ್ರೀ ಕೊಣಂದೂರು ಲಿಂಗಪ್ಪ, ಎಂ.ಎಲ್.ಎ – ಶಿವಮೊಗ್ಗ
12. ಶ್ರೀ ಎಸ್.ಎ. ಮುಲ್ಲಾ – ಧಾರವಾಡ
13. ಶ್ರೀ. ಜಿ.ಪಿ.ಗಂಜಿಗಟ್ಟಿ – ಧಾರವಾಡ

**ಕರ್ನಾಟಕ ಸರ್ಕಾರ**

ಸ.ಆ. ನಂ: ಹೆಚ್‌ಎಂಎ 152 ಜಿಜಿಎಲ್ 72

ಬೆಂಗಳೂರು 23, ಸೆಪ್ಟೆಂಬರ್ 1972

**ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳ್ಳಲಿ ಸುಧಾರಣೆ ಕುರಿತ ಸಮಿತಿ**

ನಂ.5, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 1

ಮಾನ್ಯರೇ/ಶ್ರೀಮತಿಯವರೇ

ರಾಜ್ಯದಾದ್ಯಂತ ಇರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಸಲಹೆಗಳನ್ನು ನೀಡುವ ಸಲುವಾಗಿ ಕರ್ನಾಟಕ ಸರ್ಕಾರವು ತನ್ನ ಆದೇಶ ನಂ: ಹೆಚ್‌ಎಂಎ 152 ಜಿಜಿಎಲ್ 72 ದಿನಾಂಕ: 23 ಸೆಪ್ಟೆಂಬರ್ 19677 ರಲ್ಲಿ ಶ್ರೀ ಐ.ಪಿ.ಡಿ. ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಕೆಲಕಾಲದ ಹಿಂದೆ ಉನ್ನತ ಮಟ್ಟದ ಸಮಿತಿಯೊಂದನ್ನು ನೇಮಕ ಮಾಡಿರುವುದು ತಮಗೆ ತಿಳಿದೇ ಇದೆ. ಹರಿಜನರೆಂದು ಕರೆಯುವ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಜನರಿಗೆ ಎಲ್ಲ ಉತ್ತೇಜನಗಳನ್ನು ನೀಡುವ ಅವಶ್ಯಕತೆಯಿದೆ. ಈ ಬಗ್ಗೆ ಭಾರತ ಸರ್ಕಾರವು ಕಾಲಕಾಲಕ್ಕೆ ನೀಡುತ್ತಿರುವ ನಿರ್ದೇಶನಗಳನ್ನು ನಮ್ಮ ಸರ್ಕಾರವು ಅನುಸರಿಸುತ್ತಿದೆ.

ಸಮಿತಿಯು ವ್ಯಾಪಕ ಪ್ರಶ್ನಾವಳಿಯನ್ನು ರೂಪಿಸಿದೆ. ಅದನ್ನು ಈ ಪತ್ರಕ್ಕೆ ಲಗತ್ತಿಸಿದೆ. ಆದಷ್ಟು ಬೇಗನೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡುವಂತೆ ಹಾಗೂ ಈ ಪ್ರಶ್ನಾವಳಿಗೆ ಉತ್ತರಿಸುವಂತೆ ತಮ್ಮನ್ನು ಕೋರಲು ನನಗೆ ನಿರ್ದೇಶನ ದೊರೆತಿದೆ.

ತಾವು ದಯವಿಟ್ಟು 1974ರ ಫೆಬ್ರವರಿ 25ರ ಹೊತ್ತಿಗೆ ತಮ್ಮ ಉತ್ತರಗಳು ಈ ಕಚೇರಿಗೆ ತಲುಪುವಂತೆ ಮಾಡಿದರೆ ಸಮಿತಿಯು ತಮಗೆ ಅಭಾರಿಯಾಗಿರುತ್ತದೆ.

ಸಮಿತಿಯು ಪರಾಮರ್ಶೆ ಮಾಡುವುದಕ್ಕಾಗಿ ಈ ಪ್ರಶ್ನಾವಳಿಗೆ ತಮ್ಮ ಉತ್ತರದ 13 (ಹದಿಮೂರು) ಪ್ರತಿಗಳನ್ನು ಕಳುಹಿಸಬೇಕಾಗಿ ಸಹ ವಿನಂತಿ. ತಮಗೆ ಸಮಿತಿ ಋಣಿಯಾಗಿರುತ್ತದೆ.

ತಮ್ಮ ನಂಬುಗೆಯ,

ಕೆ.ಎಲ್.ಲಕ್ಷ್ಮಣರಾವ್
ಕಾರ್ಯದರ್ಶಿ

## ಮುನ್ನುಡಿ

ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರ ಎರಡೂ ದೇಶದ ಎಲ್ಲ ಕಡೆಗಳಲ್ಲಿ ಇರುವ ಬಹಳಷ್ಟು ಸ್ವೀಪರುಗಳ ಹಾಗೂ ಸ್ಕ್ಯಾವೆಂಜರುಗಳ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯವನ್ನು ಕಳೆದ ಕೆಲವು ವರ್ಷಗಳಿಂದಲೂ ಪರ್ಯಾಲೋಚಿಸುತ್ತಿದ್ದವು. 1957ರಷ್ಟು ಹಿಂದೆಯೇ ಭಾರತ ಸರ್ಕಾರದ ಗೃಹ ಮಂತ್ರಾಲಯವು ಈ ವಿಷಯವನ್ನು ಪರಿಶೀಲಿಸಲು ಪ್ರೊಫೆಸರ್ ಮಲ್ಯಾನಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಈ ವಿಷಯವಾಗಿ ಸಮಿತಿಯು ಅನೇಕ ಪ್ರಮುಖ ನಗರಗಳಿಗೆ ವ್ಯಾಪಕ ಪ್ರವಾಸ ಕೈಗೊಂಡಿತ್ತು. ಅಮೂಲ್ಯ ಸಂಗತಿಗಳನ್ನು, ಅಂಕಿ ಅಂಶಗಳನ್ನು ಸಂಗ್ರಹಿಸಿತ್ತು. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯದಲ್ಲಿ ಸಮಿತಿಯು ಅತ್ಯಂತ ಅಮೂಲ್ಯ ಶಿಫಾರಸುಗಳನ್ನು ಮಾಡಿದೆ.

ಅದಾದ ಕೆಲವು ಕಾಲಾನಂತರ ಭಾರತ ಸರ್ಕಾರವು ರಾಷ್ಟ್ರೀಯ ಕಾರ್ಮಿಕ ಆಯೋಗವೊಂದನ್ನು ನೇಮಕ ಮಾಡಿತ್ತು. ರಾಷ್ಟ್ರದಲ್ಲಿ ಈಗ ಸಂದರ್ಭ ಸನ್ನಿವೇಶಗಳು ಬದಲಾದ ಕಾರಣಗಳಿಂದಾಗಿ, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿತ್ತು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ ಬಿ.ಪಿ. ಗಜೇಂದ್ರ ಗಡ್ಕರ್‌ರವರು ರಾಷ್ಟ್ರೀಯ ಕಾರ್ಮಿಕ ಆಯೋಗದ ಅಧ್ಯಕ್ಷರಾಗಿದ್ದರು. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವಲ್ಲಿ ಅತ್ಯಮೂಲ್ಯ ವರದಿಯನ್ನು ಕೊಟ್ಟಿದೆ ಹಾಗೂ ಬಹಳ ಪರಿಣಾಮಕಾರಿಯಾಗುವಂತಹ ದೂರಗಾಮಿ ಸ್ವರೂಪದ ಶಿಫಾರಸುಗಳನ್ನು ಮಾಡಿದೆ.

ಕೇಂದ್ರ ಸರ್ಕಾರವು ಈ ಎಲ್ಲ ಕ್ರಮಗಳನ್ನು ಕೈಗೊಂಡಿದ್ದರೂ ಹಿಂದಿನಿಂದಲೂ ತಲೆಮಾರುಗಳಿಂದ ಸಮಾಜದಿಂದ ಕಡೆಗಣಿತರಾಗಿರುವ ಹಾಗೂ ಸಮಾಜದಲ್ಲಿ ಈಗಲೂ ಇನ್ನೂ ಕೆಳಸ್ತರದವರಾಗಿರುವ ಬಹಳಷ್ಟು ಕಸಗುಡಿಸುವವರ ಹಾಗೂ ಜಾಡಮಾಲಿಗಳ ವಿಷಾದನೀಯ ಹಾಗೂ ಶೋಚನೀಯ ಸ್ಥಿತಿಗಳಲ್ಲಿ ಸುಧಾರಣೆ ತರಬೇಕಾದುದು ಇನ್ನು ಬಹಳಷ್ಟಿದೆ. ಆದ್ದರಿಂದ ಈ ನತದೃಷ್ಟ ಜನರ ಬದುಕಿನ ಹಾಗೂ ಕಾಯಕದ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಪರಿಣಾಮಕಾರಿ ಹಾಗೂ ತತ್ಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವಾಗಿದೆ.

ಈ ಸಮಸ್ಯೆಯ ತೀವ್ರತೆಯನ್ನು ಸಂಪೂರ್ಣವಾಗಿ ಮನಗಂಡ ಕರ್ನಾಟಕ ಸರ್ಕಾರವು, ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ್ ಅರಸರ ಹಾಗೂ ಪೌರಾಡಳಿತ ಮಂತ್ರಿ ಸನ್ಮಾನ್ಯ ಶ್ರೀ ಟಿ.ಬಸವಲಿಂಗಪ್ಪನವರ ಕ್ರಿಯಾಶೀಲ ಮುಂದಾಳತ್ವದಲ್ಲಿ, ಸಮಾಜದ ಈ ನತದೃಷ್ಟ ವರ್ಗದ ಜನರ ಸ್ಥಿತಿಗಳಲ್ಲಿ ಸುಧಾರಣೆ ತರಲು ಅತ್ಯಂತ ಸಕಾಲಿಕ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಮಾನವ ಮಲವನ್ನು ತಲೆ ಮೇಲೆ ಹೊತ್ತು ಒಯ್ಯುವ ಅಮಾನವೀಯ ಪದ್ಧತಿಯನ್ನು ಕರ್ನಾಟಕ ಸರ್ಕಾರ ಮೊಟ್ಟ ಮೊದಲು ನಿಷೇಧಿಸಿತು. ಈ ಬಹು ಒಳ್ಳೆಯ ಕ್ರಮಕ್ಕಾಗಿ ಶ್ರೇಯಸ್ಸು, ಗೌರವ ಶ್ರೀಯುತರುಗಳಿಗೆ ಸಲ್ಲಬೇಕು. ಈ ನತದೃಷ್ಟ ಜನರ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರಲು ರಾಜ್ಯ ಸರ್ಕಾರವು, ಈ ನಿರ್ದಿಷ್ಟ ಉದ್ದೇಶಕ್ಕಾಗಿ ಸಂವಿಧಾನದಲ್ಲಿ ಹೇಳಿರುವ ರಕ್ಷಣೆಗಳ ಹಾಗೂ ಖಾತರಿಗಳ ಬೆಳಕಿನಲ್ಲಿ ಅನೇಕ ಪ್ರಯೋಜನಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸಂವಿಧಾನಾತ್ಮಕ ರಕ್ಷಣೆಗಳಿದ್ದರೂ, ಖಾತರಿಗಳಿದ್ದರೂ ಹಾಗೂ ಅಸ್ಪೃಶ್ಯತೆ ಕಾನೂನು ಇದ್ದರೂ, ತಮ್ಮ ಬದುಕಿನಲ್ಲಿ ಈಗಲೂ ಅನೇಕ ಸಂಕಷ್ಟ, ಬವಣೆಗಳಿಗೆ ಒಳಗಾಗಿರುವ ಈ ಜನರಿಗೆ ಉತ್ತಮ ಸುಧಾರಣಾ ಕ್ರಮಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಅಷ್ಟೊಂದು ಮುನ್ನಡೆಯಾಗಿಲ್ಲವೆಂದು ವಿಷಾದದಿಂದಲೇ ಹೇಳಬೇಕಾಗಿದೆ.

ಮೊಟ್ಟಮೊದಲ ಬಾರಿಗೆ ಕರ್ನಾಟಕ ಸರ್ಕಾರವು, ರಾಜ್ಯದ ಎಲ್ಲ ಕಡೆಗಳಲ್ಲಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯದಲ್ಲಿ, ಸಮಸ್ಯೆಯ ಎಲ್ಲ ಅಂಶಗಳನ್ನು ಪರಿಶೀಲಿಸಲು ಹಾಗೂ ಸೂಕ್ತ ಶಿಫಾರಸುಗಳನ್ನು ಮಾಡಲು ಶ್ರೀ ಐ.ಪಿ.ಡಿ. ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಕ ಮಾಡಿದೆ. ಈ ವಿಷಯದಲ್ಲಿ ಅಂತಿಮ

ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದಕ್ಕೂ ಮೊದಲು, ಎಲ್ಲ ಸುಸಂಗತ ಅಂಶಗಳನ್ನು ಹಾಗೂ ಅಂಕಿಅಂಶಗಳನ್ನು ಕಂಡುಕೊಳ್ಳುವ ಹಾಗೂ ಸಂಗ್ರಹಿಸುವ ಸಕ್ರಿಯ ಕಾರ್ಯದಲ್ಲಿ ಸಮಿತಿಯು ತೊಡಗಿದೆ.

ಸಮಿತಿಯು ವ್ಯಾಪಕವಾದ ಹಾಗೂ ಉಪಯುಕ್ತ ವರದಿಯನ್ನು ಸಿದ್ಧಪಡಿಸುವ ಪ್ರಯತ್ನದಲ್ಲಿ ಸಮಿತಿಗೆ, ಈ ಪ್ರಶ್ನಾವಳಿಗೆ ಉತ್ತರಿಸುವಲ್ಲಿ ಹಾಗೂ ಎಲ್ಲ ಸುಸಂಗತ ವಿವರಗಳನ್ನು ಒದಗಿಸುವಲ್ಲಿ ತಮ್ಮ ಸಹಕಾರವನ್ನು ನಾನು ಕೋರುತ್ತಿರುವುದು ನನ್ನ ಸುಯೋಗವೆಂದೇ ಭಾವಿಸಿದ್ದೇನೆ.

ಕೆ.ಆರ್.ಲಕ್ಷ್ಮಣರಾವ್

ಕಾರ್ಯದರ್ಶಿ

ಪ್ರಶ್ನಾವಳಿ

ಎ

1. ಸ್ಥಳೀಯ ನಿಕಾಯದ ಹೆಸರು (ಕಾರ್ಪೊರೇಷನ್/ಸಿಟಿ ಮುನಿಸಿಪಾಲಿಟಿ/ಪಟ್ಟಣ ಮುನಿಸಿಪಾಲಿಟಿ/ಪಂಚಾಯತ್) ----------------
2. ಜನಸಂಖ್ಯೆ
3. ವಿಸ್ತೀರ್ಣ
4. ವಾರ್ಷಿಕ ರಾಜಸ್ವ
5. ರಾಜಸ್ವದ ಮುಖ್ಯ ಮೂಲಗಳು
6. ಸ್ವೀಪರುಗಳ ಮತ್ತು ಸ್ಕ್ಯಾವೆಂಜರುಗಳ ಸಿಬ್ಬಂದಿಯ ಖರ್ಚುವೆಚ್ಚ

ಬಿ

1. ಮೇಯರ್/ಅಧ್ಯಕ್ಷರು
2. ಆಡಳಿತಗಾರ
3. ಕೌನ್ಸಿಲರ್‌ಗಳ ಸಂಖ್ಯೆ
4. ಮೀಸಲು ಸ್ಥಾನಗಳು
5. ಆಯುಕ್ತರು/ಮುಖ್ಯ ಅಧಿಕಾರಿ
6. ಆರೋಗ್ಯ ಅಧಿಕಾರಿ

ಸಿ

I

1. ಸ್ವೀಪರುಗಳ ಒಟ್ಟು ಸಂಖ್ಯೆ
2. ಖಾಯಂ ಹಾಜರಿ ಪಟ್ಟಿಯಲ್ಲಿರುವ ಹಾಗೂ ನಾಮಮಾತ್ರದ ಹಾಜರಿಪಟ್ಟಿಯಲ್ಲಿರುವ

   ಕಸಗುಡಿಸುವವರ ಸಂಖ್ಯೆ
3. ಕಸಗುಡಿಸುವವರು ಯಾವ ಸಮುದಾಯದವರು ಹಾಗೂ ಅವರ ಉಪ-ಜಾತಿ ಯಾವುದು
4. ಸ್ವೀಪರುಗಳ ಮಾತೃಭಾಷೆ
5. ಕಸಗುಡಿಸುವವರ ಈಗಿನ ಸಂಖ್ಯಾ ಬಲವನ್ನು ಯಾವ ವರ್ಷದಲ್ಲಿ ಮಂಜೂರು

   ಮಾಡಲಾಯಿತು.
6. ಈಗಿನ ಜನಸಂಖ್ಯೆಗೆ ತಕ್ಕಂತೆ ಸಿಬ್ಬಂದಿಯನ್ನು ಹೆಚ್ಚಿಸಲು ಕೆಲಸ ಭಾರವನ್ನು ಕಡಿಮೆ

   ಮಾಡಲು, ಕ್ಷೇತ್ರ ವ್ಯಾಪ್ತಿಯನ್ನು ವಿಸ್ತರಿಸಲು ನೀವು ಪ್ರಯತ್ನ ಮಾಡಿದ್ದೀರಾ (ದಯವಿಟ್ಟು

ಸಂಪೂರ್ಣ ವಿವರಕೊಡಿ)

7. ಕೆಲಸಗಾರರ ನೇಮಕಾತಿ ವಿಧಾನ ಯಾವುದಿದೆ? ಅದು ವಂಶಪಾರಂಪರ್ಯವೇ?
8. ತಲೆತಲಾಂತರಗಳಿಂದಲೂ ಇವರುಗಳು ಕಸಗುಡಿಸುವ ವೃತ್ತಿಯಲ್ಲಿದ್ದಾರೆಯೇ?
9. ಕಸಗುಡಿಸುವವರ ಸಿಬ್ಬಂದಿಯಲ್ಲಿ ಯಾರಾದರೂ ಸವರ್ಣೀಯ ಹಿಂದೂಗಳಿದ್ದಾರೆಯೇ? ಇದ್ದರೆ, ಎಷ್ಟು ಜನ ಇದ್ದಾರೆ? ಅಂಥವರು ವಾಸ್ತವವಾಗಿ ಕಸಗುಡಿಸುವ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಅಂಥವರಿಗೆ ಬೇರೆ ಕರ್ತವ್ಯಗಳನ್ನು ವಹಿಸಲಾಗಿದೆಯೇ?
10. ಕಸಗುಡಿಸುವವರಿಗೆ ಯಾವ ಸೇವಾ ನಿಯಮಗಳು ಅನ್ವಯವಾಗುತ್ತಿವೆ (ಕೆಸಿಎಸ್ಆರ್/ ಎಂಎಸ್ಆರ್/ಕೈಗಾರಿಕಾ ವಿವಾದಗಳ ಕಾಯ್ದೆ)

II

1. ವೇತನ – (ದಯವಿಟ್ಟು ಸಂಪೂರ್ಣ ವಿವರಗಳನ್ನು ಭರ್ತಿ ಮಾಡಿ)
   ಸಂದಾಯ ತುಟ್ಟಿಭತ್ಯೆ ಹೆಚ್ಚುವರಿ ತುಟ್ಟಿಭತ್ಯೆ ಮನೆ ಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆ
2. ರಜೆ – (ದಿನಗಳು)
   ಕಾಯಿಲೆ ರಜ ಸಾಂದರ್ಭಿಕರಜೆ ಹೆರಿಗೆ ರಜೆ/ಪ್ರಸೂತಿ
3. ದೈನಂದಿನ ಕೆಲಸದ ವೇಳೆ ಎಷ್ಟು?
4. ಅವರಿಗೆ ವಾರಕ್ಕೆ, ಪೂರ್ಣ ರಜಾ ದಿನಗಳು ಅಥವಾ ಎರಡು ಅರ್ಧ ರಜಾದಿನಗಳನ್ನು ಅನುಮತಿ ನೀಡಲಾಗಿದೆಯೇ?
5. ಅವರಿಗೆ ಸರ್ಕಾರಿ ರಜಾ ದಿನಗಳನ್ನು ಅನುಮತಿಸಲಾಗಿದೆಯೇ? ಈ ರಜಾ ದಿನಗಳಲ್ಲಿ ಅವರಿಗೆ ವೇತನ ಸಿಗುತ್ತದೆಯೇ?/ಪಡೆದು ಕೊಳ್ಳುತ್ತಾರೆಯೇ?
6. ------------------------------
7. ಯಾವ ಯಾವ ಸುರಕ್ಷಿತ ಕ್ರಮಗಳು ಚಾಲ್ತಿಯಲ್ಲಿವೆ?
8. ಕಸಗುಡಿಸುವವರ ವೃತ್ತಿಯಲ್ಲಿನ ಅಪಾಯಕಾರಿ ಈ ಅಂಶಗಳ ಬಗ್ಗೆ ಯಾವುದೇ ಸಮೀಕ್ಷೆ ಮಾಡಲಾಗಿದೆಯೇ?
9. ಇವರುಗಳ ವೃತ್ತಿಯಲ್ಲಿನ ಅಪಾಯ ಸಂಭವನೀಯತೆಗಳನ್ನು ಗಮನದಲ್ಲಿಟ್ಟುಕೊಂಡು ವೇತನ ಶ್ರೇಣಿಗಳನ್ನು ಕೊಡಲು ನೀವು ಪ್ರಯತ್ನ ಮಾಡಿದ್ದೀರಾ?
10. ಈ ಕಸಗುಡಿಸುವವರಿಗೆ ಹೆಚ್ಚಿನ ಹಾಗೂ ಸಮಾಧಾನಕರ ಮಜೂರಿಯನ್ನು ಕೊಟ್ಟರೆ, ಸಮಾಜದ ಇತರ ಸಮುದಾಯದ ಜನರೂ, ಈ ಕೆಲಸ ಮಾಡಲು ಮುಂದೆ ಬರುತ್ತಾರೆನ್ನುವುದನ್ನು ಮತ್ತು ಈ ಪ್ರಕ್ರಿಯೆಯಲ್ಲಿ ಅಸ್ಪೃಶ್ಯತೆ ಕಣ್ಮರೆಯಾಗುತ್ತದೆನ್ನುವುದನ್ನು ನೀವು ಒಪ್ಪುತ್ತೀರಾ?

III

1. ಕೆಲಸಗಾರರಿಗೆ ಗ್ರಾಚುಯಿಟಿ ಹಾಗೂ ಪಿಂಚಣಿ ಸೌಲಭ್ಯವನ್ನು ಕೊಡುತ್ತಿರುವಿರಾ? ದಯವಿಟ್ಟು ಪೂರ್ಣ ವಿವರ ಒದಗಿಸಿ.
2. ಕೆಲಸಗಾರರಿಗೆ ಭವಿಷ್ಯ ನಿಧಿ ಯೋಜನೆ ಇದೆಯೇ? ದಯವಿಟ್ಟು ವಿವರಗಳನ್ನು ನೀಡಿ.
3. ಕೆಲಸಗಾರರಿಗೆ ಉಚಿತ ಸಮವಸ್ತ್ರ, ಪಾದರಕ್ಷೆ, ಟವೇಲ್, ಸಾಬೂನುಗಳು, ಇತ್ಯಾದಿಗಳನ್ನು ಒದಗಿಸಲಾಗಿದೆಯೇ? (ದಯವಿಟ್ಟು ಸಂಪೂರ್ಣ ವಿವರಗಳನ್ನು ಒದಗಿಸಿ)
4. ಹಿಂದೇನಾದರೂ, ಯಾರೆ ಕೆಲಸಗರನಿಗೆ ಅಪಘಾತ ಪರಿಹಾರಕೊಟ್ಟಿದ್ದೀರಾ? ಪೂರ್ಣ ವಿವರ ಒದಗಿಸಿ.

**IV**

1. ಕೆಲಸಗಾರರಿಗೆ ಯಾವ ಯಾವ ವೈದ್ಯಕೀಯ ಸೌಲಭ್ಯಗಳನ್ನು ಅಥವಾ ನೆರವನ್ನು ಒದಗಿಸಲಾಗೆದೆ? ಕೆಲಸಗಾರರ ಕಾಲೋನಿಗಳಲ್ಲಿ ನೀವು ಯಾವುದಾದರೂ ಔಷಧಾಲಯಗಳನ್ನು ಪ್ರಾರಂಭಿಸಿದ್ದೀರಾ? ದಯವಿಟ್ಟು ಪೂರ್ಣ ವಿವರಗಳನ್ನು ಒದಗಿಸಿ.
2. ಕಾರ್ಮಿಕರ ಕಲ್ಯಾಣಕ್ಕಾಗಿ ಅಳವಡಿಸಲಾಗಿರುವ ಸಾಮಾಜಿಕ ಭದ್ರತಾ ಕ್ರಮಗಳು ಯಾವುವು?
3. ಕೆಲಸಗಾರರಿಗೆ ವಸತಿಗೃಹ ಒದಗಿಸಲಾಗಿದೆಯೇ? ಹಾಗಿದ್ದರೆ ಎಷ್ಟು ಕ್ವಾಟ್ರಸ್ ಒದಗಿಸಲಾಗಿದೆ.
4. ಕೆಲಸಗಾರರಿಗೆ ಕ್ವಾಟ್ರಸ್ ನಿರ್ಮಾಣ ಮಾಡುವುದಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಆರ್ಥಿಕ ನೆರವನ್ನು ಪಡೆದಿದ್ದೀರಾ?
5. ಆ ಕ್ವಾಟ್ರಸ್ ಗಳು ಬಾಡಿಗೆಯವೇ ಅಥವಾ ಬಾಡಿಗೆ ರಹಿತವೇ?
6. ಕೆಲಸಗಾರರು ನಿವೃತ್ತಿಯ ತರುವಾಯ ಪ್ರಸ್ತುತ ಕ್ವಾಟ್ರಸ್ ನಲ್ಲಿ ಉಳಿದುಕೊಳ್ಳುವುದಕ್ಕೆ ಅನುಮತಿ ನೀಡಲಾಗುವುದೇ? ನೀಡದಿದ್ದರೆ ಏಕೆ? ದಯವಿಟ್ಟು ಕಾರಣ ಕೊಡಿ.
7. ನೀವು ಕಾರ್ಮಿಕರಿಗೆ ಯಾವುದೇ ಮನೆನಿವೇಶನಗಳನ್ನು ನೀಡಿದ್ದೀರಾ? (ದಯವಿಟ್ಟು ಸಂಪೂರ್ಣ ವಿವರಗಳನ್ನು ಒದಗಿಸಿ)
8. ಮನೆ ನಿರ್ಮಿಸಲು ನೀವು ಕಾರ್ಮಿಕರಿಗೆ ಸಾಲವನ್ನು ನೀಡಿದ್ದೀರಾ?
9. ಕೆಲಸಗಾರರು ಯಾವುದಾದರೂ ವಸತಿ, ಸಾಲ ನೀಡಿಕೆ ಮತ್ತು ಗ್ರಾಹಕ ಸಹಕಾರ ಸಂಘಗಳನ್ನು ಪ್ರಾರಂಭಿಸಿರುವರೇ? ಪ್ರಾರಂಭಿಸಿದ್ದರೆ, ಅವುಗಳಿಗೆ ಯಾವ ನೆರವು ನೀಡಿದ್ದೀರಿ?

10. ಕೆಲಸಗಾರರ ಕಾರ್ಮಿಕ ಸಂಘ ಯಾವುದಾದರೂ ಇದೆಯೇ? ಆ ಸಂಘ, ಆ ಸಂಘದ ಪದಾಧಿಕಾರಿಗಳು ಮುಂತಾದವುಗಳ ಬಗ್ಗೆ ದಯವಿಟ್ಟು ಸಂಪೂರ್ಣ ವಿವರಗಳನ್ನು ಒದಗಿಸಿ.

## V

1. ಕೆಲಸಗಾರರ ಮಕ್ಕಳ ಸಂಖ್ಯೆ, ಬಾಲಕರ ಬಾಲಕಿಯರ ಒಟ್ಟು ಸಂಖ್ಯೆ ಸರಾಸರಿ ವಯೋಮಾನ – ಈ ವಿವರಗಳನ್ನು ದಯವಿಟ್ಟು ನೀಡಿ.
2. ಕೆಲಸಗಾರರ ಎಷ್ಟು ಮಕ್ಕಳು ಶಾಲೆಗಳಿಗೆ ಹಾಜರಾಗುತ್ತಿದ್ದಾರೆ? ಬಾಲಕ ಬಾಲಕಿಯರ ಒಟ್ಟು ಸಂಖ್ಯೆ
3. ಕೆಲಸಗಾರರ ಎಷ್ಟು ಮಕ್ಕಳು ಪದವೀಧರರಾಗಿದ್ದಾರೆ? ಸಂಪೂರ್ಣ ವಿವರಗಳನ್ನು ದಯವಿಟ್ಟು ಒದಗಿಸಿ.
4. ನೀವು ಕೆಲಸಗಾರರ ಕಾಲೋನಿಗಳಲ್ಲಿ ಬಾಲಮಂದಿರ ಮತ್ತು ಶಿಶುವಿಹಾರದ ಶಾಲೆಗಳನ್ನು ಪ್ರಾರಂಭಿಸಿದ್ದೀರಾ? ಹಾಗಿದ್ದರೆ, ಪೂರ್ಣ ವಿವರಗಳನ್ನು ನೀಡಬಹುದು.
5. ಕೆಲಸಗಾರ ಮಕ್ಕಳ ಪಾಲನೆ ಪೋಷಣೆಗೆ, ವಿದ್ಯಾಭ್ಯಾಸಕ್ಕೆ, ಆರೋಗ್ಯಕ್ಕೆ ಯಾವ ಯಾವ ಸೌಕರ್ಯಗಳನ್ನು ಒದಗಿಸಲಾಗಿದೆ?

## VI

1. ಕೆಲಸಗಾರರ ಕಾಲೋನಿಗಳಲ್ಲಿ ನೀವು ಸಮುದಾಯ ಭವನ, ರೇಡಿಯೋಗಳು, ಸ್ನಾನ ಗೃಹಗಳು, ಶೌಚಾಲಯಗಳು ಮುಂತಾದ ನಾಗರಿಕ ಸೌಲಭ್ಯಗಳನ್ನು ಒದಗಿಸಿದ್ದೀರಾ?
2. ನಿಮ್ಮ ಪಟ್ಟಣದಲ್ಲಿ ಎಷ್ಟು ಜನ ಕಸಗುಡಿಸುವವರಿದ್ದಾರೆ?

   ದಯವಿಟ್ಟು ಕಾಲೋನಿಗಳ ಹೆಸರುಗಳನ್ನು ನೀಡಿ.
3. ಪ್ರತಿ ಕಾಲೋನಿಯಲ್ಲಿ ಎಷ್ಟು ಮನೆಗಳಿವೆ? ನಿವಾಸಿಗಳ ಒಟ್ಟು ಸಂಖ್ಯೆಯನ್ನು ದಯವಿಟ್ಟು ಒದಗಿಸಿ.

   ಗಂಡು          ಹೆಣ್ಣು          ಮಕ್ಕಳು
4. ಪ್ರತಿಯೊಂದು ಕಾಲೋನಿಯಲ್ಲಿ ಎಷ್ಟು ನೀರಿನ ನಲ್ಲಿಗಳಿವೆ?

## ಡಿ

1. ಸರ್ಕಾರವು ಆದೇಶಿಸಿರುವಂತೆ, ಅಗಸ್ಟ್ 15 ನಂತರ ತಲೆ ಮೇಲೆ ಮಲ ಹೊತ್ತು ಸಾಗಿಸುವುದನ್ನು ನಿಷೇಧಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? ಕೈಗೊಂಡಿರದಿದ್ದರೆ ಏಕೆ? ಸಂಪೂರ್ಣ ವಿವರಗಳನ್ನು ಕೊಡಿ
2. ಕೈಗೊಂಡಿದ್ದರೆ, ಜಾಡಮಾಲಿಗಳಿಗೆ ಯಾವ ಬದಲಿ ಕೆಲಸವನ್ನು ವಹಿಸಲು

   ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ?
3. ನಿಮ್ಮಿಂದ ನೇಮಕಗೊಂಡಿರುವ ಜಾಡಮಾಲಿಗಳ ಸಂಖ್ಯೆ ಎಷ್ಟು?

4. ನಾಗರಿಕರು ಖಾಸಗಿಯಾಗಿ ನಿಯೋಜಿಸಿಕೊಂಡಿರುವ ಜಾಡಮಾಲಿಗಳು ಜಾಡಮಾಲಿ ಕೆಲಸ ಮಾಡುತ್ತಿದ್ದರೆ, ಹಾಗೆ ನಿಯೋಜನೆಗೊಂಡಿರುವ ಜಾಡಮಾಲಿಗಳ ಸಂಖ್ಯೆ, ಅವರ ಜಾತಿ, ಉಪ ಜಾತಿ, ಹುಟ್ಟಿದ ಸ್ಥಳ, ಮಾತೃಭಾಷೆ ಮುಂತಾದವುಗಳ ಬಗ್ಗೆ ದಯವಿಟ್ಟು ಸಂಪೂರ್ಣ ವಿವರ ಕೊಡಿ.

5. ನಿಮ್ಮ ಪಟ್ಟಣದಲ್ಲಿ, ಖಾಸಗಿಯಾಗಿ ಇಟ್ಟುಕೊಂಡಿರುವ ಶೌಚಾಲಯಗಳು ಎಷ್ಟಿವೆ.

6. ಖಾಸಗಿಯಾಗಿ ಇಟ್ಟುಕೊಂಡಿರುವ ಆ ಎಲ್ಲ ಶೌಚಾಲಯಗಳನ್ನು ಸರ್ಕಾರದ ನಿರ್ದೇಶನಗಳಂತೆ ಪರಿವರ್ತಿಸಲಾಗಿದೆಯೇ? ಪರಿವರ್ತಿಸಿರದಿದ್ದರೆ, ಏಕೆ? ಸರ್ಕಾರದ ನಿರ್ದೇಶನಗಳನ್ನು ಪಾಲಿಸದಿರುವುದಕ್ಕೆ ದಯವಿಟ್ಟು ಸಂಪೂರ್ಣ ವಿವರಗಳನ್ನು ಒದಗಿಸಿ.

7. ಖಾಸಗಿಯಾಗಿ ನಿಯೋಜಿಸಿಕೊಂಡಿರುವ ಜಾಡಮಾಲಿಗಳು ಈಗಲೂ ಆ ಕೆಲಸ ಮಾಡುತ್ತಿದ್ದರೆ, ಅವರು ಮಲ ಹೊತ್ತು ಸಾಗಿಸುವುದನ್ನು ತಪ್ಪಿಸಲು ನೀವು ಯಾವ ಕ್ರಮ ತೆಗೆದುಕೊಂಡಿದ್ದೀರಿ?

8. 1973ರ ಆಗಸ್ಟ್ 15 ಕ್ಕೂ ಮೊದಲು ಖಾಸಗಿ ಶೌಚಾಲಯಗಳನ್ನು ಪರಿವರ್ತಿಸಲು ಸರ್ಕಾರವು ನೀಡಿದ ನಿರ್ದೇಶನವನ್ನು ಪಾಲಿಸದಿರುವುದಕ್ಕಾಗಿ ನೀವು 1973ರ ಆಗಸ್ಟ್ 15 ರ ನಂತರ ಎಷ್ಟು ನಾಗರಿಕರನ್ನು ಕಾನೂನು ಕ್ರಮಕ್ಕೆ ಒಳಪಡಿಸಿದ್ದೀರಿ?

ಇ

1. ಕೆಲಸಗಾರರ ಬದುಕಿನ ಹಾಗೂ ಕಾಯಕದ ಸ್ಥಿತಿಗಳಿಗೆ ಸಂಬಂಧಿಸಿದ ಯಾವುದೇ ಇತರ ಸುಸಂಗತ ವಿವರಗಳನ್ನು ದಯವಿಟ್ಟು ಒದಗಿಸಿ
2. ಕೆಲಸಗಾರರ ಈಗಿನ ಸ್ಥಿತಿಗಳಲ್ಲಿ ಸುಧಾರಣೆ ತರಲು ನಿಮ್ಮ ಸಲಹೆಗಳು ಯಾವುವು?

**ಪೌರಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು–ಸಮೀಕ್ಷೆ**

I ಪಟ್ಟಣ/ನಗರ ಜಿಲ್ಲೆ

II ಪೌರಕಾರ್ಮಿಕರ ನೌಕರರು – ಗಂಡು ಹೆಣ್ಣು

III ಜಾತಿ ಗುಂಪುಗಳು

| ಜಾತಿಯ ಹೆಸರು | ಗಂಡು | ಹೆಣ್ಣು | ಒಟು | ಮಾತೃಭಾಷೆ |
|---|---|---|---|---|
| 1. ಮಾದಿಗ | | | | ತೆಲುಗು |
| 2. ಮಾದಿಗ | | | | ಕನ್ನಡ |
| 3. ಮಾಲಾ | | | | ತೆಲುಗು |
| 4. ಹೊಲೆಯ | | | | ಕನ್ನಡ |

5. ವಡ್ಡ ತೆಲುಗು
6. ವಡ್ಡ ಕನ್ನಡ
7. ಬೋವಿ
8. ಮಹರ್
9. ಮಾದರ
10. ಮೋಚಿ
11. ಚಲವಾದಿ
12. ಮುಸ್ಲಿಂ ಉರ್ದು
13.
14.
15.
16.
17.
18.
19.
20.

IV ಪೌರಕಾರ್ಮಿಕರ ಮೂಲ ಜನ್ಮ ಸ್ಥಳ

(ಇವರುಗಳು ಎಲ್ಲಿಂದ ಬಂದಿದ್ದಾರೆ)

V ಎಷ್ಟು ತಲೆಮಾರುಗಳಿಂದ ಇವರುಗಳು ಈ ವೃತ್ತಿಯಲ್ಲಿದ್ದಾರೆ.

VI

1. ಪೌರಕಾರ್ಮಿಕರ ಮನೆಗಳು ಪಟ್ಟಣದ ಹಲವಾರು ಭಾಗಗಳಲ್ಲಿ ಇವೆಯೇ? ಅಥವಾ ಒಂದೇ ಕಾಲೋನಿಯಲ್ಲಿವೆಯೇ?
2. ಮನೆಗಳು ಒಂದೇ ಕಾಲೋನಿಯಲ್ಲಿದ್ದರೆ ಆ ಕಾಲೋನಿಯ ಹೆಸರೇನು?
3. ಪೌರಕಾರ್ಮಿಕರು, ಇತರೆ ಪರಿಶಿಷ್ಟ ಜಾತಿಯ ಜನರೊಂದಿಗೆ ವಾಸಿಸುತ್ತಿದ್ದಾರೆಯೇ ಅಥವಾ ಪ್ರತ್ಯೇಕವಾಗಿ ಬೇರೆ ಕಡೆ ವಾಸಿಸುತ್ತಿದ್ದಾರೆಯೇ?
4. ಪ್ರತ್ಯೇಕವಾಗಿ ವಾಸಿಸುತ್ತಿದ್ದರೆ, ಅದಕ್ಕೆ ಕಾರಣಗಳೇನು?
5. ಪೌರಕಾರ್ಮಿಕರ ಕಾಲೋನಿಯು ಪಟ್ಟಣದ ಮುಖ್ಯ ಭಾಗದಿಂದ ಎಷ್ಟು ದೂರದಲ್ಲಿದೆ?
6. ಪೌರಕಾರ್ಮಿಕರು ಸಮಾಜದ ಇತರ ವರ್ಗಗಳ ಜನರ ಜೊತೆ ವಾಸಿಸುವಂತೆ ಮಾಡಲು ಏನಾದರೂ ಪ್ರಯತ್ನ ಮಾಡಲಾಗಿದೆಯೇ? ಮಾಡಿರದಿದ್ದರೆ ಏಕೆ? ಕಾರಣಗಳೇನು?
7. ಪೌರಕಾರ್ಮಿಕರಿಗೆ ಇತರ ಜಾತಿಗಳ ಬಡಾವಣೆಗಳಲ್ಲಿ ಉಚಿತ ನಿವೇಶನಗಳನ್ನು ಕೊಟ್ಟರೆ ಅಂಥವರು ಈಗಿರುವ ಜಾಗವನ್ನು ಬಿಟ್ಟು ಇತರೆ ಜಾತಿಗಳೊಂದಿಗೆ ಇರಲು ಬಯಸುವರೇ? ಇಚ್ಛಿಸದಿದ್ದರೆ, ಕಾರಣಗಳೇನು?

8. ಪೌರಕಾರ್ಮಿಕರನ್ನು ದೇವಸ್ಥಾನಗಳು ಹೊಟೇಲುಗಳು, ಕ್ಷೌರದಂಗಡಿಗಳು ಮುಂತಾದವುಗಳ ಒಳಗಡೆಗೆ ಬರಲು ಅವಕಾಶ ಕೊಡುತ್ತಿರುವರೇ? ಕೊಡುತ್ತಿಲ್ಲವಾದರೆ ಪೌರಕಾರ್ಮಿಕರು ಕ್ಷೌರ, ದೋಬಿ ಕೆಲಸಕಾರ್ಯಗಳನ್ನು ಹೇಗೆ ಮಾಡಿಕೊಳ್ಳುತ್ತಿದ್ದಾರೆ?
9. ಪರಿಶಿಷ್ಟ ಜಾತಿಯ ಇತರ ವರ್ಗದವರು ದೇವಸ್ಥಾನಗಳು, ಹೊಟೇಲುಗಳು ಮುಂತಾದವುಗಳ ಒಳಗಡೆಗೆ ಬರಲ ಅವಕಾಶ ಕೊಡಲಾಗುತ್ತಿದೆಯೇ? ಪೌರಕಾರ್ಮಿಕರಿಗೆ ಆ ಅವಕಾಶ ಏಕೆ ಕೊಡುತ್ತಿಲ್ಲ? ಕಾರಣಗಳೇನು?
10. ಈ ಬಗ್ಗೆ ಅಧಿಕಾರಿಗಳಿಗೆ ಯಾರಾದರೂ ದೂರು ಕೊಟ್ಟಿದ್ದಾರೆಯೇ? ದೂರು ಕೊಡದಿರಲು ಕಾರಣಗಳೇನು?
11. ಮುಸ್ಲಿಮರ, ಕ್ರಿಶ್ಚಿಯನ್ನರ ಹೊಟೇಲುಗಳ ಒಳಗಡೆಗೆ ಬರಲು ಪೌರಕಾರ್ಮಿಕರಿಗೆ ಅವಕಾಶ ಕೊಡಲಾಗಿದೆಯೇ?
12. ಪೌರಕಾರ್ಮಿಕರ ಕುಟುಂಬಗಳಲ್ಲಿ ಯಾರಾದರೂ ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆಯೇ? ಆಗಿದ್ದರೆ, ಯಾವ ಜಾತಿಯವರನ್ನು ಮದುವೆ ಆಗಿದ್ದಾರೆ, ಬೇರೆ ಜಾತಿಯವರನ್ನು ಮದುವೆ ಆದ ನಂತರದಲ್ಲಿ ಅಂಥ ವ್ಯಕ್ತಿಯ ಸಾಮಾಜಿಕ ಸ್ಥಾನ ಯಾವುದಾಗುತ್ತದೆ?
13. ಸಮಾಜ ಕಲ್ಯಾಣ ಇಲಾಖೆಯಿಂದ ಪೌರಕಾರ್ಮಿಕರ ಕಾಲೋನಿಗೆ ಯಾರಾದರೂ ಅಧಿಕಾರಿಗಳು ಭೇಟಿ ಮಾಡುತ್ತಿದ್ದಾರೆಯೇ?

**VII ಕಾಲೋನಿಗಳಲ್ಲಿನ ಮನೆಗಳು**

1. ಮನೆಗಳ ವಿಧಗಳು
2. ಒಟ್ಟು ಮನೆಗಳ ಸಂಖ್ಯೆ  ಆರ್.ಸಿ.ಸಿ  ಹೆಂಚಿನ ಮನೆ ಹೊದಿಕೆ ಮನೆ
3. ಮೇಲೆ ಹೇಳಿರುವ ಮನೆಗಳು ಪೌರಕಾರ್ಮಿಕರು ಸ್ವಂತವಾಗಿ ಕಟ್ಟಿಕೊಂಡ ಮನೆಗಳೇ ಅಥವಾ ಮುನಿಸಿಪಾಲಿಟಿಯು ಕಟ್ಟಿಸಿಕೊಟ್ಟಿರುವ ಮನೆಗಳೇ?
4. ಈ ಮನೆಗಳು ಪೌರಕಾರ್ಮಿಕರ ಸ್ವಂತ ಮನೆಗಳಾಗಿದ್ದರೆ, ಆ ಮನೆಗಳಿಗೆ ಒಡೆತನದ ಹಕ್ಕನ್ನು ಪಡೆದುಕೊಂಡಿದ್ದಾರೆಯೇ? ಅವರು ಕಟ್ಟಿಕೊಂಡಿರುವ ಮನೆಗಳಿರುವ ಜಾಗಕ್ಕೂ ಒಡೆತನದ ಹಕ್ಕನ್ನು ಪಡೆದುಕೊಂಡಿರುವರೆ?
5. ಅವರ ಬಡಾವಣೆಯು, ಒಳ್ಳೆಯ ವಿನ್ಯಾಸವುಳ್ಳ ಬಡಾವಣೆಯೇ? ಅಥವಾ ಅವ್ಯವಸ್ಥಿತವಾದದ್ದೇ?
6. (ಎ) ಬಡಾವಣೆಯಲ್ಲಿ ಎಷ್ಟು ನೀರಿನ ಬಾವಿಗಳಿವೆ?

   (ಬಿ) ಬಡಾವಣೆಯಲ್ಲಿ ಎಷ್ಟು ನೀರಿನ ನಲ್ಲಿಗಳಿವೆ?

   (ಸಿ) ಬಡಾವಣೆಯಲ್ಲಿ ಎಷ್ಟು ಶೌಚಾಲಯಗಳಿವೆ?

   (ಡಿ) ಮೇಲಿನವುಗಳು ಯಾವುವೂ ಇಲ್ಲದಿದ್ದರೆ ನಿವಾಸಿಗಳು ಹೇಗೆ ನಿಭಾಯಿಸಿಕೊಳ್ಳುತ್ತಿದ್ದಾರೆ?

7. ಬಡಾವಣೆಯಲ್ಲಿ ಎಷ್ಟು ದೇವಾಲಯಗಳಿವೆ ಮತ್ತು ಅವುಗಳಲ್ಲಿ ಯಾವ ಮೂರ್ತಿಗಳಿವೆ?

## VIII

**ಪ್ರತಿಯೊಂದು ಮನೆಯ ಗಣತಿ**

(ಪ್ರತಿಯೊಂದು ಮನೆಗೂ ಪ್ರತ್ಯೇಕ ಹಾಳೆಗಳನ್ನು ಬಳಸಿರಿ. ಏಕೆಂದರೆ ಪಡೆದುಕೊಳ್ಳುವ ಈ ಮಾಹಿತಿಯು ಸಾಮಾಜಿಕ ಸ್ಥಿತಿಗತಿಗಳ ಅಧ್ಯಯನಕ್ಕೆ ಅತ್ಯಂತ ಪ್ರಮುಖವಾದುದಾಗುತ್ತದೆ)

1. ಕುಟುಂಬದ ಮುಖ್ಯಸ್ಥ (ಹೆಸರು) . . . . .

2. ಮನೆಯಲ್ಲಿರುವ ನಿವಾಸಿಗಳ ಸಂಖ್ಯೆ: . . . . .

ಪುರುಷ ಸ್ತ್ರೀ ಹುಡುಗರು ಹುಡುಗಿಯರು ಒಟ್ಟು

3. ಜಾತಿ ಮತ್ತು ಉಪ ಜಾತಿ ಮಾತೃಭಾಷೆ

4 ಕುಟುಂಬದಲ್ಲಿರುವ ಅಕ್ಷರಸ್ಥರ ವಿವರಗಳು:

| | ದೊಡ್ಡವರು | ಹುಡುಗರು | ಹುಡುಗಿಯರು |
|---|---|---|---|
| (ಎ) ಪ್ರಾಥಮಿಕ ಶಾಲೆ | . . . . . | | |
| (ಬಿ) ಮಧ್ಯಮ ಶಾಲೆ | . . . . . | | |
| (ಸಿ) ಹಿರಿಯ ಪ್ರಾಥಮಿಕ ಶಾಲೆ | . . . . . | | |
| (ಡಿ) ಪಿ.ಯು.ಸಿ | . . . . | | |
| (ಇ) ಪದವಿ ಕೋರ್ಸ್ | . . . . | | |
| (ಎಫ್) ತಾಂತ್ರಿಕ ಕೋರ್ಸ್ | . . . . . | | |

5. ಪೌರಕಾರ್ಮಿಕರ ನೌಕರ ಕುಟುಂಬದ ಸದಸ್ಯರ ಸಂಖ್ಯೆ ಎಷ್ಟು?

6. ಕುಟುಂಬದಲ್ಲಿನ ಯಾರಾದರೂ ಮುನಿಸಿಪಾಲಿಟಿ ನೌಕರಿಯಲ್ಲದ ನೌಕರಿಯಲ್ಲಿದ್ದಾರೆಯೇ? ಇದ್ದರೆ, ಅವರು ಮಾಡುತ್ತಿರುವ ಕೆಲಸವೇನು? ಎಷ್ಟು ಸಂಪಾದಿಸುತ್ತಿದ್ದಾರೆ?

7. ಕುಟುಂಬದ ಒಟ್ಟು ಮಾಸಿಕ ಆದಾಯ ಎಷ್ಟು?

8. ಕುಟುಂಬವು ಹಂದಿಗಳು, ಹಾಲು ಕರೆಯುವ ಹಸುಗಳು, ಕೋಳಿ ಮುಂತಾದವುಗಳನ್ನು ಸಾಕಿಕೊಂಡು ಆದಾಯಗಳಿಸುತ್ತಿರುವರೇ? ಹಾಗಿದ್ದರೆ ಆದಾಯ ಎಷ್ಟು?

9. ಕುಟುಂಬವು ಉಪಯೋಗಿಸುವ ಮುಖ್ಯ ಆಹಾರದ ವಿಧ ಯಾವುದು?

   (ಅಕ್ಕಿ/ರಾಗಿ/ಜೋಳ/ಗೋಧಿ)

10. ವಾರದಲ್ಲಿ ಎಷ್ಟು ಸಲ ಮಾಂಸದ ಅಡಿಗೆಯನ್ನು ಮಾಡುತ್ತಾರೆ? ಮತ್ತು ಒಂದು ಸಲಕ್ಕೆ ಎಷ್ಟು ಮಾಂಸವನ್ನು ಖರೀದಿಸುತ್ತಾರೆ?

11. ವಾರಕ್ಕೆ ಎಷ್ಟು ಸಲ ಕೋಳಿ ಮಾಂಸದ ಅಡಿಗೆ ಮಾಡುತ್ತಾರೆ?

12. ಗೋಮಾಂಸವನ್ನು ಸೇವಿಸಲಾಗುತ್ತಿದೆಯೇ? ಹಾಗಿದ್ದರೆ, ಅದು ಆಗ ತಾನೆ ವಧಿ ಮಾಡಿದ ಹಸುವಿನ ತಾಜಾ ಮಾಂಸವೇ ಅಥವಾ ಕಸಾಯಿಖಾನೆಯಿಂದ ತಂದ ಸತ್ತ ದನಗಳ ಮಾಂಸವೇ?
13. ಕುಟುಂಬದಲ್ಲಿ ಹಾಲನ್ನು ಬಳಸಲಾಗುತ್ತಿದೆಯೇ? ಬಳಸುತ್ತಿದ್ದರೆ ಯಾವ ರೂಪದಲ್ಲಿ? ಕಾಫಿಗೆ ಬಳಸಲಾಗುತ್ತಿದೆಯಾ ಅಥವಾ ಹಾಲನ್ನೇ ಕುಡಿಯಲಾಗುತ್ತಿದೆಯಾ?
14. ಕುಟುಂಬದಲ್ಲಿ ಕಾಫಿಯನ್ನು ಬಳಸಲಾಗುತ್ತಿದೆಯೇ? ಹಾಗಿದ್ದರೆ, ದಿನಕ್ಕೆ ಎಷ್ಟು ಬಾರಿ ಕಾಫಿ, ಟೀ ಯನ್ನು ಕುಡಿಯುತ್ತಾರೆ.
15. ಕುಟುಂಬದಲ್ಲಿ ರೇಡಿಯೋ/ ಫ್ಯಾನ್/ ಮಂಚ/ ಕುರ್ಚಿಗಳು ಮುಂತಾದವುಗಳು ಇವೆಯೇ?
16. ಕುಟುಂಬವು ಹಸುಗಳು/ಕೋಳಿ/ಹಂದಿಗಳನ್ನು ಸಾಕಿದ್ದಾರೆಯೇ? ಹಾಗಿದ್ದಲ್ಲಿ ಅಂತ ಪ್ರಾಣಿಗಳ ಸಂಖ್ಯೆ ಎಷ್ಟು?
17. ಕುಟುಂಬದಲ್ಲಿ ಯಾರಾದರೂ ವಾಸಿಯಾಗದ ಅಥವಾ ದೀರ್ಘಕಾಲೀನ ರೋಗಗಳಿಗೆ ತುತ್ತಾಗಿದ್ದಾರೆಯೇ? (ಸಂಪೂರ್ಣ ವಿವರಗಳನ್ನು ಕೊಡಿ)
18. ಕುಟುಂಬವು ಸಾಲ ಪಡೆದಿದೆಯೇ? ಮೊತ್ತ ಎಷ್ಟು?
19. ಸಾಲವನ್ನು ತೆಗೆದುಕೊಳ್ಳಲಾಗಿದೆಯೇ? ಯಾವ ಉದ್ದೇಶಗಳಿಗಾಗಿ
20. ಯಾರಿಂದ ಯಾವ ಬಡ್ಡಿಗೆ ಸಾಲವನ್ನು ತೆಗೆದುಕೊಳ್ಳಲಾಗಿದೆಯೇ? (ಪುರಸಭೆ/ ಬ್ಯಾಂಕ್/ಸೊಸೈಟಿ/ ಖಾಸಗಿ ಸಾಲಗಾರರಿಂದ)
21. ಕುಟುಂಬದಲ್ಲಿ ಮದ್ಯ ಕುಡಿಯುವವರು ಎಷ್ಟು ಜನರಿದ್ದಾರೆ? ಪ್ರತಿ ದಿನಕ್ಕೆ ಅವರು ಕುಡಿಯುವುದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಾರೆ?
22. ಬಿಡುವಿನ ವೇಳೆ ಮತ್ತು ರಜಾ ದಿನಗಳನ್ನು ಹೇಗೆ ಕಳೆಯುತ್ತಾರೆ?
23. ವಾರದಲ್ಲಿ ಎಷ್ಟು ಬಾರಿ ಸ್ನಾನ ಮಾಡುತ್ತಾರೆ?
24. ಕುಟುಂಬದ ಆಹಾರ ಪದ್ಧತಿ ಏನು?
25. ಯಾವುದು ಪ್ರಮುಖವಾದ ಹಬ್ಬ ಮತ್ತು ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡುತ್ತಾರೆ?
26. ಕುಟುಂಬದ ಯಾರೇ ಸದಸ್ಯರು ಅನಾರೋಗ್ಯಕ್ಕೆ ಒಳಗಾಗಿದ್ದರೆ, ವೈದ್ಯರಿಂದ/ ಹಕಿಮ್‌ರಿಂದ/ನಾಟಿ ವೈದ್ಯರಿಂದ ಔಷಧಿಯನ್ನು ಪಡೆಯುತ್ತಿದ್ದಾರೆಯೇ ಅಥವಾ ದೇವರಿಗೆ "ಮುಡುಪು" ಸಲ್ಲಿಸುತ್ತಾರಾ? ಹರಕೆ ಮಾಡಿಕೊಳ್ಳುತ್ತಿರಾ?

## IX ಮದುವೆ ಸಂಪ್ರದಾಯಗಳು

1. ಕುಟುಂಬದ ಯಾರೇ ಪುರುಷನಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರು ಇದ್ದಾರೆಯೇ? ಹಾಗಿದ್ದರೆ, ಎರಡನೇ ಮದುವೆಯಾಗಲು ಕಾರಣಗಳು?

2. ಕುಟುಂಬದಲ್ಲಿ ಯಾರೇ ವಿಧವೆಗೆ ಮರು ಮದುವೆಗೆ ಅನುಮತಿ ನೀಡಲಾಗಿದೆಯೇ?
3. ಕುಟುಂಬದಲ್ಲಿ ಯಾರಾದರೂ ತನ್ನ ಹೆಂಡತಿಯನ್ನು/ ಗಂಡನನ್ನು ವಿಚ್ಛೇದನ ಮಾಡಿ ಕೊಂಡಿದ್ದಾರೆಯೇ? ವಿಚ್ಛೇದನ ಮಾಡಿಕೊಂಡಿದ್ದರೆ ಏಕೆ?
4. ಮಗಳ ಮದುವೆಯನ್ನು ಆಚರಿಸಲು ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತದೆ? ವರನ ಕಡೆಯಿಂದ ವಧು ದಕ್ಷಿಣೆ ಹಣವನ್ನು ಕೊಡಲಾಗಿದೆಯೇ ಅಥವಾ ವಧುವಿನ ಕಡೆಯಿಂದ ವರದಕ್ಷಿಣೆಯನ್ನು ತೆಗೆದುಕೊಳ್ಳಲಾಗಿದೆಯೇ?
5. ಎಷ್ಟು ದಿನಗಳವರೆಗೆ ಮದುವೆ ಶಾಸ್ತ್ರಗಳು, ವಿಧಿವಿಧಾನಗಳು ನಡೆಯುತ್ತವೆ?

## ಭಾಗ IV

## ಪೌರಕಾರ್ಮಿಕರ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವುದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದಲ್ಲಿರುವ ಕಾರ್ಪೊರೇಷನ್‌ಗಳಿಗಾಗಿ ಹಾಗೂ ಮುನಿಸಿಪಾಲಿಟಿಗಳಿಗಾಗಿ ಉದ್ದೇಶಿತ ಸಾಮಾನ್ಯ ಕಾಯ್ದೆಗಳಲ್ಲಿ ಸೇರಿಸಿಕೊಳ್ಳುವ ಸಲುವಾಗಿ ಮಾಡಿದ ಮಧ್ಯಂತರ ಶಿಫಾರಸುಗಳು

"ಪೌರಕಾರ್ಮಿಕರು" ಎಂದು ಈಗ ಕರೆಯುತ್ತಿರುವ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬದುಕಿನ ಹಾಗೂ ಕಾಯಕದ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯದಲ್ಲಿ ಯಾವುದೇ ವಿಳಂಬಕ್ಕೆ ಆಸ್ಪದ ಕೊಡುವ ಹಾಗಿಲ್ಲ. ಸಂಬಂಧಪಟ್ಟ ಎಲ್ಲರ ಹಿತದೃಷ್ಟಿಯಿಂದ ಈ ವಿಷಯವನ್ನು ಮೊದಲ ಆದ್ಯತೆ ಮೇಲೆ ನಿಭಾಯಿಸಬೇಕಾಗಿದೆ.

ಕರ್ನಾಟಕ ರಾಜ್ಯದಲ್ಲಿರುವ ಕಾರ್ಪೊರೇಷನ್‌ಗಳಿಗಾಗಿ ಹಾಗೂ ಮುನಿಸಿಪಾಲಿಟಿಗಳಿಗಾಗಿ ಉದ್ದೇಶಿತ ಸಾಮಾನ್ಯ ಕಾಯ್ದೆಗಳಲ್ಲಿ, ಅದೇ ಪ್ರವರ್ಗದ ಇತರ ಸರ್ಕಾರಿ ನೌಕರರುಗಳಿಗೆ ಒದಗಿಸಿರುವ ಸೇವಾ ಪ್ರಯೋಜನಗಳ ಜೊತೆಗೆ 'ಪೌರಕಾರ್ಮಿಕ' ರುಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಏಳಿಗೆಗಾಗಿ ಮಾಡಿರುವ ವ್ಯಾಪಕ ಶಿಫಾರಸುಗಳನ್ನು ಸೇರಿಸಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ಈ ಮುಂದಿನಂತೆ ಶಿಫಾರಸುಗಳನ್ನು ಮಾಡಲಾಗಿದೆ:

### 1. ವರ್ಗೀಕರಣ ಮತ್ತು ನೇಮಕಾತಿ

ಪೌರಕಾರ್ಮಿಕರ ಸೇವಾ ನಿಬಂಧನೆಗಳಲ್ಲಿ ಅವರಿಗೆ ಒದಗಿಸಬೇಕಾದ ಸಾಮಾನ್ಯ ಮತ್ತು ನಿರ್ದಿಷ್ಟ ಪ್ರಯೋಜನಗಳಲ್ಲದೆ, ಅವರಿಗೆ "ಕೈಗಾರಿಕಾ ವಿವಾದಗಳ ಕಾಯ್ದೆ" ಮತ್ತು "ಕೆಲಸಗಾರರ ಪರಿಹಾರ ಕಾಯ್ದೆ" ಯಲ್ಲಿ ಹೇಳಿರುವ ಸವಲತ್ತುಗಳು ಹಾಗೂ ಹಕ್ಕುಗಳು ಅನ್ವಯವಾಗಬೇಕು.

ಅವರ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ರಕ್ಷಿಸುವ ಸಲುವಾಗಿ, ರಾಜ್ಯದಲ್ಲಿರುವಎಲ್ಲ ಪೌರಕಾರ್ಮಿಕರಿಗೆ ಅನ್ವಯವಾಗುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಬೇಕು. ಹಲವಾರು ಕೇಡರುಗಳಲ್ಲಿ ಉಂಟಾಗುವ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿ ಮಾಡಿಕೊಳ್ಳುವಾಗ 'ಪೌರಕಾರ್ಮಿಕ'ರ ಮಕ್ಕಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಾತಿಗಳಿಗೆ ಶೇಕಡಾ 18 ರಷ್ಟು ಶಾಸನಾತ್ಮಕ ಮೀಸಲು ಕೋಟಾದಲ್ಲಿ ಆದ್ಯತೆ ಕೊಡಲು ಕಾಯ್ದೆಯಲ್ಲಿ ನಿಬಂಧನೆಯನ್ನು ಕಲ್ಪಿಸಬೇಕು.
'ಪೌರ ಕಾಮಿಕರ' ವೃಂದಗಳಿಗೆ ನೇಮಕಾತಿಯು ಎಲ್ಲ ಜಾತಿಗಳವರಿಗೆ ಮತ್ತು ಸಮುದಾಯದವರಿಗೆ ಮುಕ್ತವಾಗಿರಬೇಕು.

ಎಲ್ಲ ರೀತಿಯಲ್ಲೂ ಅರ್ಹರಿದ್ದರೆ, ನಿವೃತ್ತ ಹಾಗೂ ಮೃತ ನೌಕರರ ಅವಲಂಬಿತರಿಗೆನೇಮಕಾತಿಯಲ್ಲಿ ಇತರರಿಗಿಂತಲೂ ಆದ್ಯತೆ ಕೊಡಬೇಕು.
ಯಾವುದೇ ಮುನಿಸಿಪಲ್ ಸಂಸ್ಥೆಯಲ್ಲಿ ಪೌರಕಾರ್ಮಿಕರ ಸಂಖ್ಯೆ 200 ಕ್ಕಿಂತಲೂ ಕಡಿಮೆ ಇರದಿದ್ದರೆ, ಅಲ್ಲಿಗೆ ಕಾರ್ಮಿಕರ ಕಲ್ಯಾಣ ಅಧಿಕಾರಿಗಳ ನೇಮಕ ಕಡ್ಡಾಯವಾಗಿ ಆಗಬೇಕು.

### 2. ನೇಮಕಾತಿ

ರಜೆ ಮೇಲೆ ಹೋಗುವ ನೌಕರನಿಂದ ಉಂಟಾಗುವ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರವೇ ಬದಲಿ ನೌಕರರನ್ನು ನೇಮಕ ಮಾಡಿಕೊಳ್ಳಬೇಕು. ಈ ಉದ್ದೇಶಕ್ಕಾಗಿ ಮುನಿಸಿಪಲ್ ರಿಜಿಸ್ಟರುಗಳಲ್ಲಿ ಈಗಾಗಲೇ

ನೋಂದಾಯಿಸಿಕೊಂಡಿರುವ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳಬೇಕು. ರಜೆಯಿಂದಾಗಿ ಖಾಲಿಯಾದ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕಾಗಿ ವ್ಯಕ್ತಿಗಳನ್ನು ನೋಂದಾಯಿಸಿಕೊಳ್ಳುವಾಗ, ಅಂಥ ರಿಜಿಸ್ಟರುಗಳಲ್ಲಿ ಅಂಥ ವ್ಯಕ್ತಿಗಳ ಫೋಟೋಗಳನ್ನು ಅಂಟಿಸಿಕೊಳ್ಳಬೇಕು. (ಪೋಟೋಗಳನ್ನು ಅಧಿಕೃತ ಅಧಿಕಾರಿಗಳು ದೃಢೀಕರಿಸಿರಬೇಕು) ನೋಂದಾಯಿಸಿಕೊಂಡ ಅಂಥ ವ್ಯಕ್ತಿಗೆ ಅವನ ದೃಢೀಕೃತ ಫೋಟೋ ಜೊತೆಗೆ ಗುರುತು ಕಾರ್ಡ್‌ನ್ನು ನೀಡಬೇಕು.

ಹೊಸದಾಗಿ ನೇಮಕ ಮಾಡಿಕೊಳ್ಳುವಾಗ ನೋಂದಾಯಿತ ವ್ಯಕ್ತಿಗಳನ್ನು ಮಾತ್ರವೇ ಬದಲಿ ನೌಕರ ಹುದ್ದೆಗೆ ಪರಿಗಣಿಸಬೇಕು. ಅಂಥ ವ್ಯಕ್ತಿಗಳು ಉದ್ಯೋಗ ವಿನಿಮಯ ಕೇಂದ್ರಗಳಿಂದ ಸೂಚಿಸಿದವರುಗಳಾಗಿರಬೇಕೆಂದೇನೂ ಇಲ್ಲ. ಅಲ್ಲದೆ ಅಂಥ ವ್ಯಕ್ತಿಗಳಿಗೆ ವಯಸ್ಸಿನ ಮಿತಿಗಳನ್ನು ಸಡಿಲಿಸಬೇಕು.

**3. ಅರೆಕಾಲಿಕ ಉದ್ಯೋಗ**

ಯಾವುದೇ ಮುನಿಸಿಪಾಲಿಟಿಯಲ್ಲಿ ಯಾರೇ ವ್ಯಕ್ತಿಯನ್ನು ಅರೆಕಾಲಿಕ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಾರದು. ಹಾಗೆ ನೇಮಕ ಮಾಡಿಕೊಳ್ಳುವ ವಿಧಾನ ಈಗಲೂ ಯಾವುದೇ ಮುನಿಸಿಪಾಲಿಟಿಯಲ್ಲಿ ಇದ್ದರೆ ಅದನ್ನು ಕೂಡಲೇ ನಿಲ್ಲಿಸಬೇಕು. ಅಂಥ ನೌಕರರನ್ನು ಕೂಡಲೇ ನಿಯತ ವೃಂದಗಳಲ್ಲಿ ವಿಲೀನಗೊಳಿಸಬೇಕು.

ತಾತ್ಕಾಲಿಕವಾಗಿ ನೇಮಕಗೊಂಡಿರುವ, ಆದರೆ, ಒಂದು ವರ್ಷ ಸೇವೆ ಸಲ್ಲಿಸಿರುವ ಪ್ರತಿಯೊಬ್ಬ ಪೌರಕಾರ್ಮಿಕನನ್ನು ಖಾಯಂ ನೌಕರನನ್ನಾಗಿ ಸ್ಥಿರೀಕರಿಸಬೇಕು.

**4. ವೇತನ ಶ್ರೇಣಿ**

'ಪೌರಕಾರ್ಮಿಕ'ರ ವೇತನ ಶ್ರೇಣಿ ಬಗ್ಗೆ ಸಮಿತಿಯು, ಕಸಗುಡಿಸುವ, ಸ್ವಚ್ಛಗೊಳಿಸುವ, ಸಾಗಿಸುವ ಮತ್ತು ಮಾನವ ತ್ಯಾಜ್ಯ ಹಾಗೂ ಕಸ ಮುಂತಾದವನ್ನು ವಿಲೇ ಮಾಡುವ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು, ಅವರು ಅಹಿತಕರ ಹಾಗೂ ಆರೋಗ್ಯಕ್ಕೆ ನಿರಂತರ ಹಾನಿಕಾರಕ ಕೆಲಸವನ್ನು ಮಾಡುತ್ತಿರುವುದರಿಂದ, ಕೊನೆಯ ದರ್ಜೆಯ ಕುಶಲ ಕೆಲಸಗಾರರೆಂದು ಪರಿಗಣಿಸಬೇಕು. ಇತ್ತೀಚಿನ ಆಲೋಚನೆಗನುಸಾರವಾಗಿ (ಉದಾಹರಣೆಗೆ III ಕೇಂದ್ರೀಯ ವೇತನ ಆಯೋಗವು ಸ್ಥೂಲವಾಗಿ ಒಪ್ಪಿಕೊಂಡಿರುವಂತೆ) ಕೊನೆಯ ದರ್ಜೆಯ ಕುಶಲ ಕೆಲಸಗಾರರನ್ನು, ವೇತನ ನಿಗದಿ ಮಾಡುವ ಉದ್ದೇಶಕ್ಕಾಗಿ II ನೇ ದರ್ಜೆ ಗುಮಾಸ್ತರಿಗೆ ಸಮಾನವೆಂದು ಪರಿಗಣಿಸಬೇಕು.

ಮಾನವ ತ್ಯಾಜ್ಯವನ್ನು ತೆರವು ಮಾಡುವ, ರವಾನಿಸುವ ಮತ್ತು ವಿಲೇ ಮಾಡುವ ಪೌರಕಾರ್ಮಿಕರು, ರೊಚ್ಚನ್ನು ವಿಲೇ ಮಾಡಲು, ಆಳುಗುಂಡಿಗಳನ್ನು, ಗಟಾರಗಳನ್ನು ಸ್ವಚ್ಛಗೊಳಿಸಲು, ಕಸವನ್ನು ಡಂಪಿಂಗ್ ಯಾರ್ಡ್‌ಗಳಲ್ಲಿ ಹಾಕಲು ಮಾಡುವ ಕೆಲಸವು, ಯಾವುವೇ ಬಗೆಯ ತೆರೆದ ಚರಂಡಿಯಲ್ಲಿ ಮಾಡುವ ಕೆಲಸವು ತೀವ್ರ ರೂಪದಲ್ಲಿ ಆರೋಗ್ಯಕ್ಕೆ ಹಾನಿಕಾರಕವಾದ ಕೆಲಸವಾದ್ದರಿಂದ, ಅವರ ಒಟ್ಟು ಸಂಬಳದಲ್ಲಿ ಶೇಕಡಾ 20 ರಷ್ಟು ವಿಶೇಷ ಹೆಚ್ಚುವರಿ ಭತ್ಯೆಯನ್ನು ಕೊಡಬೇಕು.

ರಾಜ್ಯ ಸರ್ಕಾರವು ತನ್ನ ನೌಕರರಿಗೆ ಮಂಜೂರು ಮಾಡಿದ ಎಲ್ಲ ವೇತನ ಶ್ರೇಣಿಗಳು ಮುಂತಾದವು ಕಾರ್ಪೊರೇಷನ್ನಿನ, ಮುನಿಸಿಪಾಲಿಟಿಗಳ ಮತ್ತು ಪಂಚಾಯತ್‌ಗಳ ಎಲ್ಲ

ಪೌರಕಾರ್ಮಿಕರಿಗೆ ಅನ್ವಯವಾಗಬೇಕು. ಸಂಬಂಧಪಟ್ಟ ಸರ್ಕಾರಿ ಆದೇಶಗಳನ್ನು ಕಾರ್ಪೊರೇಷನ್ ಗಳು ಹಾಗೂ ಮುನಿಸಿಪಾಲಿಟಿಗಳು ಕೂಡಲೇ, ತಂತಾನೆ ಹಾಗೂ ಏಕಕಾಲದಲ್ಲಿ ಕಡ್ಡಾಯವಾಗಿ ಕಾರ್ಯರೂಪಕ್ಕೆ ತರಬೇಕು. ಅಂಥ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ತಪ್ಪಿದರೆ, ಶಿಸ್ತುಕ್ರಮಗಳಿಗೆ ಒಳಪಡಿಸಬೇಕು.

**5. ಮುಂಬಡ್ತಿ ಅವಕಾಶಗಳು**

ದಫೇದಾರರು, ಆಕ್ಟ್ರಾಯಿ ಮುತ್ಸದಿಗಳು, ಅಟೆಂಡರುಗಳು, ವಾಹನ ಚಾಲಕರು, II ನೇ ದರ್ಜೆ ಗುಮಾಸ್ತರು, ಸೂಪರ್ ವೈಸರ್‌ಗಳು, ವರ್ಕ್ ಇನ್‌ಸ್ಪೆಕ್ಟರುಗಳು, ಕಿರಿಯ ಆರೋಗ್ಯ ಪರಿವೀಕ್ಷಕರು, ಆಯಾಗಳು, ಮಿಡ್ ವೈವ್ಸ್ ಮುಂತಾದ ಮೇಲಿನ ಹುದ್ದೆಗಳಿಗೆ ಪೌರಕಾರ್ಮಿಕರನ್ನು, ಅವರುಗಳು ಅನುಭವಗಳಿಸಿಕೊಂಡಿದ್ದರೆ ಹಾಗೂ ಸೂಕ್ತ ಅರ್ಹತೆ ಇದ್ದರೆ ಮುಂಬಡ್ತಿಗೆ ಅರ್ಹರೆಂದು ಪರಿಗಣಿಸಬೇಕು. ಈ ಉದ್ದೇಶಕ್ಕಾಗಿ ಸೂಕ್ತ 'ಇನ್ ಸರ್ವೀಸ್' ತರಬೇತಿ ಕಾರ್ಯಕ್ರಮವನ್ನು ರೂಪಿಸಬೇಕು ಹಾಗೂ ತರಬೇತಿಗೆ ವ್ಯವಸ್ಥೆ ಮಾಡಬೇಕು. ಪುರುಷ ಮತ್ತು ಮಹಿಳಾ ಪೌರಕಾರ್ಮಿಕರಿಗೆ, ಅವರವರು ಅರ್ಹರಾಗುವ ಮೇಲಿನ ಹುದ್ದೆಗಳಿಗೆ ಮುಂಬಡ್ತಿ ಅವಕಾಶಗಳನ್ನು ಸಮಾನವಾಗಿ ಒದಗಿಸಬೇಕು.

ಹಾಗೆಯೇ ನೌಕರರಿಗೆ ಪ್ರತಿ 3 ವರ್ಷಗಳಿಗೆ ಒಂದು ಸಲ ಆಂತರಿಕವಾಗಿ ವರ್ಗಾವಣೆ ಅವಕಾಶಗಳನ್ನು ಒದಗಿಸಬೇಕು ಮತ್ತು ನಿಬಂಧನೆಗಳಲ್ಲಿ, ಇತರ ಸರ್ಕಾರಿ ನೌಕರರಿಗೆ ಉತ್ತಮ ನಿಯುಕ್ತಿಯ ಹುದ್ದೆಗಳಿಗೆ ಮುಂಬಡ್ತಿ ಅವಕಾಶಗಳು ಇರುವಂತೆಯೇ, ಸೇವಾ ಉತ್ತಮ ನಿಯುಕ್ತಿಯನ್ನುಳ್ಳ ಹುದ್ದೆಗಳಿಗೂ ಮುಂದಿನ ಮುಂಬಡ್ತಿ ಅವಕಾಶಗಳನ್ನು ಪೌರಕಾರ್ಮಿಕರಿಗೂ ವಿಸ್ತರಿಸಬೇಕು.

ಪೌರಕಾರ್ಮಿಕರಿಗೆ ಮುಂಬಡ್ತಿ ಅವಕಾಶಗಳು ಕೆಲವು ಮಾತ್ರವೇ ಇರುವ ಸಾಧ್ಯತೆಯಿರುವುದರಿಂದ ಹಾಗೂ ಬಹಳ ಅಂತರವಿರುವವುಗಳಾದ್ದರಿಂದ, ಒಂದು ಶ್ರೇಣಿಯಲ್ಲಿ 7 ವರ್ಷಗಳ ಸೇವೆಯ ನಂತರ, ಮುಂದಿನ ಹೆಚ್ಚಿನ ಶ್ರೇಣಿಗೆ ಮುಂಬಡ್ತಿ ಕಲ್ಪಿಸುವ ಸಲುವಾಗಿ ಆಯ್ಕೆ ಕಾಲಿಕ ಶ್ರೇಣಿಗಳನ್ನು ರೂಪಿಸಬೇಕು.

**6. ನಿವೃತ್ತಿ**

58 ವರ್ಷ ವಯಸ್ಸಾದಾಗ ಪೌರಕಾರ್ಮಿಕರು ನಿವೃತ್ತರಾಗತಕ್ಕದ್ದು. ನಿವೃತ್ತಿ ದಿನಾಂಕಕ್ಕೆ 6 ತಿಂಗಳ ಮುಂಚೆಯೇ ನಿವೃತ್ತಿ ನೋಟೀಸನ್ನು ಕೊಡಬೇಕು.

**7. ಪಿಂಚಣಿ ಮತ್ತು ಗ್ರಾಚುಯಿಟಿ**

ನಿವೃತ್ತಿ ವಯಸ್ಸು ತುಂಬಿದಾಗ ನಿವೃತ್ತಿಯಾಗುವ ಪ್ರತಿಯೊಬ್ಬ ನೌಕರನು, ಆತನಿಗೆ ಆಗ ದೊರಕುತ್ತಿದ್ದ 15 ತಿಂಗಳ ಸಂಬಳಕ್ಕೆ ಸಮನಾದ ಗ್ರಾಚುಯಿಟಿಗೆ ಅರ್ಹನಾಗಿರತಕ್ಕದ್ದು. ಗ್ರಾಚುಯಿಟಿ ಹಣವನ್ನು ನಿವೃತ್ತಿಯ ದಿನವೇ ಕೊಡತಕ್ಕದ್ದು. ಸೇವೆಯಲ್ಲಿರುವಾಗಲೇ ಪೌರಕಾರ್ಮಿಕನು ಮೃತನಾದರೆ, ಆತನ ನಾಮ ನಿರ್ದೇಶಿತ ವ್ಯಕ್ತಿ, ವಾರಸುದಾರ ಅಥವಾ ಕಾನೂನು ಸಮ್ಮತ ಪ್ರತಿನಿಧಿಯು ಅಷ್ಟೇ ಮೊತ್ತ ಪಡೆಯಲು ಅರ್ಹನಾಗಿರತಕ್ಕದ್ದು.

ನೌಕರನು ನಿವೃತ್ತನಾಗುವುದಕ್ಕೆ ಸಾಕಷ್ಟು ಮುಂಚೆಯೇ ಎಂದರೆ ಕೊನೆಪಕ್ಷ 6 ತಿಂಗಳು ಮುಂಚೆಯೇ ಪಿಂಚಣಿ ಹಾಗೂ ಗ್ರಾಚುಯಿಟಿ ದಾಖಲೆಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವ

ಕಾರ್ಯ ಆಗಬೇಕು. ಸಂಬಂಧಪಟ್ಟ ಪ್ರಾಧಿಕಾರಿಯು ಈ ನಿರ್ದೇಶನವನ್ನು ಪಾಲಿಸದಿದ್ದರೆ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

ನಿವೃತ್ತನಾಗುವ ಪ್ರತಿಯೊಬ್ಬ ನೌಕರನ ಪಿಂಚಣಿ ದಾಖಲೆಗಳನ್ನು, ಆತನ ನಿವೃತ್ತಿಯ ನಂತರದ ತಿಂಗಳ ಕೊನೆಯ ದಿನಾಂಕಕ್ಕೂ ಮೊದಲು, ಮೊದಲ ಪಿಂಚಣಿ ಹಣ ಆತನಿಗೆ ದೊರಕುವಂತೆ, ಆಖೈರುಗೊಳಿಸಬೇಕು. ಹಾಗೆಯೇ, ನೌಕರನು ಸೇವೆಯಲ್ಲಿರುವಾಗಲೇ ಮೃತನಾದರೆ, ಕುಟುಂಬವು ಪಿಂಚಣಿಗೆ ಅರ್ಹನಾಗಿದ್ದರೆ, ಮೊದಲ ಪಿಂಚಣಿಯನ್ನು ಆತ ಮೃತನಾದ ನಂತರದ ಕೊನೆಯ ಕೆಲಸದ ದಿನದಂದು ಪಾವತಿ ಮಾಡಬೇಕು.

**8. ರಜೆ ಸೌಲಭ್ಯಗಳು**

ರಜೆಯನ್ನು ಯಾವ ರೀತಿಯಲ್ಲಿ ಮಂಜೂರು ಮಾಡಬೇಕು ಹಾಗೂ ಹೇಗೆ ಬಳಸಿಕೊಳ್ಳಬೇಕು ಎನ್ನುವುದನ್ನು ಈ ಮುಂದೆ ಹೇಳಲಾಗಿದೆ.

(i) ಒಂದು ಸಲಕ್ಕೆ ಮಾತ್ರ, ವೈದ್ಯಕೀಯ ಪ್ರಮಾಣ ಪತ್ರ ಕೊಡದೆಯೇ ಮೂರು ದಿನಗಳಿಗೆ ಅನಾರೋಗ್ಯ ರಜೆ

(ii) ಎಲ್ಲ ಪೌರಕಾರ್ಮಿಕರು, 2 ವರ್ಷಗಳ ಒಂದು ಬ್ಲಾಕ್ ಅವಧಿಯಲ್ಲಿ ಒಂದು ತಿಂಗಳು ರಜೆ ಅಥವಾ ವಿಶ್ರಾಂತಿಗಾಗಿ ಹಾಗೂ ಬಿಡುವಿಗಾಗಿ ಒಂದು ವರ್ಷದಲ್ಲಿ 15 ದಿನಗಳ ರಜೆ

(iii) ಮಹಿಳಾ ಕೆಲಸಗಾರರಿಗೆ 2 ತಿಂಗಳ ಹೆರಿಗೆ ರಜೆಯನ್ನು ಮಹಿಳಾ ಕೆಲಸಗಾರರ ಅನುಕೂಲಕ್ಕೆ ತಕ್ಕಂತೆ, ಆದರೆ, ಹೆರಿಗೆಯ ದಿನಾಂಕದಿಂದ ಹೆರಿಗೆ ರಜೆಯನ್ನು 6 ವಾರಗಳಿಗೂ ಮೀರಿ ಹಾಕಬಾರದೆಂದು ಒತ್ತಾಯಿಸದೆ, ಮಂಜೂರು ಮಾಡಬೇಕು.

**9. ವಾರದ ರಜಾ ದಿನಗಳು**

ಯಾರೇ ಪೌರಕಾರ್ಮಿಕನನ್ನು ಒಂದು ವಾರದಲ್ಲಿ 5½ ದಿನಗಳಿಗಿಂತ ಹೆಚ್ಚಿಗೆ ಕೆಲಸ ಮಾಡಲು ಹೇಳಬಾರದು. ಇತರ ಸರ್ಕಾರಿ ನೌಕರರಿಗೆ ಕೊಡವಂತೆಯೇ ಪೌರಕಾರ್ಮಿಕರಿಗೂ ಎಲ್ಲ ಸರ್ಕಾರಿ ರಜಾ ದಿನಗಳನ್ನು (ವಾರದ, ಹಬ್ಬ ಹರಿದಿನಗಳ ಮತ್ತು ರಾಷ್ಟ್ರೀಯ) ಕೊಡಬೇಕು. ಯಾವುದೇ ತುರ್ತು ಸಂದರ್ಭ ಸನ್ನಿವೇಶದಲ್ಲಿ ಅಧಿಕೃತ ರಜಾ ದಿನದಂದು ಕೆಲಸ ಮಾಡಬೇಕೆಂದು ಪೌರಕಾರ್ಮಿಕನಿಗೆ ಹೇಳಿದರೆ, ಯಾವಾಗ ಅವನು ಇಚ್ಛಿಸುವನೋ ಆಗ ಅವನಿಗೆ ಪರಿಹಾರ ರಜೆಯನ್ನು ಅಥವಾ ಅಂಥ ದಿನ ಅವನು ಕೆಲಸ ಮಾಡಿದ್ದಕ್ಕಾಗಿ ಮಜೂರಿಯ ಎರಡು ಪಟ್ಟು ಮಜೂರಿಯನ್ನು ಅವನಿಗೆ ಕೊಡಬೇಕು.

**10. ಕೆಲಸದ ವೇಳೆಗಳು**

ಯಾರೇ ಪೌರಕಾರ್ಮಿಕನಿಗೆ ಒಂದು ದಿನದಲ್ಲಿ ಏಳು ಗಂಟೆಗಳಿಗೂ ಹೆಚ್ಚಿಗೆ ಕೆಲಸ ಮಾಡಲು ಹೇಳಬಾರದು. ಅಂಥ ಕೆಲಸದ ವೇಳೆಗಳಲ್ಲಿ ಎರಡು ಪಾಳಿಗಳಿರಬೇಕು. ಪ್ರತಿಯೊಂದು ಪಾಳಿಯ ನಡುವೆ ಅರ್ಧ ಗಂಟೆ ವಿರಾಮಕ್ಕೆ ಅವಕಾಶ ಕೊಡಬೇಕು. ಎರಡು ಸರದಿಗಳ ನಡುವೆ ನಾಲ್ಕು ಗಂಟೆಗಳ ಮಧ್ಯಂತರ ಇರಬೇಕು.

ರಾತ್ರಿ ಪಾಳಿಗಳಲ್ಲಿ, ಪ್ರತಿಯೊಬ್ಬ ನೌಕರನು 6 ಗಂಟೆ ಮಾತ್ರ ಕೆಲಸ ಮಾಡಬೇಕು. ಈ ಮಧ್ಯೆ ಅರ್ಧ ಗಂಟೆ ವಿರಾಮಕ್ಕೆ ಅವಕಾಶ ಕೊಡಬೇಕು.

**11. ಸಮವಸ್ತ್ರಗಳು**

(i) ಈಗ ಪುರುಷ ಕೆಲಸಗಾರರಿಗೆ ಅರ್ಧ ತೋಳಿನ ಅಂಗಿಗಳನ್ನು ಮತ್ತು ನಿಕ್ಕರುಗಳನ್ನು ಕೊಡಲಾಗುತ್ತಿದೆ. ಈ ಸಮವಸ್ತ್ರ ನೋಡುವುದಕ್ಕೆ ಚೆನ್ನಾಗಿ ಕಾಣೋಲ್ಲ. ಅವರಿಗೆ ಈ ಮುಂದೆ ಹೇಳಿರುವವುಗಳನ್ನು ಕೊಡಬೇಕು: ಮೂರು ಜೊತೆ ಬುಷ್ ಶರ್ಟುಗಳು, ಪೂರ್ಣ ಉದ್ದದ ಟ್ರೌಷರುಗಳು, ಅತಿಯಾದ ಬಳಕೆಯನ್ನು ತಡೆದುಕೊಳ್ಳುವಂತಹ ಚಪ್ಪಲಿಗಳನ್ನು ಅಥವಾ ಕ್ಯಾನ್‌ವಾಸ್ ಶೂಗಳನ್ನು (ಈ ಎರಡರಲ್ಲಿ ಪೌರಕಾರ್ಮಿಕನು ಯಾವುದನ್ನು ಇಚ್ಛಿಸುತ್ತಾನೋ ಅದನ್ನು) ಮತ್ತು ಪೀ–ಕ್ಯಾಪ್‌ಗಳನ್ನು ಕೊಡಬೇಕು.

(ii) ಮಹಿಳಾ ಕೆಲಸಗಾರರಿಗೆ ಪ್ರತಿ ವರ್ಷ ಈ ಮುಂದೆ ಹೇಳಿರುವವುಗಳನ್ನು ಕೊಡಬೇಕು: 8 ಗಜಗಳ ಮೂರು ಕಾಟನ್ ಸೀರೆಗಳು, ಮೂರು ರವಿಕೆಗಳು ಎರಡು ಜೊತೆ ಚಪ್ಪಲಿಗಳು

(iii) ಎಲ್ಲ ಕೆಲಸಗಾರರಿಗೆ ಮೈಯನ್ನು ಬೆಚ್ಚಗಿಡುವ ಸಮವಸ್ತ್ರ ಒಂದು ಜೊತೆ (ವಾರಮ್ ಯೂನಿಫಾರಂ) ಕೊಡಬೇಕು. ಏಕೆಂದರೆ ಈ ಜನ ಚಳಿಗಾಲದಲ್ಲಿ ಹಾಗೂ ಬೆಟ್ಟಗುಡ್ಡ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕೆಲಸ ಮಾಡುವುದರಿಂದ ಇಂತಹ ಸಮವಸ್ತ್ರ ಆವಶ್ಯಕ. ಇವುಗಳ ಜೊತೆಗೆ, ಬೆಟ್ಟಗುಡ್ಡಗಳ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ ಒಂದು ಜೊತೆ ಕಂಬಳಿಗಳನ್ನು ಕೊಡಬೇಕು. ಪ್ರತಿವರ್ಷವೂ ಎಲ್ಲ ಕೆಲಸಗಾರರಿಗೆ ಒಂದು ರೈನ್ ಕೋಟ್ ಕೊಡಬೇಕು.

(iv) ಮಾನವನ ತ್ಯಾಜ್ಯವನ್ನು ತೆರವುಗೊಳಿಸುವ, ಸ್ವಚ್ಛಗೊಳಿಸುವ ಹಾಗೂ ವಿಲೇ ಮಾಡುವವರಿಗೆ ಆಳುಗುಂಡಿಗಳಲ್ಲಿ, ಚೇಂಬರುಗಳಲ್ಲಿ, ತೆರೆದ ಚರಂಡಿಗಳಲ್ಲಿ, ಗಟಾರಗಳಲ್ಲಿ, ಕಸಕಡ್ಡಿ ಸುರಿಯುವ ಪ್ರಾಂಗಣಗಳಲ್ಲಿ ಕೆಲಸ ಮಾಡುವವರಿಗೆ ವಾಡಿಕೆಯ ಸಮವಸ್ತ್ರಗಳ ಜೊತೆಗೆ ಒಂದು ಜೊತೆ ರಬ್ಬರ ಕೈಗವಸುಗಳನ್ನು ಮುಖ ಮುಸುಕುಗಳನ್ನು ಹಾಗೂ ಗಂ ಬೂಟುಗಳನ್ನು ತೊಡಬೇಕು. ಅಲ್ಲದೆ ಕಸಕಡ್ಡಿಗಳನ್ನು, ಮಾನವ ತ್ಯಾಜ್ಯವನ್ನು ಸಾಗಣೆ ಮಾಡುವ ಲಾರಿಗಳಲ್ಲಿ ಹಾಗೂ ಇತರ ವಾಹನಗಳಲ್ಲಿ ಕೆಲಸ ಮಾಡುವವರಿಗೂ ಈ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು.

(v) ಎಲ್ಲ ಪುರುಷ ಹಾಗೂ ಮಹಿಳಾ ಕೆಲಸಗಾರರಿಗೆ ಈ ಮುಂದೆ ಹೇಳಿರುವವುಗಳನ್ನು ಕೊಡಬೇಕು:

(ಎ) ಪ್ರತಿ ವರ್ಷ ಒಂದು ಜೊತೆ ದೊಡ್ಡ ಉದ್ದನೆ ಟವೆಲ್‌ಗಳು

(ಬಿ) ಪ್ರತಿ ತಿಂಗಳೂ ಒಂದು ಫುಲ್ ಬಾರ್ 501 ಸೋಪು ಅಥವಾ ಮೈಸೂರು ಸರ್ಕಾರಿ ವಾಷಿಂಗ್ ಸೋಪು

(ಸಿ) ಪ್ರತಿ ತಿಂಗಳೂ ಲೈಫ್ ಬಾಯ್ ಸೋಪಿನ ಎರಡು ಬಿಲ್ಲೆಗಳು

**12. ವೈದ್ಯಕೀಯ**

ಪೌರಕಾರ್ಮಿಕರು ಅಪಾಯಕಾರಿ ವೃತ್ತಿಯಲ್ಲಿ ತೊಡಗಿರುವುದರಿಂದ, ಎಲ್ಲ ಬಗೆಯ ಸೋಂಕು ರೋಗಗಳು ಹಾಗೂ ಸಾಂಕ್ರಾಮಿಕ ರೋಗಗಳು ಅವರಿಗೆ ತಗಲುವ ಸಾಧ್ಯತೆ ಇರುತ್ತದೆ. ಆದ್ದರಿಂದ, ಪ್ರತಿ ಮೂರು ತಿಂಗಳಿಗೆ ಒಂದು ಸಲ ಸಂಪೂರ್ಣ ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕು ಮತ್ತು ಯಾವುದೇ ಕಾಯಿಲೆ ಇರುವುದು ಪತ್ತೆಯಾದರೆ, ಸಂಬಂಧಪಟ್ಟ ಮುನಿಸಿಪಾಲಿಟಿಯು, ರೋಗಿಯು ಸಂಪೂರ್ಣವಾಗಿ ಗುಣ ಮುಖನಾಗುವವರೆಗೆ ಉಚಿತವಾಗಿ ವೈದ್ಯಕೀಯ ನೆರವು ಒದಗಿಸಬೇಕು ಮತ್ತು ಕೆಲಸಕ್ಕೆ ಹಾಜರಾಗಲು ವೈದ್ಯಕೀಯವಾಗಿ ಅರ್ಹನಿದ್ದಾನೆಂದು ಹೇಳಿದಾಗ ಮಾತ್ರವೇ ಅವನನ್ನು ಕರ್ತವ್ಯದ ಮೇಲೆ ತೆಗೆದುಕೊಳ್ಳಬೇಕು. ಈ ಸೌಲಭ್ಯಗಳಿಗೆ ಪೌರಕಾರ್ಮಿಕರ ಅವಲಂಬಿತರು ಸಹ ಅರ್ಹರಿರಬೇಕು.

**13. ಕೆಲಸಗಾರರ ಸಂಖ್ಯೆ ಹಾಗೂ ಸೇವಾ ನಿಬಂಧನೆಗಳು**

ಈಗ 1000 ಜನಸಂಖ್ಯೆಗೆ ಒಬ್ಬ ಸ್ವೀಪರ್‌ನನ್ನು ಮುನಿಸಿಪಾಲಿಟಿಗಳು ನೇಮಕ ಮಾಡಿಕೊಳ್ಳುತ್ತಿವೆ. ಹಾಗಾಗಿ, ಕೆಲಸಗಾರರ ಮೇಲೆ ಭಾರಿ ಕೆಲಸದ ಹೊರೆ ಬೀಳುತ್ತಿದೆ.

ಕೆಲಸಗಾರರಿಂದ, ದಕ್ಷ ಹಾಗೂ ಸಮರ್ಪಕ ಕೆಲಸ ಆಗುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕಾದರೆ ಪ್ರತಿಯೊಂದು ಮುನಿಸಿಪಾಲಿಟಿಯು ಸಾಕಷ್ಟು ಸಂಖ್ಯೆಯಲ್ಲಿ ಕೆಲಸಗಾರರನ್ನು ನೇಮಕ ಮಾಡಿಕೊಳ್ಳಬೇಕು. 500 ಜನ ಸಂಖ್ಯೆಗೆ ಕೊನೆ ಪಕ್ಷ ಒಬ್ಬ ನೌಕರನನ್ನು ನೇಮಕ ಮಾಡಿಕೊಳ್ಳಬೇಕು. ಹಾಗೆಯೆ ಆಳುಗುಂಡಿಗಳನ್ನು ಗಟಾರಗಳನ್ನು, ಚರಂಡಿಗಳನ್ನು ಸ್ವಚ್ಛಗೊಳಿಸುವ ಇತರ ಸಂಬಂಧಿತ ಕೆಲಸಗಾರರನ್ನು ಈ ಮೇಲೆ ಹೇಳಿರುವ ಪ್ರಮಾಣದಲ್ಲಿ ನೇಮಕಾತಿ ಮಾಡಿಕೊಳ್ಳಬೇಕು. ಲಾರಿಗಳಲ್ಲಿನ ಹಾಗೂ ಕಸಕಡ್ಡಿ ಸುರಿಯುವ ಅಂಗಣ ಮುಂತಾದವುಗಳಲ್ಲಿ ಕೆಲಸಗಾರರನ್ನು ಸಹ ನೇಮಕ ಮಾಡಿಕೊಳ್ಳಬೇಕು.

ಕಸಕಡ್ಡಿಯನ್ನು ಸಾಗಣೆ ಮಾಡುವ ಪ್ರತಿಯೊಂದು ವಾಹನದಲ್ಲಿ ಈ ಮುಂದೆ ಹೇಳಿರುವಂತೆ 6 ಕೆಲಸಗಾರರಿರಬೇಕು: ಬ್ಯಾಸ್ಕೆಟ್‌ಗೆ ತುಂಬಲು ಇಬ್ಬರು, ಬ್ಯಾಸ್ಕೆಟ್ ನ್ನು ವಾಹನಕ್ಕೆ ತೆಗೆದುಕೊಂಡು ಹೋಗಲು ಇಬ್ಬರು, ಬ್ಯಾಸ್ಕೆಟ್ ನಲ್ಲಿರುವುದನ್ನು ಲಾರಿಯೊಳಕ್ಕೆ ಹಾಕಲು ವಾಹನಗಳ ಮೇಲೆ ಇಬ್ಬರು. ಸಂಗ್ರಹಿತ ಕಸಕಡ್ಡಿ ಮೇಲೆ ಕುಳಿತುಕೊಳ್ಳಲು ಯಾರೇ ಕೆಲಸಗಾರನಿಗೆ ಅವಕಾಶ ಕೊಡಬಾರದು. ಕೆಲಸಗಾರರು ಲಾರಿಯಲ್ಲಿ ಕುಳಿತುಕೊಳ್ಳಲು ಪ್ರತ್ಯೇಕ ಕ್ಯಾಬಿನ್‌ನನ್ನು ಒದಗಿಸಬೇಕು.

ಒಂದು ನಿರ್ದಿಷ್ಟ ಹುದ್ದೆಗೆ ನೇಮಕ ಮಾಡಿಕೊಂಡ ನೌಕರನನ್ನು ಯಾವುದೇ ಇತರೆ ಕೆಲಸ ಮಾಡಲು ಹೇಳಬಾರದು. ಕಸಗುಡಿಸುವ ಮುಂತಾದ ಕೆಲಸಕ್ಕಾಗಿ ನೇಮಕ ಮಾಡಿಕೊಂಡಿರುವ ಮೇಲು ಜಾತಿಗಳ ಜನರಿಗೆ ಇತರ ಹುದ್ದೆಗಳಲ್ಲಿ ಕೆಲಸ ಮಾಡಲು ಹೇಳಬಾರದೆನ್ನುವುದಕ್ಕೆ ಈ ನಿರ್ಬಂಧ ಆವಶ್ಯಕ.

ಈಗ ಮಾಡುತ್ತಿರುವಂತೆ, ಬಯಲು ಜಾಗದಲ್ಲಿ ಪೌರಕಾರ್ಮಿಕರ ಹಾಜರಾತಿ ತೆಗೆದುಕೊಳ್ಳಬಾರದು. ಇದಕ್ಕಾಗಿ ಕಾರ್ಪೊರೇಷನ್‌ಗಳು ಮತ್ತು ಮುನಿಸಿಪಾಲಿಟಿಗಳು ಎಲ್ಲ ವಿಭಾಗಗಳಲ್ಲಿ ಕಪಾಟುಗಳು ಇರುವ, ಸಮವಸ್ತ್ರ ತೆಗೆದು ಬೇರೆ ಬಟ್ಟೆ ಬರೆ ಹಾಕಿಕೊಳ್ಳುವುದಕ್ಕೆ ಅವಕಾಶ ಇರುವ, ಸ್ವಚ್ಛ ಮಾಡಿಕೊಳ್ಳುವುದಕ್ಕೆ ಹಾಗೂ ಶೌಚಾಲಯಕ್ಕೆ ವ್ಯವಸ್ಥೆ ಮುಂತಾದವಕ್ಕೆ ಅವಕಾಶವಿರುವ 'ಹಾಜರಾತಿ ದಾಖಲಿಸುವ ಕೋಣೆ'ಯನ್ನು ಕೆಲಸಗಾರರು ಬಳಸಿಕೊಳ್ಳುವಂತಹ ರೀತಿಯಲ್ಲಿ ಕಡ್ಡಾಯವಾಗಿ ನಿರ್ಮಿಸಬೇಕು.

ಕೆಲಸಗಾರರು, ಕೆಲಸ ಮಾಡಬೇಕಾದ ಜಾಗವು ಅವರಿರುವ ವಾಸದ ಜಾಗಕ್ಕಿಂತ 2 ಕಿ.ಮೀ ಗಿಂತಲೂ ದೂರ ಇದ್ದರೆ, ಅವರ ವಾಸದ ಜಾಗದಿಂದ ಅವರು ಕೆಲಸ ಮಾಡುವ

ಜಾಗಕ್ಕೆ ಹೋಗಿ ಬರಲು ಅವರಿಗೆ ಕಾರ್ಪೋರೇಷನ್‌ಗಳು ಹಾಗೂ ಮುನಿಸಿಪಾಲಿಟಿಗಳು ಕಡ್ಡಾಯವಾಗಿ ವಾಹನ ಸೌಕರ್ಯವನ್ನು ಒದಗಿಸಬೇಕು.

ಕಸಗುಡಿಸುವವರಲ್ಲಿ ಯಾರು ತನಗೆ ವಹಿಸಿರುವ ಜಾಗವನ್ನು ತುಂಬಾನೆ ಸ್ವಚ್ಛವಾಗಿಟ್ಟು ಕೊಳ್ಳುವರೋ ಅಂತಹ ಕೆಲಸಗಾರರಿಗೆ ಪ್ರತಿ ವರ್ಷ ಸೂಕ್ತ ಬಹುಮಾನವನ್ನು ಪ್ರತಿಯೊಂದು ಮುನಿಸಿಪಾಲಿಟಿಯು ಕಡ್ಡಾಯವಾಗಿ ಕೊಡಬೇಕೆಂದು ಶಾಸನದಲ್ಲಿ ನಿಬಂಧನೆ ಕಲ್ಪಿಸಬೇಕು.

ಬೀದಿಗಳಿಗೆ ಕಸಕಡ್ಡಿಯನ್ನು ಎಸೆಯುವ, ಬೀದಿಯಲ್ಲಿ ಉಗುಳುವ, ಮಕ್ಕಳು ಬೀದಿಯಲ್ಲಿ, ಕಕ್ಕ, ಉಚ್ಚೆ ಮಾಡಿಸುವ ನಾಗರಿಕರ ಮೇಲೆ ಆಯಾಯ ತಪ್ಪಿಗೆ ತಕ್ಕಂತೆ ಭಾರಿ ದಂಡ ಹಾಕುವ ನಿಬಂಧನೆಯನ್ನು ಶಾಸನದಲ್ಲಿ ಕಲ್ಪಿಸಬೇಕು. ಈ ಉದ್ದೇಶಕ್ಕಾಗಿ ಸಮುಚಿತ ನಿಯಮಗಳನ್ನು ರಚಿಸಬೇಕು.

## 14. ಸಾಮಾಜಿಕ ಭದ್ರತೆ

ಕಂತನ್ನು ಸಂಬಳದಲ್ಲಿ ಕಡಿತ ಮಾಡುವ ಆಧಾರದ ಮೇಲೆ ಸಂಬಳದ ಶೇಕಡಾ 5 ರಷ್ಟಕ್ಕಿಂತ ಕಡಿಮೆ ಇರದ ಹಣವನ್ನು ಕಡಿತ ಮಾಡಿಸಿಕೊಂಡು ಜೀವ ವಿಮೆ ಪಾಲಿಸಿ ತೆಗೆದುಕೊಳ್ಳಬೇಕೆಂದು ಪ್ರತಿಯೊಬ್ಬ ಪೌರಕಾರ್ಮಿಕನಿಗೂ ಹೇಳಬೇಕು.

ಪೌರಕಾರ್ಮಿಕರನ್ನು ಹಣ ಲೇವಾದೇವಿಗಾರರ ಶೋಷಣೆಯಿಂದ ರಕ್ಷಿಸಲು ಪೌರಕಾರ್ಮಿಕರ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು. ಕಾರ್ಪೋರೇಷನ್‌ಗಳು ಹಾಗೂ ಮುನಿಸಿಪಾಲಿಟಿಗಳು ಸಂಘದ ಪ್ರಾರಂಭಿಕ ಹಾಗೂ ಕಾರ್ಯನಿರತ ಬಂಡವಾಳಕ್ಕಾಗಿ ಸಂಘಕ್ಕೆ ಬಡ್ಡಿ ರಹಿತ ಸಾಲ ಕೊಡಬೇಕು. ಅಲ್ಲದೆ, ಸಂಬಳದಲ್ಲಿ ಕಡಿತದ ಆಧಾರದ ಮೇಲೆ ಹಾಗೂ ಆಯಾಯ ಸ್ಥಳೀಯ ಸಂಸ್ಥೆಗಳು ಮರು ಪಾವತಿ ಮಾಡುವುದಾಗಿ ಕೊಟ್ಟ ಖಾತ್ರಿ ಆಧಾರದ ಮೇಲೆ, ಅನುಮತಿಸಬಹುದಾದ ಉದ್ದೇಶಗಳಿಗಾಗಿ ಸಾಲವನ್ನು ಪಡೆದುಕೊಳ್ಳುವ ಸಲುವಾಗಿ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಕೆಲಸಗಾರರು ಖಾತೆ ತೆರೆಯುವಂತೆ ಕ್ರಮ ಕೈಗೊಳ್ಳಬೇಕು.

ರಾಜ್ಯ ಸರ್ಕಾರವು ಪ್ರಾರಂಭಿಸಿರುವ 'ಕುಟುಂಬ ಕಲ್ಯಾಣ ನಿಧಿ' ಯೋಜನೆಯೆನ್ನುವ ಇನ್ನೊಂದು ಯೋಜನೆಯನ್ನು ಪೌರಕಾರ್ಮಿಕರಿಗೂ ಅನ್ವಯಿಸಬಹುದಾಗಿದೆ. ಈ ಯೋಜನೆಯ ನಿಧಿಗೆ, ಪ್ರತಿಯೊಬ್ಬ ಪೌರಕಾರ್ಮಿಕನು ತನ್ನ ಸಂಬಳದಲ್ಲಿ ಪ್ರತಿ ತಿಂಗಳೂ 2 ರೂಪಾಯಿಗೆ ಕಡಿಮೆ ಇರದಂತೆ ಪಾವತಿ ಮಾಡಬೇಕು. ಇದರಿಂದ ಪೌರಕಾರ್ಮಿಕನ ಕುಟುಂಬದಲ್ಲಿ ಯಾರಾದರೂ ದಿನನಿತ್ಯದ ಕೆಲಸ ಮಾಡುತ್ತಿರುವಾಗ ನಿಧನರಾದರೆ ತತ್‌ಕ್ಷಣದ ಪರಿಹಾರ ದೊರಕುತ್ತದೆ. ಮೃತ ವ್ಯಕ್ತಿಯ ಕುಟುಂಬದ ಇತರರಿಗೂ ಸಹ ಈ ಯೋಜನೆಯ ಪ್ರಯೋಜನಗಳು ದೊರಕುತ್ತವೆ.

## 15. ಒಳ್ಳೆಯ ಪರಿಸರದಲ್ಲಿ ಬದುಕುವುದಕ್ಕೆ ನಿಬಂಧನೆಗಳು

ಪೌರಕಾರ್ಮಿಕರ ಮನೆಗಳ ಹತ್ತಿರದಲ್ಲಿ ಮದ್ಯದಂಗಡಿಗಳು ಇರಲೇಬಾರದೆನ್ನುವ ಅಥವಾ ಅಂತಹ ಜಾಗದಲ್ಲಿ ಮದ್ಯದಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಕೊಡಲೇಬಾರದೆನ್ನುವ ರಾಜ್ಯ ಸರ್ಕಾರದ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅಂಥವೇನಾದರೂ ಅಲ್ಲಿದ್ದರೆ ಅವುಗಳನ್ನು ಕೂಡಲೇ ಸ್ಥಳಾಂತರಿಸಬೇಕು.

ವಾಚನಾಲಯ, ಗ್ರಂಥಾಲಯ ಮತ್ತು ಕರಕುಶಲ ವಿಭಾಗವಿರುವ ಸಮುದಾಯ ಭವನಗಳನ್ನು ಮುನಿಸಿಪಾಲಿಟಿಗಳು ನಿರ್ಮಿಸಬೇಕು. ಬಟ್ಟೆ ಹೊಲಿಯುವುದು, ಚಾಪೆ ಹೆಣೆಯುವುದು, ನಾರಿನ ಕೆಲಸ ಮುಂತಾದವುಗಳಲ್ಲಿ, ಪೌರಕಾರ್ಮಿಕರ ಹೆಂಡತಿಗೆ ಹಾಗೂ ಹೆಣ್ಣು ಮಕ್ಕಳಿಗೆ ತರಬೇತಿ ಕೊಡಲು ವ್ಯವಸ್ಥೆ ಮಾಡಬೇಕು. ಹಾಗೆಯೇ ಸಮಾಜ ಕಲ್ಯಾಣ ಇಲಾಖೆಯು ಸಾಮಾಜಿಕ ಹಾಗೂ ನೈತಿಕ ವಿಷಯಗಳ ಮೇಲೆ, ಪ್ರತಿವಾರದ ಅಂತ್ಯದಲ್ಲಿ ನಿಯತವಾಗಿ ಉಪನ್ಯಾಸಗಳನ್ನು ಏರ್ಪಡಿಸಬೇಕು. ಹಾಗೆಯೇ ಪೌರಕಾರ್ಮಿಕರ ಕುಟುಂಬದ ಇತರ ಮಹಿಳೆಯರು, ಇತರ ಹೆಣ್ಣು ಮಕ್ಕಳು ತಮ್ಮತಮ್ಮ ಮನೆಗಳನ್ನು

ಹಾಗೂ ತಮ್ಮತಮ್ಮ ಸುತ್ತಮುತ್ತಲ ಜಾಗಗಳನ್ನು ನೀಟಾಗಿ ಹಾಗೂ ಸುಸ್ಥಿತಿಯಲ್ಲಿಟ್ಟುಕೊಳ್ಳುವ ಸಲುವಾಗಿ ತರಬೇತಿ ಕೊಡಲು ಮಹಿಳಾ ಸಾಮಾಜಿಕ ಕೆಲಸಗಾರರನ್ನು ವಾರಾಂತ್ಯದಲ್ಲಿ ಈ ಜನರ ಜಾಗಗಳಿಗೆ ನಿಯೋಜಿಸಬೇಕು.

**16. ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯಗಳು**

**ವಸತಿ**

(ಎ) ನೀರು, ದೀಪ, ನೈರ್ಮಲ್ಯ ಮುಂತಾದ ಇತರ ಮೂಲ ಸೌಲಭ್ಯಗಳಿರುವಂತಹ ಸಮಾಧಾನಕರವಾದ ಮನೆಗಳನ್ನು ಕಡ್ಡಾಯವಾಗಿ ಒದಗಿಸುವುದು. ಪ್ರತಿಯೊಂದು ಕಾರ್ಪೊರೇಷನ್‌ನ ಮತ್ತು ಮುನಿಸಿಪಾಲಿಟಿಯ ಹೊಣೆಗಾರಿಕೆಯಾಗಿದೆ.

(ಬಿ) ಪೌರಕಾರ್ಮಿಕರು, ನಿವೃತ್ತಿಯಾದ ನಂತರ ಕೂಡಲೇ ಅವರವರ ಮನೆಗಳನ್ನು ತೆರವು ಮಾಡಬೇಕಾಗುತ್ತದೆಯಾದ್ದರಿಂದ, ಬಡಾವಣೆಗಳ ಮಧ್ಯೆ, ಅವರುಗಳು ಸೇವೆಯಲ್ಲಿರುವಾಗಲೇ ನಿವೇಶನಗಳನ್ನು ಒದಗಿಸುವುದು ಆವಶ್ಯಕ. ಹಾಗೆ ನಿವೇಶನವನ್ನು ಒದಗಿಸಿದರೆ, ಅವರು ಇತರೆ ಸಮುದಾಯಗಳ ಜನರ ಮಧ್ಯೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಇದು, ಸಾಮಾಜಿಕ ಐಕ್ಯತೆಯನ್ನು ಸಾಧಿಸುವಲ್ಲಿ ಒಂದು ಪರಿಣಾಮಕಾರಿ ಸಾಧನ. ಇಂತಹ ನಿವೇಶನಗಳನ್ನು ಸಬ್ಸಿಡಿ ದರದಲ್ಲಿ ಹಂಚಿಕೆ ಮಾಡಬೇಕು ಹಾಗೂ ಸಬ್ಸಿಡಿ ದರವು ಅವರ ಹಣಕಾಸು ಸ್ಥಿತಿಗೆ ಸರಿ ಹೊಂದಿಕೆಯಾಗುವಂತಿರಬೇಕು. 'ನಿಮ್ಮದೇ ಸ್ವಂತ ಮನೆ ಹೊಂದುವ ಯೋಜನೆ' ಯ ಸೌಲಭ್ಯವನ್ನು ರೂಪಿಸಬೇಕು ಹಾಗೂ ಈ ಜನರಿಗೆ ಅಂತಹ ಸೌಲಭ್ಯವನ್ನು ಒದಗಿಸಬೇಕು.

(ಸಿ) ಸ್ಥಳೀಯ ಸಂಸ್ಥೆಗಳ ಕ್ಷೇತ್ರಾಧಿಕಾರ ವ್ಯಾಪ್ತಿಯೊಳಗಿರುವ ನಿವಾಸಿ ಯೋಗ್ಯ ನಿವೇಶನಗಳನ್ನಾಗಿ ಪರಿವರ್ತಿಸಲು ಸೂಕ್ತವಾದ ಎಲ್ಲ ಖಾಲಿ ಜಾಗಗಳನ್ನು ಆದ್ಯತೆ ಆಧಾರದ ಮೇಲೆ ಪೌರಕಾರ್ಮಿಕರಿಗೆ ಒದಗಿಸಬೇಕು. ಅಂತಹ ನಿವೇಶನಗಳನ್ನು ಅತ್ಯಂತ ಕಡಿಮೆ ಬೆಲೆಗೆ ಒಮ್ಮೆಗೇ ವಿಲೆ ಮಾಡಬೇಕು ಮತ್ತು ಮೌಲ್ಯವನ್ನು ಸುಲಭ ಕಂತುಗಳಲ್ಲಿ ವಸೂಲು ಮಾಡಿಕೊಳ್ಳಬೇಕು.

(ಡಿ) ಸರ್ಕಾರದ ಅಥವಾ ಕಾರ್ಪೊರೇಷನ್‌ನ ಅಥವಾ ಮುನಿಸಿಪಾಲಿಟಿಯ ಅಥವಾ ಪಂಚಾಯತ್‌ನ ನಿವೇಶನಗಳಲ್ಲಿ ಪೌರಕಾರ್ಮಿಕರು ಗುಡಿಸಲುಗಳನ್ನೋ ಅಥವಾ ಮನೆಗಳನ್ನೋ ಕಟ್ಟಿಕೊಂಡಿದ್ದಾರೆ. ಅಂತಹ ಎಲ್ಲ ನಿವೇಶನಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಅವರಿಗೇ ಮಾರಬೇಕು ಹಾಗೂ ಅವರ ಹೆಸರಿಗೇ ಖಾತಾ ವರ್ಗಾಯಿಸಬೇಕು. ಅಂತಹ ನಿವೇಶನಗಳ ಮಾರಾಟದ ಮೌಲ್ಯಕ್ಕೆ ಸಂಬಂಧಿಸಿದಂತೆ ಆದ ಖರ್ಚುವೆಚ್ಚವನ್ನು ಸಂಬಳದಲ್ಲಿ ಕಡಿತ ಯೋಜನೆ ಪ್ರಕಾರ ಸುಲಭ ಕಂತುಗಳಲ್ಲಿ ವಾಪಸು ಪಡೆದುಕೊಳ್ಳಬೇಕು.

(ಇ) ಕೊಳಗೇರಿ ತೆರವು ಕಾನೂನಿನ ಪ್ರಕಾರ ಆ ನಿವೇಶನವನ್ನು ಅಥವಾ ಆ ಜಾಗವನ್ನು ಹಂಚಿಕೆ ಮಾಡುವಾಗ ಕೊಳಗೇರಿಯಲ್ಲಿ ವಾಸವಾಗಿರುವ ಪ್ರತಿಯೊಬ್ಬ ಪೌರಕಾರ್ಮಿಕನಿಗೆ ಆದ್ಯತೆ ಕೊಡಬೇಕು.

(ಎಫ್) ಹಂಚಿಕೆ ಮಾಡಿದ ನಿವೇಶನಗಳನ್ನು ಅಥವಾ ಕಟ್ಟಿಸಿ ಕೊಟ್ಟ ಮನೆಗಳನ್ನು, ಸನ್ನಿವೇಶಗಳು ಅದೇನೇ ಬಂದರೂ ಪರಭಾರೆ ಮಾಡುವುದಕ್ಕೆ ಅವಕಾಶ ಕೊಡಲೇಬಾರದು.

**ಶಿಕ್ಷಣ**

ಪೌರಕಾರ್ಮಿಕರ ಮಕ್ಕಳಿಗೆ ಸಮರ್ಪಕ ಭೋಜನ ಹಾಗೂ ವಸತಿ ಸೌಲಭ್ಯಗಳ ಸಹಿತ ಹೈಯರ್ ಸೆಕೆಂಡರಿ ಹಂತದವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು. ಅಲ್ಲದೆ, ಸ್ಕಾಲರ್ ಶಿಪ್‌ಗಳನ್ನು, ಪುಸ್ತಕಗಳನ್ನು ಲೇಖನ ಸಾಮಗ್ರಿಯನ್ನು, ಸಮವಸ್ತ್ರವನ್ನು, ಕ್ರೀಡಾ ಅಥವಾ ಪಂದ್ಯ ಸಾಮಗ್ರಿಗಳನ್ನು ಸಹ ಒದಗಿಸಬೇಕು. ಯಾರಿಗಾದರೂ ಮನೆ ಪಾಠದ ಅವಶ್ಯಕತೆ ಇದ್ದರೆ, ಆ ಸೌಲಭ್ಯವನ್ನು ಸಹ ಒದಗಿಸಬೇಕು. 5 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಕ್ಕಳಿಗೆ, ಸಮರ್ಪಕ ವೈದ್ಯಕೀಯ ಹಾಗೂ ಪಾಲನೆ ಪೋಷಣೆ, ಆರೈಕೆ ವ್ಯವಸ್ಥೆ ಸಹಿತ ನರ್ಸರಿ ಹಾಗೂ ಬಾಲ ಮಂದಿರಗಳನ್ನು ಸಹ ಒದಗಿಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಅಂತಹ ಸೌಲಭ್ಯಗಳನ್ನು ಕೆಲಸಗಾರರು ವಾಸಿಸುವ ಸ್ಥಳಗಳಿಗೆ ಸಮೀಪದಲ್ಲಿ ಸ್ಥಾಪಿಸಬೇಕು.

ಪೌರಕಾರ್ಮಿಕರಿಗೇ ಶಿಕ್ಷಣದ ಅವಶ್ಯಕತೆ ಇದೆ. ಅವರ ಪ್ರಯೋಜನಕ್ಕಾಗಿ, ವಯಸ್ಕ ಸಾಕ್ಷರತಾ ಆಂದೋಲನಕ್ಕೆ, ಶೈಕ್ಷಣಿಕ ಹಾಗೂ ಇತರ ಸಾಮಾಜಿಕ ಫಿಲಂಗಳ ಪ್ರದರ್ಶನಕ್ಕೆ ನಿಯತಕಾಲಿಕವಾಗಿ ಏರ್ಪಾಟು ಮಾಡಬೇಕು. ಪೌರಕಾರ್ಮಿಕರಿಗೆ, ವರ್ಷಕ್ಕೆ ಒಂದುಸಲ ಆಯಾಯ ಕಾರ್ಪೊರೇಷನ್ ಗಳು ಹಾಗೂ ಮುನಿಸಿಪಾಲಿಟಿಗಳು ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಬೇಕು. ಇದಕ್ಕಾಗಿ ತಗಲುವ ಖರ್ಚು ವೆಚ್ಚವನ್ನು ಭರಿಸಲು, ಈ ಮಂಡಳಿಗಳು ಕಡ್ಡಾಯವಾಗಿ ಸೂಕ್ತ ಬಜೆಟ್ ವ್ಯವಸ್ಥೆ ಮಾಡಿಕೊಂಡಿರಬೇಕು.

**ನೀರು ಹಾಕಿ ಸ್ವಚ್ಛಗೊಳಿಸಬೇಕಾದ ಈಗಿರುವ ಶೌಚಾಲಗಳ ಪರಿವರ್ತನೆ**

ಮುನಿಸಿಪಲ್ ಒಳಚರಂಡಿಗೆ, ಖಾಸಗಿ ಇಂಗು ಗುಂಡಿಗಳಿಗೆ ಅಥವಾ ಸ್ಕೆಪ್ಟಿಕ್ ಟ್ಯಾಂಕ್‌ಗಳಿಗೆ ನೇರವಾಗಿ ಹರಿದು ಹೋಗುವುದಕ್ಕೆ ಆಸ್ಪದ ಕೊಡುವ ಫ್ಲಷಿಂಗ್ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು (ಸೂಚಿಸಿದಂತಹ ಬದಲಾವಣೆ ಮಾಡಿಕೊಳ್ಳಲು) ಮನೆ ಮಾಲೀಕರಿಗೆ ಅವರ ಹಣಕಾಸು ಸ್ಥಿತಿಗತಿಯಿಂದಾಗಿ ಅಂತಹ ಖರ್ಚುವೆಚ್ಚ ಮಾಡುವುದಕ್ಕೆ ಆಗದಿದ್ದರೆ, ಅಂತಹ ಫ್ಲಷ್ ಔಟ್ ಶೌಚಾಲಯಗಳಿಗೆ ಮುನಿಸಿಪಾಲಿಟಿಗಳು ಧನ ಸಹಾಯ ಮಾಡಬೇಕು. ಅಂತಹ ಸಹಾಯ ಧನವು, ಬಡ್ಡಿ ರಹಿತ ಅಥವಾ ನಾಮಮಾತ್ರದ ಬಡ್ಡಿ ಸಹಿತ ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬೇಕಾದ ಸಬ್ಸಿಡಿ, ಅನುದಾನಗಳ ಅಥವಾ ಸಾಲಗಳ ರೂಪದಲ್ಲಿರಬೇಕು. ಆವಶ್ಯಕವೆನಿಸಿದರೆ, ರಾಜ್ಯ ಸರ್ಕಾರವೂ ಸಹ ಈ ಉದ್ದೇಶಕ್ಕಾಗಿ ಮುನಿಸಿಪಾಲಿಟಿಗಳಿಗೆ ಹಣಕಾಸು ನೆರವನ್ನು ವಿಸ್ತರಿಸಬೇಕು.

**17. ಇತರೆ ವಿಷಯಗಳು**

(ಎ) ಪೌರಕಾರ್ಮಿಕರಿಗೆ ಒದಗಿಸಬೇಕೆಂದು ಹಾಗೂ ಸ್ಥಳೀಯ ಮಂಡಳಿಗಳು ಕಾರ್ಯರೂಪಕ್ಕೆ ತರಬೇಕೆಂದು ಈಗ ಶಿಫಾರಸು ಮಾಡಿರುವ ಎಲ್ಲ ಹಕ್ಕುಗಳು, ಸವಲತ್ತುಗಳು ಹಾಗೂ ಸೌಲಭ್ಯಗಳು, ರೈಲ್ವೆ ಕೈಗಾರಿಕಾ ಕಾಲೋನಿಗಳು, ರಕ್ಷಣಾ ಕಾಲೋನಿಗಳು, ಖಾಸಗೀ ನಿವಾಸದ ಕಾಲೋನಿಗಳು, ಪೋಲೀಸ್ ವಸತಿ ಗೃಹಗಳು ಮತ್ತು ಕಾರ್ಪೊರೇಷನ್‌ಗಳ, ವಿಶ್ವಸ್ಥ ಮಂಡಳಿಗಳ, ವಸತಿ ಮಂಡಳಿಯ ನೈರ್ಮಲ್ಯ ಮಂಡಳಿಗಳ ಕ್ಷೇತ್ರಾಧಿಕಾರ ವ್ಯಾಪ್ತಿಯೊಳಗಿರುವ ಮತ್ತು ಎಲ್ಲ ಅಂತಹ ಇತರ ಪ್ರದೇಶಗಳಲ್ಲಿರುವ ಅನಧಿಕೃತ ಖಾಸಗಿ ಲೇಔಟ್‌ಗಳು ಇವುಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೂ ಸಿಗುವಂತಾಗಲು ಉದ್ದೇಶಿತ ಕಾಯ್ದೆಯಲ್ಲಿ ಸೂಕ್ತ ಶಾಸನಾತ್ಮಕ ನಿಬಂಧನೆಗಳನ್ನು ಕಲ್ಪಿಸಬೇಕು.

(ಬಿ) ಕಾರ್ಪೊರೇಷನ್‌ಗಳು, ಮುನಿಸಿಪಾಲಿಟಿಗಳು, ಗ್ರಾಮ ಪಂಚಾಯತ್ ಗಳು ಮುಂತಾದವುಗಳ ಕ್ಷೇತ್ರಾಧಿಕಾರ ವ್ಯಾಪ್ತಿಯೊಳಗಿರುವ ಅನಧಿಕೃತ ಖಾಸಗಿ ಲೇಔಟ್ ಗಳು, ಗ್ರಾಮಗಳು ಮುಂತಾದವುಗಳಲ್ಲಿ ಕಸಗುಡಿಸುವುದು ಮತ್ತು ಜಾಡಮಾಲಿ ಮುಂತಾದ

ಕೆಲಸದಲ್ಲಿ ತೊಡಗಿರುವ ಎಲ್ಲ ಪೌರಕಾರ್ಮಿಕರನ್ನು, ಸೇವಾ ಮುಂದುವರಿಕೆ ಸೌಲಭ್ಯದ ಸಹಿತ ಆಯಾಯ ಮಂಡಳಿಗಳಲ್ಲಿ ವಿಲೀನಗೊಳಿಸಿಕೊಳ್ಳಬೇಕು.

(ಸಿ) ಪೌರಕಾರ್ಮಿಕರ ಸಂಘವು ಎಲ್ಲೆಲ್ಲಿ ಇದೆಯೋ ಅದರ ಅಥವಾ ಪೌರಕಾರ್ಮಿಕರ ಒಬ್ಬ ಪ್ರತಿನಿಧಿಯನ್ನು ಸರ್ಕಾರವು ಆಯಾಯ ಮುನಿಸಿಪಲ್ ಮಂಡಳಿಗೆ ನಾಮ ನಿರ್ದೇಶನ ಮಾಡಬೇಕು. ಸಮಿತಿಗಳಿಗೆ ಅಥವಾ ಇತರ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಅಂತಹ ಪ್ರತಿನಿಧಿಗೆ ಮತ ನೀಡುವ ಹಕ್ಕಿರಬೇಕು.

(ಡಿ) ಶವಗಳ ವಿಲೇವಾರಿ: ಜಾನುವಾರುಗಳನ್ನು ಹಾಗೂ ಪ್ರಾಣಿಗಳನ್ನು ಸಾಕಿ ಕೊಂಡಿರುವ ನಾಗರಿಕರು, ಅವು ಸತ್ತದ್ದನ್ನು ಕಾರ್ಪೊರೇಷನ್ ಗಳಿಗೆ ಹಾಗೂ ಮುನಿಸಿಪಾಲಿಟಿಗಳಿಗೆ ಲಿಖಿತದಲ್ಲಿ ಅಧಿಕೃತವಾಗಿ ತಿಳಿಸಬೇಕು. ಅಂತಹ ಮೃತ ಶವಗಳನ್ನು ವಿಲೇ ಮಾಡಲು ಅವು ಸೂಕ್ತ ವ್ಯವಸ್ಥೆ ಮಾಡಬೇಕು. ಅಂತಹ ಮೃತ ಶವಗಳನ್ನು ವಿಲೇ ಮಾಡುವುದಕ್ಕೆ ಮತ್ತು ಅವು ದುರುಪಯೋಗವಾಗುವುದನ್ನು ಹಾಗೂ ಅನಧಿಕೃತವಾಗಿ ಬಳಕೆ ಮಾಡುವುದನ್ನು ತಡೆಯಲು ಸರಿಯಾದ, ಸೂಕ್ತವಾದ ಮಾರ್ಗದರ್ಶನಗಳನ್ನು ರೂಪಿಸಬೇಕು.

(ಇ) ಪೂಜಾ ಸ್ಥಳಗಳು/ಹೊಟೇಲುಗಳು, ಉಪಾಹಾರ ಮಂದಿರಗಳು, ಕ್ಷೌರದಂಗಡಿಗಳು ಮುಂತಾದವುಗಳ ಒಳಗೆ ಹೋಗಲು ಪೌರ ಕಾಮಿಕರಿಗೆ ಅವಕಾಶ ಕೊಡದೆ, ಬಾವಿಗಳಲ್ಲಿ ನೀರು ಸೇದಿಕೊಳ್ಳಲು ಬಿಡದೆ, ಜಾತಿ ತಾರತಮ್ಯ ತೋರಿ, ಪೌರಕಾರ್ಮಿಕರನ್ನು ಶೋಷಣೆ ಮಾಡುತ್ತಿರುವುದು ಮುಂದುವರಿದಿರುವುದರಿಂದ, ಅಸ್ಪೃಶ್ಯತೆ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸ್ಥಳೀಯ ಮಂಡಳಿಗಳಲ್ಲಿ ವಿಶೇಷ ದಳ ಇರಬೇಕು.

(ಎಫ್) ರಾಜ್ಯದ ಕೆಲವು ಕಡೆಗಳಲ್ಲಿ ಈಗಲೂ ಪ್ರಚಲಿತವಿರುವ ಕೀಳು ಹಾಗೂ ಪರಂಪರಾಗತ ಬಸವಿ ಪದ್ಧತಿಯು ತೊಲಗಿ ಹೋಗುವಂತೆ ಮಾಡಬೇಕು.

(ಜಿ) ಪೌರಕಾರ್ಮಿಕರ ಯುವಕರು ರಕ್ಷಣಾ ಸೇವೆಗಳಲ್ಲಿ ಮತ್ತು ಆದ್ಯತೆ ಆಧಾರದ ಮೇಲೆ, ಯುವಕರು ಕೈಗಾರಿಕೆ ಮತ್ತು ತಾಂತ್ರಿಕ ಶಾಲೆಗಳಲ್ಲಿ ದಾಖಲಾಗುವಂತಾಗಲು ಸಹ ವಿಶೇಷ ಪ್ರಯತ್ನಗಳನ್ನು ಮಾಡಬೇಕು. ಪೌರಕಾರ್ಮಿಕನ ಮಕ್ಕಳು, ಮುಖ್ಯವಾಗಿ ಮೇಲಿನ ಹಂತಗಳ ಶಿಕ್ಷಣವನ್ನು ಪಡೆಯುವ ಸಲುವಾಗಿ, ಅಂತಹ ಮಕ್ಕಳ ತಂದೆ ತಾಯಿಗೆ ವಿಶೇಷ ಪ್ರೋತ್ಸಾಹಗಳನ್ನು ನೀಡಬೇಕು.

(ಹೆಚ್) ಪೌರಕಾರ್ಮಿಕರು ಖಾಸಗಿ ಹಣ ಲೇವಾದೇವಿದಾರರಿಂದ ಪಡೆದಿರುವ ಸಾಲದ ಋಣವನ್ನು ಪರಿಶೀಲಿಸಿ ಹಾಗೂ ಅಂತಹ ಋಣವನ್ನು ಹಾಗೂ ಬಡ್ಡಿ ದರಗಳನ್ನು ಪ್ರಮಾಣಾನುಸಾರ ತಗ್ಗಿಸಿ ಮರು ಪಾವತಿಗೆ ಬದಲಿ ವ್ಯವಸ್ಥೆಗಳನ್ನು ಮಾಡಿ ಋಣಭಾರವನ್ನು ರದ್ದು ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು.

(ಐ) 'ಗುತ್ತೆದಾರಿ ವಿಧಾನ' ವನ್ನು (ಎಂದರೆ ಜಾಡಮಾಲಿ ಕೆಲಸವನ್ನು ಗುತ್ತಿಗೆದಾರರಿಗೆ ವಹಿಸುವ ಪದ್ಧತಿಯನ್ನು) ರದ್ದು ಮಾಡಬೇಕು ಮತ್ತು ಅಂತಹ ಗುತ್ತಿಗೆ ಕೆಲಸಗಾರರನ್ನು ಆಯಾಯ ಮುನಿಸಿಪಾಲಿಟಿಗಳ ನಿಯತ ನೌಕರಿಯಲ್ಲಿ ವಿಲೀನಗೊಳಿಸಬೇಕು.

(ಜೆ) ಕುಟುಂಬ ಕಲ್ಯಾಣದ ಪ್ರಾಮುಖ್ಯತೆ ಬಗ್ಗೆ ಪೌರಕಾರ್ಮಿಕರಿಗೆ ಹಾಗೂ ಆತನ ಕುಟುಂಬದವರಿಗೆ ತಿಳಿವಳಿಕೆ ಕೊಡಲು ಹಾಗೂ ವಿಶೇಷ ಪ್ರೋತ್ಸಾಹಗಳನ್ನು ನೀಡಲು ವಿಶೇಷ ಪ್ರಯತ್ನಗಳನ್ನು ಮಾಡಬೇಕು.

(ಕೆ) ನಿವೃತ್ತರಾದ ನಂತರ ರೈತರಾಗಿ ನೆಲೆಗೊಳ್ಳ ಬಯಸುವ ಪೌರಕಾರ್ಮಿಕರಿಗೆ ಅಥವಾ ಅವರ ಮಕ್ಕಳೂ ಕೂಡ ರೈತರಾಗಿ ನೆಲೆಗೊಳ್ಳಬೇಕೆಂದು ಪೌರಕಾರ್ಮಿಕರು ಇಚ್ಛಿಸಿದರೆ ಅಂತಹ ಪೌರಕಾರ್ಮಿಕರಿಗೂ ವಿಶೇಷ ಕೃಷಿ ಭೂಮಿಗಳನ್ನು ಮಂಜೂರು ಮಾಡಬೇಕು.

(ಎಲ್) ಮಾವನ ಮಲವನ್ನು ಹಾಗೂ ಕಸವನ್ನು ತೆಗೆಯುವುದು, ಸಾಗಿಸುವುದು ಮುಂತಾದ ಕೀಳು ಕೆಲಸ ಮಾಡುವಾಗ ಹಾನಿಯಾಗುವುದನ್ನು ಆದಷ್ಟು ಮಟ್ಟಿಗೆ ತಗ್ಗಿಸಲು ಮತ್ತು ಆ ಕೆಲಸಕ್ಕಾಗಿ ದುಡಿಮೆ ವ್ಯಯವಾಗುವುದನ್ನು ತಡೆಯಲು ಸಮುಚಿತ ವ್ಯವಸ್ಥೆಯನ್ನು ಕಂಡುಕೊಳ್ಳಬೇಕು.

(ಎಂ) ತಮ್ಮ ಸಮವಸ್ತ್ರವನ್ನು ನಿಟಾಗಿಟ್ಟುಕೊಂಡು ಚೆನ್ನಾಗಿ ಕಾಣುವಂತೆ ಮಾಡಿಕೊಳ್ಳಲು ಪೌರಕಾರ್ಮಿಕರಿಗೆ ಪ್ರತಿ ತಿಂಗಳಿಗೆ 7.50 ರೂಪಾಯಿ ಹಣವನ್ನು ಸಮವಸ್ತ್ರ ನಿರ್ವಹಣೆ ಭತ್ಯೆಯಾಗಿ ಕೊಡಬೇಕು. ಅನೇಕ ಕೈಗಾರಿಕೆಗಳಲ್ಲಿ ಹಾಗೂ ಕೆಲವೊಂದು ಸರ್ಕಾರಿ ಸೇವೆಗಳಲ್ಲಿ ಈ ಭತ್ಯೆಯನ್ನು ಕೊಡಲಾಗುತ್ತಿದೆ.

(ಎನ್) ಪೌರಕಾರ್ಮಿಕರಿಗೆ ತಮ್ಮ ಹಕ್ಕುಗಳ ಹಾಗೂ ಜವಾಬ್ದಾರಿಗಳ ಬಗ್ಗೆ ಅರಿವು, ಜಾಗೃತಿ ಮೂಡಿಸಲು ಎಲ್ಲ ಮುನಿಸಿಪಾಲಿಟಿಗಳು ಪ್ರತಿ ವರ್ಷವೂ 'ಪೌರಕಾರ್ಮಿಕ ದಿನ' ವನ್ನು ಆಚರಿಸಬೇಕು.

(ಒ) ಪ್ರತಿ ತಿಂಗಳ ಕೊನೆಯ ಕೆಲಸದ ದಿನದಂದೇ ಸಂಬಳದ ಬಟವಾಡೆ ಮಾಡಬೇಕು. ಸಂಬಳ ಹಾಗೂ ಕಡಿತಗಳ ವಿವರಗಳಿರುವ ಸಂಬಳ ಚೀಟಿಯನ್ನು, ಸಂಬಳದ ಬಟವಾಡೆಗೆ ಕೊನೆ ಪಕ್ಷ 24 ಗಂಟೆಗಳಿಗಿಂತಲೂ ಮುಂಚೆ ಒದಗಿಸಬೇಕು.

**18. ಹಣಕಾಸು ಸಂಪನ್ಮೂಲಗಳು**

ಪೌರಕಾರ್ಮಿಕರ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳಲ್ಲಿ ಸುಧಾರಣೆ ತರಲು ಉದ್ದೇಶಿಸಿರುವ ಯೋಜನೆಗಳಿಗೆ ಹಣಕಾಸು ಒದಗಿಸಲು ಎಲ್ಲ ಸ್ಥಳೀಯ ಮಂಡಳಿಗಳ ಬಜೆಟ್ಟಿನಲ್ಲಿ ಪ್ರತ್ಯೇಕವಾಗಿ ಕಡ್ಡಾಯವಾಗಿ, ಶೇಕಡಾ 5 ರಷ್ಟು ಹಣ ಏರ್ಪಾಟು ಮಾಡಿರಬೇಕು.

ಮೇಲಿನ ಶಿಫಾರಸುಗಳಲ್ಲಿ ಹೇಳಿರುವ ಹಲವಾರು ಸೌಲಭ್ಯಗಳ್ನು ಒದಗಿಸುವುದಕ್ಕೆ ತಗಲುವ ವೆಚ್ಚವನ್ನು ಭರಿಸುವ ಸಲುವಾಗಿ ಮುನಿಸಿಪಾಲಿಟಿಗಳು ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಸಾಕಷ್ಟು ಧನ ಸಹಾಯ ಪಡೆದುಕೊಳ್ಳುವುದರ ಜೊತೆಗೆ ಮುನಿಸಿಪಾಲಿಟಿಗಳ ತೆರಿಗೆ ವಿಧಿಸಬಹುದಾದ ಆದಾಯಗಳ ಮೇಲೆ ಶೇಕಡಾ 5ರ ದರದಲ್ಲಿ 'ವಿಶೇಷ ಉಪಕರ'ವನ್ನು ವಿಧಿಸಬಹುದೆಂದು ಸಲಹೆ ಮಾಡಲಾಗಿದೆ.

**19. ಪೌರಕಾರ್ಮಿಕರ ಕಲ್ಯಾಣ ಮಂಡಳಿ**

ಈ ಸಮಿತಿಯು ಮಾಡಿರುವ ಹಲವಾರು ಶಿಫಾರಸುಗಳು ಜಾರಿಗೆ ಬಂದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ ಒಂದು ಖಾಯಂ ಮಂಡಳಿಯನ್ನು ಸ್ಥಾಪಿಸುವುದು ಆವಶ್ಯಕ. ಮಲ್ಕಾನಿ ಸಮಿತಿ, ಬಾರ್ವೆ ಸಮಿತಿ, ಪಾಂಡ್ಯ ಸಮಿತಿ ಹಾಗೂ ಇಳೆಯ ಪೆರುಮಾಳ ಸಮಿತಿ ಮುಂತಾದ ಅನೇಕ ಸಮಿತಿಗಳನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಹಿಂದೆ ನೇಮಕ ಮಾಡಿದ್ದರೂ ಅವುಗಳ ವರದಿಗಳು ಈವರೆಗೂ ಕಾರ್ಯರೂಪಕ್ಕೆ ಬರದೆ ಹಾಗೆಯೇ ಉಳಿದು ಕೊಂಡುಬಿಟ್ಟಿವೆ. ತಲೆ ಮೇಲೆ ಮಲ ಹೊತ್ತು ಒಯ್ಯುವುದನ್ನು ನಿಷೇಧಿಸಿ ನಮ್ಮ ರಾಜ್ಯ ಸರ್ಕಾರ ಆದೇಶಗಳನ್ನು ಹೊರಡಿಸಿದ್ದರೂ ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ಸೇರಿದಂತೆ ಅನೇಕ ಮುನಿಸಿಪಾಲಿಟಿಗಳು ಆ ಆದೇಶಗಳನ್ನು ಸಂಪೂರ್ಣವಾಗಿ

ಕಾರ್ಯರೂಪಕ್ಕೆ ತಂದಿಲ್ಲ. ರಾಜ್ಯದಲ್ಲಿರುವ ಪೌರಕಾರ್ಮಿಕರ ಸಂಕಷ್ಟಗಳು ಬವಣೆಗಳನ್ನು ನಿವಾರಿಸಲು ತೆಗೆದುಕೊಂಡಿರುವ ಹಲವಾರು ಕ್ರಮಗಳು ಕಾರ್ಯರೂಪಕ್ಕೆ ಬಂದಿರುವುದ್ನನು ಸುನಿಶ್ಚಿತಪಡಿಸಿಕೊಳ್ಳಲು ಒಂದು ಶಾಸನಾತ್ಮಕ ಮಂಡಳಿಯು ಇರದಿದ್ದರೆ ಪೌರಕಾರ್ಮಿಕರ ಸ್ಥಿತಿಗಳಲ್ಲಿ ಸುಧಾರಣೆಯಾಗುವುದಿಲ್ಲ. ಆದ್ದರಿಂದ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕಾಯಕದ ಹಾಗೂ ಬದುಕಿನ ಸ್ಥಿತಿಗಳಲ್ಲಿ ಸುಧಾರಣೆ ಕುರಿತ ಪ್ರಸ್ತುತ ಸಮಿತಿಯ ಕಾಲಾವಧಿಯು ಮುಕ್ತಾಯವಾಗುವ ದಿನದಿಂದ, ಈ ಪ್ರಸ್ತುತ ಸಮಿತಿಯು ಹೆಸರನ್ನು 'ಪೌರಕಾರ್ಮಿಕರ ಕಲ್ಯಾಣ ಮಂಡಳಿ' ಎಂಬ ಹೊಸ ಹೆಸರಿನಿಂದ ಕರೆದು, ಹೊಸ ಮಂಡಳಿಯ ಕಾರ್ಯಗಳಿಗೆ ಸಂಬಂಧಪಟ್ಟಂತೆ ಸೂಕ್ತ ನಿಬಂಧನೆಗಳನ್ನು ಹಾಗೂ ಷರತ್ತುಗಳನ್ನು ರೂಪಿಸಿ ಮುಂದುವರಿಸಲು ಪ್ರಸ್ತುತ ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡಿದೆ.

# ಭಾಗ VII

## ಶಿಫಾರಸುಗಳ ಸಾರಾಂಶ

**ಶಿಫಾರಸುಗಳು**

**ಸಾಮಾನ್ಯ**

1. ಹಿಂದೂ ಸಮಾಜದಲ್ಲಿ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳು ಶೋಚನೀಯವಾಗಿವೆ. ಈ ವ್ಯಕ್ತಿಯನ್ನು ಈ 'ಅಸ್ಪೃಶ್ಯರು' ಮಾತ್ರವೇ ಮಾಡಬೇಕೆಂಬ ನಿರ್ಣಯಕ್ಕೆ ಹಿಂದೂ ಸವರ್ಣೀಯರು ಬಂದಿದ್ದಾರೆ. ಈ ತಪ್ಪು ಭಾವನೆಯನ್ನು ಹೋಗಲಾಡಿಸಲು ಹಾಗೂ ಪೌರಕಾರ್ಮಿಕರ ವೃತ್ತಿಗೆ ಅಂಟಿರುವ ಈ ಕಳಂಕವನ್ನು ತೊಡೆದು ಹಾಕಲು ಇರುವ ಒಂದೇ ಮಾರ್ಗವೆಂದರೆ ಈ ವೃತ್ತಿಯನ್ನು ಹಿಂದೂ ಸವರ್ಣೀಯರೂ ಸಹ ಕೈಗೊಳ್ಳಲು ಉತ್ತೇಜನ ನೀಡಬೇಕು.

ಅನೇಕ ಮುನಿಸಿಪಾಲಿಟಿಗಳಲ್ಲಿ ಪೌರಕಾರ್ಮಿಕರಾಗಿ ನೇಮಕಗೊಂಡಿದ್ದ ಸವರ್ಣೀಯ ಹಿಂದೂಗಳಿಗೆ, ಅವರು ಮಾಡಬೇಕಿದ್ದ ಪೌರಕಾರ್ಮಿಕ ಕೆಲಸದ ಬದಲಿಗೆ ಜವಾನ, ಮಾಲಿ ಇತ್ಯಾದಿಯಂತಹ ಬೇರೆ ಕೆಲಸವನ್ನು ಹಂಚಿಕೆ ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಸಮಿತಿಯು ಈ ಪ್ರವೃತ್ತಿಯನ್ನು ಖಂಡಿಸುತ್ತದೆ. ಎಲ್ಲೆಲ್ಲಿ ಪರಿಶಿಷ್ಟ ಜಾತಿಯವರಲ್ಲದವರನ್ನು ಪೌರಕಾರ್ಮಿಕರನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆಯೋ ಅಲ್ಲೆಲ್ಲಾ ಅವರು ಕಸಗುಡಿಸುವ ಹಾಗೂ ಜಾಡಮಾಲಿ ಕೆಲಸ ಮಾಡಲೇಬೇಕು. ಎಲ್ಲ ಪೌರಕಾರ್ಮಿಕರನ್ನು ಜಾತಿ ಬೇಧ ಭಾವ ಮಾಡದೆ ಇತರರಂತೆಯೇ ಸಮಾನವಾಗಿ ಕಾಣಬೇಕು.

2. ರಾಜ್ಯದಲ್ಲಿರುವ ಹಲವಾರು ಸ್ಥಳೀಯ ಸಂಸ್ಥೆಗಳಿಗೆ ಸಮಿತಿಯು ಭೇಟಿ ನೀಡಿದಾಗ, ಮೇಲ್ವಿಚಾರಕ ಸಿಬ್ಬಂದಿಯು ಸಾಮಾನ್ಯವಾಗಿ ಪೌರಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಪೌರಕಾರ್ಮಿಕರಿಗೆ ತೀರಾ ಅಸಹ್ಯವಾಗಿ ಕೆಟ್ಟ ಮಾತುಗಳಲ್ಲಿ ಬೈಯ್ಯುವುದನ್ನು ರೂಢಿ ಮಾಡಿಕೊಂಡಿರುವುದನ್ನು ಸಮಿತಿಯು ಗಮನಿಸಿದೆ. ಪೌರಕಾರ್ಮಿಕರನ್ನು ಹೇಸಿಗೆಯ, ಹೊಲಸಿನ ಹಾಗೂ ಕೆಟ್ಟ ಮಾತುಗಳಿಂದ ನಿಂದಿಸುವ, ಬೈಯ್ಯುವ ಅಧಿಕಾರಿಗಳ ಹಾಗೂ ಸಾರ್ವಜನಿಕರ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.
3. ತಲೆ ಮೇಲೆ ಮಲ ಹೊತ್ತು ಸಾಗಿಸುವುದನ್ನು ನಿಷೇಧಿಸಿರುವ ಸರ್ಕಾರಿ ಆದೇಶದಲ್ಲಿ ಯಾರೇ ಮನೆ ಮಾಲೀಕನು ತನ್ನ ಶೌಚಾಲಯವನ್ನು ಫ್ಲಷ್ ಔಟ್ ಶೌಚಾಲಯವನ್ನಾಗಿ ಮಾರ್ಪಡಿಸಿರದಿದ್ದರೆ, ಆಯಾ ಮುನಿಸಿಪಾಲಿಟಿಯೇ ಈ ಕೆಲಸ ಮಾಡಿಸಬೇಕೆಂದು ಹಾಗೂ ಅದಕ್ಕೆ ತಗಲುವ ಖರ್ಚುವೆಚ್ಚವನ್ನು ಮನೆ ಮಾಲೀಕನಿಂದ ಕಂತುಗಳಲ್ಲಿ ವಸೂಲಿ ಮಾಡಬೇಕೆಂದು ಹೇಳಲಾಗಿದೆ. ಉತ್ತರ ಕರ್ನಾಟಕದ ಹಲವು ಕಡೆಗಳಲ್ಲಿ ಮುನಿಸಿಪಾಲಿಟಿಗಳು ಹಳೆಯ ಬಗೆಯ ಶೌಚಾಲಯಗಳನ್ನು ಪರಿವರ್ತಿಸಿಲ್ಲ. ಬದಲಿಗೆ ಖಾಸಗಿ ಜಾಡಮಾಲಿ ಕೆಲಸಕ್ಕೆ ಅವಕಾಶ ಮಾಡಿಕೊಟ್ಟಿವೆ. ಈ ತಪ್ಪು ಮಾಡಿರುವ ಸ್ಥಳೀಯ ಮಂಡಳಿಗಳಿಗೆ, ನಿರ್ದಿಷ್ಟ ಕಾಲದೊಳಗೆ ಎಲ್ಲ ಹಳೆಯ ಶೌಚಾಲಯಗಳನ್ನು ಫ್ಲಷ್ ಟೈಪ್ ಶೌಚಾಲಯಗಳನ್ನಾಗಿ ಪರಿವರ್ತಿಸಬೇಕೆಂದು ಸರ್ಕಾರವು ನಿರ್ದಿಷ್ಟ ನಿರ್ದೇಶನ ನೀಡಬೇಕೆಂದು ಹಾಗೆ ನಿರ್ದೇಶನ ನೀಡಿದ ಮೇಲೂ ಹಾಗೆ ಮಾಡಲು ತಪ್ಪುವ ಸ್ಥಳೀಯ ಮಂಡಳಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸ್ಥಳೀಯ ಮಂಡಳಿಗಳಿಗೆ ತಿಳಿಸಬೇಕೆಂದು ಸಮಿತಿಯು ಸರ್ಕಾರವನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ.
4. ನಾಗರಿಕ ಪ್ರಜ್ಞೆಯನ್ನು ಹಾಗೂ ಸಾರ್ವಜನಿಕ ನೈರ್ಮಲ್ಯದ ಬಗ್ಗೆ ಜಾಗೃತಿಯನ್ನು ಮೂಡಿಸಲು ಶಿಕ್ಷಣ ಇಲಾಖೆಯು, ಪ್ರಾಥಮಿಕ ತರಗತಿಯಿಂದ ಹಿಡಿದು ಮಾಧ್ಯಮಿಕ ತರಗತಿವರೆಗೆ,

ವಾರದಲ್ಲಿ ಒಂದು ಪೀರಿಯಡ್‌ನಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಬೋಧಿಸಲು ಈ ವಿಷಯವನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ಸಮಿತಿಯು ಸಲಹೆ ಮಾಡುತ್ತದೆ.

**ಸೇವಾ ನಿಬಂಧನೆಗಳು**

ಪೌರಕಾರ್ಮಿಕರನ್ನು ಪ್ರತ್ಯೇಕ ವೃಂದ ನಿಯಮಗಳಲ್ಲಿ 'ಕುಶಲ ಕೆಲಸಗಾರ' ರೆಂದು ವರ್ಗೀಕರಿಸಬೇಕೆಂದು ಮತ್ತು 1947ರ ಕೈಗಾರಿಕಾ ವಿವಾದಗಳ ಕಾಯಿದೆಯಲ್ಲಿ ಹೇಳಿರುವ ಸವಲತ್ತುಗಳನ್ನು ಕೊಡಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.

**ನೇಮಕಾತಿ**

1. ಪ್ರತಿ 500 ಜನಸಂಖ್ಯೆಗೆ ಒಬ್ಬ ಸ್ವೀಪರ್ ಇರುವುದು ಆವಶ್ಯಕ
2. ಪೌರಕಾರ್ಮಿಕರ ನೌಕರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ 18 ರಷ್ಟನ್ನು ಮೀಸಲಿಟ್ಟ ನಂತರ, ಉಳಿದ ನೌಕರಿಗಳಿಗೆ ಇತರ ಸಮುದಾಯದವರನ್ನು ನೇಮಕ ಮಾಡಿಕೊಳ್ಳಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.
3. ಪೌರಕಾರ್ಮಿಕರ ರಿಕ್ತ ಸ್ಥಾನಗಳನ್ನು ತುಂಬಿ ಕೊಳ್ಳುವಾಗ ಮೃತ ಹಾಗೂ ನಿವೃತ್ತ ಪೌರಕಾರ್ಮಿಕರ ಅವಲಂಬಿತರಿಗೆ ಆದ್ಯತೆ ನೀಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.
4. ರಜೆ ಮೇಲೆ ಹೋಗಿರುವ ಪೌರಕಾರ್ಮಿಕರ ನೌಕರಿಗೆ ನೇಮಕಗೊಳ್ಳಲು ಅರ್ಹರಾದ ವ್ಯಕ್ತಿಗಳ ನಿಯತ ರಿಜಿಸ್ಟರನ್ನು ಪ್ರತಿಯೊಂದು ಮುನಿಸಿಪಾಲಿಟಿಯೂ ಇಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ನಿಯತವಾಗಿ ಹಾಗೂ ಹೊಸದಾಗಿ ನೇಮಕ ಮಾಡಿಕೊಳ್ಳುವಾಗಲೂ ರಜೆ ರಿಕ್ತ ಸ್ಥಾನಗಳಿಗಾಗಿ ನೋಂದಾಯಿಸಿಕೊಂಡಿರುವವರಿಗೆ ಇತರರಿಗಿಂತಲೂ ಆದ್ಯತೆ ಕೊಡಬೇಕು. ಈ ಬಗೆಯ ನೌಕರಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳಿಗೆ ಉಲ್ಲೇಖ ಮಾಡುವ ಅಗತ್ಯವಿಲ್ಲ. ಅರ್ಹ ಪ್ರಕರಣಗಳಲ್ಲೂ ವಯೋ ನಿರ್ಬಂಧಗಳನ್ನು ಸಡಿಲಿಸಬೇಕು.
5. ತಾತ್ಕಾಲಿಕವಾಗಿ ನೇಮಕಗೊಂಡಿರುವ ಹಾಗೂ ಒಂದು ವರ್ಷಕ್ಕೆ ಕಡಿಮೆ ಇರದಂತೆ ಸೇವೆ ಸಲ್ಲಿಸಿರುವ ಎಲ್ಲ ಪೌರಕಾರ್ಮಿಕರನ್ನು ಈ ಕೂಡಲೇ ಸ್ಥಿರೀಕರಿಸಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.
6. ಪೌರಕಾರ್ಮಿಕರಿಗೆ II ನೇ ದರ್ಜೆ ನೌಕರರ ಕನಿಷ್ಠ ವೇತನದ ಜೊತೆಗೆ II ನೇ ದರ್ಜೆ ನೌಕರರು ಯಾವ ಯಾವ ವಾಡಿಕೆಯ ಭತ್ಯೆಗಳಿಗೆ ಅರ್ಹರಾಗಿದ್ದಾರೋ ಅವುಗಳನ್ನು, ಸಮಿತಿಯು ಶಿಫಾರಸು ಮಾಡಿರುವ ಇತರ ವಿಶೇಷ ಅಗತ್ಯತೆಗಳ ಜೊತೆಗೆ, ಕೊಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಜೀವನ ವೆಚ್ಚ ಸೂಚ್ಯಂಕ ಅಂಕಿಗಳ ಆಧಾರದ ಮೇಲೆ ಪೌರಕಾರ್ಮಿಕರ ವೇತನಗಳನ್ನು ಸೂಕ್ತವಾಗಿ ಪರಿಷ್ಕರಿಸಬೇಕು.
7. ಪೌರಕಾರ್ಮಿಕರಿಗೆ ಮಾನವ ತ್ಯಾಜ್ಯವನ್ನು ತೆಗೆಯುವ, ಸಾಗಿಸುವ ಮತ್ತು ವಿಲೇ ಮಾಡುವ ಕೆಲಸವನ್ನು ವಹಿಸಿರುವುದರಿಂದ ರೊಚ್ಚು ವಿಲೇವಾರಿ, ಗಟಾರವನ್ನು ಸ್ವಚ್ಛಗೊಳಿಸುವುದು, ಕಸ ಸುರಿಯಬೇಕಾದ ಅಂಗಣಗಳಲ್ಲಿ ಕಸ ಸುರಿಯುವುದು ಯಾವುದೇ ಬಗೆಯ ತೆರೆದ ಚರಂಡಿಯಲ್ಲಿ ಕೆಲಸ ಮಾಡುವುದು ಮುಂತಾದ ಕೆಲಸಗಳನ್ನು ಮಾಡುವುದರಿಂದ ಪೌರಕಾರ್ಮಿಕರು ಆರೋಗ್ಯಕ್ಕೆ ತೀವ್ರ ರೂಪದ ಅಪಾಯಗಳಿಗೆ ಸಿಲುಕುತ್ತಾರಾದ್ದರಿಂದ ಪೌರಕಾರ್ಮಿಕರಿಗೆ ಅವರ ಒಟ್ಟು ಸಂಬಳದ ಶೇಕಡಾ 25 ರಷ್ಟು ವಿಶೇಷ ಹೆಚ್ಚುವರಿ ಭತ್ಯೆಯನ್ನು ಕೊಡಬೇಕು.
8. ಪೌರಕಾರ್ಮಿಕರು, ದಫೇದಾರ್, ಆಕ್ರಾಯಿ ಮುತ್ಸದಿ, ಅಟೆಂಡರ್, ಡ್ರೈವರ್, II ನೇ ದರ್ಜೆ ಗುಮಾಸ್ತ, ಸೂಪರ್ ವೈಸರ್, ವರ್ಕ್ ಇನ್ಸ್‌ಪೆಕ್ಟರ್, ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಆಯಾ,

ಮಿಡ್ ವೈವ್ಸ್ ಮುಂತಾದ ಮೇಲಿನ ನೌಕರಿಗಳಿಗೆ, ಪೌರಕಾರ್ಮಿಕರು ಅನುಭವಸ್ಥರಾಗಿದ್ದರೆ ಹಾಗೂ ಸೂಕ್ತ ಅರ್ಹತೆ ಹೊಂದಿದ್ದರೆ ಮುಂಬಡ್ತಿಗೆ ಅರ್ಹರಾಗಬೇಕು.

9. ಪೌರಕಾರ್ಮಿಕರಿಗೆ ಮುಂಬಡ್ತಿ ಅವಕಾಶಗಳು ತೀರಾ ವಿರಳ ಹಾಗೂ ತುಂಬಾನೆ ಕಾಲದವರೆಗೆ ಲಭ್ಯವಾಗುವುದಿಲ್ಲವಾದ್ದರಿಂದ ಒಂದು ನಿರ್ದಿಷ್ಟ ಶ್ರೇಣಿಯಲ್ಲಿ 7 ವರ್ಷ ಸೇವೆಯ ನಂತರ ಮುಂದಿನ ಮೇಲಿನ ಶ್ರೇಣಿಗೆ ವೇತನ ಬಡ್ತಿ ನೀಡಲು ಆಯ್ಕೆ ಕಾಲಿಕ ಶ್ರೇಣಿಗಳನ್ನು ಗೊತ್ತುಪಡಿಸಬೇಕು.
10. ಅನೇಕ ವರ್ಷಗಳ ಕಾಲ ಅದೇ ಕೆಲಸ ಮಾಡುವುದು ಅಪಾಯಕಾರಕವಾದ್ದರಿಂದ ಹಾಗೂ ಏಕತಾನತೆಯ ಅಭ್ಯಾಸವಾಗುವುದರಿಂದ ಕಸಗುಡಿಸುವ ಕೆಲಸ ಮಾಡುತ್ತಿರುವ ಪೌರಕಾರ್ಮಿಕರನ್ನು ಗಟಾರ ಸ್ವಚ್ಛಗೊಳಿಸುವ ಮತ್ತು ನಗರದ ಕಸವನ್ನು ಸಾಗಿಸುವ ಲಾರಿಗಳಲ್ಲಿ ಸಹಾಯಕರ ಕೆಲಸಕ್ಕೆ ಹಾಗೂ ಸಹಾಯಕರ ಕೆಲಸ ಮಾಡುತ್ತಿರುವವರನ್ನು ಮೇಲೆ ಹೇಳಿರುವ ಕಸಗುಡಿಸುವ ಕೆಲಸಕ್ಕೆ ವರ್ಗಾಯಿಸಲು ಸಮಿತಿಯು ಶಿಫಾರಸು ಮಾಡುತ್ತದೆ. ಆದರೆ, ಕೆಲಸದಲ್ಲಿ ಈ ಬದಲಾವಣೆ ಮಾಡುವಾಗ, ಅವರ ಈಗಿನ ವಿಭಾಗಗಳ ಹೊರಗಡೆಗೆ ಅವರುಗಳನ್ನು ನಿಯುಕ್ತಿ ಮಾಡಬಾರದು.
11. ಎಲ್ಲ ಪೌರಕಾರ್ಮಿಕರ ನಿವೃತ್ತಿ ವಯಸ್ಸು 58 ಎಂದು ನಿಗದಿಪಡಿಸಿರಬೇಕು. ನಿವೃತ್ತಿ ದಿನಾಂಕಕ್ಕೆ ಮುಂಚಿತವಾಗಿ 6 ತಿಂಗಳ ನೋಟೀಸನ್ನು ಕೊಡಬೇಕು.
12. ನಿವೃತ್ತಿ ವಯಸ್ಸಿನ ನಿಮಿತ್ತ ನಿವೃತ್ತರಾಗುವ ಪ್ರತಿಯೊಬ್ಬ ನೌಕರನು ಆ ನೌಕರನು ಕೊನೆಯ ತಿಂಗಳಲ್ಲಿ ಪಡೆಯುತ್ತಿದ್ದ ಸಂಬಳದ ಶೇಕಡಾ 20 ರಷ್ಟಕ್ಕೆ ಸಮನಾದ ಗ್ರಾಚುಯಿಟಿಗೆ ಅರ್ಹನಾಗಬೇಕು. ಅದನ್ನು ನಿವೃತ್ತಿಯ ದಿನವೇ ಆತನಿಗೆ ಕೊಡಬೇಕು. ನೌಕರನು ಸೇವೆಯಲ್ಲಿರುವಾಗಲೇ ಮೃತನಾದರೆ, ಆತನ ನಾಮನಿರ್ದೇಶನ ವ್ಯಕ್ತಿಯು, ವಾರಸುದಾರ ವ್ಯಕ್ತಿಯು, ಕಾನೂನು ಸಮ್ಮತ ಪ್ರತಿನಿಧಿಯು ಅಷ್ಟೇ ಮೊತ್ತಕ್ಕೆ ಅರ್ಹನಾಗಿರಬೇಕು.
13. ನಿವೃತ್ತನಾಗುವ ಪ್ರತಿಯೊಬ್ಬ ನೌಕರನಿಗೆ, ಆತನ ನಿವೃತ್ತಿಯ ನಂತರದ ತಿಂಗಳ ಕೊನೆಯ ದಿನಾಂಕಕ್ಕೂ ಮುಂಚಿತವಾಗಿಯೇ ಆತನ ಮೊದಲ ಪಿಂಚಣಿ ಸಿಗುವಂತೆ ಪಿಂಚಣಿ ದಾಖಲೆಗಳನ್ನು ಆಖೈರುಗೊಳಿಸಿರಬೇಕು. ನೌಕರನು ಸೇವೆಯಲ್ಲಿರುವಾಗಲೇ ಮೃತನಾದರೆ, ಆತನ ಕುಟುಂಬಕ್ಕೆ ಮೊದಲ ಕುಟುಂಬ ಪಿಂಚಣಿಯನ್ನು, ಆತ ಮೃತನಾದ ತಿಂಗಳ ಕೊನೆಯ ಕೆಲಸದ ದಿನಕ್ಕೂ ಮುಂಚಿತವಾಗಿ ಕೊಡಬೇಕು.
14. ಒಂದು ಸಲಕ್ಕೆ ಮೂರು ದಿನಗಳ ಅನಾರೋಗ್ಯ ರಜೆ ಕೊಡಬೇಕು. ಆದರೆ ವೈದ್ಯಕೀಯ ಪ್ರಮಾಣಪತ್ರಕ್ಕೆ ಒತ್ತಾಯ ಮಾಡಬಾರದು.
15. ಎಲ್ಲ ಪೌರಕಾರ್ಮಿಕರಿಗೆ 2 ವರ್ಷಗಳ ಒಂದು ಬ್ಲಾಕ್ ಅವಧಿಯಲ್ಲಿ ಒಂದು ತಿಂಗಳ ರಜೆಯನ್ನು ಅಥವಾ ಒಂದು ವರ್ಷದಲ್ಲಿ ವಿಶ್ರಾಂತಿ ಹಾಗೂ ಬಿಡುವಿಗಾಗಿ 15 ದಿನಗಳ ರಜೆಯನ್ನು ಕೊಡಬೇಕು.
16. ಮಹಿಳಾ ಪೌರಕಾರ್ಮಿಕರಿಗೆ 2 ತಿಂಗಳ ಹೆರಿಗೆ ರಜೆಯನ್ನು ಅವರ ಅನುಕೂಲಕ್ಕೆ ತಕ್ಕಂತೆ ಆಗಾಗ ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಆದರೆ, ಹೆರಿಗೆ ರಜೆಯು ಹೆರಿಗೆಯ ದಿನದಿಂದ 6 ವಾರಗಳಿಗೂ ಮೀರಬಾರದೆಂದು ಒತ್ತಾಯಿಸಬಾರದು.
17. ದಿನದ ಬೇರೆ ಬೇರೆ ಸಮಯದಲ್ಲಿ ಕೆಲಸ ಮಾಡಬೇಕೆಂದು ಪೌರಕಾರ್ಮಿಕರಿಗೆ ಹೇಳಬಾರದೆಂಬ ನಿರ್ಣಯಕ್ಕೆ ಸಮಿತಿಯು ಬಂದಿದೆ. ಸರಿಯಾದ ವಿಧಾನವೆಂದರೆ ಪೌರಕಾರ್ಮಿಕರು ಒಂದೇ ಬಾರಿಗೆ ಒಂದು ದಿನದಲ್ಲಿ 6 ಗಂಟೆ ಕೆಲಸ ಮಾಡಬೇಕು. ಆ ನಂತರ ಅವರು ವಿರಮಿಸಬೇಕು.
18. ಮೊದಲನೆ ಪಾಳಿಯು ಬೆಳಿಗ್ಗೆ 6 ಗಂಟೆಗೆ ಪ್ರಾರಂಭವಾಗಬೇಕು. ಮಧ್ಯಾಹ್ನ 12 ಕ್ಕೆ ಮುಗಿಯಬೇಕು. ಮಧ್ಯೆ ½ ಗಂಟೆ ಬಿಡುವಿರಬೇಕು. ಎರಡನೇ ಪಾಳಿಯು ಮಧ್ಯಾಹ್ನ 12ಕ್ಕೆ

ಪ್ರಾರಂಭವಾಗಬೇಕು. ಸಂಜೆ 6ಕ್ಕೆ ಮುಗಿಯಬೇಕು. ಮಧ್ಯೆ ½ ಗಂಟೆ ಬಿಡುವಿರಬೇಕು. ಮೊದಲನೇ ಪಾಳಿಗೆ ನಿಯುಕ್ತಿಯಾಗಿರುವವರು, ಒಂದು ತಿಂಗಳಾದ ನಂತರ ಎರಡನೇ ಪಾಳಿಗೆ ಬದಲಾವಣೆ ಮಾಡಿಕೊಳ್ಳಬಹುದು. ಹಾಗೆಯೇ ಎರಡನೇ ಪಾಳಿಗೆ ನಿಯುಕ್ತಿಯಾಗಿರುವವರು ಒಂದು ತಿಂಗಳಾದ ಮೇಲೆ ಮೊದಲನೇ ಪಾಳಿಗೆ ಬದಲಾವಣೆ ಮಾಡಿಕೊಳ್ಳಬಹುದು.

19. ತುರ್ತು ಹಾಗೂ ಅಗತ್ಯದ ಸಂದರ್ಭ ಸನ್ನಿವೇಶಗಳಲ್ಲಿ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ಪೌರಕಾರ್ಮಿಕರಿಗೆ ಹೇಳಲಾಗುತ್ತದೆ. ಅದಕ್ಕಾಗಿ, ಪೌರಕಾರ್ಮಿಕರಿಗೆ ಅವರ ವಾಡಿಕೆಯ ಸಂಬಳ ಮತ್ತು ಭತ್ಯೆಗಳ ಎರಡರಷ್ಟಕ್ಕೆ ಸಮನಾದ ಹೆಚ್ಚುವರಿ ಭತ್ಯೆಯನ್ನು ಕೊಡುವುದು ಆವಶ್ಯಕ. ಸಂಜೆ 6 ರ ನಂತರ ಹೆಚ್ಚುವರಿ ಕೆಲಸ ಮಾಡುವಂತೆ ಯಾರೇ ಮಹಿಳಾ ಕೆಲಸಗಾರರಿಗೆ ಹೇಳಬಾರದು.
20. ಸ್ಥಳೀಯ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರಿಗೆ ಕಡ್ಡಾಯವಾಗಿ ಒಂದು ಪೂರ್ಣ ದಿನ ವಾರದ ರಜಾ ದಿನವಾಗಿ ಕೊಡಬೇಕು.

**ಕೆಲಸದ ನಿಬಂಧನೆಗಳು**

1. ಮೈಯನ್ನು ಬಗ್ಗಿಸದೆ ನಿಂತುಕೊಂಡೇ ಕಸಗುಡಿಸುವುದು ಸಾಧ್ಯವಾಗುವಂತೆ ಪೌರಕಾರ್ಮಿಕರಿಗೆ ಕೈ ಹಿಡಿಕೆ ಇರುವ ಉದ್ದನೆ ಪೊರಕೆಗಳನ್ನು ಒದಗಿಸಬೇಕು.
2. ಜನಸಂಖ್ಯೆ ನಿಬಿಡವಾಗಿರುವ ಪ್ರದೇಶದಲ್ಲಿ ರಸ್ತೆಯಲ್ಲಿ ಯಾರೇ ಕಸಗುಡಿಸುವವರು 15,000 ಚದರ ಅಡಿಗೂ ಮೀರಿ ಕಸಗುಡಿಸಬಾರದು. ಹಾಗೆಯೇ, ಗಟಾರವನ್ನು ಸ್ವಚ್ಛಗೊಳಿಸುವವರಿಗೆ, ವಾಡಿಕೆಯ ಉದ್ದಗಲಗಳಲ್ಲಿ 1000 ಅಡಿಗೂ ಮೀರಿದ ಉದ್ದದ ಗಟಾರವನ್ನು ಸ್ವಚ್ಛಗೊಳಿಸಲು ಹೇಳಬಾರದು.
3. ಪ್ರತಿಯೊಬ್ಬ ಸ್ವೀಪರ್‌ಗೂ ಒಬ್ಬ ಸಹಾಯಕನನ್ನು ಕೊಡಬೇಕು. ನಿಯತ ಮಧ್ಯಂತರಗಳಲ್ಲಿ ಕಸವನ್ನು ಎತ್ತಿ ಕಸದ ತೊಟ್ಟಿಗೆ ಹಾಕುವುದು ಆ ಸಹಾಯಕನ ಕರ್ತವ್ಯ.
4. ಕಸವು ಮೇಲೆ ಬಂದು ಕೆಳಗೆ ಸುರಿಯದಂತೆ ಕಸದ ತೊಟ್ಟಿಗೆ ಸಂಪೂರ್ಣವಾಗಿ ಮುಚ್ಚಿಕೊಳ್ಳುವ ನಳಿಕೆ ಇರುವುದು ಆವಶ್ಯಕ.
5. ಕಸಗುಡಿಸುವ ಕೆಲಸವನ್ನು ಹಾಗೂ ಜಾಡಮಾಲಿ ಕೆಲಸವನ್ನು ಬೇರೆ ಬೇರೆ ವ್ಯಕ್ತಿಗಳು ಮಾಡುತ್ತಿದ್ದಾರೆ. ಕಸಗುಡಿಸುವವರು ಕಸಗುಡಿಸುವ ಕೆಲಸವನ್ನು ಮಾಡಬೇಕೇ ಹೊರತುಅದರ ಹೊರತು ಬೇರೆ ಕೆಲಸವನ್ನು ಮಾಡುವಂತೆ ಹೇಳಬಾರದೆಂದು ಸಮಿತಿಯು ಶಿಫಾರಸು ಮಾಡುತ್ತದೆ.
6. ಗಟಾರಗಳನ್ನು ಹಾಗೂ ಆಳುಗುಂಡಿಗಳನ್ನು ಸ್ವಚ್ಛ ಮಾಡುವ ಮತ್ತು ಕಸದ ತೊಟ್ಟಿಗಳಿಂದ ಕಸವನ್ನು ಎತ್ತಿ ಲಾರಿಗಳಿಗೆ ಹಾಕಿ ಕಸವನ್ನು ಕಸ ಸುರಿಯುವ ಅಂಗಣಗಳಿಗೆ ಸಾಗಿಸುವ ಕೆಲಸ ಮಾಡಲು ಪ್ರತ್ಯೇಕವಾದ ಹಾಗೂ ಸ್ವತಂತ್ರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಹಾಗೆ ನೇಮಕ ಮಾಡಿಕೊಂಡ ಕೆಲಸಗಾರರನ್ನು ಪೌರಕಾರ್ಮಿಕರಿಗಾಗಿ ಶಿಫಾರಸು ಮಾಡಿರುವ 1:1000 ಅನುಪಾತಕ್ಕೆ ಸೇರಿಸಬಾರದು.
7. ಕಸವನ್ನು ಒಯ್ಯುವ ಪ್ರತಿಯೊಂದು ಲಾರಿಯಲ್ಲಿ ಆ ಕೆಲಸಕ್ಕಾಗಿ ಮಾತ್ರವೇ ಆರು ಕೆಲಸಗಾರರಿರಬೇಕು. ಇಬ್ಬರು ಬ್ಯಾಸ್ಕೆಟ್‌ಗೆ ತುಂಬಬೇಕು. ಇಬ್ಬರು ಆ ಬ್ಯಾಸ್ಕೆಟ್ ನ್ನು ಲಾರಿಗೆ ಬಳಿಗೆ ತೆಗೆದುಕೊಂಡು ಹೋಗಬೇಕು. ಲಾರಿಯ ಮೇಲಿರುವ ಇಬ್ಬರು, ಬ್ಯಾಸ್ಕೆಟ್‌ನಲ್ಲಿರುವುದನ್ನು ಲಾರಿಗೆ ಸುರಿಯಬೇಕೆಂದು ಶಿಫಾರಸು ಮಾಡಲಾಗಿದೆ. ಲಾರಿಗೆ ಹಾಕಿರುವ ಕಸದ ಮೇಲೆ ಯಾರೇ ಕೆಲಸಗಾರನು ಕುಳಿತುಕೊಳ್ಳಲು ಅವಕಾಶ ಕೊಡಬಾರದು. ಕುಳಿತುಕೊಳ್ಳಲು ಕೆಲಸಗಾರರಿಗೆ ಪ್ರತ್ಯೇಕ ಕ್ಯಾಬಿನ್ ಕಲ್ಪಿಸುವುದು ಆವಶ್ಯಕ.

8. ಈ ಬಗೆಯ ಅಪಾಯಕಾರಿ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ ಒಂದು ಜೊತೆ ರಬ್ಬರ್ ಕೈ ಗವಸುಗಳು, ಮುಖ ರಕ್ಷಕ ಗವಸುಗಳು, ಗಂಬೂಟುಗಳನ್ನು ಒದಗಿಸಬೇಕು. ಜೊತೆಗೆ, ಇತರ ಎಲ್ಲ ವರ್ಗಗಳಿಗೆ ಕೊಟ್ಟಿರುವ ವಾಡಿಕೆ ಸಮವಸ್ತ್ರಗಳನ್ನು ಕೊಡಬೇಕು.
9. ಆಳುಗುಂಡಿಗಳನ್ನು ಸ್ವಚ್ಛ ಮಾಡುವುದರಲ್ಲಿ ತೊಡಗಿರುವ ಪೌರಕಾರ್ಮಿಕರಿಗೆ, ಈ ಮುಂದೆ ಹೇಳಿರುವ ಸಮವಸ್ತ್ರದ ಜೊತೆಗೆ ಅವರ ಸಂಬಳದ ಶೇಕಡಾ 30 ರಷ್ಟು ವಿಶೇಷ ಭತ್ಯೆಯನ್ನು ಕೊಡಬೇಕು.
10. ಇಡೀ ದೇಹವನ್ನು ಮುಚ್ಚಿಕೊಳ್ಳುವ, ಗ್ಯಾಸ್ ಮಾಸ್ಕ್ ಜೋಡಿಸಿರುವ ಚರ್ಮದ ಜುಬ್ಬವನ್ನು ಪ್ರತಿಯೊಬ್ಬ ಪೌರಕಾರ್ಮಿಕನಿಗೂ ಕೊಡಬೇಕು. ಚರ್ಮದ ಈ ಜುಬ್ಬವು ಅವನಿಗೆ ಸಂಪೂರ್ಣ ರಕ್ಷಣೆ ಒದಗಿಸುತ್ತದೆ. ಹಾಗಾಗಿ, ಆಳುಗುಂಡಿಯಲ್ಲಿರುವ ಯಾವುದೇ ವಿಷಕಾರಿ ಅನಿಲಗಳು ಮೂಗಿನೊಳಕ್ಕೆ ಹೋಗುವುದಿಲ್ಲ, ಕೈಯಿಂದ ಮಾನವ ಮಲವನ್ನು ಮುಟ್ಟುವುದಿಲ್ಲವಾದ್ದರಿಂದ ಅದು ದೇಹಕ್ಕೆ ಅಂಟಿಕೊಳ್ಳುವುದಿಲ್ಲ. ಗ್ಯಾಸ್ ಮಾಸ್ಕ್ ಉಸಿರುಗಟ್ಟುವುದನ್ನು ತಡೆಯುತ್ತದೆ. ಆಳುಗುಂಡಿಗಳ ಒಳಗಡೆ ಇರುವ ಅನೇಕ ವಿಷಕಾರಿ ಅನಿಲಗಳು ಉಸಿರಾಡುವಾಗ ಒಳಗೆ ಹೋಗದಂತೆ ತಡೆಯುತ್ತದೆ.
11. ಪ್ರಾಣಿಗಳನ್ನು ಜಾನುವಾರುಗಳನ್ನು ಸಾಕಿಕೊಂಡಿರುವ ನಾಗರಿಕರು ಅವು ಸತ್ತಾಗ ಆಯಾ ಸ್ಥಳೀಯ ಸಂಸ್ಥೆಗಳಿಗೆ ಲಿಖಿತದಲ್ಲಿ ತಿಳಿಸಬೇಕು. ಸತ್ತ ಪ್ರಾಣಿಗಳನ್ನು ಸಮರ್ಪಕ ರೀತಿಯಲ್ಲಿ ವಿಲೇ ಮಾಡುವುದು ಆ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ. ಅಂತಹ ಸತ್ತ ಪ್ರಾಣಿಗಳನ್ನು ಪೌರಕಾರ್ಮಿಕರು ಆಹಾರವಾಗಿ ತಿನ್ನದಂತೆ ಸ್ಥಳೀಯ ಸಂಸ್ಥೆಗಳು ನಿಗಾ ಇಡಬೇಕು. ಸತ್ತ ಪ್ರಾಣಿಗಳು ದುರುಪಯೋಗವಾಗದಂತೆ, ಅವುಗಳನ್ನು ಆಹಾರವಾಗಿ ಬಳಸದಂತೆ ತಡೆಯಲು ಹಾಗೂ ವಿಲೇ ಮಾಡಲು ಸರಿಯಾದ ಮಾರ್ಗದರ್ಶನಗಳನ್ನು ನೀಡಬೇಕು.

**ವಾಸಕ್ಕೆ ನಿಬಂಧನೆಗಳು**

1. ಎಲ್ಲ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಚೆನ್ನಾಗಿ ವಿನ್ಯಾಸಗೊಳಿಸಿದ ಬಡಾವಣೆಗಳ ಮಧ್ಯದಲ್ಲಿ ಉಚಿತ ನಿವೇಶನಗಳನ್ನು ನೀಡಬೇಕು. ಸೇವೆಯಲ್ಲಿರುವಾಗಲೇ ಅವರುಗಳು ಮನೆಗಳನ್ನು ಕಟ್ಟಿಕೊಳ್ಳಲು ಸಾಲ ನೀಡಬೇಕು ಹಾಗೂ ಮೇಲ್ವಿಚಾರಣೆ ಸೌಲಭ್ಯ ಒದಗಿಸಬೇಕು.
2. ಪೌರಕಾರ್ಮಿಕರು ಸ್ವಂತ ಮನೆಗಳಲ್ಲಿ ವಾಸಿಸುತ್ತಿದ್ದರೂ ಅವರಿಗೆ ಸ್ಥಳೀಯ ಸಂಸ್ಥೆಗಳು ಕಡ್ಡಾಯವಾಗಿ ವಸತಿ ಗೃಹಗಳನ್ನು ಒದಗಿಸಲು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.
3. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕಾಲೋನಿಗಳಲ್ಲಿ ನೈರ್ಮಲ್ಯ ವ್ಯವಸ್ಥೆ ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸಲು ಕಮಿಷನರ್ ಅಥವಾ ಚೀಫ್ ಆಫೀಸರ್‌ರಿಂದ ಕಟ್ಟುನಿಟ್ಟಿನ ಮೇಲ್ವಿಚಾರಣೆ ಆವಶ್ಯಕ.
4. ಈ ಕಾಲೋನಿಗಳಿಗೆ ಬೀದಿ ದೀಪಗಳನ್ನು, ಶೌಚಾಲಯಗಳನ್ನು ಹಾಗೂ ಸಮುದಾಯ ಸ್ನಾನ ರೂಂಗಳನ್ನು ಹಾಗೂ ಸಾಕಷ್ಟು ನಲ್ಲಿಗಳನ್ನು ಒದಗಿಸಬೇಕು. ಸ್ಥಳೀಯ ಸಂಸ್ಥೆಗಳು, ಪೌರಕಾರ್ಮಿಕರ ವಸತಿಗೃಹಗಳನ್ನು, ಸ್ವಂತ ಮನೆ ಇದ್ದರೆ, ಅವುಗಳನ್ನು ಕೂಡ ವರ್ಷಕ್ಕೆ ಒಂದು ಸಲ ದುರಸ್ತಿ ಮಾಡಿಸಬೇಕು. ಸುಣ್ಣ ಬಣ್ಣ ಬಳಿಸಬೇಕು.
5. ಪೌರಕಾರ್ಮಿಕರ ಬಡಾವಣೆಗಳಲ್ಲಿ ಅಥವಾ ಬಡಾವಣೆಗಳ ಹತ್ತಿರದಲ್ಲಿ ಒಂದು ರೇಡಿಯೇ ಸೆಟ್, ಮಹಿಳೆಯರಿಗಾಗಿ ಅಥವಾ ಹುಡುಗಿಯರಿಗಾಗಿ ಕರಕುಶಲ ವಿಭಾಗ ಹಾಗೂ ಒಂದು ವ್ಯಾಯಾಮ ವಿಭಾಗ ಇರುವ ಸಮುದಾಯ ಭವನಗಳನ್ನು ನಿರ್ಮಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

6. ಪೌರಕಾರ್ಮಿಕರ ಬಡಾವಣೆಗಳ ಹತ್ತಿರದಲ್ಲಿ ಯಾವುದೇ ಮದ್ಯದಂಗಡಿ ಇರದಂತೆ ಸಮರ್ಪಕವಾದ ಹಾಗೂ ನಿರ್ದಿಷ್ಟ ಕ್ರಮಗಳನ್ನು ಸರ್ಕಾರವು ತೆಗೆದುಕೊಳ್ಳಬೇಕೆಂದು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.
7. ಪೌರಕಾರ್ಮಿಕರು ತಮ್ಮ ಈಗಿನ ಬದುಕಿನ ರೀತಿ ನೀತಿಯನ್ನು ಕ್ರಮೇಣ ಬದಲಾಯಿಸಿಕೊಳ್ಳಲು, ಪೌರಕಾರ್ಮಿಕರ ಬಡಾವಣೆಗಳಲ್ಲಿ ಸಂಜೆ ಸಮಯದಲ್ಲಿ ಮನರಂಜನೆಯನ್ನಷ್ಟೇ ಅಲ್ಲ, ಶಿಕ್ಷಣವೂ ಸೇರಿದಂತೆ ನಿಯತಕಾಲಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಸ್ಥಳೀಯಸಂಸ್ಥೆಗಳ ಕರ್ತವ್ಯವಾಗಿರಬೇಕು.
8. ಬಹುಮಹಡಿ ಫ್ಲಾಟ್ ಗಳನ್ನು ಅಥವಾ ಒಂಟಿ ಮನೆಗಳನ್ನು ಕಟ್ಟಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಪ್ರತಿಯೊಂದು ಫ್ಲಾಟ್ ಅಥವಾ ಮನೆಯಲ್ಲಿ ವಿಶಾಲವಾದ ಅಂಗಳ, ಅಡಿಗೆ ಕೋಣೆ, ಬಾತ್–ಕಂ–ಲ್ಯಾವೆಟರಿ ಇರಬೇಕು. ಪ್ರತಿಯೊಂದಕ್ಕೂ ನಲ್ಲಿಯನ್ನು ಜೋಡಿಸಿರಬೇಕು.
9. ಈ ಮನೆಗಳ ಅಥವಾ ಬಹುಮಹಡಿ ಕಟ್ಟಡಗಳ ಸುತ್ತಮುತ್ತ ಶುದ್ಧ ಗಾಳಿಯನ್ನು ಉಸಿರಾಡಲು ಅನುಕೂಲ ಇರುವಂತಹ ಜಾಗ ಇರಬೇಕು. ಒಂಟಿ ಮನೆ ಇದ್ದ ಕಡೆ ನಿವಾಸಿಗಳು ಸುತ್ತಮುತ್ತಲ ಜಾಗದಲ್ಲಿ ತರಕಾರಿ ಬೆಳೆದುಕೊಳ್ಳಲು ಉತ್ತೇಜನ ನೀಡಬೇಕು. ಬಹುಮಹಡಿ ಇದ್ದ ಕಡೆ, ನಿವಾಸಿಗಳು ದನಗಳನ್ನು ಅಥವಾ ಎಮ್ಮೆಗಳನ್ನು ಸಾಕಿಕೊಳ್ಳಲು, ಕಟ್ಟಡದ ಹಿಂಭಾಗದಲ್ಲಿ ಕೊಟ್ಟಿಗೆಗಳನ್ನು ನಿರ್ಮಿಸಿಕೊಳ್ಳಲು ಉತ್ತೇಜನ ನೀಡಬೇಕು.
10. ಈ ಮನೆಗಳು ಅಥವಾ ಫ್ಲಾಟ್‌ಗಳು ಪೌರಕಾರ್ಮಿಕರಿಗಾಗಿ ಮಾತ್ರವೇ ಇರಬಾರದು. ಇವುಗಳಲ್ಲಿ ಇತರ ವೃಂದಗಳಲ್ಲಿರುವ ಮುನಿಸಿಪಲ್ ನೌಕರರು ವಾಸಿಸಲು ಉತ್ತೇಜನ ನೀಡಬೇಕು. ಪೌರಕಾರ್ಮಿಕರು ಅವರವರ ಅಕ್ಕಪಕ್ಕದಲ್ಲೇ ವಾಸ ಮಾಡುವಂತಿರಬಾರದು. ಸವರ್ಣೀಯ ಅಥವಾ ಇತರ ಮೇಲು ವರ್ಗದ ಮುನಿಸಿಪಲ್ ನೌಕರನ ವಸತಿಗೃಹದ ಅಕ್ಕಪಕ್ಕದಲ್ಲಿ ವಾಸ ಮಾಡಬೇಕು.
11. ಪೌರಕಾರ್ಮಿಕರು ಇತರ ಸರ್ಕಾರಿ ನೌಕರರ ಮಧ್ಯದಲ್ಲಿ ವಾಸ ಮಾಡುವಂತೆ ಎಲ್ಲ ಪಟ್ಟಣಗಳಲ್ಲಿ ಹಾಗೂ ನಗರಗಳಲ್ಲಿ ಎಲ್ಲ ಸರ್ಕಾರಿ ನೌಕರರುಗಳಿಗಾಗಿ ನಿವಾಸ ಸಮುಚ್ಚಯಗಳನ್ನು ಸರ್ಕಾರವೇ ಕಟ್ಟಿಸಬೇಕು.

**ಹಣಕಾಸು ನಿಬಂಧನೆಗಳು**

1. ಶೋಷಣೆಯ ಪಿಡುಗನ್ನು ತಪ್ಪಿಸುವ ಸಲುವಾಗಿ ಆರೋಗ್ಯ ಪರಿವೀಕ್ಷಕರು ಪೌರಕಾರ್ಮಿಕರಿಗೆ ಸಂಬಳವನ್ನು ಬಟವಾಡೆ ಮಾಡುವುದರ ಬದಲು ಲೆಕ್ಕಪತ್ರ ಸಿಬ್ಬಂದಿಯಿಂದಲೇ ಬಟವಾಡೆ ಮಾಡಿಸಬೇಕೆಂದು ಸಮಿತಿಯು ಸಲಹೆ ಮಾಡುತ್ತದೆ. ಸಂಬಳ ಬಟವಾಡೆ ದಿನದ ಮುಂಚಿನ ದಿನ ಪೌರಕಾರ್ಮಿಕರಿಗೆ ಸಂಬಳ ಚೀಟಿಯನ್ನು ಕೊಡಬೇಕು. ಅದರಲ್ಲಿ ಒಟ್ಟು ಸಂಬಳ, ಕಡಿತಗಳು ಅವರ ಕೈಗೆ ಸಿಗುವ ನಿವ್ವಳ ಸಂಬಳ ಮುಂತಾದ ವಿವರಗಳಿರಬೇಕು. ಎಲ್ಲ ಕಾರ್ಖಾನೆಗಳಲ್ಲಿ ಚಾಲ್ತಿಯಲ್ಲಿರುವಂತೆ, ಸಂಬಳವನ್ನು ಸೀಲ್ ಮಾಡಿದ ಕವರಿನ ಒಳಗಿಟ್ಟು ಸಹ ಕೊಡಬಹುದು. ಕವರಿನ ಮೇಲೆ ಸಂಬಳ, ಕಡಿತಗಳ ವಿವರಗಳನ್ನು ನಮೂದಿಸಬೇಕು.
2. ಪೌರಕಾರ್ಮಿಕರ ಈಗಿನ ಸಾಲದ ಋಣ ತೀರಿಕೆ ಕಾಲಾವಧಿ ವಿಸ್ತರಣೆಗಾಗಿ ಒಂದು ಸೂಕ್ತ ಶಾಸನವನ್ನು ಹೊರಡಿಸಬೇಕು. ಸಾಲ ಕೊಟ್ಟವರು ಪೌರಕಾರ್ಮಿಕರಿಗೆ ಯಾವುದೇ ಕಿರುಕುಳ ನೀಡದಂತೆ ನಿಗಾ ಇಡಲು ಸೂಕ್ತ ಕ್ರಮವನ್ನು ಸಹ ಕೈಗೊಳ್ಳಬೇಕು.
3. ಯಾರೇ ಸರ್ಕಾರಿ ನೌಕರನು ಪೌರಕಾರ್ಮಿಕನನ್ನು ಶೋಷಣೆ ಮಾಡುವುದರಲ್ಲಿ ತೊಡಗಿದರೆ ಅದನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸಬೇಕು.

4. ಪೌರಕಾರ್ಮಿಕರಿಗೆ ಸುಲಭದ ಷರತ್ತುಗಳ ಮೇಲೆ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ಕೊಡುವ ಸಲುವಾಗಿ ಸ್ಥಳೀಯ ಸಂಸ್ಥೆಗಳು ಸಂಬಳದಲ್ಲಿ ಕಡಿತ ಮಾಡಲು ಖಾತರಿ ಕೊಡಬೇಕು. ಇಂತಹ ಸಾಲ ದೀರ್ಘಾವಧಿಯದಾಗಿರಬೇಕು ಹಾಗೂ ಸುಲಭದ ಕಂತುಗಳಲ್ಲಿ ಮರುಪಾವತಿ ಮಾಡುವಂತಿರಬೇಕು.
5. ಕಡ್ಡಾಯ ವಿಮೆಗೆ ಮತ್ತು ಇತರ ಉಳಿತಾಯ ಕಾರ್ಯಕ್ರಮಗಳಿಗೆ ವಂತಿಗೆ ನೀಡುವಂತೆ ಪೌರಕಾರ್ಮಿಕರ ಮನವೊಲಿಸಬೇಕು.
6. ಪೌರಕಾರ್ಮಿಕರೂ ಸೇರಿದಂತೆ, ಎಲ್ಲ ಮುನಿಸಿಪಲ್ ನೌಕರರ ಪ್ರಯೋಜನಕ್ಕಾಗಿ ಸ್ಥಳೀಯ ಸಂಸ್ಥೆಗಳೇ ಸಾಲ ನೀಡಿಕೆ ಹಾಗೂ ಗ್ರಾಹಕ ಸಂಘಗಳನ್ನು ಸ್ಥಾಪಿಸಲು ಮುಂದಾಗಬೇಕು.

**ಸಾಮಾಜಿಕ ನಿಬಂಧನೆಗಳು**

1. ಸ್ನಾನ ಮಾಡಲು ಹಾಗೂ ಬಟ್ಟೆ ಬರೆ ಬದಲಾಯಿಸಿಕೊಳ್ಳಲು ಸಾಕಷ್ಟು ಸಮಯ ಇರುವುದು ಸಾಧ್ಯವಾಗುವಂತೆ ಪೌರಕಾರ್ಮಿಕರಿಗೆ ಅವರ ಕೆಲಸದ ಗಂಟೆಗಳಲ್ಲಿ ಹೊಂದಾಣಿಕೆಗೆ ಸಮಿತಿಯು ಶಿಫಾರಸು ಮಾಡುತ್ತದೆ. ತಮ್ಮ ಕೆಲಸ ಮುಗಿಸಿದ ಮೇಲೆ ಸಮವಸ್ತ್ರ ಹಾಕಿಕೊಂಡಿರಲೇಬಾರದೆಂದು ಕಡ್ಡಾಯವಾಗಿ ತಿಳಿಸಬೇಕು. ಪೌರಕಾರ್ಮಿಕರು ತಮ್ಮ ಕೆಲಸ ಮುಗಿಸಿದ ಮೇಲೆ ಮುನಿಸಿಪಲ್ ಕಾರ್ಯಾಲಯದಲ್ಲೇ ಒಂದು ಕಡೆ ತಮ್ಮ ಸಲಕರಣೆಗಳನ್ನು ಸಮವಸ್ತ್ರವನ್ನು ಇಡಲು ರಾಜ್ಯದಲ್ಲಿರುವ ಎಲ್ಲ ಮುನಿಸಿಪಾಲಿಟಿಗಳು ಏರ್ಪಾಟು ಮಾಡಿಕೊಡಬೇಕು. ನೀಟಾದ ಬಟ್ಟೆ ಧರಿಸಬೇಕು. ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀಟಾಗಿ ಕಾಣಬೇಕು.
2. ದೇವರ ಹೆಸರಿನಲ್ಲಿ ಮತ್ತು ಧರ್ಮದ ಹೆಸರಿನಲ್ಲಿ 'ಬಸವಿ ಪದ್ಧತಿ'ಯನ್ನು ತೊಲಗಿಸಲು ಸರ್ಕಾರವು ಅತಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮಿತಿಯು ಸರ್ಕಾರವನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತದೆ.
3. ಪೌರಕಾರ್ಮಿಕರು ದಿನವೂ ತಪ್ಪದೆ ಸ್ನಾನ ಮಾಡುತ್ತಿದ್ದಾರೆಯೇ ಹಾಗೂ ನಿಯತವಾಗಿ ಮುಖ ಕ್ಷೌರ ಮಾಡಿಕೊಳ್ಳುತ್ತಾರೆಯೇ ಹಾಗೂ ಯಾವಾಗ ಸಾಧ್ಯವಾಗುವುದೋ ಆವಾಗ ಬಟ್ಟೆ ಬರೆ ಒಗೆದುಕೊಳ್ಳುತ್ತಾರೆಯೇ ಎಂಬುದನ್ನು ಗಮನಿಸುತ್ತಿರಬೇಕು.

**ಆರೋಗ್ಯ**

1. ಅಸಿಸ್ಟೆಂಟ್ ಸರ್ಜನ್ ಗಿಂತಲೂ ಕಡಿಮೆ ದರ್ಜೆಯಲ್ಲದ ದರ್ಜೆಯ ವೈದ್ಯಾಧಿಕಾರಿಗಳು ನಿಯತಕಾಲಿಕವಾಗಿ ಪೌರಕಾರ್ಮಿಕರನ್ನು ವೈದ್ಯಕೀಯ ತಪಾಸಣೆ ಮಾಡುವುದು ಶಾಸನಾತ್ಮಕ ಆಜ್ಞಾಪನೆಯೆಂದು ಗೊತ್ತುಪಡಿಸಬೇಕು. ಆಯಾ ಸ್ಥಳೀಯ ಸಂಸ್ಥೆಗಳು ಈ ವೈದ್ಯಕೀಯ ಖರ್ಚುವೆಚ್ಚಗಳನ್ನು ಭರಿಸಬೇಕು ಮತ್ತು ತಮ್ಮ ವಾರ್ಷಿಕ ಬಜೆಟ್ಟಿನಲ್ಲಿ ಸೂಕ್ತ ಏರ್ಪಾಟು ಮಾಡಿಕೊಳ್ಳಬೇಕು.
2. ಪೌರಕಾರ್ಮಿಕರನ್ನಷ್ಟೇ ಅಲ್ಲ, ಪರಿಸರ ಆರೋಗ್ಯದ ದೃಷ್ಟಿಯಿಂದ ಅವರ ಕುಟುಂಬದವರನ್ನು ನಿಯತಕಾಲಿಕವಾಗಿ ವೈದ್ಯಕೀಯ ತಪಾಸಣೆಗೆ ಗುರಿಪಡಿಸಬೇಕು ಹಾಗೂ ಉಚಿತ ಚಿಕಿತ್ಸೆ ಕೊಡಬೇಕು.
3. ಕಾಯಿಲೆ ಬಿದ್ದ ಪೌರಕಾರ್ಮಿಕರಿಗೆ ಆಯಾ ಸ್ಥಳೀಯ ಸಂಸ್ಥೆಗಳು ಅವರ ಕಾಯಿಲೆ ಸಂಪೂರ್ಣವಾಗಿ ವಾಸಿಯಾಗುವವರೆಗೆ ಉಚಿತ ವೈದ್ಯಕೀಯ ನೆರವು ಒದಗಿಸಬೇಕು. ಕಾಯಿಲೆ ಬಿದ್ದ ಅವಧಿಯಲ್ಲಿ ಪೌರಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳು ಪೂರ್ತಾ ಸಂಬಳ ಹಾಗೂ

ಭತ್ಯೆಗಳನ್ನು ಕೊಡಬೇಕು. ಕೆಲಸಕ್ಕೆ ಹಿಂದಿರುಗಲು ವೈದ್ಯಕೀಯವಾಗಿ ಸಮರ್ಥನಿದ್ದಾನೆಂದು ವೈದ್ಯಕೀಯ ಪ್ರಮಾಣಪತ್ರ ನೀಡಿದ ಮೇಲೆಯೇ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳತಕ್ಕದ್ದು.

4. ನೈತಿಕ, ದೈಹಿಕ ಹಾಗೂ ಸಾಮಾಜಿಕ ನೈರ್ಮಲ್ಯ ಕುರಿತಂತೆ ಪೌರಕಾರ್ಮಿಕರಿಗೆ ತಿಳಿವಳಿಕೆ ಕೊಡಲು ಜನಾರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಪೌರಕಾರ್ಮಿಕರ ಕಾಲೋನಿಗಳಿಗೆ ನಿಯತಕಾಲಿಕವಾಗಿ ಭೇಟಿ ಕೊಡಬೇಕು. ಅನಾರೋಗ್ಯಕರ ರೋಗಗಳು, ಮಕ್ಕಳ ಮರಣ ಕುರಿತಂತೆ ಉಪನ್ಯಾಸಗಳನ್ನು ಹಾಗೂ ಫಿಲಂ ಪ್ರದರ್ಶನಗಳನ್ನು ಏರ್ಪಡಿಸಬೇಕು.
5. ಪೌರಕಾರ್ಮಿಕರ ವೃತ್ತಿಯಲ್ಲಿ ಎದುರಾಗುವ ಅಪಾಯಗಳು ಮತ್ತು ತಗಲುವ ರೋಗಗಳ ಬಗ್ಗೆ ಅಧ್ಯಯನ ಮಾಡಲು ಮತ್ತು ಅದಕ್ಕೆ ಪರಿಹಾರಗಳನ್ನು ಸೂಚಿಸಲು ಜನಾರೋಗ್ಯ ಇಲಾಖೆಯ ವೈದ್ಯಕೀಯ ತಜ್ಞರನ್ನೊಳಗೊಂಡ ಒಂದು ಸಮಿತಿಯನ್ನು ಸ್ಥಾಪಿಸಲು ಸಮಿತಿಯು ಶಿಫಾರಸು ಮಾಡುತ್ತದೆ.
6. ಆಳುಗುಂಡಿಗಳ ಒಳಗಡೆಗೆ ಇಳಿಯುವ ಪೌರಕಾರ್ಮಿಕರು ತೀವ್ರ ದೈಹಿಕ ಹಾಗೂ ಮಾನಸಿಕ ಅಪಾಯಗಳಿಗೆ ಒಳಗಾಗುತ್ತಾರೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳೇ ಸ್ವತಃ ಅವರಿಗೆ ಜೀವ ವಿಮೆ ಮಾಡಿಸಬೇಕು ಮತ್ತು ಪ್ರೀಮಿಯಂಗಳನ್ನು ಕಟ್ಟಬೇಕು.

**ಶಿಕ್ಷಣ**

1. 14 ವರ್ಷಗಳವರೆಗೆ ಮಕ್ಕಳನ್ನು ಪೌರಕಾರ್ಮಿಕರು ಶಾಲೆಗೆ ಕಳುಹಿಸದಿದ್ದರೆ ಅದನ್ನು ಶಿಕ್ಷಾರ್ಹ ಅಪರಾಧವೆಂದು ಘೋಷಿಸಬೇಕು. ರಾಜ್ಯದ ಶಿಕ್ಷಣ ಇಲಾಖೆಯು ಈ ಕಾಯ್ದೆಯನ್ನು ಪಾಲಿಸದಿದ್ದರೆ ಇಲಾಖೆಯನ್ನೂ ಸಹ ಹೊಣೆಯನ್ನಾಗಿ ಮಾಡಬೇಕು.
2. ಪೌರಕಾರ್ಮಿಕರು ಎಲ್ಲಿ ವಾಸಿಸುತ್ತಿರುವರೋ ಆ ಬಡಾವಣೆಗಳಲ್ಲಿ ಪೌರಕಾರ್ಮಿಕರ ಮಕ್ಕಳಿಗಾಗಿ ಬಾಲ ಮಂದಿರಗಳನ್ನು, ನರ್ಸರಿಗಳನ್ನು ಮತ್ತು ಪ್ರಾಥಮಿಕ ಶಾಲೆಗಳನ್ನು ಸರ್ಕಾರವು ಕಟ್ಟಿಸಬೇಕು.
3. ಪೌರಕಾರ್ಮಿಕರ ಮಕ್ಕಳು ಕಾಲೇಜಿಗೆ ಹೋಗುವ ವಯೋಮಾನದವರೆಗೆ ಉಚಿತವಾಗಿ ಬಟ್ಟೆಬರೆಯನ್ನು, ಪುಸ್ತಕಗಳನ್ನು ಹಾಗೂ ಹಾಸ್ಟೆಲ್ ಸೌಲಭ್ಯಗಳಂತಹ ಎಲ್ಲ ಸೌಲಭ್ಯಗಳನ್ನು ಸರ್ಕಾರ ಒದಗಿಸುವುದು ಆವಶ್ಯಕ ಹಾಗೂ ಕಡ್ಡಾಯ.
4. ಅವರು ತಮ್ಮ ವಿದ್ಯಾಭ್ಯಾಸವನ್ನು ಯಶಸ್ವಿಯಾಗಿ ಮುಗಿಸಲು ರಾಜ್ಯದ ಒಳಗಡೆ ಹಾಗೂ ಹೊರಗಡೆ ನಿಯತಕಾಲಿಕ ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸುವುದು ಆವಶ್ಯಕ.
5. ಈ ಶೈಕ್ಷಣಿಕ ಆಂದೋಲನದ ಅಂಗವಾಗಿ, ಪೌರಕಾರ್ಮಿಕರಿಗೆ ಉತ್ತೇಜನ ಹಾಗೂ ಪ್ರೋತ್ಸಾಹ ನೀಡುವ ಸಲುವಾಗಿ, ಅವರ ಮಕ್ಕಳು ನಿಯತವಾಗಿ ಶಾಲೆಗಳಿಗೆ ಹಾಜರಾಗುತ್ತಿರುವುದಕ್ಕೆ ಪೌರಕಾರ್ಮಿಕರ ತಂದೆ ತಾಯಿಗೆ, ಪ್ರತಿ ಮಗುವಿಗೆ 5–10 ರೂಪಾಯಿ ವಿಶೇಷ ಭತ್ಯೆಯನ್ನು ಕೊಡಬೇಕು. ಪೌರಕಾರ್ಮಿಕರ ಮಕ್ಕಳು ವಿದ್ಯಾಭ್ಯಾಸದಲ್ಲಿ ಇತರ ಮಕ್ಕಳಿಗಿಂತಲೂ ಉತ್ತಮ ಸಾಧನೆ ಮಾಡಿದರೆ ಹಾಗೂ ಕ್ರೀಡೆಗಳಲ್ಲಿ ಅಸಾಧಾರಣ ಮಟ್ಟದ ಸಾಧನೆ ಮಾಡಿದರೆ ಅಂತಹ ಮಕ್ಕಳಿಗೆ ಮೆಚ್ಚುಗೆಯ ಹಾಗೂ ಉತ್ತೇಜನದ ಪ್ರತೀಕವಾಗಿ ಕೂಡಲೇ ಒಂದು ವೇತನ ಬಡ್ತಿಯನ್ನು ತಂದೆ ತಾಯಿಗೆ ನೀಡಬೇಕು.
6. ಉನ್ನತ ಶಿಕ್ಷಣಕ್ಕಾಗಿ ಹೊಸ ಚೈತನ್ಯ, ಹುರುಪು, ಹುಮ್ಮಸ್ಸು ಮೂಡಿಸುವ ಸಲುವಾಗಿ ಸರ್ಕಾರವು ಪೌರಕಾರ್ಮಿಕರ ವಿದ್ಯಾವಂತ ಮಕ್ಕಳಿಗೆ ಸರ್ಕಾರದಲ್ಲಿ, ಅರೆ ಸರ್ಕಾರಿ ಹಾಗೂ ಸಾರ್ವಜನಿಕ ಉದ್ಯಮಗಳಲ್ಲಿ ಸೂಕ್ತ ಕೆಲಸ ಒದಗಿಸುವುದಾಗಿ ನಿರ್ದಿಷ್ಟ ಭರವಸೆ ಕೊಡಬೇಕು.
7. ಪೌರಕಾರ್ಮಿಕರಿಗೆ ತಿಳಿವಳಿಕೆ ನೀಡುವುದಕ್ಕಾಗಿ ವಯಸ್ಕರ ಶಿಕ್ಷಣ ಪರಿಷತ್ತು ಸೂಕ್ತ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಆಯೋಜಿಸಬೇಕು.
8. ಪೌರಕಾರ್ಮಿಕರು ಬುದ್ಧಿವಂತಿಕೆ ಮಟ್ಟವನ್ನು ಹೆಚ್ಚಿಸಿಕೊಂಡು ಒಳ್ಳೆಯ ರೀತಿಯಲ್ಲಿ ಬದುಕು ಸಾಗಿಸುವುದಕ್ಕೆ ಅನುವು ಮಾಡಿಕೊಡಲು ಪೌರಕಾರ್ಮಿಕರ ಕಾಲೋನಿಗಳಲ್ಲಿ ಎಲ್ಲ ಮುನಿಸಿಪಲ್

ಕೌನ್ಸಿಲ್‌ಗಳು ಕಡ್ಡಾಯವಾಗಿ ನಿಯತಕಾಲಿಕ ಉಪನ್ಯಾಸಗಳನ್ನು, ಫಿಲಂ ಪ್ರದರ್ಶನಗಳನ್ನು ಮತ್ತು ಇತರೆ ಕಾರ್ಯಕ್ರಮಗಳನ್ನು ಆಯೋಜಿಸಬೇಕು.

9. ಕಾರ್ಪೊರೇಷನ್‌ಗಳು ಹಾಗೂ ಮುನಿಸಿಪಲ್ ಕೌನ್ಸಿಲ್‌ಗಳು ವರ್ಷಕ್ಕೆ ಒಂದು ಸಲ ತಂಡಗಳಲ್ಲಿ ಪೌರಕಾರ್ಮಿಕರಿಗೆ ಶೈಕ್ಷಣಿಕ ಪ್ರವಾಸಗಳನ್ನು ಏರ್ಪಡಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಇದಕ್ಕಾಗಿ ತಗಲುವ ಖರ್ಚು ವೆಚ್ಚಗಳಿಗೆ ಸ್ಥಳೀಯ ಸಂಸ್ಥೆಗಳು ತಮ್ಮ ಬಜೆಟ್ಟಿನಲ್ಲಿ ಸೂಕ್ತ ಏರ್ಪಾಟು ಮಾಡಿಕೊಳ್ಳುವುದನ್ನು ಶಾಸನಾತ್ಮಕವಾಗಿ ಕಡ್ಡಾಯವನ್ನಾಗಿ ಮಾಡಬೇಕು.
10. ಎಲ್ಲ ಬಗೆಯ ಅನಿಷ್ಟ ಭಾವನೆಗಳು ಜನರ ಮನಸ್ಸಿನಲ್ಲೇ ಹುಟ್ಟಿ ಕೊಳ್ಳುವುದರಿಂದ ಜನರಿಗೆ ತಿಳಿವಳಿಕೆ ನೀಡಲು ಪರಿಣಾಮಕಾರಿಯಾದ ಪ್ರಚಾರ ಹಾಗೂ ಶೈಕ್ಷಣಿಕ ಆಂದೋಲನಗಳು ಆವಶ್ಯಕ. ಜನರು ತಮ್ಮ ಮನಸ್ಸಿನಲ್ಲಿ ಅಸ್ಪೃಶ್ಯತೆ ಬೇರೂರಿರುವುದನ್ನು ತೆಗೆದು ಹಾಕಬೇಕು ಹಾಗೂ ಅಸ್ಪೃಶ್ಯತೆಯು ಸಾಮಾಜಿಕ, ನೈತಿಕ, ರಾಜಕೀಯ ಹಾಗೂ ಆರ್ಥಿಕ ಆಧಾರಗಳ ಪ್ರಕಾರ ಒಂದು ಅಪರಾಧವೆಂದು ಜನರು ಭಾವಿಸಬೇಕು. ಅಸ್ಪೃಶ್ಯತೆ ನಿರ್ಮೂಲನೆಗಾಗಿ ರೇಡಿಯೊ, ಫಿಲಂಗಳು, ಭಿತ್ತಿಪತ್ರಗಳು, ಹಸ್ತ ಪ್ರತಿಗಳು, ಪರಿಣಾಮಕಾರಿ ಲೇಖನಗಳು, ಪುಸ್ತಕಗಳು ಮುಂತಾದ ಎಲ್ಲ ಪ್ರಚಾರ ಮಾಧ್ಯಮವನ್ನು ಬಳಸಿಕೊಳ್ಳಬೇಕು.

**ರಾಜಕೀಯ ಪ್ರಾತಿನಿಧ್ಯ**

ಪೌರಕಾರ್ಮಿಕರ ಹಿತದೃಷ್ಟಿಯಿಂದ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ರಾಜ್ಯ ಶಾಸನ ಸಭೆಗಳಲ್ಲಿ ಹಾಗೂ ಭಾರತದ ಸಂಸತ್ತಿನಲ್ಲಿ ಪೌರಕಾರ್ಮಿಕರಿಗೆ ಪ್ರಾತಿನಿಧ್ಯ ಇರುವುದು ಆವಶ್ಯಕ. ರಾಜ್ಯ ಶಾಸನ ಸಭೆಗಳಲ್ಲಿ ಜನಗಣತಿ ಅಂಕಿಅಂಶಗಳ ಆಧಾರದ ಮೇಲೆ ಪೌರಕಾರ್ಮಿಕರ ಪ್ರಾತಿನಿಧ್ಯಕ್ಕೆ ಮೀಸಲು ಮತ ಕ್ಷೇತ್ರಗಳಲ್ಲಿ ಅಥವಾ ಸಾಮಾನ್ಯ ಮತಕ್ಷೇತ್ರಗಳಲ್ಲಿ ಕೆಲವೊಂದು ಸ್ಥಾನಗಳನ್ನು ಮೀಸಲಿಡಬೇಕು. ಎರಡು ಸದನಗಳಿರುವ ಶಾಸನ ಸಭೆಯಲ್ಲಿ ಕೊನೆ ಪಕ್ಷ ಇಬ್ಬರು ಪೌರಕಾರ್ಮಿಕರನ್ನು ಮೇಲ್ಮನೆಗೆ ನಾಮಕರಣ ಮಾಡಬೇಕು. ಭಾರತ ಸಂಸತ್ತಿನಲ್ಲಿ ಲೋಕಸಭೆಗೆ ಹಾಗೂ ರಾಜ್ಯಸಭೆಗೆ ಇದೇ ರೀತಿ ವ್ಯವಸ್ಥೆ ಮಾಡಬೇಕು.

**ಕುಟುಂಬ ಕಲ್ಯಾಣ**

ಮೂರು ಮಕ್ಕಳಾದ ಮೇಲೆ ಪ್ರತಿಯೊಬ್ಬ ಪೌರಕಾರ್ಮಿಕನೂ ಸಂತಾನ ಹರಣ ಚಿಕಿತ್ಸೆ ಮಾಡಿಸಿಕೊಳ್ಳಬೇಕು. ಇದಕ್ಕಾಗಿ ಕುಟುಂಬ ಯೋಜನೆ ಸಂಸ್ಥೆಯು ಕೊಡುವ ವಾಡಿಕೆಯ ಹಣದ ಜೊತೆಗೆ ಆಯಾ ಮುನಿಸಿಪಾಲಿಟಿಯು ಪ್ರತಿಯೊಬ್ಬ ಪೌರಕಾರ್ಮಿಕನಿಗೂ 500 ರೂಪಾಯಿ ಬಹುಮಾನ ಕೊಡಬೇಕು.

**ವೃದ್ಧಾಶ್ರಮಗಳು**

ಅನಾರೋಗ್ಯವುಳ್ಳ ಹಾಗೂ ಅಶಕ್ತ ಪೌರಕಾರ್ಮಿಕರನ್ನು ಸರಿಯಾಗಿ ನೋಡಿಕೊಳ್ಳಲು ಪ್ರತಿಯೊಂದು ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ವೃದ್ಧಾಶ್ರಮಗಳನ್ನು ಸ್ಥಾಪಿಸಲು ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ.

**ಕಾರ್ಮಿಕ ಸಂಘಗಳು**

1. ಪೌರಕಾರ್ಮಿಕರು ಎಲ್ಲೆಲ್ಲಿ ಕಾರ್ಮಿಕ ಸಂಘಗಳನ್ನು ರಚಿಸಿಕೊಂಡಿದ್ದಾರೋ ಅಲ್ಲೆಲ್ಲ ಅವುಗಳಿಗೆ, ಅರ್ಹತೆ ಹಾಗೂ ಸಂಖ್ಯಾ ಬಲದ ಆಧಾರದ ಮೇಲೆ ಮನ್ನಣೆ ನೀಡಬೇಕು ಹಾಗೂ ಸ್ಥಳಾವಕಾಶ ಮುಂತಾದ ಎಲ್ಲ ಸೌಲಭ್ಯಗಳನ್ನು ಅಂತಹ ಕಾರ್ಮಿಕ ಸಂಘಗಳಿಗೆ ಒದಗಿಸಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿದೆ. ರಾಜಕೀಯ ಸಿದ್ಧಾಂತಗಳ ಆಧಾರದ ಮೇಲೆ ಭಿನ್ನಮತೀಯ ಗುಂಪುಗಳು ಕಾರ್ಯ ಪ್ರವೃತ್ತರಾಗಲು ಉತ್ತೇಜನ ಕೊಡಬಾರದು. ಸದಸ್ಯತ್ವದ ನಿಮಿತ್ತ ಪೌರಕಾರ್ಮಿಕರು ಕಾರ್ಮಿಕ ಸಂಘಕ್ಕೆ ಕೊಡಬೇಕಾದ ವಂತಿಗೆಯನ್ನು ಅವರ ಸಂಬಳದಲ್ಲಿ ಸ್ಥಳೀಯ ಸಂಸ್ಥೆಗಳೇ ಕಡಿತ ಮಾಡಿ ಯಾವುದೇ ಬ್ಯಾಂಕಿನಲ್ಲಿರುವ ಕಾರ್ಮಿಕ ಸಂಘದ ಖಾತೆಗೆ ಜಮೆ ಮಾಡಿಸಬೇಕು.

2. ಪೌರಕಾರ್ಮಿಕರ ಕಾರ್ಮಿಕ ಸಂಘದ ಅಧಿಕೃತ ಪ್ರತಿನಿಧಿಗಳನ್ನು ಕೌನ್ಸಿಲ್‌ಗಳಿಗೆ ನಾಮಕರಣ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

**ಸಾರ್ವಜನಿಕ ನೈರ್ಮಲ್ಯ ಬೈಲಾಗಳು**

1. ಸಾರ್ವಜನಿಕ ಬೀದಿಗಳಿಗೆ ಕಸವನ್ನು ಎಸೆಯುವ ಜನರು ಮೊದಲನೆ ಸಲ ಎಸೆಗಿದ ಅಪರಾಧಕ್ಕಾಗಿ 5 ರೂಪಾಯಿ ದಂಡಕ್ಕೆ ಗುರಿಯಾಗಬೇಕು. ಮೂರು ಸಲ ಅದೇ ಅಪರಾಧ ಮಾಡಿದರೆ ಒಂದು ವಾರ ಸಾದಾ ಕಾರಾವಾಸದ ಶಿಕ್ಷೆಗೆ ಗುರಿಯಾಗಬೇಕು.
2. ಸಾರ್ವಜನಿಕ ರಸ್ತೆಯಲ್ಲಿ ಪಾದಾಚಾರಿ ದಾರಿಯಲ್ಲಿ ಮಕ್ಕಳನ್ನು ಉಚ್ಚೆ, ಕಕ್ಕ ಮಾಡುವುದಕ್ಕೆ ಬಿಡುವ ಜನರು, ಹಾಗೆ ಮಾಡಿಸಿದ ಪ್ರತಿಯೊಂದು ಸಲಕ್ಕೂ 5 ರೂಪಾಯಿ ದಂಡಕ್ಕೆ ಗುರಿಯಾಗಬೇಕು. ಮತ್ತೆ ಮತ್ತೆ ಅದೇ ಅಪರಾಧಕ್ಕೆ ದಂಡವನ್ನು ಹೆಚ್ಚಿಸಲಾಗುತ್ತದೆ.
3. ಸಾರ್ವಜನಿಕ ಸ್ಥಳದಲ್ಲಿ ದೇಹ ಬಾಧೆ ತೀರಿಸಿಕೊಂಡು ಸಾರ್ವಜನಿಕ ಉಪದ್ರವ ಉಂಟು ಮಾಡುವ ವಯಸ್ಕರು, ಮೊದಲ ಸಲ ಆ ಅಪಾರಾಧ ಮಾಡಿದ್ದಕ್ಕಾಗಿ 5 ರೂಪಾಯಿ ದಂಡಕ್ಕೆ ಗುರಿಯಾಗಬೇಕು. ಮತ್ತೆ ಮತ್ತೆ ಅದೇ ಅಪರಾಧ ಮಾಡಿದರೆ ಒಂದು ವಾರದ ಸಾದಾ ಕಾರಾವಾಸದ ಶಿಕ್ಷೆಗೆ ಗುರಿಯಾಗಬೇಕು.
4. ಬೀದಿಯಲ್ಲಿ ಉಗುಳುವ ನಾಗರಿಕರಿಗೆ ಹಾಗೆ ಉಗಳಿದ ಪ್ರತಿಯೊಂದು ಸಲಕ್ಕೆ 2 ರೂಪಾಯಿ ದಂಡಕ್ಕೆ ಗುರಿಯಾಗಬೇಕು.
5. ಸಾರ್ವಜನಿಕ ದಾರಿಯಲ್ಲಿ ಹಾಗೂ ಪಾದಾಚಾರಿ ಮಾರ್ಗಗಳಲ್ಲಿ ವಾಹನಗಳನ್ನು ನಿಲ್ಲಿಸುವ ಹಾಗೂ ಅಲ್ಲಿ ವಾಹನಗಳನ್ನು ತೊಳೆಸಿ ಗಲೀಜು ಉಂಟು ಮಾಡುವ ವಾಹನಗಳ ಮಾಲೀಕರು, ಹಾಗೆ ಮಾಡಿದ ಪ್ರತಿಯೊಂದು ಅಪರಾಧಕ್ಕಾಗಿ 25 ರೂಪಾಯಿ ದಂಡಕ್ಕೆ ಗುರಿಯಾಗಬೇಕು.
6. ಕಲ್ಯಾಣ ಮಂಟಪದ ಹಾಗೂ ಹೋಟೆಲಿನ ಮಾಲೀಕರು, ಮದುವೆ ಮುಂಜಿ ಮುಂತಾದ ಸಮಾರಂಭಗಳಲ್ಲಿ ಜನರು ಉಂಡೆಲೆಗಳನ್ನು ವಿಲೇ ಮಾಡಲು ತಮ್ಮದೇ ಆದ ವ್ಯವಸ್ಥೆ ಮಾಡಿಕೊಂಡಿರಬೇಕು. ಅದು ಬಿಟ್ಟು, ಉಂಡೆಲೆಗಳನ್ನು ಸಾರ್ವಜನಿಕ ರಸ್ತೆಗಳಿಗೆ ಎಸೆಸಿದರೆ, ಅಂತಹ ಪ್ರತಿಯೊಂದು ಅಪರಾಧಕ್ಕಾಗಿ 50 ರೂಪಾಯಿ ದಂಡಕ್ಕೆ ಗುರಿಯಾಗಬೇಕು.
7. ಎಮ್ಮೆಗಳ ಹಾಗೂ ದನಗಳ ಮಾಲೀಕರು ಅವುಗಳನ್ನು ಸಾರ್ವಜನಿಕ ರಸ್ತೆಯಲ್ಲಿ ಹಾಗೂ ಪಾದಾಚಾರಿ ಮಾರ್ಗಗಳಲ್ಲಿ ಗೂಟಕ್ಕೆ ಕಟ್ಟಿ ಆ ಜಾಗದಲ್ಲಿ ಮಾಲಿನ್ಯವನ್ನು ಉಂಟು ಮಾಡಿದರೆ, ಹಾಗೆ ಮಾಡಿದ ಮೊದಲನೇ ಸಲಕ್ಕೆ 25 ರೂಪಾಯಿ ದಂಡಕ್ಕೆ ಗುರಿಯಾಗುತ್ತಾರೆ. ಮತ್ತೆ ಮತ್ತೆ ಅದೇ ಅಪರಾಧ ಮಾಡಿದರೆ ಒಂದು ವಾರದ ಸಾದಾ ಕಾರಾವಾಸದ ಶಿಕ್ಷೆಗೆ ಗುರಿಯಾಗಬೇಕು.
8. ಕಟ್ಟಡ ನಿರ್ಮಾಣದ ಕಂಟ್ರಾಕ್ಟರುಗಳು ತಮ್ಮ ಸಾಮಗ್ರಿಗಳನ್ನು ಸಾರ್ವಜನಿಕ ರಸ್ತೆಯಲ್ಲಿ ಹಾಗೂ ಪಾದಾಚಾರಿ ಮಾರ್ಗದಲ್ಲಿ ರಾಶಿ ಹಾಕಿಸಿದರೆ ಸಾರ್ವಜನಿಕರ ಚಟುವಟಿಕೆಗಳಿಗೆ ಹಾಗೂ ಪೌರಕಾರ್ಮಿಕರ ಕೆಲಸ ಕಾರ್ಯಗಳಿಗೆ ಅಡ್ಡಿ ಅಡಚಣೆ ಉಂಟು ಮಾಡಿದರೆ, ಹಾಗೆ ಮಾಡಿದ ಪ್ರತಿಯೊಂದು ಅಪರಾಧಕ್ಕಾಗಿ 50 ರೂಪಾಯಿ ದಂಡಕ್ಕೆ ಗುರಿಯಾಗಬೇಕು.

**9**. ಪೌರಕಾರ್ಮಿಕರು ರಸ್ತೆ, ಹಾದಿ, ಬೀದಿಗಳನ್ನು ಸ್ವಚ್ಛ ಮಾಡಿ ಹೋಗಿಯಾದ ಮೇಲೆ ಅಂಗಡಿ ಮಾಲೀಕರು ಅಂಗಡಿಯ ಕಸವನ್ನು ಅಲ್ಲಿಗೆ ಎಸೆದರೆ, ಎಸೆಸಿದರೆ, ಪ್ರತಿಯೊಂದು ಅಪರಾಧಕ್ಕಾಗಿ 50 ರೂಪಾಯಿ ದಂಡಕ್ಕೆ ಗುರಿಯಾಗಬೇಕು.

**ಹಣಕಾಸು ಸಂಪನ್ಮೂಲ**

1. ಹಣಕಾಸಿನಲ್ಲಿ ದುರ್ಬಲವಾಗಿರುವ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರವು ಹಣಕಾಸಿನ ನೆರವನ್ನು ನೀಡಬೇಕು.
2. ಸ್ಥಳೀಯ ಸಂಸ್ಥೆಗಳು ತಮ್ಮ ಕ್ಷೇತ್ರಾಧಿಕಾರ ವ್ಯಾಪ್ತಿಯ ಒಳಗಡೆ, ಎಲ್ಲ ತೆರಿಗೆದಾಯದ ಬಾಬುಗಳ ಮೇಲೆ ಶೇಕಡಾ 5 ರಷ್ಟು ಹೆಚ್ಚುವರಿ ವಿಶೇಷ ಉಪಕರವನ್ನು ವಿಧಿಸಬಹುದು.
3. ಮುನಿಸಿಪಲ್ ಸರಹದ್ದುಗಳ ಒಳಗಡೆ ಇರುವ ಮದ್ಯದಂಗಡಿಗಳ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಬಹುದು.
4. ಸ್ಥಳೀಯ ಸಂಸ್ಥೆಗಳು ಎಲ್ಲ ನಿವಾಸದ ಮನೆಗಳಿಗೆ ಶೇಕಡಾ 5 ರಷ್ಟು ಮತ್ತು ನಿವಾಸೇತರ ಕಟ್ಟಡಗಳಿಗೆ ಶೇಕಡಾ 15 ರಷ್ಟು ಭೂ ನಿರ್ಧರಣೆ ಶುಲ್ಕವನ್ನು ಹೆಚ್ಚಿಸಬಹುದು.
5. ಸ್ಥಳೀಯ ಸಂಸ್ಥೆಗಳು ಮುನಿಸಿಪಲ್ ಸರಹದ್ದುಗಳ ಒಳಗಡೆ ಇರುವ ಎಲ್ಲ ಸಿನಿಮಾ ಮಂದಿರಗಳ ಮೇಲೆ ಅವುಗಳ ಆದಾಯದ ಶೇಕಡಾ 5 ರಷ್ಟನ್ನು ವಿಶೇಷ ತೆರಿಗೆಯಾಗಿ ವಿಧಿಸಬಹುದು.
6. ಸ್ಥಳೀಯ ಸಂಸ್ಥೆಗಳು ಎಲ್ಲ ರೆಸ್ಟಾರೆಂಟ್‌ಗಳ ಮೇಲೆ ಮತ್ತು ಹೋಟೇಲುಗಳ ಮೇಲೆ ಶೇಕಡಾ 10 ರಷ್ಟು ತೆರಿಗೆಯನ್ನು ವಿಧಿಸಬಹುದು.
7. ಸ್ಥಳೀಯ ಸಂಸ್ಥೆಗಳು ಟೆರಿಲಿನ್, ರೆಯಾನ್, ರೇಷ್ಮೆ ಮುಂತಾದ ಬಟ್ಟೆಗಳ ಬರೆಗಳ ಮೇಲೆ ಆಕ್ಟ್ರಾಯಿ ಸುಂಕವನ್ನು ಹೆಚ್ಚಿಸಬಹುದು.
8. ಈ ಮೊದಲೇ ಹೇಳಿರುವಂತೆ, ಸ್ಥಳೀಯ ಸಂಸ್ಥೆಗಳು ವೃತ್ತಿ ತೆರಿಗೆ ವಿಧಿಸುವ ವಿಷಯವನ್ನು ಪರಿಶೀಲಿಸಬಹುದು.

**ಪೌರಕಾರ್ಮಿಕರ ದಿನ**

ಈ ಸಮಿತಿಯನ್ನು ರಚಿಸಿದ ದಿನವಾದ ಸೆಪ್ಟೆಂಬರ್ ತಿಂಗಳ 23ನೇ ದಿನವನ್ನು ಅಥವಾ ಪ್ರತಿ ವರ್ಷದ ಫೆಬ್ರವರಿ 22ನೇ ದಿನವನ್ನು ರಾಜ್ಯದಾದ್ಯಂತ ಪೌರಕಾರ್ಮಿಕರ ದಿನವೆಂದು ರಾಜ್ಯ ಸರ್ಕಾರವು ಘೋಷಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

**ಕಲ್ಯಾಣ ಮಂಡಳಿ**

ಹಲವಾರು ಕಲ್ಯಾಣ ಕ್ರಮಗಳನ್ನು ಕಾರ್ಯ ರೂಪಕ್ಕೆ ತರುವುದನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ, ಅಧಿಕಾರಶಾಹಿ ವಿಳಂಬ ವಿಧಾನಗಳಿಗೆ ಸಿಲುಕದ ಸೂಕ್ತ, ಮುಕ್ತ ವ್ಯವಸ್ಥೆಯೊಂದನ್ನು ಸ್ಥಾಪಿಸುವುದು ಆವಶ್ಯಕ. ಈ ಉದ್ದೇಶವನ್ನು ಸಾಧಿಸಲು ಸಂಪೂರ್ಣ ಸ್ವಾಯತ್ತತೆಯ ಹಾಗೂ ಹಣಕಾಸು ವಿಷಯದಲ್ಲಿ ಸ್ವಾತಂತ್ರ್ಯವನ್ನುಳ್ಳ 'ಪೌರಕಾರ್ಮಿಕ ಕಲ್ಯಾಣ ಮಂಡಳಿ' ಯನ್ನು ಸ್ಥಾಪಿಸುವುದರ ಹೊರತು ಬೇರೆ ಯಾವ ಮಾರ್ಗವೂ ಇರಲಾರದು.

# ಭಾಗ VIII

## ಹಲವಾರು ಸಮಿತಿಗಳ ವರದಿಗಳ ಉದ್ಧೃತ ಭಾಗಗಳು

### I ಬಾರ್ವೆ ಸಮಿತಿ 1948–51

ಶ್ರೀ ವಿ.ಎನ್.ಬಾರ್ವೆಯವರ ಅಧ್ಯಕ್ಷತೆಯಲ್ಲಿ 'ಸ್ಕ್ಯಾವೆಂಜರ್ಸ್ ಲಿವಿಂಗ್ ಕಂಡಿಷನ್ಸ್ ಇನ್‌ಕ್ವೆಯರಿ ಕಮಿಟಿ' ಯನ್ನು ಬಾಂಬೆ ಸರ್ಕಾರವು 1949ರಲ್ಲಿ ರಚಿಸಿತ್ತು. ಈ ಸಮಿತಿಯು ತನ್ನ ವರದಿಯಲ್ಲಿ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳ ಬಗ್ಗೆ ಈ ಮುಂದಿನಂತೆ ವರ್ಣನೆ ಮಾಡಿದೆ:

1. ಈ ವೃತ್ತಿಯಲ್ಲಿ ತೊಡಗಿರುವ ಭಾಂಗಿ ಜಾತಿಯ ಜನರನ್ನು ಎಲ್ಲರೂ ತಿರಸ್ಕಾರದಿಂದ ಕೀಳಾಗಿ ಕಾಣುತ್ತಾರೆ. ಇತರ ಹರಿಜನರೂ ಕೂಡ ಈ ಜನರನ್ನು ದೂರ ಇಟ್ಟಿದ್ದಾರೆ. ಈ ಜನರು ನಗರಗಳಿಗೆ ಹಾಗೂ ಪಟ್ಟಣಗಳಿಗೆ ಬಂದು ತಮ್ಮ ಜೀವನಾಧಾರಕ್ಕೆ ಏಕೈಕ ಸಾಧನವಾಗಿ ಜಾಡಮಾಲಿ ಕೆಲಸವನ್ನು ಅವಲಂಬಿಸಿದ್ದಾರೆ. ಫ್ಲಶ್ ಸಿಸ್ಟಂನ್ನು ತಂದಿರುವುದು ತಮಗೆ ಆಪತ್ತನ್ನುಂಟು ಮಾಡಿದೆಯೇ ಹೊರತು ಅದರಿಂದೇನೂ ಒಳ್ಳೆಯದಾಗಿಲ್ಲವೆಂದು ಭಾವಿಸಿದ್ದಾರೆ. ಹಾಗಾಗಿ ಸಹಜವಾಗಿಯೇ, ಕೆಲಸದ ಗುಣಮಟ್ಟದಲ್ಲಿ ಸುಧಾರಣೆ ತರಲು ಅವನಿಗೆ ಯಾವ ಉತ್ತೇಜನವೂ ಇಲ್ಲದಂತಾಗಿದೆ. ಹಾಗಾಗಿ, ಅವನಿಗೆ ಹಾಗೂ ಅವನ ಜಾತಿಗೆ ಅಂಟಿಕೊಂಡಿರುವ ಅರಿಷ್ಟವನ್ನೇ ಅವನು ತನ್ನ ಜಾತಿಯ ವಿಶೇಷತೆ, ಹಕ್ಕು ಎಂದು ಭಾವಿಸಿಕೊಂಡಿದ್ದಾನೆ. ಹೀಗೆ, ಈ ಪದ್ಧತಿ ಮಾನವನ ಮೇಲೆ ಅಷ್ಟೊಂದು ಗಾಢ ಪರಿಣಾಮ ಉಂಟು ಮಾಡಿದೆ. ಹಾಗಾಗಿ, ಬೇರೆ ವೃತ್ತಿಗಳಿಗೆ ಅಥವಾ ಕಸಬುಗಳಿಗೆ ಹೋಗುವ ಮತ್ತು ಸಾಮಾಜಿಕ ಸಮಾನತೆಯ ಸ್ಥಾನಮಾನವನ್ನು ಗಳಿಸುವ ಆಕಾಂಕ್ಷೆ ಅವನಲ್ಲಿ ಅಷ್ಟೊಂದಿಲ್ಲ. ರಾಷ್ಟ್ರಕ್ಕೆ ಹೊಸದಾಗಿ ಸ್ವಾತಂತ್ರ್ಯ ಸಿಕ್ಕಿದರೂ ಕೂಡ ಅವನ ಬದುಕಿನ ರೀತಿಯಲ್ಲಿ, ಅವನ ಕೆಲಸದ ವಿಧಾನದಲ್ಲಿ ಬದಲಾವಣೆ ಆಗಿಲ್ಲ. ಜಿನುಗುವ ಬ್ಯಾಸ್ಕೆಟ್‌ಗಳನ್ನು ತೆಗೆದುಕೊಂಡು ಮಲವನ್ನು ತುಂಬಿಕೊಂಡು ಬೋಗುಣಿಯಿಂದ ಮಲ ಹೊರಗಡೆಗೆ ಸೋರುತ್ತಿದ್ದರೂ ಅದನ್ನೇ ತಲೆ ಮೇಲೆ ಹೊತ್ತು ಒಯ್ದು ದೊಡ್ಡ ಬ್ಯಾಸ್ಕೆಟ್‌ಗೆ ಅಥವಾ ಡ್ರಮ್‌ಗೆ ಸುರಿಯುವ ಕೆಲಸಕ್ಕೆ ಒಗ್ಗಿ ಹೋಗಿದ್ದಾನೆ. ತನ್ನ ಈ ಕೆಲಸದ ಸ್ಥಿತಿಗತಿ ಬಗ್ಗೆ ದೂರುವ ಗೊಡವೆಗೇ ಹೋಗಿಲ್ಲ.

2. ಹಿಂದೂ ಸಮಾಜದಲ್ಲಿ ಜಾತಿಯು, ಮಾನವ ಘನತೆ, ಗೌರವದ ಕಸುಬಿನ ಅಥವಾ ವೃತ್ತಿಯ ಸ್ಥಾನವನ್ನು ನಿರ್ಧರಣೆ ಮಾಡುವ ಅತ್ಯಂತ ಬಲಶಾಲಿ ಅಂಶವಾಗಿದೆ. ಭಾರತದ ಹೊರಗಡೆ ಬೇರೆಲ್ಲಿಯೂ ಇಷ್ಟೊಂದು ಕಠಿಣ ಜಾತಿಪದ್ಧತಿಯನ್ನು ನೀವು ಕಾಣಲಾರಿರಿ. ರಾತ್ರಿ ಹೊತ್ತಿನಲ್ಲಿ ಮಲವನ್ನು ವಿಲೇ ಮಾಡುವ ವಿಧಾನ ಎಲ್ಲ ದೇಶಗಳಲ್ಲಿಯೂ ಇದೆ. ಆದರೆ ಇಲ್ಲಿ ಭಾರತದಲ್ಲಿ ಮಾತ್ರ ಅದು ಎಂದರೆ ಜಾಡಮಾಲಿ ಮತ್ತು ಕಸಗುಡಿಸುವ ಕೆಲಸ ನಿರ್ದಿಷ್ಟ ಜಾತಿಗಳೇ ಮಾಡಬೇಕಾದ ಕಸುಬು ಎಂದು ಭಾವಿಸಲಾಗಿದೆ. ಭಾರತದಲ್ಲಿ ಕಸಕಡ್ಡಿಯನ್ನು ಎತ್ತಿ ಸಾಗಿಸುವ ಕೆಲಸವನ್ನೊಳಗೊಂಡಿರುವ ಎಲ್ಲ ಬಗೆಯ ಕೆಲಸವನ್ನು ಹರಿಜನರಲ್ಲಿ ಒಂದಲ್ಲ ಒಂದು ಜಾತಿಗೆ ನಿಗದಿಪಡಿಸಲಾಗಿದೆ. ಉದಾಹರಣೆಗೆ (1) ಪ್ರಾಣಿಗಳ ಶವಗಳನ್ನು ಸಾಗಿಸುವ ಹಾಗೂ ಚರ್ಮ ಸುಲಿಯುವ ಕೆಲಸ (2) ಚರ್ಮ ಹದ ಮಾಡುವ ಕೆಲಸ (3) ಚರ್ಮದ ವಸ್ತುಗಳ ತಯಾರಿಕೆ ಕೆಲಸ (4) ರಸ್ತೆಗಳನ್ನು ಗುಡಿಸುವ ಕೆಲಸ ಮತ್ತು ಜಾಡಮಾಲಿ ಕೆಲಸ. ಈ ಎಲ್ಲ ಕಸುಬುಗಳು ಸಮಾಜದ ಒಳಿತಿಗೆ ಅವಶ್ಯಕವಾದವುಗಳು. ಇವೆಲ್ಲವುಗಳಲ್ಲಿ ಗಲೀಜಿನ ಅಥವಾ ಶೀಘ್ರವಾಗಿ ಕೊಳೆತು ನಾರುವ ತ್ಯಾಜ್ಯವನ್ನು ಕೈಯಿಂದ ಎತ್ತಿ ವಿಲೇ ಮಾಡುವ ಕೆಲಸವೂ ಇರುತ್ತದೆ. ಹರಿಜನನಲ್ಲದ ಯಾರೂ ಮೇಲೆ ಹೇಳಿರುವ ಕಸುಬುಗಳಲ್ಲಿ ಯಾವುದನ್ನೂ ತನ್ನ ವೃತ್ತಿಯನ್ನಾಗಿ ಕೈಗೊಳ್ಳಲಾರ. ಹರಿಜನರಲ್ಲೂ ಮೇಲು ಹಾಗೂ ಕೀಳು ಜಾತಿಗಳಿವೆ. ಆದರೆ, ಭಾಂಗಿ ಜಾತಿಯು ಎಲ್ಲಕ್ಕಿಂತಲೂ ಕೀಳು ಎಂದು ಪರಿಗಣಿತವಾಗಿದೆ. ಪ್ರತಿಯೊಂದು ಜಾತಿಯೂ, ಬೇರೊಂದು

ಜಾತಿಯನ್ನು ತನ್ನ ಕೆಳಗಿನ ಕೀಳು ಜಾತಿ ಭಾವಿಸುತ್ತದೆ. ಆದರೆ ಭಾಂಗಿ ಜಾತಿಯನ್ನು ಅಥವಾ ಅದಕ್ಕೆ ತತ್ಸಮಾನವಾದ ಭಾರತದ ಒಳನಾಡಿನಲ್ಲಿರುವ ಹಲಾಲ್ ಖೋರ್‌ರ, ಬಿಹಾರದ ದೋಮ್‌ರ ಮತ್ತು ಮದ್ರಾಸಿನ ಮಾದರುರ ವಿಷಯದಲ್ಲಿ ಹಾಗಲ್ಲ. ಹೀಗಾಗಿ, ಭಾಂಗಿಯು ಜಾಡಮಾಲಿ ಹಾಗೂ ಕಸಗುಡಿಸುವ ಕೆಲಸ ಎರಡನ್ನು ಮಾಡುತ್ತಾನೆ. ಇತರ ಹರಿಜನ ಜಾತಿಯ ಕೆಲವರು ರಸ್ತೆಗಳನ್ನು ಗುಡಿಸುವ ಅಥವಾ ಗಟಾರಗಳನ್ನು ಮತ್ತು ಚರಂಡಿಗಳನ್ನು ಸ್ವಚ್ಛಗೊಳಿಸುವ ಕೆಲಸ ಮಾಡುತ್ತಾರೆಯೇ ಹೊರತು ರಾತ್ರಿ ಹೊತ್ತಿನಲ್ಲಿ ಮಲವನ್ನು ಸಾಗಿಸುವ ಕೆಲಸವನ್ನಲ್ಲ. ಉದಾಹರಣೆ: ಗುಜರಾತಿನಲ್ಲಿನ ಮೇಘ್ವಾಲರು ಅಥವಾ ನಡಿಯಾರರು ಅಥವಾ ಮಹಾರಾಷ್ಟ್ರದಲ್ಲಿನ ಮಹರರು, ಮಂಗರು ಅಥವಾ ಮಾಂಗ್ ಗಾರುಡಿಗರು ಮತ್ತು ಕರ್ನಾಟಕದಲ್ಲಿನ ಚಲವಾದಿಗಳು. ಮೂಲ ವಾಸದ ಸ್ಥಳಗಳಿಗಿಂತಲೂ ಬಹು ದೂರ ಇರುವ ಸ್ಥಳಗಳಲ್ಲಿ ಕೆಲವೊಂದು ವಿನಾಯಿತಿಗಳಿವೆ.

3. ಈ ಅಸಹಜ ವ್ಯವಸ್ಥೆಯ ಫಲಶೃತಿ ಏನೆಂದರೆ ಎಲ್ಲ ಕಡೆಯೂ ಎಲ್ಲ ರೀತಿಯಲ್ಲೂ ಇರುವ ಶೋಚನೀಯ ಸ್ಥಿತಿಗತಿ. ಭಾಂಗಿ ಅಲ್ಲದ ಜನರು ಈ ಕೆಲಸದ ಹತ್ತಿರಕ್ಕೂ ಸುಳಿಯುವುದಿಲ್ಲ – ಆ ಮಾತಂತಿರಲಿ ಅದರ ಬಗ್ಗೆ ಆಲೋಚನೆ ಕೂಡ ಮಾಡುವುದಿಲ್ಲ. ಸಾಮಾನ್ಯವಾಗಿ ಭಾಂಗಿ ಜನರ ಬಗ್ಗೆ, ಅವರ ಕೆಲಸದ ಬಗ್ಗೆ ಕರುಣೆ, ದಯೆ ಇಲ್ಲದವರಾಗಿದ್ದಾರೆ. ಈ ಭಾಂಗಿ ಜನರು ಹೇಗೋ ಈ ಕೆಲವನ್ನು ನಿಭಾಯಿಸುತ್ತಾರೆಂಬುದು ಅವರಿಗೆ ಗೊತ್ತಿರುತ್ತೆ. ಹಾಗಾಗಿ ಭಾಂಗಿಗಳು ಈ ಕೆಲಸವನ್ನು ನೀಟಾಗಿ ಮಾಡಲು, ಸುಲಭವಾಗಿ ಮಾಡಲು ಅಥವಾ ಹೆಚ್ಚು ಯೋಗ್ಯ ರೀತಿಯಲ್ಲಿ ಮಾಡಲೂ ಭಾಂಗಿಗಳಲ್ಲದ ಜನರು ನೆರವಾಗುವುದಿಲ್ಲ. ಈ ಕೆಲಸವನ್ನು ಶಾಶ್ವತವಾಗಿ ತ್ಯಜಿಸಿ ಬೇರೊಂದು ಬಗೆಯ ಉದ್ಯೋಗಕ್ಕೆ ತೊಡಗಲು ಕಾನೂನಿನಲ್ಲಿ ಅಡೆತಡೆಗಳಿಲ್ಲವೆಂಬುದು ಭಾಂಗಿಗೆ ಗೊತ್ತಿದೆ. ಆದರೂ, ಸಂಪ್ರದಾಯ ರೂಢಿಯಿಂದ ಬೆಳೆದು ಬಂದಿರುವ ಅಭ್ಯಾಸ ಬಲದಿಂದಾಗಿ ಭಾಂಗಿಯು ತನ್ನ ಸ್ವಾಭಿಮಾನವನ್ನು ಎಷ್ಟರಮಟ್ಟಿಗೆ ಕಳೆದುಕೊಂಡಿದ್ದಾನೆಂದರೆ ಯಾವ ಈ ಕೆಲಸದಿಂದಾಗಿ ತನ್ನ ಜಾತಿಯನ್ನು ಕೀಳಾಗಿ ಕಾಣಲಾಗುತ್ತಿದೆಯೋ, ಯಾವ ಈ ಕೆಲಸದಿಂದ ತಾನು ಬಿಡುಗಡೆಗೊಳ್ಳಬೇಕೋ ಆ ಬಗೆ ಆಲೋಚನೆ ಮಾಡುವುದರ ಬದಲು, ಈ ಕೆಲಸ ಅನಿಷ್ಟದ್ದೇನಲ್ಲವೆಂದು ಬದಲಿಗೆ ಈ ಕೆಲಸ ತನಗೆ ಒದಗಿ ಬಂದಿರುವ ಒಂದು ಸುಯೋಗವೆಂದು ಅಥವಾ ಈ ಕೆಲಸ ತನಗೇ ಮೀಸಲಾದುದೆಂದು ಈ ವೃತ್ತಿಯನ್ನು ತಾನು ಕಾಪಾಡಿಕೊಳ್ಳಬೇಕೆಂದು ಭಾವಿಸಿರುವಷ್ಟರ ಮಟ್ಟಿಗೆ ಸ್ವಾಭಿಮಾನ ಶೂನ್ಯನಾಗಿದ್ದಾನೆ. ಹಾಗಾಗಿ, ಪಟ್ಟಣದಲ್ಲಿ ಫ್ಲಷ್ ಸಿಸ್ಟಂನ್ನು ಚಾಲ್ತಿಗೆ ತಂದಾಗ, ಭಾಂಗಿ ಜನರು, ತಮ್ಮ ಬದುಕಿಗೆ ಒಂದೇ ಒಂದು ಮೂಲವಾದ ಈ ವೃತ್ತಿಯನ್ನು ಹೊಸ ಸಿಸ್ಟಂ ಕಿತ್ತುಕೊಳ್ಳುತ್ತೆಂದು ಭಾವಿಸಿ ಈ ಸಿಸ್ಟಂನ್ನು ವಿರೋಧಿಸಿದರು. ಹೊಲಗದ್ದೆಯಲ್ಲೊ ಅಥವಾ ಕಾರ್ಖಾನೆಯಲ್ಲೊ ಬೇರೊಂದು ಕೆಲಸ ಬಯಸುವಷ್ಟು ಧೈರ್ಯ ಅವರಿಗೆ ಅಷ್ಟೊಂದಿರಲಿಲ್ಲ. ಅತ್ಯಂತ ಶ್ರಮದ ಕೆಲಸವನ್ನು ಮಾಡಲು ಈ ಜನರು ಸಿದ್ಧರಿರಲಿಲ್ಲ. ಈ ಕೆಲಸವನ್ನು ಬೇರೊಂದು ಜಾತಿಯ ಯಾವ ವ್ಯಕ್ತಿಯೂ ಮಾಡಲಾರ ಎಂಬುದು ಈ ಜನರಿಗೆ ಚೆನ್ನಾಗಿಯೇ ಗೊತ್ತಿತ್ತು. ಬೇರೆ ಜಾತಿಯ ಜನರು ಈ ಕೆಲಸ ಮಾಡಲು ಮುಂದೆ ಬರುತ್ತಾರೆಂಬ ಭಯವೂ ಈ ಜನರಿಗೆ ಇರಲಿಲ್ಲ. ಹಾಗಾಗಿ ಭಾಂಗಿ ಬೇರೊಂದು ವೃತ್ತಿಯನ್ನು ಕೈಗೊಂಡು ದುಡಿಯಲು ಮನಸ್ಸಿಲ್ಲದಷ್ಟು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸೋಮಾರಿಯಾಗಿ ಬಿಟ್ಟಿದ್ದ. ತನ್ನದೇ ಸ್ಥಿತಿಗತಿ ಬಗ್ಗೆ ಸಂವೇದನಾ ಶೂನ್ಯನಾಗಿದ್ದ. ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿರಲಿಲ್ಲ. ಏಕೆಂದರೆ, ತನ್ನ ಮಕ್ಕಳಿಗೆ ಜಾಡಮಾಲಿ ಕೆಲಸ ಹಾಗೂ ಕಸಗುಡಿಸುವ ಕೆಲಸ ಗಟ್ಟಿ, ಖಾತ್ರಿ ಎಂಬುದು ಈ ಜನರಿಗೆ ಗೊತ್ತಿತ್ತು. ಹೀಗೆ, ವೃತ್ತಿಗೂ ಹಾಗೂ ಕೆಲಸಗಾರರಿಗೂ ಧಕ್ಕೆ ಉಂಟಾಯಿತು. ಅನೈರ್ಮಲ್ಯತೆ ವ್ಯಾಪಿಸಿತು, ಮಲದ ವಿಲೇವಾರಿಗೆ ಸಮರ್ಪಕ ರೀತಿ, ವಿಧಾನ ಇಲ್ಲದಿದ್ದುದರಿಂದ, ದೇಶ ಅತ್ಯಮೂಲ್ಯವಾದ ಗೊಬ್ಬರವನ್ನು ಕಳೆದುಕೊಳ್ಳಬೇಕಾಯಿತು. ಜಾಡಮಾಲಿಯು ಅತ್ಯಂತ ಹೊಲಸು ಕೆಲಸ ಮಾಡುತ್ತಿದ್ದರೂ, ಈ ಕೆಲಸವನ್ನು ಬೇರೆ ಯಾರೂ

ಮಾಡುವುದಿಲ್ಲವೆಂಬುದು ಗೊತ್ತಿದ್ದರೂ ಸಮಾಜ ಈ ಜನರಿಗೆ ಮಾನ್ಯತೆ, ಕೃತಜ್ಞತೆ ತೋರುತ್ತಿಲ್ಲ. ತಕ್ಕಷ್ಟು ಪ್ರತಿಫಲವನ್ನು ಕೊಡುತ್ತಿಲ್ಲ. ಒಂದು ಬಗೆಯ ಪರಸ್ಪರ ಅವಲಂಬನೆ ಪ್ರವೃತ್ತಿ ಬೆಳೆದುಬಂದಿದೆ. ಸಮಾಜವು ಸಂಪೂರ್ಣವಾಗಿ ಭಾಂಗಿಯನ್ನೇ ಅವಲಂಬಿಸಿದೆ. ಹಾಗಾಗಿ, ಭಾಂಗಿಯು ಒಳ್ಳೆಯ ಸೇವೆ ಅಥವಾ ಕಳಪೆ ಸೇವೆ, ಏನೇ ಸಲ್ಲಿಸಿದರೂ ಸಮಾಜ ಅದನ್ನು ಪಡೆದುಕೊಳ್ಳಲೇಬೇಕಾಗುತ್ತದೆ ಮತ್ತು ಭಾಂಗಿಗೆ ಆಗಾಗ ಅಲ್ಪ ಸ್ವಲ್ಪ ಬಕ್ಷೀಸು ಕೊಟ್ಟು ಭಾಂಗಿಗಳಿಗೆ ಉತ್ತೇಜನ ನೀಡಬೇಕಾಗುತ್ತದೆ. ಈ ಕೆಲಸ ಮಾಡಲು ಭಾಂಗಿ ನಿರಾಕರಿಸಿದರೆ ಅವನದೇ ಜಾತಿಯ ಅಥವಾ ಬೇರೊಂದು ಜಾತಿಯ ಬೇರೊಬ್ಬನನ್ನು ಬೇರೆ ಕಡೆಯಿಂದ ಕರೆ ತಂದು ಕೆಲಸ ಮಾಡಿಸಬೇಕಾಗುತ್ತದೆ. ಹಾಗಾಗಿ, ಭಾಂಗಿ, ಸಮಾಜದ ತೊತ್ತು ಆಗಿಬಿಟ್ಟಿದ್ದಾನೆ. ಯಾವಾಗಲೂ ಕೀಳಾಗಿ ಕಂಡರೂ, ಕಡಿಮೆ ಮಜೂರಿ ಕೊಡುತ್ತಿದ್ದರೂ ಅಸಹಾಯಕನಾಗಿ ಈ ವೃತ್ತಿಗೆ ಗಂಟು ಬಿದ್ದಿದ್ದಾನೆ. ತನ್ನ ಬದುಕಿನ ಸ್ಥಿತಿಗತಿಗಳು ಶೋಚನೀಯವಾಗಿದ್ದರೂ, ಕೆಲಸದ ಸ್ಥಿತಿಗತಿ ಅಮಾನವೀಯ ವಾದುದಾಗಿದ್ದರೂ, ಸೇವಾ ನಿಬಂಧನೆಗಳು ಸರಿಯಲ್ಲದವುಗಳಾಗಿದ್ದರೂ ಈ ಕೆಲಸಕ್ಕೆ ಭಾಂಗಿ ಅಂಟಿಕೊಂಡಿದ್ದಾನೆ.

4. ಕಸಗುಡಿಸುವವರು ಹಾಗೂ ಜಾಡಮಾಲಿಗಳು ಕಡೆಗಣಿತ ಸಮುದಾಯದವರಾದ್ದರಿಂದ, ಕೆಲವೇ ಕೆಲವು ಕಡೆಗಳಲ್ಲಿ ಹೊರತು, ಒಟ್ಟಾರೆ ಈ ಕೆಲಸಗಾರರ ಬದುಕಿನ ಸ್ಥಿತಿಗತಿಗಳು ತೀರಾ ಅಸಮಾಧಾನಕರವಾಗಿರುವುದಕ್ಕೆ ಆಶ್ಚರ್ಯಪಸಬೇಕಾಗಿಲ್ಲ. ಪಟ್ಟಣಗಳ ಹಾಗೂ ನಗರಗಳ ನೈರ್ಮಲ್ಯ ಹಾಗೂ ಆರೋಗ್ಯ ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕೆಲಸವನ್ನೇ ಅವಲಂಬಿಸಿರುವುದರಿಂದ ಮತ್ತು ಕಾನೂನಿನ ಪ್ರಕಾರವೂ (ನೋಡಿ: ಬಾಂಬೆ ಮುನಿಸಿಪಲ್ ನೌಕರರ ಕಾಯ್ದೆ, 1890 ಹಾಗೂ ಸಾರ್ವಜನಿಕ ಭದ್ರತೆ ಕ್ರಮಗಳ ಕಾಯ್ದೆ 1947) ಈ ಕೆಲಸಗಾರರ ಸೇವೆಯನ್ನು ಅತ್ಯಾವಶ್ಯಕ ಸೇವೆಯೆಂದು ಪರಿಗಣಿಸಿರುವುದರಿಂದ, ಎಲ್ಲ ನೈರ್ಮಲ್ಯ ಸಂರಕ್ಷಣಾ ಕೆಲಸಗಾರರಿಗೆ ಸೂಕ್ತ ವಸತಿ ಸೌಕರ್ಯವನ್ನು ಕಲ್ಪಿಸುವುದು ಹಾಗೂ ಬದುಕಿಗೆ ಸೂಕ್ತ ಸ್ಥಿತಿಗತಿಗಳನ್ನು ಕಲ್ಪಿಸುವುದು ಎಲ್ಲ ಸ್ಥಳೀಯ ಸಂಸ್ಥೆಗಳ ಕರ್ತವ್ಯವೆಂಬುದನ್ನು ಪರಿಗಣಿಸಲೇಬೇಕು.

5. ಕೆಲವೊಂದು ಕಡೆಗಳಲ್ಲಿ, ಜಾಡಮಾಲಿಗಳನ್ನು ಕೊಳೆಗೇರಿ ತೆರವಿನ ನೆಪವೊಡ್ಡಿ, ಬಹುಕಾಲದಿಂದಲೂ ಸ್ವಾಧೀನದಲ್ಲಿರುವ ಅವರ ಜಾಗಗಳಿಂದ ಒಕ್ಕಲೆಬ್ಬಿಸುತ್ತಿದ್ದಾ ರೆಂದು ಜಾಡಮಾಲಿಗಳು ದೂರು ಸಲ್ಲಿಸಿದ್ದಾರೆ. ಹಾಗೆ ಮಾಡುವುದು ಸರಿಯಲ್ಲವೇ ಅಲ್ಲ.
ಈ ವಿಷಯದಲ್ಲಿ ಮುನಿಸಿಪಾಲಿಟಿಗಳು ಜಾಗೃತವಾಗಿರಬೇಕೆಂದು, ಕಸಗುಡಿಸುವವರು ಹಾಗೂ ಜಾಡಮಾಲಿಗಳು, ಕಟ್ಟಿಕೊಂಡಿರುವ ಮನೆಯ ಜಾಗವು ಬಹುಕಾಲದಿಂದಲೂ ಅವರ ಸ್ವಾಧೀನದಲ್ಲಿರುವುದರಿಂದ ಕೊಳಗೇರಿ ತೆರವಿನ ಯೋಜನೆಯನ್ನು ಅವರನ್ನು ಒಕ್ಕಲೆಬ್ಬಿಸಲು ಒಂದು ನೆಪವನ್ನಾಗಿ ಮಾಡಿಕೊಳ್ಳಲು ಆಸ್ಪದ ಕೊಡಬಾರದೆಂದು, ಬದಲಿಗೆ, ಹೊಸದಾಗಿ ವಿನ್ಯಾಸಗೊಳಿಸಿದ ಯೋಜನೆ ಪ್ರಕಾರ, ಅದೇ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಪ್ಲಾಟ್‌ಗಳನ್ನು ಮಂಜೂರು ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

6. ಕಸಗುಡಿಸುವವರ ಕೆಲಸದ ಸ್ಥಿತಿಗಳಿಗೆ ಸಂಬಂಧಪಟ್ಟಂತೆ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಒಂದೆರಡು ವಿಷಯಗಳಿವೆ. ಕಸಗುಡಿಸಲು ಕಸಗುಡಿಸುವವರೇ ಪೊರಕೆಗಳನ್ನು, ಬ್ಯಾಸ್ಕೆಟ್‌ಗಳನ್ನು ತರಬೇಕೆಂದು ಕೆಲವೊಂದು ಸ್ಥಳೀಯ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೇಳುತ್ತಿರುವುದು ಕಂಡುಬಂದಿದೆ. ಇದು ಸರಿಯಲ್ಲವೇ ಅಲ್ಲ. ಕಡಿಮೆ ಉದ್ದದ ಪೊರಕೆಯಿಂದ ಮೈಯನ್ನು ಬಗ್ಗಿಸಿ ಕಸಗುಡಿಸುವುದು ಆರೋಗ್ಯಕ್ಕೆ ಹಾನಿಕರ. ಆದ್ದರಿಂದ,–

(i) ತಮ್ಮ ಅಧೀನದಲ್ಲಿ ಕೆಲಸ ಮಾಡುತ್ತಿರುವ ಕಸಗುಡಿಸುವವರಿಗೆ, ಅವರ ಕೆಲಸಕ್ಕಾಗಿ ಬೇಕಾದ ಎಲ್ಲ ಬ್ಯಾಸ್ಕೆಟ್‌ಗಳನ್ನು, ಪೊರಕೆಗಳನ್ನು ಸ್ಥಳೀಯ ಸಂಸ್ಥೆಗಳೇ ಒದಗಿಸಬೇಕೆಂದು ಮತ್ತು

(ii) ಮೈ ಬಗ್ಗಿಸಿಕೆಲಸ ಮಾಡುವುದಕ್ಕೆ ಆಸ್ಪದವಾಗದಂತಹ, ಕೈ ಹಿಡಿಕೆ ಇರುವ ಉದ್ದನೆಯ ಪೊರಕೆಗಳನ್ನು ಒದಗಿಸಬೇಕೆಂದು – ನಾವು ಶಿಫಾರಸು ಮಾಡುತ್ತೇವೆ.

7. ಮೊದಲನೇ ಸಮಸ್ಯೆ ಯಾವುದೆಂದರೆ, ಮಜೂರಿಗೆ ಸಂಬಂಧ ಪಟ್ಟಿರುವ ಸಮಸ್ಯೆ ಸ್ಥಳೀಯ ಸಂಸ್ಥೆಗಳಲ್ಲಿ ಬಹಳಷ್ಟು ಸಂಖ್ಯೆಯ ಜಾಡಮಾಲಿಗಳನ್ನು ಹಾಗೂ ಕಸಗುಡಿಸುವವರನ್ನು ತಾತ್ಕಾಲಿಕ ನೌಕರರನ್ನಾಗಿ ಇಟ್ಟುಕೊಂಡಿರುವ ಪ್ರವೃತ್ತಿ ಇದೆ. ಹಾಗೆಯೇ ಅರೆಕಾಲಿಕ ನೌಕರರನ್ನು ತೊಡಗಿಸಿಕೊಳ್ಳುವ ಪ್ರವೃತ್ತಿಯೂ ಇದೆ. ತಾತ್ಕಾಲಿಕ ಹಾಗೂ ಅರೆಕಾಲಿಕ ನೌಕರರನ್ನು ತೊಡಗಿಸಿಕೊಳ್ಳುವ ಪ್ರವೃತ್ತಿಯೂ ಇದೆ. ಅರೆಕಾಲಿಕ ನೌಕರರನ್ನು ಇಟ್ಟುಕೊಳ್ಳುವುದರಿಂದಾಗುವ ಅನುಕೂಲವೇನೆಂದರೆ ಖಾಯಂ ನೌಕರರಿಗೆ ಕೊಡುವಂತಹ ಪೂರ್ಣ ಸಂಬಳ ಅಥವಾ ತುಟ್ಟಿ ಭತ್ಯೆ ಮತ್ತು ಗಳಿಕೆ ರಜೆ, ಹೆರಿಗೆ ರಜೆ, ಭವಿಷ್ಯ ನಿಧಿ ಮುಂತಾದ ಇತರ ಪ್ರಯೋಜನಗಳನ್ನು ಕೊಡುವ ಅವಶ್ಯಕತೆ ಇರುವುದಿಲ್ಲ. ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್‌ರುಗಳು ಒದಗಿಸುವ ಉತ್ತರಗಳನ್ನು ಗಮನಿಸಿದರೆ ಸರ್ಕಾರಿ ಇಲಾಖೆಗಳಲ್ಲಿ ಈ ಪ್ರವೃತ್ತಿ ಇರುವುದಾಗಿ ಕಂಡು ಬರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಜಾಡಮಾಲಿಗಳ ಹಾಗೂ ಕಸಗುಡಿಸುವವರ ಸಂಖ್ಯೆಯನ್ನು ಕಡಿಮೆ ಮಾಡಲು ಪ್ರಯತ್ನಗಳಾಗುತ್ತಿವೆ. ಹಾಗಾಗಿ, ತಾತ್ಕಾಲಿಕ ನೌಕರರ ಸಂಖ್ಯೆಯು ಜಾಸ್ತಿ ಆಗಬಹುದಾದ್ದರಿಂದ,

(i) ಮುನಿಸಿಪಾಲಿಟಿಯ ಅಥವಾ ಜಿಲ್ಲಾ ಸ್ಥಳೀಯ ಮಂಡಲಿಯ ಅಧೀನದಲ್ಲಿ ಪೂರ್ಣಕಾಲಿಕವಾಗಿ ಜಾಡಮಾಲಿ ಅಥವಾ ಕಸಗುಡಿಸುವ ನೌಕರಿ ಮಾಡುತ್ತಿರುವವರನ್ನು, ನೌಕರಿಯು ಖಾಯಂ ವೃಂದದ್ದಾಗಿದ್ದರೆ ಒಂದು ವರ್ಷದ ಅನುಮೋದಿತ ಸೇವೆಯ ನಂತರ, ಖಾಯಂಗೊಳಿಸಬೇಕು.

8. ಪ್ರತಿಯೊಂದು ಸಣ್ಣ ಪುಟ್ಟ ತಪ್ಪುಗಳಿಗೂ ದಂಡ ಹಾಕಿ, ಕೆಲವು ನಿಮಿಷಗಳು ತಡವಾಗಿ ಬಂದರೂ ಇಡೀ ದಿನಕ್ಕೆ ಗೈರು ಹಾಜರಿಯೆಂದು ಗುರುತು ಮಾಡಿ, ಗೈರು ಹಾಜರಿಗೆ ಸರಿಯಾದ ಕಾರಣ ಕೊಟ್ಟಿಲ್ಲ ಎಂಬ ಕಾರಣದ ಮೇಲೆ ಆಗಾಗ ಅಮಾನತ್ತು ಮಾಡಿ ಕಿರುಕುಳ ಕೊಡುತ್ತಿರುವುದಾಗಿ ಜಾಡಮಾಲಿಗಳು ಹಾಗೂ ಕಸಗುಡಿಸುವವರು ಅನೇಕ ಕಡೆಗಳಲ್ಲಿ ನಮ್ಮ ವಿಚಾರಣೆ ಕಾಲದಲ್ಲಿ ದೂರು ಹೇಳಿಕೊಂಡರು. ಇವೆಲ್ಲವುಗಳಿಂದ ಸಂಬಳದಲ್ಲಿ ಕಡಿತ ಆಗುತ್ತದೆ. ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳಲೇಬೇಕು. ಆದರೆ, ಜಾಡಮಾಳಿಗಳು ಹಾಗೂ ಕಸಗುಡಿಸುವವರು ನಿಯತವಾಗಿ ಕೆಲಸಕ್ಕೆ ಹಾಜರಾಗುವುದಿಲ್ಲ. ಕೆಲಸದ ಬಗ್ಗೆ ಅಸಡ್ಡೆಯಿಂದಿರುತ್ತಾರೆ ಎನ್ನುವುದೂ ನಿಜ. ಈ ಜನರ ಕೆಲಸದ ಸ್ಥಿತಿಗತಿ ಹಾಗೂ ಸಮಾಜವು ಈ ಜನರನ್ನು ನಡೆಸಿಕೊಳ್ಳುತ್ತಿರುವ ರೀತಿ, ಈ ಜನರ ವರ್ತನೆಯಲ್ಲಾಗುತ್ತಿರುವ ಲೋಪದೋಷಗಳಿಗೆ ಬಹುಮಟ್ಟಿಗೆ ಕಾರಣ. ಶಿಕ್ಷೆಗಳನ್ನು ವಿಧಿಸುವುದರಿಂದಲೇ ದಕ್ಷತೆಯಲ್ಲಿ ಹೆಚ್ಚಳವಾಗುವುದಿಲ್ಲ. ಬದುಕಿನ ಸ್ಥಿತಿಗತಿಗಳಲ್ಲಿ, ಕೆಲಸದ ಸ್ಥಿತಿಗತಿಗಳಲ್ಲಿ, ಸೇವಾ ನಿಬಂಧನೆಗಳಲ್ಲಿ, ಸುಧಾರಣೆಗಳನ್ನು ತಂದರೆ, ದೇಶದ ನಾಗರಿಕರಲ್ಲಿ ಈ ಜನರೂ ನಮ್ಮಂತೆಯೇ ಎನ್ನುವ ಸಮಾನರೆಂಬ ಭಾವನೆ ಮೂಡಿಸಿದರೆ, ಸಮರ್ಪಕ ತಿಳಿವಳಿಕೆ ಕೊಟ್ಟರೆ ಹಾಗೂ ಸಂಸ್ಕೃತಿಯನ್ನು ಬೆಳೆಸಿದರೆ ದಕ್ಷತೆಯಲ್ಲಿ ಹೆಚ್ಚಳ ಆಗೇ ಆಗುತ್ತದೆ.

9. ಜಾಡಮಾಲಿಗಳ ಕೆಲಸದಲ್ಲಿ ಸಂಸ್ಕೃತಿಯನ್ನು ಬೆಳೆಸಲು ಬದುಕಿನ ಬಗ್ಗೆ ಹೊಸ ದೃಷ್ಟಿಕೋನವನ್ನು ತಳೆಯಲು ಹಾಗೂ ದಕ್ಷತೆಯನ್ನು ಹೆಚ್ಚಿಸಲು ಈ ಮುಂದಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಅಭಿಪ್ರಾಯಪಟ್ಟಿದ್ದೇವೆ:

(ಎ) ಒಳ್ಳೆಯ ವಸತಿ ಒದಗಿಸಬೇಕು. ಅವರಿಗೇ ಮಾಲೀಕತ್ವದ ಹಕ್ಕನ್ನು ಕೊಡಬೇಕು. ಸ್ವಂತ ಮನೆಗಳನ್ನು ಹೊಂದಲು PWR ಯೋಜನೆ ನಂ 219ರ ಪ್ರಯೋಜನವನ್ನು ಪಡೆದುಕೊಳ್ಳಲು ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಉತ್ತೇಜನ ನೀಡಬೇಕು.

(ಬಿ) ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ ತರಬೇಕು

(ಸಿ) ಒಳ್ಳೆಯ ಸೇವಾ ನಿಬಂಧನೆಗಳನ್ನು ಕಲ್ಪಿಸಬೇಕು.

(ಡಿ) ವಯಸ್ಕರರು ಸಾಕ್ಷರರಾಗಲು ಹಾಗೂ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಒದಗಿಸಲು ವಿಶೇಷ ಪ್ರಯತ್ನಗಳನ್ನು ಮಾಡಬೇಕು.

(ಇ) ನೈರ್ಮಲ್ಯದ ತತ್ವಗಳನ್ನು ಹಾಗೂ ಸರಿಯಾದ ವಿಧಾನದಲ್ಲಿ ಕೆಲಸ ಮಾಡುವುದನ್ನು ಹೇಳಿಕೊಡಲು ತಂಡಗಳಲ್ಲಿ ನಿಯತಕಾಲಿಕವಾಗಿ ತರಗತಿಗಳನ್ನು ಏರ್ಪಡಿಸಬೇಕು.

(ಎಫ್) ಸ್ವಾಭಿಮಾನವನ್ನು ಬೆಳೆಸಿಕೊಳ್ಳಲು ಯುವ ಜನರಿಗೆ ದೈಹಿಕ ಕಸರತ್ತಿನ ತರಗತಿಗಳನ್ನು ಏರ್ಪಡಿಸಬೇಕು, ಸಾಮಾನ್ಯ ವ್ಯಾಯಾಮ ಮಂದಿರಗಳು, ಹೋಂ ಗಾರ್ಡ್‌ಗಳು ಮುಂತಾದವಕ್ಕೆ ಸೇರುವಂತೆ ಉತ್ತೇಜನ ನೀಡಬೇಕು ಮತ್ತು ನಾಗರಿಕರ ಸಾಮಾನ್ಯ ಬದುಕಿನಲ್ಲಿ ಭಾಗಿಯಾಗುವಂತೆ ಮಾಡಬೇಕು.

(ಜಿ) ವಾಹನ ಚಾಲನೆ, ಬಟ್ಟೆ ಬರೆ ಹೊಲಿಗೆ, ಮರಗೆಲಸ, ಸೈಕಲ್ ದುರಸ್ತಿ ಹಾಗೂ ಮೋಟಾರ್ ಮೆಕಾನಿಕ್ ನಂತಹ ದೀರ್ಘ ತರಬೇತಿಯ ಅಗತ್ಯ ಇರದಂತಹ ಇತರ ವೃತ್ತಿಗಳನ್ನು ಕೈಗೊಳ್ಳಲು ಉತ್ತೇಜನ ನೀಡಬೇಕು.

(ಹೆಚ್) ಪೂರ್ಣ ಸಂಬಳಕ್ಕಾಗಿ ಪೂರ್ಣ ಕೆಲಸ ಮಾಡಲೇಬೇಕೆಂಬ ಬಗ್ಗೆ ಅವರಿಗೆ ತಿಳಿವಳಿಕೆ ಮೂಡಿಸಿ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಬೇಕು.

(ಐ) ಚೆನ್ನಾಗಿ, ನಿಯತವಾಗಿ ಹಾಗೂ ದಕ್ಷತೆಯಿಂದ ಕೆಲಸ ಮಾಡಿದ್ದಕ್ಕಾಗಿ ಹಾಗೂ ಸಾಕ್ಷರತೆಯಲ್ಲಿ, ತಿಳಿವಳಿಕೆಯಲ್ಲಿ ಹಾಗೂ ಉತ್ತಮ ಜೀವನಕ್ಕಾಗಿ, ಪ್ರಗತಿ ಸಾಧಿಸಿದ್ದಕ್ಕಾಗಿ ಬಹುಮಾನ ವಿತರಣೆ ಸಮಾರಂಭಗಳನ್ನು ಏರ್ಪಡಿಸಬೇಕು.

(ಜೆ) ನಿಜವಾಗಿಯೂ ಅರ್ಹರಾಗುವ ಕೆಲಸಗಾರರಿಗೆ ಆಯ್ಕೆ ಶ್ರೇಣಿಗೆ ಅಥವಾ ಮುಕದಮ ದರ್ಜೆಗೆ ಮುಂಬಡ್ತಿ ಕೊಡಬೇಕು.

## II ಮಲ್ಕಾನಿ ಸಮಿತಿ 1957–1960

1957ರಲ್ಲಿ ಗೃಹ ಮಂತ್ರಾಲಯವು "ಸ್ಕ್ಯಾವೆಂಜಿಂಗ್ ಕಂಡೀಷನ್ಸ್ ಎನ್‌ಕ್ವೆಯರಿ ಕಮಿಟಿ" ಯನ್ನು ರಚಿಸಿತು. ಪ್ರೊ.ಎನ್.ಆರ್. ಮಲ್ಕಾನಿಯವರು ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಯ ವರದಿಯ ಉದ್ಧೃತ ಭಾಗಗಳನ್ನು ಈ ಮುಂದೆ ಕೊಡಲಾಗಿದೆ.

1. ಈ ಸಮಸ್ಯೆ ಇರುವ ಅನೇಕ ದೇಶಗಳಲ್ಲಿ ಸುಧಾರಿತ ವಿಧಾನಗಳನ್ನು ತಂದಿದ್ದರೂ, ಭಾರತದಲ್ಲಿ ಸುಧಾರಿತ ವಿಧಾನಗಳನ್ನು ತಂದಿಲ್ಲ. ಮಲವನ್ನು ಅತ್ಯಂತ ಹಳೆಯ ಓಬಿರಾಯನ ಕಾಲದ ವಿಧಾನದಲ್ಲಿ ಸಾಗಿಸಲಾಗುತ್ತಿದೆ. ಪಾಶ್ಚಿಮಾತ್ಯ ದೇಶಗಳ ಜನರು ಬೆಲೆ ಬಾಳುವ ವಸ್ತುಗಳನ್ನು ಅಥವಾ ಆಹಾರ ಪದಾರ್ಥಗಳನ್ನು ತಲೆ ಮೇಲೆ ಹೊತ್ತು ಸಾಗಿಸುವುದಿಲ್ಲ. ಅಂಥವುಗಳನ್ನು ಯಾವುದೇ ಒಂದು ಬಗೆಯ ವಾಹನದಲ್ಲಿ ಸಾಗಿಸುತ್ತಾರೆ. ಅದಾಗದಿದ್ದರೆ, ಬೆನ್ನಲ್ಲಿ ಹೊತ್ತು ಅಥವಾ ಭುಜಗಳಲ್ಲಿ ಹೊತ್ತು ಒಯ್ಯುತ್ತಾರೆ. ಪಾಶ್ಚಿಮಾತ್ಯ ದೇಶಗಳ ಜನರು ತಲೆಯನ್ನು ಶ್ರೇಷ್ಠ ಅಂಗವೆಂದು ಭಾವಿಸಿದ್ದಾರೆ. ಮಲವನ್ನು ತಲೆ ಮೇಲೆ ಹೊತ್ತು ಒಯ್ಯುವುದಿಲ್ಲ. ಆದರೆ, ನಮ್ಮ ಭಾರತದಲ್ಲೋ ಮಲವನ್ನು ತಲೆ ಮೇಲೆ ಹೊತ್ತು ಸಾಗಿಸುವುದೇ ಒಂದು

ಪರಂಪರೆಯಾಗಿಬಿಟ್ಟಿದೆ. ಆ ರೀತಿ ಒಯ್ಯಬೇಡ ಅಂತ ಜಾಡಮಾಲಿಗೆ ತಿಳಿವಳಿಕೆ ಹೇಳಿದರೆ, ಕೂಡಲೇ ಆಕ್ಷೇಪಿಸುತ್ತಾನೆ, ತನ್ನ ತಂದೆ, ತಾತ, ಮುತ್ತಾತಂದಿರೆಲ್ಲಾ ಇದನ್ನೆ ಮಾಡಿಕೊಂಡು ಬಂದಿದ್ದಾರೆ, ನಾನೂ ಮಾಡುತ್ತೇನೆ, ನನ್ನ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳೂ ಇದನ್ನೇ ಮುಂದುವರಿಸುತ್ತಾರೆಂದು ಹೇಳಿಬಿಡುತ್ತಾನೆ. ಮಲವನ್ನು ತಲೆ ಮೇಲೆ ಹೊತ್ತು ಸಾಗಿಸುವ ಈ ಪದ್ಧತಿ ಈಗಲೂ ಮುಂದುವರಿದಿರುವುದಕ್ಕೆ ಸಮಾಜವಷ್ಟೇ ಹೊಣೆಯಲ್ಲ, ಜಾಡಮಾಲಿಯೂ ಅಷ್ಟೇ ಹೊಣೆಗಾರ. ವೈದ್ಯರು ಮತ್ತು ನರ್ಸ್‌ಗಳು ಕಶ್ಮಲವನ್ನು ಮುಟ್ಟುತ್ತಾರೆ, ತೆಗೆದುಹಾಕುತ್ತಾರೆ. ಅವರ ವೃತ್ತಿಯು ಅತ್ಯಂತ ಗೌರವದ ಕಾಯಕದಲ್ಲಿ ಒಂದೆಂದು ಭಾವಿಸಲಾಗಿದೆ. ಹಾಗಿರುವಾಗ ಜಾಡಮಾಲಿ ವೃತ್ತಿಯನ್ನು ಕೊನೆ ಪಕ್ಷ ಸಭ್ಯವಾದುದನ್ನಾಗಿ ಮಾಡಲು ಹಾಗೂ ಗೌರವದಿಂದ ಕಾಣುವಂತೆ ಮಾಡಲು ನಾವೇಕೆ ಪ್ರಯತ್ನ ಮಾಡಬಾರದು?

2. ಮೊದಮೊದಲು ಪ್ರಶ್ನಾವಳಿಗೆ ಉತ್ತರಗಳು ನಿಧಾನವಾಗಿ ಬರತೊಡಗಿದವು. ಉತ್ತರಗಳಿಗೆ ಅನಿರ್ದಿಷ್ಟ ಕಾಲದವರೆಗೆ ಕಾಯಬೇಕಾಗುತ್ತದೆಂದು ಸಮಿತಿಯು ಭಾವಿಸಿತು. ಈಗಾಗಲೇ ಬಂದಿರುವ ಉತ್ತರಗಳು ತೀರಾ ಔಪಚಾರಿಕದವುಗಳಾಗಿದ್ದವು, ಅವುಗಳಲ್ಲಿ ಅನೇಕ ಉತ್ತರಗಳು ಹೇಗಿದ್ದವೆಂದರೆ, ಅವುಗಳ ಆಧಾರದ ಮೇಲೆ ನಿರ್ಣಯಕ್ಕೆ ಬರುವಂತಹ ನಿಖರವಾದ, ಸರಿಯಾದ ಚಿತ್ರಣ ಅವುಗಳಲ್ಲಿರಲಿಲ್ಲ. ಹೀಗಾಗಿ, ಜಾಡಮಾಲಿ ವಿಧಾನಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿರುವ ಕೆಲವು ಪ್ರಮುಖ ನಗರಗಳ ಸ್ಥಳಗಳಿಗೇ ಹೋಗಿ ಅಧ್ಯಯನ ಮಾಡಲು ಸಮಿತಿಯು ತೀರ್ಮಾನಿಸಿತು. ಸಮಸ್ಯೆಯ ವಾಸ್ತವಿಕ ಅಧ್ಯಯನದಿಂದ, ಈ ಸಮಿತಿಯನ್ನು ರಚಿಸಿದ ಕಾಲದಲ್ಲಿ, ಸಮಸ್ಯೆಯು ಹೀಗಿರಬಹುದೆಂದು ಮೂಲತಃ ಅಂದಾಜು ಮಾಡಲಾಗಿತ್ತೋ ಅದಕ್ಕಿಂತಲೂ ಬೃಹದಾಕಾರದ್ದು ಎಂಬುದು ತಿಳಿದು ಬಂತು. ಜಾಡಮಾಲಿ ವೃತ್ತಿಯ ಸ್ಥಿತಿಗತಿಗಳು ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿ ಇದ್ದರೂ, ಬಹುತೇಕ ಎಲ್ಲ ಕಡೆಗಳಲ್ಲಿ ವಿವರಿಸಲಸದಳವಾದಂತಹ ಅನೈರ್ಮಲ್ಯ ಎದ್ದು ಕಾಣುತ್ತಿತ್ತು. ಕೆಲವು ಕಡೆಗಳಲ್ಲಂತೂ ತೀರಾ ಕೆಟ್ಟ ದುರ್ವಾಸನೆಯಿಂದಿದ್ದವೆಂದರೆ, ಕೆಲವರು ಸಮಿತಿಯ ಸದಸ್ಯರು ರಾಜ್ಯದ ಕೆಲವು ಪಟ್ಟಣಗಳಲ್ಲಿದ್ದ ಅತ್ಯಂತ ಹೊಲಸು ಜಾಗಗಳಿಗೆ ಹೋಗಿ ನೋಡಿ ಬಂದಿದ್ದರೂ, ಇಂತಹ ಕಡೆಗಳು ವಾಂತಿ ಮಾಡಿಕೊಳ್ಳುವಷ್ಟು ಗಲೀಜಿನವುಗಳಾಗಿದ್ದವು. ರಾಜ್ಯದಲ್ಲಿರುವ ಕೆಲವು ಪಟ್ಟಣಗಳಲ್ಲಿರುವ ಜಾಗಗಳು ಎಷ್ಟೊಂದು ಹೊಲಸಿನ ಗಲೀಜಿನವುಗಳಾಗಿದ್ದವೆಂದರೆ 'ದೊಡ್ಡ ಶೌಚಾಲಯ' ಗಳೇನೋ ಎಂಬಂತಿದ್ದವು. ಹಲವಾರು ಪಟ್ಟಣಗಳಿಗೆ ಸಮಿತಿಯು ಭೇಟಿ ಕೊಟ್ಟಿದ್ದರಿಂದ ಸಮಸ್ಯೆಯ ಬಗ್ಗೆ ಅಧಿಕಾರಿಗಳು ಹಾಗೂ ನಾಗರಿಕರು ತೀವ್ರವಾಗಿ ಗಮನ ಹರಿಸಲು ಹಾಗೂ ಜಾಡಮಾಲಿ ಸ್ಥಿತಿಗಳಲ್ಲಿ ಕಣ್ಣಿಗೆ ಕಾಣುವಂತಹ ಕೆಲವೊಂದು ಸುಧಾರಣೆಗಳನ್ನು ತರಲು ಸಾರ್ವಜನಿಕರಲ್ಲಿ ಸಾಕಷ್ಟು ಅಭಿಪ್ರಾಯವನ್ನು ಜಾಗೃತಗೊಳಿಸುವಲ್ಲಿ ಸಮಿತಿಯ ಉದ್ದೇಶ ಸಫಲವಾಯಿತು.

3. ಜಾಡಮಾಲಿ ಕೆಲಸದ ವಿಧಾನಗಳಲ್ಲಿ ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ವಿಷಯಕ್ಕೆ ಎಷ್ಟು ಗಮನ ಕೊಡಬೇಕಿತ್ತೋ ಅಷ್ಟು ಗಮನ ಕೊಟ್ಟಿಲ್ಲ. ಪ್ರತಿಯೊಬ್ಬರೂ ಈ ವಿಷಯವನ್ನು ಬಹಳ ಹಗುರವಾಗಿ ಭಾವಿಸಿದ್ದಾರೆ. ಯಾವ ಪ್ರಾಮುಖ್ಯತೆಯನ್ನೂ ಕೊಟ್ಟಿಲ್ಲ. ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ, ಜೀವನೋಪಾಯದ ಪ್ರತಿಯೊಂದು ವೃತ್ತಿ, ಉದ್ಯೋಗ ಕಸುಬಿನಲ್ಲಿ ನಾವು ಬೆಳವಣಿಗೆ ಕಂಡಿದ್ದೇವೆ. ಆದರೆ, ಜಾಡಮಾಲಿ ಕೆಲಸದ ಸ್ಥಿತಿಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸುಧಾರಣೆಗಳಾಗಿರುವುದು ತೀರಾ ತೀರಾ ಅತ್ಯಲ್ಪ. ಸಮಸ್ಯೆಯ ಮೊಟ್ಟ ಮೊದಲ ಅಂಚನ್ನು ಮುಟ್ಟಿಲ್ಲ. ದೊಡ್ಡ ದೊಡ್ಡ ಯೋಜನಗಳನ್ನು ರೂಪಿಸುವ ಯೋಜನಾ ಆಯೋಗವು ಕೂಡ, ಈ ಸಮಸ್ಯೆಗೆ ಎಷ್ಟು ತೀವ್ರವಾಗಿ ಚಿಂತನ ಮಂಥನ ಮಾಡಬೇಕಿತ್ತೋ ಅಷ್ಟೊಂದು ಚಿಂತನ ಮಂಥನ ಮಾಡಿಲ್ಲ. ತಲೆ ಮೇಲೆ ಮಲ ಹೊತ್ತು

ಸಾಗಿಸುವ ಅಮಾನವೀಯ ಪದ್ಧತಿಯನ್ನು ತೊಲಗಿಸಲು ಹಾಗೂ ಜಾಡಮಾಲಿಗಳ ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆಗಳನ್ನು ತರಲು ಮೊದಲೆರಡು ಪಂಚ ವಾರ್ಷಿಕ ಯೋಜನೆಗಳಲ್ಲಿ, ನಿಧಿಗಳಲ್ಲಿ ನಿರ್ದಿಷ್ಟ ಹಣದ ಹಂಚಿಕೆ ಮಾಡಿದ್ದಿದ್ದರೆ ಇಷ್ಟು ಹೊತ್ತಿಗೆ ಎಷ್ಟೋ ಬದಲಾವಣೆಗಳಾಗಿರುತ್ತಿದ್ದವು. ನಾವೀಗ ಎರಡು ಪಂಚ ವಾರ್ಷಿಕ ಯೋಜನೆಗಳು ಪೂರ್ಣಗೊಳ್ಳುವ ಹೊಸ್ತಿಲಿನಲ್ಲಿದ್ದೇವೆ. ಮೂರನೆಯ ಪಂಚ ವಾರ್ಷಿಕ ಯೋಜನೆಯ ಕರಡನ್ನು ಸಂಸತ್ತು ಅನುಮೋದಿಸಿದೆ. ಆದರೂ ಭಾರತದಲ್ಲಿ ಮಾತ್ರವೇ ಬೇರುಗಳಿರುವಂತೆ ಕಾಣುವ ಈ ಅತ್ಯಂತ ಅನೈರ್ಮಲ್ಯದ ಹಾಗೂ ಅಮಾನವೀಯ ಸಮಸ್ಯೆಯನ್ನು ಪರಿಗಣಿಸುವ ಯಾವ ಪ್ರಯತ್ನವೂ ಕಣ್ಣಿಗೆ ಕಾಣುತ್ತಿಲ್ಲ.

4. ತಲೆ ಮೇಲೆ ಮಲ ಹೊತ್ತು ಸಾಗಿಸುವ ಅಮಾನವೀಯ ಪದ್ಧತಿಯನ್ನು ಈ ಕೂಡಲೇ ಹಾಗೂ ಮೂರನೆಯ ಪಂಚವಾರ್ಷಿಕ ಯೋಜನೆಯು ಪೂರ್ಣಗೊಳ್ಳುವ ಹೊತ್ತಿಗೆ ನಿಶ್ಚಿತವಾಗಿ ರದ್ದು ಮಾಡಲು ಹಾಗೂ ಆ ಕೆಲಸದ ಸ್ಥಿತಿಗಳಲ್ಲಿ ಸುಧಾರಣೆ ತರಲು ಸಮಿತಿಯು ಒತ್ತು ಕೊಡಬಯಸಿರುವುದರಿಂದ ಜಾಡಮಾಲಿ ಕೆಲಸದ ಹಾಗೂ ಜಾಡಮಾಲಿಗಳ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿಯೇ ರಾಜ್ಯ ಸರ್ಕಾರಗಳು ಹಾಗೂ ಒಕ್ಕೂಟದ ಆಡಳಿತಗಳು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸಮಿತಿಯು ಸಲಹೆ ಮಾಡುತ್ತದೆ. ಇಂತಹ ಅಧಿಕಾರಿಗಳನ್ನು ನೇಮಕ ಮಾಡುವಾಗ ತುಂಬಾನೆ ಎಚ್ಚರವಹಿಸಬೇಕು. ಅಂತಹ ಅಧಿಕಾರಿಗಳಿಗೆ ಕಲ್ಯಾಣ ಕಾರ್ಯದ ಹಿನ್ನೆಲೆ ಇರಬೇಕು. ಅಷ್ಟೇ ಅಲ್ಲ, ಜಾಡಮಾಲಿ ಕೆಲಸದ ಸಮಸ್ಯೆ ಬಗ್ಗೆ ಒಳ್ಳೆಯ ತಿಳಿವಳಿಕೆ ಉಳ್ಳವರಾಗಿರಬೇಕು ಹಾಗೂ ಜಾಡಮಾಲಿಗಳ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವಲ್ಲಿ ಹುರುಪು, ಹುಮ್ಮಸ್ಸು, ಉತ್ಸಾಹ, ಶ್ರದ್ಧೆ ಉಳ್ಳವರಾಗಿರಬೇಕು.

5. ಗೃಹ ಮಂತ್ರಾಲಯವು, ರಾಜ್ಯಗಳಿಗೆ/ಒಕ್ಕೂಟದ ಆಡಳಿತಗಳಿಗೆ ತಳ್ಳು ಗಾಡಿಗಳನ್ನು/ಕೈ ಗಾಡಿಗಳನ್ನು ಖರೀದಿಸಲು ಭಾರೀ ಅನುದಾನಗಳನ್ನು ಕೊಡುತ್ತಿದೆ. ಈ ಅನುದಾನಗಳನ್ನು ಹೇಗೆ ಖರ್ಚು ಮಾಡಲಾಗುತ್ತಿದೆ ಅಥವಾ ಬಳಕೆ ಮಾಡಲಾಗಿದೆ ಎಂಬುದನ್ನು ಪ್ರತ್ಯೇಕ ಅಧ್ಯಾಯದಲ್ಲಿ ಸವಿವರವಾಗಿ ಹೇಳಲಾಗಿದೆ. ಇಲ್ಲಿ ನಾವು ಆಡಳಿತ ವ್ಯವಸ್ಥೆ ಬಗ್ಗೆ ಮಾತ್ರವೇ ಹೇಳುತ್ತಿದ್ದೇವೆ. ಈಗ, ಅನುದಾನಗಳನ್ನು ಮಂಜೂರು ಮಾಡಲು ಅಥವಾ ರಾಜ್ಯ ಸರ್ಕಾರಗಳಿಂದ ಮತ್ತು ಒಕ್ಕೂಟದ ಆಡಳಿತಗಳಿಂದ ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಕೇಂದ್ರದಲ್ಲಿ ಒಬ್ಬರೇ ಅಧಿಕಾರಿಯಿದ್ದಾರೆ.ಅಖಿಲ ಭಾರತದ ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ, ಅಧಿಸೂಚನೆಯಿಂದ ತೆಗೆದು ಹಾಕಿರುವ ಬುಡಕಟ್ಟುಗಳ ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಕೆಲಸ ಕಾರ್ಯಗಳ ಜೊತೆಗೆ ಈ ಅಧಿಕಾರಿ ಈ ಕಾರ್ಯವನ್ನು ಮಾಡಿಸುತ್ತಿದ್ದಾರೆ. ಜಾಡಮಾಲಿ ಕೆಲಸದ ಸಮಸ್ಯೆ ಬಗ್ಗೆ ಗಮನ ಕೇಂದ್ರೀಕರಿಸಲು ಸಮಯಕ್ಕೆ ಆತನಿಗೆ ಆಸ್ಪದ ಕೊಡದಂತಹ ಅನೇಕ ಇತರ ಕಾರ್ಯಭಾರಗಳು ಇರುತ್ತವೆ. ಈಗಾಗಲೇ ಹೇಳಿರುವಂತೆ, ಈ ಸಮಸ್ಯೆಯಲ್ಲಿ ಪರಿಹರಿಸಬೇಕಾದ ಅನೇಕ ಮಗ್ಗುಲುಗಳಿವೆ. ಕೇಂದ್ರೀಕೃತ ಹಾಗೂ ನಿರಂತರ ಪ್ರಯತ್ನಗಳನ್ನು ಮಾಡದಿದ್ದರೆ ನಿರೀಕ್ಷಿಸಿದ್ದಕ್ಕಿಂತಲೂ ತೀರಾ ಅಲ್ಪ ಸಾಧನೆಯಾಗುವ ಸಾಧ್ಯತೆಯೂ ಇರುತ್ತದೆ. ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳು ಈ ಸಮಸ್ಯೆಯನ್ನು ತೀರಾ ಹಗುರವಾಗಿ ಭಾವಿಸಿವೆ. ಸಾಕಷ್ಟು ಗಮನ ಕೊಡುತ್ತಿಲ್ಲ. ಹಾಗಾಗಿ, ಕೇಂದ್ರದ ಈ ಅಧಿಕಾರಿಯು, ಈ ವ್ಯವಸ್ಥೆಯಲ್ಲಿ ಒಬ್ಬ ಒಳ್ಳೆಯ ಮತ್ತು ಸಮರ್ಥ, ಬಲವಾದ ಅಂಗವಾಗಬಲ್ಲ. ಈ ಅಧಿಕಾರಿಯು ನೀತಿಗಳನ್ನು ರೂಪಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರುವಂತೆ ರಾಜ್ಯಗಳಿಗೆ ಒತ್ತಾಯ ಮಾಡುವುದರ ಜೊತೆಗೆ ನಿಯತಕಾಲಿಕ ಮಧ್ಯಂತರಗಳಲ್ಲಿ ರಾಜ್ಯಗಳಿಗೆ ಹೋಗಿ ಗಮನಿಸಬಹುದು ಅಥವಾ ಸ್ಥಳದಲ್ಲೇ ಅಧ್ಯಯನ ಮಾಡಬಹುದು ಹಾಗೂ ತಪಾಸಣೆ ಮಾಡಬಹುದು. ಬೇರೆ ಬೇರೆ ರಾಜ್ಯಗಳಿಗೆ ಈ ಅಧಿಕಾರಿಯ

ನಿರಂತರಭೇಟಿಯಿಂದ ಕೇಂದ್ರವು ಮಂಜೂರು ಮಾಡಿದ ಯೋಜನೆಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬಂದಿವೆಯೇ ಎನ್ನುವುದು ಸುನಿಶ್ಚಿತವಾಗುತ್ತದೆ. ಬೇರೆ ಬೇರೆ ರಾಜ್ಯಗಳಿಗೆ ಈ ಅಧಿಕಾರಿಯ ಭೇಟಿಯಿಂದ, ಈ ನಿಟ್ಟಿನಲ್ಲಿ ಕೆಲವೊಂದು ಕ್ರಮಗಳನ್ನು ಕೈಗೊಳ್ಳಲೇಬೇಕಾಗುತ್ತದೆಂದು ಹಾಗೂ ಕೇಂದ್ರದ ಅನುದಾನಗಳನ್ನು ಬಳಕೆ ಮಾಡಿಕೊಳ್ಳಲೇಬೇಕಾಗುತ್ತದೆಂದು ಹಾಗೂ ಒಂದು ಏಕರೂಪದ ನೀತಿಯನ್ನು ಅಳವಡಿಸಿಕೊಳ್ಳಲೇಬೇಕಾಗುತ್ತದೆಂದು ರಾಜ್ಯಗಳು ಭಾವಿಸುತ್ತವೆ. ಈ ಅಧಿಕಾರಿಯು ಸ್ಥಳೀಯ ಸಂಸ್ಥೆಗಳೊಂದಿಗೆ ಮಾಡುವ ಚರ್ಚೆಗಳಿಂದ ಅನೇಕ ಅಪೇಕ್ಷಣೀಯ ಬದಲಾವಣೆಗಳಾಗುತ್ತವೆ. ಬೇರೆ ಬೇರೆ ರಾಜ್ಯಗಳಲ್ಲಿ ತಪಾಸಣೆಗಾಗಿ ಈ ಅಧಿಕಾರಿ ಹೋಗಿ ತಪಾಸಣೆ ಮಾಡುವುದರಿಂದ ಹಾಗೂ ಈ ಕೆಲಸದಲ್ಲಿ ಬೇರೆ ಕಡೆಗಳಲ್ಲಿ ಬಳಕೆಯಲ್ಲಿರುವ ಉತ್ತಮ ವಿಧಾನಗಳನ್ನು ಅಳವಡಿಸಿಕೊಳ್ಳಲು ಈ ಅಧಿಕಾರಿಯು ಸಲಹೆ ಮಾಡುವುದರಿಂದ, ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಿರಾತಂಕವಾಗಿ ಮುಂದುವರಿಯುವುದು ಸಾಧ್ಯವಾಗುತ್ತದೆ. ಈ ಅಧಿಕಾರಿಯು ರಾಜ್ಯ ಸರ್ಕಾರಗಳ ಮತ್ತು ಸ್ಥಳೀಯ ಸಂಸ್ಥೆಗಳ ನಡುವೆ ಒಬ್ಬ ಒಳ್ಳೆಯ ಸಂಪರ್ಕಾಧಿಕಾರಿಯಾಗಬಲ್ಲರು. ಆದ್ದರಿಂದ ಸಮಿತಿಯು, ಈ ಸಮಸ್ಯೆಗಳನ್ನು ನಿಭಾಯಿಸಲು ಹಾಗೂ ಈ ಬಗೆಗಿನ ದೈನಂದಿನ ಬೆಳವಣಿಗೆಯನ್ನು ಗಮನಿಸಲು ರಾಜ್ಯದಲ್ಲಿರುವ ಜಾಡಮಾಲಿ ಕೆಲಸದ ಹಾಗೂ ಜಾಡಮಾಲಿಗಳ ಹಲವಾರು ಸಮಸ್ಯೆಗಳ ಬಗ್ಗೆ ಆವಶ್ಯಕ ಹಿನ್ನೆಲೆಯುಳ್ಳ ಹಾಗೂ ಜ್ಞಾನವುಳ್ಳ ಒಬ್ಬ ಅಧಿಕಾರಿಯನ್ನು ಕೇಂದ್ರ ಸರ್ಕಾರವು ಕೇಂದ್ರ ಮಟ್ಟದಲ್ಲಿ ನೇಮಕ ಮಾಡಬೇಕೆಂದು ಸಲಹೆ ಮಾಡುತ್ತದೆ.

6. ಸಮುದಾಯ ಅಭಿವೃದ್ಧಿ ಹಾಗೂ ಸಹಕಾರ ಮಂತ್ರಾಲಯದ ಸಹಕಾರ ಇಲಾಖೆಯು, ಸಾಧ್ಯವಾದರೆ, ಜಾಡಮಾಲಿಗಳ ಕಲ್ಯಾಣಕ್ಕಾಗಿ ಅದರಲ್ಲೂ ಯಾರ ಸಾಂಪ್ರದಾಯಿಕ ಹಕ್ಕುಗಳನ್ನು ರದ್ದು ಮಾಡಲಾಗಿದೆಯೋ ಅಂಥವರ ಕಲ್ಯಾಣಕ್ಕಾಗಿ ಮತ್ತು ಸಹಕಾರ ತತ್ವದ ಆಧಾರದ ಮೇಲೆ ಗೊಬ್ಬರದ ಸಂಗ್ರಹಣೆ, ಸಿದ್ಧತೆ ಹಾಗೂ ಮಾರಾಟ ಮುಂತಾದವಕ್ಕೆ ನೆರವಾಗಲು ಕೆಲವೊಂದು ಸಲಹೆ ಸೂಚನೆಗಳನ್ನು ನೀಡಬಹುದು ಹಾಗೂ ಆ ಇಲಾಖೆಯು ಕೆಲವೊಂದು ಯೋಜನೆಗಳನ್ನು ಪ್ರಾರಂಭಿಸಬಹುದು.

7. ಸಂಬಳದ ದಿನದಂದು ಜಾಡಮಾಲಿಗಳ ಮಜೂರಿಯನ್ನು ಬಟವಾಡೆ ಮಾಡುವಾಗ ಸಾಲಗಾರರು ಬಂದು ವಸೂಲಿಗೆ ಕಾಯುತ್ತಿರುತ್ತಾರೆ. ಮಜೂರಿಯನ್ನು ಸ್ಥಳೀಯ ಸಂಸ್ಥೆಯ ಜವಾಬ್ದಾರಿಯುತ ಅಧಿಕಾರಿಯ ಸಮಕ್ಷಮದಲ್ಲಿ ಮಜೂರಿಯನ್ನು ಬಟವಾಡೆ ಮಾಡುವುದು ಒಳ್ಳೆಯದೆಂದು, ಬಟವಾಡೆ ಆವರಣಗಳಲ್ಲಿ ಯಾರೇ ಸಾಲಗಾರರು ಇರದಂತೆ ಹಾಗೂ ಜಾಡಮಾಲಿಗಳಿಗೆ ಕಾಟ ಕೊಡದಂತೆ ನೋಡಿಕೊಳ್ಳಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಜಾಡಮಾಲಿಗಳಿಂದ ಹಣ ಕಸಿಯುತ್ತಾರೆನ್ನಲಾದ ಹಾಗೂ ಮತ್ತು ಕಾನೂನು ಬಾಹಿರ ರುಷುವತ್ತನ್ನು ತೆಗೆದುಕೊಳ್ಳುತ್ತಾರೆನ್ನಲ್ಲಾದ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಕ ಸಿಬ್ಬಂದಿ ಮೇಲೆ ಒಬ್ಬ ಅಧಿಕಾರಿ ಕಣ್ಣಿಟ್ಟಿರಬೇಕು.

8. ದಿನದಲ್ಲಿ ಕೆಲಸದ ವೇಳೆ 7 ಗಂಟೆಗಳು ಅಥವಾ 8 ಗಂಟೆಗಳವರೆಗಿರಬೇಕು. ಜಾಡಮಾಲಿಗಳು ಬೆಳಗ್ಗೆ ಮತ್ತು ಸಂಜೆ ಕೆಲಸ ಮಾಡಬೇಕೆಂದು ಹೇಳಬೇಕು. ಕೆಲಸದ ವೇಳೆ ಜಾಸ್ತಿಯಾಯಿತೆಂದು ಜಾಡಮಾಲಿಗಳು ದೂರುತ್ತಾರೆ. ಆದರೆ, ಜಾಡಮಾಲಿಗಳು ತಮ್ಮ ಕೆಲಸವನ್ನು ಎರಡು ಅಥವಾ ಮೂರು ಗಂಟೆಗಳ ಒಳಗೇ ಮುಗಿಸಿ ಮನೆಗೆ ಹೋಗುತ್ತಾರೆಂದು ಹೇಳುತ್ತವೆ. ಆದ್ದರಿಂದ, ಪೂರ್ಣಕಾಲಿಕ ನೌಕರರಿಗೆ ಕೆಲಸದ ಗಂಟೆಗಳು ಪ್ರತಿದಿನ 7 ಗಂಟೆಗಳಿಗಿಂತ ಹೆಚ್ಚಿಗೆ ಇರಬಾರದೆಂದು, ಈ ಪೈಕಿ 4 ರಿಂದ 5 ಗಂಟೆಗಳನ್ನು ಮಾತ್ರವೇ ಜಾಡಮಾಲಿ ಕೆಲಸಕ್ಕೆ ಮೀಸಲಿಟ್ಟಿರಬೇಕೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಅರೆಕಾಲಿಕ

ಕೆಲಸಗಾರರು ಬೆಳಗ್ಗೆ ಮತ್ತು ಸಂಜೆ ಎರಡೂ ಸಲ ಕೆಲಸ ಮಾಡಬೇಕೆಂದು ಹೇಳಬಾರದು. ಏಕೆಂದರೆ ಅವರು ಯಾವುದಾದರೂ ಬೇರೊಂದು ಕೆಲಸ ಮಾಡುವುದನ್ನು ತಪ್ಪಿಸಿದಂತಾಗುತ್ತದೆ, ಅದರಿಂದ ಅವರಿಗೆ ತೊಂದರೆಯಾಗುತ್ತದೆ.

9. ಮಹಿಳಾ ಜಾಡಮಾಲಿಗಳು ತಮ್ಮ ಮಕ್ಕಳನ್ನು ಅದರಲ್ಲೂ ಚಿಕ್ಕ ಮಕ್ಕಳನ್ನು ಜೊತೆಯಲ್ಲೇ ಕರೆದುಕೊಂಡು ಬಂದಿರುತ್ತಾರೆ. ಗಲೀಜು, ಹೊಲಸು ಮುಂತಾದವು ಜಾಸ್ತಿ ಇರುವಂತಹ ಸ್ಥಳಗಳಲ್ಲಿ ಮಕ್ಕಳು ಇರುತ್ತವೆ. ಈ ಸ್ಥಿತಿಗೆ ಆಸ್ಪದ ಇರಬಾರದು. ಜಾಡಮಾಲಿಗಳ ಕಾಲೋನಿಗಳಲ್ಲಿ ಬಾಲಮಂದಿರಗಳನ್ನು ಪ್ರಾರಂಭಿಸಬೇಕು. ಅಲ್ಲಿ ಮ್ಕಕಳನ್ನು ನೋಡಿಕೊಳ್ಳಲು ತರಬೇತಿ ಪಡೆದಿರುವಂತಹ ಸಾಧ್ಯವಾದರೆ ಅರ್ಹ ಮಹಿಳಾ ಕೆಲಸಗಾರ್ತಿಯನ್ನು ನೇಮಕ ಮಾಡಬೇಕು. ತಕ್ಕ ಸಂಬಳ ಕೊಡಬೇಕು. ಮಕ್ಕಳು ಯೋಗ್ಯ ವ್ಯಕ್ತಿಗಳಾಗಿ ಮಾರ್ಪಡುವಂತೆ ಮಕ್ಕಳಿಗೆ ಚೊಕ್ಕಟವಾದ ಜೀವನದ ಹಾಗೂ ಅಭ್ಯಾಸಗಳ ರೀತಿ ನೀತಿಗಳನ್ನು ಹೇಳಿಕೊಡಬೇಕು. ದೇಶದಾದ್ಯಂತ ಬಹುತೇಕ ಮಹಿಳೆಯರೇ ಜಾಡಮಾಲಿ ಕೆಲಸ ಮಾಡುತ್ತಿರುವುದರಿಂದ ಈ ವಿಷಯದಲ್ಲಿ ಅವರುಗಳಿಗೆ ಹೆಚ್ಚು ಗಮನ ಕೇಂದ್ರೀಕರಿಸಬೇಕು.

10. ಕಾನೂನುಗಳಿಂದ ಹಾಗೂ ನಿಯಮ ನಿಬಂಧನೆಗಳಿಂದ ಸಾಧಿಸಲಾಗದ್ದನ್ನು, ತಿಳಿವಳಿಕೆ ಮೂಡಿಸಲಾಗದ್ದನ್ನು ಪ್ರಚಾರದಿಂದ ಸಾಧಿಸಬಹುದು. ದೋಷಪೂರ್ಣ ಹಾಗೂ ಕಳಪೆ ಪಾಯಿಖಾನೆಗಳ ಬಳಕೆ, ಬಕೀಟುಗಳನ್ನು ಹೊರಗಡೆಗೆ ರವಾನಿಸುವ ಜಾಗಗಳಲ್ಲಿ ತ್ಯಾಜ್ಯ ಸುರಿಯುವ ಅಂಗಣಗಳಲ್ಲಿ ಕೆಲಸದ ವಿಧಾನಗಳು, ಸಾಗಣೆ ವಿಧಾನ ಮುಂತಾದ ಹಲವಾರು ಪ್ರಕ್ರಿಯೆಗಳಲ್ಲಿ ಒಳಗೊಂಡಿರುವ ಜಾಡಮಾಲಿ ಸಮಸ್ಯೆಗಳನ್ನು ಹಾಗೂ ಜಾಡಮಾಲಿ ಕೆಲಸದ ಸ್ಥಿತಿಗತಿಗಳು ಎಷ್ಟೊಂದು ಕೆಟ್ಟದಾಗಿವೆ, ಅಷ್ಟೇ ಅಲ್ಲ, ಇಂತಹ ಸ್ಥಿತಿಗತಿಗಳು ಸಮಾಜದ ಆರೋಗ್ಯಕ್ಕೆ ಎಷ್ಟೊಂದು ಅಪಾಯಕಾರಿ ಎನ್ನುವುದು ಜನರ ತಿಳಿವಳಿಕೆಗೆ ಬಂದೇ ಇಲ್ಲ ಎನ್ನುವುದನ್ನು ದೇಶದ ಜನ ಸಮೂಹಕ್ಕೆ ತೋರಿಸುವ ಸಲುವಾಗಿ ರಾಜ್ಯದ್ಲಲಿರುವ ಒಳ್ಳೆಯ ಹಾಗೂ ಕೆಟ್ಟ ಜಾಗಗಳನ್ನು ಗೃಹ ಮಂತ್ರಾಲಯದೊಂದಿಗೆ ಸಮಾಲೋಚನೆ ಮಾಡಿ, ವಾರ್ತಾ ಮತ್ತು ಪ್ರಸಾರ ಮಂತ್ರಾಲಯವು ಚಿತ್ರೀಕರಣ ಮಾಡಬೇಕು. ಜನ ಸಮೂಹದಲ್ಲಿ ಮಾನಾಪಮಾನದ ಪ್ರಜ್ಞೆಯನ್ನು ಹಾಗೂ ಸ್ಥಿತಿಗತಿಗಳಲ್ಲಿ ಸುಧಾರಣೆ ತರುವ ಬಗ್ಗೆ ಆಲೋಚನೆ ಮಾಡಲೇಬೇಕೆನ್ನುವ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಅಂತಹ ಫಿಲಂಗಳನ್ನು ಜನ ಸಮೂಹಕ್ಕೆ ಪ್ರದರ್ಶನ ಮಾಡಿ ತೋರಿಸಬೇಕು. ವಾರ್ತಾ ಮತ್ತು ಪ್ರಸಾರ ಮಂತ್ರಾಯದ ಫಿಲಂ ವಿಭಾಗವು ಸಿದ್ಧಪಡಿಸಿದ ಸಾಕ್ಷ್ಯ ಚಿತ್ರಗಳು (ಡಾಕ್ಯುಮೆಂಟರಿಗಳು), ಸಿನಿಮಾ ಸ್ಲೈಡ್‌ಗಳು ಮುಂತಾದವು ಜಾಡಮಾಲಿ ಕೆಲಸದ ಹಾಗೂ ಜಾಡಮಾಲಿಗಳ ಸ್ಥಿತಿಗಳಲ್ಲಿ ಸುಧಾರಣೆ ತರುವ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯ ಹೊಮ್ಮಲು ತುಂಬಾನೆ ಸಹಾಯಕವಾಗುತ್ತವೆ.

## III ಪಾಂಡ್ಯ ಸಮಿತಿ 1967–69

ರಾಷ್ಟ್ರೀಯ ಕಾರ್ಮಿಕ ಆಯೋಗವು ಡಾ॥ ಭಾನುಪ್ರಸಾದ್ ಪಾಂಡ್ಯರವರ ಅಧ್ಯಕ್ಷತೆಯಲ್ಲಿ, 1967ರಲ್ಲಿ, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕೆಲಸದ ಮತ್ತು ಸೇವೆಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಿಸಿತು.

ಸಮಿತಿಯ ವರದಿಯಿಂದ ಉದ್ಧೃತ ಭಾಗಗಳನ್ನು ಈ ಮುಂದೆ ಕೊಡಲಾಗಿದೆ:

1. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಕೆಲಸದ ಸ್ಥಿತಿಗತಿಗಳ ಬಗೆಗಿನ ಸಮಸ್ಯೆ ಬರಿಯ ನೌಕರ–ಧಣಿಯ ಸಂಬಂಧಗಳ ವಿಷಯ ಮಾತ್ರ ಅಲ್ಲ, ಬಹುತೇಕ ಒಂದು ಪೀಳಿಗೆವರೆಗೆ ದೇಶದ ಸಾಮಾಜಿಕ ಹಾಗೂ ರಾಜಕೀಯ ಚಿಂತನ ಮಂಥನದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿರುವ ವಾಸ್ತವಾಂಶವಾಗಿದೆ. ಅಸ್ಪೃಶ್ಯತೆ, ಜಾತಿ ತಾರತಮ್ಯದ ಸಮಸ್ಯೆ ಈ ವೃತ್ತಿಗೆ ಅಂಟಿಕೊಂಡಿರುವ ಕಳಂಕ ಮತ್ತು ವೈರುಧ್ಯಗಳು, ಕಸಗುಡಿಸುವ ಹಾಗೂ ಜಾಡಮಾಲಿಗಳ ಸಮುದಾಯದ ಜನರು ಅನುಭವಿಸಿರುವ ಬಹು ಕಾಲದಿಂದಲೂ ತುಳಿತ, ಬಡತನ ಮತ್ತು ಸಂಕಟ, ಬವಣೆಗಳು ಇಡೀ ದೇಶದ ಸಾಮಾಜಿಕ ಪ್ರಜ್ಞೆಗೆ ಬರಬೇಕು. ಈ ವರ್ಗದ ಜನರನ್ನು ಮೇಲೆತ್ತಬೇಕಾದರೆ ಪರಂಪರೆಯಿಂದ ಬೆಳೆದು ಬಂದಿರುವ ಪ್ರವೃತ್ತಿಗಳನ್ನು ತೊಲಗಿಸಬೇಕಾಗುತ್ತದೆ ಹಾಗೂ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಯಾವ ಹತಾಶೆಯ ಸ್ಥಿತಿಗೆ ತಲುಪಿದ್ದಾರೋ ಅಂತಹ ಸ್ಥಿತಿಯ ದೆಶೆಯಿಂದ ನಮ್ಮ ಹಣೆ ಬರಹವೇ ಇಷ್ಟೆಂಬ ಧೋರಣೆ ತಳೆದಿರಬಹುದೆಂದು ತೋರುತ್ತದೋ ಆ ಸ್ಥಿತಿಯಿಂದ ಈ ಜನರನ್ನು ಬಿಡುಗಡೆ ಮಾಡುವ ವಿಷಯದಲ್ಲಿ ಸವರ್ಣೀಯರನ್ನಷ್ಟೇ ಅಲ್ಲ ಈ ಜನರನ್ನು ಪಳಗಿಸಲು ಬಹುಕಾಲದ ಪ್ರಕ್ರಿಯೆಯ ಅಗತ್ಯವಿದೆ.

2. ಕಸಗುಡಿಸುವವರದು ಹಾಗೂ ಜಾಡಮಾಲಿಗಳದು ಕಾರ್ಮಿಕ ವರ್ಗ. ಈ ಜನರಿಗೆ ಪ್ರಮುಖ ಉದ್ಯೋಗದಾತರೆಂದರೆ ಕಾರ್ಪೊರೇಷನ್‌ಗಳು, ಮುನಿಸಿಪಾಲಿಟಿಗಳು ಮತ್ತು ನಗರ ಹಾಗೂ ಗ್ರಾಮ ಪಂಚಾಯತ್‌ಗಳು, ದಂಡು ಪ್ರದೇಶ ಮಂಡಳಿಗಳು, ಮುಂತಾದ ಸ್ಥಳೀಯ ಸಂಸ್ಥೆಗಳು, ಆಸ್ಪತ್ರೆಗಳು, ಬಂದರು ಟ್ರಸ್ಟ್‌ಗಳು, ರೈಲ್ವೆ ಕಾರ್ಖಾನೆಗಳು, ಕೇಂದ್ರ ಸರ್ಕಾರದ ರಾಜ್ಯ ಸರ್ಕಾರಗಳ ಇಲಾಖೆಗಳು ಮತ್ತು ಅರೆ ಸರ್ಕಾರಿ ಸಂಸ್ಥೆಗಳು. ಇವೆಲ್ಲವುಗಳಿಗೆ 1926 ಕಾರ್ಮಿಕ ಸಂಘಗಳ ಕಾಯ್ದೆಯು ಅನ್ವಯವಾಗುತ್ತದೆ. ಬಹಳಷ್ಟು ಕಸಗುಡಿಸುವವರು ಹಾಗೂ ಜಾಡಮಾಲಿಗಳು ಅದರಲ್ಲೂ ನಗರ ಪ್ರದೇಶಗಳಲಿರುವವರು ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು ಸಂಘಟಿತರಾಗಿದ್ದರೆ, ತಮ್ಮ ಸಂಘಟಿತ ಬಲದಿಂದ ಎಷ್ಟೋ ಒಳ್ಳೆಯ ಸೇವಾ ನಿಬಂಧನೆಗಳನ್ನು ಪಡೆದುಕೊಂಡಿದ್ದಾರೆ. 1947ರ ಕೈಗಾರಿಕಾ ವಿವಾದಗಳ ಕಾಯ್ದೆಯಲ್ಲಿ ಹೇಳಿರುವಂತೆ, ಕಸಗುಡಿಸುವವರು ಹಾಗೂ ಜಾಡಮಾಲಿಗಳು 'ಕೆಲಸಗಾರ' ಅರ್ಥ ವಿವರಣೆ ವ್ಯಾಪ್ತಿಗೆ ಒಳಪಡುತ್ತಾರಾದರೂ ಮತ್ತು ಮುನಿಸಿಪಾಲಿಟಿಯು 'ಉದ್ಯೋಗದಾತ' ಅರ್ಥ ವಿವರಣೆ ವ್ಯಾಪ್ತಿಗೆ ಒಳಪಡುತ್ತದೆಯಾದರೂ ಕೆಲವು ರಾಜ್ಯ ಸರ್ಕಾರಗಳು, ಮುನಿಸಿಪಾಲಿಟಿಗಳ ಮತ್ತು ಕಸಗುಡಿಸುವವರ ಹಾಗೂ ಜಾಡಮಾಲಿಗಳ ನಡುವಣ ವಿವಾದಗಳಲ್ಲಿ ಮಧ್ಯ ಪ್ರವೇಶಿಸದಿರುವ ನೀತಿಯನ್ನು ಅಳವಡಿಸಿಕೊಂಡಿವೆ. ಹಾಗಾಗಿ, ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಕಾಯ್ದೆಯಲ್ಲಿ ಕಲ್ಪಿಸಿರುವ ವ್ಯವಸ್ಥೆಯನ್ನು ಈ ಜನರು ಹಾಗೂ ಮುನಿಸಿಪಾಲಿಟಿಗಳು ಬಳಸಿಕೊಳ್ಳದಂತೆ ವಂಚಿಸಿವೆ.

3. ರಾಯಲ್ ಕಮಿಷನ್ ಆನ್ ಲೇಬರ್, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಸಮಸ್ಯೆಗಳನ್ನು ಪ್ರಸ್ತಾಪಿಸಿರಲಿಲ್ಲ. ಈ ಜನರ ಸಮಸ್ಯೆಗಳನ್ನು, ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಪರಿಶೀಲಿಸುವುದು ಸೂಕ್ತವೆಂದು ಭಾವಿಸಿರುವುದು ಶ್ಲಾಘನೀಯ. 1923ರ ಕೆಲಸಗಾರ ಪರಿಹಾರ ಕಾಯ್ದೆ, 1961 ಹೆರಿಗೆ ಪ್ರಯೋಜನ ಕಾಯ್ದೆ, 1952 ಭವಿಷ್ಯ ನಿಧಿಗಳ ಕಾಯ್ದೆ, 1948ರ ನೌಕರರ ರಾಜ್ಯ ವಿಮೆ ಕಾಯ್ದೆ ಮುಂತಾದ ಹಲವಾರು ಪ್ರಯೋಜನಕಾರಿ ಕಾರ್ಮಿಕ ಶಾಸನಗಳಲ್ಲಿ ಕಲ್ಪಿಸಿರುವ ಪ್ರಯೋಜನಗಳು ಕಾರ್ಮಿಕ ವರ್ಗದಲ್ಲಿ ಒಂದು ಪ್ರಮುಖ ಭಾಗವಾದ ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ದೊರಕಿಲ್ಲವೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಹಲವಾರು ಸಮಿತಿಗಳ ಶಿಫಾರಸುಗಳಿಗೆ ಶಾಸನಾತ್ಮಕ ಬಲ ಇಲ್ಲದಿದ್ದುದರಿಂದಾಗಿ, ಹಲವಾರು ನೇಮಕಾತಿ ಪ್ರಾಧಿಕಾರಗಳು ಶಿಫಾರಸುಗಳನ್ನು ಏಕರೂಪವಾಗಿ ಕಾರ್ಯಗತಗೊಳಿಸಿಲ್ಲ ಮತ್ತು ಸಾಮಾನ್ಯವಾಗಿ ನಿರೀಕ್ಷಿಸಿದ್ದಕ್ಕಿಂತಲೂ

ಕಾರ್ಯರೂಪಕ್ಕೆ ತಂದಿಲ್ಲ. ಈ ಜನರ ಕೆಲಸದ ಸೇವಾ ಮತ್ತು ಜೀವನದ ಸ್ಥಿತಿಗತಿಗಳನ್ನು ನಿಯಂತ್ರಿಸುವ ಒಂದು ವ್ಯಾಪಕ ಶಾಸನವನ್ನು ರೂಪಿಸಬೇಕು ಹಾಗೂ ಸಮರ್ಪಕ ಪರಿವೀಕ್ಷಣಾ ಕಾರ್ಯಾಲಯವನ್ನು ಮತ್ತು ಜಾರಿ ವಿಭಾಗವನ್ನು ಸ್ಥಾಪಿಸಬೇಕು. ಒಳ್ಳೆಯ ಸೇವಾ ನಿಬಂಧನೆಗಳ ವ್ಯಾಪ್ತಿಗೆ ಒಳಪಟ್ಟಿರುವ ಕಸಗುಡಿಸುವವರಿಗೆ/ಜಾಡಮಾಲಿಗಳಿಗೆ ಪ್ರತಿಕೂಲವಾಗಿ ಬಾಧಕವಾಗದಂತೆ ರಕ್ಷಣೆ ನಿಬಂಧನೆಯನ್ನು ಅಂತಹ ಶಾಸನದಲ್ಲಿ ಕಲ್ಪಿಸಿರಬೇಕು. ಅಂತಹ ಶಾಸನವು ಮೊದಲಿಗೆ ಗ್ರಾಮ ಪಂಚಾಯತ್‌ಗಳೂ ಸೇರಿದಂತೆ ಎಲ್ಲ ಚಿಕ್ಕ ಹಾಗೂ ದೊಡ್ಡ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುವಂತೆ ಮಾಡಬೇಕು. ಕಸಗುಡಿಸುವವರನ್ನು ಅಥವಾ ಜಾಡಮಾಲಿಗಳನ್ನು ನಿಯೋಜಿಸಿಕೊಂಡಿರುವ ಯಾರೇ ವ್ಯಕ್ತಿಗೆ ಅಥವಾ ಕಾರ್ಯಸಂಸ್ಥೆಗೆ ಆ ಕಾನೂನಿನ ಯಾವುದೇ ಅಥವಾ ಎಲ್ಲ ನಿಬಂಧನೆಗಳು, ಅಧಿಸೂಚನೆಯನ್ನು ಹೊರಡಿಸಿ ಅನ್ವಯವಾಗುವಂತೆ ಮಾಡಬಹುದು. ಕಸಗುಡಿಸುವವರ ಮತ್ತು ಜಾಡಮಾಲಿಗಳ ಕೆಲಸದ, ಸೇವೆಯ ಮತ್ತು ಬದುಕಿನ ಸ್ಥಿತಿಗತಿಗಳ ಹಲವಾರು ಅಂಶಗಳ ಮೇಲೆ ಸಮಿತಿಯು ಮಾಡಿರುವ ಅವಲೋಕನಗಳನ್ನು ಹಾಗೂ ಶಿಫಾರಸುಗಳನ್ನು ವರದಿಯ ಮುಂದಿನ ಅಧ್ಯಾಯಗಳಲ್ಲಿ ಕೊಡಲಾಗಿದೆ. ಈ ಅಂಶಗಳ ಪೈಕಿ ಯಾವುವನ್ನು ಉದ್ದೇಶಿತ ಶಾಸನದಲ್ಲಿ ಸೇರಿಸಬೇಕೆಂಬುದನ್ನು ಆಯಾಯ ಸೂಕ್ತ ಕಡೆಗಳಲ್ಲಿ ಸೂಚಿಸಲಾಗಿದೆ.

4. ನಾವು ಪ್ರವಾಸ ಮಾಡುವಾಗ, ನಿಯತವಾಗಿ ಮಜೂರಿಯನ್ನು ಸಂದಾಯ ಮಾಡುತ್ತಿಲ್ಲದಿರುವುದರ ಬಗ್ಗೆ ಸಂಬಳದಲ್ಲಿ ಮನಸೋ ಇಚ್ಛೆ ಕಡಿತ ಮಾಡುತ್ತಿರುವ ಬಗ್ಗೆ ಹಾಗೂ ಸಂಬಳದ ಬಟವಾಡೆಯಲ್ಲಾಗುತ್ತಿರುವ ಇತರೆ ಅಕ್ರಮಗಳ ಬಗ್ಗೆ ದೂರುಗಳಿರುವುದು ಸಮಿತಿಗೆ ಕಂಡು ಬಂತು. ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಸಂಬಳ ವಿತರಣೆ ಕಾರ್ಯದ ಉಸ್ತುವಾರಿಯನ್ನು ಸ್ಥಳೀಯ ಮಂಡಳಿಗಳಿಗೆ ವಹಿಸಬೇಕೆಂದು ಮತ್ತು 1936ರ ಮಜೂರಿಗಳ ಸಂದಾಯ ಕಾಯ್ದೆಯ ನಿಬಂಧನೆಗಳು ಕಸಗುಡಿಸುವವರನ್ನು ಹಾಗೂ ಜಾಡಮಾಲಿಗಳನ್ನು ನೇಮಿಸಿಕೊಂಡಿರುವವರಿಗೆ ಅನ್ವಯವಾಗುವಂತೆ ಮಾಡಬೇಕು.

5. ಒಂದು ವಾರದಲ್ಲಿ ಒಂದು ಪೂರ್ಣ ವಿರಾಮ ದಿನ ಅತ್ಯಂತ ಅಗತ್ಯವೆಂದು, ಅದರ ಬದಲಿಗೆ ಯಾವುದೇ ಭಾಗಶಃ ಅರ್ಧ ದಿನದ ರಜಾ ದಿನ ಅಥವಾ ಹಣದ ರೂಪದಲ್ಲಿ ಪರಿಹಾರ ಇರಲೇಕೂಡದು. ಜಾಡಮಾಲಿಗಳ ಹಾಗೂ ಕಸಗುಡಿಸುವವರ ಕೆಲಸದ ಸ್ವರೂಪ ವಿಶಿಷ್ಟವಾದುದರಿಂದ ಕಸಗುಡಿಸುವ ಎಲ್ಲರಿಗೂ ಮತ್ತು ಎಲ್ಲ ಜಾಡಮಾಲಿಗಳಿಗೂ ಅದೇ ದಿನದಂದು ವಿರಾಮಕ್ಕಾಗಿ ಅನುಮತಿ ಕೊಡಬಾರದು. ಏಕೆಂದರೆ, ನೈರ್ಮಲ್ಯದ ಹಾಗೂ ಸಂರಕ್ಷಣೆಯ ಜರೂರು ಅಗತ್ಯಗಳುಂಟಾದಾಗ ರಜಾದಿನಗಳಲ್ಲೂ ಕೂಡ ತಕ್ಕಷ್ಟು ಜನರು ಆ ಕೆಲಸ ಮಾಡಲೇಬೇಕಾಗುತ್ತದೆ. ಆದ್ದರಿಂದ ಸ್ಥಳೀಯ ಮಂಡಳಿಗಳು ಬೇರೆ ಬೇರೆ ನೌಕರರಿಗೆ ಬೇರೆ ಬೇರೆ ದಿನವನ್ನು ವಾರದ ಎರಡು ದಿನವನ್ನಾಗಿ ಗೊತ್ತುಪಡಿಸಬೇಕು. ಆದರೆ, ಪ್ರತಿ 6 ದಿನಗಳ ಕೆಲಸದ ನಂತರ ನಿಯತವಾಗಿ ವಾರದ ವಿರಾಮ ದಿನವು ಕಸಗುಡಿಸುವ ಪ್ರತಿಯೊಬ್ಬನಿಗೂ ಮತ್ತು ಪ್ರತಿಯೊಬ್ಬ ಜಾಡಮಾಲಿಗೂ ಸಿಗುವುದನ್ನು ಸುನಿಶ್ಚಿತಪಡಿಸಿಕೊಳ್ಳಬೇಕು. ಹಾಗೆಯೇ ಸಾರ್ವಜನಿಕ ರಜಾ ದಿನಗಳ ಬಗ್ಗೆ ಸಂಬಂಧಪಟ್ಟಂತೆ ಹೇಳುವುದಾದರೆ ಕೆಲವೊಂದು ಮುನಿಸಿಪಾಲಿಟಿಗಳು ಪೂರ್ಣ ರಜಾ ದಿನಗಳನ್ನು ಕೊಟ್ಟರೆ ಬಿಹಾರದಲ್ಲಿರುವ, ಮೈಸೂರಿಲ್ಲಿರುವ, ಪಾಂಡಿಚೇರಿಯಲ್ಲಿರುವ ಹಾಗೂ ಒರಿಸ್ಸಾದಲ್ಲಿರುವ ಕೆಲವೊಂದು ಮುನಿಸಿಪಾಲಿಟಿಗಳು ಯಾವುವೇ ರಜಾದಿನಗಳನ್ನು ಕೊಟ್ಟಿಲ್ಲ. ಬಹಳಷ್ಟು ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ರಜಾ ದಿನಗಳಲ್ಲಿ ಕೇವಲ ಅರ್ಧದಿನ ಮಾತ್ರ ಬಿಡುವಿಗೆ ಅನುಮತಿ ಕೊಡುತ್ತಿವೆ. ರಾಜ್ಯ ಸರ್ಕಾರಗಳ, ಕೇಂದ್ರಾಡಳಿತ ಪ್ರದೇಶಗಳ IVನೇ ದರ್ಜೆ ನೌಕರರಿಗೆ ಕೊಡುವ ರಜಾದಿನಗಳನ್ನು ಅಥವಾ ಪರಿಹಾರ ರಜೆ ದಿನಗಳನ್ನು ಅಥವಾ ಅವುಗಳ ಬದಲಿಗೆ

ಕೊಡುವ ಪರಿಹಾರವನ್ನು ಕಸಗುಡಿಸುವ ಎಲ್ಲರಿಗೂ ಹಾಗೂ ಎಲ್ಲ ಜಾಡಮಾಲಿಗಳಿಗೂ ಕೊಡಬೇಕು.

6. ನೇಮಕಾತಿ ವಿಷಯದಲ್ಲಿ ದುರ್ವ್ಯವಹಾರಗಳಾಗುತ್ತಿರುವ ಬಗ್ಗೆ ಮತ್ತು ಲಂಚರುಷುವತ್ತುಗಳ ವ್ಯವಹಾರಗಳಾಗುತ್ತಿರುವ ಬಗ್ಗೆ ಸಮಿತಿಯು ಅಧ್ಯಯನ ಪ್ರವಾಸ ಕೈಗೊಂಡಿದ್ದಾಗ ಅನೇಕ ದೂರುಗಳನ್ನು ಸಮಿತಿಗೆ ಸಲ್ಲಿಸಲಾಯಿತು. ನೇಮಕಾತಿ ಕರೆ ಪತ್ರವನ್ನು ಜವಾನನ ಮೂಲಕ ಅಥಾ ಸ್ಯಾನಿಟರಿ ಜಮಾದಾರನ ಕಳುಹಿಸಿದಾಗ ಅದನ್ನು ಯಾವ ವ್ಯಕ್ತಿಗೆ ತಲುಪಸಿಬೇಕೋ ಆ ವ್ಯಕ್ತಿಗೆ ತಲುಪಿಸುವುದಿಲ್ಲ ಅಥವಾ ಸದರಿ ವ್ಯಕ್ತಿಯು ಸದರಿ ವಿಳಾಸದಲ್ಲಿರಲಿಲ್ಲ ಎನ್ನುವ ತಪ್ಪು ಹಿಂಬರಹ ಮಾಡಲಾಗುತ್ತದೆ. ಸಂದೇಹಾಸ್ಪದ ವಿಧಾನಗಳಿಂದಲೋ, ಗಣನೀಯ ಹಣವನ್ನು ಲಂಚವಾಗಿ ತೆಗೆದುಕೊಂಡೋ ಜ್ಯೇಷ್ಠತೆ ಪಟ್ಟಿಯಲ್ಲಿ ತೀರಾ ಕೆಳಗಡೆ ಯಾರ ಹೆಸರುಗಳಿವೆಯೋ ಅಂಥವರಿಗೆ ನೌಕರಿಯನ್ನು ಕೊಡಲಾಗುತ್ತಿದೆ. ನೇಮಕ ಆದೇಶವನ್ನು ತಲುಪಿಸುವ ಸಮಯದಲ್ಲಿ ಲಂಚ ಕೊಡುವಂತೆ ಒತ್ತಾಯಿಸಲಾಗುತ್ತದೆ. ಕೊಡದಿದ್ದರೆ ನೇಮಕದ ಆದೇಶವನ್ನು ತಲುಪಿಸುವುದೇ ಇಲ್ಲ. ನೌಕರರ ಸಂಖ್ಯೆ ದೊಡ್ಡದಿರುವುದರಿಂದಾಗಿ ಸುಲಿಗೆ ಹಣವೂ ಸಾಕಷ್ಟು ದೊಡ್ಡ ಮೊತ್ತದ್ದಾಗುವುದರಿಂದ ಹಾಗೆ ಸುಲಿಗೆ ಮಾಡಿದ ಹಣವನ್ನು ಚಿಕ್ಕ ಪುಟ್ಟ ಸಿಬ್ಬಂದಿಯಷ್ಟೇ ಅಲ್ಲ, ಉನ್ನತ ಮಟ್ಟದ ಇತರ ಅಧಿಕಾರಿಗಳೂ ಕೂಡ ಹಂಚಿಕೊಳ್ಳುತ್ತಾರೆ. ಏಕೆಂದರೆ, ಇದು ಬಹು ದೊಡ್ಡ ದುಡಿಮೆ ವರ್ಗ, ಈ ವರ್ಗದ ದುಡಿಮೆ ಹಣದ ಮೊತ್ತವೂ ದೊಡ್ಡದಿರುತ್ತದೆ. ಸುಲಿಗೆ ಸುಲಭ. ನೇಮಕಾತಿಯನ್ನು ಹಾಗೂ ಬದಲಿ ಕೆಲಸಗಾರರ ಜ್ಯೇಷ್ಠತೆಯ ಅಭ್ಯರ್ಥಿಗಳ ನೋಂದಣಿಯ ಹಾಗೂ ಕರೆ ಪತ್ರಗಳ ಹಾಗೂ ನೇಮಕ ಆದೇಶಗಳ ನೀಡಿಕೆಯ ಸವಿವರ ದಾಖಲೆಗಳ ನಿರ್ವಹಣೆಯನ್ನು ಒಂದು ಉತ್ತಮ ಹಾಗೂ ಪಾರದರ್ಶಕ ವಿಧಿವಿಧಾನದಿಂದ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕೆಂಬಅಭಿಪ್ರಾಯಕ್ಕೆ ಸಮಿತಿಯು ಬಂದು ನಮ್ಮ ನೆರವಿಗೆ ಬರುತ್ತಿಲ್ಲವೆಂಬ ತೀರಾ ಬಿರುಸಾದ, ಪದೇ ಪದೇ ಬಂದ ದೂರುಗಳೂ ಸಮಿತಿಯ ಗಮನಕ್ಕೆ ಬಂದಿವೆ. ಅರ್ಜಿಯನ್ನು ಸ್ವೀಕರಿಸಿದ ಕೂಡಲೇ, ಆ ಉದ್ದೇಶಕ್ಕಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳನ್ನು ಮತ್ತು ವಿಳಾಸವನ್ನು ನಮೂದು ಮಾಡಬೇಕು ಮತ್ತು ಅಭ್ಯರ್ಥಿಯ ನೋಂದಣಿ ಸಂಖ್ಯೆಯು ವೈಟಿಂಗ್ ಲಿಸ್ಟ್‌ನಲ್ಲಿದೆಯೆಂದು ಅಭ್ಯರ್ಥಿಗೆ ತಿಳಿಸಬೇಕು. ಕರೆ ಪತ್ರಗಳನ್ನು ಜವಾನನ ಮೂಲಕವೋ ಅಥವಾ ಜಮೆದಾರನ ಮೂಲಕವೋ ಕಳುಹಿಸಬಾರದು, ನೋಂದಾಯಿತ ಅಂಚೆ ಮೂಲಕ ಕಳುಹಿಸಬೇಕು. ಸಮುಚಿತ ಸ್ಥಾನಮಾನದ ಅಧಿಕಾರಿಯೊಬ್ಬರು ಕಸಗುಡಿಸುವವರ ಹಾಗೂ ಜಾಡಮಾಲಿಗಳ ನೇಮಕಾತಿ ವಿಷಯಗಳನ್ನು ನೋಡಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ಯಾವುದೇ ದುರ್ವ್ಯವಹಾರ ಆಗಿಲ್ಲವೆಂಬುದನ್ನು ಇಂತಹ ಅಧಿಕಾರಿಯು ಸುನಿಶ್ಚಿತಪಡಿಸಿಕೊಳ್ಳಬೇಕು. ಈ ಅಂಶವನ್ನು ನಾವು ಏಕೆ ಒತ್ತಿಒತ್ತಿ ಹೇಳುತ್ತಿದ್ದೇವೆಂದರೆ, ನೌಕರಿ ಆಕಾಂಕ್ಷಿ ಅಭ್ಯರ್ಥಿ ನೌಕರಿಯನ್ನು ಪಡೆದುಕೊಳ್ಳಲು ದೊಡ್ಡ ಮೊತ್ತವನ್ನು ಲಂಚವಾಗಿ ಕೊಡಬೇಕಾಗುತ್ತದೆ. ಅದಕ್ಕಾಗಿ ಅವನು ದುಬಾರಿ ಬಡ್ಡಿಗೆ ಹಣ ಹೊಂದಿಸಿಕೊಂಡು ಸಾಲಗಾರನಾಗುತ್ತಾನೆ, ಪ್ರಾರಂಭದ ಹಂತದಲ್ಲಿ ಅವನು ಮಾಡಿದ್ದ ಸಾಲವನ್ನು ನೌಕರಿಯಾದ ನಂತರ ವಾಪಸು ಮಾಡುವುದಾಗಿ ಹೇಳಿದ್ದನ್ನು ಈಡೇರಿಸಲು ಅವನಿಗೆ ಆಗುವುದೇ ಇಲ್ಲ. ಸಾಲದ ಸುಳಿಯಿಂದ ಬಿಡಿಸಿಕೊಳ್ಳಲಾಗುವುದೇ ಇಲ್ಲ. ಈ ಪ್ರಕ್ರಿಯೆಯಲ್ಲಿ ಆಗುತ್ತಿರುವ ಇನ್ನೊಂದು ಅಹಿತಕರ ವ್ಯವಹಾರವೆಂದರೆ, ಜಮೆದಾರನೇ ಅಥವಾ ಸೂಪರ್ ವೈಸರ್ ನೇ ಲೇವಾದೇವಿಗಾರನಾಗಿರುತ್ತಾನೆ, ಸಾಲ ಕೊಟ್ಟಿರುತ್ತಾನೆ, ಅಧಿಕ ಬಡ್ಡಿ ದರದಲ್ಲಿ ಕಂತುಗಳಲ್ಲಿ ವಸೂಲಿ ಮಾಡಿಕೊಳ್ಳುತ್ತಾನೆ. ಅಂತಹ ಕೆಲಸಗಾರರಿಗೆ ಸೂಪರ್ ವೈಸರ್ ನಿಂದ ರಕ್ಷಣೆಯೂ ಇರುತ್ತದೆಯಾದ್ದರಿಂದ ಕೆಲಸದಲ್ಲಿ ಅಸಡ್ಡೆ ತೋರುತ್ತಾರೆ. ಕೊನೆಗೆ ಧಕ್ಕೆಯಾಗುವುದು ಕಸಗುಡಿಸುವ ಮತ್ತು ಜಾಡಮಾಲಿ ಕೆಲಸಕ್ಕೇ.

7. ಮೃತರ, ಅಶಕ್ತರ ಅಥವಾ ನಿವೃತ್ತ ಕೆಲಸಗಾರರ ಕುಟುಂಬದ ಒಬ್ಬರಿಗೆ ಪರಸ್ಪರ ಒಪ್ಪಿಕೊಂಡಂತೆ, ಅನುಕಂಪದ ಆಧಾರದ ಮೇಲೆ ನೌಕರಿಯಲ್ಲಿ ಆದ್ಯತೆ ಕೊಡುವ ವಿಧಾನ ಬಹಳಷ್ಟು ಸ್ಥಳೀಯ ಸಂಸ್ಥೆಗಳಲ್ಲಿ ಚಾಲ್ತಿಯಲ್ಲಿದೆ. ಈ ವಿಧಾನವನ್ನು ಬದಲಿಸುವ ಅವಶ್ಯಕತೆಯಿದೆಯೆಂದು ನಾವು ಭಾವಿಸಿಲ್ಲ.

8. ಹಲವಾರು ವರ್ಷಗಳು ಸೇವೆ ಸ+ತಲ್ಲಿಸಿದ್ದರೂ ಬಹಳಷ್ಟು ನೌಕರರನ್ನು ಖಾಯಂಗೊಳಿಸಿಲ್ಲ ಮತ್ತು ಮನಸೋ ಇಚ್ಚೆಯ ರೀತಿಯಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಮುಂತಾದ ಆಡಳಿತಾತ್ಮಕ ವಿಷಯಗಳ ಬಗ್ಗೆ ಸಮಿತಿಗೆ ಬಹಳಷ್ಟು ದೂರುಗಳನ್ನು ಸಲ್ಲಿಸಲಾಗಿತ್ತು. ಸೇವೆಯಲ್ಲಿ ನೌಕರರ ಸ್ಥಿರೀಕರಣಕ್ಕೆ ಮತ್ತು ಶಿಸ್ತುಕ್ರಮಕ್ಕೆ ವಿಧಿವಿಧಾನವನ್ನು ಗೊತ್ತುಪಡಿಸಲು ನಿಯಮಗಳನ್ನು ರಚಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ. ಆದರೆ, ನಿಯಮಗಳನ್ನು ರಚಿಸಬೇಕಾಗಿಲ್ಲ, ಜಾರಿ ಮಾಡಬೇಕಾಗಿಯೂ ಇಲ್ಲ. ಬದಲಿಗೆ, 1946 ಕೈಗಾರಿಕಾ ನಿಯೋಜನೆ (ಸ್ಥಾಯೀ ಆದೇಶಗಳ) ಕಾಯ್ದೆಯ ನಿಬಂಧನೆಗಳು ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಕಸಗುಡಿಸುವವರ ಮತ್ತು ಜಾಡಮಾಲಿಗಳ ಉದ್ಯೋಗದಾತರಿಗೆ ಅನ್ವಯವಾಗುವಂತೆ ಮಾಡಬೇಕು.

9. ಕಸಗುಡಿಸುವವರು ಹಾಗೂ ಜಾಡಮಾಲಿಗಳು ಅವರ ಡ್ಯೂಟಿ ಆದ ಮೇಲೂ ಸಮವಸ್ತ್ರವನ್ನು ಹಾಕಿಕೊಂಡೇ ಇರುವುದು ಸಮಿತಿಗೆ ಅಧ್ಯಯನ ಪ್ರವಾಸದ ಕಾಲದಲ್ಲಿ ಕಂಡು ಬಂದಿತು. ಇದು ಸರಿಯಲ್ಲ. ಸಮವಸ್ತ್ರಗಳನ್ನು ಕೆಲಸದ ವೇಳೆಗಳಲ್ಲಿ ಹಾಕಿಕೊಂಡಿರಲು ಕೊಡಲಾಗುತ್ತದೆ. ಕೆಲಸ ಮುಗಿಸಿದ ನಂತರ ಬದಲಾಯಿಸಬೇಕು. ತೊಳೆದು ಕೊಳ್ಳಬೇಕು. ಡ್ಯೂಟಿ ಮೇಲೆ ಇಲ್ಲದಿದ್ದಾಗ ಅವರು ಬೇರೆ ಬಟ್ಟೆಗಳನ್ನು ಹಾಕಿಕೊಂಡಿರಬೇಕು. ಏಕೆಂದರೆಅದೇ ಸಮವಸ್ತ್ರಗಳಲ್ಲೇ ಇದ್ದರೆ ಕೆಲಸ ಮಾಡುತ್ತಿರುವಾಗ ಸಮವಸ್ತ್ರಗಳಿಗೆ ಅಂಟಿಕೊಂಡಿರಬಹುದಾದ ಧೂಳಿನಿಂದ ಮತ್ತು ಮೆತ್ತಿಕೊಂಡಿರಬಹುದಾದ ಹೊಲಸಿನಿಂದ ಅವರ ಆರೋಗ್ಯ ಕೆಡುವ ಸಾಧ್ಯತೆ ಇರುತ್ತದೆ.

10. ಕಸಗುಡಿಸುವವನು ಅಥವಾ ಜಾಡಮಾಲಿಯು ಅಪಘಾತಕ್ಕೆ ಒಳಗಾದರೆ ಅವನಿಗೆ ಯಾವ ಪರಿಹಾರವೂ ಸಿಗುವುದಿಲ್ಲ. ಬೇರೆ ಕ್ಷೇತ್ರಗಳಲ್ಲಿ ನೌಕರಿಯಲ್ಲಿರುವ ಬಹಳಷ್ಟು ಕೆಲಸಗಾರರಿಗೆ 1923ರ ಕೆಲಸಗಾರರ ಪರಿಹಾರ ಕಾಯ್ದೆಯ ನಿಬಂಧನೆಗಳು ಅನ್ವಯವಾಗುತ್ತವೆ. ಬಹಳಷ್ಟು ಕಸಗುಡಿಸುವವರಿಗೆ ಹಾಗೂ ಜಾಡಮಾಲಿಗಳಿಗೆ ಅಪಘಾತದಿಂದಾದ ಹಾನಿಗಳಿಗೆ ಯಾವ ಪರಿಹಾರವೂ ಸಿಕ್ಕಿಲ್ಲದಿರುವ ಅನೇಕ ಪ್ರಕರಣಗಳು ಸಮಿತಿಗೆ ಕಂಡುಬಂದವು. ಆದ್ದರಿಂದ, 1923ರ ಕೆಲಸಗಾರರ ಪರಿಹಾರ ಕಾಯ್ದೆಯ ನಿಬಂಧನೆಗಳು ಕಸಗುಡಿಸುವವರಿಗೆ ಮತ್ತು ಜಾಡಮಾಲಿಗಳಿಗೆ ಅನ್ವಯವಾಗುವಂತೆ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

11. ಕೆಲವೊಂದು ಸ್ಥಳೀಯ ಮಂಡಲಿಗಳ ಹೊರತು, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಬೇಕು ಬೇಡಗಳನ್ನು ನೋಡಿಕೊಳ್ಳಲು ಕಾರ್ಮಿಕ ಕಲ್ಯಾಣ ಅಧಿಕಾರಿಯನ್ನು ನೇಮಕ ಮಾಡಿಲ್ಲದಿರುವುದನ್ನು ಸಮಿತಿಯು ಗಮನಿಸಿದೆ. 500 ಅಥವಾ ಅದಕ್ಕಿಂತಲೂ ಹೆಚ್ಚು ಕಸಗುಡಿಸುವವರನ್ನು ಮತ್ತು ಜಾಡಮಾಲಿಗಳನ್ನು ನೇಮಕ ಮಾಡಿಕೊಂಡಿರುವ ಸ್ಥಳೀಯ ಸಂಸ್ಥೆಗಳಲ್ಲಿ ಅವರ ನೇಮಕಾತಿ, ಹಾಜರಾತಿ, ಮಜೂರಿ ಸಂದಾಯ, ಸಮವಸ್ತ್ರಗಳ ನೀಡಿಕೆ, ಸಲಕರಣೆಗಳು, ವಸತಿ ಮುಂತಾದ ವಿಷಯಗಳನ್ನು ನೋಡಿಕೊಳ್ಳಲು ಸ್ಥಳೀಯ ಸಂಸ್ಥೆಗಳಿಗೆ ಕಡ್ಡಾಯವಾಗಿ ಸೂಕ್ತ, ಅರ್ಹ ಕಾರ್ಮಿಕ ಕಲ್ಯಾಣ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ.

12. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಕಸಗುಡಿಸುವವರೊಂದಿಗೆ ಮತ್ತು ಜಾಡಮಾಲಿಗಳೊಂದಿಗೆ ಸೌಜನ್ಯದಿಂದ ನಡೆದು ಕೊಳ್ಳುವ ಪ್ರವೃತ್ತಿ ಇಲ್ಲದಿರುವ ಪ್ರವೃತ್ತಿಯನ್ನು ಹಾಗೂ ಮಸ್ಟರ್–

ರೋಲ್‌ನಲ್ಲಿ ಮತ್ತು ಸೇವಾ ದಾಖಲೆಗಳಲ್ಲಿ ಅವರ ಹೆಸರುಗಳನ್ನು ಬೇಕಾಬಿಟ್ಟಿಯಾಗಿ ಬರೆದಿರುವುದನ್ನು ಸಮಿತಿಯು ಗಮನಿಸಿದೆ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಪ್ರವೃತ್ತಿ ಹೇಗಿರಬೇಕೆಂದರೆ, ಕಸಗುಡಿಸುವವರೊಂದಿಗೆ ಮತ್ತು ಜಾಡಮಾಲಿಗಳೊಂದಿಗೆ ಹೆಚ್ಚು ಸೌಜನ್ಯದಿಂದಿರುವಂತಿರಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಅವರ ಹೆಸರುಗಳನ್ನು ದಾಖಲೆಗಳಲ್ಲಿ ನೀಟಾಗಿ ಬರೆದಿರಬೇಕು. ಕಸಗುಡಿಸುವ ಮತ್ತು ಜಾಡಮಾಲಿ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಫಾಯಿ ಸೇವಕ/ಸಫಾಯಿ ಸೇವಿಕಾ ಅಥವಾ ಅದೇ ಬಗೆಯ ಹೆಸರುಗಳನ್ನು ಗೊತ್ತುಪಡಿಸಬೇಕು.

13. ಕಸಗುಡಿಸುವವರ ಹಾಗೂ ಜಾಡಮಾಲಿಗಳ ಪೈಕಿಯಿಂದ ಒಬ್ಬರನ್ನು ಸ್ಥಳೀಯ ಮಂಡಳಿಗೆ ನಾಮಕರಣ ಮಾಡಿದರೆ ಕಸಗುಡಿಸುವವರ ಮತ್ತು ಜಾಡಮಾಲಿಗಳ ಶೋಚನೀಯ ಸ್ಥಿತಿಗತಿಗಳತ್ತ ಸ್ಥಳೀಯ ಮಂಡಳಿಗಳು ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತದೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಆದ್ದರಿಂದ, ಸ್ಥಳೀಯ ಮಂಡಳಿಗೆ, ಕಸಗುಡಿಸುವವರ ಹಾಗೂ ಜಾಡಮಾಲಿಗಳ ಪೈಕಿಯಿಂದ ಒಬ್ಬರನ್ನು ರಾಜ್ಯ ಸರ್ಕಾರವು ನಾಮಕರಣ ಮಾಡಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ನಾಮಕರಣಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ ಅಗತ್ಯ ಬಿದ್ದರೆ, ರಾಜ್ಯ ಮುನಿಸಿಪಲ್ ಕಾನೂನಿಗೆ ಸೂಕ್ತವಾಗಿ ತಿದ್ದುಪಡಿ ಮಾಡಬೇಕು. ಹಾಗೆ ಮಾಡಿದರೆ, ನಾಮಕರಣಗೊಂಡ ಸದಸ್ಯನು, ಕಸಗುಡಿಸುವವರಿಗಾಗಿ ಮತ್ತು ಜಾಡಮಾಲಿಗಳಿಗಾಗಿ ಕಲ್ಯಾಣ ಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸ್ಥಳೀಯ ಮಂಡಳಿಯು ಮನವೊಲಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಾನೆ.

14. ಕಸಗುಡಿಸುವ ಎಲ್ಲರಿಗೂ ಹಾಗೂ ಎಲ್ಲ ಜಾಡಮಾಲಿಗಳಿಗೂ, ಕೊನೇಪಕ್ಷ ವರ್ಷಕ್ಕೆ ಒಂದು ಸಲ ಸ್ಥಳೀಯ ಸಂಸ್ಥೆಗಳು ವೈದ್ಯಕೀಯ ಪರೀಕ್ಷೆಗೆ ವ್ಯವಸ್ಥೆ ಮಾಡಿಸುವುದು ಕಡ್ಡಾಯವನ್ನಾಗಿ ಮಾಡಬೇಕು. ನಾವು ಪ್ರಸ್ತಾವಿಸಿರುವ ಶಾಸನದಲ್ಲಿ ಇದಕ್ಕೆ ಸೂಕ್ತವಾಗಿ ಅವಕಾಶ ಕಲ್ಪಿಸಬೇಕು.

15. ಕಸಗುಡಿಸುವವರ ಮತ್ತು ಜಾಡಮಾಲಿಗಳ ಮಕ್ಕಳಿಗೆ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯಗಳನ್ನು ಒದಗಿಸಬೇಕೆಂದು ಸಮಿತಿಯು ಶಿಫಾರಸು ಮಾಡುತ್ತದೆ. ಹಾಗೆ ಮಾಡಿದರೆ, ಅವರು, ತಮ್ಮ ವಿದ್ಯಾಭ್ಯಾಸ ಮುಗಿದ ಮೇಲೆ ಒಳ್ಳೆಯ ಉದ್ಯೋಗಕ್ಕೆ ಸೇರಿಕೊಳ್ಳುತ್ತಾರೆ.

16. 20 ಅಥವಾ ಅದಕ್ಕೂ ಹೆಚ್ಚು ಕಸಗುಡಿಸುವವರನ್ನು ಮತ್ತು ಜಾಡಮಾಲಿಗಳನ್ನು ನೇಮಕ ಮಾಡಿಕೊಳ್ಳುವ ಸ್ಥಳೀಯ ಸಂಸ್ಥೆಗಳು ಸಹಕಾರ ಸಾಲ ನೀಡಿಕೆ ಸಂಘವನ್ನು ಮತ್ತು ಸಹಕಾರ ಗ್ರಾಹಕರ ಮಳಿಗೆಯನ್ನು ಸ್ಥಾಪಿಸುವುದು ಕಡ್ಡಾಯವನ್ನಾಗಿ ಮಾಡಬೇಕು. ಸಣ್ಣ ಸಂಘಗಳಲ್ಲಿ ವಿದ್ಯಾವಂತ ಕಸಗುಡಿಸುವವನನ್ನು ಅಥವಾ ಜಾಡಮಾಲಿಯನ್ನು ಅಥವಾ ಅವನ ಕುಟುಂಬದ ವಿದ್ಯಾವಂತನನ್ನು ಅಂತಹ ಸಂಘಗಳ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡಲು ಅರೆಕಾಲಿಕ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಬೇಕು.

17 ಪ್ರತಿಯೊಂದು ಸ್ಥಳೀಯ ಸಂಸ್ಥೆಯು ನೇಮಕ ಮಾಡಿಕೊಂಡಿರುವ ಕಸಗುಡಿಸುವವರ ಮತ್ತು ಜಾಡಮಾಲಿಗಳ ಕಲ್ಯಾಣ, ಏಳಿಗೆ ಮತ್ತು ಅವರುಗಳ ಬದುಕಿನ ಹಾಗೂ ಕೆಲಸದ ಸ್ಥಿತಿಗತಿಗಳಲ್ಲಿ ಸುಧಾರಣೆ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ತನ್ನ ವಾರ್ಷಿಕ ಬಜೆಟ್‌ನಲ್ಲಿ ನಿರ್ದಿಷ್ಟ ಹಣದ ಏರ್ಪಾಟು ಮಾಡಿಕೊಳ್ಳಬೇಕು ಮತ್ತು ಸ್ಥಳೀಯ ಸಂಸ್ಥೆಗಳು ಕೈಗೊಳ್ಳುವ ಈ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಸಮಾನ ಅನುದಾನವನ್ನು ಒದಗಿಸಬೇಕು.

## IV ಮುನಿಸಿಪಲ್ ನೌಕರರ ಮಜೂರಿ ಮಂಡಳಿ – ಕೇರಳ ಸರ್ಕಾರ 1971–73

ಕೇರಳ ಸರ್ಕಾರವು 1971ರಲ್ಲಿ ನಿವೃತ್ತ ಐ.ಎ.ಎಸ್ ಅಧಿಕಾರಿ ಎ.ಎಸ್ ಮೇನನ್‌ರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ನೌಕರರ ಮಜೂರಿ ಮಂಡಳಿಯೊಂದನ್ನು ಸ್ಥಾಪಿಸಿತು. ಆ ಮಜೂರಿ ಮಂಡಳಿಯ ಶಿಫಾರಸುಗಳ ಉದ್ಧೃತ ಭಾಗಗಳನ್ನು ಈ ಮುಂದೆ ಕೊಡಲಾಗಿದೆ:

I ಶಿಫಾರಸುಗಳನ್ನು ಮಾಡುವುದಕ್ಕಾಗಿ ಮಜೂರಿ ಮಂಡಳಿಯನ್ನು ರಚಿಸಿದ ಸರ್ಕಾರಿ ಆದೇಶದಲ್ಲಿ ಆರು ಪರಿಶೀಲನಾಂಶಗಳನ್ನು ಗೊತ್ತುಪಡಿಸಲಾಗಿತ್ತು. ಈ ಪರಿಶೀಲನಾಂಶಗಳನ್ನು ಈ ವರದಿಯ ಅಧ್ಯಾಯ I ರಲ್ಲಿ ಕೊಡಲಾಗಿದೆ. ಮಂಡಳಿಯು ಈ ಅಂಶಗಳನ್ನು ಪರಿಶೀಲಿಸಿತು ಹಾಗೂ ಸ್ಥೂಲವಾದ ಹಾಗೂ ಸವಿಸ್ತಾರವಾದ ಪರಿಶೀಲನಾಂಶಗಳನ್ನು ರೂಪಿಸಿತು. ಅವುಗಳನ್ನು ಈ ಮುಂದೆ ಕೊಡಲಾಗಿದೆ:

(1) ಕೆಲಸಗಾರರ ಈಗಿರುವ ವರ್ಗೀಕರಣದ ಬದಲಿಗೆ ಪುನರ್ ವರ್ಗೀಕರಣದ ಅವಶ್ಯಕತೆ ಇದೆಯೇ? ಇದ್ದರೆ ಯಾವ ಆಧಾರಗಳ ಮೇಲೆ ಹಾಗೂ ಹೇಗೆ ವರ್ಗೀಕರಿಸಬೇಕು?

(2) ಕೆಲಸಗಾರರು, ಕಸಗುಡಿಸುವವರು ಮತ್ತು ಜಾಡಮಾಲಿಗಳು ಮುಂತಾದ ಸಾಮಾನ್ಯ ವರ್ಗೀಕರಣದಲ್ಲಿ ಯಾವುದಾದರೂ ಬದಲಾವಣೆಯ ಅಗತ್ಯ ಇದೆಯೇ?

(3) ಕೆಲಸಗಾರರಿಗೆ ಬೇರೆ ಬೇರೆ ವೇತನ ಶ್ರೇಣಿಗಳು ಯಾವುವು ಇರಬೇಕು? ಕೆಲಸಗಾರರ ಪ್ರತಿಯೊಂದು ಪ್ರವರ್ಗಕ್ಕೆ ಬೇರೆ ಬೇರೆ ವೇತನ ಶ್ರೇಣಿಗಳಿರಬೇಕೇ? ಇರಬೇಕೆನ್ನುವುದಾದರೆ ಒಂದಕ್ಕಿಂತ ಇನ್ನೊಂದು ಎಷ್ಟರ ಮಟ್ಟಿಗೆ ವ್ಯತ್ಯಾಸ ಇರಬೇಕು? ಬೇರೆ ಬೇರೆ ಪ್ರವರ್ಗಗಳಿಗೆ ಬೇರೆ ಬೇರೆ ಭತ್ಯೆಗಳಿರುವುದು ಆವಶ್ಯಕವೇ? ಆವಶ್ಯಕವೆನಿಸಿದರೆ ಎಷ್ಟರ ಮಟ್ಟಿಗೆ?

(4) ಪ್ರತ್ಯೇಕ ತುಟ್ಟಿ ಭತ್ಯೆ ಆವಶ್ಯಕವೇ? ಆವಶ್ಯಕವೆನಿಸಿದರೆ ಒಂದೇ ಬಗೆಯ ತುಟ್ಟಿ ಭತ್ಯೆ ಇರಬೇಕೇ ಅಥವಾ ಎರಡು ಬಗೆಯ ತುಟ್ಟಿ ಭತ್ಯೆ ಇರಬೇಕೇ ಎಂದರೆ ನಿಗದಿತ ತುಟ್ಟಿ ಭತ್ಯೆ ಅಥವಾ ಬದಲಾವಣೆಗೊಳ್ಳುವ ತುಟ್ಟಿ ಭತ್ಯೇ? (ವೇತನ ಶ್ರೇಣಿಗಳೇನೇ ಇದ್ದರೂ ನಿಗದಿತ ತುಟ್ಟಿಭತ್ಯೆಯು ಒಂದೇ ಮೊತ್ತದಲ್ಲಿ ಕೊಡುವಂಥದ್ದಾಗಿರಬೇಕೇ ಅಥವಾ ಸರ್ಕಾರಿ ನೌಕರರಿಗೆ ಈಗ ಕೊಡುತ್ತಿರುವಂತೆ, ಕೋಷ್ಟಕದಲ್ಲಿ ನಿಗದಿ ಪಡಿಸಿರುವಂತಿರಬೇಕೇ?

(5) ಮಜೂರಿಗಳ ನಿಗದಿಗೆ ಸರ್ಕಾರಿ ನೌಕರರ ಕೊನೆಯ ದರ್ಜೆಯ ಮಜೂರಿಗಳು ಆಧಾರವಾಗಿರಬೇಕೇ? ಸರ್ಕಾರಿ ನೌಕರರ ಕೊನೆಯ ದರ್ಜೆಗೆ ಹೋಲಿಸಿ ನೋಡಿದರೆ ಮುನಿಸಿಪಲ್ ಆನುಷಂಗಿಕ ಕೆಲಸಗಾರರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಹಾಗೂ ಯಾವ ಯಾವ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ

(6) ಈಗಿರುವ ಮಜೂರಿಗಳ ಪರಿಷ್ಕರಣೆ ಆವಶ್ಯಕವೆಂದಾದರೆ, ಯಾವ ದಿನದಿಂದ ಜಾರಿಗೆ ಕೊಡಬೇಕು? ಪೂರ್ವಾನ್ವಯವಾಗಿ ಜಾರಿಗೆ ಕೊಡಬೇಕೇ?

(7) ಪರಿಷ್ಕೃತ ಶ್ರೇಣಿಯಲ್ಲಿ ವೇತನವನ್ನು ಹೇಗೆ ನಿಗದಿ ಮಾಡಬೇಕು? ಯಾವುದೇ ವೈಟೇಜ್‌ನ ಅವಶ್ಯಕತೆ ಇದೆಯೇ?

(8) ವಿಶೇಷ ಭತ್ಯೆಗಳನ್ನೇನಾದರೂ ನಿಗದಿ ಮಾಡಬೇಕೇ? ಯಾವ ದರದಲ್ಲಿ ನಿಗದಿ ಮಾಡಬೇಕು?

(9) ಆನುಷಂಗಿಕ ಕೆಲಸಗಾರರ ಹುದ್ದೆಗಳನ್ನು ಕ್ರಮಬದ್ಧವಾದವುಗಳನ್ನಾಗಿ ಮಾಡಬೇಕೇ? ಹೌದಾದರೆ, ಯಾವ ನಿಬಂಧನೆಗಳಂತೆ ಕ್ರಮಬದ್ಧಗೊಳಿಸಬೇಕು?

(10) ನಿಯತ ಮತ್ತು ಆನುಷಂಗಿಕ ಪ್ರವರ್ಗಗಳಲ್ಲಿರುವ ಕೆಲವೊಂದು ಕೇಡರುಗಳಲ್ಲಿರುವ ಅಸಂಬದ್ಧತೆಗಳನ್ನು ಸರಿಪಡಿಸಬೇಕೇ? ಉದಾಹರಣೆಗೆ: ಉದ್ಯಾನದ ಆನುಷಂಗಿಕ ಪಾಲಕ ಅಥವಾ ನಿಯತಪಾಲಕ.

(11) ವಯೋನಿವೃತ್ತಿ ಪ್ರಯೋಜನಗಳು ಯಾವುವಿರಬೇಕು? ನಿವೃತ್ತಿ ವಯಸ್ಸು ಯಾವುದಿರಬೇಕು? ಪಿಂಚಣಿಯನ್ನೇನಾದರೂ ಕೊಡಬೇಕೇ? ಹೌದಾದರೆ, ಯಾವ ದರಗಳಲ್ಲಿ ಕೊಡಬೇಕು?

